ಹೈದ್ರಾಬಾದ್ ಕರ್ನಾಟಕದ ಕೊರವ ಸಮುದಾಯದ ಜೀವನ ವ್ಯವಸ್ಥೆ

(ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪೋಸ್ಟ್ ಡಾಕ್ಟರಲ್ ಫೆಲೋಸಿಫ್‌ಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಡಾ. ರಾಧಮ್ಮ

ಮಾರ್ಗದರ್ಶಕರು

ಡಾ.ಚಲುವರಾಜು

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಹೈದ್ರಾಬಾದ್ ಕರ್ನಾಟಕದ ಕೊರವ ಸಮುದಾಯದ ಜೀವನ ವ್ಯವಸ್ಥೆ

(ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪೋಸ್ಟ್ ಡಾಕ್ಟರಲ್ ಫೆಲೋಸಿಫ್‌ಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಡಾ. ರಾಧಮ್ಮ

ಮಾರ್ಗದರ್ಶಕರು

ಡಾ.ಚಲುವರಾಜು

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

.ಮಾರ್ಗದರ್ಶಕರ ದೃಢೀಕರಣ ಪತ್ರ

ಡಾ.ರಾಧಮ್ಮ ಇವರು ಪೋಸ್ಟ್ ಡಾಕ್ಟರಲ್ ಫೆಲೋಸಿಫ್‌ಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಹೈದ್ರಾಬಾದ್ ಕರ್ನಾಟಕದ ಕೊರವ ಸಮುದಾಯದ ಜೀವನ ವ್ಯವಸ್ಥೆ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಬುಡಕಟ್ಟು ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ.ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ:

ಸಂಶೋಧಕರ ಘೋಷಣಾ ಪತ್ರ

ಹೈದ್ರಾಬಾದ್ ಕರ್ನಾಟಕದ ಕೊರವ ಸಮುದಾಯದ ಜೀವನ ವ್ಯವಸ್ಥೆ ಎಂಬ ಈ ಮಹಾಪ್ರಬಂಧವನ್ನು ಪೋಸ್ಟ್ ಡಾಕ್ಟರಲ್ ಫೆಲೋಸಿಫ್‌ಗಾಗಿ ಕನ್ನಡ ವಿಶ್ವವಿದ್ಯಾಲಯದ, **ಬುಡಕಟ್ಟು ಅಧ್ಯಯನ ವಿಭಾಗದ** ಪ್ರಾಧ್ಯಾಪಕರಾದ **ಡಾ.ಚೆಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಡಾ. ರಾಧಮ್ಮ
ಪೋಸ್ಟ್ ಡಾಕ್ಟರಲ್ ಫೆಲೋ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಪೀಠಿಕೆ

ಭಾರತದ ಜಾತಿ ವ್ಯವಸ್ಥೆಯಲ್ಲಿ ಹಲವಾರು ಬಗೆಯ ಜಾತಿ ಸಮುದಾಯಗಳು ಕಂಡುಬರುತ್ತವೆ. ಸಾವಿರಾರು ವರ್ಷಗಳ ಕಾಲ ಪೋಷಿಸಿಕೊಂಡು ಬಂದಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಆಳ್ವಿಕೆ ಮತ್ತು ಅಸಹಾಯಕ ಶರಣಾಗತಿಗಳು ಅನುಚಾನವಾಗಿ ನಡೆದು ಬಂದಿವೆ. ಆಳುವ ವರ್ಗವು ಬಹುಸಂಖ್ಯಾತಾವಾದ ಶ್ರಮಿಕರನ್ನು ಹೀನಾಯವಾಗಿ ಜಾತಿಯ ಶ್ರೇಣಿಗಳಲ್ಲಿ ಹೊಂದಿಸಿಕೊಂಡು ಬಂದಿದೆ. ವೃತ್ತಿಗನುಗುಣವಾಗಿ ಜಾತಿಗಳನ್ನು ವಿಂಗಡಿಸಿದರೂ ಸಹ ಉತ್ಪಾದನೆಯ ಅತ್ಯಂತಿಕ ಫಲಗಳನ್ನು ಆಳುವ ವರ್ಗವೇ ಅನುಭವಿಸುತ್ತಾ ಬಂದಿದ್ದಾರೆ. ಆದರೆ ಕಸಬುಗಳನ್ನಾಧರಿಸಿ ರೂಪುಗೊಂಡ ಸಾಮಾಜಿಕ ಅಸಮಾನತೆ ಮಾತ್ರ ಸಮುದಾಯಗಳನ್ನು ನಿರಂತರವಾಗಿ ಕಾಡುತ್ತಲೇ ಬಂದಿದೆ.

ಮಾನವ ಬದುಕಿನ ಹಲವು ಮಗ್ಗುಲುಗಳನ್ನು ಕುರಿತಾದ ಸಾಮಾಜಿಕ ಜೀವನ ವ್ಯವಸ್ಥೆ ಅಧ್ಯಯನಗಳು ಇಂದು ತುಂಬ ಅಗತ್ಯವಾದವುಗಳು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ನಾಗರಿಕತೆಯ ಪ್ರಭಾವದಿಂದ ಸಾಕಷ್ಟು ದೂರವೇ ಉಳಿಯುವ ಅತ್ಯಂತ ಸಂಕಷ್ಟದ ಬದುಕನ್ನು ಬದುಕುತ್ತಿರುವ ಸಮುದಾಯ ಕುರಿತಾದ ಅಧ್ಯಯನಕ್ಕೆ ಪ್ರಮುಖ್ಯತೆ ಇದೆ. ಬಹುಮುಖ ಮಾನವ ಸಂಸ್ಕೃತಿಯ ಅನನ್ಯತೆ ಮತ್ತು ವೈವಿಧ್ಯತೆಯನ್ನು ಹಿಡಿದುಕೊಳ್ಳುವ ನಿಟ್ಟಿನಲ್ಲಿ ಸಮುದಾಯಗಳ ಅಧ್ಯಯನ ತುಂಬ ಮಹತ್ವದ್ದಾಗಿದೆ. ಇಂದಿಗೂ ಕೂಡ ಕಾಡು–ಮೇಡುಗಳಲ್ಲಿ ಅಲೆದಾಡುತ್ತ ವಾಸ್ತವ ಸಂದರ್ಭದ ನಾಗರಿಕ ಸಮಾಜದ ನಡುವೆಯೇ ಊರ ಹೊರಗಿನ ಪ್ರತ್ಯೇಕ ಸ್ಥಳಗಳಲ್ಲಿ ತಮ್ಮದೇ ಅನನ್ಯವಾದ ಜೀವನ ಕ್ರಮದೊಂದಿಗೆ ಬದುಕುತ್ತಿರುವ ಸಮುದಾಯಗಳಿವೆ. ಆಚರಣೆ, ಸಂಪ್ರದಾಯ, ನಂಬಿಕೆ, ಆಹಾರ ಪದ್ಧತಿಗಳು, ಭಾಷೆ ಹಾಗೂ ಹಲವಾರು ಕಟ್ಟುಪಾಡುಗಳೊಟ್ಟಿಗೆ

ನಾಗರಿಕರೆಂದುಕೊಂಡಿರುವ ಜನರ ಕಣ್ಣಿಗೆ ಅನಾಗರಿಕರೆಂಬಂತೆ ಕಾಣಿಸಿಕೊಂಡು ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ತೊಳಲಾಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ಕೊರವರು ಹಿಂದೆ ಬೆಟ್ಟ ಗುಡ್ಡಗಳಲ್ಲಿ ಬದುಕಿ ಪಶು ಪಾಲನೆ ಮಾಡುತ್ತ ಜೊತೆ ಜೊತೆಗೆ ಬೆತ್ತ ಬಿದರಿನ ಬುಟ್ಟಿಗಳನ್ನು ಮಾಡುತ್ತ ಬಂದಿದ್ದಾರೆ. ಈ ಸಮುದಾಯವು ತಮ್ಮ ವೃತ್ತಿಗಳನ್ನು ಪೋಷಿಸುತ್ತಾ ಬಂದಿದ್ದಾರೆ. ಕೊರವ ಸಮುದಾಯವು ಮಾಡುವ ಬುಟ್ಟಿಯು ಕೃಷಿ ವರ್ಗಕ್ಕೆ ಅಗತ್ಯವಾದ ವಸ್ತುಗಳಾದವು. ಆದರೆ ಸಮುದಾಯಗಳಿಗೆ ನಿರ್ದಿಷ್ಟವಾದ ಹೆಸರು ಇಲ್ಲ. ಕರ್ನಾಟಕದಲ್ಲೇ ಒಂದು ನಿರ್ದಿಷ್ಟ ಸಮುದಾಯವನ್ನು ಹಲವಾರು ಹೆಸರುಗಳಲ್ಲಿ ಕರೆಯುವುದು ಕಂಡುಬರುತ್ತದೆ.

ಒಂದು ಸಮುದಾಯವನ್ನು ಬೀದರ್ ಕಡೆ ಒಂದು ಹೆಸರನಲ್ಲಿ ಗುರುತಿಸಿದ್ದರೇ; ಅದೇ ಸಮುದಾಯವನ್ನು ವಿಜಯಪುರದಲಿ ಬೇರೆ ಬೇರೆ ಹೆಸರುಗಳಲ್ಲಿ ಗುರುತಿಸಲಾಗುತ್ತಿದೆ. ಹೈದರಾಬಾದ್ ಕರ್ನಾಟಕದಲ್ಲಿಯೇ, ಕರ್ನಾಟಕವನ್ನು ಬಿಟ್ಟು ಗಡಿ ಭಾಗಗಳಲ್ಲಿ ಸಂಚರಿಸುವಾಗ ಅಲ್ಲೆಲ್ಲ ಬೇರೆ ಬೇರೆ ಹೆಸರುಗಳನ್ನು ಕರೆಯಲಾಗುತ್ತಿದೆ. ಹೀಗೆ ನಿರ್ದಿಷ್ಟ ಗುರುತಿಗೆ ಸಿಗದೆ ಬಹುನಾಮಗಳಿಗೆ ಒಳಗಾದುದರಿಂದ ಆಗುವ ಅಪಾಯಗಳ ಅರಿವಿಲ್ಲದೆ ಆ ಸಮುದಾಯಗಳು ಬದುಕುತ್ತಿದೆ. ಇದರ ಜೊತೆಗೆ ಶಿಕ್ಷಣ ವಂಚಿತರಾಗಿ ಬದುಕಿನ ಮುಖ್ಯ ಪ್ರವಾಹದಲ್ಲಿದೆ. ಯಾವುದೇ ಅಲೆಮಾರಿ ಸಮುದಾಯವನ್ನು ತೆಗೆದುಕೊಂಡರೂ ಆ ಸಮುದಾಯ ನಿರ್ದಿಷ್ಟವಾಗಿ ಯಾವುದೇ ಒಂದು ಭಾಷೆಗೆ ತನ್ನನ್ನು ಕಟ್ಟಿ ಹಾಕಿಕೊಂಡಿರುವುದಿಲ್ಲ. ಒಂದು ಅಲೆಮಾರಿ ಸಮುದಾಯ ಕನಿಷ್ಟ ೪ ಭಾಷೆಗಳನ್ನು ತನ್ನ ನಿತ್ಯ ಬಳಕೆಗೆ ಒಳಪಡುತ್ತಿರುತ್ತದೆ. ಇವುಗಳಲ್ಲಿ ಅದರ ಮಾತೃಭಾಷೆ ಯಾವುದು ಎಂಬುದು ಗೊತ್ತಾಗಲಾರದ ಮಟ್ಟಿಗೆ ಅವರಾಡುವ ಭಾಷೆಗಳ ಪ್ರಯೋಗ ಪರಿಣತಿ ಅವರಲ್ಲಿ ಪ್ರಬುದ್ಧವಾಗಿದೆ.

ಒಂದು ದೇಶದ ಚರಿತ್ರೆಯ ನಿರ್ಮಾಣವು ಸಹ ಆ ದೇಶದ ಉತ್ಪಾದನಾ ಶಕ್ತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಒಂದು ದೇಶದ ಸಮಾಜ, ಸಂಸ್ಕೃತಿ, ಐಕ್ಯತೆಗಳನ್ನು ಸಾಧಿಸುವುದು ಆ ದೇಶದ ಶ್ರಮಿಕರಿಂದಲೇ. ಆದರೆ ಸಮಾಜದ ಚರಿತ್ರೆಯುದ್ದಕ್ಕೂ ಸಂಸ್ಕೃತಿ ಸೌಧದ ಅಡಿಗಲ್ಲುಗಳಾಗಿ ಭಾರ ಹೊತ್ತು ನಿಂತಿರುವ ಶ್ರಮಿಕ ಸಮುದಾಯಗಳು ಇಂದಿಗೂ ಸ್ವಾವಲಂಬನೆಯ ಬದುಕಿಗೆ ಹಂಬಲಿಸುತ್ತಿವೆ. ಸಾವಿರಾರು ವರ್ಷಗಳ ಇತಿಹಾಸದಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳಲಾಗುವ ಸಾಂಸ್ಕೃತಿಕ ಪರಂಪರೆ ಇದ್ದರೂ ಇವುಗಳನ್ನು ನಿರ್ಮಾಣ ಮಾಡಿದ ಸಮುದಾಯಗಳು ಇಂದಿಗೂ ಒಪ್ಪೊತ್ತಿನ ಊಟಕ್ಕೆ ದಿಕ್ಕಿಲ್ಲದೆ ದಿನ ಕಳೆಯುತ್ತಿವೆ. ಕಾರಣವೆಂದರೆ ಆರ್ಥಿಕ ಮತ್ತು ಉತ್ಪಾದನಾ ಕ್ಷೇತ್ರದ ಮೇಲೆ ಆಳುವ ವರ್ಗಗಳು ಸಾಧಿಸಿದ ಹಿಡತವು ಆಗಿದೆ. ತನ್ನ ಬದುಕಿನ ಕಾಲಾವಧಿಯ ಉದ್ದಕ್ಕೂ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳಿಲ್ಲದೆ ತುಟಿ

ಕಚ್ಚಿ ಬದುಕಿ ಇಲ್ಲದಾಗುವ ಅನೇಕ ಜಾತಿ ಸಮುದಾಯಗಳು ಇಂದು ಭಾರತದಲ್ಲಿ ಜೀವಂತವಾಗಿವೆ. ದನಿ ಇಲ್ಲದ ಸಮುದಾಯಗಳು ಆ ಹೊತ್ತಿನ ಊಟಕ್ಕೆ ಬೀದಿಗಳಲ್ಲಿ ಬೇವರಾಗಿ, ಪರಂಪರೆಯ ಕಸಬುಗಳನ್ನು ಅವಲಂಬಿಸಿ ಬದುಕುತ್ತಿವೆ. ಈ ಸಮುದಾಯಗಳಿಗೆ ವರ್ತಮಾನದಲ್ಲಿ ವೃತ್ತಿಗಳನ್ನು ಬದಲಿಸಿಕೊಳ್ಳುವಷ್ಟು ಆತ್ಮವಿಶ್ವಾಸವಿಲ್ಲ. ಬೇರೆ ಕೆಲಸ ಬಾರದೇ ದ್ವಂದ್ವ ಬದುಕಿನಲ್ಲಿ ಬದುಕುತ್ತಿರುವುದುಂಟು. 'ಜಾತಿ ಪದ್ಧತಿಯಿಂದಾದ ಈ ವೃತ್ತಿ ವಿಭಾಗ ಅಥವಾ ಕೆಲಸಗಳ ನೇಮಕವು ಖಂಡಿತವಾಗಿ ವಿನಾಶಕಾರಿಯಾಗಿದೆ. ಉದ್ಯಮದಿಂದ ನಿಂತ ನೀರಲ್ಲ. ಅದರಲ್ಲಿ ತೀವ್ರವಾದ ಹಾಗೂ ಆಕಸ್ಮಿಕವಾದ ಬದಲಾವಣೆಗಳಾಗುತ್ತಲೇ ಇರುತ್ತವೆ. ಹೀಗೆ ಬದಲಾವಣೆಗಳಾಗುತ್ತಿರುವಾಗ ವ್ಯಕ್ತಿಗೆ ತಮ್ಮ ವೃತ್ತಿಯನ್ನು ಬದಲಾಯಿಸುವ ಸ್ವಾತಂತ್ರ್ಯ ಅವಶ್ಯಕವಾಗುತ್ತದೆ. ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಾತಂತ್ರ್ಯವಿಲ್ಲದಿದ್ದರೆ ಅವನಿಗೆ ಜೀವನೋಪಾಯವೇ ಅಸಾಧ್ಯವಾಗುವುದು. ಜಾತಿ ಪದ್ಧತಿಯಲ್ಲಿ ಇಂತಹ ಸ್ವಾತಂತ್ರ್ಯವಿಲ್ಲ. ತನ್ನ ಜಾತಿಗೆ ಹೊಸದಾಗಿ ವೃತ್ತಿಯನ್ನು ಕೈಕೊಳ್ಳುವ ಬದಲಾಗಿ ಉಪವಾಸ ಬಿಳುವುದೇ ಹಿಂದೂವಿನ ಗತಿಯಾಗಿದ್ದರೆ ಅದಕ್ಕೆ ಮೂಲಕಾರಣ ಜಾತಿಯೇ ಆಗಿದೆ' ಎನ್ನುತ್ತಾರೆ ಅಂಬೇಡ್ಕರ್ (ಡಾ. ಅಂಬೇಡ್ಕರ್ ಸಂ. ೧, ಪು ೬೮, ೧೯೯೦) ಯಾವುದೇ ಸಮುದಾಯವು ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಆತ್ಮಪ್ರತ್ಯಯನನ್ನು ನಾಶಮಾಡಬೇಕೆಂದರೆ ಮೊದಲು ಆ ಸಮುದಾಯದ ಆರ್ಥಿಕ ಸ್ವಾವಲಂಬನೆಯನ್ನು ನಾಶ ಮಾಡಲಾಗುತ್ತದೆ. ಆತ್ಮ ವಿಮರ್ಶೆಯ ಮೂಲಕ ಸಾಮಾಜಿಕ ಜೀವನ ವ್ಯವಸ್ಥೆಯನ್ನು ಸುವ್ಯವಸ್ಥೆ ಮಾಡಿಕೊಳ್ಳುವ ಅನಿವಾರ್ಯತೆಯು ಇದೆ.

ಇಂದಿಗೂ ಭಾರತದಲ್ಲಿ ದುಡಿಯುವ ಸಮುದಾಯಗಳಿಗೆ ಆರ್ಥಿಕ ಸ್ವಾವಲಂಬನೆ ಇಲ್ಲ. ಕೆಳಜಾತಿಗಳು ತಮ್ಮ ಪಾರಂಪರಿಕ ವೃತ್ತಿಗಳಲ್ಲಿಯೇ ಬದುಕುವ ಅನಿವಾರ್ಯತೆಯನ್ನು ಅನುಭವಿಸುತ್ತಿವೆ. ಅದರಲ್ಲಿ ಪಾರಂಪರಿಕ ವೃತ್ತಿಗಳಲ್ಲಿ ಬದುಕುತ್ತಿರುವುದು ಕೆಳ ಸಮುದಾಯಗಳು. ತಮ್ಮ ಪಾರಂಪರಿಕ ಕಸಬುಗಳನ್ನು ಬಿಟ್ಟುಕೊಡಲಾಗದ ಸ್ಥಿತಿಯಲ್ಲಿ ಈ ಸಮುದಾಯಗಳಿವೆ. ಇಂತಹ ಸಮುದಾಯಗಳಲ್ಲಿ ಕೊರವ ಸಮುದಾಯವು ಒಂದಾಗಿದೆ. ಈ ಸಮುದಾಯದ ಪರಿಚಯವಿರುವ ಎಲ್ಲರಿಗೂ ಕೊರವರೆಂದರೆ ಬುಟ್ಟಿ ಮಾಡುವವಿರಲಿ, ಬಾರಿಸುವವಿರಲಿ ಎಂಬ ಚಿತ್ರಗಳ ಕಣ್ಮುಂದೆ ಬರುತ್ತವೆ. ತಮ್ಮ ತಲೆಯ ಮೇಲೆ ಈಚಲು ಕಸಬಾರಿಕೆ ಹೊತ್ತು, ಹಣ್ಣು ವ್ಯಾಪಾರ ಮಾಡುವ, ಹಂದಿಗಳನ್ನು ಸಾಕುವ ಸಮುದಾಯ ಎಂಬುದು ತಿಳಿದುಬರುತ್ತದೆ.

ಹಿಂದಿನ ಕಾಲದಲ್ಲಿ ಕೊರವರಿಗೆ ತಮ್ಮ ಕೆಲಸಕ್ಕೆ ಒಕ್ಕಲು ಮನೆಗಳ ಉತ್ಪಾದನೆಯಲ್ಲಿ ಒಂದು ನಿಶ್ಚಿತ ಪರಂಪರೆಯ ವಾರ್ಷಿಕ ಪಾಲು ಬರುತ್ತಿತ್ತು. ಜೊತೆಗೆ ಸಾಮಾಜಿಕ ಗೌರವವೂ ಸಾಂದರ್ಭಿಕವಾಗಿ ಲಭ್ಯವಾಗುತ್ತಿತ್ತು. ಆದರೆ ಇಂದು ಕೊರವರಿಗೆ ಅಂತಹ ಅವಕಾಶಗಳಿಲ್ಲ. ನಿಶ್ಚಿತ ಉತ್ಪಾದನೆ ಇಲ್ಲ, ಸಾಮಾಜಿಕ ಗೌರವನೂ ಇಲ್ಲದಂತಾಗುತ್ತಿದೆ. ಪ್ರಸ್ತುತ ಜಾಗತೀಕರಣದ

ಸಂದರ್ಭದಲ್ಲಿ ಕೊರವರ ಪಾರಂಪರಿಕ ವೃತ್ತಿಯನ್ನು ಮೌಲ್ಯದಲ್ಲಿವೆ. ಹಲವರಿಗೆ ತಮ್ಮ ಪಾರಂಪರಿಕ ವೃತ್ತಿಯಲ್ಲಿ ಮುಂದುವರೆಯುವ ಮನಸ್ಸಿಲ್ಲ. ಈಗಾಗಲೇ ಕೆಲವರು ಶಿಕ್ಷಣದಿಂದಾಗಿ ನೌಕರಿ ಪಡೆದು ತಮ್ಮ ಸಮುದಾಯದ ಪರಂಪರೆಯಿಂದ ದೂರ ಉಳಿದು ಬದುಕುತ್ತಿದ್ದಾರೆ. ಪರಂಪರೆಯ ವೃತ್ತಿಯಲ್ಲಿಯೇ ಬದುಕುತ್ತಿರುವ ಗುಂಪು ಮಾತ್ರ ಅಲೆಮಾರಿಯಂತೆ ಬದುಕುತ್ತಿದ್ದಾರೆ. ಇಂತವರಿಗೆ ಭಿನ್ನವಾದ ವೃತ್ತಿಗಳಲ್ಲಿ ಬದುಕುತ್ತಿರುವ ತಮ್ಮವರೇ ಹೊರಗಿನವರಂತೆ ಕಾಣುತ್ತಾರೆ. ಇವರು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ತಮ್ಮ ಬಂಧುಗಳನ್ನು ಅವಮಾನಿಸುತ್ತಿದ್ದಾರೆ. ಸಮುದಾಯದಿಂದ ಹೊರಬಂದ ಮೇಲೆ ಸಮುದಾಯದ ಬಗೆಗೆ ಕಾಳಜಿ ಇಲ್ಲದಿರುವುದು ಎದ್ದು ಕಾಣುತ್ತದೆ.

- ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದು ಬದುಕುತ್ತಿರುವವರು.
- ಪಾರಂಪರಿಕ ವೃತ್ತಿಯಲ್ಲಿ ಗೌರವನಿಟ್ಟುಕೊಂಡು ಸಾಮಾಜಿಕ ಸ್ಥಾನಮಾನಗಳನ್ನು ಉನ್ನತಿಕರಿಸಿಕೊಳ್ಳಲು ಬೇರೆ ವೃತ್ತಿಗಳನ್ನು ಅವಲಂಬಿಸಿರುವವರು.
- ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವೂ ಇಲ್ಲದೆ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿರುವವರು.

ಪ್ರಸ್ತುತ ಅಧ್ಯಯನವು ಕೊರವರ ಸಮುದಾಯದ ಜೀವನ ವ್ಯವಸ್ಥೆ ಕುರಿತಂತೆ ವಿವರಿಸಿಕೊಳ್ಳುವ ಒಂದು ಪ್ರಯತ್ನವಾಗಿದೆ. ಹೈದರಾಬಾದ್ ಕರ್ನಾಟಕದ ಬದುಕುತ್ತಿರುವ ಕೊರವರನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಬುಡಕಟ್ಟು ಜನರು ಒಂದೇ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಾ ನಾವೆಲ್ಲರೂ ಒಂದೇ ಎನ್ನುವ ಸಮುದಾಯದಂತೆ ಭಾವನೆ ಹೊಂದಿರುತ್ತಾರೆ. ಬುಡಕಟ್ಟು ಸಮುದಾಯದವರು ತಮ್ಮದೇ ಆದ ಭಾಷೆಯನ್ನು ಹೊಂದಿರುತ್ತಾರೆ. ಬುಡಕಟ್ಟು ಸಮುದಾಯದಲ್ಲಿ ರಕ್ತ ಸಂಬಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ರಕ್ತ ಬಾಂಧವ್ಯದ ಆಧಾರದ ಮೇಲೆಯೇ ಕುಲಗಳು ರಚಿತವಾಗಿರುತ್ತವೆ. ತಮ್ಮದೇ ಆದ ಸಾಮಾಜಿಕ ನಿಯಮಗಳನ್ನು ಒಳಗೊಂಡಿರುತ್ತದೆ. ಒಂದೇ ಕುಲಚಿನ್ಹೆ ಒಳಗೊಂಡು ಬಹಳ ಶ್ರದ್ಧೆಯಿಂದ ಕುಲದೇವತೆಯನ್ನು ಪೂಜಿಸುತ್ತಾರೆ. ಅದರಲ್ಲಿ ಕಲ್ಲು ಮರ, ಪ್ರಾಣಿ, ಪಶು, ಪಕ್ಷಿ ಏನಾದರೂ ಆಗಿರಬಹುದು ಎಂಬುವ ಅಂಶಗಳು ಕೊರವ ಸಮುದಾಯಗಳಲ್ಲಿಯೂ ಕಂಡು ಬರುತ್ತದೆ. ಅವರದೆಯಾದ ಕುಳುವ ಭಾಷೆ ರಕ್ತ ಸಂಬಂಧಗಳಲ್ಲಿ ಪ್ರಾಧಾನ್ಯತೆ, ಕುಲಗಳು, ನಿಸರ್ಗ ದತ್ತವಾದ ದೈವದ ಕಲ್ಪನೆಯು ಇವರಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಹೈದರಾಬಾದ್ ಕರ್ನಾಟಕದ ಜಿಲ್ಲೆಯಲ್ಲಿ ನೆಲೆಸಿರುವ ಕೊರವ ಸಮುದಾಯಗಳು ಗಮನ ಸೆಳೆಯುತ್ತದೆ. ಯಾಕೆಂದರೆ ತಮ್ಮದೇ ಆದ ಭಾಷೆ, ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿಕೊಂಡು,

ಪರಂಪರೆಯಿಂದ ಬಂದ ವೃತ್ತಿ ಪರಿಣತೆ ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಕೊರವ ಸಮುದಾಯ ಒಟ್ಟು ಜನಸಂಖ್ಯೆಯಲ್ಲಿ ೨.೪೮.೦೦೦ ರಷ್ಟಿದೆ. ತಮಿಳುನಾಡಿನಿಂದ ವಲಸೆ ಬಂದ ನಂತರ ಬೀದರ, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ ಮೊದಲಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಕೊರವರನ್ನು ಬುಡಕಟ್ಟು ಸಮುದಾಯವೆಂದು ಸರಕಾರ ಪರಿಗಣಿಸದಿದ್ದರೂ ಅವರು ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದಾರೆ. "ಬುಡಕಟ್ಟುಗಳನ್ನು ಗುರುತಿಸಲು ಸನ್ ೧೯೫೩ರ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಆಯೋಗವು ಬುಡಕಟ್ಟುಗಳ ಎಂಟು ಲಕ್ಷಣಗಳನ್ನು ಈ ರೀತಿಯಾಗಿ ಹೇಳಿದೆ" (ಬಾಂಬೆ ಗೆಜೆಟಿಯರ್ ಕರ್ನಾಟಕ ಭಾಗದಲ್ಲಿ ಪು. ೪೩೮–೪೪೧, ೧೯೮೫)

೧. ನಾಗರಿಕ ಸಮುದಾಯದಿಂದ ದೂರವಿದ್ದು ಕಾಡು ಮತ್ತು ಬೆಟ್ಟಗಳಲ್ಲಿ ಬದುಕುವವರು

೨. ನಿಗ್ರೋಯಿಡ, ಅಸ್ಟ್ರೋಲಾಯಿಡ, ಮಂಗೋಲಾಯಿಡ ಮತ್ತು ಕೊಕೊಸೈಡ್ ಈ ನಾಲ್ಕು ಜನಾಂಗಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರಬೇಕು.

೩. ಬುಡಕಟ್ಟುಗಳು ಪ್ರತ್ಯೇಕವಾದ ಭಾಷೆಯನ್ನು ಹೊಂದಿರಬೇಕು.

೪. ಪಿತೃಪೂಜೆ, ದೆವ್ವ/ಭೂತಗಳ ಆರಾಧನೆಯನ್ನು ಮಾಡುವ ಪ್ರಾಚೀನ ಆಚರಣೆಯನ್ನು ಹೊಂದಿರಬೇಕು.

೫. ಪ್ರಾಚೀನ ವೃತ್ತಿಗಳಾದ ಬೇಟೆ, ಬೇಸಾಯ, ಕಾಡುತ್ಪತ್ತಿಯನ್ನು ಸಂಗ್ರಹಿಸುವ ವೃತ್ತಿಗಳನ್ನು ಮಾಡುವವರಿರಬೇಕು.

೬. ಮಾಂಸ ಸೇವನೆಯನ್ನು ಮಾಡುವವರಿರಬೇಕು.

೭. ಬುಡಕಟ್ಟುಗಳು ಸಾಮಾನ್ಯವಾಗಿ ಅರೆಬೆತ್ತಲೆ ಬೆತ್ತಲೆಯಾಗಿದ್ದು ಮರದ ತೊಗಟೆ, ಎಲೆಗಳನ್ನು ಬಳಸುವವರಾಗಿರಬೇಕು.

೮. ವಲಸೆ ಸಂಸ್ಕೃತಿಯನ್ನು ಹೊಂದಿದ್ದು, ಕುಣಿತ, ಕುಡಿತಗಳಲ್ಲಿ ವಿಶೇಷ ಆಸ್ತಕಿಯನ್ನು ಹೊಂದಿರಬೇಕು. ಈ ಮೇಲಿನ ಎಂಟು ಲಕ್ಷಣಗಳನ್ನು ನೋಡಿರುವರಲ್ಲಿ ಕೊರವರು ಇದರಲ್ಲಿ ಆರು ಲಕ್ಷಣಗಳನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಬಹುದು.

ಅಧ್ಯಯನದ ಉದ್ದೇಶಗಳು

ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಇಂದು ಕೊರವರು ವಾಸಿಸುತ್ತಿದ್ದಾರೆ. ಜಾಗತೀಕರಣದ ಸಂದರ್ಭದಲ್ಲಿ ಕೊರವರು ತಮ್ಮ ಮೂಲ ವೃತ್ತಿಯನ್ನು ಬಿಡದೇ ಅನೇಕ ವೃತ್ತಿಗಳನ್ನು ಅವಲಂಬಿಸಿರುವಂತರಿದ್ದಾರೆ. ಪ್ರಸ್ತುತ ಅಧ್ಯಯನವು ಕೊರವ ಸಮುದಾಯದ

ಜೀವನ ವ್ಯವಸ್ಥೆ ಮತ್ತು ವರ್ತಮಾನದ ಸ್ಥಿತಿಗತಿಗಳನ್ನು ವಿವರಿಸುವ ಪ್ರಯತ್ನಿಸುತ್ತದೆ. ಪ್ರಸ್ತುತ ಅಧ್ಯಯನದ ಉದ್ದೇಶಗಳು ಈ ಕೆಳಗಿನಂತಿವೆ.

೧. ಕೊರವ ಸಮುದಾಯದ ಚಾರಿತ್ರಿಕ ಬೆಳವಣಿಗೆಯನ್ನು ತಿಳಿದುಕೊಳ್ಳುವುದು.

೨. ಕೊರವ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು.

೩. ಕೊರವ ಸಮುದಾಯದ ಆರ್ಥಿಕ ಬದುಕನ್ನು ಕಂಡುಕೊಳ್ಳುವುದು.

೪. ಕೊರವ ಸಮುದಾಯದ ಸಾಹಿತ್ಯದ ಬಗೆ ತಿಳಿದುಕೊಳ್ಳುವುದು.

೫. ಕೊರವ ಸಮುದಾಯದ ವರ್ತಮಾನದ ಸಾಮಾಜಿಕರಣ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳುವುದು.

ಜಾಗತೀಕರಣದ ಸಂದರ್ಭದಲ್ಲಿ ಕೆಲವು ಸಮುದಾಯ ಕೊರವರ ಮೇಲೆ ನಕಾರಾತ್ಮಕ ಪ್ರಭಾವ ಬೀರಿ ಅದರ ಸಾಮಾಜಿಕ ಜೀವನ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆ. ವೃತ್ತಿ ಬದಲಾವಣೆ, ವೃತ್ತಿ ಸಮಸ್ಯೆಗಳು, ರಾಜಕೀಯ ಪ್ರಭಾವ ಮೊದಲಾದವುಗಳ ಕುರಿತು ಅಭ್ಯಸಿಸುವುದು ನನ್ನ ಉದ್ದೇಶವಾಗಿದೆ.

ಅಧ್ಯಯನ ವಿಧಾನಗಳು

ಮುಖ್ಯವಾಗಿ ಈ ಅಧ್ಯಯನವು ಸಮುದಾಯ ಆಧಾರಿತ ಅಧ್ಯಯನ. ಇದರಲ್ಲಿ ಕ್ಷೇತ್ರಕಾರ್ಯದಿಂದ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಈಗಾಗಲೇ ಸಮುದಾಯದ ಅಧ್ಯಯನದ ಮೇಲೆ ನಡೆದ ಅಧ್ಯಯನಗಳನ್ನು ಗಮನಿಸಿ ಅದರ ಹಿನ್ನೆಲೆಯಲ್ಲಿ ಹೈದರಾಬಾದ್ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಕೊರವ ಸಮುದಾಯದ ಪ್ರಸ್ತುತ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವ ಸಲುವಾಗಿ ಈ ಕೆಳಗಿನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧. ಚಾರಿತ್ರಿಕ ವಿಧಾನ

೨. ಪ್ರಶ್ನಾವಳಿ ಮಾದರಿ

೩. ಗುಂಪು ಚರ್ಚೆ ಮತ್ತು ಸಂದರ್ಶನ ವಿಧಾನ

೪. ಸಹಭಾಗಿತ್ವ ಅವಲೋಕನ ವಿಧಾನ

೫. ವ್ಯಕ್ತಿ ಅಧ್ಯಯನ ವಿಧಾನ

೧. ವಸಾಹತು ಆಡಳಿತ ಕಾಲದಿಂದ ಇಲ್ಲಿಯವರೆಗೆ ಕೊರವ ಸಮುದಾಯದ ಕುರಿತು ನಡೆದಿರುವ ಅಧ್ಯಯನಗಳನ್ನು ಪರಾಮರ್ಶಿಸಲಾಗಿದೆ. ಜೊತೆಗೆ ಕೊರವರ ಮೌಖಿಕ ಸಾಹಿತ್ಯವನ್ನು ಪ್ರಧಾನ ಆಕರವೆಂದು ಪರಿಗಣಿಸಲಾಗುತ್ತದೆ.

೨. ಲಭ್ಯ ಮೌಖಿಕ ಮತ್ತು ಲಿಖಿತ ಸಾಹಿತ್ಯದ ಆಕರಗಳ ಮೂಲಕ ಕೊರವ ಸಮಾಜದ ಸಾಮಾಜಿಕ ಜೀವನ ವ್ಯವಸ್ಥೆಯನ್ನು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಗತಿತಾರ್ತಿಕ ಅಧ್ಯಯನ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ. ಇದಕ್ಕಾಗಿ ಆಚರಣೆ, ಆರಾಧನಾ ಪರಂಪರೆ, ವಿಧಿ ವಿಧಾನಗಳು ಮತ್ತು ಪ್ರಧಾನವಾಗಿ ಲಿಖಿತ ಆಕರಗಳನ್ನು ಅಂದರೆ ಹೈದರಾಬಾದ್ ಕರ್ನಾಟಕದ ಜಿಲ್ಲೆಯ ಸಂಖ್ಯಾಧಾಕಾರಿ, ಜಿಲ್ಲಾಧಿಕಾರಿ ಹಾಗೂ ಸರಕಾರಿ ಕಛೇರಿಗಳಲ್ಲಿ ಕೊರವ ಸಮುದಾಯದ ಬಗ್ಗೆ ಲಭ್ಯವಿದ್ದ ಮಾಹಿತಿ ದಾಖಲೆಗಳು ಇತ್ಯಾದಿಗಳನ್ನು ಅನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ.

೩. ಸಮುದಾಯದಲ್ಲಿ ಪಾಲ್ಗೊಳ್ಳುವಿಕೆಯಿಂದ ಮಾಹಿತಿ ಸಂಗ್ರಹಿಸುವುದು. ಜೊತೆಗೆ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು, ಪರಿವರ್ತನೆ ಅರ್ಥ ಮಾಡಿಕೊಳ್ಳಲು ನಿಶ್ಚಿತ ಪ್ರಶ್ನಾವಳಿಯನ್ನು ರೂಪಿಸಲಾಗಿತ್ತು. ಕೊರವ ಸಮುದಾಯದಲ್ಲಿ ಬಹುಸಂಖ್ಯಾತರು ಅನಕ್ಷರಸ್ಥರಿದ ಕಾರಣ ಸದರಿ ಪ್ರಶ್ನಾವಳಿಯನ್ನು ಕೊರವ ಸಮುದಾಯದವರ ಮನೆಯ ಪ್ರಮುಖರ ಸಂದರ್ಶನಗಳ ಮೂಲಕ ಪ್ರಶ್ನಾವಳಿಯ ವಿವರಗಳನ್ನು ಸಂಗ್ರಹಿಸಲು ಬಳಸಲಾಯಿತು. ಈ ಪ್ರಶ್ನಾವಳಿಯ ಮೂಲಕ ಕುಟುಂಬದ ಯಜಮಾನ, ಹಳ್ಳಿಯ ಸಮುದಾಯದ ಮುಖಂಡ, ಸಮುದಾಯದಲ್ಲಿರುವ ಹಿರಿಯರು ಮತ್ತು ತಿಳುವಳಿಕರಸ್ಥರಿಂದ ಆಯ್ದ ಗ್ರಾಮದಲ್ಲಿನ ಕೊರವ ಕುಟುಂಬಗಳ ವಿವರಗಳನ್ನು ಸಂಗ್ರಹಿಸಲಾಯಿತು.

೪. ಗುಂಪು ಚರ್ಚೆ ಮತ್ತು ಸಂದರ್ಶನ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೊರವ ಸಮುದಾಯದ ಆಯ್ದ ವ್ಯಕ್ತಿಗಳ ಸಂದರ್ಶನದ ಜೊತೆ ಕೊರವ ಸಮುದಾಯದ ವಿಭಿನ್ನ ಬಗ್ಗೆ ತಿಳಿದುಕೊಳ್ಳಲು ಗುಂಪಾಗಿ ನಿಶ್ಚಿತ ಪ್ರಶ್ನಾವಳಿ ಮೂಲಕ ಗುಂಪು ಚರ್ಚೆಗಳನ್ನು ಏರ್ಪಡಿಸಲಾಗಿತ್ತು.

೫. ಸಹಭಾಗಿತ್ವ ಅವಲೋಕನ ವಿಧಾನ : ಕೊರವ ಸಮುದಾಯದ ಕೇರಿಗಳಲ್ಲಿ ಇದ್ದುದರಿಂದ ಹೆಚ್ಚಿನ ತಿಳುವಳಿಕೆ ಪಡೆಯಲು ಸಾಧ್ಯವಾಗಿದೆ. ಅವರ ಸಾಮಾಜಿಕ ಜೀವನದಲ್ಲಿ ಜಾಗತೀಕರಣ ಪ್ರಭಾವ, ಪರಿಣಾಮ, ಮುಖಮುಖಿ ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲಾಯಿತು.

೬. ವ್ಯಕ್ತಿ ಅಧ್ಯಯನ ವಿಧಾನ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೊರವ ಸಮುದಾಯದ ಆಯ್ದ ಕೇರಿಗಳ ವ್ಯಕ್ತಿಗಳನ್ನು ಸಂದರ್ಶನ ಮಾಡಲಾಗಿದೆ. ಮನೆಯ ಯಜಮಾನ, ಗೃಹಿಣಿಯರ, ದಿನಗೂಲಿಗಳು, ಹೈನುಗಾರಿಕೆ, ಸ್ಥಳೀಯ ನಾಯಕರು, ಹಿರಿಯರು, ವಿದ್ಯಾರ್ಥಿಗಳು, ಗ್ರಾಮ ಪಂಚಾಯಿತಿ ಸದಸ್ಯರು, ಸಂಘಟನೆಯ ಸದಸ್ಯರು ವ್ಯಕ್ತಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ: ಕೊರವ ಸಮುದಾಯ ಹೆಚ್ಚಾಗಿ ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಬೀದರ್, ಗುಲ್ಬರ್ಗಾ, ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿಯಲ್ಲಿ ಕಂಡುಬರುತ್ತಾರೆ. ಹೈದರಾಬಾದ್ ಕರ್ನಾಟಕ ಆರು ಜಿಲ್ಲೆಯಲ್ಲಿ ಎಲ್ಲ ತಾಲೂಕಿನ ಎರಡು ಗ್ರಾಮಗಳಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಹೀಗೆ ಸಿದ್ಧಪಡಿಸಿದ ಪ್ರಶ್ನಾವಳಿಯನ್ನು ಕ್ಷೇತ್ರ ಕಾರ್ಯ ಅಧ್ಯಯನಕ್ಕೆ ಬಳಸಲಾಯಿತು. ಆರು ಜಿಲ್ಲೆಯ ಎಲ್ಲ ತಾಲೂಕುಗಳ ಎರಡು ಗ್ರಾಮಗಳಂತೆ ಮಾಹಿತಿ ಸಂಗ್ರಹಿಸಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಹೈದರಾಬಾದ್ ಕರ್ನಾಟಕದ ಪ್ರದೇಶದ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಗಳಲ್ಲಿ ವಾಸಿಸುತ್ತಿರುವ ಕೊರವ ಸಮುದಾಯದ ಜೀವನ ವ್ಯವಸ್ಥೆ ಕುರಿತಂತೆ ಅಧ್ಯಯನದ ಮಿತಿಯನ್ನು ಅಳವಡಿಸಿಕೊಳ್ಳಲಾಗಿದೆ.

ಹೈದ್ರಾಬಾದ್ ಕರ್ನಾಟಕ

ಯಾವುದೇ ಸಮುದಾಯದ ಇತಿಹಾಸವನ್ನು ತಿಳಿದುಕೊಳ್ಳಬೇಕಾದರೆ ವಿದೇಶಿ ಬರಹಗಾರರ ಮಹತ್ವ ಎದ್ದು ಕಾಣುತ್ತದೆ. ಭಾರತದ ಪ್ರಭುತ್ವವನ್ನು ಹಿಡಿದುಕೊಳ್ಳುವ ದೃಷ್ಟಿಯಿಂದ ವಸಾಹತುಶಾಹಿಗಳು/ಬ್ರಿಟಿಷರ ಆಳ್ವಿಕೆಯು ತಳಸಮುದಾಯದ ಅಧ್ಯಯನಕ್ಕೆ ಅನುವು ಮಾಡಿಕೊಂಡು ಇಂದು ಸಮುದಾಯವನ್ನು ತಮ್ಮ ಅನನ್ಯತೆ/ಅಸ್ತಿತ್ವವನ್ನು ಹುಡುಗಿಕೊಳ್ಳಲು ಹವಣಿಸುತ್ತಿದೆ. ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಬಳ್ಳಾರಿ, ಕೊಪ್ಪಳ ಜಿಲ್ಲೆಯ ತೆಕ್ಕಲಕೋಟೆ ಸಂಗನಕಲ್ಲಿನಲ್ಲಿ ಅಲೆಮಾರಿ ಜೀವನದಿಂದ ನೆಲೆಗೊಂಡ ಜೀವನಕ್ಕೆ ಉಪಯೋಗವನ್ನು ತಿಳಿಸಿಕೊಡುತ್ತದೆ. ಮಾನವ ನಾಗರಿಕತೆಗೆ ನಡೆದು ಬಂದ ದಾರಿಯನ್ನು ಸೀಮಿತವಾಗಿ ಬೆಳಕಿಗೆ ತಂದಿರುವುದುಂಟು. ಅಶೋಕ ಚಕ್ರವರ್ತಿಯು ತನ್ನ ನಡೆನುಡಿಗಳಲ್ಲಿ ಮುಂದಿನ ಪೀಳಿಗೆಯನ್ನು ಯಾವಾಗಲೂ ಗಮನದಲ್ಲಿಟ್ಟುಕೊಂಡು ಸಾಹಿತ್ಯ, ಸುಂದರ ಲಿಪಿಗಳನ್ನು ಸಣ್ಣ ಸಂಗತಿಗಳನ್ನು ದಾಖಲು ಮಾಡಿರುವುದುಂಟು. ಸಮುದಾಯಗಳ ಇತಿಹಾಸ ತಿಳಿದುಕೊಳ್ಳಲು ಅಗತ್ಯವಾದ ಆಕರಗಳಾಗಿವೆ ಎಂದೇ ಹೇಳಬೇಕಾಗುತ್ತದೆ. ಸಮಕಾಲೀನ ಜನರ ಅಸ್ತಿತ್ವದಲ್ಲಿರುವ ಸಂಪ್ರದಾಯಗಳ ಮತ್ತು ನಂಬಿಕೆಗಳ ದ್ಯೋತಕವಾಗಿದೆ.

ವಿಜಯನಗರ ಕಾಲಕ್ಕೆ ಕನ್ನಡ ಮತ್ತು ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಸಹ ವಿಫುಲವಾದ ಶಾಸನಗಳನ್ನು ಕಾಣುತ್ತೇವೆ. ಕೊರವ ಸಮುದಾಯವು ಸಹ ಕುಳುವ ಭಾಷೆಯಲ್ಲಿಯೂ ಕನ್ನಡ ತೆಲುಗು ಮತ್ತು ತಮಿಳು ಅಕ್ಷರಗಳ ಮಿಶ್ರಣಕೊಂಡು ಬರುವುದುಂಟು. ಆದ್ದರಿಂದ ತುಳುವ ಭಾಷೆಯ ಸಂಶೋಧನೆಯ ಅಗತ್ಯವಾಗಿ ಆಗಬೇಕಾಗಿದೆ. ಬಂಡೆಯಲ್ಲಿ ಕೊರೆದ ಪ್ರಾಚೀನ ಕಾಲದ ಬಗ್ಗೆ ತಮ್ಮದೇ ಆದ ಕಥೆಗಳನ್ನು ಹೇಳುತ್ತವೆ. ಸಮುದಾಯಗಳ

ಪರಿಚಯ ಮಾಡಿಕೊಡುತ್ತದೆ. ಸ್ಮಾರಕಗಳಲ್ಲಿ, ಶಿಲ್ಪಿಗಳಲ್ಲಿ, ಮುದ್ರೆಗಳಲ್ಲಿ, ಲಾಂಛನಗಳು ಶತಮಾನಗಳಿಂದ ಪಡೆದು ಬಂದ ಕಟ್ಟಡ ಮತ್ತು ಶಿಲ್ಪಕಲೆಯ ನಿರಂತರ ಚರಿತ್ರೆಯನ್ನು ನಮ್ಮ ಮುಂದಿಡುತ್ತವೆ. ವಿಜಾಪುರ, ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳು ಮುಸಲ್ಮಾನರ ಆಳ್ವಿಕೆಗೆ ಒಳಪಟ್ಟು ಕರ್ನಾಟಕದ ಧಾರ್ಮಿಕ ಮತ್ತು ವಾಸ್ತುಶಿಲ್ಪದ ಭಾಷೆ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಯನವನ್ನು ತೆರೆದಿತ್ತು ಎಂದೇ ಹೇಳಬೇಕಾಗುತ್ತದೆ. ಹೆಚ್ಚಾಗಿ ಮಸೀದಿಗಳು, ಮುಸಲ್ಮಾನರ ಶಿಲ್ಪಕಲೆಗಳು ಜನಜೀವನದಲ್ಲಿ ಪ್ರಭಾವ ಬೀರಿರುವುದು ಭಾಷೆಯಲ್ಲಿಯೂ ಇರುವುದು ಎದ್ದು ಕಾಣುತ್ತದೆ. ಇಂದಿಗೂ ತಳಸಮುದಾಯಗಳಲ್ಲಿ ಮುಸ್ಲಿಂ ಉರ್ದು ಭಾಷೆಯು ಮತ್ತು ಮರಾಠಿ ಭಾಷೆಯ ಆಳವಾಗಿ ಬೇರೂರಿದೆ. ಇದರಿಂದಾಗಿ ಒಂದು ಧರ್ಮವು ಇನ್ನೊಂದರ ಮೇಲೆ ಬೀರಿದ ಪ್ರಭಾವ ಮತ್ತು ಪ್ರಭುತ್ವವನ್ನು ಅರಿಯಲು ಸಾಧ್ಯವಾಗುತ್ತದೆ. ವಚನ ಸಾಹಿತ್ಯ ಮತ್ತು ವಿಜಯನಗರ ಸಾಹಿತ್ಯದಲ್ಲಿ ಹೆಚ್ಚಿನ ಕೊಡುಗೆ ನೀಡಿರುವುದುಂಟು.

ರಾಜನಾಥ ದಿಂಡಿಮನ ಸಂಸ್ಕೃತಿ ಕೃತಿ ಸಾಳುವಾಭ್ಯುದಯದಲ್ಲಿ ಅಡಲಿಗನಾದ ನರಸಿಂಹನಿಂದ ಹಿಡಿದು ಸಾಳುವ ಸಂತತಿಯು ರಾಜಕೀಯ ಪ್ರಭುತ್ವದೆಡೆಗೆ ಮೇಲೆಕ್ಕೇರಿದ ಸಂಗತಿಯನ್ನು ತಿಳಿಸುತ್ತದೆ (ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಒಂದು, ಕರ್ನಾಟಕ ರಾಜ್ಯ ಸರ್ಕಾರದ ಬೆಂಗಳೂರು ಸಂ.ಸೂರ್ಯನಾಥ ಯು.ಕಾಮತ್, ಪುಟ.೧೪೧). ವ್ಯಾಪಾರ ಅಧ್ಯಯನ ಮತ್ತು ರಾಯಭಾರಿಯಾಗಿ ಬಂದ ವಿದೇಶಿಗರು ಕರ್ನಾಟಕ ಬಂದಾಗ ಬರೆದಿರುವ ಬರಹಗಳುಂಟು. ಅದೇ ರೀತಿ ಕೈಫಿಯತ್ತುಗಳು ಸಮುದಾಯಗಳ ಚರಿತ್ರೆಗೆ ಅನುಕೂಲವಾದವು. ಸೂಕ್ಷ್ಮ ಶಿಲಾಯುಗಕ್ಕೆ ಬಳ್ಳಾರಿಯ ಸಂಗನಕಲ್ಲು. ಸಸ್ಯದ ಅಂಟಿನಿಂದ ಜೋಡಿಸಿದಾಗ ಕುಡುಗೋಲುನಂತಹ ಒಂದು ಉಪಕರಣವಾಗುತ್ತದೆ. ಸಮಾನಾಂತರ ಅಂಚುಳ್ಳಿ ಒಂದು ನೀಳಚಕ್ಕೆಯ ಎರಡು ಅಂಚುಗಳನ್ನು ಓರಿಯಾಗಿ ಮೊಂಡು ಮಾಡಿದರೆ ಅಂದು ಒಂದು ಬಲವಾದ ಮೊನೆಯಾಗುತ್ತದೆ. ಈ ರೀತಿ ರಚಿಸಿಕೊಂಡ ಉಪಕರಣಗಳಿಂದ ಈ ಜನರಲ್ಲಿ ತಮ್ಮ ಕಸುಬಾದ ಬೇಟೆಯಾಡುವುದಲ್ಲದೆ ಇನ್ನೂ ಹಲವಾರು ಚಟುವಟಿಕೆಗಳಿದ್ದವೆಂದು ತೋರುವುದು.

ಭೀಮಾ, ಕೃಷ್ಣ, ತುಂಗಾಭದ್ರಾ ಉಪನದಿಗಳ ಪ್ರದೇಶದಲ್ಲಿ ಸಂಸ್ಕೃತಿಗಳ ಸು.೨೭೦ ನೆಲೆಗಳನ್ನು ಶೋಧಿಸಲಾಗಿದೆ ಎಂಬುದು ತಿಳಿದುಬರುತ್ತದೆ. ಇಲ್ಲಿ ಕರಿಭೂಮಿಯಾಗಿರುವುದರಿಂದ ಹೆಚ್ಚಾಗಿ ಜನರು ತಮ್ಮ ವಾಸ್ತವ್ಯವನ್ನು ಹೂಡಿದರು ಎಂಬುದು ತಿಳಿದುಕೊಳ್ಳಬಹುದು. ಹರಪ್ಪಾ ಸಂಸ್ಕೃತಿಯ ನೀಳಚಕ್ಕೆಗಳಂತೆ ಸುಮಾರು ೧೦ ರಿಂದ ೧೫ ಸೆ.ಮಿ.ನಷ್ಟು ಉದ್ದವಾಗಿರುತ್ತದೆ. ಸಾಲ್ವಡಗಿ ಮತ್ತು ಮಸ್ಕಿಯ ನೀಳಚಕ್ಕೆಗಳು ಇದಕ್ಕೆ ಉತ್ತಮ ನಿದರ್ಶನ(ಪುಟ.೧೫೪) ಸಾಧರಣ ಮಟ್ಟದ ಬೇಸಾಯ, ಪ್ರಾಣಿಗಳ ಸಾಕಾಣಿಕೆ ಮತ್ತು ಬೇಟೆ ಇವು ಸಮಾಜದ ಮುಖ್ಯ ಆರ್ಥಿಕ

ವ್ಯವಸ್ಥೆಯಾಗಿತ್ತು. ಮಡಿಕೆ ಮಾಡುವುದು ಆಭರಣದ ಮಣಿಗಳನ್ನು ತಯಾರಿಸುವುದು, **ಚಾಪೆ ಹೆಣೆಯುವುದು, ನೂಲುವುದು,** ಇವೆ ಮೊದಲಾದ ಕೈಗಾರಿಕೆಗಳು ಉತ್ತಮ ಸ್ಥಿತಿಯಲ್ಲಿದ್ದವು. ಒಂದು ಪ್ರದೇಶದ ವಿಶಿಷ್ಟ ವಸ್ತುಗಳು ಮತ್ತೊಂದು ಪ್ರದೇಶದಲ್ಲಿ ಸಿಗುವುದರಿಂದ ಪ್ರಾದೇಶಿಕ ವ್ಯಾಪಾರವಿತ್ತೆಂದು ಕಾಣುವುದು.(೧೫೭). ಕರ್ನಾಟಕದ ಬಳ್ಳಾರಿಯ ಪ್ರದೇಶವೆ ಶತವಾಹನರ ಮೂಲ ನಿವಾಸವೆಂದು ಅನೇಕ ಇತಿಹಾಸಕಾರರು ಭಾವಿಸಿದ್ದಾರೆ. ಸನ್ನತಿ (ಕಲ್ಬುರ್ಗಿ ಜಿಲ್ಲೆ) ಕರ್ನಾಟಕದ ಇತರ ಕಡೆಗಳಲ್ಲಿ ನಡೆದಿರುವ ಶೋಧನೆಗಳಿಂದ ಶಾತವಾಹನರಿಗೆ ಸಂಬಂಧಿಸಿದ ಸಾಂಸ್ಕೃತಿಕ ಅವಶೇಷಗಳು ಬೆಳಕಿಗೆ ಬಂದಿವೆ. ಬಹುಮನಿ ಸುಲ್ತಾನರು ಕೃಷ್ಣ ಮತ್ತು ತುಂಗಭದ್ರ ನದಿಗಳನ್ನು ಮೇರೆಯೊಳಗೊಂಡ ಇಂದಿನ ಉತ್ತರ ಕರ್ನಾಟಕದ ಭಾಗಗಳಲ್ಲದೆ ಆಂಧ್ರಪ್ರದೇಶ, ಮಹಾರಾಷ್ಟ್ರಗಳ ಕೆಲವು ಜಿಲ್ಲೆಗಳ ಪ್ರದೇಶವನ್ನು ಬಹುಮನಿ ಅರಸರು ಆಳುತ್ತಿದ್ದರು. ಬೀದರ್, ಗುಲ್ಬರ್ಗಾ, ರಾಯಚೂರು ಕೆಲಭಾಗಗಳು ಬಹುಮನಿ ಆಳ್ವಿಕೆಗೆ ಒಳಪಟ್ಟವು ಎಂಬುದು ಇತಿಹಾಸದಿಂದ ಹಾಗೂ ಅಲ್ಲಿಯ ಪ್ರದೇಶದ ಭಾಷೆಯಿಂದ ತಿಳಿದುಬರುತ್ತದೆ. ಹೈದರಾಬಾದ-ಕರ್ನಾಟಕವು ವಿಜಯನಗರ ಆಳ್ವಿಕೆ, ವಿಜಾಪುರದ ಆದಿಲ್‌ಶಾಹಿಗಳ ಆಳ್ವಿಕೆ, ಬಹುಮನಿ ಸುಲ್ತಾನರ ಆಳ್ವಿಕೆಯ ಪ್ರಭಾವಕ್ಕೆ ಒಳಪಟ್ಟವು ಹಾಗೂ ಮರಾಠರು, ಪೇಶ್ವೆಗಳ ಆಳ್ವಿಕೆ ಇರುವುದು ತಿಳಿದುಬರುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಗಲು ಆಯಾ ಸಮಾಜವೇ ಬಹುಮುಖ್ಯವಾಗಿದೆ. ರಾಷ್ಟ್ರೀಯ ಶಾಲೆಗಳನ್ನು ಕಲ್ಬುರ್ಗಿ (೧೯೦೮) ರಾಯಚೂರು (೧೯೭೦) ಹಾಗೂ ಕೂಕನೂರು (೧೯೭೭)ಗಳಲ್ಲಿ ಆರಂಭಿಸಲಾಯಿತು. ರಾಯಚೂರಿನಲ್ಲಿ ಪಂಡಿತ ತಾರಾನಾಥರು ಹರ್ವದರ್ ಶಾಲೆಯನ್ನು ಆರಂಭಿಸಿದ್ದಕ್ಕಾಗಿ ಅವರನ್ನು ಹೈದರಾಬಾದ ಸಂಸ್ಥಾನದಿಂದ ಹೊರದೂಡಲಾಯಿತು.(ಪುಟ.೨೮೮) ಕಾನೂನುಭಂಗ ಚಳುವಳಿ ೧೯೩೦ರಲ್ಲಿ ಗಾಂಧೀಜಿ ಪ್ರಾರಂಭಿಸಿದರು. ಅಬಕಾರಿ ನಿಯಮಗಳನ್ನು ಉಲ್ಲಂಘನೆ ಕೆಲವು ಸತ್ಯಾಗ್ರಹಗಳ ಗುಂಪು ಗೋವೆಯಿಂದ ಉಪ್ಪನ್ನು ತಂದು ಕಾರವಾರದಲ್ಲಿ ಮಾರಿತು(೧೭೪೭) ಸಾಣೆಕಟ್ಟುದಲ್ಲಿಯ ಉಪ್ಪಿನ ಕಟ್ಟೆಗಳ ಮೇಲೆ ಜೂನ್ ೧ ರಂದು ಸತ್ಯಾಗ್ರಹಗಳು ದಾಳಿ ಮಾಡಿದರು. ಅಂಕೋಲೆಯಲ್ಲಿ ಉಪ್ಪಿನ ಸಂತೆಗಳನ್ನು ಏಪ್ರಿಲ್ ತಿಂಗಳ ೨೦, ೨೫, ೨೭ ಹಾಗೂ ಮೇ ೩ರಂದು ಏರ್ಪಡಿಸಲಾಯಿತು ಮತ್ತು ಸುಂಕ ರಹಿತವಾದ ಉಪ್ಪನ್ನು ಸಹಸ್ರಾರು ಚೀಲಗಳಲ್ಲಿ ಮಾರಲಾಯಿತು. ಇಂಥದೊಂದು ಸಾಮೂಹಿಕ ಚಳುವಳಿಯಿಂದ ಅಬಕಾರಿ ನಿಯಮಗಳೆಲ್ಲ ಅದೃಶ್ಯವಾದಂತೆ ಕಂಡುಬಂದಿತು. ಉಪ್ಪಿನ ಸತ್ಯಾಗ್ರಹದ ನಂತರ ಅರಣ್ಯ ಸತ್ಯಾಗ್ರಹ ಮತ್ತು ಸೇಂದಿಯ ಉತ್ಪಾದನೆ ಹಾಗೂ ಮಾರಾಟಗಳ ವಿರುದ್ಧ ಚಳವಳಿ ಪ್ರಾರಂಭವಾದವು. ಕಾಯ್ದಿಟ್ಟ ಅರಣ್ಯಗಳ ಕಾನೂನನ್ನು ಜನರು ಮುರಿದು ಉರುವಲು ಕಟ್ಟಿಗೆ ಹಾಗೂ ಹುಲ್ಲನ್ನು ತಂದರು. ಇದರಿಂದ ಅವರು ಬಂಧಿತರಾದರು.

ಹೆಂಡದ ಅಂಗಡಿಗಳ ತಡೆ-ಕಾವಲು ಈಚಲು ಮರಗಳನ್ನು ಕಡಿಯುವುದು, ಮದ್ಯದ ಅಂಗಡಿಗಳ ಜಾಹೀರ, ಲಿಲಾವಿಗೆ ತಡೆಕಾವಲು ಇವುಗಳೂ ಸಹ ನಡೆದವು. ಧಾರವಾಡ ಜಿಲ್ಲೆಯ ಶಿಗ್ಗಾವಿಯಲ್ಲಿ ನಡೆದ ಈಚಲು ಮರಗಳನ್ನು ಕಡಿದು ಉರುಳಿಸುವ ಸತ್ಯಗ್ರಹದ ಯಶಸ್ಸು ಅಪೂರ್ವವಾದುದು. (ಪುಟ.೨೮೭-೨೮೮) ಬಳ್ಳಾರಿಯಿಂದ ೭೭ ಜನ ಈ ಸತ್ಯಾಗ್ರಹದಲ್ಲಿ ಸೆರೆಮನೆ ವನಕ್ಕೆ ಒಳಗಾದರು ಎಂಬುದು ತಿಳಿದುಬರುತ್ತದೆ. ಬಳ್ಳಾರಿಯು ಮದರಾಸ್ ಪ್ರಾಂತ್ಯದಲ್ಲಿಯು ರಾಯಚೂರು, ಕಲ್ಬುರ್ಗಿ ಬೀದರ್ ಹೈದರಾಬಾದ್ ಸಂಸ್ಥಾನದಲ್ಲಿ ನಂತರ ಬಳ್ಳಾರಿ ಮೈಸೂರು ರಾಜ್ಯಕ್ಕೆ ಸೇರ್ಪಡೆಮಾಡಿತು.

ಸರ್ವಚೇತನವಾದವನ್ನು ಎಲ್ಲಿ ತಳಸಮುದಾಯಗಳು ಹೊಂದಿದ್ದು ಅವುಗಳನ್ನು ಆರ್ಯಕಕಾರಣದ ನಂತರವೂ ಆರ್ಯರು ಈ ಸರ್ವಚೇತನವನ್ನು ಪರಿಧಿಯ ಆಚರಣೆಗಳನ್ನು ತಮ್ಮ ಧರ್ಮದೊಂದಿಗೆ ಮೈಗೂಡಿಸಿಕೊಂಡು ಬಿಟ್ಟರು. ಪ್ರಾಣಿಗಳನ್ನು ಪದ್ಧತಿಗೆ ಆರ್ಯರು ವಿರಾಮಕೊಟ್ಟ ಮೇಲೂ ಸಹ ಕೆಲವು ವರ್ಗದ ಜನರು ಕುರಿ, ಕೋಣ, ಕೋಳಿಗಳನ್ನು ಬಲಿ ಕೊಡುವುದನ್ನು ಮುಂದುವರಿಸಿಕೊಂಡು ಬಂದರು. ಈಗ ಕಾನೂನಿನನ್ವಯ ಈ ಪ್ರಾಣಿಬಲಿಯೂ ನಿಷೇಧಿಸಲ್ಪಟ್ಟಿದೆ. ಆದರೂ ತಳ ಸಮುದಾಯಗಳಲ್ಲಿ ಪ್ರಾಣಿಬಲಿ ನಡೆಯುತ್ತಲೇ ಇದೆ. ಧಾರ್ಮಿಕ ಕೇಂದ್ರಗಳಾದ ದೇವಸ್ಥಾನಗಳು ಜನಜೀವನದ ಪ್ರಮುಖ ಪಾತ್ರವನ್ನು ವಹಿಸಿವೆ. ಪ್ರತಿಯೊಂದು ದೇವಸ್ಥಾನವು ಕಲಾ ಚಳುವಟಿಕೆಗಳ ಕೇಂದ್ರವಾಗಿದೆ. ಪ್ರತಿಯೊಂದು ದೇವಸ್ಥಾನದ ರಂಗಭೋಗದ ಸೇವೆಗಾಗಿ ವಾದ್ಯಗೋಷ್ಠಿ ಮತ್ತು ನರ್ತಕಿಯರು ಅಥವಾ ದೇವದಾಸಿಯರು ನಿಯೋಜಿತ ರಾಗಿರುತ್ತಿದ್ದರು. ದೇವಸ್ಥಾನದ ವತಿಯಿಂದ ಆಡಳಿತಗಾರರು, ಅರ್ಚಕರು, ನರ್ತಕಿಯರು, ಸಂಗೀತಗಾರರು, ಕಸಗುಡಿಸುವವರು, ಬಾಣಸಿಗರು ಹೂದೋಟವನ್ನು ನೋಡಿಕೊಳ್ಳುವವರು, ಹೂದಂಡೆ ಕಟ್ಟುವವರು ಇನ್ನೂ ಅನೇಕರಿಗೆ ಉದ್ಯೋಗವನ್ನು ನೀಡುವ ಸ್ಥಾನವಾಗಿತ್ತು. ಇಂದಿಗೂ ಕೊರವ ಸಮುದಾಯದವರು ವಾದ್ಯದವರು, ಹೂವು ನೀಡುವ ಸೇವೆಯನ್ನು ನೋಡುತ್ತೇವೆ((ಹಂಪಿ ವಿರುಪಾಕ್ಷ ದೇವಾಲಯ, ಹೇಮಗಿರಿ ಆಂಜನೇಯಗೆ ಹೂವು ಸೇವೆ ಇನ್ನು ಹಲವಾರು ದೇವಾಲಯದಲ್ಲಿ ಓಲಗ ಸೇವೆ ಇದೆ.)

ಕನ್ನಡ ಭಾಷೆಯು ಕರ್ನಾಟಕದ ಪ್ರಮುಖ ಭಾಷೆಯಾಗಿದ್ದು, ಕರ್ನಾಟಕದಲ್ಲಿ ಹಲವಾರು ತಳಸಮುದಾಯಗಳಿದ್ದು, ಅವರಾಡುವ ಭಾಷೆಯು ಕಂಡುಬರುತ್ತದೆ. ಕೊರವರು ಆಡುವ ಭಾಷೆಗಳು ಕನ್ನಡದ ಉಪಭಾಷೆಗಳೆಂದು ಉಲ್ಲೇಖಿಸಲಾಗುತ್ತಿದೆ. ತಾಯಿಯ ಮುಖಾಂತರವಾಗಿ ಬಂದು ತನ್ನ ನಿಕಟವಲಯದಲ್ಲಿ ಸದಾ ಕಾಲದಲ್ಲಿ ಮಗು ಮಾತನಾಡುವ ಭಾಷೆಯೇ ಮಾತೃಭಾಷೆ. ಕೊರವ ಸಮುದಾಯವು ತನ್ನದೇಯಾದ ಭಾಷೆಯನ್ನು ಒಳಗೊಂಡಿದ್ದು ಒಟ್ಟಿಗೆ ಇರುವುದರಿಂದ ಭಾಷೆಯು ಬಳಕೆಯಾಗುವುದುಂಟು. ಆದರೆ ಇಂದು ಗುಂಪಿನಿಂದ ನೌಕರಿಯಿಂದ ಹೊರಬಂದ ಮೇಲೆ ಸಮುದಾಯದ ಭಾಷೆಯು ಅಳಿಸುತ್ತಾ ಹೋಗುತ್ತಿದೆ.

ಲಮಾಣಿ/ಲಂಬಾಡಿ	೩,೪೦,೫೧೨	೧.೧೬
ಬಂಜಾರಿ/ಬಂಜಾರ	೩೧,೮೮,೪	೦.೧೧
ಕೊರಚ	೩೪೭೩	೦.೦೧
ವಡರಿ	೩೨೨೩	೦.೦೧
ಕೊರವ	೨೮೩೨	೦.೦೧
ಕೊಂಗು	೧.೮೮೬	೦.೦೧

ಇದರಲ್ಲಿ ಬಡಗ, ಹರಿಣಶಿಕಾರಿ, ಕೊರಚ, ಕುರುಬ ಕುರುಂಬ ಮುಂತಾದ ಉಪಭಾಷೆಗಳನ್ನಾಡುವ ೮.೨೪೭ ಜನರು ಈ ಪಟ್ಟಿಯಲ್ಲಿ ಸೇರಿಲ್ಲ ಎಂಬುದನ್ನು ತಿಳಿಸುತ್ತಾರೆ. ಕೊರವರು ಮತ್ತು ಕೊರಚರ ಆಡುಭಾಷೆಯಲ್ಲಿ ತಮಿಳು, ತೆಲುಗು ಮತ್ತು ಕನ್ನಡಗಳ ಕಲಬೆರೆಕಯ ಒಂದು ಬಗೆಯ ಅಶುದ್ಧ ಉಪಭಾಷೆಯಾಗಿದೆ.

ಕ್ರಿ.ಶ.೧೯೬೧ರ ಜನಗಣತಿಯಲ್ಲಿ ಜಾತಿಯ ಸಂಖ್ಯಾಬಲ, ಜಾತಿಯ ಹೆಸರಿನದೆ ವಿಶೇಷ ಉಪಭಾಷೆಯನ್ನು ಆಡುವ ಜನರ ಸಂಖ್ಯಾಬಲವನ್ನು ಕ್ರಿ.ಶ.೧೯೬೧ರ ಜನಗಣತಿಯ ಆಧಾರದ ಮೇಲೆ ಜಾತಿ ಮತ್ತು ಭಾಷೆ ಒಂದೇ ಆಗಿರುವಂತಹದನ್ನು ಕೊಡಲಾಗಿದೆ. ಅದರಲ್ಲಿ ಈ ಕೆಳಗಿನಂತಿದೆ.

ಬಂಜಾರ	೧೪೬೭೮೧
ಬಂಜಾರಿ	೨೮೮೦೧೭
ಕೊರಚ	೧೫೩೨೬
ಕೊರಚ ಕನ್ನಡ	೩೪೬೭
ಕೊರಮ	೨೮೬೬೫
ಕೊರಮ ಕನ್ನಡ	೮೪೫

ಆಯಾ ಸಮುದಾಯಗಳು ಮಾತನಾಡುವ ವಿಶೇಷ ಉಪಭಾಷೇಗಳಿಗೂ ಒಂದು ಜಾತಿಗೂ ಸಂಬಂಧ ಇರುವುದು ಕಂಡುಬರುತ್ತದೆ. ಕೊರವರು ಅಥವಾ ಕೊರಚರು ಒಂದೇ ಕುಳುವ ಭಾಷೆಯನ್ನಾಡುವುದುಂಟು. ಅವರ ಜಾತಿಯ ಹೆಸರೇ ಅವರು ಆಡುವ ಭಾಷೆಗೂ ಬಂದಿದೆ ಎಂಬುದು ತಿಳಿದುಬರುತ್ತದೆ. (ಪುಟ.೩೪೫, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಒಂದು ಸಂ. ಸೂರ್ಯನಾಥ ಯು.ಕಾಮತ್) ಇಂದಿಗೂ ಹೈದರಾಬಾದ್ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ

ಕುಳುವ ಭಾಷೆಯನ್ನು ಮಾತನಾಡುತ್ತಾರೆ. ಕೊರವ ಸಮುದಾಯ ಕೇರಿ, ಪಟ್ಟಣ, ಗ್ರಾಮ, ನಗರದಲ್ಲಿ ವಾಸಿಸುವ ಗುಂಪಿನಲ್ಲಿ ಕುಳುವ ಭಾಷೆ ಕಂಡುಬರುತ್ತದೆ. ಆದರೆ ತಮ್ಮ ಭಾಷೆಯನ್ನಾಡುವ ಸ್ಥಳದಿಂದ ದೂರವಾದರೂ ಮಾತ್ರ ಕುಳುವ ಭಾಷೆಯನ್ನು ಮಾತನಾಡದೆ ಇರುವುದು ನೋಡಬಹುದು. ಇಂದು ಸಮುದಾಯದ ಭಾಷೆ ಎಷ್ಟು ಮುಖ್ಯವಾಗಿದೆ ಎಂಬುದು ತಿಳಿದುಬರುತ್ತದೆ.

ಜಾತಿ ಮತ್ತು ಬುಡಕಟ್ಟುಗಳ ವರ್ಗೀಕರಣ

ಜಾತಿಯ ಏಣಿಶ್ರೇಣೀಕರಣವು ಸದಾಕಾಲವು ಒಂದೇ ಪ್ರಕಾರದಲ್ಲಿಲ್ಲ. ಇತ್ತೀಚಿನ ಕಾಲದಲ್ಲಿ ಸಾಮಾಜಿಕ ಮತ್ತು ರಾಜಕೀಯ ಜಾಗೃತಿಯಿಂದಾಗಿ ಜಾತಿಗಳ ಮತ್ತು ಬುಡಕಟ್ಟುಗಳ ಏಣಿಶ್ರೇಣಿ ಕ್ರಮದಲ್ಲಿ ಬದಲಾವಣೆಗಳು ಆಗಿವೆ ಎಂಬುದು ತಿಳಿದುಬರುತ್ತದೆ. ಸರ್ಕಾರವು ಇತ್ತೀಚಿಗೆ ವಿವಿಧ ಜಾತಿ ಮತ್ತು ಬುಡಕಟ್ಟುಗಳನ್ನು ಪುನರ್ವರ್ಗೀಕರಿಸಲು ಕ್ರಮಗಳನ್ನು ಕೈಗೊಂಡಿದ್ದು, ಹಿಂದುಳಿದ ಬುಡಕಟ್ಟುಗಳು, ಹಿಂದುಳಿದ ಜಾತಿಗಳು, ಹಿಂದುಳಿದ ಸಮುದಾಯಗಳು ಎಂದು ವರ್ಗೀಕರಿಸಿದ ಪರಿಣಾಮವಾಗಿ ಹಿಂದೆ ಅಪರಾಧಿ ಬುಡಕಟ್ಟುಗಳೆನಿಸಿಕೊಳ್ಳುತ್ತಿದ್ದ ಜನರ ವರ್ಗೀಕರಣವು ನಿಧಾನವಾಗಿ ನಿರ್ಮೂಲನೆಗೊಂಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವಾಗಿದೆ ಅಥವಾ ಹಿಂದುಳಿದ ಬುಡಕಟ್ಟುಗಳ ವರ್ಗಗಳಲ್ಲಿ ಸ್ಥಾನ ಕಲ್ಪಿಸಲಾಗಿದೆ. ಇತ್ತೀಚಿನ ಸರಕಾರಿ ಪ್ರಕಟಣೆಯ ಪ್ರಕಾರ ಮಾಜೀ ಗುನ್ಹೆಗಾರ ಬುಡಕಟ್ಟು ಎನ್ನಿಸಿದ್ದ ಕೊರವರನ್ನು ಹಿಂದುಳಿದ ಬುಡಕಟ್ಟುಗಳ ವರ್ಗಕ್ಕೆ ಸ್ಥಳಾಂತರಿಸಲಾಗಿದೆ. ಈ ಪುನರ್ವರ್ಗೀಕರಣದ ಇನ್ನೊಂದು ಅಂಶವೆಂದರೆ ಯಾವುದೇ ಒಂದು ಜಾತಿಯನ್ನು ಒಂದು ಸಮುದಾಯದ ಸಮೂಹವೆಂದು ಪರಿಗಣಿಸದೇ, ಆ ಜಾತಿಯಲ್ಲಿರಬಹುದಾದ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವಿಭಾಗಗಳನ್ನು ಹಿಂದುಳಿದ ಜಾತಿಗಳು ಎಂಬ ವರ್ಗಕ್ಕೆ ಸೇರಿಸಲಾಗಿದೆ (ಪುಟ.೩೬೧) ಹಿಂದುಳಿದ ಬುಡಕಟ್ಟುಗಳ ಕೆಲವು ಪ್ರತಿನಿಧಿಗಳೆಂದರೆ ಗೊಲ್ಲರು ಅಥವಾ ಗೌಳಿಗರು, ಹರಿಣಿಶಿಕಾರಿಗಳು ಹೆಳವರು, ಕೊರವರು ಮತ್ತು ಪಾರ್ಧಿಗಳು ಎಂಬುದನ್ನು ಗುರುತಿಸಲಾಗಿದೆ (ಪುಟ.೩೬೨) ೧೯೭೭ನೇ ವರ್ಷದ ಸರಕಾರಿ ಪ್ರಕಟಣೆಯಂತೆ.

೧೯೫೪ರಲ್ಲಿ ಅಪರಾಧಿ ಬುಡಕಟ್ಟುಗಳ ಕಾಯ್ದೆಯನ್ನು ೧೯೫೨ರಲ್ಲಿ ನಿರಸನಗೊಳಿಸು ವುದರೊಡನೆ ಆವರೆಗೆ ಅಪರಾಧಿ ತಂಡಗಳು ಅಥವಾ ಬುಡಕಟ್ಟುಗಳು ಎಂದು ನಮೂದಿಸಲಾಗುತ್ತಿದ್ದ ಜನರನ್ನು ಜನ್ಮಸಹಜ ಅಪರಾಧಿಗಳೆಂಬ ಕಳಂಕದಿಂದ ಮುಕ್ತಗೊಳಿಸಲಾಯಿತು. ಭಾರತೀಯ ಸಂವಿಧಾನದ ೧೫ನೆಯ ಅನುಚ್ಛೇದದ ಪ್ರಕಾರ ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮಸ್ಥಳಗಳ ಆಧಾರದ ಮೇಲೆ ಪಕ್ಷಪಾತ ಮಾಡುವುದನ್ನು ನಿಷೇಧಿಸಲಾಗಿದೆ. ಇದರಿಂದ ಅಪರಾಧಿ, ಬುಡಕಟ್ಟು/ಜಾತಿಗಳಿಗೆ ಇತರ ಸಮುದಾಯಗಳ ಸದಸ್ಯರ ಸರಿಸಮಾನವಾದ ಸ್ಥಾನ ದೊರಕುವಂತಾಗಿದೆ. ಸಂವಿಧಾನದ ಬಿ.ಆರ್.ಅಂಬೇಡ್ಕರ್ ಅವರ ಆಶಯಗಳಿಂದ ಪ.ಜಾ./

ಪ.ಪಂ.ಗಳಿಗೆ ಅನುಕೂಲವಾದರೂ ಅದನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದನ್ನು ತಿಳಿಯದಿರುವುದು ಮತ್ತು ತಿಳಿದವರು ಹೇಗೆ ಉಪಯುಕ್ತವಾಗಿ ಜನತೆಗೆ ತಲುಪುವಂತೆ ಮಾಡುವುದು ಅಗತ್ಯ

"ಕೊರಮ ಮತ್ತು ಕೊರಚರು ತಮ್ಮನ್ನು ಕೊರಮಶೆಟ್ಟಿ, ಕೊರವ ಮತ್ತು ಕುಂಚಿ ಕೊರವ (ಯೆರುಕಲ) ಎಂದು ಕರೆದುಕೊಳ್ಳುತ್ತಾರೆ. ಎರಡು ಪ್ರತ್ಯೇಕ ಹೆಸರುಗಳಿಂದ ಅವರನ್ನು ನಮೂದಿಸಿದ್ದರೂ ಅವರು ಒಂದೆ ಜಾತಿಗೆ ಸೇರಿದವರು ಎಂದು ಪರಿಗಣಿಸಬಹುದು. ಅವರು ಹಿಂದೆ ಒಂದು ಅಲೆಮಾರಿ ಬುಡಕಟ್ಟುನವರಾಗಿರಬಹುದು. ಪ್ರಾಯಶಃ ಅವರು ಮೂಲದಲ್ಲಿ ತಮಿಳುನಾಡಿನಿಂದ ಬಂಧಿರಬಹುದು. ಏನಿದ್ದರೂ ಈ ಅವರು ಒಂದೆಡೆ ನೆಲೆನಿಂತು ಸ್ಥಿರವಾದ ಜೀವನ ನಡೆಸುತ್ತಿದ್ದಾರೆ. ಮುಖ್ಯವಾಗಿ ಬೇಸಾಯ ಮಾಡುವುದರ ಜೊತೆಗೆ ಬುಟ್ಟಿ ಮತ್ತು ಚಾಪೆ ಹೆಣೆಯುತ್ತಾರೆ. ಅವರ ಹೆಣ್ಣು ಮಕ್ಕಳು ಕಣಿ ಹೇಳುವ ಉದ್ಯೋಗ ಮಾಡುತ್ತಿದ್ದರು. ಅವರನ್ನು ಕೊರಚಿ ಅಥವಾ ಕೊರವಂಜಿ ಎಂದು ಕರೆಯುತ್ತಾರೆ. ಕೊರಮರು, ಕೊರವರು, ಜನಪ್ರಿಯ ಮೋಜಿನಾಟ ನಡೆಸುವವರೂ, ಹಾವಾಡಿಗರೂ ಆಗಿದ್ದಾರೆ. ಸನಾಯಿ ಕೊರವರು, ಸಂಗೀತಕಾರರು, ಕೆಲವರು ಹಂದಿಸಾಕಾಣಿಗೆ ಮಾಡುತ್ತಾರೆ. ಅವರು ಸಾಮಾನ್ಯವಾಗಿ ಹಿಂದು ಸಂಸ್ಥಾನಗಳನ್ನು ಅನುಸರಿಸುತ್ತಾರೆ. (೩೬೯, ಕರ್ನಾಟಕ ರಾಜ್ಯ ಗ್ಯಾಸೆಟಿರ್) ಅವರ ಪ್ರಧಾನ ದೈವ ತಿರುಪತಿಯ ವೆಂಕಟರಮಣ, ದುರ್ಗಮ್ಮ, ಹುಲಿಗೆಮ್ಮ, ಮಾತಂಗಮ್ಮ, ಸತ್ಯಮ್ಮ, ಮದ್ದೂರಮ್ಮ, ಯಲ್ಲಮ್ಮ, ಸೊಲ್ಲಾಪುರದಮ್ಮ ಇತ್ಯಾದಿ ಅವರ ಮಹತ್ವದ ದೇವತೆಗಳು/ಮುನೇಶ್ವರ ಮುಂತಾದ ಪ್ರೇತಾತ್ಮಗಳ ಪೂಜೆ ಅವರಲ್ಲಿ ಸರ್ವೇಸಾಮಾನ್ಯ. ಧಾರ್ಮಿಕ ಸಮಾರಂಭಗಳ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರನ್ನು ಆಮಂತ್ರಿಸುವುದಿದೆ. ಆದರೆ ಹೆಚ್ಚಾಗಿ ಅವರ ಕಾಲದ ಹಿರಿಯರೆ ಪುರೋಹಿತರ ಕೆಲಸ ನಿರ್ವಹಿಸುತ್ತಾರೆ. ವಿನಹ ವಿಚ್ಛೇದನ ಹಾಗೂ ವಿಧವಾ ವಿವಾಹಗಳಿಗೆ ಅನುಮತಿಯಿದೆ ಮತ್ತು ಅವರು ಮೃತರನ್ನು ಹೂಳುತ್ತಾರೆ(೩೬೯). **ಅಂಬಲವಾಸಿ:** ದೇವಸ್ಥಾನದ ನಿರ್ವಹಣೆಯಲ್ಲಿ ತೊಡಗಿದರು. **ಚೆಟ್ಟಿ:** ವ್ಯಾಪಾರಿಗಳು, **ಗಾರುಡಿ:** ಭಿಕ್ಷುಕರು, ಹಾವಾಡಿಗರು, ಅಲೆಮಾರಿ, ಮೋಡಿಗಾರರು, **ಗೌರಿಗೆ:** ಬಿದಿರು ಕೆಲಸಗಾರರು, **ಘಾಡಿ:** ಕಣಿ ಹೇಳುವವರು, **ಗುರುವ:** ದೇವಾಲಯಗಳ ಸೇವಕರು, ಸಂಗೀತಗಾರರು, **ಕಣೀಸನ:** ಭವಿಷ್ಯ ಹೇಳುವವರು, ಕೊಡೆ ತಯಾರು ಮಾಡುವವರು **ಕಣಿಯಾರ್:** ಭವಿಷ್ಯ ಹೇಳುವವವರು, ಆಯುರ್ವೇದ ವೃತ್ತಿಯಲ್ಲಿರುವವರು. ಈ ಎಲ್ಲಾ ಸೇವೆ ಗಳು ಇಂದಿಗೂ ಕೊರವ ಸಮುದಾಯದವರು ಮಾಡುತ್ತಿರುವುದುಂಟು.

ಹೈದರಾಬಾದ್ ಕರ್ನಾಟಕದಲ್ಲಿ ಹರಿಯುವ ನದಿಗಳಲ್ಲಿ ತುಂಗಭದ್ರ ಮುಖ್ಯವಾದುದು. ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿರುವ ಇದು ಚಿಕ್ಕ ಮಗಳೂರು ಜಿಲ್ಲೆಯ ಪಶ್ಚಿಮ ಬೆಟ್ಟದ ಸಾಲಿನ ವರಹ ಪರ್ವತದಲ್ಲಿ ಉಗಮವಾಗುವ ಎರಡು ನದಿಗಳು ಶಿವಮೊಗ್ಗ ಜಿಲ್ಲೆಯ

ಕೂಡಲಿಯಲ್ಲಿ ಬಂದು ಸೇರುತ್ತವೆ. ಅವುಗಳಲ್ಲಿ ಒಂದು ತುಂಗಾ ಇನ್ನೊಂದು ಭದ್ರ ಎರಡೂ ಕಲೆತು ಮುಂದೆ ಸಾಗಿದಾಗ ತುಂಗಭದ್ರಾ ಎಂದು ಕರೆಯಲಾಗುತ್ತದೆ. ಏಕೆ ಈ ವಿಷಯವನ್ನು ಉಲ್ಲೇಖ ಮಾಡಲಾಯಿತು ಅಂದರೆ ವರಹ ಪರ್ವತ ಮುಖ್ಯವಾದುದು. ಈ ಪ್ರದೇಶದ ಕಾಡು ಹಾಗೂ ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡುಹಂದಿ, ಮುಳ್ಳುಹಂದಿ, ನರಿ, ಜಿಂಕೆ, ತೋಳ ಮೊದಲಾದ ಕಾಡುಪ್ರಾಣಿಗಳು ಹಾಗೂ ನವಿಲು ಕಾಗೆ, ಗೂಗೆ, ನೀರುಕೋಳಿ, ನೀರುಹಂದಿ, ಗುಬ್ಬಿ ಮುಂತಾದ ಪಕ್ಷಿಗಳು ಕಂಡುಬರುತ್ತವೆ. ತುಂಗಾಭದ್ರ ನದಿಯ ಪಕ್ಕದ ಬೆಟ್ಟಗಳಲ್ಲಿ ಈಚಲುಗರಿ ಸಾಕಷ್ಟು ದೊರೆಯುತ್ತಿತ್ತು. ಇಂದು ಬೆಟ್ಟಕ್ಕೆ ಬೆಂಕಿ ತಗಲಿ ಈಚಲು ಗರಿ ಬೆಳೆಯದಂತೆ ಆಗಿದೆ.

ಸಾಮಾಜಿಕ ವ್ಯವಸ್ಥೆ ಎಂದರೆ ಜಾತಿ ವ್ಯವಸ್ಥೆ ಎನ್ನುವಷ್ಟರಮಟ್ಟಿಗೆ ಬಂದಿದೆ. ವೇದ ಪುರಾಣಗಳ ಕಾಲದಿಂದಲೂ ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಯಲ್ಲಿ ಜೊತೆಗೆ ಈ ಯಾವ ಜಾತಿಗಳಿಗೂ ಸಾವಿರಧ ಇವೆಲ್ಲದರಿಂದ ಪ್ರತ್ಯೇಕವಾಗಿ ಗುಡ್ಡಗಾಡು, ಕೊಳ್ಳ, ಕಣಿವೆಗಳಲ್ಲಿ ಉಳಿದಿರುವ ಹಲವು ಬುಡಕಟ್ಟುಗಳು ಹೊರಬಂದು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯ, ಸಾಹಿತ್ಯ, ಸಂಗೀತ, ದೃಶ್ಯ, ಕಲೆ, ಕುಶಲಕಲೆ ಮೊದಲಾದ ಹಲವಾರು ಅಂಶಗಳಿಂದ ವಿಶಿಷ್ಟತೆಯನ್ನು ಪಡೆದಿವೆ. ಆದರೆ ಅಧ್ಯಯನ ಮಾಡುವಾಗ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟು ಹಿಂಡು ಸಮುದಾಯಗಳ ಸಂಸ್ಕೃತಿಯನ್ನು ಕಡೆಗಾಣಿಸಿರುವುದು ಕಂಡುಬರುತ್ತದೆ.

ವಿಶಿಷ್ಠವಾದ ಸಂಸ್ಕೃತಿಯನ್ನು ಹೊಂದಿರುವಂತಹ ಈ ಸಮುದಾಯಗಳ ಮೇಲೆ ನಾಗರಿಕ ಸಂಸ್ಕೃತಿ ಮತ್ತು ವಸಾಹತುಶಾಹಿಯ ದಟ್ಟಣದ ಕರಿನೆರಳು ಅವರ ಬದುಕಿಗೆ ಚರಿತ್ರೆಯಲ್ಲಿ ಮುಳುವಾಗುತ್ತಾ ಬಂದಿತ್ತು. ವಸಾಹತುಶಾಹಿ ಸಂದರ್ಭದಲ್ಲಿಯೂ ಅವರ ಜೀವನದ ಸ್ಥಿತಿ ತುಂಬಾ ಆತಂಕಕೊಳ್ಳಪಟ್ಟಿತು. ನಂತರದ ಆಧುನಿಕ ನಾಗರಿಕ ಜಗತ್ತು ಇನ್ನು ತೀವ್ರವಾಗಿ ಆತಂಕಕೊಳ್ಳಪಡಿಸಿದೆ. ವಸಾಹತುಶಾಹಿಯ ತನ್ನ ಕೊಳ್ಳಿಹೊಡೆಯುವ ಕ್ರಿಯೆಯಿಂದಾಗಿ ನಿಶ್ಚಿಂತೆಯಿಂದ ಸ್ವಚ್ಛಂದವಾಗಿ ಬದುಕುತ್ತಿದ್ದ ಸಮುದಾಯಗಳ ಜನರನ್ನು ತೀವ್ರವಾದ ಶೋಷಣೆಗೊಳಪಡಿಸಿತು.

ಕಾಡಿನಿಂದ ಬರುತ್ತಿದ್ದ ಉತ್ಪನ್ನಗಳಿಂದ ಬದುಕುತ್ತಿದ್ದರು. ಅವರ ಕಾಡು ಪ್ರದೇಶಗಳನ್ನು ನಿರ್ಬಂಧಿಸುವುದರ ಮೂಲಕ ಹಾಗೂ ಕಾಡಿನಿಂದ ಒಕ್ಕಲೆಬ್ಬಿಸುವ ಮುಖಾಂತರ ಅವರನ್ನು ಅತಂತ್ರರನ್ನಾಗಿಸಿತು. ಅವರು ಬದುಕಿಗಾಗಿ ಹಪಹಪಿಸುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿತು. ಕಾಡಿನ ನಡುವೆ ಆಸಕ್ತಿಯಿಂದ ಸ್ವಚ್ಛಂದವಾಗಿ ಬದುಕುತ್ತಿದ್ದ ಇವರ ಅಸ್ತಿತ್ವಕ್ಕೆ ವಸಾಹತುಶಾಹಿ ಪ್ರಾರಂಭವಾದಾಗಿನಿಂದ ಇಂದಿನವರೆಗೂ ಸಂಚಾಕಾರ ಬಂದಿದೆ. ಕಾಡನ್ನೆ ನಂಬಿ, ಸಮೃದ್ಧಿ, ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಂಡು ಅಲೆಮಾರಿಗಳಾಗಿ ಬದುಕುತ್ತಿದ್ದ ಕೊರವರು ನಿರ್ಗತಿಕ ಸ್ಥಿತಿಯಲ್ಲಿವೆ.

ಪ್ರಗತಿ ಅಥವಾ ಅಭಿವೃದ್ಧಿ ಎಂಬುದು ಬೇಡವಲ್ಲ. ಆದರೆ ಕಾಡನ್ನೆ ನಂಬಿ, ಅಲ್ಲಿನ ಸಂಸ್ಕೃತಿಗೆ ಹೊಂದಿಕೊಂಡು, ಕಾಡಿನ ಸಂಪನ್ಮೂಲಗಳನ್ನು ನಂಬಿ ಬದುಕುತ್ತಿದ್ದ ಕೊರವ ಸಮುದಾಯ ಇಂದು ಉದರ ಪೋಷಣೆಗಾಗಿ ಅನಿವಾರ್ಯವಾಗಿ ನಾಗರಿಕ ಸಂಪರ್ಕದಲ್ಲಿ ಬದುಕಬೇಕಾಗಿದೆ. ನಾಗರಿಕ ಸಂಪರ್ಕದ ಹೊಡೆತದಿಂದ ಕುಟುಂಬಗಳು ತತ್ತರಿಸುತ್ತಿದೆ. ಕುಲ, ಬಳಿ, ಸಂಪ್ರದಾಯಗಳ ಬಗ್ಗೆ ಅಚಲವಾದ ವಿಶ್ವಾಸವಿಟ್ಟಿದ್ದ ಸಮುದಾಯಗಳ ಕೆಲವರು ಔಪಚಾರಿಕ ಶಿಕ್ಷಣದ ಅರೆಪ್ರಜ್ಞೆಯಿಂದ, ನೌಕರಿ ಆಸೆ, ಆಮಿಷಗಳಿಗೆ ಬಲಿಯಾಗಿ ತಮ್ಮ ಸಂಪ್ರದಾಯಿಕ ಬದುಕಿಗೆ ತಿಲಾಂಜಲಿಯನ್ನು ಕೊಡುತ್ತಿದ್ದಾರೆ. ಇಂತಹ ಜನರು ತಮ್ಮ ಮೂಲಕ ಸಂಸ್ಕೃತಿಯನ್ನು ಬಿಟ್ಟು ತಮ್ಮದಲ್ಲಿದ್ದ ಬೇರೆಯವರ ಸಂಸ್ಕೃತಿಯಿಂದ ಬಂದ ಕೆಲವರು ಒಂದು ಸ್ಥಾನವನ್ನು ಪಡೆದ ತಕ್ಷಣ ಸತ್ಯನಾರಾಯಣ ಪೂಜೆ ಇನ್ನು ಮೊದಲಾದ ಆಚರಣೆಗಳ ಮೂಲಕ ತೊಡಗಿಕೊಳ್ಳಲಾಗುತ್ತದೆ. ಇಂತಹವುಗಳಿಂದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವುದಾದರೂ ಹೇಗೆ ಎಂಬ ಪ್ರಶ್ನೆ ನಮ್ಮ ಕಣ್ಮುಂದೆ ಇದೆ.

ಬ್ರಿಟಿಷರ ಆಗಮನದಿಂದ ಸಾಮಾಜಿಕ ಅನಿಷ್ಟಗಳು ಹೋಗಲಾಡಿಸಲು ಕಾನೂನು ಕಾಯ್ದೆಗಳು ಜಾರಿಗೆ ಬಂಧವು. ಕೈಗಾರಿಕೀರಣ ಮತ್ತು ಆಧುನಿಕ ಶಿಕ್ಷಣದಿಂದ ಶ್ರೈಣೀಕೃತ ಜಾತಿವ್ಯವಸ್ಥೆ ಮತ್ತು ವೃತ್ತಿ ರಚನೆಗಳ ನಡುವಿನ ಅಪಸರಣ ಕ್ಷಿಣಿಸಿ ಜಾತ್ಯಾತೀತ ಕಸುಬುಗಳ ಹುಟ್ಟಿಗೆ ಕಾರಣವಾಯಿತು. ಮುಂದೆ ಅದು ಮಾನವ ಸಮುದಾಯಕ್ಕೆ ಹೊಸ ಬಗೆಯ ಜ್ಞಾನ ಮತ್ತು ಕೌಶಲ್ಯಗಳನ್ನು ದೊರಕಿಸಿಕೊಡಲು ಸಹಾಯಕವಾಯಿತು. ಔದ್ಯೋಗಿಕ ಶೋಧಗಳು ಸಮಾಜದ ಕೆಳಗಿನ ಸ್ತನದ ಜನರು ಸುಲಭವಾಗಿ ನಿರ್ವಹಿಸಲು ಸಾಧ್ಯವಾಗುವ ಉದ್ಯೋಗವಕಾಶಗಳನ್ನು ಕಲ್ಪಿಸಿದವು. ಜೊತೆ ಜೊತೆಯಲ್ಲಿ ಹೊಸ ಸ್ಥಾನಮಾನಗಳನ್ನು ಸೃಷ್ಟಿಸಿದವು. ಕಸುಬಿಗೆ ಹೋಗಲು ಅನುವು ಮಾಡಿಕೊಟ್ಟವು. ಸಾಮಾಜಿಕ ಚಲನೆ ಜಾತಿ ವರ್ತುಲದಿಂದಾಚೆಗೆ ಬರುವಂತೆ ಆಗಿದ್ದು ಎಂದು ಹೇಳುತ್ತಾರೆ.

ಇದುವರೆಗೆ ನಡೆದಿರುವ ಅಧ್ಯಯನಗಳು

ಯಾವುದೇ ಒಂದು ವಿಷಯದ ಬಗೆಗೆ ಅಧ್ಯಯನವನ್ನು ಕೈಗೊಳ್ಳುವ ಮೊದಲು ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಸಂತಸೆ ಇದುವರೆಗೂ ನಡೆದ ಅಧ್ಯಯನಗಳನ್ನು ಗಮನಿಸುವುದು ಅಗತ್ಯ. ನಾಡಿನಾದ್ಯಂತ ನೆಲೆಸಿರುವ ಕೊರವ ಸಮುದಾಯವು ಕಾಡಿನ ಉತ್ಪನ್ನಗಳಿಂದ ತಮ್ಮ ಬದುಕನ್ನು ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ. ದಕ್ಷಿಣಭಾರತದಲ್ಲಿ ವ್ಯಾಪಕವಾಗಿ ನೆಲೆಸಿರುವ ಕೊರವ ಸಮುದಾಯವು ಆಯಾಪ್ರದೇಶಗಲ್ಲಲಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಭಾರತದಲ್ಲಿರುವ ಸಮುದಾಯಗಳನ್ನು ಕುರಿತು ಮೊದಲು ಅಧ್ಯಯನವನ್ನು ಪ್ರಾರಂಭಿಸಿದವರು

ಪಾಶ್ಚಿಮಾತ್ಯರು ಎಂಬುದು ತಿಳಿದುಬರುತ್ತದೆ. ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ಪ್ರಾರಂಭಿಸಿದ ಸಮುದಾಯಗಳ ಅಧ್ಯಯನವು ಕಾಲಕ್ರಮೇಣ ಅವರು ಶೈಕ್ಷಣಿಕ ಕುತೂಹಲವನ್ನು ತಿಳಿದುಕೊಳ್ಳಲು ಇದು ಒಂದು ಅಧ್ಯಯನ ಶಿಸ್ತಾಗಿ ರೂಪಿತವಾಯಿತು.

ಭಾರತದ ಆರಂಭದ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಅಮೇರಿಕಾದ ವಿವಿಧ ವಿಶ್ವವಿದ್ಯಾಲಯಗಳಿಂದ ತರಬೇತಿ ಪಡೆದು ಬಂದವರೇ ಆಗಿದ್ದಾರೆ. ಜಿ.ಎಸ್.ಘುರ್ಯೆ, ಇರಾವತಿ ಕರ್ವೆ, ಬಿ.ಎಸ್.ಗುಹಾ, ಡಿ.ಎನ್.ಮಂಜುಂದಾರ್, ಎಸ್.ಸಿ.ರಾಮ್, ಎಸ್.ಸಿ.ದುಬೆ, ಎಂ.ಎನ್.ಶ್ರೀನಿವಾಸನ್ ಸಮಾಜವಿಜ್ಞಾನಿಗಳು ಅಮೇರಿಕಾದ ಶೈಕ್ಷಣಿಕ ಸಂದರ್ಭ ನಿಯೋಗಿಗಳೇ ಆಗಿದ್ದಾರೆ. ವಸಾಹತೋತ್ತರ ಕಾಲಘಟ್ಟದಲ್ಲಿ ಹೆಚ್ಚಾಗಿ ಗ್ರಾಮ, ಕುಟುಂಬ ಜಾತಿಸಮುದಾಯ, ಬುಡಕಟ್ಟು ಕುರಿತು ಹೆಚ್ಚಾಗಿ ಅಧ್ಯಯನ ನಡೆದವು. ಬುಡಕಟ್ಟುಗಳು ಆಗಲೇ ಮುಖ್ಯವಾಹಿನಿಗೆ ಬಂದಿರುವುದರಿಂದ ಅವು ಜಾತಿಗಳಾಗಿ ರೂಪಾಂತರಗೊಂಡಿವೆ ಎಂದು ಗ್ರಹಿಸಲಾಗಿ ಗ್ರಾಮಗಳನ್ನು ಅಧ್ಯಯನ ಮಾಡಲು ಅಂದಿನ ಮಾನವಶಾಸ್ತ್ರಜ್ಞರು ತೊಡಗಿದರು.

ಎಲ್.ಕೆ.ಅನಂತಕೃಷ್ಣ ಅಯ್ಯರ್ "Mysore Tribes And Castes" ಎಂಬ ನಾಲ್ಕು ಸಂಪುಟಗಳು ೧೯೩೨ ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟು ಸಮುದಾಯಗಳ ಕುರಿತ ಅತ್ಯಂತ ಪ್ರಾಚೀನ ಮಾನವಶಾಸ್ತ್ರೀಯ ಮಾಹಿತಿಗಲು. ಇಂದಿಗೂ ಇಬ್ಬರು ವಿದ್ವಾಂಸರು ಮುಂದಿನ ಸಂಶೋಧಕರಿಗೆ ಮಹತ್ವದ ಪ್ರಾಚೀನ ಆಕರಗಳು ಎನ್ನಬೇಕಾಗುತ್ತದೆ.

"Encyclopaedia of Indian tribes and castes" S.M.Channa Vol-12. ಕೊರಮ ಕೊರಚರ ಕುರಿತು ಸಂಕ್ಷಿಪ್ತವಾದ ಮಾಹಿತಿಯನ್ನು ನೀಡಲಾಗಿದೆ. ಕೊರವರ ಭಾಷೆ ತಮಿಳು, ತೆಲುಗು ಮತ್ತು ಕನ್ನಡ ಮಿಶ್ರಣವಾದ ಭಾಷೆಯಾಗಿದೆ. ಪದಗಳು different languages ಇರುವುದುಂಟು. ಸಂಪ್ರದಾಯಿಕವಾದ ಬುಡಕಟ್ಟು ಎಂಬುದನ್ನು Encyclopaedia of Indian tribes and castes 23(1999) Vol ನಲ್ಲಿ ಆಂಧ್ರ ಪ್ರದೇಶದಲ್ಲಿಯ ಕೊರವರನ್ನು ಯರುಕುಲ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಆಯಾ ಪ್ರದೇಶಿಕವಾದ ಭಾಷೆಯನ್ನು ಒಳಗೊಂಡಿದ್ದರೂ ಅವರು ತಮ್ಮ ರಾಜ್ಯಭಾಷೆಯನ್ನು ಮಾತನಾಡುತ್ತಾರೆ. ತಮಿಳುನಾಡಿನಲ್ಲಿ ತಮಿಳು, ಆಂಧ್ರದಲ್ಲಿ ತೆಲುಗು, ಕರ್ನಾಟಕದಲ್ಲಿ ಕನ್ನಡ ಮಾತನಾಡಿದರೂ ತಮ್ಮ ತುಳುವ ಭಾಷೆಯನ್ನು ಮಾತನಾಡುತ್ತಾರೆ. ಈ ಸಮುದಾಯವನ್ನು ತುಳುವ ಭಾಷೆಯಿಂದ ಕಂಡು ಹಿಡಿಯಬಹುದು. ಭಾಷೆ ಸಂಶೋಧನೆಗೆ ಅನುಕೂಲವಾಗುತ್ತದೆ.

Encyclopaedic profile of Indian tribes. Editors Sachchidananda R.R. Prasad, (1998) Vol.2 ರಲ್ಲಿ ಈ ಗ್ರಂಥದಲ್ಲಿ Kochu Velon ಎಂಬ ಲೇಖನದಲ್ಲಿ ಜಕ್ಕ ಪಾರ್ಥಸಾರಥಿ ಅವರು Kochu velan are original inhabitants or the Kerala State but a few of them

ಭಾರತದಲ್ಲಿ ಮೊದಲ ಬಾರಿಗೆ ಅಲೆಮಾರಿಗಳನ್ನು ಮಾನವಶಾಸ್ತ್ರಿಯ ಅಧ್ಯಯನ ವಿಧಾನದ ಮೂಲಕ ಅಧ್ಯಯನಕೊಳ್ಳಪಡಿಸಿದವರು. ಪಿ.ಕೆ.ಮಿಶ್ರಾ ಅವರು ಅವರ "Nomads in the Mysore city" ಪುಸ್ತಕವನ್ನು Authropalogical Survey of India ವು ರಲ್ಲಿ ಪ್ರಕಟಿಸಿತು.

ವಸಾಹತೋತ್ತರ ಕಾಲಘಟ್ಟದ ಮಾನವಶಾಸ್ತ್ರದ ಅಧ್ಯಯನಗಳು ಹೆಚ್ಚಾಗಿ ಬುಡಕಟ್ಟುಗಳನ್ನು ಒಳಗೊಂಡಂತೆ ಗ್ರಾಮ, ಕುಟುಂಬ, ಜಾತಿ ಸಮುದಾಯಗಳ ಕುರಿತು ಹೆಚ್ಚಾಗಿ ಅಧ್ಯಯನಗಳು ನಡೆದವು. ಬುಡಕಟ್ಟುಗಳು ಆಗಲೇ ಮುಖ್ಯವಾಹಿನಿಗೆ ಬಂದಿರುವುದರಿಂದ ಅವು ಜಾತಿಗಳಾಗಿ ರೂಪಂತರಗೊಂಡಿವೆ ಎಂದು ಗ್ರಹಿಸಲಾಗಿದೆ. ಗ್ರಾಮಗಳನ್ನು ಅಧ್ಯಯನ ಮಾಡಲು ಅಂದಿನ ಮಾನವ ಶಾಸ್ತ್ರಜ್ಞರು ತೊಡಗಿದರು(ಕರ್ನಾಟಕದ ಡೊಂಬರು, ಪು.೩೯, ಎ.ಎಸ್.ಪ್ರಭಾಕರ್).

೧೯೭೨ರಲ್ಲಿ ಸಾಹಿತ್ಯ ಅಕಾಡೆಮಿ ಉಪಸಂಸ್ಕೃತಿ ಮಾಲೆಯಲ್ಲಿ ಸುಮಾರು ೪೨ ಕರ್ನಾಟಕದ ಜನಸಮುದಾಯಗಳ ಕುರಿತು ಪುಸ್ತಕಗಳನ್ನು ಪ್ರಕಟಿಸಿತು.

೧೯೮೮ರಲ್ಲಿ ಜಾನಪದದ ಯಕ್ಷಗಾನ ಅಕಾಡೆಮಿಯಲ್ಲಿ "ಕರ್ನಾಟಕದ ಬುಡಕಟ್ಟುಗಳು" ಎಂಬ ಶೀರ್ಷಿಕೆಯಲ್ಲಿ ಎನ್‌ಸ್ಲೈ ಪಿಡಿಯದ ಮಾದರಿಯಲ್ಲಿ ಎರಡು ಸಂಪುಟಗಳನ್ನು ಪ್ರಕಟಿಸಿದರು. ಗಿರಿಜನ ಸಿರಿ ಎಂಬ ಡಾ.ಪಿ.ಕೆ.ಖಂಡೋಬಾ ಅಭಿನಂದನ ಸಂಪುಟದಲ್ಲಿ ಕರ್ನಾಟಕದಲ್ಲಿ ಪ್ರಧಾನವಾಗಿ ಕಂಡುಬರುವ ಬುಡಕಟ್ಟುಗಳ ಪಟ್ಟಿಯಲ್ಲಿ ಹಕ್ಕಿ ಪಿಕ್ಕಿ, ಗೊಂಡರು, ಸಿದ್ದಿಯರ ಹೆಸರಿನಲ್ಲಿ ಕೊರಮ ಉಲ್ಲೇಖಿಸಿರುವುದು ಕಂಡುಬರುತ್ತದೆ(ಪು.೧೯೧).

ದಿವಂಗತ ಎ.ಎ.ಡಿ. ಲೂಯಿಜಾ ಅವರ "Tribes of Mysore" ಎಂಬ ತಮ್ಮ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ನೀಡಿರುವ ವಿಚಾರಗಳು, ವಿವರಗಳನ್ನು ತಿಳಿಸಲಾಗಿದೆ.

ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನದಲ್ಲಿ ಅರ್ಜುನ ಗೊಳಸಂಗಿ ಅವರ ಕೃತಿಯಲ್ಲಿ ಕೊರಮರ ಬಗೆಗೆ ನೀಡಿರುವ ಮಾಹಿತಿ ಇದೆ(ಪು.೧೯೭, ೨೦೦೦).

೧೯೯೧ರಲ್ಲಿ ಈರಣ್ಣ ಕೋಸಂಗಿ ಅವರು "ಕೊರವರು" ರಾಯಚೂರಿನ ಕೊರವ ಪಂಗಡದ ಮೂಲ, ವೃತ್ತಿ, ಸಾಮಾಜಿಕ, ಧಾರ್ಮಿಕ ವಿಧಿ ವಿಧಾನಗಳು ಇವುಗಳ ಸ್ಥೂಲ ವಿವರಣೆಯನ್ನು ನೀಡಿದ್ದಾರೆ.

ಗಿರಿಜನ ಸಿರಿ ಕೃತಿಯಲ್ಲಿ ಡಾ.ಸಿ.ಕೆ.ಖಂಡೋಬಾ ಅಭಿನಂದನ ಸಂಪುಟದಲ್ಲಿ ಕರ್ನಾಟಕದಲ್ಲಿ ಪ್ರಧಾನವಾಗಿ ಕಂಡುಬರುವ ಬುಡಕಟ್ಟುಗಳ ಪಟ್ಟಿಯಲ್ಲಿ ಹಕ್ಕಿ ಪಿಕ್ಕಿ, ಗೊಂಡರು, ಸಿದ್ದಿಯರು ಹೆಸರಿನಲ್ಲಿ ಕೊರಮ ಪಟಿಯನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ(ಪು.೧೯೧).

ದಿವಂಗತ ಎ.ಎ.ಡಿ. ಲೂಯಿಚಾರವರು "Tribes of Mysore" ಎಂಬ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ನೀಡಿರುವ ವಿಚಾರಗಳು ವಿವರಗಳು ಈ ಪಟ್ಟಿಯಿಂದ ಕೊಂಚ ಭಿನ್ನವಾಗಿದೆ. ಅವರ ಪ್ರಕಾರ ಆದಿಮನ್ಸ್, ಬಂಜಾರರು, ಬಿಟ್ಟ್ ಕುರುಬರು, ಬಲ್ಲರು, ಚೆಂಚು, ಡಂಕರು, ಗೌಡಾಳು, ಹಕ್ಕಿ ಪಿಕ್ಕಿ, ಹಸಿಲರು ಇರುಳಿಗ, ಜೇನುಕುರುಬ, ಕಾಡುಗೊಲ್ಲ, ಕಾಡು ಕುರುಬ, ಕುರುಬ, ಮಲೆರು, ಮರಾಠಿ ಕಪಾಲರು, ಕಿಳ್ಳೆಕ್ಯಾತರು, ಕೊಂಗರು, ಕೊರವರು, ಕುಡಿಯ, ಮೊದರು, ಮುಳ್ಳು ಕುರುಬ, ಪಾನಿಮನ್, ಪಾಯೋ, ಎರವ ಬುಡಕಟ್ಟುಗಳ ವ್ಯಾಪ್ತಿಯಲ್ಲಿ ಬರುವಂತಹವು ಎಂದು ಗುರುತಿಸಿದ್ದಾರೆ.

ಜಿ.ಶಂ.ಪ.ರವರು "ಕರ್ನಾಟಕ ಜಾನಪದ" ಕೃತಿಯಲ್ಲಿ ಇನ್ನು ಅಲೆಮಾರಿ ಬುಡಕಟ್ಟುಗಳ ಬಗ್ಗೆ ಪ್ರಸ್ತಾಪಿಸುವಾಗ ಇಲ್ಲಿಯವರೆಗೂ ನಡೆದಿರುವ ಬಹುಸೂಕ್ಷ್ಮವಾದ ಅಧ್ಯಯನವು ಕಿಳ್ಳೆ ಕ್ಯಾತರು, ಹಕ್ಕಿಪಿಕ್ಕಿಯವರು, ಬುಡಬುಡುಕಿಯವರು, ದೊಂಬದಾಸರು, ಕಿನ್ನರಿ ಜೋಗಿಗಳು, ಕೊರವಂಜಿಯವರು ಇತ್ಯಾದಿಗಳನ್ನು ಹೆಸರಿಸಬಹುದು ಎಂದಿದ್ದಾರೆ. ಮಾನವನ ಸಂಸ್ಕೃತಿ ಅಧ್ಯಯನವು ಮಾನವಶಾಸ್ತ್ರದ ಶಾಖೆಯಾದ ಮಾನವಕುಲ ಶಾಸ್ತ್ರೀಯ ಅಧ್ಯಯನ ವಿಭಾಗಕ್ಕೆ ಸೇರ್ಪಡೆಯಾಗಿದ್ದರೂ ಜಾನಪದದ ಪ್ರದೇಶದಿಂದ ಮಾನವ ಸಂಸ್ಕೃತಿ ಅಧ್ಯಯನವು ಒಂದು ಪೂರ್ಣ ಪ್ರಮಾಣದ ಅಧ್ಯಯನದ ಸ್ಥಿತಿಯನ್ನು ತಲುಪಲು ಸಾಧ್ಯವಾಗಿ ಯಾವುದೇ ಜನಾಂಗಗಳ ಸಂಸ್ಕೃತಿಯ ಅಧ್ಯಯನವು ಜಾನಪದದ ಅಧ್ಯಯನದಿಂದಲೇ ಪರಿಸಮಾಪ್ತಿಗೊಳ್ಳಬೇಕು ಎಂಬ ನಿಲುವು.

ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಲ್ಲಿ 'ಕೊರಮ' ಎಂಬ ಗ್ರಂಥವನ್ನು ಮಲ್ಲಿಕಾರ್ಜುನ ಬಿ.ಮಾನ್ಪಡೆ ಅವರು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮ರಲ್ಲಿ ಹೊರತಂದಿದ್ದಾರೆ.

ಬಿ.ಪಿ.ರಾಮಯ್ಯನವರು ದಕ್ಷಿಣ ಕರ್ನಾಟಕದ ಕೊರಮರ ಒಂದು ಸಾಂಸ್ಕೃತಿಕ ಅಧ್ಯಯನವನ್ನು ೨೦೦೭ರಲ್ಲಿ ಹೊರತಂದಿದ್ದಾರೆ. ಸಮುದಾಯಕ್ಕೆ ಆಕಾರ ಗ್ರಂಥವಾಗಿದೆ.

ಕುರುಮಯ್ಯ ಮತ್ತು ಅಂಕುಸದೊಡ್ಡಿ ಎಂಬ ಕಾದಂಬರಿ ಜಂಬಣ್ಣ ಅಮರಚಿಂತ ಅವರು ೧೯೯೪ರಲ್ಲಿ ಕೊರವ ಸಮುದಾಯದ ವ್ಯಾಪಾರ, ಬಂಡವಾಳಶಾಹಿ ಅಧಿಕಾರಿಗಳ ದರ್ಪ ಮತ್ತು ಮಹಿಳೆಯ ಶೋಷಣೆಯನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಮೋಹನ್ ಎಚ್., ಸೀತನೂರ ಅವರು ಲಘುಶೋಧ ಪ್ರಬಂಧ 'ಕುಶಲ ಕಲೆ ಹಾಗೂ ಕುಶಲ ಕರ್ಮಿಗಳು' ಎಂಬ ಪ್ರಬಂಧವನ್ನು ಕುಶಲ ಕಲೆಯ ಬಗೆಗೆ ತಿಳಿಸಿದ್ದಾರೆ.

ಕೆ.ವಿ.ಜಯಪ್ಪ ಅವರು ಕೊರಚ ಭಾಷೆ ವರ್ಣನಾತ್ಮಕ ತೌಲನಿಕ ಅಧ್ಯಯನದಲ್ಲಿ ಒಂದು ಸಮುದಾಯದ ಭಾಷೆಯ ವಿಸ್ತಾರವಾದ ಮಾಹಿತಿಯನ್ನು ನೀಡಿರುವುದು ಪ್ರಮುಖವಾಗುತ್ತದೆ.

ಕೊರವ ಕೊರಚ ಭಾಷೆಗಳು ಒಂದೇಯಾಗಿದೆ ಎಂಬುದು ತಿಳಿಯಬೇಕು. ಯರಕುಲ, ಕೊರಚ, ಕನ್ನಡ, ಕೊರವ ಭಾಷೆಗಿರುವ ವ್ಯತ್ಯಾಸವನ್ನು ತಿಳಿಸಲು ಪ್ರಯತ್ನಿಸುತ್ತಾರೆ(೨೦೦೮, ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ.)

ಹಾಸನ ಜಿಲ್ಲೆಯ ಕೊರಮರು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧವನ್ನು ಎ.ವಿ.ರವಿ ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ ಪ್ರಬಂಧ, ೨೦೦೦ ರಲ್ಲಿ ನೀಡಿದ್ದಾರೆ. ಆಚರಣೆ ಮತ್ತು ಕಲೆ, ಭಾಷೆ ಸಾಹಿತ್ಯ ಕ್ರೀಡೆಗಳು ಸಾಮಾಜಿಕ ಪರಿವರ್ತನೆಯನ್ನು ತಿಳಿಸಲಾಗಿದೆ.

ಕರ್ನಾಟಕದ ಕೊರವರು ಒಂದು ಜಾನಪದೀಯ ಅಧ್ಯಯನ, ಈರಣ್ಣ ನಾರಾಯಣ ಅವರು ಡಿ.ಬಿ.ನಾಯಕ ಅವರ ಮಾರ್ಗದರ್ಶನದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ೨೦೦೨ರಲ್ಲಿ ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ.

ಒಂದು ನಿಶ್ಚಿತ ಜನಸಮುದಾಯದ ಲೌಕಿಕದ ಬದುಕನ್ನು ಆಧರಿಸಿಯೇ ಆ ಸಮುದಾಯದ ಭಾಷೆ, ಸಾಹಿತ್ಯ ಸಂಸ್ಕೃತಿಗಳು ಸಂಚಯಗೊಳ್ಳುತ್ತವೆ. ಸಮುದಾಯಗಳ ಅಧ್ಯಯನಗಳು ಪ್ರಾರಂಭವಾದ ಮೇಲೆ ಭಾಷೆಗಳ ಮಾಹಿತಿಯು ದೊರೆಯಿತು. ಇಂದು ಭಾಷೆಯು ಹಂತ ಹಂತವಾಗಿ ಕಳೆದುಕೊಳ್ಳುವ ಪರಿಸ್ಥಿತಿ ಏರ್ಪಾಡಾಗಿದೆ. ವಸಾಹತುಶಾಹಿ ಆಡಳಿತಕ್ಕೆ ಭಾರತದ ವಿವಿಧ ಭಾಷೆಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದ್ದು, ಅದರಿಂದಾಗಿ ಭಾರತದ ಸಮಾಜದ ರಚನೆಯನ್ನು ಅರ್ಥಮಾಡಿಕೊಳ್ಳುವುದು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು. ಏಕೆಂದರೆ ತಮ್ಮ ಆಡಳಿತವನ್ನು ಕಾಡುಗಳ ಹತೋಟಿಯಿಂದ ಕಾಡಿನ ಸಂಪತ್ತು ವಿದೇಶಗಳಿಗೆ ಒಯ್ಯುವುದು. ಈ ಕಾರಣದಿಂದಾಗಿ ೧೭೬೦ರ ನಂತರವೇ ಹೆಚ್ಚು ಅಧ್ಯಯನ ನಡೆದವು ಎಂಬುದು ತಿಳಿದುಬರುತ್ತದೆ. ಅಧಿಕಾರಿಗಳು ಭಾರತ ಸ್ಥಳೀಯ ಕಾನೂನುಗಳಿಗೆ ಸಂಬಂಧಿಸಿದ ಹಳ್ಳಿಗಳ ಅಧ್ಯಯನವನ್ನು ಮಾಡಲು ಪ್ರಾರಂಭಿಸಿದರು ಎಂಬುದು ತಿಳಿದುಬರುತ್ತದೆ.

ಭಾರತದಲ್ಲಿ ೧೭೭೪ರಲ್ಲಿ ವಿಲಿಯಂ ಜೋನ್ಸರ ನಾಯಕತ್ವದಲ್ಲಿ ಪ್ರಾರಂಭವಾದ Asiatic Society of Bengal ಎಂಬ ಸಂಸ್ಥೆಯ ಜೊತೆ ಜೊತೆಯಲ್ಲಿ ಭಾರತದಲ್ಲಿ ಕಂಪನಿ ಆಡಳಿತ ಸಂದರ್ಭದಲ್ಲಿ ನಡೆದ ಸಾಮಾಜಿಕ ಅಧ್ಯಯನಗಳು ಹೆಚ್ಚಿನ ಪಾಲು ಬುಡಕಟ್ಟುಗಳ ಅಧ್ಯಯನಕ್ಕಾಗಿಯೇ ಮೀಸಲಾಗಿದೆ ಎಂಬುದು ತಿಳಿದುಬರುತ್ತದೆ. ದಕ್ಷಿಣ ಭಾರತದ ಅಧ್ಯಯನ ಕೈಗೊಂಡವರು ಥರ್ಸ್ಟನರು ಪ್ರಮುಖರು.

ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ ಸಂ.೨ರಲ್ಲಿ ಈ ಗ್ರಂಥದಲ್ಲಿ ನಾರದ ಕೊರವಂಜಿ, ನುಲಿಯಚಂದಯ್ಯನ ವಾರ್ಧಿಕ ಹಾಡು, ಪಾರ್ವತಿ, ಕೊರವಂಜಿ ದ್ವಿಪದಿ(ಯಕ್ಷಗಾನ), ಕುರುವನೂರು ಬಗೆಗೆ ಮಾಹಿತಿಯನ್ನು ನೀಡುತ್ತಾರೆ.

ಕೊರವರು ಈರಣ್ಣ ಎನ್.ಕೋಸಗಿ(೧೯೯೧) ಅವರು ಈ ಗ್ರಂಥದಲ್ಲಿ ಕೊರವರು ಆಯಾಗಾರರಾಗಿ ಕೆಲಸ ಮಾಡುತ್ತಿದ್ದರು ಎಂಬುದನ್ನು ತಿಳಿಸುತ್ತಾರೆ. ಸಾಮಾನ್ಯವಾಗಿ ಆಯಾಗಾರಿಕೆ ಯನ್ನು ಅವಲಂಬಿಸಿ ಬದುಕುತ್ತಿರುವ ಕೊರವ ಸಮುದಾಯದ ಜನರು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆಯನ್ನು ಒಳಗೊಂಡಿದ್ದರು. ಇವರ ಮೂಲ, ವೃತ್ತಿ ಸಾಮಾಜಿಕ ಸಂಬಂಧ, ಧಾರ್ಮಿಕ ವಿಧಿ-ವಿಧಾನಗಳು ಇವುಗಳನ್ನು ತಿಳಿಸಿ ಹೇಳಿದ್ದಾರೆ.

ಕರ್ನಾಟಕದ ಜನಪದ ಆಚರಣೆಗಳು, ಡಾ.ಸಂ.ಚಿ.ರಮೇಶ್ ಅವರು ಗ್ರಂಥದಲ್ಲಿ ಈಳಿಚಲು ಸೇವೆ, ಕಾವಡಿ ಓಕುಳೀಯ ಬಗೆಗೆ ಮಾಹಿತಿ ತಿಳಿದುಬರುತ್ತದೆ. ಜೀವನಾವರ್ತನ ೨ ವಾರ್ಷಿಕ ವರ್ತನದ ಆಚರಣೆಗಳು ಒಂದು ರಚನೆಯನ್ನು ನೀಡುತ್ತದೆ. ಪ್ರಕೃತಿಯ, ನೀರಿನ, ಅಗ್ನಿಯ, ಅಹಾರದ ಹಲವು ಬಗೆಗೆ ನಂಬಿಕೆಗಳನ್ನು ತಿಳಿಸಿ ಹೇಳುತ್ತದೆ. ಮನುಷ್ಯನ ಅತಿಆಸೆಯಿಂದಾಗಿ ಆಹಂಬುದ್ಧಿಗಳು ಎಲ್ಲವು ಲಾಭದಾಯಕವಾಗಿಯೇ ನೋಡಲಾಗುತ್ತದೆ. ದುಬಾರಿ ಜೀವನಕ್ರಮದಿಂದ ಪರಿಸರ ನಾಶ, ಬದುಕಿನ ಕ್ರಮದಲ್ಲಿನ ಬದಲಾವಣೆಯಿಂದ, ಜೀವಹಾನಿ, ಮೌಲ್ಯವಿಲ್ಲದ ಜೀವನಸಂಬಂಧಗಳು, ಪರಿಹರಿಸಲಾರದ ಸಮಸ್ಯೆಗಳು ಬರದಂತೆ ಇತ್ಯಾದಿಗಳು ದಿನದಿನೇ ಹೆಚ್ಚುತ್ತಿವೆ. ಪ್ರದೇಶ ಕಾಲ ಹಾಗೂ ಋತುಮಾನಗಳಲ್ಲಿ ಆಚರಣೆಗೊಳ್ಳುವ ಆಚರಣೆಗಳು ಉದ್ದೇಶ ಫಲಪ್ರದವಾಗಿರುತ್ತದೆ. ಹಾಲಿನ ಗಡಿಗೆಗಳನ್ನು ಪೂಜಿಸಿ, ಓಕುಳಿ ಆಡುವುದೇ ಕಾವಡಿ ಓಕುಳಿ ಎಂದು ಕರೆಯುತ್ತಾರೆ(ಕೊಪ್ಪಳ, ಫೆಬ್ರವರಿ).

Encyclopaedic profile of Indian Tribes(1998) Sachchidananda vol-I ಈ ಗ್ರಂಥದಲ್ಲಿ ಪರಿಶಿಷ್ಟ ಪಂಗಡ ಸಮುದಾಯಗಳ ಕುರಿತು ಮಾಹಿತಿ ಇದೆ. ಭಾರತದಲ್ಲಿರುವ ಹಲವಾರು ಬುಡಕಟ್ಟು ಸಮುದಾಯಗಳ ಪರಿಚಯವಿದೆ. ೧೯೮೧ Cenrur ಆಧಾರವಾಗಿ ೭೯ ಸಮುದಾಯಗಳ ಕುರಿತು ಚರ್ಚಿಸಲಾಗಿದೆ. ಅದರಲ್ಲಿ A.A.D. huiz ಅವರು ಬರೆದ Eravallan ಎಂಬ ಲೇಖನದಲ್ಲಿ ಕೊರವ ಸಮುದಾಯದ ಬಗೆಗೆ ಬರೆಯಲಾಗಿದೆ.

ಮದ್ರಾಸ್ ಪ್ರಾಂತ್ಯದ ಜಾತಿ ಮತ್ತು ಬುಡಕಟ್ಟುಗಳನ್ನು ಅಧ್ಯಯನ ಮಾಡಿ Castes and tribes of Southeran India ಈ ಗ್ರಂಥದ ೭ನೇ ಸಂಪುಟಗಳಲ್ಲಿ ಎಡ್ಗರ್ ಥರ್ಸಟನ್ ಅವರು ಸಂಪುಟ ಮೂರರಲ್ಲಿ ಕೊರವರು ಅಲೆಮಾರಿ ಸೈನಿಕ ಸಮುದಾಯ(ಯುದ್ಧೋಪಜೀವಿ) ಎಂದು ತಿಳಿಸಲಾಗಿದೆ.

ಹೈದರಾಬಾದ್ ಕರ್ನಾಟಕದ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ ಎಂಬ ಮಹಾಪ್ರಬಂಧದಲ್ಲಿ ಎನ್.ಅಮರೇಶ ಅವರು ಕೊರವ ಸಮುದಾಯ ಎಂಬ ಬರಹವನ್ನು ನೋಡುತ್ತೇವೆ. ಅದರಲ್ಲಿ ರಾಯಚೂರು ಜಿಲ್ಲೆಯ ಕೊರವಸಮುದಾಯದ ಕುರಿತು ಮಾಹಿತಿ ನೀಡಲಾಗಿದೆ. ಕುರುಮಯ್ಯ ಮತ್ತು ಅಂಕುಶದೊಡ್ಡಿ ಕಾದಂಬರಿಯ ಮಾಹಿತಿ ನೀಡಿದೆ.

ಅಧ್ಯಾಯ: ಎರಡು

ಕೊರವ ಪದದ ಅರ್ಥ

ಅಧ್ಯಾಯ: ಎರಡು

ಕೊರವ ಪದದ ಅರ್ಥ

ಕರ್ನಾಟಕದಲ್ಲಿ ಕೊರವರನ್ನು ಹಲವಾರು ಹೆಸರುಗಳಿಂದ ಕರೆಯುತ್ತಾರೆ. ವೃತ್ತಿಗೆ ಅನುಗುಣವಾಗಿ ಹೆಸರು ಬಂದಿರುವುದುಂಟು. ಬೇರೆ ರಾಜ್ಯಗಳಲ್ಲಿಯೂ ಇವರನ್ನು ವಿವಿಧ ಹೆಸರುಗಳಿಂದಲೇ ಗುರುತಿಸುತ್ತಾರೆ. ಕರ್ನಾಟಕದಲ್ಲಿ ಇವರನ್ನು ಕೊರವರು, ಕೊರಮರು, ಕೊರಮ ಶೆಟ್ಟಿ, ಭಜಂತ್ರಿ, ಕೈಕಾಡಿ, ಕುಂಚಿ, ಕೊರವ, ಕೊರಜ ಎಂದೆಲ್ಲ ಗುರುತಿಸಿದ್ದಾರೆ. ಹೆಣ್ಣುಮಕ್ಕಳನ್ನು ಕೊರವಿ, ಕೊರಮಿ, ಕೊರವಂಜಿ ಎಂತಲೂ ಕರೆಯುತ್ತಾರೆ.

ಉತ್ತರ ಅರ್ಕಾಟಕ ಜಿಲ್ಲೆಯ ಉತ್ತರ ಭಾಗದಿಂದ ದಕ್ಷಿಣದವರೆಗೆ ಕೊರವ ಸಮುದಾಯವನ್ನು ಕೊರಚ ಅಥವಾ ಕೊರ್ಚ ಎಂದೂ, ಆಂಧ್ರಪ್ರದೇಶದಲ್ಲಿ ಎರುಕಲ ಅಥವಾ ಎರಕಾಲವೆಂದು, ಕಲ್ಕತ್ತದಲ್ಲಿ ಅಳಲೆಕಾಯಿ ಪಂಡಿತರೆಂದೂ ಕರೆಯುತ್ತಾ, ಕೆಲವರು ಪಳ್ಳಿ, ಕವರ್‍ಯಾ, ಇದ್ಯಾಮಿನ್, ರೆಡ್ಡಿ ಎಂತಲೂ ಕರೆದುಕೊಳ್ಳುತ್ತಾರೆ. ೧೮೯೯ರಲ್ಲಿ ಕೇಂದ್ರ ರೈಲ್ವೆ ಅಧಿಕಾರಿಗಳ ಅಭಿಪ್ರಾಯದಂತೆ ಕೇಪಮಾರಿ ಕೊರವರು ಎಂದೂ ಕರೆಯಲ್ಪಟ್ಟರು. ಇ.ಥರ್ಸ್ಟನ್ ಕೂಡ ತಮ್ಮ ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ ಸಂಪುಟದಲ್ಲಿ ಕೊರವರ ಅಥವಾ ಕೊರವ ಎಂದೇ ಹೇಳಿದ್ದಾರೆ.

ಹೆಚ್.ಎ.ಸ್ಟುವರ್ಟ್ ಅಭಿಪ್ರಾಯದಂತೆ ಕೊರವ ಅಥವಾ ಎರುಕ್ಕಳರು ಅಲೆಮಾರಿ ಪಂಗಡದವರೆಂದು, ತೆಲುಗುರಾಜ್ಯದಲ್ಲಿ ಎರುಕ್ಕಳಮಡ್ಲು ಅಥವಾ ಕೊರಚಮಡ್ಲೂ ಎಂದೂ, ಕುರ್ರು ಎಂದು ಗುರುತಿಸಿಕೊಂಡಿದ್ದಾರೆ. ವಿಲ್ಸನ ಮತ್ತು ಇತರರು ಈ ಶಬ್ದದ ಉತ್ಪತ್ತಿಯನ್ನು ವಿವಿಧ ರೀತಿಯಲ್ಲಿ ಹೇಳಿದ್ದಾರೆ. ಏರು ಶಬ್ದವು ಎರ್ರದಿಂದ ಬಂದಿದೆ. ಇದರರ್ಥ ಕೆಂಪು. ತೆಲುಗಿನಲ್ಲಿ ಎರಕಲವಾಡ್ಲು ಅಂದರೆ ಭಾಗ್ಯವನ್ನು ಹೇಳುವವರು ಎಂದರ್ಥ. ಡಾ.ಒಪರ್ಟ ಅವರು ಇನ್ನು ಮುಂದುವರೆಯುತ್ತಾ ಕುರ್ರು ಶಬ್ದವನ್ನು 'ಕು'ಎಂಬ ಶಬ್ದದಿಂದ ಬಂದಿದೆ. ಕು ಅರ್ಥ ಬೆಟ್ಟವೆಂದೂ, ತಮಿಳು ಭಾಷೆಯಲ್ಲಿ ಕುರ್ರು ಅಥವಾ ಕುರ(ಕುರುಮಗಲ್) ಎಂಬುದನ್ನು

ಗುಡ್ಡದಲ್ಲಿ ವಾಸಿಸುವರು ಅಥವಾ ಕಾಡಿನಲ್ಲಿ ವಾಸಿಸುವವರು ಎಂಬ ಅಭಿಪ್ರಾಯ ಪಡುತ್ತಾರೆ. ಕಣಿ ಹೇಳುವ ವೃತ್ತಿಯನ್ನು ಹೊಂದಿದವರು ಕುರುವರು. ತಮಿಳುನಾಡಿನಲ್ಲಿ ಬುಟ್ಟಿ ಹೆಣೆಯುವಿಕೆ, ಕಣಿ ಹೇಳುವಿಕೆ ವೃತ್ತಿಯನ್ನು ಅನುಸರಿಸಿ, ಅಸ್ಪಷ್ಟ ತಮಿಳನ್ನು ಮಾತನಾಡುತ್ತಾರೆ. ಕೊರಚ ಅಥವಾ ಕೊರ್ಚ ನಂತರ ಪದವೇ ಕೊರವ ಎಂದೂ ಕೊಟು ಅಥವಾ ಕೋತಿ ಕೈಕರಿಯರು ಎಂದು ಕರೆಯಲ್ಪಡುವ ಕೊರವರ ಇನ್ನೊಂದು ಪಂಗಡದ ವಿಷಯವನ್ನು ಪಾಪಾರಾವನಾಯ್ಡು ಅವರು ಪ್ರಸ್ತಾಪಿಸಿದ್ದಾರೆ. ಕು–ಕುರ–ಕುರು–ಕುರಣಿಕ–ಕುರುವ, ಕೊರವ, ಕೊರವರ–ಕೊರಮ–ಕೊರಚ ಎಂದಾದರೂ ಪುಲ್ಲಿಂಗ, ಸ್ತ್ರೀಲಿಂಗ ರೂಪದಲ್ಲಿ ಕುರ–ಕುರು–ಕುರವಿ–ಕೊರವಿ–ಕೊರವತ–ಕೊರವಿತಿ–ಕುರಂಜಿ–ಕೊರಮಿ–ಕೊರವಂಚಿಕಿ–ಕೊರವಂಜಿ ಎಂದೂ ಕಾಲದಿಂದ ಕಾಲಕ್ಕೆ ರೂಪಾಂತರಗೊಂಡಿದೆ ಎಂಬುದು ತಿಳಿಯುತ್ತದೆ.

ಕೊರವರ ವೃತ್ತಿಗಳಿಗನುಗುಣವಾಗಿ ಹೆಸರುಗಳನ್ನು ಗುರುತಿಸಲಾಗಿದೆ. ದಬ್ಬೆ ಕೊರವರು, ಹಗ್ಗ ಮಾಡುವವರನ್ನು ಹಗ್ಗ ಕೊರವರೆಂದೂ, ಎತ್ತುಗಳ ವ್ಯಾಪಾರ ಮಾಡುವವರನ್ನು ಎತ್ತಿನ ಕೊರವರು, ಶಹನಾಯಿ ನುಡಿಸುವವರನ್ನು ಸನಾದಿ ಕೊರವರು ಅಥವಾ ಭಜಂತ್ರಿ, ವಾಜಂತ್ರಿ, ಓಲಗ ಊದುವವರನ್ನು ವಾಲಗದ ಕೊರವರು ಎಂದೂ, ಉಪ್ಪು ಮಾರುವವರನ್ನು ಉಪ್ಪು ಕೊರವರು, ಕೋತಿ ಆಡಿಸುವವರನ್ನು ಕೋತಿ ಕೊರವರು ಅಥವಾ ಮಕಡವಲ್ ಎಂದೂ, ಕಳ್ಳತನ, ದರೋಡೆ ಮಾಡುತ್ತಿರುವವರನ್ನು ಕಳ್ಳ ಕೊರವ, ಹಾವು ಆಡಿಸುವವರನ್ನು ಪಾವಲೂ ಎಂದೂ ಕರೆಯುವುದುಂಟು. ಹೈದ್ರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಬುಟ್ಟಿ ಕೊರವರು, ಉಪ್ಪುಕೊರವರು, ಕುಂಚಿಕೊರವರು, ಭಜಂತ್ರಿ, ಕೈಕಾಡಿಗಳು, ಕೊರವರು ಕಂಡು ಬರುವುದುಂಟು.

ರೆವರೆಂಡ್ ಕಿಟಲ್‌ರ ಶಬ್ದಕೋಶದಲ್ಲಿ ಕೊರಚ ಪದಕ್ಕೆ A thie vish wondering hill tribe that sell worden combs..etc & an upbrading man, a blomer, a scorner a babbler ಎಂತಲೂ, ಕೊರಚು ಪದಕ್ಕೆ to divine to babble ಎಂದೂ ಹಾಗೂ ಕೊರಚಾಡು ಪದಕ್ಕೆ to use words that revcals secretsvulnorable points or touchy equarters ಎಂಬ ವಿವರಣೆ ದೊರೆಯುತ್ತದೆ(Kitter's Kannada-English Dictionary, Vol-II, P.54).

ಕೊರಮರು ತಮ್ಮ ಜಾತಿಯ ಬಗೆಗೆ ಹೇಳುವ ಕಥೆಗಳಲ್ಲಿ ನೇರವಾಗಿ ದೇವರಿಂದಲೇ ಸ್ಪಷ್ಟವಾದ ಜಾತಿ ಎಂಬ ಧಾರ್ಮಿಕ ಅಂಶವನ್ನು ಕಾಣಬಹುದಾದರೂ ಕೊರಮ, ಶಬ್ದ ನಿಷ್ಪತ್ತಿಗೆ ಒಂದು ನಿಶ್ಚಿತವಾದ ಕಾರಣ ಇಲ್ಲದೆ ಇಲ್ಲ. ಕುರು–ಎಂಬ ಧಾತುವಿಗೆ ಸಂಸ್ಕೃತದಲ್ಲಿ 'ಮಾಡು' ಎಂಬ ಅರ್ಥವಿದೆ. ಅಂದರೆ ದುಡಿಯುವುದು. ಈ ದುಡಿಯುವವರೇ ಕುರವರಾದರು ಎಂದು ಅರ್ಥೈಸಬಹುದಾದರೂ ಈ ಜನ ದ್ರಾವಿಡ ಮೂಲದವರಾದ್ದರಿಂದ ಇವರ ಜಾತಿ

ಸೂಚಕ ಶಬ್ದವನ್ನು ದ್ರಾವಿಡ ಭಾಷೆಗಳ ಮೂಲದಲ್ಲಿಯೇ ಹುಡುಕಬೇಕಾಗುತ್ತದೆ(ದಕ್ಷಿಣ ಕರ್ನಾಟಕದ ಕೊರಮರು, ಪು.೧೩).

ಕನ್ನಡ ನಿಘಂಟುವಿನಲ್ಲಿಯೂ ಕುರುವ ಶಬ್ದಕ್ಕೆ ನೀರಿನಿಂದ ಸುತ್ತುವರಿದ ಪ್ರದೇಶ, ದ್ವೀಪ, ಗುಡ್ಡ, ದಿಬ್ಬ ಎನ್ನುವ ಅರ್ಥವಿದೆ. ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆಯಾಗಿದ್ದ ಈ ಜನರನ್ನು ಗುರುತಿಸುವ ಸೂಚನೆ ಈ ಶಬ್ದದಲ್ಲಿ ಕಂಡುಬರುತ್ತದೆಯಾದರೂ ಆ ಸ್ಥಳಕ್ಕೆ ಈ ಹೆಸರು ಬರಲು ಕೊರಮರು ಕಣಿ ಹೇಳುತ್ತಿದ್ದಕ್ಕೆ ಪ್ರಮುಖ ಕಾರಣವಾಗಿದೆ.

ಕನ್ನಡ ರತ್ನಕೋಶದಲ್ಲಿ ಕುರುವ ಶಬ್ದಕ್ಕೆ ಗುರುತು ಎನ್ನುವ ಅರ್ಥವನ್ನು ಸೂಚಿಸಲಾಗಿದೆ. ಗುರುತು, ಸಂಕೇತ ಅಥವಾ ಕುರುಹ ಶಬ್ದಗಳ ಅರ್ಥ ಒಂದೇ ಆಗಿರುವುದರಿಂದ ಕಣಿ ಹೇಳುವ ಗುರುತುಗಳನ್ನು ವಿವರಿಸುತ್ತಿದ್ದ ಜನ. ಇವರಾದ್ದರಿಂದ ಕುರದಿಂದ ಕುರವರಾಗಿದ್ದಾರೆ ಎಂದು ಹೇಳುವುದು.

"The name Koracha or Karacha says Mr turston appears to be of a later date than Korava and is said to be derived from the Hindustani Kurisly, Korinigga(Sly look) becoming corrupted into koracha, but the two words Korcha and Korama are other vise derived from the verb Kurv meaning to divine or prognasticate and are applied to the tribe owing to their profession of fortune telling which their women practice(P.483, The Mysore Tribes and Castes Vol.III, M.V.Nanjundaiah and L.K.Anantha Kirisna Iyer)

ಕುರುಹು ಎಂದರೆ ಹಿನ್ನೆಲೆ, ಗುರುತು, ಮನುಷ್ಯನ ಭವಿಷ್ಯದ ಗುರುತುಗಳನ್ನು ವ್ಯಕ್ತಪಡಿಸುವಂತಾಹುದು ಕಣಿ ಹೇಳುವುದು. ಈ ಕಣಿ ಹೇಳುವ ಮಹಿಳೆಯು ಕೊರವ ಸಮುದಾಯದ ಸ್ತ್ರೀ. ಕೇರಿ ಕೇರಿಗಳಿಗೆ ಹೋಗಿ ಕಣಿ ಹೇಳುವ ಹೆಣ್ಣುಮಕ್ಕಳು ಹಿಂದೆ ಕಾಣುತ್ತಿದ್ದರು ಎಂಬುದನ್ನು ಹಿರಿಯರು ಅಭಿಪ್ರಾಯಪಡುತ್ತಾರೆ. ರಾಜಮಹಾರಾಜರ ಕಾಲದಲ್ಲಿ ಗುಪ್ತಚಾರಿಯಾಗಿ, ರಾಜನ ಭವಿಷ್ಯವನ್ನು ಹೇಳುವುದು ಕಂಡುಬರುತ್ತಿತ್ತು. ಎರಕ ಎಂಬುದು ಕೆಲಸ ಮಾಡು, ಕೂಡಿ ಎಂದು ಜ್ಞಾನವನ್ನು ಧಾರೆ ಎರೆಯುವುದು ಎಂದು.

ದ್ರವಿಡಿಯನ್ ಎಟಮಲಾಜಿಕಲ್ ಡಿಕ್ಸನರಿ(ಡಿ.ಇ.ಡಿ) ನಂಬರ 1530-Koram Kurava tribe, palmistry as practised by Kurava women; Kuravan, man of a Caste of flowers, Snake-catchess, basket, Makers and fortune-tellers, fem. Kuratti, Kuravi, Kuravanei, Kuravanar, the Kurava tribe of the moundain, Kurunci, hilly tract, Kuricci village in the hilly tract; Ma: Kurvar wondering tribe of basket makers,

Snake catchers and gipsies, kurucci hill country Korava, Korama man of now settled tribe who make baskets, mats etc., are mujicions etc., Fem Koravanji, Koravati, Koraviti(Commouly fortune-tellers) ಮೇಲಿನ ವಿವಿಧ ಪದಗಳು ಕೊರವ ಸಮುದಾಯದ ಹೆಸರಿನ ಮೂಲ ಮತ್ತು ವೃತ್ತಿಯನ್ನು ಗುರುತಿಸುತ್ತಾರೆ.

ಸಯ್ಯದ್‌ಸಿಂಗ್ ಉಲ್ ಹಸನ್‌ರವರು 'ದ ಕ್ಯಾಸ್ಟ್ ಅಂಡ್ ಟ್ರೈಬ್ಸ್' ಎಂಬ ಕೃತಿಯಲ್ಲಿ ಎರಕುಲ ಸಮುದಾಯದ ಕುರಿತು ತಿಳಿಸುತ್ತಾ ಅವರು ಅಲೆಮಾರಿ ಬುಡಕಟ್ಟಿಗೆ ಸೇರಿದವರು. ವೃತ್ತಿನಿರತ ಅಪರಾಧಿ ಬುಡಕಟ್ಟು. ಚಾಪೆ ಹಾಗೂ ಬುಟ್ಟಿ ತಯಾರಕರು, ದಿನಗೂಲಿಯಾಗಿ ಕಾರ್ಯನಿರ್ವಹಿಸುತ್ತಾರೆ. ಸಂಗೀತ ನುಡಿಸುವ ಕಾಯಕವನ್ನು ಮಾಡುತ್ತಾರೆ. ಇವರ ಹೆಣ್ಣುಮಕ್ಕಳು ಹಳ್ಳಿಯಿಂದ ಹಳ್ಳಿಗೆ ಹೋಗಿ ಕಣಿ ಹೇಳುವುದು, ಹಚ್ಚೆ ಹಾಕುವ ಕಾಯಕ ಮಾಡುತ್ತಾರೆ.

ಕೊರವರಿಗೆ ಕೊರಚ ಅಥವಾ ಕೊರ್ಚ್ ಎಂದು ಕರೆಯುತ್ತಾರೆ. ಇನ್ನು ಕೆಲವೆಡೆ ಕುಶ್ರೀ ಎಂದು ಕರೆಯುತ್ತಾರೆ. ಇದು ಕೊರ್ಚ್ ಎಂಬ ಪದದಿಂದ ಬಂದಿರಬಹುದು. ಕೊರ್ಚ ಎಂದು ಮಧುರಾ ಜಿಲ್ಲೆಯಲ್ಲಿ ಈ ಹೆಸರಿನ ಜನಾಂಗವಿದೆ ಎಂದು ಉಲ್ಲೇಖಿಸಲಾಗಿದೆ(ಪು.೧೯೭, ದಲಿತರ ಬದುಕು ಮತ್ತು ಸಂಸ್ಕೃತಿ, ಅರ್ಜುನ ಗೊಳಸಂಗಿ). ಹಿಂದುಸ್ತಾನಿಯ ಕೊರಿ>ಕೊರಿನಿಗಾ> ಕೋರ್ಚಾ> ಕೊರಚ ಎಂದಾಗಿರಬೇಕು. ಉತ್ತರ ಕರ್ನಾಟಕದ ಜಿಲ್ಲೆಯಲ್ಲಿ ಹಾಗೂ ದಕ್ಷಿಣದ ಕದ್ದುಪಾಹ ಜಿಲ್ಲೆಗಳಲ್ಲಿ ಕೊರವ ಎಂಬ ಶಬ್ದ ಬದಲಾವಣೆ ಹೊಂದಿ ಕೊರ್ಚ್ ಎಂದು ಕರೆಯುತ್ತಾರೆ(ಡಿ.ಬಿ.ಡಂಗ, ಜನಾಂಗ ಪರಿಚಯ, ಪು.೨೨). ಕೊರವ ಎಂಬುದನ್ನು ಕೊರ್ಚ ಎಂಬ ಶಬ್ದದಿಂದ ಕರೆಯುವುದು ರೂಢಿಗೆ ಬಂದಿದೆ. ಕೊರ್ಚ ಪದವೇ ಮುಂದೆ ಕಾಲಾಂತರ ಬದಲಾವಣೆ ಹೊಂದಿ ಕೊರವ ಎಂದಾಗಿದೆ. ಕೊರವ ಎಂಬುದರ ಮೂಲರೂಪ ಕುಱು ಹೀಗೆಂದರೆ ಬೆಟ್ಟ(ತ) ಎಂದರ್ಥ, ಕುಱುವರು ಎಂದರೆ ಗುಡ್ಡಗಾಡಿನಲ್ಲಿ ಇರುವವರು, ಕುಱುವ +ಅಮ್ಮ=ಕುಱುವಮ್ಮ>ಕುಱುಮ>ಕೊರಮ>ಕೊರವ ಇದರ ಸ್ತ್ರೀಲಿಂಗ ರೂಪವೇ ಕೊರವಿ ಎಂಬುದು ತಿಳಿದುಬರುತ್ತದೆ.

Mr. F.Fawcelt ಅವರ ಕೊರವರ ಹೆಸರುಗಳನ್ನು ಬರೆಯುತ್ತಾ ಊರು ಅಥವಾ ದಬ್ಬೆ ಕೊರವರು ಉಪ್ಪ ಅಥವಾ ಘಟ್ಟದ ಕೊರಚರು, ಎತ್ತಿನ ಕೊರಚರು, ಕುಂಚಿಗೆ, ಕೊರಚರು, ವಾಲಗದ ಕೊರಚರು ಪಾತ್ರದ ಕೊರಚರು ಮತ್ತು ಸೂಳೆ ಕೊರಚರು ಎನ್ನುವ ಹೆಸರುಗಳ ಜೊತೆಗೆ Bannjautri Koravar(Musicians), Thappai Koravar(Bambo Splitters), Kaval Koravar (Watchman), Koonchi Koravar(Bruch Makers), Koodiketti Koravar(Those who make slings and nuts), Nari Koravar(Jockal hunters), pachakutti Koravar(Those who tatto) uppu Koravar(Salt curriers), Kool Kaekairs(Dancers),

Paun Kaelkairs(Snake Charmers), Ram Kaekairs(Store workers), Sade Pati Kaekars (Jungle people), Karove Pillai Kaekars(Thos who deel in leaves) ಹೆಸರುಗಳನ್ನು ತಿಳಿಸುತ್ತಾರೆ(The Mysore tribes and Caste, P.584).

ವಿಲ್ಸನ್ ಮತ್ತು ಇತರರು Dr.Oppert, Mr.Francies ಅವರು ಮತ್ತು ತಿರುಚನಾಪಳ್ಳಿ ಗೆಝೆಟಿಯರ್‌ನಲ್ಲಿ ಕೊರವ, ಕೊರಚ, ಎರುಕಲ, ಎರಕಲ Agambadiar-vellalas, Pillai, palli, Kavarai, Indiyan Reddi, Kepmarikoravas, Seruai Kors, Korava Pujaris, Yarukalavandalu, Koracha Vandalu, kuru Vandalu, Kulu Vandalu, Kulu Vandala Kuluvaru, Erakavaru Erakalavaru, Kunchi Korava, Yerkal Vadu, Kurshivanloo, Kuruvans, Kaval Karin Kuruvas, Namakkal Kuruvans, Karuru Kuruvan, Pamula Gharmes, Pusalavadu, utlavady Vanniyans, walaja koravas, wooyaloo Koravas, Banjantri or Sonani Kolavaru, Kolla soli Koravas, Erka bogavaru Thevidia ಮೊದಲಾದ ಹಲವಾರು ರಾಜ್ಯಗಳಲ್ಲಿನ ಕೊರವರ ವಿವಿಧ ಹೆಸರುಗಳನ್ನು ತಿಳಿಸಿದ್ದಾರೆ. ಆದರೆ ಕೊರವ ಸಮುದಾಯದವರಿಗೆ ಕರ್ನಾಟಕದ ಕೊರವರು, ಆಂಧ್ರಪ್ರದೇಶದ ಯರಕುಲ, ತಮಿಳುನಾಡಿನ ಕೊರುವನ್, ಮಹಾರಾಷ್ಟ್ರದ ಕೈಕಾಡಿ, ಕೇರಳದಲ್ಲಿ ಸಿಧುನಾರ್ ಮುಂತಾದವರು ಕಂಡುಬರುತ್ತಾರೆ.

ಬೆಡಗು ಅಥವಾ ಗೋತ್ರಗಳು

ಹೈದ್ರಾಬಾದ್ ಕರ್ನಾಟಕದ ಕೊರವರು ತಮ್ಮ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರು. ತಮ್ಮ ಕಸುಬುಗಳ ಮೂಲಕ ತಿಳಿದುಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಕೊರವರು, ಕೊರಚರು ಎಂದೂ, ಕೊಪ್ಪಳ ಮತ್ತು ರಾಯಚೂರುಗಳಲ್ಲಿ ಕೊರಮ, ಕೊರವ, ಭಜಂತ್ರಿ ಎಂದೂ, ಗುಲಬರ್ಗಾ, ಬೀದರ್‌ಗಳಲ್ಲಿ ಭಜಂತ್ರಿ, ಕೈಕಾಡಿಗಳೆಂದೂ ಯಾದಗಿರಿಯಲ್ಲಿಯೂ ಭಜಂತ್ರಿ ಕೈಕಾಡಿ ಎಂದು ಕರೆಯುತ್ತಾರೆ. ಆದರೆ ಬಳ್ಳಾರಿಯು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟು ಅಭಿವೃದ್ಧಿಯ ಪಥದಲ್ಲಿರುವುದರಿಂದ ಸೆಂಟ್ಲಮೆಂಟ್ ಪ್ರದೇಶದಲ್ಲಿ ಬ್ರಿಟಿಷರ ಕಾಲದಲ್ಲಿ ಇಲ್ಲಿ ನೆಲೆಸುವಂತೆ ಮಾಡಲಾಗಿದೆ. ನಾಗರಿಕರಿಂದ ದೂರವಾದ ಗ್ರಾಮಾಂತರ ಪ್ರದೇಶಗಳಲ್ಲಿ, ಗುಡ್ಡಗಾಡು ಗಳಲ್ಲಿ ವಾಸಿಸುವ ಜನಸಮುದಾಯದಲ್ಲಿ ತಮ್ಮ ಮೂಲ ಸಂಸ್ಕೃತಿ ಉಳಿಸಿಕೊಂಡು ಅವರ ಉಪವರ್ಗಗಳನ್ನು ಬೆಡಗುಗಳೆಂದು ಕರೆಯುತ್ತಾರೆ.

ಈ ಸಮುದಾಯಕ್ಕೆ ಬೇರೆ ಬೇರೆ ಅವರ ವೃತ್ತಿಯಿಂದ ಮತ್ತು ಸೇವೆಯಿಂದ ಬಂದವುಗಳಾಗಿವೆ. ಪ್ರಕೃತಿಯ ಗಿಡಮರಗಳ ಹೆಸರುಗಳೇ ಆಗಿರುತ್ತವೆ.

ಒಂದೇ ಕಾಲಕ್ಕೆ ಕುಲ ಹಾಗೂ ಪಂಗಡಗಳಿಗೆ ಗಿಡಮರಗಳ ಹೆಸರನ್ನು ಇಟ್ಟುಕೊಂಡು ಅವುಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡ ಹತ್ತಾರು ಬುಡಕಟ್ಟುಗಳು ಇಂದಿಗೂ

ಕುಲಬಳ್ಳಿ ಅಥವಾ ಬೆಡಗುಗಳ ಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ. ದೇವರ ಹೆಸರಿನಲ್ಲಿ ಮೀಸಲಿಟ್ಟ ಕಾಡುಗಳು ಇಂದಿಗೂ ದೇವರ ಕಾಡುಗಳಾಗಿ ಉಳಿದುಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಮೀಸಲಲ್ಲದ ಕಾಡಿನಲ್ಲೂ ಒಂದು ಮರ ಕಡಿಯಬೇಕಾದ ಪ್ರಸಂಗ ಬಂದರೆ ಅದನ್ನು ಪೂಜಿಸಿ ಅತ್ಯಂತ ಗೌರವದಿಂದ ಮರಗಳನ್ನು ಕಡಿಯುತ್ತಿದ್ದರು. ಬುಡಕಟ್ಟುಗಳ ಮೌಲ್ಯ ಆದರ್ಶಪ್ರಾಯವಾಗಿದೆ. ಹೀಗೆ ಕಾಡಿನ ಆಸರೆಯಲ್ಲಿ ಬೆಳೆದ ಕೆಲಸಮುದಾಯಗಳು ಜೇನು, ಗೆಡ್ಡೆ, ಗೆಣಸು, ಹಣ್ಣುಹಂಪಲು ಹಾಗೂ ಅದರೊಳಗಿನ ಪ್ರಾಣಿ ಪಕ್ಷಿಗಳನ್ನು ಅಗತ್ಯವಿದ್ದಷ್ಟು ಸೇವಿಸಿ ಬದುಕುತ್ತಿದ್ದರು. ಬಿದಿರು, ಬೆತ್ತ ಹಾಗೂ ಹೊಂಬು, ಬಳ್ಳಿಗಳಲ್ಲಿ ತಯಾರಿಸಿದ ಕಾಡಿನಾಚೆಯ ಸಂತೆಗಳಲ್ಲಿ ಮಾರಿ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಳ್ಳುತ್ತಿದ್ದರು. ಆದರೆ ಹೊರ ಜಗತ್ತಿನೊಂದಿಗೆ ಸಂಪರ್ಕವಿಟ್ಟುಕೊಂಡು ತನ್ನ ಪಾಡಿಗೆ ತಾನು ಕಾಡಿನ ಕುವರನು ಇದ್ದ ಅವನಿಗೆ ಬಹುಶಃ ನಮ್ಮ ದೇಶ ಸ್ವಾತಂತ್ರ್ಯ ಕಳೆದುಕೊಂಡಿದೆ ಎಂದಾಗಲಿ, ತಾವು ಗುಲಾಮರು ಎಂದಾಗಲಿ ಗೊತ್ತಿರಲಿಲ್ಲ. ಇಂದಿಗೂ ಬೇರೆಯವರ ಅಡಿಯಲ್ಲಿಯೇ ಬದುಕುತ್ತಿದ್ದಾರೆ ಎಂಬುದು ತಿಳಿದಿಲ್ಲ. ತಮ್ಮ ಕುಲದಲ್ಲಿ ಬೆಡಗುಗಳ ಹೆಣ್ಣನ್ನು ಹುಡುಕುವಾಗ ಕಡ್ಡಾಯವಾಗಿ ಅನುಸರಿಸಬೇಕಾಗುತ್ತದೆ. ಇವರಲ್ಲಿ ಅನೇಕ ಬೆಡಗುಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಕಾವಾಡಿ, ಸಾತಪಡಿ ಪ್ರಮುಖವಾದುಗಳು. ಇವುಗಳಲ್ಲಿ ಮತ್ತೆ ಅನೇಕ ಒಳಪಂಡಗಳಿವೆ. ಮೈನವಾರಿಂಗ ಅವರು ಈ ರೀತಿ ಗುರುತಿಸುತ್ತಾರೆ.

ಸಕ್ಕೈ, ಸಂಪತಿ, ಸಾತುಪಡಿ, ಕಾವಡಿ ಅಥವಾ ಗುಜ್ಜಲ, ದೇವರಕೊಂಡ, ಮಿಂಡ್ರಕುಟ್ಟ ಅಥವಾ ಮಿನಪಡಿ ಮೊದಲೆರಡು ವರ್ಗದವರು ಶುದ್ಧ ಕೊರವರು ಎಂದು ಭಾವಿಸಲಾಗುತ್ತದೆ. ಕಾವಡಿ ಸಾತುಪಡಿಯವರನ್ನು ಮಹಾರಾಷ್ಟ್ರದಲ್ಲಿ ಕ್ರಮವಾಗಿ ಮಾನೆ, ಜಾಧವ ಎಂದು ಕರೆಯುತ್ತಾರೆ.

ಕಾವಾಡಿ	ಸಾತ್ವಾಡಿ
ಮುಲಾಜುರೆ	ಸುಕಸಾರ
ಮುತ್ರೇಶಿ	ಸಂಗನಾಳ
ಇಲಾಯತ	ನಿದಾಮಸಾರ
ನಾಗರೇಶಿ	ಚಪಾಡಸಾರ
ಗಜೇರಿ	ರೊಡನೆಲ್ಲ
ಮುಮ್ಮನಾಗಿ	ಸೊಲಾಪುರೆ
ಮಾನಕೆ	ವರ್ಪುನ್ನವರ
ಸುಂಕನವರ	ಜಗತೇರಿ

ಸತವಾರ	ಗೋಗ್ಯಾಳ
ಕುಟ್ರಾಯಿ	ಚಿಟಪತ್ತಿ
ಕಾಡಾರಾಯಿ	ಅಂಬಲಿಸಾರ
ಚೌನಗಟ್ಟಿ	ಮಾನಪಡಿ
ಜಾಲಗೇರಿ	ಸನಾಚಾರ
ಓಕುಮಾರ	ರಾಯಸಾರ
ನಾಗವಾರ	ಸತ್ಯಾರನಾಗ
ಕೋದರಾಗ್ಯ	ಜಗಳಸಾರ
ಪನ್ನಾಗ್ಯ	ಕುಂಬಸಾರ
ಅನ್ನರೆಡ್ಡಿ	ಹಿಡಿಸಾರ
ಪಡಂತ್ಯಾಗ	ಯಳಮುಳಿ
ಮೋಪಾರಯ್ಯ	ಲಕ್ಷಂದರ
ಮೋಗೂರು	ಉಟ್ಲಾಸ್ಕರ
ಸೀತ್ತೋರು	ಕಣ್ಣಿ
ಕಂದ್ರೊರು	ಕೊಡಿಗಿ
ಕನಕೋರು	ಬಜಲಾಗ್ಯ
	ಸಿರಿಮಾಗ್ಯ
	ಸಂಗಡಯ್ಯ
	ದೆರಬೈ
	ಖಂಡೋಗ್ಯ
	ಮಾನ್ರಗುತ್ತಿರು

ಕವಾಡಿಗಳು ಎಂದರೆ ತಮ್ಮ ದೇವರ ಹರಕೆಯ ವಸ್ತುಗಳನ್ನು ಮತ್ತು ನೈವೇದ್ಯಗಳನ್ನು ಎರಡು ಬುಟ್ಟಿಗಳಲ್ಲಿ ಇಟ್ಟುಕೊಂಡು ಅವನ್ನು ಕೂಲಿನ ಎರಡು ತುದಿಗೆ ತೂಗುಹಾಕಿ ಭುಜದ ಮೇಲೆ ಹೊತ್ತುಕೊಂಡು ಹೋಗುತ್ತಾರೆ. ಶ್ರಾವಣಕುಮಾರ ತಮ್ಮ ತಂದೆ-ತಾಯಿಗಳನ್ನು ಹೊತ್ತು ಕೊಂಡು ಹೋಗುವ ರೀತಿಯಲ್ಲಿ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಸತ್ವಡಿಗಳು ಹೂವು, ಒಡವೆ, ವಸ್ತುಗಳಿಂದ ತಮ್ಮ ದೇವರನ್ನು ಪೂಜಿಸುತ್ತಾರೆ.

ಮಾನ್ಪಡೆಗಳು ಪೂಜೆ ನಡೆದಾಗ ದೇವರನ್ನು ಸ್ತುತಿಸುವ ಸೇವೆ ಮಾಡುತ್ತಾರೆ. ಮಹನ್ ಪಡೆ ಸೈನಿಕರ ಪಡೆಯು ಅಧಿಕಾರಿಯಾಗಿ ಅಥವಾ ನಾಯಕನಾಗಿ ಕೆಲಸ ಮಾಡುವವನು ಮಾನ್ಪಡೆಯಾಗಿರಬಹುದು. ಮಿಂಡ್ರಗುಟ್ಟೆ ಬೆಡಗಿನವರು ತಮ್ಮ ದೇವರಿಗೆ ಕೆಲವು ಒಪ್ಪಿಸುವ ಸೇವೆ ಮಾಡುತ್ತಾರೆ.

ಇವುಗಳಲ್ಲಿ ಕಾವಡಿ, ಸತ್ಪಡಿಗಳು ಶ್ರೇಷ್ಠವೆಂದೂ, ಮಾನ್ಪಡೆ, ಮಿಂಡ್ಯಗುಂಟ್ಟೆ ಕನಿಷ್ಠ ಎಂದು ಭಾವಿಸಲಾಗುತ್ತಿತ್ತು. ಪ್ರಸ್ತುತ ಸಂದರ್ಭದಲ್ಲಿ ಎಲ್ಲರನ್ನು ಒಂದೇ ರೀತಿಯಾಗಿ ನೋಡಲಾಗುತ್ತದೆ. ಆದರೆ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾವಾಡಿ ಸತ್ಪಡಿ ಅಥವಾ ಮಾನ್ಪಡೆ ಪದಗಳನ್ನು ಮಾತ್ರ ತಿಳಿದುಕೊಂಡೇ, ಆದರೆ ಮಿಂಡ್ರಗುಟ್ಟಿ ಮಾತ್ರ ಗೊತ್ತಗಲಿಲ್ಲ.

ಒಂದು ಕಾಲದಲ್ಲಿ ಈ ಪ್ರಭೇದಗಳಲ್ಲಿ ಒಂದೇ ಆಗಿದ್ದು, ಒಂದೇ ರೀತಿಯ ಭಾಷೆ, ಊಟ, ಉಡುಗೆ, ನೃತ್ಯ, ನೀತಿಗಳನ್ನು ಅನುಸರಿಸುತ್ತಿದು ಕಾಲಾನಂತರದಲ್ಲಿ ಹಲವು ಪಂಗಡಗಳು ಬೇರೆ ಬೇರೆ ವೃತ್ತಿಗಳನ್ನು ಅನುಸರಿಸಿದ್ದರಿಂದ ತಮ್ಮದೇ ಆದ ಬೇರ ಬೇರೆ ಕಟ್ಟುಪಾಡುಗಳು ಸಂಪ್ರದಾಯಗಳನ್ನು ನಿರ್ಮಿಸಿಕೊಂಡು, ಆಯಾ ಪ್ರದೇಶದ ಆಚಾರ–ವಿಚಾರಗಳನ್ನು ಅನುಸರಿಸಿ ಬದುಕುತ್ತಿವೆ.

ಬೀದರಿನಲ್ಲಿ ಕೈಕಾಡಿ ಮಹಾರಾಜನನ್ನು ಆರಾಧ್ಯದೈವ ಎಂದೂ ಪೂಜಿಸುತ್ತಾರೆ. ಬಸವಣ್ಣನವರ ಪ್ರಭಾವ ಬೀರಿರುವುದಂಟು. ಗುಲಬರ್ಗಾದಲ್ಲಿ ಶರಣಬಸಪ್ಪ ದೈವ ತಮ್ಮ ಸ್ಥಳೀಯ ದೈವರ ಆರಾಧನೆಯುಂಟು. ರಾಯಚೂರು ಲಿಂಗಸೂರಿನಲ್ಲಿ ಕೊರಮ್ಮದೇವಿ ಆರಾಧನೆ ಯುಂಟು, ಕೊಪ್ಪಳ–ಬಳ್ಳಾರಿಯಲ್ಲಿ ಮಾರಮ್ಮ, ಹುಲಿಗೆಮ್ಮ, ಸಂಕಲಮ್ಮ, ತಾಯಮ್ಮ ಇನ್ನೂ ಮುಂತಾದವುಗಳ ಆರಾಧನೆ ಕಂಡುಬರುತ್ತದೆ. ಒಂದೊಂದು ಸ್ಥಳ ಒಂದೊಂದು ಕುಲಗಳು ಆರಾಧಿಸುವುದನ್ನು ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ನುಲಿಯ ಚಂದಯ್ಯನು ಕುಲದೇವತೆ ಯೆಂದು ಸಂಘಟನೆಗಳ ಮೂಲಕ ದೇವಾಲಯಗಳನ್ನು ನಿರ್ಮಿಸಿಕೊಂಡು ಜಾತ್ರೆಗಳನ್ನು ಮತ್ತು ಆರಾಧನೆಯನ್ನು ಮಾಡಲಾಗುತ್ತದೆ.

Kavadi In the Madras Census Repoft 1901 Kabadi is retarned as the name of a class of Telugu Wood -Cutters. Kavadi is the name of a division of Karnavas, who carry offerings to perumalswami at tirupati on a pole(Kavadi) Kavadi or Kavadiga is far ther the name given to Kannadaiyan curd-selless in Madras. Who carry the curds in pots as head loads.

ಅತ್ತಿ, ಆಲ, ಅರಳೆ ಎಂಬ ಮೊದಲಾದ ಮರಗಳು ಇವರ ದೈವ. ಎಂ.ರಿಚರ್ಡ್ ಇವರು ಬರೆಯುವುದೆನೆಂದರೆ 'A large portion of them are name of plants and the clan

so named absorve a quasi totamistic reverence for the plants after which they are name(ಶಂಬಾ ಕೃತಿ ಸಂಪುಟ ೧, ಪು.೨೭೬)

ಮರಗಳೇ ದೈವ ಎಂದು ಬಸವಣ್ಣನವರ ವಚನದಲ್ಲಿದೆ. ವೃಕ್ಷಗಳೆಂದರೆ ದೈವಗಳು. ಆಯಾ ಕುಲದವರು ವೃಕ್ಷಗಳನ್ನು ಕಡಿಯುವುದಿಲ್ಲ. ಏಕೆಂದರೆ ದೈವ ಸಂಕೇತವೆಂದು ನಂಬಿಕೆ. ಮರದಮ್ಮನ ಪೂಜೆಯಲ್ಲಿ ಭಯಕ್ಕಿಂತಲೂ ಉಪಯುಕ್ತವಾದವೇ ಮುಖ್ಯವಾಗಿರಬೇಕು. ಉಪಜೀವಕ್ಕೆ ಸಹಾಯಕವಾದುದನ್ನೆಲ್ಲ ದೈವಿ ಭಾವದಿಂದಲೇ ಪೂಜಿಸುವ ರೂಢಿಯು ಸಮುದಾಯದ ಒಂದು ವೈಶಿಷ್ಟ. ಆ ಕಾಲದಲ್ಲಿ ಮರಗಳು ಈ ಸಮುದಾಯದ ಉಪಜೀವಿಕೆಯ ಮುಖ್ಯ ಸಾಧನವಾಗಿರಬೆಕು. ಆಯಾಯ ಸಮುದಾಯಗಳು ಮದುವೆ, ಹಬ್ಬ ಹರಿದಿನಗಳಲ್ಲಿ ಪೂಜಿಸುವುದನ್ನು ಇಂದಿಗೂ ಕಾಣುತ್ತೇವೆ.

ಕುಕ್ಕೆ ಕೊರಮ ಬಿದಿರಿನಿಂದ ಹೆಣೆದ ಬುಟ್ಟಿ, ಬುಟ್ಟಿಯನ್ನು ಹೆಣೆಯುವ ಸಮುದಾಯವನ್ನು ಕುಕ್ಕೆ ಕೊರಮ ಎಂದು ಕರೆಯುತ್ತಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ಬುಟ್ಟಿಯನ್ನು ಮಾತ್ರ ಹೆಣೆಯುವವರು ಬೀದರ್ ಜಿಲ್ಲೆಯಲ್ಲಿ ಸಿಗುತ್ತಾರೆ ಮತ್ತು ಓಲಗ ಓದುವವರು ಬಸವಕಲ್ಯಾಣ ಬಿಟ್ಟರೆ ಮತ್ತೆಲ್ಲಿ ಇಲ್ಲ ಎಂಬುದು ಕ್ಷೇತ್ರಕಾರ್ಯದಿಂದ ಕಂಡ ಅಂಶವಾಗಿದೆ.

ಕೊರಮಶೆಟ್ಟಿ: ಒಂದು ಜಾತಿ, ಕಬ್ಬಿಣದ ವ್ಯವಸಾಯ ಸಲಕರಣೆಗಳಾದ ಗುಳ, ಕೊಡಲಿ, ಮಚ್ಚು, ಬೈರಿಗೆ, ರಂಪ್ ಇತ್ಯಾದಿಗಳನ್ನು ಹಳ್ಳಿ ಹಳ್ಳಿಗೆ ಹೊತ್ತು ಮಾರಾಟ ಮಾಡುವ, ಹರಾಜು ಎತ್ತುವ ಆ ಮೂಲಕ ಜೀವನ ನಡೆಸುವ ಅಲೆಮಾರಿ ವರ್ತಕ ಜಾತಿ ಎಂಬ ಕನ್ನಡ ಜನಪದ ವಿಶ್ವಕೋಶದಲ್ಲಿ ಉಲ್ಲೇಖಿಸಲಾಗಿದೆ.

ಪುರಾಣಗಳು

ಪುರಾಣಗಳೆಂದರೆ ಅವು ಕಟ್ಟು ಕಥೆಗಳಲ್ಲಿ ಅಥವಾ ವಿಜ್ಞಾನಪೂರ್ವದ ಯುಗದ ಪ್ರಾಗೈತಿಹಾಸಿಕ ಕಾಲದ ಅನಕ್ಷರಸ್ಥ ಜನಸಮುದಾಯಗಳ ಕಾಲ್ಪನಿಕ ಸೃಷ್ಟಿಮೂ ಅಲ್ಲ. ಒಂದು ಸಮುದಾಯದ ಸಂದೇಶ, ಘಟನೆ, ಇತಿಹಾಸ ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ. ಆಯಾ ಸಮುದಾಯಗಳ ಇತಿಹಾಸ, ಪರಂಪರೆ, ಸಂಸ್ಕೃತಿ, ಸಮುದಾಯದಲ್ಲಿನ ವಿಶಿಷ್ಟ ನಂಬಿಕೆಗಳು ಮತ್ತು ಆ ನಂಬಿಕೆಯ ಪಾತಳೆಯಲ್ಲಿ ರೂಪಗೊಂಡ ಸೃಜನಶೀಲ ಸೃಷ್ಟಿಗಳು, ಸುತ್ತು ಜಗತ್ತನ್ನು ಕುರಿತು ಆ ಸಮುದಾಯ ಕಂಡುಕೊಂಡ ದರ್ಶನವಾಗಿದೆ.

ವಿಲಿಯಂ ಮಾಡ್ತ ಅವರು ಸ್ಪಷ್ಟ ಪುರಾಣದಲ್ಲಿ ತನ್ನ ಲೌಕಿಕ ಅನುಭವವನ್ನು ಮೀರುವ ವಿಶ್ವದ ಸೃಷ್ಟಿಗೂ ಲಯಕ್ಕೂ ಮಾನವ ಕಾರಣವಲ್ಲ. ಅನುಭವಾತೀತ ಸ್ಥೂಲಸ್ವರೂಪಿ ಮಹಾ ಶಕ್ತಿಯೆಂದೂ ವಿಶ್ವದ ಸೃಷ್ಟಿಲಯಗಳಿಗೆ ಕಾರಣವಾಗಿರಬೇಕೆಂಬ ಸಮಸ್ತ ಪ್ರಜ್ಞೆಯನ್ನು ಜಗತ್ತಿನ

ಜನಪದ ಸಾಹಿತ್ಯದಲ್ಲಿ ನಾವು ಕಾಣಬಹುದಾಗಿದೆ. ಆ ಮಹಾ ಅದ್ಭುತಶಕ್ತಿಯನ್ನು ಕುರಿತು ಮಾತನಾಡಲು, ವಿವರ ನೀಡಲು ನಮ್ಮ ದೈನಂದಿನ ಸಾಮಾನ್ಯ ಸಂಪರ್ಕ ಭಾಷೆಗೆ ಶಕ್ತಿ ಸಾಲದು. ಪುರಾಣಗಳೇ ಇದಕ್ಕೆ ತಕ್ಕ ಅಭಿವ್ಯಕ್ತಿ ಸಾಧನೆ ಎಂದು ವ್ಯಕ್ತಪಡಿಸುತ್ತಾರೆ.

ಪ್ರೊ.ಹಿ.ಚಿ.ಬೋರಲಿಂಗಯ್ಯನವರು ಪುರಾಣ ಕುರಿತು ಸಮುದಾಯಗಳ ವಿವಿಧ ಸ್ಥರಗಳ ಸಂಸ್ಕೃತಿಯ ಸ್ವರೂಪ ಮತ್ತು ಅವುಗಳ ಭಿನ್ನತೆಯನ್ನು ಪುರಾಣಗಳ ಮೂಲದ ಅರ್ಥ ಮಾಡಿಕೊಳ್ಳಬಹುದು. ಶೈಕ್ಷಣಿಕ ಸಮಾಜ, ಬೇಟೆ, ಪಶುಪಾಲನೆ, ಕೃಷಿ ಮತ್ತು ಉಪಕಸುಬುಗಳ ಶೂದ್ರವರ್ಗ, ಶೂದ್ರರಲ್ಲಿಯೇ ಇರುವ ಅಸ್ಪೃಶ್ಯತೆಯ ತಾರತಮ್ಯ ಭಾವ ಹಾಗೂ ಈ ಎಲ್ಲ ಅಂಶಗಳನ್ನು ಗಟ್ಟಿಗೊಳಿಸುವ ಅಥವಾ ಛಿದ್ರಗೊಳಿಸುವ ಪರಸ್ಪರ ವಿರುದ್ಧಾಶಯಗಳ ಐತಿಹ್ಯ ಪುರಾಣಗಳು ಇವೆಲ್ಲ ಈ ನಾಡಿನ ಬಹುಮುಖ್ಯ ಸಾಂಸ್ಕೃತಿಕ ಚಿಂತನೆಗಳು ವಸ್ತುಗಳು ಎಂದು ಅಭಿಪ್ರಾಯ ಪಡುತ್ತಾರೆ.

ಸೃಷ್ಟಿ ಪುರಾಣಿಗಳು ಆಯಾ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಆಯಾ ಸಮುದಾಯದ ಪರಿಸರವನ್ನು ಕುರಿತು ಆ ಸಮುದಾಯ ಕಂಡುಕೊಂಡ ದರ್ಶನ ಅವರು ಕಾಪಾಡಿಕೊಂಡು ಬಂದ ಮೌಲ್ಯಗಳಿಗೆಲ್ಲ ಸೃಷ್ಟಿ, ಪುರಾಣಗಳೇ ಮೂಲ ಆಕರಗಳಾಗಿವೆ. ಸೃಷ್ಟಿ ಪುರಾಣಗಳು ಆಯಾ ಸಮುದಾಯಗಳ ಚಿತ್ರಣವನ್ನು ನೀಡುವುದಲ್ಲದೇ ಮೂಲದ ಬಗೆಗೆ ಬೆಳಕು ಚೆಲ್ಲುತ್ತದೆ. ಸಮುದಾಯಗಳ ಸಂಸ್ಕೃತಿ ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಸೃಷ್ಟಿ ಪುರಾಣಗಳ ಮಹತ್ವದ ಪಾತ್ರವಹಿಸುತ್ತದೆ. ಸಮುದಾಯಗಳು ತಮ್ಮದೇ ಆದ ಆಚರಣೆಗಳನ್ನು ರೂಢಿಸಿಕೊಂಡು ಬಂದಿವೆ. ಇದಕ್ಕೆ ಇವರು ನಂಬಿರುವ ಸೃಷ್ಟಿ ಪುರಾಣಗಳು, ಅವರಲ್ಲಿನ ದೃಢವಾದ ನಂಬಿಕೆಗಳು ಕಾರಣವಾಗಿರುತ್ತವೆ. ಇವುಗಳ ಮೇಲಿನ ನಂಬಿಕೆ, ಆಚಾರ-ವಿಚಾರ, ಸಂಪ್ರದಾಯಗಳೇ ಪುರಾಣಗಳಿಗೆ ಸಮರ್ಥನೆ ನೀಡುತ್ತದೆ. ಸಮುದಾಯದ ಪುರಾಣಗಳು ಅವರ ಸಾಮಾಜಿಕ, ಧಾರ್ಮಿಕ ಮತ್ತು ವೃತ್ತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಕೊರವ ಸಮುದಾಯ ಮತ್ತು ಸಮುದಾಯಿಕ ಮೂಲ ದೈವರಾಧನೆ ಇವರಲ್ಲಿನ ಗಾಢವಾದ ನಂಬಿಕೆಗೆ ಕಾರಣವಾಗಿದೆ.

ಪೌರಾಣಿಕ ಮತ್ತು ಹಿನ್ನೆಲೆ

ಕೊರವರ ಮೂಲವನ್ನು ತಿಳಿದುಕೊಳ್ಳಲು ಕೆಲವು ಪುರಾಣ ಮತ್ತು ಐತಿಹ್ಯಗಳು ಕಂಡುಬರುತ್ತದೆ. ಪ್ರಕೃತಿಯ ನಿಗೂಢತೆಗಳ ನಡುವೆ ಸಮುದಾಯವು ಅಲೆಮಾರಿಗಳಾಗಿ, ಕ್ರಮೇಣ ನೆಲೆನಿಂತಿರುವುದುಂಟು. ರಾಮಾಯಣ, ಮಹಾಭಾರತ ಮತ್ತು ಭಾಗವತಗಳಲ್ಲಿ ಸಮುದಾಯದ ಉಲ್ಲೇಖಗಳು ಕಂಡುಬರುವುದುಂಟು. ಸಮುದಾಯದ ಮೂಲವನ್ನು ತಿಳಿದುಕೊಳ್ಳಲು ಇವು

ಸಾಧ್ಯವಾಗಬಹುದು. ರೈತರಿಗೆ ಬೆನ್ನೆಲು ಆಗಿ ಕೆಲಸ ಮಾಡುವ/ಬದುಕುತ್ತಿರುವ ಕೊರವರು ಮೂಲತಃ ತಮಿಳುನಾಡಿನವರಾಗಿರಬಹುದು ಮತ್ತು ತಮಿಳುನಾಡಿನ ಸೇಲಂ, ತಿರುಕೂರಂ ಪ್ರದೇಶಗಳು ಕುರುವರು ಗುಡ್ಡಗಾಡಿನ ಜನರು ಆಗಿರುವುದರಿಂದ ಇವರೇ ಕರ್ನಾಟಕದ ಕೊರವರು. ಬ್ರಿಟಿಷರ ರೈಲು ಹಳ್ಳಿಗಳ ನಿರ್ಮಾಣದಲ್ಲಿ ಸಮುದಾಯಗಳು ವಲಸೆ ಬಂದಿರಬಹುದು. ಇವರಾಡುವ ಭಾಷೆಯಲ್ಲಿ ಕನ್ನಡ ತೆಲುಗು ಮತ್ತು ತಮಿಳು ಮಿಶ್ರಿತ ಭಾಷೆಯಾಗಿದೆ. ಆಯಾ ಪ್ರದೇಶಗಳ ಭಾಷೆಗಳು ಮಾತನಾಡುವುದುಂಟು. ಹೀಗಾಗಿ ಕೊರವರ ಮೂಲದ ಬಗೆಗೆ ಇಲ್ಲಿಂದಲೇ ಬಂದವರೆಂದು ನಿಖರವಾಗಿ ಹೇಳುವುದು ಕಷ್ಟಸಾಧ್ಯ. ಕರ್ನಾಟಕದಲ್ಲಿ ಕೊರವ ಸಮುದಾಯದ ಮಹಿಳೆಯರ ಕೊರಳಲ್ಲಿ ಕರಿಮಣಿ ಸರಗಳಿರುತ್ತದೆ. ತಮಿಳುನಾಡಿನಲ್ಲಿ ಹಳದಿ ದಾರದ ತಾಳಿಸರ ಕಂಡುಬರುತ್ತದೆ. ಯರುಕಳದಲ್ಲಿಯೂ ಹೆಣ್ಣಿನ ಕೊರಳಿಗೆ ಅರಿಶಿಣದಲ್ಲಿ ಅದ್ದಿದ ದಾರವನ್ನು ಕಟ್ಟಿರುತ್ತಾರೆ. ಬದಲಾವಣೆಗೆ ಗುರಿಯಾಗುತ್ತಾ ಕರಿಮಣಿಸರವನ್ನು ಹಾಕಿಕೊಳ್ಳುತ್ತಾರೆ.

ಐತಿಹ್ಯಗಳು

ಕೊರವ ಸಮುದಾಯದಲ್ಲಿಯೂ ಪೌರಾಣಿಕ ಅಂಶಗಳು ಕಂಡುಬರುವುದುಂಟು. ಕಥೆ ಉಪಕಥೆಗಳೇ ಹುಟ್ಟಿಕೊಂಡಿವೆ.

೧. ಬ್ರಹ್ಮ ದೇವನಿಂದ ನೇರವಾಗಿ ಭೂಮಿಗೆ ಇಳಿದು ಬಂದವನು ಅಗ್ನೇಶ್ವಶುವಿನ ಮಗ, ಅವನ ಹೆಸರು 'ವೇಣುಡು' ಎಂಬುದಾಗಿತ್ತು. ಅವನು ಸಿಂಹಾಸನವನ್ನೇರಿ ಭೂಮಂಡಲವನ್ನು ಆಳ್ವಿಕೆ ಮಾಡುತ್ತಿದ್ದದು ಬಹಳ ವರ್ಷಗಳ ಕಾಲ ವೈಭವೋಪೇತವಾಗಿ ಆಡಳಿತ ನಡೆಸಿದ ವೇಣುಡು ಒಂದು ದಿನ ಸತ್ತು ಹೋದ. ಅವನಿಗೆ ಮಕ್ಕಳ ಭಾಗ್ಯವಿಲ್ಲದೇ ಸತ್ತು ಹೋದುದರಿಂದ ಈ ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾರು? ಎಂಬ ಸಂದಿಗ್ಧದ ಪ್ರಶ್ನೆ ಉದ್ಭವವಾಯಿತು. ಈ ಜಟಿಲ ಸಮಸ್ಯೆಯನ್ನು ಬಗೆಯಹರಿಸುವಲ್ಲಿ ಯಾರು ಸಮರ್ಥರಾಗದೆ ಹೋದಾಗ ದಿಕ್ಕು ತೋಚದಂತಾದ ಪ್ರಜೆಗಳು ವೇಣುಡುವಿನ ದೇಹವನ್ನು ಮಣ್ಣಿಗೆ ಹೂಳಲೂ ಇಲ್ಲ. ಬೆಂಕಿಯಿಂದ ಸುಡಲೂ ಇಲ್ಲ. ಸ್ವಲ್ಪಕಾಲ ಅವನ ದೇಹವನ್ನು ಹಾಗೆಯೇ ರಕ್ಷಿಸಿ ಇಟ್ಟರು.

ಕೆಲ ಕಾಲಾನಂತರ ಈ ರೀತಿ ಭೂಲೋಕದಲ್ಲಿ ಉದ್ಭವಿಸಿರುವ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಏಳು ಗ್ರಹಗಳು ಏಕಾಂತದಲ್ಲಿ ಸಭೆ ಸೇರಿದವು. ಈ ಸಭೆಯಲ್ಲಿ ಮುಂದೇನು ಮಾಡಬಹುದು ಎಂಬ ವಿಷಯದ ಬಗ್ಗೆ ಸುದೀರ್ಘವಾದ ಚರ್ಚೆ ಹಾಗೂ ಆಲೋಚನೆಗಳು ನಡೆದವು. ನಂತರ ಕಡೆಯದಾಗಿ ಆ ಏಳು ಗ್ರಹಗಳು ಒಟ್ಟಾಗಿ ಸೇರಿಕೊಂಡು ಸತ್ತ 'ವೇಣುಡು'ವಿನ ಬಲತೊಡೆಯಿಂದ ಒಂದು ಜೀವಿಯನ್ನು ಸೃಷ್ಟಿಸಿದರು. ಆದರೆ ಅವರೆಷ್ಟೇ ಕೂಲಂಕುಶವಾಗಿ ಚರ್ಚಿಸಿ ಜಾಗರೂಕತೆಯಿಂದ ಮಾಡಿದರೂ ಅವರ ಈ ಕೆಲಸ ಯಶಸ್ವಿಯಾಗಲಿಲ್ಲ. ಏಕೆಂದರೆ

ವೇಣುಡುವಿನ ಬಲತೊಡೆಯಿಂದ ಸೃಷ್ಟಿಯಾದ ಜೀವಿಯ ದೇಹ ನಿರೂಪವಾಗಿದ್ದುದಲ್ಲದೇ, ಅವನ ಮುಖವೂ ಸಹ ಅತ್ಯಂತ ವಿಕಾರವಾಗಿತ್ತು. ಆದ್ದರಿಂದಾಗಿ ಅವನು ಸಿಂಹಾಸನದಲ್ಲಿ ಕೂರಲು ಭೂಮಂಡಲದ ಅಧಿಪತಿಯಾಗಲು ಯೋಗ್ಯನಲ್ಲ ಎಂದು ತೀರ್ಮಾನಿಸಿದರು

ಆಗ ಆ ಏಳು ಗ್ರಹಗಳು ಮತ್ತೆ ಸಭೆ ಸೇರಿ ಅದೇ ವಿಷಯದ ಬಗ್ಗೆ ಚರ್ಚೆ ನಡೆಸಿದವು. ಕೊನೆಯದಾಗಿ ಆ ಏಳು ಗ್ರಹಗಳಲ್ಲಿ ಒಂದು ಮುಖ್ಯ ಗ್ರಹದ ಸಲಹೆಯ ಪ್ರಕಾರ ಮತ್ತು ವೇಣುಡುವಿನ ಬಲತೋಳಿನಿಂದ ಮತ್ತೊಬ್ಬನನ್ನು ಅದೇ ಪ್ರಕಾರ ಸೃಷ್ಟಿಸಿದರು. ಈ ಬಾರಿ ಜನಿಸಿದವನು ಮೊದಲಿನಂತಿರದೇ ತುಂಬಾ ಯೋಗ್ಯನೂ, ತೇಜಸ್ವಿಯೂ, ಸ್ಫುರದ್ರೂಪಿಯೂ ಆದವನಾಗಿದ್ದನು. ಇವನನ್ನು ನೋಡಿದ ಗ್ರಹಗಳು ಬಹಳ ಸಂತೋಷಗೊಂಡು 'ಪ್ರೂತು ಚಕ್ರವರ್ತಿ' ಎಂದು ನಾಮಕರಣ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿದರು.

ಆದರೆ ಮೊದಲನೇ ಸಂತತಿಯಾದ 'ನಿಶಡು' ಎಂಬುವವನು ಈ ರೀತಿ ದಿಢೀರ್ ಬದಲಾದ ನಾಟಕೀಯ ಸನ್ನಿವೇಶದಿಂದಾಗಿ ಬಹಳಷ್ಟು ನಿರಾಶೆಗೊಂಡನು. ಈ ರೀತಿ ನಿರಾಶೆಗೊಳಗಾದ 'ನಿಶಡು'ವು ಸುಮ್ಮನೆ ಕೂರದೆ ತಾನು ರಾಜನಾಗದೆ ಹೋದರೆ ತನ್ನ ಸೃಷ್ಟಿಯಾದರೂ ಏತಕ್ಕಾಯಿತು? ಎಂದು ದೇವರನ್ನು ಕಾಡಿಬೇಡಿ ಕೇಳಿಕೊಂಡನು. ಆಗ ನ್ಯಾಯಬದ್ದವಾಗಿದ್ದ ಆ ನಿಶಡುವಿನ ಮನವಿಗೆ ಓಗೊಟ್ಟು ದೇವರು 'ಪ್ರೂತು ಚಕ್ರವರ್ತಿಯು ಈ ಭೂಮಿಯ ರಾಜನಾಗಿರುವುದರಿಂದ ಈಗ ನಿನ್ನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಸಾಧ್ಯವಿಲ್ಲ. ಕಾರಣ ಊರನ್ನು ಆಳುವ ಬದಲು ನೀನು ಕಾಡನ್ನು ಆಳಬಹುದು ಎಂಬುದಾಗಿ ಆಜ್ಞಾಪಿಸಿದನು. ಅಂದಿನಿಂದ 'ನಿಶಡು'ವು ಕಾಡಿಗೆ ರಾಜನಾದ. ಅವನಿಗೆ ಬೋಯಾ, ಚೆಂಚು, ಯಾನಾಡಿ ಮತ್ತು ಕೊರವ ಎಂಬ ಮಕ್ಕಳು ಹುಟ್ಟಿದರು. ಇವರುಗಳಲ್ಲಿ ಬೋಯರು ಮಾತ್ರವೇ ಆ ನಿಶಡುವಿನ ನ್ಯಾಯಬದ್ಧವಾದ ಮಕ್ಕಳು. ಉಳಿದ ಚೆಂಚು, ಯಾನಾಡಿ ಮತ್ತು ಕೊರವರು ಧರ್ಮಬಾಹಿರವಾಗಿ ಹುಟ್ಟಿದವರು. ಈ ಕಾರಣದಿಂದಾಗಿ ಇವರುಗಳಿಗೆ ತಮ್ಮ ನಿಜವಾದ ಸೃಷ್ಟಿಕರ್ತರು ಯಾರು ಎಂಬ ಚಿಂತೆ ಹತ್ತಿತು. ಈ ರೀತಿಯಾಗಿ ತಮ್ಮ ಸೃಷ್ಟಿಕರ್ತರನ್ನು ತಿಳಿಯುವ ಸಲುವಾಗಿ ಶಾಂತಚಿತ್ತರಾಗಿ ಕಾಯುತ್ತಿದ್ದುದರ ಪರಿಣಮವಾಗಿ ಅವರು ತಮ್ಮನ್ನು ತಾವೇ ಯರುಕಳ ಎಂದು ಕರೆದುಕೊಂಡರು. ಈ ಕಾರಣದಿಂದಾಗಿ ಇವರು ಯರಕಳರೆಂದೇ ಬೆಳಕಿಗೆ ಬಂದರು. ಇದರಿಂದ ಕಾಡಿನಲ್ಲಿ ಜೀವಿಸಿದವರು ಎಂಬುದು ತಿಳಿದುಬರುತ್ತದೆ.

೨. ಯರಕಳ ಎಂಬ ಹೆಸರಿನ ಮೂಲ ಹಾಗೂ ಕಾರಣವನ್ನು ತಿಳಿಸಿದರೆ ಇನ್ನೊಂದು ಐತಿಹ್ಯವು 'ಕೊರವ' ಎಂಬ ಹೆಸರು ಬರಲು ಮಹಾಭಾರತದಲ್ಲಿ ನೋಡಬಹುದು. ಮಹಾಭಾರತದಲ್ಲಿ ಪ್ರಮುಖವಾಗಿ ಎರಡು ಬಣಗಳು ಹಾಗೆಯೇ ಕೌರವ ಮತ್ತು ಪಾಂಡವರ ನಡುವಿನ ವೈಮನಸ್ಸು, ದ್ವೇಷ ಹಾಗೂ ಅವರಿಬ್ಬರ ನಡುವೆ ನಡೆದ ಯುದ್ಧವೇ ಮಹಾಭಾರತ

ಕಥೆಯ ತಿರುಳು. ವನವಾಸದ ಸಂದರ್ಭದಲ್ಲಿ ಕೊರವಂಜಿಯ ಉಲ್ಲೇಖ ಬರುತ್ತದೆ. ಬಾಲ್ಯದಿಂದಲೇ ಬದ್ಧದ್ವೇಷಿಗಳಾದ ಈ ಕೌರವ ಪಾಂಡವರು ವಯಸ್ಕರಾದಂತೆಲ್ಲ ಅವರಿಬ್ಬರ ನಡುವಣ ದ್ವೇಷವೂ ವೃದ್ಧಿಸತೊಡಗಿತು. ದಿನೇ ದಿನೇ ಮಿತಿಮೀರತೊಡಗಿದ ದುರ್ಯೋಧನನ ಅತಿಯಾದ ದುರ್ಬುದ್ಧಿಯಿಂದ ಬೇಸತ್ತು ಹೋದ ರಾಜಕುಮಾರ ಧರ್ಮರಾಜನು ದುರ್ಯೋಧನನ ಮುಖವನ್ನು ಸಹ ನೋಡಬಾರದೆಂಬ ಉದ್ದೇಶದಿಂದ ರಾಜ್ಯವನ್ನು ತೊರೆದು ಒಮ್ಮೆ ದೇಶಾಂತರ ಹೊರಟು ಹೋಗುತ್ತಾನೆ. ಆದರೆ ಧರ್ಮರಾಜನನ್ನು ಒಬ್ಬ ಹುಡುಗಿ ಬಹಳ ಗಾಢವಾಗಿ ಪ್ರೀತಿಸಿರುತ್ತಾಳೆ. ಧರ್ಮರಾಜ ಹೊರಟು ಹೋಗುವಾಗ ಅವಳನ್ನು ಸಹ ಮರೆತಿರುತ್ತಾನೆ. ಆದರೆ ಆ ಹುಡುಗಿ ಮಾತ್ರ ಅವನನ್ನು ಮರೆತಿರುವುದಿಲ್ಲ.

ಧರ್ಮರಾಜ ಊರು ಬಿಟ್ಟುಹೊರಟು ಹೋದ ಎಂಬ ಸುದ್ಧಿ ಕಿವಿಗೆ ಬೀಳುತ್ತಿದ್ದಂತೆಯೇ ದಿಗ್ಭ್ರಂತಳಾಗುತ್ತಾಳೆ. ರಾಜಕುಮಾರನನ್ನು ಸಂಪೂರ್ಣವಾಗಿ ಮರೆಯಲು ಆಗದೇ ಸೇರಿಕೊಳ್ಳಲೂ ಆಗದೆ ತೊಳಲಾಟಕ್ಕೆ ಸಿಲುಕಿಕೊಳ್ಳುತ್ತಾಳೆ. ಕೊನೆಗೆ ಒಂದು ದಿನ ಅವಳು ಮನೆ ಬಿಟ್ಟು ಹೊರಟು ಹೋಗುತ್ತಾಳೆ. ಗೊತ್ತುಗುರಿಯಿಲ್ಲದ ಆ ಹುಡುಗಿ ಅಪರಿಚಿತ ಸ್ಥಳಗಳಲ್ಲಿ ಅಪರಚಿತ ಜನರ ನಡುವೆ ವ್ಯವಹರಿಸಲು ಭಯಗ್ರಸ್ಥಳಾಗುತ್ತಾಳೆ. ಆಗ ಅವಳಿಗೊಂದು ಉಪಾಯ ಹೊಳೆಯುತ್ತದೆ. ಆ ಪ್ರಕಾರವಾಗಿ ಭವಿಷ್ಯ ನುಡಿಯುವವಳಂತೆ ವೇಷ ಹಾಕಿಕೊಂಡು ಊರೂರು, ಬೀದಿ ಬೀದಿ ಅಲೆಯುತ್ತಾ ರಾಜಕುಮಾರ ಧರ್ಮರಾಜನನ್ನು ಹುಡುಕುತ್ತಾಳೆ. ಕೊನೆಗೊಂದು ದಿನ ತನ್ನ ಪ್ರಯತ್ನದಲ್ಲಿ ಯಶಸ್ವಿಯೂ ಆಗುತ್ತಾಳೆ. ಅಂದರೆ ಧರ್ಮರಾನನ್ನು ಪತ್ತೆ ಹಚ್ಚಿ ಅವಳು ಅವನ ಜೊತೆಗೆ ಸೇರಿಕೊಳ್ಳುತ್ತಾಳೆ. ಆಗ ಗರ್ಭಿಣಿಯಾಗುತ್ತಾಳೆ. ಹೀಗೆ ಈ ಸಂದರ್ಭದಲ್ಲಿ ಇವರಿಬ್ಬರಿಗೆ ಹುಟ್ಟಿದ ಸಂತಾನವೇ 'ಕೊರವ' ಎಂಬ ಹೆಸರನ್ನು ಪಡೆಯಿತು.

೩. "ಕೊರವರ ಹಲವಾರು ಕಸುಬುಗಳಲ್ಲಿ ಭವಿಷ್ಯ ಹೇಳುವುದೂ ಸಹ ಒಂದು ಪ್ರಮುಖವಾದುದು. ಈ ಕೊರವಂಜಿಯ ಕಲ್ಪನೆ ಹಾಸ್ಯಕ್ಕೆ ಹೆಸರಾದುದು. ಈ ಪಾತ್ರವು ಜನಪದರಿಂದ ಹಿಡಿದು ಮಹಾಕಾವ್ಯಗಳವರೆಗ್ಗೂ ಮಿಂಚಿದೆ. ಅದರಲ್ಲಿಯೂ ಈ ಕೊರವಂಜಿಯ ವೃತ್ತಿ ಹೆಂಗಸರಿಗಷ್ಟೇ ಸೀಮಿತವಾಗಿರುವುದು ಇಲ್ಲಿ ಗಮನಿಸತಕ್ಕ ಸಂಗತಿ. ಯಾವುದೇ ಒಂದು ಸಂದರ್ಭದಲ್ಲಿ ಒಮ್ಮೆ ಪಾರ್ವತಿದೇವಿಯು ಕೊರವಂಜಿಯ ವೇಷ ಧರಿಸಿ ಶಿವನಿಗೆ ಭವಿಷ್ಯ ಹೇಳಿದಳಂತೆ ಇವರು ಆಕೆಯ ಮಕ್ಕಳಾದ್ದರಿಂದ ಅಂದಿನಿಂದ ಇವರಿಗೆ ಕೊರವರು ಕೊರವಂಜಿಗಳು ಎಂಬ ಹೆಸರು ಬಂದಿತಂತೆ.

೪. ಒಮ್ಮೆ ಪಾರ್ವತಿದೇವಿಯು ಸರ್ಪವನ್ನು ಹಿಡಿದುಕೊಂಡು ಸೀಳುತ್ತಾಳೆ. ಅದು ಹೊಟ್ಟೆಯಲ್ಲಿ ವಜ್ರ ವೈಢೂರ್ಯಗಳನ್ನು ತುಂಬುತ್ತಾಳೆ. ಅದನ್ನೆ ತನ್ನ ಮಗುವೆಂದು ಭಾವಿಸಿಕೊಂಡು ಅದಕ್ಕೊಂದು ತೊಟ್ಟಿಲನ್ನು ಮಾಡಿಕೊಡುವಂತೆ ಮೇದರವನೊಬ್ಬನಿಗೆ ಹೇಳುತ್ತಾಳೆ. ಸರ್ಪವನ್ನು

ಕಂಡು ಭಯಗ್ರಸ್ಥನಾದ ಮೇದಾರನನ್ನು ತೊಟ್ಟಿಲು ಮಾಡಿಕೊಡಲು ಒಪ್ಪುವುದಿಲ್ಲ. ಆದರೆ ಅದೇ ಮಾತನ್ನು ಪಾರ್ವತಿದೇವಿಯು ಕೊರಚನೊಬ್ಬನಿಗೆ ಹೇಳುತ್ತಾಳೆ. ಆಗ ಆ ಕೊರಚನು ಅವಳ ಕೇಳಿದಾಕ್ಷಣ ಎರಡೆಣಿಸದೆ ಒಂದು ಸುಂದರವಾದ ತೊಟ್ಟಿಲನ್ನು ಮಾಡಿಕೊಡುತ್ತಾನೆ. ಮೇದರನು ನಿರಾಕರಿಸಿದ್ದನ್ನು ಕೊರಚನು ಶಿರಸಾವಹಿಸಿ ಮಾಡಿ ಕೊಟ್ಟಿದ್ದರಿಂದ ಪಾರ್ವತಿದೇವಿಯು ಬಹಳ ಸಂತುಷ್ಟಳಾಗುತ್ತಾಳೆ. ಆಗ ಕೊರವರವನಿಗೆ ತನ್ನಲ್ಲಿದ್ದ ಮಂತ್ರದಂಡವನ್ನು ಕೊರವಂಜಿ ಕುಕ್ಕೆ ಮತ್ತು ಕೇರುವ ಮೊರವನ್ನು ಬಹುಮಾನವಾಗಿ ಕೊಟ್ಟು ಭವಿಷ್ಯ ಹೇಳುವ ಅಧಿಕಾರವನ್ನು ಅನುಗ್ರಹಿಸುತ್ತಾಳೆ. ಅಂದಿನಿಂದ ಈ ಕೊರವರಲ್ಲಿ ಕೊರವಂಜಿ ಸಂತತಿ ಬೆಳೆಯಿತು ಹಾಗೂ ಭವಿಷ್ಯ ನುಡಿಯುವ ಕಲೆ ದೈವದತ್ತವಾಗಿ ಒಲಿಯಿತಂತೆ. ಇಲ್ಲಿ ತನ್ನ ಕಾರ್ಯ ಮತ್ತು ಕೊರವಂಜಿ ಕಲೆಯು ಕೊರವ ಸಮುದಾಯಕ್ಕೆ ಬಂದಿರುವುದು ಹೇಗೆ ಎಂಬುದನ್ನು ತಿಳಿಸುತ್ತಾರೆ.

೫. ವಿಷ್ಣು ಕೊರವಂಜಿಯೆಂದು ಹೆಸರು ಬಂದಿರುವುದಕ್ಕೆ ಇರುವ ಕಥೆ ವಿಶ್ವದ ನಿರ್ಮಾಣವಾದಾದ ಮೊಟ್ಟಮೊದಲು ಎಲ್ಲಾ ಪಂಗಡಗಳಿಗೂ ಎಲ್ಲಾ ಜನಾಂಗಕ್ಕೂ ಒಂದೊಂದು ಜಾತಿಯ ನಾಮಕರಣ ಮಾಡಿದವನು ಶಿವ. ಅದೇ ಪ್ರಕಾರ ಅದೇ ಶಿವನು ತಮ್ಮ ಪಂಗಡಕ್ಕೂ ವಿಷ್ಣು ಕೊರವಂಜಿಗಳೆಂದು ನಾಮಕರಣ ಮಾಡಿದನು. ಹಚ್ಚೆ ಹುಯ್ಯುವ ಕಸುಬನ್ನು ವಹಿಸಿದನು ಮತ್ತು ಕೃಷ್ಣ ಸತ್ಯಭಾಮೆಯರ ಮೇಲೆ ಲಾವಣಿಗಳನ್ನು ಭೂಲೋಕದಲ್ಲಿ ಭಕ್ತಿ ಪೂರ್ವವಾಗಿ ಹೇಳಿಕೊಂಡು ವಾಸಿಸಲು ಅನುಗ್ರಹಿಸಿದನು ಎಂದು ಕೊರವರೇ ತಮ್ಮ ಮೂಲ ಹಾಗೂ ಹೆಸರಿನ ಶ್ರೇಷ್ಠತೆಯ ಬಗ್ಗೆ ಈ ರೀತಿಯಾಗಿ ವ್ಯಾಖ್ಯಾನ ನೀಡುತ್ತಾರೆ. ತದನಂತರದಲ್ಲಿ ತಮ್ಮ ಪೂರ್ವಿಕರಲ್ಲಿ ಕೆಲವರು ಕಸುಬಿನಲ್ಲಿ ನಿಯತ್ತಿಡದೆ ದುರ್ಮಾರ್ಗಕ್ಕೆ ತಿರುಗಿದ್ದರಿಂದ ಜನರು ಬರುಬರುತ್ತಾ ನಮ್ಮನ್ನು ಕಳ್ಳರು, ಮೋಸಗಾರರು ಎಂಬ ಹೀನ ಅರ್ಥದಲ್ಲಿ ಕೊರಮರು ಎಂದು ಕರೆಯ ತೊಡಗಿದರು ಎಂದೂ ಸಹ ಹೇಳಿಕೊಳ್ಳುತ್ತಾರೆ.

ಜನಪದ ಸಾಹಿತ್ಯದಲ್ಲಿ ಕೊರವಂಜಿಯ ಪಾತ್ರ ಅತ್ಯಂತ ವರ್ಣರಂಜಿತವಾಗಿ ತೋರಿಸಲಾಗಿದೆ. ಅಪಾರವಾದ ಜನಾನುರಾಗವನ್ನು ಗಳಿಸಿಕೊಂಡಿರುವ ಈ ಕೊರವಂಜಿಯ ಪಾತ್ರಗಳನ್ನು ಚಿತ್ರಿಸಿರುವ ಹಲವಾರು ಜನಪ್ರಿಯ ರಚನೆಗಳುಂಟು. ಪಾರ್ವತಿ ಕೊರವಂಜಿ, ಬ್ರಹ್ಮ ಕೊರವಂಜಿ, ಪದ್ಮಾವತಿ ಕೊರವಂಜಿ, ಅರ್ಜುನ ಕೊರವಂಜಿ ಮತ್ತು ಮನ್ಮಥ ಕೊರವಂಜಿ ಎಂಬ ಹಲವರು ಯಕ್ಷಗಾನದಲ್ಲಿ ಕಂಡುಬರುತ್ತವೆ. ಕೃಷ್ಣ ಕೊರವಂಜಿ, ವೆಂಕಟೇಶ್ವರ ಕೊರವಂಜಿ, ಶಿವ ಪಾರಿಜಾತಗಳಲ್ಲಿ ಕೊರವಂಜಿಯ ಪಾತ್ರ ಬರುತ್ತಿದ್ದು ಅವಳ ಪುರಾಣ ಕಾಲದ ಅಸ್ತಿತ್ವವನ್ನು ಸೂಚಿಸುತ್ತವೆ.

೬. ಪಾರ್ವತಿಯ ತಪಸ್ಸನ್ನು ಪರೀಕ್ಷಿಸಲು ಶಿವನು ಅನೇಕ ವೇಷಗಳನ್ನು ತಾಳಿದನು. ಅವುಗಳಲ್ಲಿ ಕೊರವಂಜಿಯ ವೇಷವು ಒಂದು. ಅ ಕೊರವಂಜಿಯ ವಂಶಜರೇ ಇಂದಿನ ಕೊರವರು ಎಂದು ಹೇಳುತ್ತಾನೆ. ಶಿವಕೊರವಂಜಿ.

೭. ಅರ್ಜುನನ ತಪಸ್ಸನ್ನು ಪರೀಕ್ಷಿಸಲು ಶಿವನು 'ಕಿರಾತ'ರೂಪ ಧರಿಸಿದನು. ಪಾರ್ವತಿ ಕಿರಾತೆಯ ವೇಷ ಧರಿಸಿದಳು. ಆ ಕಿರಾತೆಯೇ ಕೊರವಿಯೆಂದು ಅವಳ ವಂಶಜರೇ ಕೊರವಂಜಿಯೆಂದು ಮತ್ತೊಂದು ಕಥೆ. ಇದರಲ್ಲಿ ಪಾರ್ವತಿಯು ಅರ್ಜುನನ ಬೆನ್ನ ನೋಡಬೇಕೆಂದು ಶಿವನಿಗೆ ಕೇಳಿದಾಗ ಶಿವನು ಕಿರಾತ ಮತ್ತು ಪಾರ್ವತಿ ಕೊರತೆ ರೂಪ ಧರಿಸಿ, ವರಾಹದ ಬೇಟೆಯನ್ನು ಪಡೆಯಲು ಯುದ್ಧವಾಡಿ ಬೆನ್ನ ನೋಡುತ್ತಾಳೆ ಎಂಬುದು ತಿಳಿದುಬರುತ್ತದೆ.

೮. ಕೃಷ್ಣ ಪಾರಿಜಾತದಲ್ಲಿ ಕೃಷ್ಣ ಕೊರವಂಜಿಯ ವೇಷ ಹಾಕಿ ಸತ್ಯಭಾಮೆಯನ್ನು ಪರೀಕ್ಷಿಸಿದ ಕಥೆ ಪ್ರಸಿದ್ಧವಾಗಿದೆ. ಆ ಕೃಷ್ಣ ಕೊರವಂಜಿಯ ವಂಶದವರೇ ಈ ಕೊರವರು ಎಂದು ತಿಳಿದುಬರುತ್ತದೆ. ರುಕ್ಮಿಣಿಗೆ ಪಾರಿಜಾತ ಹೂ ನೀಡಿರುವ ವಿಚಾರವನ್ನು ನಾರದ ಸತ್ಯಭಾಮೆಗೆ ಹೇಳುತ್ತಾಳೆ. ಹಾಗೆ ಕೃಷ್ಣನು ಕೊರವಂಜಿ ವೇಷ ಧರಿಸಿ ಅವಳಿಗೆ ತಿಳುವಳಿಕೆ ಹೇಳುತ್ತಾನೆ.

ಪುರಾಣ ಕಾಲದಿಂದಲೂ ಕೊರವಂಜಿಗಳು ಕಣಿ ಹೇಳುತ್ತಲೇ ಬಂದಿದ್ದಾರೆ. ಇಂದಿಗೂ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಕಾಳಿಕಮ್ಮನ ಹರಕೆ ಎಂಬ ಮುಕ್ರಿಯ ಸಮುದಾಯದಲ್ಲಿ ಸಂಕರ ಎಂಬ ರಾಜನಿಗೆ ಬಹುಕಾಲ ಮಕ್ಕಳಿರದೆ ಕಾಳಿಕಮ್ಮನಿಗೆ ಹರಕೆ ಹೊತ್ತು ಮಗ ಹುಟ್ಟುತ್ತಾನೆ. ಆದರೆ ಆ ಹರಕೆ ಆತನ ಮದುವೆಯವರೆಗೂ ರಾಜನಿಗೆ ನೆನಪಿಗೆ ಆಗುವುದಿಲ್ಲ. ಆಗ ಕಾಳಿಕಮ್ಮ ದೇವಿ ಕೊರವಂಜಿಯ ವೇಷ ತಾಳಿ ಹೆಣ್ಣಿನ ಮನೆಗೆ ಹೋಗಿ ಗಂಡಿನ ಬಗ್ಗೆ ಊನವಾಗಿದ್ದನೆಂದು, ರಾಜಕುಮಾರನ ಬಳಿ ಬಂದು ಮದುವೆಯಾದ ಹುಡುಗಿ ಊನವಾಗಿದ್ದಾಳೆಂದು ತಿಳಿಸುತ್ತಾಳೆ ಎಂಬ ಕಥೆ ಬರುತ್ತದೆ.

ಗೌರಿ ಮಕ್ಕಳು ಗಂಗೆ ಮಕ್ಕಳು ಅಂದಿನಿಂದ ಬಿದಿರಿನ ಕೆಲಸ ಮಾಡುತ್ತಾ ಬಂದಿದ್ದಾರೆ. ಗಂಗೆಯ ಮಗ ಮೇದಾರ ಮಚ್ಚಿನ ಮೇಲ್ಭಾಗ ಹಿಡಿದಿದ್ದರಿಂದ ಅವನ ಮಚ್ಚಿಗೆ ಇಂದಿಗೂ ಹಿಡಿಕೆ ಇಲ್ಲ. ಕೊರಮರು ಬಳಸುವ ಮಚ್ಚಿಗೆ ಹಿಡಿ ಇದೆ. ಕೊರವರು ಕೇರುವ ಮರ ಮತ್ತು ಬಿಸಾಣಿಕೆಗಳನ್ನು ಮಾಡುವುದಿಲ್ಲ. ಅವುಗಳ ಅಣಿಗೌರಿ ಗದ್ದುಗೆ ಎಂದು ಕಾಲಿನಿಂದ ಮೆಟ್ಟುವುದಿಲ್ಲ. ಮೇದರು ಬಿದಿರನ್ನು ತುದಿಯಿಂದ ಸೀಳಿದರೆ ಕೊರಮರು ಬುಡದಿಂದ ಸೀಳುತ್ತಾರೆ. ಗೌರಿ ಮಕ್ಕಳಿಂದ ನಮ್ಮ ಜಾತಿ ಬೆಳೆಯಿತು. ಪಾರ್ವತಿಯಂತೆ ನಮ್ಮ ಕೊರವಂಜಿಯರು ಕಣಿ ಹೇಳುವುದನ್ನು ಮಕ್ಕಳ ಫಲಕ್ಕೆ ಔಷಧಿ ಕೊಡುವುದನ್ನು ಬಹಳ ಹಿಂದಿನಿಂದ ರೂಢಿಸಿಕೊಂಡಿದ್ದಾರೆ. ಇದು ನಮಗೆ ದೈವದತ್ತವಾಗಿ ಬಂದ ಹಕ್ಕು ಎಂದು ಕೊರಮರು ಹೇಳುತ್ತಾರೆ.

ಬಳೆ ಮಲಾರ(ಬಳೆ ಜೋಡಿಸಿಕೊಂಡಿರುವುದು) ಬಗಲಲ್ಲಿ ಹಾಕಿಕೊಂಡು ಲಿಂಗ ಎದೆ ಮೇಲೆ ಹಾಕಿಕೊಂಡು ಕಟ್ಟೆ ಕೆರೆ ಕಡೆ ಹೋಗುತ್ತಿರಬೇಕಾದರೆ ಕಟ್ಟೆಕೆರೆ ಹದಿನೆಂಟು ಜಾತಿಯವರು

ಸ್ನಾನ ಮಾಡುತ್ತಿದ್ದರು. ಅವರನ್ನು ನೋಡಿಕೊಂಡು ಬಿಟ್ಟು, ಅವರೆಲ್ಲರು ಸ್ನಾನ ಮುಗಿಸಿ ದೇವರ ಹತ್ತಿರ ವರ ಕೇಳಲು ಹೋದರು. ಕೊನೆಗೆ ಈತನು ಸ್ನಾನ ಮಾಡಲು ಬಳೆ ಮಲಾರ ಕೆಳಗಿಟ್ಟು ಸ್ನಾನಕ್ಕೆ ಇಳಿದನು. ಇತನು ನೀರಿನಲ್ಲಿ ಮೀನು ಹಿಡಿಯುವುದನ್ನು ಉಪ್ಪಾರ ಶೆಟ್ಟಿ ನೋಡಿ ಬಳೆ ಮಲಾರ ಹಾಕಿಕೊಂಡು ಹೋದನು. ಇತನು ಸೊಂಟಕ್ಕೆ ಮೀನನ್ನು ಹಾಕಿಕೊಂಡು ದೇವರಲ್ಲಿ ವರ ಕೇಳಲು ಹೋದನು. ಸೊಂಟಕ್ಕೆ ಕಟ್ಟಿಕೊಂಡಿರುವುದು ಏನು ಎಂದು ಕೇಳಿದನು. ಆಗ ಅವನು ಮೀನುಗಳಿಗೆ ಕೊರಮ ಮೀನು ಎಂದು, ಆಗ ದೇವರು ಹಾಗಾದರೆ ನೀನು ಕೊರಮನೇ ಸರಿ ಎಂದು, ಆಗ ಇವನು ಮುಂದಿನ ಜೀವನಕ್ಕೆ ಏನು ಮಾಡೋದು ಸ್ವಾಮಿ ಎಂದು ಪರಮೇಶ್ವರನ ಹತ್ತಿರ ತ್ರಿಶೂಲ ತೆಗೆದುಕೊಳ್ಳುವುದು, ರಾಮನ ಹತ್ತಿರ ಬಾಣ ತೆಗೆದುಕೊಳ್ಳುವುದು, ಬಾಣವೆ ಅಂಬುಗತ್ತಿ ಇವೆರಡು ತೆಗೆದುಕೊಂಡು ಚಾಮುಂಡಮ್ಮನ ಹತ್ತಿರ ಹೋಗಿ ಕಣಿ ಕುಕ್ಕೆ ತೆಗೆದುಕೋ ಎಂದು ಬೆಟ್ಟಕ್ಕೆ ಗಡ(ಬಿದಿರು) ತರುವುದು ಹೊಟ್ಟೆ ಹೊರೆಯುವುದು. ಮೀನು ಹಿಡಿದುಕೊಂಡು ಬಂದಿದ್ದಕ್ಕೆ ಸಂತೆಗೆ ಸಾವಿರ ಬಂದರೂ ಸಂಜೆಗೆ ತೀರಿ ಹೋಗಲಿ ಎಂದು ಶಾಪಕೊಟ್ಟನು.

ಈ ಕಥೆಗಳಲ್ಲಿ ಪಾರ್ವತಿ, ಶಿವ ನಡುವಿನ ಸಂಬಂಧಗಳು ಕೊರವ ದ್ರಾವಿಡ ಮೂಲದವರೆಂಬುದನ್ನು ತಿಳಿಸಿದ್ದಾರೆ. ಮಹಾಭಾರತದ ಭಾಗವತದ ಕಥೆಗಳು ಆರ್ಯ ಮೂಲವನ್ನು ಸಾಧಿಸಲು ಪ್ರಯತ್ನಿಸುತ್ತಿವೆ(ಮಲ್ಲಿಕಾರ್ಜುನ, ಮುನ್ನುಡಿ, ೨೦೦೮-೦೯, ಕೊರಮರು).

ಕೊರವರ ವಿವಿಧ ಹೆಸರುಗಳು

ಕೊರವರು 'ಇವರಲ್ಲಿ ಚೋರರು, ಕೈಕಾಡೀ ಕೊರವರು ಕುಂಚೀ ಕೊರವರು, ಪಾತರದ ಕೊರವರು, ಸನಾದೀ ಕೊರವರು, ಮೋದೀ ಕೊರವರು ಯೆಂಬ ಆರು ಒಳ ಜಾತಿಗಳುಂಟು. ಗಂಟೀ ಚೋರರು ಬಹುಜನ ನೆರೆದಲ್ಲಿಯೂ ಮನೆಗಳಲ್ಲಿಯೂ ಕಳವು ಮಾಡುವರು. ಇವರು ಮಕ್ಕಳಿಗೆ ಕಳವಿನ ವಿದ್ಯೆಯನ್ನು ಚಿಕ್ಕಂದಿನಿಂದ ಕಲಿಸುತ್ತಾರೆ. ಬಡಿದು ಬಡಿದು ಅವರ ಮೈ ಮರಗಟ್ಟುವಂತೆ ಮಾಡುತ್ತಾರೆ. ಅಂದು ಬ್ರಿಟೀಷರನ್ನು, ಬಂಡವಾಳಶಾಹಿಗಳನ್ನು ಮಟ್ಟಹಾಕಲು ಇಂತಹ ಕಾರ್ಯ ಮಾಡಬಹುದು. ಇಲ್ಲವೇ ಬ್ರಿಟೀಷರೇ ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಕಳ್ಳರು ಎಂದು ಕರೆದಿರಬಹುದು. ಆದರೆ ಇಂದು ಕಳ್ಳತನ ಮಾಡುವುದಿಲ್ಲ ಎಂಬುದು ತಿಳಿದುಬರುತ್ತದೆ. ಕೈಕಾಡೀ ಕೊರವರು ಮುಖ್ಯವಾಗಿ ಹತ್ತಿ ಕಟ್ಟಿಗೆಗಳಿಂದಲೂ ಈಚಲು ಎಲೆಗಳಿಂದಲೂ ಬುಟ್ಟಿ, ಗಳಿಗೆಗಳನ್ನು ಮಾಡಿ ಮಾರುವರು. ಕೂಲಿಗೆ ಹೋಗುವರು, ಭಿಕ್ಷೆ ಬೇಡುವರು. ಪಾತಾರದ ಕೊರವಿಗಳ ಹೆಂಗಸರು ಪಾತರದವರಂತೆ ಗಾಯನ, ನೃತ್ಯ, ಸೂಳೆತನ ಮಾಡುವರು, ಮೋದೀ ಕೊರವರು, ಮಾಂತ್ರೀಕರು, ಇವರ ಹೆಂಗಸರು ತಲೆಯ ಮೇಲೆ ಬುಟ್ಟಿಯನ್ನಿಟ್ಟುಕೊಂಡು ಮನೆಮನೆಗೆ ಪ್ರಶ್ನೆ ಹೇಳುತ್ತಾ ತಿರುಗುತ್ತಾರೆ. ಆ ಹೆಂಗಸರಿಗೆ

ಕೊರವಂಜಿಗಳೆಂದೆನ್ನುವರು. ಕುಂಚಿ ಕೊರವರು ನೇಕಾರರಿಗೆ ಬೇಕಾಗುವ ಕುಂಚಿಗಳನ್ನು ಕಟ್ಟಿ ಮಾಡುವರು; ಇವರ ಹೆಂಗಸರು ಹುಲ್ಲಿನ ಕಸಬರಿಗೆಗಳನ್ನು ಕಟ್ಟಿ ಮಾರುವರು. ಇವರಿಗೆ ಅಡವೆ ಕೊರವರೆಂತಲೂ ಅನ್ನುವರು. ಒಟ್ಟಿಗೆ ಸನಾದೀ ಕೊರವರ ಹೊರ್ತು ಉಳಿದ ಜಾತಿಗೆಲ್ಲ ನೀಚ ಸ್ಥಿತಿಯಲ್ಲಿ ಇರುತ್ತದೆ; ಭಿಕ್ಷೆ, ಕಳವು ಇವೆರಡೆ ಇವರ ಮುಖ್ಯ ಉಪಜೀವನಗಳು, ಇವರು ಗುಡುಸಲಿನ ಚಾಪೆಗಳನ್ನು ಕಟ್ಟಿಕೊಂಡು ಊರೂರು ತಿರುಗುವರು. ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಹಾದರಕ್ಕೆ ಬಹಳ ದೋಷವಿಲ್ಲ; ಹೆಣಗಳನ್ನು ಹುಗಿಯುವರು, ಬ್ರಾಹ್ಮಣನೂ ಲಿಂಗದವರು ಇವರ ಮನೆಗೆ ಹೋಗುವುದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಇವರ ಕುಲದೇವತೆ ಯಲ್ಲಮ್ಮ.

೧. ಕೈಕಾಡಿಗಳು

ಇವರು ಬೆಳಗಾವಿ ವಿಜಾಪುರ ಜಿಲ್ಲೆಗಳಲ್ಲಿ ಇರುತ್ತಾರೆ. ಜನ್ಮ ಭಾಷೆ ಕನ್ನಡ. ಉತ್ತಮ ಕುಲದವರು ಇವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ಅನ್ನವನ್ನು ಹೊಲಿಯರು ಮಾತ್ರ ತೆಗೆದುಕೊಳ್ಳುತ್ತಾರೆ. ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಇವರ ಮುಖ್ಯ ದೇವತೆ ಯಲ್ಲಮ್ಮ. ಇವರು ಬ್ರಾಹ್ಮಣರನ್ನು ಕೇಲಿ ಲಗ್ನ, ನಾಮಕರಣ ಮುಂತಾದ ಕಾರ್ಯಗಳನ್ನು ಮಾಡುತ್ತಾರೆ. ಆದರೆ ಬ್ರಾಹ್ಮಣರು ಇವರ ಮನೆಗೆ ಹೋಗುವುದಿಲ್ಲ. ಲಗ್ನವಾದ ಬಳಿಕ ಹೆಂಡಿಯು ಮೂರು ಹಡಿಯುವರೆಗೆ ಗಂಡನು ಆಕೆಯ ಮನೆಯಲ್ಲಿ ಇರಲಿಕ್ಕೆ ಬೇಕು. ಇರದಿದ್ದರೆ ಆಕೆಯ ತಾಯಿ-ತಂದೆಗಳ ಹೊಟ್ಟೆಗೆ ಕೊಡಲಿಕ್ಕೆ ಬೇಕು. ಕೈಕಾಡಿಗಳು ಈಚಲದ ಬುಟ್ಟಿ, ಗಳಿಗೆಗಳನ್ನು ಮಾಡಿ ಮಾರುತ್ತಾರೆ. ಕೂಲಿಗೆ ಹೋಗುತ್ತಾರೆ. ಸ್ವಲ್ಪ ಜನರು ಒಕ್ಕಲತನ ಮಾಡುತ್ತಾರೆ. ಆದರೆ ಇವರು ಕಳ್ಳಿರೊಳಗೆ ಎಣಿಸಲ್ಪಡುತ್ತಾರೆ. ದರೋಡೆಯಾದಲ್ಲಿ ಅವರೊಳಗೆ ಕೈಕಾಡಿಗಳು ಬಹುತರ ಇರುತ್ತಾರೆ. ಆದರೂ ಇವರಿಗೆ ಬಡತನ. ಬಹಳ ಗಂಡಸರ ಮೈಮೇಲೆ ಬಟ್ಟೆಗಳಿರುವುದಿಲ್ಲ. ನಡುವಿಗೆ ಸಣ್ಣದೊಂದು ಹೊಲಸು ಪಂಚೆ, ತಲೆಗೆ ಮೆರಡು ಮೂರು ಮೊಳದ ಅರಿವೆ, ಹೆಗಲ ಮೇಲೆ ಅಂಥದೆ ಒಂದು ಅರಿವೆ. ಇವರ ಉಡಿಗೆಗಳು ಹೆಂಗಸರಿಗೆ ಕುಬ್ಜದ ದೊರೆಯುವುದು ದುರ್ಲಭ. ಇವರ ಮಕ್ಕಳು ಶಾಲೆಗೆ ಹೋಗುವುದಿಲ್ಲ.

ಇದನ್ನು ಗಮನಿಸಿದಾಗ ಹಿಂದೆ ಬಡತನವಿರುವುದು ಗೊತ್ತಾಗುತ್ತದೆ. ಆದರೆ ಹೈದರಾಬಾದ್ ಕರ್ನಾಟಕದಲ್ಲಿ ಬೀದರ ಜಿಲ್ಲೆಯಲ್ಲಿ ಕೊರವರನ್ನು ಕೈಕಾಡಿಗಳೆಂದು ಕರೆಯುತ್ತಾರೆ. ಇಂದಿಗೂ ತಮ್ಮ ಸಂಪ್ರದಾಯಿಗಳ ವೃತ್ತಿಯನ್ನು ಬಿಟ್ಟಿಲ್ಲ. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಿದ್ದಾರೆ. ಒಂದು ಸರಿ ಕಳ್ಳೀ ಎಂದು ಹಣೆಪಟ್ಟಿ ಬಂದ ಮೇಲೆ ಅದು ಹೋಗುವುದು ಬಹಳ ಸಮಯ ಪಡೆಯುತ್ತದೆ. ಇಂದು ಮೈತುಂಬಾ ಬಟ್ಟೆಗಳನ್ನು ಧರಿಸುತ್ತಾರೆ. ಆಟೋ ಓಡಿಸುವ ವೃತ್ತಿಯನ್ನು ಅವಲಂಬಿಸುವುದುಂಟು.

ಸನಾದೀ ಕೊರವರು ಎಲ್ಲಕ್ಕೂ ಶ್ರೇಷ್ಠರು. ಇವರು ಒಂದೇ ಸ್ಥಳದಲ್ಲಿ ಮನೆ ಮಾಡಿಕೊಂಡು ಇರುವರು. ಗಂಡಸರಿಗೂ ಹೆಂಗಸರಿಗೂ ಮೈತುಂಬ ಬಟ್ಟೆಗಳಿರುತ್ತವೆ. ಇವರ ವಸ್ತುಗಳು ಮನೆಗಳು ತಕ್ಕ ಮಟ್ಟಿಗೆ ಸ್ವಚ್ಛ ಇರುತ್ತವೆ. ಇವರ ಕುಲದೇವತೆ ಯಲ್ಲಮ್ಮನಾದಾಗ್ಯೂ ಇವರು ಹನುಮಂತ ದೇವರಿಗೆ ವಿಶೇಷವಾಗಿ ನಡೆದುಕೊಳ್ಳುವರು. ಮನೆಯಲ್ಲಿ ಹನುಮಂತನ ಮೂರ್ತಿಯನ್ನು ಪೂಜಿಸುವರು. ಹನುಮಂತನ ಭಕ್ತರು ಮಾಂಸ ತಿನ್ನುವುದಿಲ್ಲ. ಉತ್ತಮ ಕುಲದವರು ಇವರನ್ನು ಮುಟ್ಟಿಸಿಕೊಳ್ಳುವುದಕ್ಕೆ ಹೇಸುವುದಿಲ್ಲ. ಒಟ್ಟಿಗೆ ನಾಗಾದಿಗರು ಜಿನಗಾರರು, ಬೇಡರು ಮುಂತಾದ ವರಿಗಿಂತ ಇವರ ಸ್ಥಿತಿಯು ಮೇಲಾಗಿರುತ್ತದೆಂದು ಹೇಳಬಹುದು. ಇವರ ಹೆಂಗಸರು ಒಕ್ಕಲಿಗರಂತೆ ಕಚ್ಚದ ಹಾಕದೆ ಸೀರೆ ಉಟ್ಟುಕೊಂಡು ದೊಡ್ಡದಾದ ಕುಂಕುಮ ಹಚ್ಚಿಕೊಳ್ಳುತ್ತಾರೆ. ಉತ್ತಮ ಜಾತಿಗಳಲ್ಲಿ ಲಗ್ನ ಮುಹೂರ್ತ ಮುಂತಾದ ಶುಭಕಾರ್ಯಗಳಲ್ಲಿ ಭಜಂತ್ರಿ ಊದುವರು. ಸನಾದೀ ಕೊರವರು ಮುಖ್ಯ ಹೋರೆಯು ಆದರೆ ಇವರು ಕಟ್ಟಿಗೆ ತಂದು ಮಾರುವರು. ಕಸುಬರಿಗೆಗಳನ್ನು, ಕಸಬರಿಗೆಯ ಹುಲ್ಲನ್ನು ಮಾಡುವರು, ಹುಲ್ಲಿನ ನೆಲುವು, ಹತ್ತಿ ಕಟ್ಟಿಗೆ, ಮಂಗಳ ಬುಟ್ಟಿಗಳು ಮುಂತಾದವುಗಳನ್ನು ಮಾಡಿ ಮಾರುವರು. ಇವರು ನಿರುದ್ಯೋಗಿಗಳಲ್ಲ. ಒಟ್ಟಿಗೆ ಸುಖದಿಂದ ಇದ್ದಾರೆ. ಮಕ್ಕಳನ್ನು ಆಸೆಯಿಂದ ಶಾಲೆಗೆ ಕಳಿಸುತ್ತಾರೆ.

ಈ ಮಾಹಿತಿಯು ನಿವಾಸಿಗಳು, ಕೂಲಿಗಾರರೂ ಕಿರುಕುಳ ಜಾತಿಯವರೂ ಎಂಬ ಲೇಖನದಲ್ಲಿ ಉಲ್ಲೇಖಿಸಲಾಗಿದೆ(ಪು.೨೦೧ ರಿಂದ ೨೦೩). ಮೂರನ್ನು ಗಮನಿಸಿದಾಗ ಒಂಟಿ ಕಸಬರಿಗೆ ವ್ಯತ್ಯಾಸಗಳು ತಿಳಿಯುತ್ತದೆ. ಸಮಾಜದಲ್ಲಿ ಒಬ್ಬೊಬ್ಬರಿಗೆ ಒಂದು ರೀತಿಯಲ್ಲಿ ಕಾಣಲಾಗುತ್ತದೆ. ಹೈದರಾಬಾದ ಕರ್ನಾಟಕದಲ್ಲಿ ಬೀದರ, ಯಾದಗಿರಿ ಅತ್ಯಂತ ಹಿಂದುಳಿದ ಪ್ರದೇಶ. ಜನರಿಗೆ ತಮ್ಮ ಕುಲದ ಬಗೆಗೆ ತಿಳುವಳಿಕೆ ಇಲ್ಲದಿರುವುದು ಇಂದು ಸಂಘ–ಸಂಘಟನೆಗಳಿಂದ ಬೆರಳೆಣಿಕೆಯಷ್ಟು ಜನರು ಸಮುದಾಯದ ಬಗೆಗೆ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

೨. ಉಪ್ಪು ಕೊರವರು

ಸೇಲಂ ಜಿಲ್ಲೆಯಲ್ಲಿ ಕತ್ತೆಗಳ ಮೇಲೆ ಊರಿಂದೂರಿಗೆ ಉಪ್ಪಿನ ಮೂಟೆಗಳನ್ನು ಹೇರಿಕೊಂಡು ಹೋಗಿ ಮಾರಾಟ ಮಾಡುವ ಕೊರವರನ್ನು ಉಪ್ಪ್ರ ಕೊರವರು ಎಂದು ಕರೆಯುತ್ತಾರೆ ಎಂದು ಕೊರವರ ಸಂಸ್ಕೃತಿ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಆದರೆ ಕತ್ತೆಗಳ ಮೇಲೆ ಊರಿಂದೂರಿಗೆ ಅಲೆಯುತ್ತಾ ಕಸಬಾರಿಗೆ ಬುಟ್ಟಿ ತಯಾರಿಸಿ ಮಾರಿ ಬಂದ ಮೇಲೆ ಜನರು ನೀಡುವ ಧವಸ–ಧಾನ್ಯಗಳನ್ನು ಕತ್ತೆಯ ಮೇಲೆ ಹೇರಿಕೊಂಡು ಬರುತ್ತಿದ್ದೆವು ಎಂದು ಕಂಪ್ಲಿಯ ಗಂಗಾಧರ ಅವರು ತಿಳಿಸುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕತ್ತೆಗಳನ್ನು ಸಾರಿಗೆಯ ರೂಪದಲ್ಲಿ ಬಳಸಿಕೊಳ್ಳುವುದನ್ನು ಕಮಲಾನಗರದಲ್ಲಿ(ಬೀದರ್ ಜಿಲ್ಲೆಯ ಕಮಲಾನಗರ ತಾಲೂಕಿನಲ್ಲಿ) ಕಂಡು

ಬಂದಿತ್ತು. ಈ ಸಮುದಾಯವು ಸಮುದ್ರದ ತೀರದಲ್ಲಿ ಉಪ್ಪಿನ ವ್ಯಾಪಾರವನ್ನು ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ.

೩. ಹಾವಾಡಿಸುವವರು/ಪಾಮಯಿ ಕೊರವರು

ಹಾವಾಡಿಸುವ ವೃತ್ತಿಯಲ್ಲಿ ತೊಡಗಿರುವ ಒಂದು ಕೊರವರ ಪಂಗಡವನ್ನು 'ಪಾಮುಲ'ವಾಡು ಎಂದು ಕರೆಯುತ್ತಾರೆ. ಕಾಡುಗಳಲ್ಲಿ ಅಲೆಯುತ್ತಿರುವ ಸಾಕು ಪ್ರಾಣಿಗಳ ಜೊತೆ ಹಾವುಗಳನ್ನು ಬಳಸಿಕೊಂಡು ಊರಲ್ಲಿ ಪ್ರದರ್ಶನ ಆಡುತ್ತಿದ್ದೆವು ಎಂಬುದನ್ನು ಚಿತ್ತಪೂರ ಯಾದಗಿರಿ ಕೆಲವರು ಅಭಿಪ್ರಾಯ ಪಡುತ್ತಾರೆ. ಇಂದು ಕಣ್ಮರೆಯಾಗಿದೆ.

ಗಾಜಿನ ಮಣಿ ಮಾರುವವನನ್ನು ಪೂಸಲವಾಡಾ ಮತ್ತು ಉತ್ಲವಾಡುಗಳೆಂದು ಕರೆಯುತ್ತಾರೆ. ಕಿವಿಯಲ್ಲಿ ತೂತನ್ನು ಹೊಂದಿರುವ ಕೊರವರನ್ನು ಕಾಡು ಕುಟ್ಟುಶಿರವರ ಎನ್ನುತ್ತಾರೆ. ಇವು ಆಂಧ್ರಪ್ರದೇಶದಲ್ಲಿ ಕಂಡುಬರುತ್ತದೆ. ಆದರೆ ಕರ್ನಾಟಕದಲ್ಲಿ ಸೂಜಿ ಪಿನ್ನು, ಮಾರುವ ಜೊತೆಗೆ ಮಣಿಸರಗಳನ್ನು ಪ್ರಸ್ತುತ ಸಂದರ್ಭದಲ್ಲಿ ಬೇಕಾದ ವಸ್ತುಗಳನ್ನು ಮಾರಲು ಬರುವವರುಂಟು. ಅವರೇ ಪೂಸಲವಾಡು ಆಗಿರಬಹುದು. ಇಂದಿಗೂ ಮಣಿಸರಗಳನ್ನು ಮಾರುವುದು ಉಂಟು.

೪. ಸನಾದಿ ಕೊರವರು

ಸನಾದಿ ಕೊರವರು ಎಂಬುದಕ್ಕೆ ಮರಾಠಿ ಪ್ರದೇಶದಲ್ಲಿ ಧಾರ್ಮಿಕ ಸಮಾರಂಭಗಳಲ್ಲಿ ದೇವರಿಗೆ ಪೂಜೆ ಮಾಡುವ ಮತ್ತು ದೇವರ ಮೇಲೆ ಹಾಡುವವರನ್ನು ಉಯಲೋ ಕೊರವರು ಎಂದು ಕರೆಯುತ್ತಾರೆ. ಹಾಗೆಯೇ ಇಲ್ಲಿ ಭಜಂತ್ರಿ ಅಥವಾ ಸೊನೆ ಕೊರವರು ಕೊಳ್ಳ ಹಾಗೂ ಸೊಲ ಕೊರವರು ಎಂಬ ಕೊರವರು ಇದ್ದಾರೆ ಎಂದು ಹೇಳಲಾಗುತ್ತದೆ. ಇದನ್ನು ಗಮನಿಸಿದಾಗ ಹಿಂದೆ ದೇವಾಲಯಗಳಲ್ಲಿ ಓಲಗ ಊದುವ ಮೂಲಕ ಇಂದಿಗೂ ಕೆಲಭಾಗದಲ್ಲಿ ಕಂಡು ಬರುತ್ತಾರೆ. ವಿಶ್ವಪ್ರಸಿದ್ಧಿಯಾದ ಹಂಪಿಯಲ್ಲಿ ವಿರೂಪಾಕ್ಷಸ್ವಾಮಿಗೆ ಸೇವೆಯನ್ನು ಮಾಡುತ್ತಿರುವುದುಂಟು ಕಮಲಾಪುರದಲ್ಲಿ ಕೆಲ ದೇವಾಲಯಕ್ಕೆ ಸೇವೆಯಿದೆ. ಆದರೆ ಜಾಗತೀಕರಣದ ಸಂದರ್ಭದಲ್ಲಿ ಯಂತೋಪಕರಣಗಳನ್ನು ಬಳಸುತ್ತಿರುವುದರಿಂದ ಬಾರಿಸುವುದು ಕಂಡುಬರುವುದಿಲ್ಲ. ಓಲಗ ನುಡಿಸುವವರು ಕಂಡುಬರುತ್ತಾರೆ.

೫. ಕುಕ್ಕೆ ಕೊರವರು

ಕುಕ್ಕೆ ಎಂದರೆ ಬುಟ್ಟಿ. ಬುಟ್ಟಿಯನ್ನು ತಯಾರಿಸುವವರಿಗೆ ಕುಕ್ಕೆ ಕೊರವರು ಎಂದು ಕರೆಯುತ್ತಾರೆ. ಇವರ ವೃತ್ತಿ ಮೋಡಿಕಾರಿಕೆ, ವಡ್ಡಕೊರವರು ಇವರ ವೃತ್ತಿ ವಾಲಗ ಊದುವುದು, ಹಕ್ಕಿ ಕೊವರು ಇವರ ವೃತ್ತಿ ಹಕ್ಕಿಗಳನ್ನು ಹಿಡಿಯುವುದು, ಕಳಕೊರವರು ಇವರ ವೃತ್ತಿ ಕನ್ನ

ಹಾಕಿ ಕಳ್ಳತನ ಮಾಡುವುದು ಎಂಬುದನ್ನು ತಿಳಿಸುತ್ತಾರೆ(ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ಪು.೨೦೧). ಕರ್ನಾಟಕದೆಲ್ಲೆಡೆಯೂ ಬುಟ್ಟಿ ತಯಾರಿಸುವವರು ಕಂಡುಬರುತ್ತಾರೆ.

೬. ಕುಂಚು ಕೊರವರು

ಕೊರವರ ವರ್ಗವೆಂದರೆ ಶುಂಬು ಅಥವಾ ಶುಂಬೆಲರರು ಅವರು ಕಾಡಿನ ಮರಗಳಿಂದ ಬೇರನ್ನು ಸಂಗ್ರಹಿಸಿ, ಉದ್ದನೆಯ ಕುಚ್ಚಗಳನ್ನು ತಯಾರಿಸುವರು. ಇದನ್ನು ನೇಕಾರರು ಉಪಯೋಗಿಸುವರು. ಇಂಥ ವಸ್ತುಗಳನ್ನು ತಯಾರಿಸುವುದರಲ್ಲಿ ನಿಸ್ಸೀಮರು. ಕೊಪ್ಪಳದಲ್ಲಿರುವ ಕುಂಚಿ ಕೊರವರು ಎಂಬ ಹೆಸರು ಹೇಗೆ ಬಂತು ಎಂಬುದನ್ನು ಕರಿಯಪ್ಪ ಅವರು ತಿಳಿಸಿದರು. ಈಚಲು ಗರಿಯ ಬೇರುಗಳನ್ನು ಸಂಗ್ರಹಿಸಿ ಸ್ವಚ್ಛಗೊಳಿಸಿ ನೇಕಾರರು ತಯಾರಿಸುವ ಸೀರೆಗಳ ಶುಭ್ರಗೊಳಿಸಲು ಕುಂಭವನ್ನು ತಯಾರಿಸಿಕೊಡಲಾಗುತ್ತದೆ. ಅದರಿಂದ ಕುಂಚಿ ಕೊರವರು ಎಂದು ಕರೆಯುತ್ತಾರೆ.

೭. ಮಾಕಾಡವಾಲಾ

ಕೊರವರು ಹಳ್ಳಿ ಹಳ್ಳಿಗಳ ಮೇಲೆ ಹೋಗಿ ಕೋತಿಯಾಟವನ್ನು ಆಡಿಸುತ್ತಾ ಭಿಕ್ಷೆ ಬೇಡುತ್ತಾ ಜೀವನ ಸಾಗಿಸುತ್ತಾರೆ. ಇವರು ಮಹಾರಾಷ್ಟ್ರದಲ್ಲಿ ಕಾಣುವರು. ಅವರಿಗೆ ಮಾಕಾಡವಾಲ ಎಂದು ಕರೆಯುತ್ತಾರೆ ಎಂದು ತಿಳಿಸಲಾಗಿದೆ.

"ಸುಬ್ರಹ್ಮಣ್ಯನ ಹೆಂಡತಿಯಾದ ವಳ್ಳಿ ಅಮ್ಮ ಕೊರವ ಹೆಂಗಸು ಎಂದು ಅವರು ಭಾವಿಸುತ್ತಾರೆ. ಇವರು ಹಿಂದೆ ರಾಜರಾಣಿಯರಿಗೆ ಭವಿಷ್ಯ ಹೇಳುವವರಾಗಿದ್ದರು ಮತ್ತು ಸುಬ್ರಹ್ಮಣ್ಯನಿಗೆ ಪುರೋಹಿತರಾಗಿದ್ದೆಂದು ಪ್ರಾಚೀನ ತಮಿಳು ಕೃತಿಗಳು ಹೇಳುತ್ತದೆ ಎಂಬುದನ್ನು (ಕೊರವರ ಸಂಸ್ಕೃತಿ, ಪು.೫೩) ತಿಳಿಸುತ್ತಾರೆ.

"ಬಿದಿರಿನ ಬುಟ್ಟಿ ಮತ್ತಿತರ ಪದಾರ್ಥಗಳನ್ನು ತಯಾರಿಸುವಾಗ ಕಾಲಕ್ಕೆ ತಕ್ಕಂತೆ ನಯಾ ನಾಜೂಕಾಗಿ ಬುಟ್ಟಿಗಳ ಆಕಾರವನ್ನು ವಿನ್ಯಾಸವನ್ನು ಬದಲಾಯಿಸುತ್ತಾರೆ. ಕೆಲವು ಬುಟ್ಟಿಗಳಿಗೆ ಬಣ್ಣ ಹಾಕಿ ಸಿಂಗರಿಸಿ ಮಾರುತ್ತಾರೆ. ಇವುಗಳನ್ನು ಮೆಟ್ಟಿಕುಕ್ಕೆ" ಎಂದು ಹೇಳುತ್ತಾರೆ.

ಅನಂತ ಕೃಷ್ಣ ಅಯ್ಯರ್ ಮತ್ತು ರಾವ್ ಬಹದ್ದೂರ್ ಕರ್ನಾಟಕ ಕೊರವರ ಸಮುದಾಯದ ಹೆಸರಗಳೆಂದರೆ ಎತ್ತಿನ ಕೊರವರು, ಬ್ಯಾರಗಾಮಿ ಕೊರವರು, ಹಗ್ಗದ ಕೊರಮ, ವಾಲಗದ ಕೊರಮ ಮತ್ತು ಕಳ್ಳ ಕೊರಮ ಎಂದು ಗುರುತಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ವಾಲಗದ ಕೊರವರನ್ನು ಕಾಣುತ್ತೇವೆ(The Mysore tribes, vol-1, p.494).

ಮೈಕೆಲ್ ಕೆನಡಿ ಅವರು ಮಹಾರಾಷ್ಟ್ರ ಭಾಗದ ಕೊರವ ಸಮುದಾಯವನ್ನು "chor kaikadis, Goan KaiKadis Kuchadi KaiKadis, Makadvale KaiKadis, Kamati KaiKadis, Kooth Kai Kadis, Keikadis, Kamati Kaikadis, Kooth Kaikadis, Telingana Kaikadis, call koravas, Kaddi or Agadi Koravas, Kunchi Koravas, Korachas, pamulars, Basautri Koravas, Sanadi or oor Koravas" ಎಂದು ತಿಳಿಸಿರುವುದುಂಟು.

೮. ತೆರಿಗೆ ಕೊರವರು

ಇವರು ಹಿಂದೆ ಹಳ್ಳಿಗಳಲ್ಲಿ ಕಳ್ಳತನಗಳಾಗಂತೆ ಊರುಕೇರಿಗಳನ್ನು ರಾತ್ರಿಯಲ್ಲಿ ಕಾಯುತ್ತಿದ್ದರಂತೆ. ಈ ಕೆಲಸಕ್ಕೆ ತೆರಿಗೆ ರೂಪದಲ್ಲಿ ಪ್ರತಿ ಮನೆಯಿಂದಲೂ ಧಾನ್ಯವನ್ನು ಪಡೆಯುತ್ತಿದ್ದರಂತೆ. ಯಾರಾದರೂ ತೆರಿಗೆಯನ್ನು ಕೊಡಲು ನಿರಾಕರಿಸಿದರೆ ಅಂಥವರ ಮನೆಗಳಲ್ಲಿ ಇವರೇ ಕಳ್ಳತನ ಮಾಡುತ್ತಿದ್ದರಂತೆ. ಇವರು ಕಾಯುವ ಸಮಯದಲ್ಲಿ ಕಳ್ಳತನವಾದರೆ ಆ ಕಳ್ಳರನ್ನು ಇವರು ಹಿಡಿಯಬೇಕಾಗಿತ್ತು. ಇಲ್ಲದಿದ್ದರೆ ಕಳ್ಳತನವಾದ ವಸ್ತುಗಳ ಬೆಲೆಯನ್ನು ಕಳೆದುಕೊಂಡವರಿಗೆ ಕೊಡಬೇಕಾಗಿತ್ತಂತೆ. ಇಂಥ ವ್ಯವಸ್ಥೆ ಈಗ ಎಲ್ಲಿಯೂ ಕಂಡುಬರುವುದಿಲ್ಲ ಎಂದು ಬಿ.ಪಿ.ರಾಮಯ್ಯ ಅವರು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯನ್ನು ತಿಳಿಸಿದ್ದಾರೆ (ಬಿ.ಪಿ.ರಾಮಯ್ಯ, ದಕ್ಷಿಣ ಕರ್ನಾಟಕದ ಕೊರಮರು, ಪು.೧೧೨). ಇಲ್ಲಿ ಗಮನಿಸಬಹುದಾದ ಅಂಶವೆನೆಂದರೆ ತೆರಿಗೆ ಸಂಗ್ರಹಿಸುವ ಜವಾಬ್ದಾರಿಯನ್ನು ನೀಡಲಾಗಿತ್ತು ಎಂಬುದು ತಿಳಿಯಬರುತ್ತದೆ. ಕಳ್ಳತನವನ್ನು ತಡೆಯುವ ಕಾರ್ಯದಲ್ಲಿ ಅಥವಾ ಪೋಲೀಸಿನಂತೆ ಕಾರ್ಯಮಾಡಿ ಊರನ್ನು ನೋಡಿಕೊಳ್ಳುವವರಾಗಿದ್ದರು. ಆದರೆ ಬೇರೆಯವರು ಕಳ್ಳತನ ಮಾಡಿದರೆ ಇವರನ್ನು ಹಿಡಿಯದಿದ್ದರೇ ಪ್ರತಿಯಾಗಿ ಇವರು ಹಣ ನೀಡುವುದು ಎಷ್ಟು ಸರಿ ಎಂಬುದನ್ನು ಯೋಚಿಸಬೇಕಾಗುತ್ತದೆ.

ಇಂದು ರಾಜ್ಯರಕ್ಷಣೆಯ ಜವಾಬ್ದಾರಿಯನ್ನು ಪೋಲೀಸ್ ವೃತ್ತಿಯನ್ನು ಮಾಡುತ್ತ ಕಳ್ಳರನ್ನು, ಭ್ರಷ್ಟರನ್ನು ಹಿಡಿಯುವ ಕಾರ್ಯಗಳಲ್ಲಿಯೂ ಕೊರವ ಸಮುದಾಯದ ಅಧಿಕಾರಿಗಳಿರುವುದು ಕಂಡುಬರುತ್ತದೆ. ಬೀದರ್ ಸಿ.ಪಿ.ಐ.ಶರಣಬಸಪ್ಪ ಭಜಂತ್ರಿ, ರಾಘವೇಂದ್ರ ಭಜಂತ್ರಿ, ಸಿ.ಪಿ.ಐ. ಗುಲ್ಬರ್ಗಾದಲ್ಲಿ ಕಂಡುಬರುವುದು. ಎ.ಎಲ್.ವಾಜಂತ್ರಿ ಅವರು ಕೊರವರ ಸ್ಮರಣ ಸಂಚಿಕೆಯಲ್ಲಿ (ಪು.೨೩) ಕುಳುವರು ಎಲ್ಲಾ ಒಂದೇ ಎಂಬ ಲೇಖನದಲ್ಲಿ

೧. ಊರ ಕುಳುವರು, ಡೊಂಗಿ ಕುಳುವರು, ಕುಂಟೆ ಕುಳುವರು ಮತ್ತು ಉರ್ಜುಡಕ ಕುಳುವರು.

೨. ಭಜಂತ್ರಿ ಕೊರವರು(ಸನಾದಿ ಕೊರವರು, ವಾಲಗದವರು, ವಾಜಂತ್ರಿಯವರು, ಬುಟ್ಟಿ ಕೊರವರು).

೩. ಊರ ಕೊರಚರು(ದಬ್ಬೆ ಕೊರಬರು) ಉಪ್ಪ ಕೊರಚರು(ಘಟ್ಟದ ಕೊರಚರು ಅಥವಾ ಎತ್ತನ ಕೊರಚರು)

೪. ಕಡ್ಡಿ ಕೊರವರು ವೃತ್ತಿಗಳಿಗೆ ಆಧಾರವಾಗಿ ಕೊರವರು ಒಳಪಂಗಡಗಳನ್ನು ನೋಡಬಹುದು.

ಭಜಂತ್ರಿ ಕೊರವರು (ಸನಾದಿ ಊದುವುದು)

ತಪ್ಪೈ ಕೊರವರು (ಬಿದರಿನ ಕೆಲಸ ಮಾಡುವುದು)

ಕಾವಲಿ ಕೊರವರು (ಕಾವಲು ಮಾಡುವುದು)

ಕುಂಚಿ ಕೊರವರು (ಕುಂಚನ್ನು ತಯಾರಿಸುವುದು)

ಕೊಡಿಸೆಟ್ಟು (ಬಲೆ ಹೆಣೆಯುವುದು)

ನರಿ ಕೊರವರು (ನರಿ ಬೇಟೆಯಾಡುವುದು)

ಪಚಕುಟ್ಟೆ ಕೊರವರು (ಹಚ್ಚೆ ಹಾಕುವುದು)

ಉಪ್ಪ ಕೊರವರು (ಉಪ್ಪ ತಯಾರಿಸುವುದು)

ಕೂಟಕ್ಕೆ ಕಲಿ ಕೊವರರು (ಕುಣಿಯುವುದು)

ಪೌನ ಕೊರವರು (ಹಾವಾಡಿಸುವುದು)

ರಾಮ ಕೊರವರು (ಕಲ್ಲಿನ ಕೆಲಸ ಮಾಡುವುದು)

ಸಡಿಪಾಟಿ ಕೊರವರು (ಅರಣ್ಯವಾಸಿ)

ಕರುವಿ ಪಿಲ್ಲೈ (ಎಲೆ ತೆಗೆಯುವುದು)

ವೃತ್ತಿಯನ್ನಾಧರಿಸಿ ಕೊರವರ ಒಳಪಂಗಡಗಳನ್ನು ಡಬ್ಲು.ಡೆ.ಹ್ಯಾಚ್ ಅವರು ಹೀಗೆ ಗುರುತಿಸುತ್ತಾರೆ(W.J.Hatch, The hand pirates of India, ch-V, p.63).

"ಇದು ಹುಟ್ಟಿನಿಂದಲೇ ಬರುವ ಜಾತಿಯನ್ನು ಹೇಳುತ್ತದೆನ್ನುವುದಕ್ಕಿಂತ ಸೃಷ್ಟಿಕರ್ಮಗಳಿಂದ ಬರುವ ಮನಸ್ಸಿನ ಸ್ಥಿತಿಯನ್ನು ಸೂಚಿಸುತ್ತದೆನ್ನುವುದು ಹೆಚ್ಚು ಸೂಕ್ತವಾಗಿ ತೋರುತ್ತದೆ. ಆದರೂ ಸಮಾಜದಲ್ಲಿ ಒಂದು ರೀತಿಯಲ್ಲಿ ವಿಭಾಗಗಳು ವೇದಕಾಕದಲ್ಲಿಯೂ ಇಲ್ಲದೆ ಇರಲಿಲ್ಲ. ತಾವು ಸೋಲಿಸಿದ ದಸ್ಯುಗಳು, ನಿಶಾದರು ಮೊದಲಾದ ಆದಿವಾಸಿಗಳನ್ನು ಆರ್ಯರು ಸ್ವಲ್ಪ ದೂರದಲ್ಲಿಟ್ಟಿದ್ದ ಕತೆ ತೋರುತ್ತದೆ. ಅದರಲ್ಲಿಯೂ ಆರ್ಯರನ್ನು ಪ್ರತಿಭಟಿಸಿ ನಿಂತವರಲ್ಲಿ ಪ್ರಧಾನರೆಂದರೆ ದಸ್ಯುಗಳು. ಅಂದರೆ ಬಹುಶಃ ದ್ರಾವಿಡರು. ಅವರು ಸಿಂಧು ಸಂಸ್ಕೃತಿಯನ್ನು ನಾಶ ಮಾಡಿ ಆರ್ಯರು

ಅವರನ್ನು ಹಿಮ್ಮೆಟ್ಟಿಸಿದರು. ಅವರ ಪ್ರಭಾವ ಸಂಪೂರ್ಣವಾಗಿ ಕುಗ್ಗಿರಲಿಲ್ಲ. ಮೂಲಭತವಾದ ಧಾರ್ಮಿಕ ವಿಧಿಗಳಲ್ಲಿ ಈ ಎರಡು ಸಂಸ್ಕೃತಿಗಳಿಗೂ ಭಿನ್ನಾಭಿಪ್ರಾಯವಿತ್ತು. ಆರ್ಯರು ಯಜ್ಞಯಾಗಾದಿ ಕರ್ಮನಿರತರು. ದ್ರಾವಿಡರು ಶಿವಲಿಂಗದ ಆರಾಧಕರು"(ಪು.೩೨, ಕರ್ನಾಟಕ ಸಂಸ್ಕೃತಿ ಸಮೀಕ್ಷೆ).

ಕನ್ನಡ ಎಂಬ ಪದ ದೇಶೀಯವಾದುದು. ಇದರ ಸಂಸ್ಕೃತ ಪದ ಕರ್ಣಾಟಕ ಆಗಿರಬೇಕು. ಕನ್ ಮತ್ತು ನಾಡು ಎಂಬ ಎರಡು ಶಬ್ದಗಳು ಸೇರಿ ಕನ್ನಡು ಅಥವಾ ಕನ್ನಡ ಆಗಿರಬೇಕು. ಇಲ್ಲಿ ಕನ್ ಅಥವಾ ಸಣ್ಣ ಎಂಬುದು ಜನಾಂಗವನ್ನು ಸೂಚಿಸುತ್ತದೆ. ಅಂದರೆ ಕಣ್ಣರನಾಡು ಎಂಬ ಅರ್ಥವನ್ನು ಇದು ಕೊಡುತ್ತದೆ. ಕನ್ನರು ಅಥವಾ ಕಣ್ಣರು ಆರ್ಯಪೂರ್ವದ ಜನಾಂಗವಾದ ಕಳವರ ಅಥವಾ ಕಳ್ಳರ ಎಂಬ ಗುಂಪಿಗೆ ಸೇರಿದರು. ಇವರು ದನಗಾಹಿಗಳಾಗಿದ್ದು, ದನಗಳನ್ನು ಕದ್ದು ಓಡಿಸಿಕೊಂಡು ಹೋಗುತ್ತಿದ್ದಿರಬಹುದು. ಇವರ ಉಪಾದೇವತೆಯೇ ರುದ್ರ ಅಥವಾ ಶಿವ. ರುದ್ರನನ್ನು ಕುರಿತ ಸ್ತುತಿಯಲ್ಲಿ "ಸ್ತೇನಾನಾಂಪತಿಯೇ ನಮಃ" ಎಂಬ ಮಾತು ಬಂದಿರುವುದನ್ನು ಗಮನಿಸಬಹುದು. ಈ ಕಳ್ಳರು ಅಥವಾ ಕಳವರೆ ಮೂಲ ದ್ರಾವಿಡ ಜನಾಂಗ, ಕಣ್ಣರು ಆರ್ಯರ ಸಂಪರ್ಕವನ್ನು ಪಡೆದು ಉಂಟಾದ ಆರ್ಯ, ದ್ರಾವಿಡ ಜನಾಂಗ, ಹೀಗೆ ಋಗ್ವೇದ ಕಾಲದಲ್ಲಿಯೇ ಆರ್ಯ-ದ್ರಾವಿಡರ ಪರಸ್ಪರ ಸಂಪರ್ಕ ಪ್ರಾರಂಭವಾಗಿ ಅದರಿಂದ ಕರ್ನಾಟಕ ಸಂಸ್ಕೃತಿ ರೂಪುಗೊಳ್ಳಲು ಪ್ರಾರಂಭವಾಯಿತು. ಇದು ಈ ಅಭಿಪ್ರಾಯದ ಸಾರ(ಕನ್ನಡದ ನೆಲೆ, ಶಂ.ಬಾ.ಜೋಷಿ).

ಅಧ್ಯಾಯ: ಮೂರು

ಕೊರವ ಸಮುದಾಯದ ಸಂಪ್ರದಾಯಗಳು

ಅಧ್ಯಾಯ: ಮೂರು

ಕೊರವ ಸಮುದಾಯದ ಸಂಪ್ರದಾಯಗಳು

ಜೀವನಾವರ್ತನ ಆಚರಣೆಗಳು

ಸಮಾಜವನ್ನು ಒಂದುಗೂಡಿಸುವ ಶಕ್ತಿಯಾಗಿ ಸಂಪ್ರದಾಯ ಮತ್ತು ಆಚರಣೆಗಳು ಮಾಡುತ್ತವೆ. ಇವು ಮನುಷ್ಯನ ಜೀವನದ ಅವಿಭಾಜ್ಯ ಅಂಗಗಳಾಗಿ ಅವರ ಬದುಕನ್ನು ರೂಪಿಸಿ ಸಂಸ್ಕೃತಿಯನ್ನು ಪೋಷಣೆ ಮಾಡುತ್ತವೆ. ಅಲ್ಲದೆ ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿನಿಷೇಧಗಳಾಗಿ, ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ. ಇಂತಹ ಆಚರಣೆಗಳು ಇರುವುದ ರಿಂದಲೇ ಸಂಪ್ರದಾಯಗಳು ಜೀವಂತವಾಗಿವೆ. ಭೌಗೋಳಿಕ, ಜನಾಂಗಿಕ ಮತ್ತು ಸಾಂಸ್ಕೃತಿಕ ವಾತಾವರಣದ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮಕ್ಕನುಗುಣವಾಗಿ ಸಂಪ್ರದಾಯಗಳು ಹುಟ್ಟಿಕೊಂಡು ಆಚರಣೆಗಳಾಗಿ ಉಳಿದಿವೆ. ಮನುಷ್ಯ ಬೌದ್ಧಿಕ, ಮಾನಸಿಕ ಹಾಗೂ ದೈಹಿಕ ಗುಣ ಧರ್ಮಗಳು ಸಾರ್ವತ್ರಿಕವಾಗಿ ಏಕರೂಪವನ್ನು ಪಡೆದುಕೊಂಡಾಗ ಅವು ಒಂದೇ ವಿಧದ ಸಂಪ್ರದಾಯಗಳಾಗಿ ಮಾರ್ಪಡುತ್ತವೆ. ಇವು ಬೇರೆ ಬೇರೆ ಪ್ರದೇಶಗಳಲ್ಲಿ ಅದರ ಛಾಯೆಯಂತೆ ಕಂಡುಬರುವುದುಂಟು. ಈ ಕಾರಣಗಳಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ನಡೆಯುವ ಸಾಂಪ್ರದಾಯಿಕ ವೃತ್ತಿ, ಹುಟ್ಟು, ಮದುವೆ, ಮರಣಗಳಂತಹ ಆಚರಣೆಗಳಲ್ಲಿ ಸಾದೃಶ್ಯ ಮತ್ತು ವೈದೃಶ್ಯಗಳಿವೆ. ದಿನೇ ದಿನೇ ಅವುಗಳ ಆಚರಣೆಯಲ್ಲಿ ವ್ಯತ್ಯಾಸವಾದರೂ ಅವು ನಶಿಸಿ ಹೋಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಹೊಡೆತವನ್ನು ಲೆಕ್ಕಿಸದೆ ಇನ್ನು ಜೀವಂತವಾಗಿ ನಡೆಯುತ್ತಿವೆ. ಇದು ಕೊರವರ ಸಮುದಾಯದಲ್ಲಿಯೂ ಉಳಿದುಕೊಂಡು ಬಂದಿವೆ. ಆಚರಣೆಗಳು ಅಲ್ಪ ಸ್ವಲ್ಪ ವ್ಯತ್ಯಾಸ ಹೊಂದುತ್ತಾ ಇಂದಿಗೂ ಆಚರಣೆಯಲ್ಲಿದೆ.

ಜನನ

ಮನುಷ್ಯನ ಹುಟ್ಟಿನಿಂದ ಮರಣ ಹೊಂದುವವರೆಗೆ ಒಂದಲ್ಲ ಒಂದು ಆಚರಣೆಗಳು ನಡೆಯು ತ್ತಿರುತ್ತವೆ. ಹೀಗೆ ನಡೆಯುವಾಗ ಅವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಅವು ಒಂದು ಪ್ರದೇಶದ ವಿಭಿನ್ನ ಜನವರ್ಗಗಳು ರೂಢಿಸಿಕೊಂಡಿರುವ ಆಚರಣೆಗಳು ಸಹಜವಾಗಿಯೇ ಬೇರೆಯಾಗಿರುತ್ತದೆ. ಕೆಲವು ಸಲ ಅವು ಒಂದು ಇನ್ನೊಂದರ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಇಲ್ಲವೆ ಸ್ವಲ್ಪ ವ್ಯತ್ಯಾಸವಾದರೂ ಆಗಿ ತನ್ನ ನಿಜ ಸ್ವರೂಪವನ್ನು ಉಳಿಸಿಕೊಂಡು ಬಂದಿರುತ್ತಾರೆ. ಅದರಲ್ಲಿ ಜನನವು ಒಂದು ಆಚರಣೆಯಾಗಿದೆ.

ಮಾನವ ತನ್ನ ಜೀವನದಲ್ಲಿ ಕಾಣುವ ಎರಡು ಮಹತ್ವವಾದ ಘಟ್ಟಗಳು ಒಂದು ಜನನ ಇನ್ನೊಂದು ಮರಣ. ಹುಟ್ಟು ಮತ್ತು ಸಾವು ಈ ಭೌತಿಕ ಜಗತ್ತಿನ ಎಲ್ಲ ಜೀವಿಗಳಿಗೂ ನೈಸರ್ಗಿಕವಾದ ಅನಿವಾರ್ಯತೆಗಳಾಗಿವೆ. ಹೀಗಾಗಿ ಪ್ರಪಂಚದ ಎಲ್ಲ ಜಾತಿ ಜನಾಂಗಗಳಲ್ಲಿ ಹುಟ್ಟು ಸಾವಿನ ಕುರಿತಾದ ನಂಬಿಕೆಗಳು, ಆಚರಣೆಗಳು, ಪರಂಪರಾನುಗತವಾದ ವಿಚಾರಗಳು, ವಿಧಿವಿಧಾನಗಳು ಬೆಳೆದು ಬಂದಿವೆ. ಪ್ರತಿಯೊಬ್ಬರಿಗೂ ಪುತ್ರನೆ ಮುಕ್ತಿಯ ಮಾರ್ಗ ಎಂದು ತಿಳಿದುಕೊಂಡಿದ್ದಾರೆ. ಕೊರವರು ನಾನಾ ಕಡೆಗಳಲ್ಲಿ ಹಂಚಿಹೋಗಿ ರುವುದರಿಂದ ಅವರು ಪ್ರದೇಶಗಳ ಪ್ರಭಾವಕ್ಕನುಸಾರವಾಗಿ ಸಂಪ್ರದಾಯಗಳನ್ನು ಮೈಗೂಡಿಸಿ ಕೊಂಡಿದ್ದಾರೆ.

ಕೊರವರು ಹುಟ್ಟಿದ ಮಗು ಹೆಣ್ಣಾಗಲಿ ಅಥವಾ ಗಂಡಾಗಲಿ ಸಂತೋಷದಿಂದಲೇ ಸ್ವೀಕರಿಸುತ್ತಾರೆ. ಆದರೆ ಗಂಡು ಮಗುವಿನ ಆಸೆ ಮಾತ್ರ ಇದ್ದೇ ಇರುತ್ತದೆ. ಇವರಲ್ಲಿ ಕೆಲವರಿಗೆ ಒಂದು ಡಜನ್ ಮಕ್ಕಳಿರುವುದು ಕಂಡುಬರುತ್ತದೆ. ಅದರಲ್ಲಿ ಹೆಣ್ಣು ಮಕ್ಕಳೇ ಅಧಿಕವಾಗಿರುತ್ತಾರೆ. ಇಂದಿನ ಆಧುನಿಕ ಪ್ರಭಾವದಿಂದ ನಾಲ್ಕು ಐದು ಮಕ್ಕಳಿಗೆ ಸಾಕು ಮಾಡುತ್ತಿದ್ದಾರೆ, ಕೆಲವರು ಅನಕ್ಷರಸ್ಥರೇ ಅಧಿಕವಾಗಿ ಮಕ್ಕಳನ್ನು ಪಡೆಯುತ್ತಾರೆ. ಜೀವನೋಪಾಯದ ಬಗೆಗೆ ತಿಳುವಳಿಕೆ ಇಲ್ಲದವರು ಮಕ್ಕಳು ಕೊಟ್ಟ ದೇವರು ಹುಲ್ಲು ಮೇಯಿಸುತ್ತಾನೆಯೇ ಎಂಬ ಮಾತು ಬೇರೆ. ಹೆರಿಗೆಯಾದವರ ಮನೆಗಳಿಗೆ ಬೇರೆಯವರಿಗೆ ಪ್ರವೇಶವಿರುವುದಿಲ್ಲ. ಕೆಲವು ದಿನಗಳ ನಂತರವೇ ನೋಡಬೇಕಾಗುತ್ತದೆ. ಏಕೆಂದರೆ ತಾಯಿ ಮಗುವಿಗೆ ಹಸಿ ಮೈಯಲ್ಲಿ ಯಾವುದೇ ದುಷ್ಟ ಶಕ್ತಿಗಳು ಮನೆ ಒಳಗೆ ಬರಬಾರದೆಂದು ಈ ರೀತಿ ಮಾಡಲಾಗುತ್ತದೆ. ವೈಜ್ಞಾನಿಕ ಪ್ರಕಾರವೆಂದರೆ ಸೂಕ್ಷ್ಮ ಕಣಗಳು ಒಳಪ್ರವೇಶಿಸುವುದರಿಂದ ಮಗು ಮತ್ತು ತಾಯಿಯ ರಕ್ಷಣೆಯ ಜವಾಬ್ದಾರಿಯು ಮುಖ್ಯವಾಗಿರುತ್ತದೆ. ಇನ್ನೊಂದು ಸೂತಕದ ಮನೆಯೆಂದು ಗುರುತಿಸುವುದು ಕಂಡುಬರುತ್ತದೆ.

ಕೆಲವರು ಮನೆಯಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಹೆಚ್ಚಾಗಿ ಮನೆಯಲ್ಲಿಯೇ ಹೆರಿಗೆ ನಡೆಯುವುದು ಕಂಡುಬರುತ್ತದೆ. ಸೂಲಗಿತ್ತಿಯನ್ನು ಕರೆದುಕೊಂಡು

ಬಂದು ಗರ್ಭಿಣಿ ಸ್ತ್ರೀಯರಿಗೆ ನೋವು ಪ್ರಾರಂಭವಾದಾಗ ಹೆರಿಗೆ ಸುಗಮವಾಗಿ ನಡೆಯಲಿ ಎಂದು ಕೊತ್ತಂಬರಿ ಕಾಳು, ಕರಿಬೇವು ಹಾಕಿ ಬಿಸಿ ನೀರಿನಲ್ಲಿ ಒಂದು ಲೋಟದಷ್ಟು ಕುದಿಸಿ ಗರ್ಭಿಣಿಗೆ ಕೊಡಲಾಗುತ್ತದೆ. ಆದ್ದರಿಂದ ಹೆರಿಗೆ ಸುಲಭವಾಗುತ್ತದೆ ಎಂಬ ನಂಬಿಕೆ ಇದೆ. ಸೂಲಗಿತ್ತಿ ಬಂದು ಸೊಂಟಕ್ಕೆ ಬಿಸಿ ನೀರು ಸ್ನಾನ ಮಾಡಿಸಿ ಬಟ್ಟೆ ಬದಲಾಯಿಸಿ ಕಾಟನ್‌ಬಟ್ಟೆ ತೊಡಿಸುತ್ತಾರೆ. ಕೆಲವರು ಆಸ್ಪತ್ರೆಯ ಸೌಲಭ್ಯವನ್ನು ಪಡೆಯುತ್ತಾರೆ. ಹೆರಿಗೆಯಾದ ಮೇಲೆ ತಾಯಿ ಮಗುವಿಗೆ ಸ್ನಾನಮಾಡಿಸಿ, ತಾಯಿಯ ಪಕ್ಕದಲ್ಲಿ ಹಾಲುಣಿಸಲು ಮಗುವನ್ನು ಕೊಡುತ್ತಾರೆ. ಕೆಲವರು ಗಂಟೆಗಳವರೆಗೆ ಸಕ್ಕರೆ ನೀರನ್ನು ಹನಿ ಹನಿಯಾಗಿ ಹಾಕಲಾಗುತ್ತದೆ. ಹಿಂದಿನ ಕಾಲದಲ್ಲಿ ೪೦-೫೦ವರ್ಷಗಳ ಹಿಂದೆ ಗರ್ಭಿಣಿಯರು ಮನೆಯಲ್ಲಿ, ಹೊಲಗಳಲ್ಲಿ ಒಬ್ಬರೆ ಹೆರಿಗೆ ಮಾಡಿಕೊಂಡು ಇರುತ್ತಿದ್ದರೆಂದು ಮತ್ತು ಆ ದಿನಗಳಲ್ಲಿಯೇ ಮನೆಕೆಲಸ ಮಾಡಿಕೊಂಡು, ಮಗುವನ್ನು ನೋಡಿಕೊಳ್ಳುತ್ತಿದ್ದರೆಂದು ಕೆಲವು ಮಹಿಳೆಯರು ತಿಳಿಸುತ್ತಾರೆ. ಆ ದಿನಗಳಲ್ಲಿ ತಾಯಿ, ಮಗಳು, ಸೊಸೆಯರು ಒಂದರ ನಂತರ ಒಂದರಂತೆ ಹೆರಿಗೆಯಾಗಿ ಬಾಣಂತನಕ್ಕೆ ತವರಿಗೆ ಬರುತ್ತಿದ್ದರು.

"ಹೆರಿಗೆಯಾದ ಮಹಿಳೆಗೆ ಮೂರು ದಿನಗಳವರೆಗೆ 'ಗಂಜಿ' (ಉಪ್ಪಿಟ್ಟಿನ ರವೆ, ಬೆಳ್ಳುಳ್ಳಿ, ಉಪ್ಪು, ತುಪ್ಪ ಹಾಕಿ ಮಾಡಿದ ಆಹಾರ) ಮಾಡಿಕೊಡಲಾಗುತ್ತದೆ. ನಂತರ ಹೆರಿಗೆ ನಂತರ 'ಕರುಳು ಬಳ್ಳಿ'ಯನ್ನು (ಹೊಕ್ಕಳ ಬಳ್ಳಿಯನ್ನು ಹಿಂದೆ ಸೂಲಗಿತ್ತಿಯರು ಕುಡುಗೋಲಿನಿಂದ ಕತ್ತರಿಸುತ್ತಿದ್ದರು. ಈಗ ಅವರಿಗೆ ಆರೋಗ್ಯ ಇಲಾಖೆಯಿಂದ ತರಬೇತಿ ನೀಡಿರುವುದರಿಂದ ಈಗ ಹೊಸ ಬ್ಲೇಡಿನಿಂದ ಹೊಕ್ಕಳ ಬಳ್ಳಿಯನ್ನು ಕತ್ತರಿಸುತ್ತಾರೆ.) ಕತ್ತರಿಸಿ ಮಾಸವನ್ನು ಮನೆಯ ಮುಂದೆ ಹೊಸ ಗಡಿಗೆಯಲ್ಲಿ ಎಡಗಡೆ ಇಡಲಾಗುತ್ತದೆ. ಅದಕ್ಕೆ ಮೂರನೇ ದಿನ ತಾಯಿ ಮಗು ಮತ್ತು ಮೂವರು ಬಾಲಕರಿಗೆ ಕಂಕಣ ಕಟ್ಟಿ ಮಾಸ ಇಟ್ಟ ಜಾಗದವರೆಗೆ ಹಾಲು ತುಪ್ಪ ಹಾಕುತ್ತಾ, ತುಪ್ಪ ನೀಡುತ್ತೇನೆ, ಹಾಲು ಕೊಡು ಎಂದು ಭೂದೇವಿಗೆ ಕೇಳುತ್ತಾ ಹೋಗುತ್ತಾರೆ. ಪೂಜೆ ಮಾಡಿ ಕಾಯಿ ಒಡೆದು ಒಂದು ಕೋಳಿ ಕೊಯ್ದು, ಅದರ ಆಹಾರವನ್ನು ಅವಳಿಗೆ ನೀಡಲಾಗುತ್ತದೆ. ಹೆರಿಗೆ ಮಾಡಿಸಿದವರಿಗೆ ಬಟ್ಟೆ ಕೊಟ್ಟು ಇಲ್ಲವೇ ಊಟ ಮಾಡಿಸಿ ಕಳಿಸಲಾಗುತ್ತದೆ. ಹಾಲು ಕೊಡು ತಾಯಿ ಎಂದು ಬೇಡಿಕೊಳ್ಳಲಾಗುತ್ತದೆ. ಹದಿನಾರು ದಿನಗಳಲ್ಲಿ ಅಥವಾ ಒಂಬತ್ತು ದಿನಗಳಲ್ಲಿ ಗಂಗೆ ಪೂಜೆ ಮಾಡಲಾಗುತ್ತದೆ. ಹೆರಿಗೆಯಾದಾಗ ಮಹಿಳೆಗೆ ಉಷ್ಣವಾದ ಪದಾರ್ಥಗಳನ್ನು ಕೊಡುವುದರಿಂದ ಅವಳಿಗೆ ಶೀತವಾಗದಂತೆ ನೋಡಿಕೊಳ್ಳಲಾಗುತ್ತದೆ. ಉದಾ: ಉಪ್ಪಿಟ್ಟು ರವೆ, ಬೆಳ್ಳುಳ್ಳಿ, ಉಪ್ಪು, ತುಪ್ಪ ಹಾಕಿ ಮಾಡಿದ ಪದಾರ್ಥವಾಗಿದೆ.

ಪ್ರಸವಕ್ಕೆ ಮೊದಲು ಗರ್ಭಿಣಿ ಹೆಂಗಸು ಏನಾದರೊಂದು ಆಸೆಯನ್ನು ಇಟ್ಟುಕೊಂಡಿದ್ದರೆ, ಪ್ರಸವಿಸುವಾಗ ತುಂಬಾ ಕಷ್ಟವಾಗುತ್ತದೆ ಎಂದು ಭಾವಿಸುತ್ತಾರೆ. ಆಗ ಏನನ್ನಾದರೂ ತಿನ್ನಿಸುತ್ತಾರೆ.

ಹಿಂದಿನ ಕಾಲದಲ್ಲಿ ಸೂಲಗಿತ್ತಿಯು ಪ್ರಸವ ವೇದನೆಯಲ್ಲಿ ನಿನ್ನ ಗಂಡನ ಹೆಸರನ್ನು ಹೇಳಮ್ಮ ಎಂದು ಹೇಳುತ್ತ ಬಾಯಿಗೆ ಮಣ್ಣಿನ ಉಂಡೆಯನ್ನು ತಟ್ಟನೆ ಹಾಕಿ ತಿನ್ನುವಂತೆ ಹೇಳಿ ಹಾಸ್ಯಗೊಳಿಸಿ ಪ್ರಸವ ವೇದನೆಯನ್ನು ತಗ್ಗಿಸುತ್ತಾರೆ. ೧೬ ದಿನಗಳವರೆಗೆ ಸೂತಕವನ್ನು ತೆಗೆಯಲಾಗುತ್ತದೆ. ಮಗುವಿಗೆ ಸಾಂಬ್ರಾಣಿ ಹೊಗೆಯನ್ನು ಹಾಕಲಾಗುತ್ತದೆ. ಮನೆಯನ್ನು ಶುದ್ಧ ಮಾಡಿದ ಮೇಲೆ ಆಕಳ ಗಂಜಲದಿಂದ ಮನೆಯಗೆಲ್ಲ ಸಿಂಪಡಿಸುತ್ತಾರೆ. ಬ್ರಾಹ್ಮಣರಲ್ಲಿ ಮಗು ಹುಟ್ಟಿದ ವೇಳೆಯನ್ನು ತಿಳಿಸಿ ಜಾತಕವನ್ನು ಕೇಳಿ ತಿಳಿದುಕೊಂಡು ಪರಿಹಾರವನ್ನು ತಿಳಿದುಕೊಳ್ಳಲಾಗುತ್ತದೆ. ಬ್ರಾಹ್ಮಣರಿಗೆ ದಾನವನ್ನು ಕೊಡಲಾಗುತ್ತದೆ. ಹೆಸರಿಡಲು ಹೆಸರನ್ನು ಕೇಳಿಸಿಕೊಂಡು ಬರುತ್ತಾರೆ. ಅಲ್ಲಿಯವರೆಗೆ ಅಡ್ಡ ಹೆಸರುಗಳಿಂದ ಕರೆಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೆದೇವರ ಹೆಸರಿನಲ್ಲಿ ಮಕ್ಕಳನ್ನು ಕರೆಯಲಾಗುತ್ತದೆ.

ಹೆರಿಗೆಯ ಬಟ್ಟೆಯನ್ನು ಅಗಸಗಿತ್ತಿ ಮಡಿ ಮಾಡಿಕೊಡುತ್ತಾಳೆ. ಅಗಸಗಿತ್ತಿಯು ಗಂಗೆ ಪೂಜೆಗಾಗಿ ಪೂಜಾ ವಸ್ತುಗಳನ್ನು ಪಡೆದುಕೊಳ್ಳುವಳು. ಇಂದಿನ ದಿನಗಳಲ್ಲಿ ಹಣವನ್ನು, ಪೂಜಾ ಸಾಮಾನು ಕೊಡಲಾಗುತ್ತದೆ. ಅಕ್ಕಿ, ಬೆಲ್ಲ, ಬೇಳೆ, ಕೊಬ್ಬರಿ, ಉಡಕ್ಕಿ ಸಾಮಾನು ಕೊಟ್ಟು ಹಣವನ್ನು, ಮಗು ಹುಟ್ಟಿದ ಮೇಲೆ 'ಬಿಸಿ' ಮಾಡಲಾಗುತ್ತದೆ(ಮಗು ಹುಟ್ಟಿದ ತಕ್ಷಣ ಮಗುವಿಗೆ ಬೆಚ್ಚಗೆ ಮಾಡುವುದು ಕಂಡುಬರುತ್ತದೆ. ಇದು ಇಂದು ಕಡಿಮೆಯಾಗುತ್ತಿದೆ. ಏಕೆಂದರೆ ಆಸ್ಪತ್ರೆಯಲ್ಲಿ ಹೆರಿಗೆಯಾದವರು ಮಾಡುವುದಿಲ್ಲ). ಮಗು ಎಚ್ಚರವಾಗುವಂತೆ, ಅಳುವ ಧ್ವನಿಯು ಕೇಳಿಸುವಂತೆ ಮಾಡಲಾಗುತ್ತದೆ. ದುಷ್ಟಶಕ್ತಿಗಳು ಬರದಂತೆ, ಬೆದರುವುದು ಆಗದಂತೆ ಈ ರೀತಿ ಮಾಡಲಾಗುತ್ತದೆ. ಮಗು ಹುಟ್ಟಿದ ೧೬ ದಿನಕ್ಕೆ ಹೆಸರಿಡುವ ಪದ್ಧತಿಯು ರೂಢಿಯಲ್ಲಿದೆ. ಕೆಲವರು ೩ ಅಥವಾ ೫ ತಿಂಗಳುಗಳಲ್ಲಿ ಇಡಲಾಗುತ್ತದೆ. ತಾಯಿ ಮಗುವಿನ ಬಗ್ಗೆ ೩ ತಿಂಗಳವರೆಗೆ ತುಂಬಾ ಕಾಳಜಿ ವಹಿಸುತ್ತಾರೆ. ಆ ದಿನ ನೆಂಟರಿಷ್ಟರನ್ನೆಲ್ಲ ಸೇರಿಸಿ ಅಂದು ಎಲ್ಲರಿಗೂ ಸಡಗರದೊಂದಿಗೆ ಹಬ್ಬದೂಟವನ್ನು ಹಾಕುತ್ತಾರೆ.

ಹೆರಿಗೆಯಾದ ಮಹಿಳೆಗೆ ತವರು ಮನೆಯವರು 'ಕಾರದಚ್ಚು'ನ್ನು (ಕೊಬ್ಬರಿ, ಬೆಲ್ಲ, ಉತ್ತತ್ತಿ, ಕಾರದಚ್ಚು ಅಂಗಡಿಯಿಂದ ತಂದು ಇದರಲ್ಲಿ ಕಲಸಿ ಬಾಣಂತಿಗೆ ಕೊಡಲಾಗುತ್ತದೆ. ಮೈಯಲ್ಲಿ ರಕ್ತ ಉತ್ಪತ್ತಿಯಾಗಲಿ ಎಂದು) ತಂದು ಕೊಡುವರು. ಅವಳಿಗೆ ಕಾವು ಕೊಡಲಾಗುತ್ತದೆ. ಹುಟ್ಟಿದ ಮಗುವಿಗೆ ರೋಗ ರುಜಿನಗಳನ್ನು ತಡೆಯಲು ಮೊನ್ನೆ ಮೊನ್ನೆಯವರೆಗೆ ಕತ್ತೆ ಹಾಲನ್ನು ಹಾಕುತ್ತಿದ್ದರು ಎಂದು ತಿಳಿದು ಬರುತ್ತದೆ. ಸೂಜಿಯಿಂದ ಮಗುವಿಗೆ ನೆತ್ತಿ, ಪಕ್ಕೆಗಳು, ಹೊಟ್ಟೆಯ ಮೇಲೆ ಎದೆಯ ಮೇಲೆ ಕಾಲುಗಳ ಹೆಬ್ಬೆರಳುಗಳ ತುದಿಗಳಿಗೆ ಸುಟಿಕೆ ಹಾಕುತ್ತಿದ್ದರೂ, ಇಂದಿಗೂ ಹಾಕುವುದು ಕಂಡುಬರುತ್ತದೆ. ಕೆಲವು ಸಂಪ್ರದಾಯಸ್ಥರು ಇಂದಿಗೂ ಮಕ್ಕಳಿಗೆ ಕತ್ತೆ ಹಾಲು ಕುಡಿಸುತ್ತಾರೆ.

ನಾಮಕರಣ

ಈ ಆಚರಣೆಯು ಎಲ್ಲಾ ಜನಸಮುದಾಯದಲ್ಲಿ ಕಂಡುಬರುತ್ತದೆ. ಭಿನ್ನತೆ ಮಾತ್ರ ಕಂಡುಬರುತ್ತದೆ. ಸಾಮಾನ್ಯವಾಗಿ ತೊಟ್ಟಿಲಿಗೆ ಅಲಂಕಾರ ಮಾಡಿರುತ್ತಾರೆ. ಕೆಲವರು ೩ ತಿಂಗಳು ಅಥವಾ ೫ ತಿಂಗಳಿಗೆ ನಾಮಕರಣ ಮಾಡಲಾಗುತ್ತದೆ. ಇಲ್ಲಿ ಹೆಣ್ಣಿನ ತಮ್ಮಂದಿರಿಗೆ ಮುಖ್ಯ ಪಾತ್ರವಿರುತ್ತದೆ. ದೇವಾಲಯಗಳಲ್ಲಿ ಅಥವಾ ಮನೆಯಲ್ಲಿ ನಾಮಕರಣ ಮಾಡಲಾಗುತ್ತದೆ. ತವರು ಮನೆಯವರು ತೊಟ್ಟಿಲು, ಹೊಸಬಟ್ಟೆ (ತಾಯಿ, ಮಗುವಿಗೆ) ಬೆಳ್ಳಿ ಉಡದಾರ, ಮುರುವು ತರಬೇಕಾಗುತ್ತದೆ. ಬಂಧು-ಮಿತ್ರರೆಲ್ಲರೂ ಈ ಸಡಗರದಲ್ಲಿ ಭಾಗವಹಿಸುತ್ತಾರೆ. ಹೊಸತೊಟ್ಟಿಲಿಗೆ ಹೂವು ಸುತ್ತಲು ಹಾಕಿ, ತೊಟ್ಟಿಲ ಮೂಲೆಗಳಲ್ಲಿ ಮಂಡಾಳ ಮೂಟೆಯನ್ನು ಹೊಸ ಕರವಸ್ತ್ರದಲ್ಲಿ ಕಟ್ಟಿ ಇಡುತ್ತಾರೆ. ಕೊಬ್ಬರಿ ಬಟ್ಟಲು ಇಟ್ಟಿರುತ್ತಾರೆ. ಜೋಯಿಸರಲ್ಲಿ ಹೋಗಿ ಹುಟ್ಟಿದ ದಿನ, ಸಮಯ ಹೇಳಿ ಒಳ್ಳೆಯದೂ ಕೆಟ್ಟದ್ದು ತಿಳಿದುಕೊಂಡು ದೋಷವಿದ್ದರೆ ಪರಿಹಾರ ತಿಳಿದುಕೊಂಡು ಜನ್ಮದ ಪ್ರಕಾರ ಯಾವ ಹೆಸರು ಬರುತ್ತದೆ ಎಂದು ಕೇಳಿಸಿ ಹೆಸರನ್ನು ಇಡಲಾಗುತ್ತದೆ. ಸೋದರ ಮಾವ ಬಂದು ಮಗುವಿನ ಕಿವಿಯಲ್ಲಿ ಒಂದೊಂದು ಹೆಸರು ಹೇಳಿ ಕೊಬ್ಬರಿ ಬಟ್ಟಲನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಕೊಬ್ಬರಿ ಬಟ್ಟಲನ್ನು ತೆಗೆದುಕೊಂಡು ಹೋಗುವಾಗ ನೆರೆದವರು ಅವಳ ಬೆನ್ನಿಗೆ ಹೊಡೆಯುತ್ತಾರೆ. ೫ ಬಾರಿ ಹೆಸರೇಳಿ ನಂತರ ಅವಳನ್ನು ಒಂದು ಹೆಸರಿನಿಂದ ಕರೆಯುತ್ತಾರೆ.

ಈ ಸಂದರ್ಭದಲ್ಲಿ ತಂದೆ-ತಾಯಿಯನ್ನು ಕೂರಿಸಿ ಆರತಿ ಮಾಡಿ ಬಟ್ಟೆ ಮಾಡಲಾಗುತ್ತದೆ. ನಂತರ ಬಂದವರು ಮಗುವನ್ನು ನೋಡಿ ತಂದ ಉಡುಗೊರೆಯನ್ನು ಕೊಟ್ಟು ಊಟ ಮಾಡಿಕೊಂಡು ಹೋಗುತ್ತಾರೆ. ತಮ್ಮ ಇಷ್ಟ ದೇವರಿಗೆ ಪೂಜೆ ಮಾಡಿಸಿಕೊಂಡು, ಹರಕೆ ಇದ್ದರೆ ಪೂರೈಸಿಕೊಂಡು ಬರುತ್ತಾರೆ. ದೋಷವಿದ್ದರೆ ದಾನವನ್ನು ಬ್ರಾಹ್ಮಣರಿಗೆ ಮಗುವಿನ ಅಥವಾ ತಂದೆ ತಾಯಿಯ ಕೈಯಿಂದ ಕೊಡಲಾಗುತ್ತದೆ. ದೋಷವೆಲ್ಲ ಪರಿಹಾರವಾಗುತ್ತದೆ ಎಂಬ ನಂಬಿಕೆಯಿದೆ. ಹೆಚ್ಚಾಗಿ ಈ ಸಮುದಾಯದಲ್ಲಿ ಕುಲದೇವತೆಯ ಹೆಸರನ್ನು ಇಡುವುದು ಕಂಡುಬರುತ್ತದೆ. ಪುರೋಹಿತರಿಂದ ಶಾಸ್ತ್ರವನ್ನು ಕೇಳಿ ಹೆಸರು ಇಡುತ್ತಾರೆ. ಬೇರೆಯವರಿಗೆ ಊಟ ಹಾಕುವುದರಿಂದ ಸೂತಕ ಹೋಗುತ್ತದೆಂದು ನಂಬಿರುತ್ತಾರೆ. ಸೂತಕವು ಹೋದ ಮೇಲೆ ಬಾಣಂತಿಯನ್ನು ೩ರಿಂದ ೫ ತಿಂಗಳವರೆಗೆ ಆರೈಕೆ ಮಾಡಲಾಗುತ್ತದೆ. ಬಾಣಂತಿಯು ಮಸಾಲೆ ಪದಾರ್ಥವನ್ನು ತಿನ್ನುವಂತಿಲ್ಲ. ಕೆಲವು ಪಥ್ಯಗಳಲ್ಲಿ ಇರಬೇಕಾಗುತ್ತದೆ. ಮೆಣಸಿನ ಸಾರು, ಹಾಲು, ತುಪ್ಪ, ಕಾರದಚ್ಚು ಮೊದಲಾದ ಆಹಾರವನ್ನು ಸೇವಿಸುತ್ತಾಳೆ. ಗಂಗೆ ಪೂಜೆ ಮಾಡಲಾಗುತ್ತದೆ. ತಾಯಿಯನ್ನು ಬಾವಿಗೆ ಅಥವಾ ಬೋರ್‌ವೆಲ್‌ನಲ್ಲಿ ಹೋಗಿ ಮಣ್ಣಿನ ಉಂಡಿ ಇಟ್ಟು ಅನ್ನ, ಹಾಲು, ತುಪ್ಪ, ಹಾಕಿ ಹಾಲು ಕೊಡು ತಾಯಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಗಂಗೆ ಪೂಜೆ ನಂತರ ನೀರನ್ನು ಕೊಡದಲ್ಲಿ ತುಂಬಿಕೊಂಡು ಬರುತ್ತಾರೆ. ಶಾಸ್ತ್ರದ ಕಾರ್ಯ ಮುಗಿದ ನಂತರವೇ ಹೊರಗಡೆ ಹೋಗಬಹುದು ಇಲ್ಲವೇ ಶಾಸ್ತ್ರ ಮಾಡದೇ ಹೋಗುವಂತಿಲ್ಲ.

ಹುಟ್ಟಿದ ಕೂದಲು ತೆಗೆಸುವುದು(ಜಾವುಳ ತೆಗೆಸುವುದು)

ಕೊರವರು ಮಗುವಿಗೆ ಒಂಬತ್ತು ತಿಂಗಳು ಅಥವಾ ಒಂದು ವರ್ಷ ತುಂಬುವುದರೊಳಗೆ ತಮ್ಮ ಕುಲದೇವರಿಗೆ ಮುಡಿ ಕೊಡುತ್ತಾರೆ. ಅಂದರೆ ಹುಟ್ಟಿದ ಮಗುವಿನ ಮೊದಲ ಕೂದಲನ್ನು ದೇವರಿಗೆ ಅರ್ಪಿಸಬೇಕಾಗುತ್ತದೆ. ಈ ರೀತಿಯಲ್ಲಿ ಮಗುವಿಗೆ ಮುಡಿ ಕೊಡುವುದು ಕಡ್ಡಾಯವಾಗಿ ಮಗುವಿನ ಸೋದರಮಾವನಿಂದ ಮಾಡಲಾಗುತ್ತದೆ. ಕೂದಲು ಕತ್ತರಿಯನ್ನು ಎಲೆಗತ್ತರಿ ಮಾಡಿಸಿ, ನಂತರ ಕತ್ತರಿಯಿಂದ ಕತ್ತರಿಸಲಾಗುತ್ತದೆ. ಈ ಕೆಲಸದಲ್ಲಿ ಕ್ಷೌರಿಕನಿಗೆ ಕೆಲಸವಿರುತ್ತದೆ. ತಮ್ಮ ಸಾಮಾನುಗಳಿಗೆ ಪೂಜೆ ಮಾಡಿ ನಂತರ ಮಗುವಿನ ಸೋದರ ಮಾವನಿಂದ ಮಗುವಿಗೆ ಕೂದಲನ್ನು ಶಾಸ್ತ್ರೀಯವಾಗಿ ಕತ್ತರಿಸಿದ ನಂತರ ಕ್ಷೌರಿಕನು ಸಂಪೂರ್ಣವಾಗಿ ಕೂದಲನ್ನು ತೆಗೆಯುತ್ತಾನೆ. ಈ ಕೆಲಸಕ್ಕೆ ಆತನಿಗೆ ಅಕ್ಕಿ, ಬೆಲ್ಲ, ಬೇಳೆ ಕಾಣಿಕೆಯನ್ನು ಕೊಡಲಾಗುತ್ತದೆ. ವೀಳೆ ಜೋಡಿ ಎಲೆಗಳಿಂದ ಮಗುವಿನ ಸೋದರ ಮಾವನು ಆಕಡೆ ಈಕಡೆ ಹಿಂದಕ್ಕೆ ಮುಂದಕ್ಕೆ ತಲೆಯ ಮೇಲೆ ಎಲೆ ಕತ್ತರಿಸಿ ಹಾಕಿ ನಂತರ ಕತ್ತರಿಯಿಂದ ಕೂದಲನ್ನು ತೆಗೆಸುವುದುಂಟು. ಕೂದಲು ಕತ್ತರಿಸಿದ ನಂತರ ತಾಯಿ ಮಗುವಿಗೆ ಸ್ನಾನ ಮಾಡಿಸಿ ತವರು ಮನೆಯವರು ಹೊಸಬಟ್ಟೆ ತಂದಿರುತ್ತಾರೆ. ಏಕೆಂದರೆ ತವರು ಮನೆಯವರ ಆಶೀರ್ವಾದ ಮತ್ತು ಹರಕೆ ಸದಾ ಮಗಳ ಮೇಲೆ ಇರಬೇಕೆಂದು ಈ ರೀತಿ ಮಾಡಲಾಗುತ್ತದೆ.

ಮಗುವನ್ನು ದೇವಸ್ಥಾನದ ಸುತ್ತಲೂ ಎತ್ತಿಕೊಂಡು ಪ್ರದಕ್ಷಿಣೆ ಹಾಕುತ್ತಾರೆ ದೇವರ ಸನ್ನಿದಾನದಲ್ಲಿ ಹೋಗಿ ಎಲ್ಲಾ ಕಷ್ಟಗಳನ್ನು ಪರಿಹರಿಸಿದ್ದಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಮಗುವಿನ ಕೈಯಿಂದ ದೇವರಿಗೆ ದಕ್ಷಿಣೆ ಹಾಕಿಸಿ ದೇವರ ಎದುರಿಗೆ ಅಡ್ಡ ಬೀಳಿಸುತ್ತಾರೆ. ದೇವರ ಪೂಜಾರಿಯಿಂದ ಮಗುವಿನ ಮುಖಕ್ಕೆ ತೀರ್ಥ ಹಾಕಿಸಿ ತಾನು ತೀರ್ಥಪ್ರಸಾದ ತೆಗೆದುಕೊಂಡು ಅಡುಗೆ ಮಾಡಿಸಿದರೆ ಸಿಹಿಊಟ ಮಾಡಿಕೊಂಡು ಹೋಗುತ್ತಾರೆ. ಹುಟ್ಟಿದ ಕೂದಲನ್ನು ತೆಗೆಸದಿದ್ದರೆ ಮಕ್ಕಳು ಬಹಳ ಹಟ ಮಾಡುತ್ತಾರೆ ಎಂಬುದು ಇವರ ನಂಬಿಕೆಯಾಗಿದೆ.

ಕಿವಿ ಚುಚ್ಚುವುದು

ನಿರ್ದಿಷ್ಟ ಪಡಿಸಿದ ದಿನದಂದು ಸೋದರ ಮಾವನಿಂದ ಮಗುವಿನ ಕಿವಿಗೆ ಮುಟ್ಟಿಸುತ್ತಾರೆ. ನಂತರ ಬಂಗಾರದಿಂದ ಕಿವಿಯನ್ನು ಚುಚ್ಚಿಸಲಾಗುತ್ತದೆ. ಇಂದಿನ ದಿನಗಳಲ್ಲಿ ಬಂಗಾರದ ಅಂಗಡಿಗೆ ಹೋಗಿ ಕಿವಿ ಚುಚ್ಚಿಸಿಕೊಂಡು ಬರುವುದು ಕಂಡುಬರುತ್ತದೆ. ಮಣೆಯ ಮೇಲೆ ತಾಯಿ ಮಗು ಕೂಡಿಸಿ ಆರತಿ ಮಾಡಿ, ಅಕ್ಷತೆ ಹಾಕಿ ಪೂಜೆ ಮಾಡುತ್ತಾರೆ. ಕಿವಿಯನ್ನು ಚುಚ್ಚಿ

ನಂತರ ಬಂದವರೆಲ್ಲ ಮುಯ್ಯಿ ಮಾಡಿ, ಸಿಹಿಊಟ ಮಾಡಿ ಮನೆಗಳಿಗೆ ಹೋಗುತ್ತಾರೆ. ಕಿವಿ ಚುಚ್ಚುವುದರಿಂದ ಮಗುವಿಗೆ ಮುಟ್ಟು ದೋಷ, ಸೂತಕವಾದಂತೆ ತಡೆಯಲೂ, (ಮಗು ಜನಿಸಿದ ಮೇಲೆ ಬಿಸಿಲಿಗೆ ಮೊರದಲ್ಲಿ ಮಲಗಿಸಿ ಇಡಲಾಗುತ್ತದೆ. ಎಳೆ ಬಿಸಿಲಿನಲ್ಲಿ ಇಟ್ಟರೆ ಮಗುವಿಗೆ A ವಿಟಮಿನ್ ದೊರೆಯುತ್ತದೆ. ಮತ್ತು ರಕ್ತ ಸಂಚಲನೆ ಆಗುತ್ತದೆ ಎಂಬ ನಂಬಿಕೆ ಇದೆ.) ಹೆಣ್ಣು ಮಕ್ಕಳು ಮುಟ್ಟಾದ ಸಂದರ್ಭದಲ್ಲಿ ಅಥವಾ ಯಾವುದೇ ಊರಿಗೆ ಹೋಗುವ ಸಂದರ್ಭದಲ್ಲಿ ಮುಟ್ಟಾದವರ ನೆರಳು ಅಥವಾ ಮಗುವನ್ನು ಮುಟ್ಟಾದವರು ಮುಟ್ಟಿದರೆ ದೋಷವಾಗಿ ಮಗು ಬಳಲುತ್ತದೆ. ಇದನ್ನು ತಡೆಯಲು ಕಿವಿ ಚುಚ್ಚಿದರೆ ಇಂತಹ ದೋಷವಾಗುವುದಿಲ್ಲ ಎಂಬ ನಂಬಿಕೆ ಇಂದಿಗೂ ಇದೆ.

ಮುಟ್ಟು ದೋಷವನ್ನು ಪರಿಹಾರ ಮಾಡಲು ಹಾಗಲಕಾಯಿ ಎಲೆಯನ್ನು ತೆಗೆದುಕೊಂಡು ಮಗುವನ್ನು ಬಾಗಿಲ ಮೇಲೆ ಕೂರಿಸಿ ಅತ್ತೆಯಾದವರು ಅಥವಾ ಚಿಕ್ಕಮ್ಮನವರು ಎಲೆಗಳ ರಸವನ್ನು ನೆತ್ತಿಯ ಮೇಲೆ ಮೂರು ದಿನಗಳವರೆಗೆ ಅದು ಗುರುವಾರ ಅಥವಾ ಭಾನುವಾರ ದಿನವೇ ಹಿಡಿಯ ಬೇಕಾಗುತ್ತದೆ. ಸಂಜೆ ಸಮಯದಲ್ಲಿ ಇದನ್ನು ಮಾಡಬೇಕು. ಸೊಪ್ಪನ್ನು ನೆತ್ತಿ ಮೇಲೆ ಇಟ್ಟು ಈ ರೀತಿಯಾಗಿ ಮಾಡುವುದರಿಂದ ದೋಷ ಹೋಗುತ್ತದೆ ಎಂಬ ನಂಬಿಕೆ ಇದೆ. ಇದು ಸತ್ಯವೂ ಹೌದು. ಇದರಿಂದಾಗಿ ಮಗುವಿಗೆ ೫ ವರ್ಷದೊಳಗೆ ಅಥವಾ ೧ ವರ್ಷದೊಳಗೆ ಕಿವಿ ಚುಚ್ಚುವ ಕಾರ್ಯ ಮಾಡಲಾಗುತ್ತದೆ. ಕೆಲವು ಸಂಪ್ರದಾಯಗಳು ಆಧುನಿಕತೆಯ ಪ್ರಭಾವದಿಂದ ಕಡಿಮೆಯಾಗುತ್ತಿರುವುದು ಒಂದು ವಿಪರ್ಯಾಸವೇ ಆಗಿದೆ ಎಂದು ಹೇಳಬಹುದು.

ಋತುಮತಿ

ಕೊರವ ಜನಾಂಗದಲ್ಲಿ ಜನನದ ಸೂತಕದಂತೆಯೇ ಈ ಋತುಮತಿಯ ಸೂತಕವನ್ನು ಬಹಳ ಕಟ್ಟುನಿಟ್ಟಾಗಿ ಆಚರಿಸುತ್ತಿದೆ. ಸೂತಕವೆಂದರೆ, ಇದರಿಂದ ಮನೆಯು ಮೈಲಿಗೆಯಾಯಿತೆಂದೂ ಈ ಮೈಲಿಗೆ ಕಳೆಯಬೇಕಾದರೆ ಮನೆಯನ್ನೆಲ್ಲಾ ಚೊಕ್ಕಟವಾಗಿ ಅವರ ಮನೆ ದೇವತೆಯ ಗುಡಿಯನ್ನು ಸುಣ್ಣಬಣ್ಣಗಳಿಂದ ಶುದ್ಧಗೊಳಿಸಿ ಒಂದು ನಿರ್ದಿಷ್ಟಪಡಿಸಿದ ದಿನ ಕುಲ ಪುರೋಹಿತರಿಂದ ಪೂಜಾ ವಿಧಾನಗಳನ್ನು ಆಚರಿಸುತ್ತಾರೆ. ಅಲ್ಲಿಗೆ ಸೂತಕ ಪರಿಹಾರವಾಯಿತೆಂದು ನಂಬಿಕೆ ಉಳ್ಳವರಾಗಿದ್ದರೆ ಈ ಸೂತಕದ ಸಮಯದಲ್ಲಿ ಯಾವುದೇ ದೇವರಿಗೂ ಪೂಜಾದಿಗಳನ್ನು ಮಾಡುವುದಿಲ್ಲ. ತಮ್ಮ ಕುಲದ ಕುಟುಂಬಗಳನ್ನು ಬಿಟ್ಟು ಬೇರೆಯವರ ಮನೆಗೆ ಹೋಗುವುದಿಲ್ಲ. ಈ ಸೂತಕವೂ ಕೇವಲ ಒಂದು ಮನೆಗೆ ಸಂಬಂಧಿಸುವುದಲ್ಲ. ಸೂತಕದ ಮನೆಯ ರಕ್ತ ಸಂಬಂಧಿ ಕುಟುಂಬಗಳಿಗೂ ಸಂಬಂಧಿಸಿರುತ್ತದೆ. ಅವರು ಸಹ ಸೂತಕವನ್ನು ಕಳೆದುಕೊಳ್ಳಬೇಕು, ಸೂತಕವನ್ನು ತೆಗೆದ ಮೇಲೆ ದೇವರಿಗೆ ಪೂಜೆ ಮಾಡಲಾಗುತ್ತದೆ.

ಹೆಣ್ಣು ಋತುಮತಿಯಾದಾಗ ತನ್ನ ಬದುಕಿನಲ್ಲಿ ಮೊಟ್ಟ ಮೊದಲು ಬಾರಿಗೆ ಜೈವಿಕ ಬದಲಾವಣೆಯಾಗುತ್ತಿರುವುದನ್ನು ಅನುಭವಿಸುತ್ತಾಳೆ. ಹುಡುಗಿ ಜೀವೋತ್ಪಾದನೆಗೆ ಸಿದ್ಧಳಾದುದನ್ನು ಸೂಚಿಸುವ ಹೆಣ್ಣಿಗೆ ಪ್ರಾಯ ಒಂದು ಪ್ರಥಮ ಋತುಮತಿಯಾದಾಗ ಕೆಲವು ನಿಯಮಗಳು ಅಥವಾ ಕಟ್ಟುಕಟ್ಟಳೆಗಳು ಹಿಂದಿನ ಕಾಲದಲ್ಲಿ ನಡೆಯುತ್ತಿತ್ತು. ಇಂದು ಸಹ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುವುದುಂಟು. ಇಂದಿನ ಕಾಲದಲ್ಲಿ ಕೆಲವರು ಋತುಮತಿಯ ಕಾರ್ಯವನ್ನು ಮಾಡುವುದಿಲ್ಲ. ಮುಂದೆ ಮದುವೆಗೆ ಮುಂಚೆಯೇ ಇರುವ ಕಾರ್ಯಕ್ರಮವನ್ನು ಮಾಡಿ ಮದುವೆಯನ್ನು ಮಾಡಲಾಗುತ್ತದೆ. ಹಿಂದೆ ಋತುಮತಿಯಾದಾಗ ಬೇರೆಯದೇ ಗುಡಿಸಿಲಿನಲ್ಲಿ ಇಡುತ್ತಿದ್ದರು ಎಂದು ತಿಳಿಸಲಾಗುತ್ತದೆ. ಮೈನೆರೆದ ಸಂದರ್ಭದಲ್ಲಿ ಹೆಣ್ಣು ಎಲ್ಲಿಗೂ ಹೋಗದೆ ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಹೊರಗೆ ಹೋಗಬೇಕಾದರೆ ಬೆಳಿಗ್ಗೆ ಬೇಗನೆ ಎದ್ದು ಹೋಗಬೇಕು ಅಥವಾ ರಾತ್ರಿ ಸಮಯದಲ್ಲಿ ಹೋಗಬೇಕಾಗುತ್ತದೆ. ಅಂದರೆ ಯಾರ ಕಣ್ಣಿಗೂ ಬೀಳಬಾರದೆಂಬ ನಂಬಿಕೆ ಇದೆ. ಇದು ಅವಳ ಪಾಲಿಗೊಂದು ಸೆರೆಮನೆಯಾದರೂ, ಮನೆ ಮಂದಿಗೆಲ್ಲಾ ಸಂಭ್ರಮ ಸಂತೋಷದ ವಿಷಯವಾಗಿರುತ್ತದೆ.

ಮೈನೆರೆದ ದಿನದಂದು ಹುಡುಗಿಗೆ ಕೋಣೆಯ ಮೂಲೆಯಲ್ಲಿ ಕೂರಿಸಿ, ಮುತ್ತೈದೆಯರಿಗೆ ಅಥವಾ ಹತ್ತಿರದಲ್ಲಿದ್ದ ಅತ್ತೆ ಇಲ್ಲವೆ ಅಕ್ಕನ ಕೈಯಿಂದ ಹಾಲು, ತುಪ್ಪ, ಮೊಸರು, ಎಣ್ಣೆ ಅರಿಶಿನ ಮೊದಲಾದವನ್ನು ಮೈಗೆಲ್ಲ ಹಚ್ಚಿ ೫ ಜನ ಮುತ್ತೈದೆಯರಿಂದ ಅವಳಿಗೆ ಮಂಗಳ ಸ್ನಾನ ಮಾಡಿಸುತ್ತಾರೆ. ಅರಿಶಿನದ ನೀರು ಬಿದ್ದ ಮೇಲೆ ಅವಳು ಎಲ್ಲಿಗೂ ಹೋಗುವಂತಿಲ್ಲ, ಹಸಿ ಮೈ ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಅವಳಿಗೆ ಕೈಯಲ್ಲಿ ಒಂದು ಕಬ್ಬಿಣದ ಕತ್ತಿ, ನಿಂಬೆಹಣ್ಣು ಕೊಡಲಾಗುತ್ತದೆ. ಅವಳಿಗೆ ಪ್ರತ್ಯೇಕವಾದ ಹಾಸಿಗೆಯಲ್ಲಿ ಊಟದ ತಟ್ಟೆ, ಕುಡಿಯಲು ನೀರು ಪ್ರತ್ಯೇಕವಾಗಿ ನೀಡಲಾಗುತ್ತದೆ. ಕಸಬರಿಗೆಯು ಅವಳ ತಲೆಯ ದಿಂಬಿಗೆ ಇಡಲಾಗುತ್ತದೆ. ಇದರಿಂದ ಅವಳಿಗೆ ಯಾವುದೇ ದುಷ್ಟಶಕ್ತಿಯು ತಗಲಬಾರದೆಂದು ಕೆಟ್ಟ ಕನಸು ಬೀಳಬಾರದೆಂದು ಈ ರೀತಿ ಮಾಡಲಾಗುತ್ತದೆ.

ಋತುಮತಿಯಾದ ಹುಡುಗಿಗೆ ಮೂರು ದಿನಗಳವರೆಗೆ ಸಿಹಿ ಪದಾರ್ಥಗಳನ್ನು ಕೊಡುತ್ತಾರೆ. ಅಕ್ಕ ಪಕ್ಕದವರು ಸಹ ಹುಡುಗಿಗೆ ತಮ್ಮ ಕೈಲಾದ ಆಹಾರವನ್ನು ತಂದು ಕೊಡುತ್ತಾರೆ. ಈ ಸಂದರ್ಭದಲ್ಲಿ ಋತುಮತಿಯಾದ ಮನೆಗೆ ಪ್ರವೇಶಿಸುವಂತಿಲ್ಲ. ಏಕೆಂದರೆ ಆ ಮನೆಯ ಸೂತಕ ಅಥವಾ ಮುಡುಚಟ್ಟು ಆಗಿರುತ್ತದೆ. ಇವಳಿಗೆ 'ಕಾರದಚ್ಚು' (ಋತುಮತಿಯಾದ ಹುಡುಗಿಗೆ ಬೆಲ್ಲ, ಕೊಬ್ಬರಿ ಮತ್ತು ಉತ್ತತ್ತಿ, ಶುಂಠಿ, ಯಾಲಕ್ಕಿ ಹಾಕಿ ಕುಟ್ಟಿದಂತಹ ಪದಾರ್ಥಕ್ಕೆ 'ಕೊಬ್ಬರಿ ಕಾರ' ಎಂದು ಕರೆಯುತ್ತಾರೆ. ಅದಕ್ಕೆ ತುಪ್ಪ ಸೇರಿಸಿ ತಿನ್ನಲು ಪ್ರತಿದಿನ ೨ ಬಾರಿ ಕೊಡಲಾಗುತ್ತದೆ. ಏಕೆಂದರೆ ಅವಳಿಗೆ ರಕ್ತ ವೃದ್ಧಿಯಾಗಲಿ ಮತ್ತು ಶಕ್ತಿ ಬರಲೆಂದು) ಮೂರು ದಿನಗಳ ನಂತರ

ಕೊಡಲಾಗುತ್ತದೆ. ಮನೆಯನ್ನು ೯ ಅಥವಾ ೧೬ ದಿನ ಶುದ್ಧ ಮಾಡಿದ ಮೇಲೆ ಮನೆಯೊಳಗೆ ಬೇರೆಯವರಿಗೆ ಪ್ರವೇಶ ಮಾಡಲಾಗುತ್ತದೆ. ಹಿಂದಿನ ಕಾಲದಲ್ಲಿ ಮನೆಯ ಹೊರಗೆ ಅಂಗಳದಲ್ಲಿ ಗುಡಿಸಲು ಹಾಕಿ ಸೂತಕ ತೆಗೆಯುವವರೆಗೆ ಅಲ್ಲಿಯೇ ಇರಬೇಕಾಗಿತ್ತು. ಈ ದಿನಗಳಲ್ಲಿ ಮನೆಯೊಳಗೆ ಒಂದು ಮೂಲೆಯಲ್ಲಿ ಕೂರಿಸುತ್ತಾರೆ. ಕೆಲವರು ಸೋಬಾನೆ ಪದಗಳನ್ನು ಹಾಡುತ್ತಾರೆ. ಹಿರಿಯರು ಹೋದಂತೆಲ್ಲ ಸಾಹಿತ್ಯವೂ ಅವರ ಹಿಂದೆಯೇ ಹೋಯಿತು ಎಂದು ಹೇಳಬಹುದು. ಆಸಕ್ತಿ ಇಲ್ಲದಿರುವುದು, ಹಿರಿಯರು ಹೇಳಿದ್ದನ್ನು ಸರಿಯಾಗಿ ಆಲಿಸದೆ ಇರುವುದು ಕಲಿಯದಿರಲೂ ಕಾರಣವಾಗಿವೆ. ಕ್ಷೇತ್ರಕಾರ್ಯದಲ್ಲಿ ಹೋದಾಗ ಹಾಡು ಹೇಳಿಯೆಂದು ಕೇಳಿದರೆ ನಮಗೆ ಬರುವುದಿಲ್ಲ. ನಮ್ಮ ಅಜ್ಜಿಗೆ ಬರುತ್ತದೆ ಎಂದು ಉತ್ತರ ನೀಡುತ್ತಾರೆ. ನಾಚಿಕೆ ಸ್ವಭಾವದವರು ಹೇಳಲು ಹಿಂದೆ ಮುಂದೆ ಮಾಡುವುದು ಕಂಡುಬರುತ್ತದೆ. ೫ನೇ ದಿನಗಳಲ್ಲಿ ಸ್ನಾನ ಮಾಡಿಸಿ, ಗಂಗೆ ಪೂಜೆಯನ್ನು ಮಾಡಿಸುತ್ತಾರೆ. ಕೆಲವರು ೧೬ನೇ ದಿನದಂತೆ ಮುಂಜಾನೆಯಲ್ಲಿ ಮಾಡುತ್ತಾರೆ. ನೀರಿನ ಬಿಂದಿಗೆ ತೆಗೆದುಕೊಂಡು ಹೋಗಿ ಬಾವಿಗೆ ಅಥವಾ ಬೋರ್‌ವೆಲ್‌ಗಳಿಗೆ ಪೂಜೆ ಮಾಡಿ ನೀರಿನೊಂದಿಗೆ ಮನೆಗೆ ಬರುತ್ತಿದ್ದರು. ಕೆಲವರು ಮನೆಯಲ್ಲಿಯ ಪೈಪ್‌ಗಳಿಗೆ ಪೂಜೆ ಮಾಡುತ್ತಾರೆ. ನಂತರ ಮನೆಗೆ ಸುಣ್ಣ ಬಳಿದು, ಮನೆ ಸಾರಿಸಿ, ಗೋಮೂತ್ರದಿಂದ ಮನೆಯನ್ನು ಚಿಮುಕಿಸಿ ಶುದ್ಧ ಮಾಡಿ, ಪೂಜೆ ಮಾಡಲಾಗುತ್ತದೆ. ೧೬ನೇ ದಿನ ಮುಂಜಾನೆಯೇ ಎದ್ದು ಮುಳ್ಳು ಗಿಡವನ್ನು ಮುಟ್ಟಿ ಅವಳಿಂದ ಪೂಜೆ ಮಾಡಿ ಅದನ್ನು ಕತ್ತರಿಸಿಕೊಂಡು ಹಾಕಿ ಬರುತ್ತಾರೆ. ಏಕೆಂದರೆ ಯಾವುದಾದರೂ ದೋಷವಿದ್ದರೆ ಆ ಗಿಡಕ್ಕೆ ಹೋಗುತ್ತದೆ ಎಂಬ ನಂಬಿಕೆ ಇದೆ. ಈ ದಿನಗಳಲ್ಲಿ ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳಬಾರದು, ಮಗುವಿಗೆ ಮುಟ್ಟುದೋಷವಾಗುತ್ತದೆ ಅಥವಾ ಮಗು ಒಣಗಿಕೊಂಡು ಹೋಗುತ್ತದೆ ಎಂಬ ನಂಬಿಕೆ ಇದೆ. ಋತುಮತಿಯಾದ ಹುಡುಗಿಗೆ ಪ್ರತಿದಿನವೂ ಸ್ನಾನ ಮಾಡಿಸಲಾಗುತ್ತದೆ. ಮೈಲಿಗೆ ಬಟ್ಟೆಯನ್ನು ಅಗಸರಿಗೆ ಕೊಡಲಾಗುತ್ತದೆ. ಅವರಿಗೆ ಕಾಣಿಕೆ ಅಥವಾ ಅಕ್ಕಿ, ಬೆಲ್ಲ, ಬೇಳೆ, ಕೊಬ್ಬರಿ ಬಟ್ಟಲು, ಉತ್ತತ್ತಿ, ಬೆಳ್ಳುಳ್ಳಿ ಇಟ್ಟು ಕೊಡಲಾಗುತ್ತದೆ.

ಒಂಬತ್ತು ದಿನ ಅಥವಾ ಹದಿನಾರು ದಿನ ಹುಡುಗಿಯನ್ನು ಎಬ್ಬಿಸುವ ಕಾರ್ಯ ಇರುತ್ತದೆ. ಆ ದಿನದಲ್ಲಿ ಮನೆಯವರಿಗೆ ಅಥವಾ ಬಂಧುಮಿತ್ರರಿಗೆ ಸಡಗರವಾಗಿರುತ್ತದೆ. ಸಂಬಂಧಿಕರಿಗೆಲ್ಲ ಹೇಳಿ ಕಳಿಸಿರುತ್ತಾರೆ. ಮೊದಲ ಸೀರೆಯು ತವರು ಮನೆಯವರದಾಗಿರುತ್ತದೆ. ನಂತರ ಅಜ್ಜಿ ಅಥವಾ ಅತ್ತೆ ಮಡಿಲಿಗೆ 'ಉಡಕ್ಕಿ' ತುಂಬುತ್ತಾರೆ. (ಮಡಿಲಕ್ಕಿ: ಅಕ್ಕಿ, ೨ ಕೊಬ್ಬರಿ ಬಟ್ಟಲು, ಬೆಲ್ಲದ ಚೂರು, ಉತ್ತತ್ತಿ, ೨ ಎಲೆ, ೨ ಅಡಿಕೆ, ಸೀರೆ ಕುಪ್ಪಸ, ಬಳೆ, ಹೂವು ಮಡಿಲಿಗೆ ಇಡಲಾಗುತ್ತದೆ) ಇದನ್ನು ಶಾಸ್ತ್ರೋಕ್ತವಾಗಿ ಮಾಡಲಾಗುತ್ತದೆ. ಇಂದಿನ ದಿನಗಳಲ್ಲಿ ವೈಭವವಾಗಿ ಮಾಡುವವರು ಇದ್ದರೂ, ಸಾಧಾರಣವಾಗಿ ಮಾಡುವವರೂ ಕಂಡುಬರುತ್ತಾರೆ.

ನಂತರ ಬಂದವರೆಲ್ಲರೂ ಕೈಲಾದ ಬಟ್ಟೆ ಬರೆ, ಉಡುಗೊರೆ, ಬಂಗಾರದ ವಸ್ತು ಕೊಟ್ಟು, ಸಿಹಿ ಊಟ ಮಾಡಿಕೊಂಡು ಹೋಗುತ್ತಾರೆ. ಋತುಮತಿಯಾಗುವುದಕ್ಕಿಂತ ಮೊದಲೇ ಮದುವೆ ಮಾಡಿ ಕಳಿಸುತ್ತಾರೆ. ಋತುಮತಿಯಾದ ಮೇಲೆಯೇ ಸಂಸಾರಕ್ಕೆ ಕಳಿಸುತ್ತಾರೆ. ಕೆಲವರು ತಂದೆ ತಾಯಿಗಳಿಗೆ ಮಕ್ಕಳ ಮದುವೆ ಬಗೆಗೆ ಚಿಂತೆ ಇರುತ್ತದೆ ಫಲವಂತಿಕೆಯ ಪ್ರತಿರೂಪವಾಗಿದೆ. ಈ ಋತುಮತಿಯ ಕಾರ್ಯ ಮಾಡಲಾಗುತ್ತದೆ. ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ತಂದೆಯು ಮಗಳನ್ನು ಎಬ್ಬಿಸಿದ ನಂತರ ಬಂಧುಬಾಂಧವರು ಮಾಂಸದೂಟ ಮಾಡಿಸಿ ಕಳಿಸುತ್ತಾರೆ. ನಂತರ ಎಂದಿನಂತೆ ಮತ್ತೆ ಹುಡುಗಿಯು ವ್ಯಾಪಾರದಲ್ಲಿ ತೊಡಗುತ್ತಾಳೆ.

ಋತುಮತಿಯಾದ ಹುಡುಗಿಯನ್ನು ಹಿಂದೆ ಸ್ನಾನ ಮಾಡಲು ಮನೆಯ ಪಕ್ಕದಲ್ಲಿಯೇ ಗುಂಡಿಯನ್ನು ತೆಗೆದು ಸ್ನಾನ ಮಾಡಿಸುತ್ತಿದ್ದರೂ, ೫ನೇ ದಿನದ ನಂತರ ಗುಂಡಿಯನ್ನು ಮುಚ್ಚಿ ಪೂಜೆ ಮಾಡಬೇಕೆಂದು ನಿಯಮವಿದೆ. ಇಂದು ಆಧುನಿಕತೆಯ ಪ್ರಭಾವದಿಂದ ಬಚ್ಚಲು ಮನೆಗಳು ಇರುವುದರಿಂದ ಗುಂಡಿ ತೋಡುವ ಅವಶ್ಯಕತೆ ಇಲ್ಲವಾಗಿದೆ. 'ದೊಡ್ಡೋಳಾದ್ಲು' ಎಂದು ಹೇಳಲಾಗುತ್ತದೆ. ನಂತರ ಬಂದ ಎಲ್ಲ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಬಂದವರೆಲ್ಲ ಕಡಲೆ, ಸಿಹಿ ಪದಾರ್ಥ ತೆಗೆದುಕೊಂಡು ಬಂದಿರುತ್ತಾರೆ. ಬಹುಪಾಲು ಜನರು ಒಣಕೊಬ್ಬರಿ ಹಣ್ಣು, ಎಳ್ಳಿನಿಂದ ತಯಾರಿಸಿದ ಅಡುಗೆ ಪದಾರ್ಥಗಳನ್ನು ಹುಡುಗಿಗೆ ಉಣಬಡಿಸುತ್ತಾರೆ. ಪ್ರೌಢಾವಸ್ಥೆಯ ಕಾಂತಿ ಹೊರಹೊಮ್ಮಲು ಇದು ಸಹಾಯಕವಾಗುತ್ತದೆ.

ಶುಕ್ರವಾರದ ದಿನ ಮೈನೆರೆತಾಳೆ
ಅಮಪ್ಪ ಹೋರನ ಬೆಸಗೊಂಡು ಕೇಳ್ಯಾನೆ
ನೆರೆತ ಗಳಿಗೆಯ
ನೆರೆತ ಗಳಿಗೆಯ ಕೇಳಿದರೆ
ಹುಟ್ಟಿದ ಮನೆಗೆ ಜಯ ಜಯ.

ಋತುಮತಿಯಾದ ಬಗೆಗೆ ಜೋಯಿಸರಲ್ಲಿ ಕೇಳುತ್ತಾರೆ. ಈ ಹುಟ್ಟಿದ ಮನೆಗೆ ಯಾವುದಾದರೂ ದೋಷ ಇದ್ದರೆ ಪರಿಹಾರ ಕಂಡುಕೊಳ್ಳಲು ಈ ರೀತಿ ಮಾಡಲಾಗುತ್ತದೆ. ದಾನವನ್ನು ಬ್ರಾಹ್ಮಣರಿಗೆ ಕೊಡಲಾಗುತ್ತದೆ.

ಹೆಣ್ಣು ನೋಡುವುದು

ಮೈನೆರೆದ ಮೇಲೆ ಸಮುದಾಯದವರಿಗೆ ಇಂತಹ ಮನೆಯವರ ಹುಡುಗಿ ಪ್ರಾಯಕ್ಕೆ ಬಂದಿದ್ದಾಳೆ ಎಂದು ತಿಳಿದು, ಮದುವೆಗೆ ಸಿದ್ಧ ಮಾಡಲಾಗುತ್ತದೆ. ಆ ಕಡೆಯವರಿಗೆ ಈ

ಕಡೆಯವರಿಗೆ ತಿಳಿಸಿ ಹೇಳಿ ಅವರಿಗೆ ಗೋತ್ರ, ಬೆಡಗೂ ಕೂಡಿ ಬಂದರೆ, ಅವಳನ್ನು ನೋಡಲು ಸಿದ್ಧರಾಗುತ್ತಾರೆ. ಹೆಣ್ಣಿನ ಕಡೆಯವರಿಗೆ ಸಂಬಂಧಿಕರ ಜೊತೆ ಹೇಳಿ ಕಳಿಸುತ್ತಾರೆ. ನಂತರ ಹೆಣ್ಣಿನ ಮನೆಯವರಿಗೆ ಒಪ್ಪಿಗೆಯಾದರೆ ಹೆಣ್ಣುನೋಡಲು ಬರುತ್ತಾರೆ. ಇಂದಿನ ದಿನಗಳಲ್ಲಿ ಬುದ್ಧಿವಂತರು ಮತ್ತು ತಿಳುವಳಿಕೆ ಉಳ್ಳವರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆದರೆ ಬಹಳ ಜನರು ತಮ್ಮ ಅಭಿಪ್ರಾಯವನ್ನು ತಿಳಿಸುವುದಿಲ್ಲ. ಏಕೆಂದರೆ ತಮ್ಮ ಮನೆಯವರು ಹೇಳಿದಂತೆ ಕೇಳಿಕೊಂಡು ಇರುತ್ತಾರೆ. ಹೆಣ್ಣು ನೋಡಲು ಹೆಣ್ಣಿಗೆ ಸಂಬಂಧವಿರುವವರು ಮತ್ತು ಗಂಡಿನ ಕಡೆಯವರು ಬಂದು ಹೆಣ್ಣು ನೋಡಿಕೊಂಡು ಹೋಗುತ್ತಾರೆ. ಇವರು ಬರುವುದಕ್ಕಿಂತ ಮೊದಲೇ ರೂಢಿಯಂತೆ ಅವಳು ಸಿದ್ಧಳಾಗಿ ಇರಲು ತಿಳಿಸಿರುತ್ತಾರೆ. ಆಕೆ ಗೊಂಬೆಯಂತೆ ಇರಬೇಕಾಗುತ್ತದೆ. ಅವರಿಗೆ ಒಪ್ಪಿಗೆಯಾದರೆ ಮುಂದಿನ ದಿನ ಬಂದು ನಿಶ್ಚಿತಾರ್ಥವನ್ನು ಮಾಡಿಕೊಂಡು ಹೋಗುತ್ತಾರೆ. ಕೆಲವು ನಂಬಿಕೆಯಂತೆ ಹುಡುಗಿಯನ್ನು ನೋಡಿಕೊಂಡು ಹೋದಮೇಲೆ ಗಂಡಿನ ಮನೆಯವರಿಗೆ ಒಳ್ಳೆಯದಾದರೆ, ಅಂತಹ ಹುಡುಗಿಯನ್ನು ಬಿಡುವುದಿಲ್ಲ. ಹೆಣ್ಣಿನ ಮನೆಯವರು ಬಡವರಾಗಿದ್ದರೂ ಸಹ ಅವರಿಗೆ ಮದುವೆ ಮಾಡಲು ಹಣ ಕೊಟ್ಟು ವಿವಾಹ ಮಾಡಿಕೊಳ್ಳುತ್ತಾರೆ. ಎಲ್ಲ ಮನೆಯವರು ಹಾಗೆ ಇರುವುದಿಲ್ಲ. ಮನೆಯ ಸೊಸೆಯು ಲಕ್ಷ್ಮಿ ಇದ್ದಂತೆ ಎಂಬ ಭಾವನೆ ಅವರಲ್ಲಿರುತ್ತದೆ. ಹೆಣ್ಣು ನೋಡಲು ಹಿಂದೆ ಅನೇಕ ಚಪ್ಪಲಿಗಳು ಸವೆಯಬೇಕಾಗಿತ್ತು ಎಂದು ಹುಲಿಗೆಮ್ಮಜ್ಜಿ ಹೇಳುತ್ತಾರೆ. ಬೇರೆ ಬೇರೆ ಊರುಗಳಲ್ಲಿ ಕೊರವರು ಇರುವುದರಿಂದ ವ್ಯಾಪಾರ ಮಾಡುತ್ತಾ, ತಮ್ಮ ಜಾತಿಯವರು ಎಂದು ತಿಳಿದರೆ ಹೆಣ್ಣು ನೋಡಿಕೊಂಡು ವಿವಾಹ ಮಾಡುತ್ತಿದ್ದರು. ಅವಳ ಇಚ್ಛೆಯು ಹಿರಿಯರಿಂದಲೇ ನಿರ್ಧಾರವಾಗುತ್ತಿತ್ತು. ಆದರೆ ಇಂದು ಕೆಲವರು ತಮಗೆ ಇಚ್ಛೆಯಾದರೆ ಮಾತ್ರ ಮದುವೆ ಮಾಡಿಕೊಳ್ಳುತ್ತಾರೆ. ಇಲ್ಲವಾದರೆ ಇಲ್ಲ ಎಂದು ಹೇಳುತ್ತಾರೆ.

ನಿಶ್ಚಿತಾರ್ಥ

ಹೆಣ್ಣು ಗಂಡಿನವರಿಗೆ ಒಪ್ಪಿಗೆಯಾದರೆ ನಂತರ ಎಲೆ ಶಾಸ್ತ್ರ ಮಾಡಲಾಗುತ್ತದೆ. ಕೆಲವರು ಮದುವೆಯ ಹಿಂದಿನ ದಿನವೇ ಇಳೇವು ಮಾಡಿಕೊಳ್ಳುತ್ತಾರೆ. ಗಂಡಿನ ಮನೆಯವರನ್ನು ಎದುರುಗೊಳಿಸುತ್ತಾ, ನೀರು ಕೊಟ್ಟು ಹಾಸಿದ ಕಂಬಳಿ ಅಥವಾ ಚಾಪೆಯ ಮೇಲೆ ಕೂರಿಸುತ್ತಾರೆ. ಹಿರಿಯರೆಲ್ಲರೂ ಮತ್ತು ದೈವದವರು ಸೇರಿ ಮಾತುಕತೆ ಮಾಡುತ್ತಾರೆ. ಈ ಕಾರ್ಯವನ್ನು ರಾತ್ರಿ ವೇಳೆಯಲ್ಲಿ ಮಾಡುತ್ತಾರೆ. ಕೆಲವರು ಋತುಮತಿಯಾದ ದಿನವೇ ನಿಶ್ಚಿತಾರ್ಥ ಮಾಡಿಕೊಳ್ಳುತ್ತಾರೆ. ಗಂಡಿನ ಮನೆಯವರು ನೇರವಾಗಿ ಹೆಣ್ಣಿನ ಮನೆಗೆ ಹೋಗುವುದಿಲ್ಲ. ಮೊದಲು ದೈವದವರ ಮನೆಗೆ ಹೋಗಿ ಅವರ ಜೊತೆಗೆ ನಿಶ್ಚಿತಾರ್ಥದ ಕಾರ್ಯಕ್ಕೆ ಹೋಗುತ್ತಾರೆ. ಆ ದಿನ ಹೆಣ್ಣು ನಿಶ್ಚಿತಾರ್ಥಕ್ಕೆ ತಂದ ಹಸಿರು ಸೀರೆ ಕುಪ್ಪಸ ಉಡಬೇಕಾಗುತ್ತದೆ. ಗಂಡು ಹೆಣ್ಣಿಗೆ ಹಾರವನ್ನು

ಬದಲಾಯಿಸಿ ಕೂರಿಸುತ್ತ ಮಾತುಕತೆ ನಡೆಸುತ್ತಾರೆ. ಕೊಡುಕೊಳ್ಳುವುದು ಮಾಡಿಕೊಂಡು ಹೆಣ್ಣು ಗಂಡಿಗೆ ತಂದ ವಸ್ತುಗಳನ್ನು ಅವರಿಗೆ ಕೊಟ್ಟು, ಹೆಣ್ಣಿನ ಉಡಿಗೆ ಅಕ್ಕಿ, ಕೊಬ್ಬರಿ ಬಟ್ಟಲು, ಎಲೆ, ಅಡಿಕೆ, ಕನ್ಯಾಶುಲ್ಕ ಕೊಟ್ಟು ಎಲ್ಲರ ಎದುರಿಗೆ ಮಾತನಾಡಿ ಒಪ್ಪಿಗೆಯ ನಂತರ ಮನೆಯವರ ಮತ್ತು ಗಂಡಿನ ಮನೆಯವರಿಗೆ ಬಾಯಿಗೆ ಸಕ್ಕರೆ ಸಿಹಿ ಮಾಡಿಕೊಳ್ಳುತ್ತಾರೆ. ನಂತರ ಸಂಬಂಧಿಗಳಾಗುತ್ತಾರೆ. ಎಲ್ಲರಿಗೂ ಸಕ್ಕರೆ ಹಂಚಿ, ಎಲೆ ಅಡಿಕೆ ಹಂಚಿ ನಿಶ್ಚಿತಾರ್ಥ ಮಾಡಲಾಗುತ್ತದೆ. ಅಕ್ಕ ಮತ್ತು ಸೋದರ ಮಾವನವರು ಹೆಣ್ಣಿಗೆ ಆರತಿ ಮಾಡಬೇಕಾಗುತ್ತದೆ. ಗಂಡಿಗೆ ಸೋದರ ಮಾವನವರು ಕಾಲಿಗೆ ಬೆಳ್ಳಿ ಉಂಗುರ ಹಾಕುತ್ತಾರೆ. ಬಂದವರೆಲ್ಲರೂ ಸಿಹಿ ಊಟ ಮಾಡಿಕೊಂಡು ಮರುದಿನ ಹೋಗುತ್ತಾರೆ. ಇಂತಹ ಕಾರ್ಯದಲ್ಲಿ ಗಂಡಸರೆಲ್ಲರೂ ತಲೆಗಳಿಗೆ ಟವಲು ಕಟ್ಟಿಕೊಳ್ಳುತ್ತಾರೆ. ಯಾವುದೇ ಕಾರ್ಯಗಳಲ್ಲಿ ಶಿಸ್ತು ಪರಿಪಾಲಿಸುತ್ತಾರೆ. ವಾಲಗದವರೂ ಇವರೇ ಹೋಗಿರುವುದರಿಂದ ಎಲ್ಲರೂ ಇಲ್ಲಿಯೇ ಇರುತ್ತಾರೆ. ಇಂದಿನ ದಿನಗಳಲ್ಲಿ ವಾದ್ಯಮೇಳಗಳು ಬದಲಾಗುತ್ತಿರುವುದರಿಂದ ಆಧುನಿಕ ವಾದ್ಯಗಳು ಪ್ರಭಾವ ಬೀರುತ್ತಿದೆ. ಜನಾಂಗದವರು, ಸಮೀಪದ ಸಂಬಂಧದವರು, ರಕ್ತಬಾಂಧವರು, ಕುಲದವರು ನೆರವಾಗುತ್ತಾರೆ. ಇಂಥ ವೈವಾಹಿಕ ಸಂಬಂಧದ ಸಂಪ್ರದಾಯ ಸಾಮಾನ್ಯವಾಗಿ ಎಲ್ಲ ಮುಂದುವರಿದ ಸಮಾಜಗಳಲ್ಲಿ, ಎಲ್ಲಾ ಜನಾಂಗಗಳಲ್ಲಿಯೂ ಕಂಡುಬರುವುದು ಒಂದು ವಿಶೇಷ. ಅಕ್ಕನ ಮತ್ತು ಅತ್ತೆಯ ಮಗಳನ್ನು ಇವರು ಮದುವೆಯಾಗುತ್ತಾರೆ. ಆದರೆ ತಂಗಿಯ ಮಗಳನ್ನು ಮದುವೆಯಾಗುವುದಿಲ್ಲ.

ಹಿಂದಿನ ದಿನಗಳಲ್ಲಿ ಮದುವೆಗಳನ್ನು ೫ ದಿನಗಳವರೆಗೆ ಮಾಡುತ್ತಿದ್ದರೂ ೫ ನೀರು ಹಾಕಲಾಗುತ್ತದೆ. ಕುಡಿದಾಗ ಸಣ್ಣಪುಟ್ಟ ಕಾರಣಗಳಿಂದ ಜಗಳ ಮಾಡುವುದು, ಹೊಡೆದಾಡುವುದು ಸಾಮಾನ್ಯವೇ ಆಗಿದೆ. ಹಿಂದಿನ ದಿನಗಳಲ್ಲಿ ರಾತ್ರಿ ವೇಳೆಯಲ್ಲಿ ಮದುವೆ ನಡೆಯುತ್ತಿದ್ದವು ಎಂದು ತಿಳಿಸುತ್ತಾರೆ. ಆದರೆ ಇಂದಿನ ದಿನಗಳಲ್ಲಿ ವಿವಾಹಗಳು ಹಗಲಿನಲ್ಲಿಯೇ ನಡೆಯುತ್ತವೆ. ಒಂದು ಮುಹೂರ್ತವಿಟ್ಟು, ಲಗ್ನ ಪತ್ರಿಕೆ ಹಾಕಿಸಿ, ನಿಶ್ಚಿತಾರ್ಥ ಮಾಡಿ ವಿವಾಹವನ್ನು ಮಾಡುತ್ತಾರೆ. ಬ್ರಾಹ್ಮಣನಿಂದ ಹೆಸರು ಕೇಳಿಸಿ ಸರಿಹೊಂದುವ ಮುಹೂರ್ತವಿಟ್ಟು ವಿವಾಹಕ್ಕೆ ಸಿದ್ಧ ಮಾಡುತ್ತಾರೆ. ಇಲ್ಲಿ ಸೇರಿ ಹೊಂದದಿದ್ದರೆ ಹೆಸರನ್ನು ಬದಲಾಯಿಸುತ್ತಾರೆ ವಿನಃ ಮದುವೆ ಬಿಡುವುದಿಲ್ಲ.

ಚಪ್ಪರ

"ಮದುವೆಯ ಹಿಂದಿನ ದಿನವೇ ಚಪ್ಪರ ಹಾಕಲಾಗುತ್ತದೆ. ಚಪ್ಪರಗಳನ್ನು ಗಂಡು ಹೆಣ್ಣಿನ ಮನೆಗಳ ಮುಂದೆ ಹಾಕಲಾಗುತ್ತದೆ. ಕೆಲವರು ಮನೆಯ ಮುಂದೆ ಚಪ್ಪರ ಹಾಕುವುದಿಲ್ಲ"[೧] ಎಂದು ಹೇಳುತ್ತಾರೆ. ಹಿಂದಿನ ಮದುವೆ ಪದ್ಧತಿಯು ಇಂದಿನ ದಿನಗಳಲ್ಲಿ ಬದಲಾಗುತ್ತಿದೆ. ಚಪ್ಪರ ಹಾಕುವಾಗ ಕಂಬಕ್ಕೆ ಪೂಜೆ ಮಾಡಿ, ಕಾಯಿ ಒಡೆದ ಮೇಲೆ ಚಪ್ಪರ ಹಾಕುತ್ತಾರೆ.

ಮದುವೆಯ ಚಪ್ಪರಗಳನ್ನು ಅಲಂಕರಿಸಿ ಸಿದ್ಧಗೊಳಿಸುತ್ತಾರೆ. ತೆಂಗಿನ ಗರಿ, ತೆಂಗಿನಕಾಯಿ ಚಪ್ಪರದ ಮಧ್ಯೆ ಕಟ್ಟಿರುತ್ತಾರೆ, ಬಾಳೆ ಗಿಡಗಳನ್ನು ಚಪ್ಪರಕ್ಕೆ ಅಲಂಕರಿಸುತ್ತಾರೆ. ಇಲ್ಲಿ ಹಾಲು ಕಂಭವೆ ಮುಖ್ಯವಾಗಿರುತ್ತದೆ. ಕೆಲವರು ಚಪ್ಪರದಲ್ಲಿ, ಗುಡಿಗಳಲ್ಲೆ ಮನೆ ಮುಂದೆ ಅಥವಾ ಕಲ್ಯಾಣ ಮಂಟಪಗಳಲ್ಲಿ ಧಾರೆ ಎರೆಯುತ್ತಾರೆ. ಗಂಡನ ಮನೆಯವರಿಗೆ ಪ್ರತ್ಯೇಕವಾದ ಮನೆಯನ್ನು ಅಥವಾ ಬಿಡಾರದ ಮನೆ ಕೊಡಲಾಗುತ್ತದೆ.

ಶ್ರೀ ಎಚ್.ವಿ. ನಂಜುಂಡಯ್ಯನವರು ಹಿಂದಿನ ಮದುವೆ ಪದ್ಧತಿಯನ್ನು ವಿವರಿಸುತ್ತಾರೆ. ಇ ಥರ್ಸ್‌ಟನ್ ಅವರು "On the day fixed for the marriage, two fresh huts are erected, with their doorü opening the east, one being for the bride and the other for the bride groom" ಎಂದು ತಿಳಿಸಿದ್ದಾರೆ. ಇಂದಿನ ಬಡವರು ಹಿಂದುಳಿದಿದ್ದರಿಂದ ಅಧಿಕವಾಗಿ ದೇವಸ್ಥಾನದಲ್ಲಿಯೇ ಮದುವೆ ಮಾಡಲಾಗುತ್ತದೆ. They observer vilya sastra, do not call in any band of iperü, nor use the bhashinga, marriage chaplet, and some do not wen correct a marriage both' ಎಂದಿದ್ದಾರೆ".

ಹಿಂದೆ ವಾದ್ಯಗಳು ಇರುತ್ತಿರಲಿಲ್ಲ. ಆದರೆ ತಲೆಗೆ ಪೇಟ ಸುತ್ತುತ್ತಾರೆ, ಕೆಲವರು ಬಾಸಿಂಗ ಕಟ್ಟುತ್ತಾರೆ, ಕೆಲವರು ಕಟ್ಟುವುದಿಲ್ಲ. ಧಾರೆಯನ್ನು ಕುಲದ ಹಿರಿಯರೇ ನೆರವೇರಿಸುತ್ತಿದ್ದರು. ಹೆಸರು, ಕುಲದ ಬಗೆಗೆ ಬ್ರಾಹ್ಮಣರನ್ನು ಕೇಳುತ್ತಿದ್ದರು. ಇಂದು ಬ್ರಾಹ್ಮಣ ಕೇಳದೆ ಕಾರ್ಯಗಳನ್ನು ಮಾಡುವುದಿಲ್ಲ ಎಂಬುದು ತರಹವಾಗಿದೆ.

ಮದುವೆ

"ವಿವಾಹವು ಆದಿಕಾಲದಿಂದಲೂ ಬೆಳೆದು ಬಂದಿರುವ ಮಾನವ ಜೀವಿಯ ಒಂದು ಅವಿಭಾಜ್ಯ ಅಂಗವಾದ ಸಾಮಾಜಿಕ ಸಂಸ್ಥೆ. ಇದು ಮಾನವನ ಲೈಂಗಿಕ ತೃಪ್ತಿ ಮತ್ತು ಸಂತಾನೋತ್ಪತ್ತಿಯ ದ್ಯೂತಕವಾಗಿದೆ. ವಿವಾಹವು ಸಮಾಜದಲ್ಲಿ ಸಾರ್ವತ್ರಿಕವಾದುದು. ಸಮುದಾಯದ ಉದ್ಧಾರಕ್ಕೋಸ್ಕರ ಈ ವಿವಾಹ ಸಂಸ್ಥೆಯು ಹುಟ್ಟಿ ಬೆಳೆದು ಮುಂದುವರಿಯುತ್ತಿದೆ. ಸ್ತ್ರೀ ಪುರುಷರಲ್ಲಿ ನಿರಂತರ ಅನ್ಯೂನ್ಯ ಸಂಬಂಧವನ್ನು ಉಂಟುಮಾಡುವುದೇ ಈ ವಿವಾಹದ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ".[೩] ಹಿಂದೂ ಧರ್ಮದ ಪ್ರಕಾರ ವಿವಾಹವು ಜೀವನದ ಅತಿ ಮುಖ್ಯವಾದ ಸಂಸ್ಕಾರಗಳಲ್ಲೊಂದಾಗಿದೆ. ಈ ಸಂಸ್ಕಾರವನ್ನು ಹೊಂದದೆ ಮುಕ್ತಿಯು ಸಿಕ್ಕಲಾರದು ಎಂಬ ನಂಬಿಕೆ ಗಾಢವಾಗಿ ಜನರಲ್ಲಿ ಬೆಳೆದು ಬಂದಿದೆ.

ಗಂಡು ಹೆಣ್ಣಿನ ಸಂಬಂಧವನ್ನು ಕಾನೂನುಬದ್ಧಗೊಳಿಸಿ, ವಂಶ ಬೆಳೆಯುವುದಕ್ಕೆ ಅನುವು ಮಾಡಿಕೊಡುವ ಪ್ರಕ್ರಿಯೆ ಮದುವೆಯ ಮೂಲಕವೇ ನಡೆಯುತ್ತದೆ ಎಂಬ ಮಾತು ಸತ್ಯಸಂಗತಿ.

ಕುಟುಂಬದ ಜೀವನ ಪದ್ಧತಿಯನ್ನು ಬಹುಹಿಂದಿನಿಂದಲೂ ಕಾಣಬಹುದು. ಇವರಲ್ಲಿನ ಬೆಡಗುಗಳು ಸ್ವಗೋತ್ರದಲ್ಲಿನ ವಿವಾಹಗಳನ್ನು ಹಿಂದಿನಿಂದಲೂ ತಡೆಹಿಡಿಯುತ್ತಿದ್ದಾರೆ. (ಅಣ್ಣ-ತಂಗಿಯ ಸಂಬಂಧವಿರುವುದರಿಂದ) ಮದುವೆಯ ಕಾವಾಡಿ, ಸತ್ಪಾಡಿ ಎಂಬ ಬೆಡಗುಗಳಿಂದ ಹೆಣ್ಣು-ಗಂಡು ನೋಡಿ ಸಂಬಂಧ ಬೆಳೆಸುತ್ತಾರೆ. ಪವಿತ್ರ ಬಂಧನವೆಂದೂ ನಂಬುತ್ತಾರೆ. ಹಿರಿಯರು ಒಪ್ಪಿದ ವಿವಾಹವನ್ನು ಮುರಿಯುತ್ತಿರಲಿಲ್ಲ. ಇದು ತಮಗೆ ಇಷ್ಟವಾದರೆ ಮಾತ್ರ ಮಾಡಿಕೊಳ್ಳುತ್ತಾರೆ. ಅಂದರೆ ಅತ್ತೆ ಮಗಳು, ಅಕ್ಕನ ಮಗಳು, ಮಾವನ ಮಗಳನ್ನು ವಿವಾಹವಾಗುವುದು ಇಲ್ಲಿ ಅಧಿಕವಾಗಿ ಕಂಡುಬರುತ್ತದೆ.

ಇದರಲ್ಲಿ ಏಕಪತ್ನಿತ್ವದ ಪದ್ಧತಿ ರೂಢಿಯಲ್ಲಿತ್ತು. ಆದರೆ ಮೊದಲನೆ ಹೆಂಡತಿ ಸತ್ತರೆ ಅಥವಾ ಮಕ್ಕಳು ಆಗದಿದ್ದರೆ ಅಂತವರು ಮಾತ್ರ ಮದುವೆ ಆಗಬಹುದಾಗಿತ್ತು. ಇದು ಗಂಡಿಗೆ ಮಾತ್ರ, ಹೆಣ್ಣಿಗೆ ಒಮ್ಮೆ ಮದುವೆಯಾದರೆ ಇನ್ನೊಮ್ಮೆ ಮದುವೆ ಆಗುವಂತಿಲ್ಲ. ಇದು ಕುಲದ ಪದ್ಧತಿಯಾಗಿದೆ. ಬಾಲ ವಿಧವೆಯಾದರೂ ಹಾಗೆಯೇ ಇರಬೇಕಾಗುತ್ತದೆ. ಸಮುದಾಯದ ಹೆಣ್ಣು ಮಕ್ಕಳು ಮರುಮದುವೆ ಯಾಗಿರುವುದು ಕಂಡುಬರುವುದಿಲ್ಲ. ಸಮುದಾಯಕ್ಕೆ ಬೇರೆ ಜಾತಿಯವರನ್ನು ಸೇರಿಸಿಕೊಳ್ಳುವುದಿಲ್ಲ. ತಮಗಿಂತ ಮೇಲುಜಾತಿಯ ಹೆಣ್ಣನ್ನು ಮಾತ್ರ ಕೂಡಿಕೊಂಡರೆ ಆಕೆಯನ್ನು ಕುಲಕ್ಕೆ ತೆಗೆದುಕೊಳ್ಳ ಲಾಗುತ್ತದೆ. ಮೇಲುಜಾತಿಯ ಗಂಡು ಈ ಜಾತಿಯ ಹೆಣ್ಣನ್ನು ಪ್ರೀತಿಸಿದರೆ ಅಂಥವರನ್ನು ಬೇರೆಡೆಗೆ ಸೇರಿಸಿಕೊಳ್ಳುತ್ತಾರೆ. ಗಂಡಿನ ಮನೆಯವರು ದೈವದವರ ಸಮ್ಮುಖದಲ್ಲಿಯೇ ವಿವಾಹವನ್ನು ನಿಶ್ಚಯಿಸಿ ಮದುವೆಯನ್ನು ಮಾಡುತ್ತಾರೆ. ಏಕೆಂದರೆ ಮುಂದೆ ಬರುವ ತೊಂದರೆಗಳಿಗೆ ಇವರ ಸಾಕ್ಷಿಯಾಗಿ ದೈವದವರು, ಹಿರಿಯರು ಇರುತ್ತಾರೆ. ಮುಂದೆ ಮದುವೆಯನ್ನು ಮಾಡಿಕೊಳ್ಳುತ್ತಾರೆ. ಇಂದು ಅಮತರ್‌ಜಾತಿಯ ವಿವಾಹಗಳು ಕೊರವ ಸಮುದಾಯದಲ್ಲಿಯೂ ನಡೆಯುತ್ತಿದೆ.

ಮದುವೆ ಬಗ್ಗೆ ಇ ಥರ್ಸ್ಟನ್‌ರು ತಮ್ಮ castes and tribes of southern Indiaದಲ್ಲಿ ಈ ರೀತಿ ತಿಳಿಸಿದ್ದಾರೆ. "Marriages are arranged by the elderü, the father of a youth who is of a marriageable, age calls together some of the elderü of his divition, and proceeds inquest of a suitable bride. If the family visited consents to the match, the head men is sent for, and a move is made to the today Shop. Here the father of the future, bride-groom fills a Small earthorn vessel, called is telugu muntha and offerü it to the father of the bride elect, asking him. Do you know why I give you this taddy? The recipient replies. it is because I have given you my daughter and I drink to her health. The vessel is refilled and offered to the head man. Who takes it, and enquiries of the father of the girl why he is to drink. the reply is, because

I have given my daughter to...s, son, drink to her helth, The questions and answerü are repeated while every one present, according to rank, has a drink. Those who have so drank at this betrothal ceremony are tooked upon as witnesses to the contract"[೪] ಎಂದು ಹೇಳುತ್ತಾರೆ.

ಮದುವೆಯಲ್ಲಿ ಹೆಣ್ಣಿನ ಕಡೆಯವರಿಗೆ ತೆರಿಗೆ ರೂಪದಲ್ಲಿ ಗಂಡಿನ ಕಡೆಯವರು ತೆರವನ್ನು ಕೊಡುತ್ತಾರೆ. ಅದು ಸಾಕಿ ಬೆಳೆಸಿದ ತಂದೆ-ತಾಯಿಗೆ ಹೋಗುತ್ತದೆ. ತಾಯಿಯ ಅಣ್ಣ-ತಮ್ಮಂದಿರಿಗೆ ಕೊಡಲಾಗುತ್ತದೆ. ಏಕೆಂದರೆ ಎಲ್ಲರೂ (ತಾಯಿಯ ತಮ್ಮಂದಿರು ವಿವಾಹವಾಗಿದ್ದರೆ) ಮದುವೆಯಾಗಿದ್ದರೆ ಅವರಿಗೆ ಈ ಹಣವನ್ನು ಕೊಡಲಾಗುತ್ತದೆ. ಅದನ್ನು ಸೋದರಮಾವ ತೆಗೆದುಕೊಂಡು ಇನ್ನು ಸ್ವಲ್ಪ ಹಣ ಸೇರಿಸಿ ಸೊಸೆಗೆ ಯಾವುದಾದರೊಂದು ಸಾಮಾನು ತಂದುಕೊಡಲಾಗುತ್ತದೆ, ಇಲ್ಲದೆ ತಮ್ಮಲ್ಲಿಯೇ ಇಟ್ಟುಕೊಳ್ಳಬಹುದು. "ಹಿಂದೆ ತೆರದಲ್ಲಿ ಸಣ್ಣತೆರ ಮತ್ತು ದೊಡ್ಡತೆರ ಎಂದು ಎರಡು ಬಗೆಗಳಿದ್ದವು. ಸಣ್ಣ ತೆರದ ಮೊತ್ತ ಎಪ್ಪತ್ತೊಂದು ರೂಪಾಯಿ ಇದ್ದರೆ ದೊಡ್ಡ ತೆರದ ಮೊತ್ತ ತೊಂಬತ್ತಾರು ರೂಪಾಯಿಗಳು. ಅನುಕೂಲವಿದ್ದವರು ದೊಡ್ಡ ತೆರ ಕೊಟ್ಟರೆ, ಬಡವರು ಸಣ್ಣ ತೆರ ಕೊಡುವ ಪದ್ಧತಿ ಇದೆ".[೫] ಇಂದಿಗೂ ಸಹ ತೆರ ಕೊಡುವ ಪದ್ಧತಿಯು ಮದುವೆಯಲ್ಲಿ ಕಂಡುಬರುತ್ತದೆ.

ಮದುವೆ ಮುಂಚೆಯೇ ಮನೆ ಸ್ವಚ್ಛ ಮಾಡಲಾಗುತ್ತದೆ. ಕೆಂಪು ಮಣ್ಣು ಅಥವಾ ಸುಣ್ಣದಿಂದ ಕಲಿಸಿದ ಬಣ್ಣದಲ್ಲಿ ಇದನ್ನು ಮಾಡಲು ಯಾರ ಹೆಸರು ಬಂದಿರುತ್ತದೆಯೋ ಅವರ ಎರಡು ಕೈಗಳನ್ನು ಬಣ್ಣದಲ್ಲಿ ಅದ್ದಿ ಮನೆಯ ಗೋಡೆಯ ಮೇಲೆ ಅಥವಾ ಮನೆಯ ಸುತ್ತಲು ಗಂಡು ಹೆಣ್ಣು ಕೈಯಿಂದ ಹಚ್ಚಲಾಗುತ್ತದೆ. ಸೆಟ್ಟ ಬಡಿಯುವುದು ಎಂದು ಹೇಳಲಾಗುತ್ತದೆ. ಇದನ್ನು ಬ್ರಾಹ್ಮಣರಿಂದ ಕೇಳಿಸಿ ಯಾರ ಅದೃಷ್ಟ ಇರುತ್ತದೆಯೋ ಅವರಿಂದ ಈ ಕೆಲಸವನ್ನು ಮಾಡಿಸಲಾಗುತ್ತದೆ. ಮದುವೆಯ ಹಿಂದಿನ ದಿನ ಮದುಮಗ ಅಥವಾ ಮದುಮಗಳನ್ನು ಅಲಂಕರಿಸುತ್ತಾರೆ. ಅಲ್ಲಿ ಕರಿ ಕಂಬಳಿಯಲ್ಲಿ ಸಾಸುವೆ ಕಟ್ಟಿ ರಚಿಸಿ, ಅದರ ಮೇಲೆ ಕುಳ್ಳಿರಿಸಿ, ಮೈಗೆಲ್ಲ ಅರಿಸಿನ ಹಚ್ಚಿ, ವಿಭೂತಿ ಕಟ್ಟು ಹಚ್ಚಿ, ಕುಂಕುಮ ಇಟ್ಟು, ಜೊತೆಗೆ ಸೊಸೆಯಾದವಳನ್ನು ಅಥವಾ ಹೆಣ್ಣಿಗೆ ತಂಗಿ ಮತ್ತು ಅಳಿಯನಾಗುವವರನ್ನು ಮದುಮಕ್ಕಳನ್ನು ಮಾಡಲಾಗುತ್ತದೆ. ಎಲ್ಲರೂ ಅಕ್ಷತೆ ಹಾಕಿ, ಆರತಿ ಬೆಳಗುತ್ತಾರೆ. ಅದಾದ ನಂತರ ಸುರಿಗಿ ನೀರು ಹಾಕಲು ಸಿದ್ಧರಾಗುತ್ತಾರೆ. ಹೊರಗಡೆ ಎರಡು ಒನಕೆ ಮೇಲೆ ಕುಳ್ಳಿರಿಸಿ ಸ್ನಾನವನ್ನು ಮಾಡಿಸಿ, ಹೊಸಬಟ್ಟೆ ತೊಡಿಸಿ ಆರತಿ ಬೆಳಗಿ ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ಅವರ ಕೈಯಲ್ಲಿ ಕತ್ತಿ ನಿಂಬೆಹಣ್ಣು ಇರುತ್ತದೆ. ಹಸಿ ಮೈಯಲ್ಲಿ ಗಾಳಿ ಸೇರಿಕೊಳ್ಳುವುದನ್ನು ತಡೆಗಟ್ಟಲು ಈ ರೀತಿ ಮಾಡಲಾಗುತ್ತದೆ. ಅದೇ ರೀತಿಯಾಗಿ ಮದುಮಗಳು ಸಿದ್ಧಳಾಗುತ್ತಾಳೆ.

ಧಾರೆಯಲ್ಲಿ ಗಂಗೆಪೂಜೆ ಮಾಡಿ ತಂದಂತಹ ನೀರಿನ ಗಡಿಗೆಯನ್ನು ಪೂಜೆ ಮಾಡಲಾಗುತ್ತದೆ. ಅದನ್ನು ೫ ದಿನಗಳ ನಂತರ ಕಾಲುವೆ, ಬಾವಿಗೆ ಹಾಕಲಾಗುತ್ತದೆ. ಒಂದು ತಟ್ಟೆಯಲ್ಲಿ ಕರಿಮಣಿ, ಬಿಳಿದಾರ, ಕೊಬ್ಬರಿ ಬಟ್ಟಲು ಬೆಲ್ಲ ಇರುತ್ತದೆ. ಗಂಡು ಹೆಣ್ಣಿನ ಕೊರಳಿಗೆ ಹವಳದ ಸರಗಳನ್ನು ಹಾಕಿರುತ್ತಾರೆ. ಮದುಮಗನಿಗೆ ಬಿಳಿ ಪಂಚೆಯು ೧೬ ಗಜ ಆಗಿರಬೇಕು. ಚಪ್ಪರಕ್ಕೆ ಅತ್ತಿಕೊನೆ, ಬಾಳೆ ದಿಂಡು, ಮಾವಿನ ಎಲೆಗಳನ್ನು ಕಟ್ಟಲಾಗುತ್ತವೆ. ಮದುವೆ ಧಾರೆಯಲ್ಲಿ ಸ್ತ್ರೀಯರು ನಾಲ್ಕು ಕಡೆ ಗಡಿಗೆ ಹಿಡಿದುಕೊಂಡು ಕುಳಿತಿರುತ್ತಾರೆ. ಮುಂದೆ ವಾದ್ಯದವರು ಇರುತ್ತಾರೆ. ಹಾಲುಗಂಭಗಳು ಇಲ್ಲಿ ಮುಖ್ಯವಾಗುತ್ತದೆ.

ಮದುವೆ ದಿನ ಬೆಳಗ್ಗೆ ಗಂಗೆಗೆ ಹೋಗಲಾಗುತ್ತದೆ. ಬಾವಿಗೆ ಅಥವಾ ಬೋರವೆಲ್‌ಗೆ ಹೋಗಿ ಪೂಜೆ ಮಾಡಿಕೊಂಡು ಮದುವೆಯ ಮಂಟಪಕ್ಕೆ ಬರುವುದರೊಳಗೆ ಮಂಟಪದಲ್ಲಿ ಮದುವೆ ಸಿದ್ಧತೆ ಮಾಡಿ ಗಂಡು ಹೆಣ್ಣಿಗೆ ಸ್ನಾನ ಮಾಡಿಸಿ ತಾಳಿ ಕಟ್ಟಲು ಬಿಳಿ ಸೀರೆ, ಬಿಳಿ ಬಟ್ಟೆಯಿಂದಲೇ ಇರಬೇಕಾಗುತ್ತದೆ. ಬಾಸಿಂಗ ಇವರಲ್ಲಿ ಇರುವುದಿಲ್ಲ ಬದಲಿಗೆ ಟೋಪಿ ಧರಿಸಿರುತ್ತಾರೆ. ಬ್ರಾಹ್ಮಣರಿಂದ ಗೌರಿ ಪೂಜೆ ಮಾಡಿಸಿ ಬಿಳಿ ದಾರದಿಂದ ಸುರುಗೆ ದಾರವನ್ನು ಮಾಡಿ ಅದನ್ನು ಗಂಡಿನ ಕೊರಳಿಗೆ ಹಾಕಲಾಗುತ್ತದೆ. ಕೈಗಳಿಗೆ ಕಂಕಣ ಕಟ್ಟಿ ನಂತರ ಹೆಣ್ಣಿಗೆ ತಾಳಿ ಕಟ್ಟಲಾಗುತ್ತದೆ. ಮುಂದೆ ಕಳಸಕ್ಕೆ ಹೂ ಹಾಕಿ ಸಿಂಗರಿಸಿರುತ್ತಾರೆ. ಕಳಸದ ಚಂಬಿನ ಬಾಯಿಗೆ ಕಂಕಣ ಕಟ್ಟಿರುತ್ತಾರೆ. ಗಂಡಿಗೆ ಕಟ್ಟುವ ಕಂಕಣಕ್ಕೆ ಒಂದು ಅರಿಸಿನ ಕೊಂಬು, ಒಂದು ತಾಮ್ರದ ಉಂಗುರವನ್ನು ಕಟ್ಟಿ ಬಲಗೈಗೆ ಕಟ್ಟುತ್ತಾರೆ. ಶಾಸ್ತ್ರ ನಡೆಯುತ್ತಿರುವಾಗ ಅಲ್ಲಿ ಸೇರಿದ ಹೆಂಗಸರು ಸೋಬಾನ ಪದಗಳನ್ನು ಹೇಳುತ್ತಾರೆ. ಇಂದು ಸೋಬಾನ ಪದ ಹಾಡುವವರ ಸಂಖ್ಯೆ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ೫ ಬಾರಿ ನೀರು ಹಾಕಲಾಗುತ್ತದೆ. ಆದರೆ ಇಂದು ಮೂರು ನೀರು ಮಾತ್ರ ಹಾಕಲಾಗುತ್ತದೆ. ಮದುವಣಗಿತ್ತಿ ಶಾಸ್ತ್ರ ಮಾಡುವಾಗ, ಧಾರೆ ಮುಹೂರ್ತದ ಮೊದಲು ಗಂಡಿನ ಮನೆಯಲ್ಲಿ ಒಂದು ಬಾರಿ ನೀರು ಹಾಕಲಾಗುತ್ತದೆ. ಗಂಡು ಹೆಣ್ಣಿನ ಜೊತೆ ಕಳಸಗಿತ್ತಿ ಯಾವಾಗಲೂ ಇರುತ್ತಾರೆ. ಕಳಸ ಹಿಡಿದವಳು ಅಕ್ಕ ಇಲ್ಲವೇ ಚಿಕ್ಕಮ್ಮ ಆಗಿರುತ್ತಾಳೆ. ಅವರಿಗೆ ಪ್ರಸ್ತ ಮಾಡುವವರೆಗೆ ಜೊತೆ ಇರಬೇಕಾಗುತ್ತದೆ. ನಂತರ ಗಂಡು ಹೆಣ್ಣು ಮಾತ್ರ ಎಲ್ಲಿಗಾದರೂ ಹೋಗಬಹುದು.

ಆರ್. ಇ. ಎಂಥೋವನ್ ಅವರು ಈ ಬಗೆಗೆ "Then a branch of the Khair or eatechu tree is felled and dropped into the nearest well, At midnight the five married women. singing songs go to the well, and, after each has drawn a pot fall of water, take the branch out of the well the brach is then plauted opposite the front door"[೬] ಎಂದು ವಿಷಯವನ್ನು ತಿಳಿಸಿದ್ದಾರೆ.

ಹಿಂದೆ ರಾತ್ರಿ ಸಮಯದಲ್ಲಿ ಮದುವೆಗಳನ್ನು ಏಕೆ ಮಾಡುತ್ತಿದ್ದರು ಎಂದು ಕೇಳಿದರೆ, ನಮ್ಮ ಮದುವೆಗಳನ್ನು ಬ್ರಾಹ್ಮಣರು ನೋಡಬಾರದೆಂದು ರಾತ್ರಿಯಲ್ಲಿ ಮದುವೆ ಮಾಡುತ್ತಿದ್ದುದಾಗಿ ಹಿರಿಯರು ಹೇಳುತ್ತಿದ್ದರು ಎನ್ನುತ್ತಾರೆ. ಆದರೆ ಈಗ ಹೆಸರು, ಕುಲ ಮತ್ತು ಮುಹೂರ್ತವನ್ನು ಕೇಳಿ ವಿವಾಹ ನಿಶ್ಚಯಿಸುತ್ತಾರೆ. ಈಗೆಲ್ಲ ರಾತ್ರಿ ಮದುವೆಗಳು ನಡೆಯುವುದಿಲ್ಲ. ಧಾರೆಯಲ್ಲಿ ಬ್ರಾಹ್ಮಣರಿಗೆ ಪ್ರವೇಶವಿದೆ, ಅತ್ತಿಗೊನೆ, ಬಾಳೆಗೊನೆ, ಮಾವಿನ ಕೊನೆಗಳು ಸುಖ, ಶಾಂತಿ ಮತ್ತು ಸಮೃದ್ಧಿಯ ಸಂಕೇತವಾಗಿರುವುದರಿಂದ ಇವನ್ನು ಇಲ್ಲಿ ತರಲಾಗುತ್ತದೆ.

ಹಿಂದೆ ತಾಳಿಗೆ ಬದಲಾಗಿ ಅರಿಸಿನ ಕೊಂಬು ಕಟ್ಟಿದ ದಾರವನ್ನು ಅಥವಾ ಕರಿಮಣಿ ಪೋಣಿಸಿದ ದಾರವನ್ನು ಹೆಣ್ಣಿನ ಕುತ್ತಿಗೆಗೆ ಕಟ್ಟುತ್ತಿದ್ದ ಬಗೆಗೆ ದಾಖಲೆಗಳು ಇವೆ. ಇ ಥರ್ಸ್ಟನ್‌ನ ಅವರು ಈ ಬಗೆಗೆ ಒಂದು ಕಥೆಯನ್ನು ಸಂಗ್ರಹಿಸಿದ್ದಾರೆ. "Once upon a time a bride groom forget to bring the tali, and he was told off to procure the necessary piecc of gold from a gold smith. The parties waited and waited but the youngman did not return, since then the string of beads has been used as a marriage badge." ಇನ್ನೊಂದು ಕಥೆ "ನದಿ ದಂಡೆಯ ಮೇಲೆ ಇಟ್ಟು ಬಂದಿದ್ದ ತಾಳಿಯನ್ನು ತರಲು ಹೋದಾಗ ಅದು ಕಾಣೆಯಾಗಿತ್ತಂತೆ ಅದಕ್ಕಾಗಿ ಮತ್ತೊಂದು ಹೊಸ ತಾಳಿ ತರಲು ಹೋದ ವ್ಯಕ್ತಿ ಮರಳಲಿಲ್ಲವಂತೆ ಅದರಿಂದ ಅರಶಿನ ತುಂಡು ದಾರದಲ್ಲಿ ಕಟ್ಟಿ ಹಾಕಲಾಗಿತ್ತು ಎಂದು ತಿಳಿದುಬರುತ್ತದೆ".[೭]

ತಮಿಳುನಾಡು ಪ್ರದೇಶದಲ್ಲಿರುವ ಮತ್ತು ಆಂಧ್ರಪ್ರದೇಶದಲ್ಲಿರುವ ಜನರು ಅರಶಿನದ ದಪ್ಪದಾರದಿಂದ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಮಾತ್ರ ಕರಿಮಣಿ ಸರವನ್ನು ಜೊತೆಗೆ ಹವಳವು ಇರುವುದನ್ನು ನೋಡಬಹುದು. ತಂದೆ ಕಡೆ, ಅತ್ತೆಕಡೆ ಎರಡು ತಾಳಿ ಕಟ್ಟಲಾಗುತ್ತದೆ. ತಾಳಿ ನಂತರ ಬ್ರಾಹ್ಮಣರು ಅರುಂಧತಿ ನಕ್ಷತ್ರವನ್ನು ಆಕಾಶದಲ್ಲಿ ದಂಪತಿಗಳಿಗೆ ತೋರಿಸುತ್ತಾರೆ. ನಂತರ ಆಶೀರ್ವಾದ ಮಾಡಿ ಮದುವೆ ಊಟ ಮಾಡಿಕೊಂಡು, ಮುಯ್ಯಿ ಮಾಡಿ ಹೋಗುತ್ತಾರೆ. ನಂತರ ದಂಪತಿಗಳಿಗೆ ಮನೋರಂಜನೆಗಾಗಿ ಮತ್ತೆ ಅವರಲ್ಲಿ ಅನ್ಯೋನ್ಯತೆ ಬರಲು ಬೆಲ್ಲ, ಕೊಬ್ಬರಿ, ಎಲೆ ಅಡಿಕೆಯ ಶಾಸ್ತ್ರವನ್ನು ಮಾಡಲಾಗುತ್ತದೆ. ಹಾಲಿನಲ್ಲಿ ಉಂಗುರ ಹುಡುಕುವ ಶಾಸ್ತ್ರವು ಇದೆ. ತಾಳಿಯಾದ ಮರುದಿನ ಗಂಡನ ಮನೆಯಲ್ಲಿ ಈ ಶಾಸ್ತ್ರ ನಡೆಸಿ, ಅಲ್ಲಿಯು ಮುಯ್ಯಿ ಮಾಡಲಾಗುತ್ತದೆ. ಮರುದಿನ ತವರು ಮನೆಗೆ ಬರಬೇಕಾಗುತ್ತದೆ. ನಂತರ ೫ ದಿನದಲ್ಲಿ ಅವರಿಬ್ಬರಿಗೂ ಗಂಗೆ ಪೂಜೆಯನ್ನು ಮಾಡಿಸುತ್ತಾರೆ. ಓಕಳಿ ನೀರು ಕಲಿಸಿ ಗಂಡು ಹೆಣ್ಣಿಗೆ ಹಾಕುವುದು ಹೆಣ್ಣು ಗಂಡಿಗೆ ನೀರು ಹಾಕುವ ಶಾಸ್ತ್ರ ಮಾಡುತ್ತಾರೆ.

ನಂತರ ಮದುವೆಯಾಗಿ ೯ ದಿನಕ್ಕೆ ಒಳ್ಳೆಯ ಮುಹೂರ್ತ ನೋಡಿಕೊಂಡು ಬಂದು ಗಂಡು ಹೆಣ್ಣಿಗೆ ಪ್ರಸ್ತಮಾಡಲಾಗುತ್ತದೆ. ಆ ಕಾರ್ಯವನ್ನು ಹೆಣ್ಣಿನ ಮನೆಯಲ್ಲಿ ಮಾಡಲಾಗುತ್ತದೆ. ಹೆಣ್ಣಿನ ಮನೆಯವರು ಹೊಸ ಹಾಸಿಗೆ, ಹೊದಿಕೆ ತಂದಿರುತ್ತಾರೆ. ಅದನ್ನು ಸೋದರ ಸೊಸೆಯಾದವಳು ಹಾಸಿಗೆ ಹಾಕಿ ಬರಬೇಕಾಗುತ್ತದೆ. ಹೆಣ್ಣು ಗಂಡನ್ನು ಒಂದು ಮನೆಯಲ್ಲಿ ಕೂಡಿಹಾಕಿ ಅಲ್ಲಿರುವವರೆಲ್ಲ ಬೇರೆ ಮನೆಯಲ್ಲಿರುತ್ತಾರೆ. ಮುಂಜಾನೆ ಎದ್ದು ದಂಪತಿಗಳಿಗೆ ಸ್ನಾನ ಮಾಡಿಸಿ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಹಾಸಿದ ಹೊದಿಕೆಯ ಕೆಳಗೆ ಗಂಡು ತನಗೆ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಇಟ್ಟಿರುತ್ತಾನೆ. ಅದು ಹಾಸಿಗೆ ಹಾಕಿದವಳಿಗೆ ಸೇರುತ್ತದೆ. ಅದು ಈ ಸಮುದಾಯದಲ್ಲಿ ಕಂಡುಬರುವ ಪದ್ಧತಿಯಾಗಿದೆ. ದೇವಾಲಯದಿಂದ ಬಂದ ದಂಪತಿಗಳು ದೇವರ ಕೋಣೆಯಲ್ಲಿ ಸಿಹಿ ಊಟವನ್ನು ಮಾಡುತ್ತಾರೆ. ಇಲ್ಲಿಗೆ ಮದುವೆಯ ಪದ್ಧತಿಗಳು ಮುಗಿಯುತ್ತದೆ. ಮುಂದೆ ಆಷಾಢಮಾಸದಲ್ಲಿ ಅತ್ತೆ ಸೊಸೆಯರು ಒಂದೇ ಬಾಗಿಲಿನಲ್ಲಿ ಓಡಾಡಬಾರದೆಂದು ಸೊಸೆಯನ್ನು ತವರುಮನೆಗೆ ಕಳಿಸುವ ಪದ್ಧತಿ ಇದೆ. ಗತ ಬಿದ್ದಾಗ ಹೆಣ್ಣು ತವರು ಮನೆಯಲ್ಲಿರುತ್ತಾಳೆ. ಶುಭ ಸುದ್ದಿ ತಿಳಿದು ಬಂದರೆ, ಅಂದರೆ ಗರ್ಭಿಣಿ ಎಂದು ತಿಳಿದುಬಂದರೆ ಮನೆಯವರಿಗಿಲ್ಲ ಸಂತೋಷ ಸಂಗತಿಯಾಗಿರುತ್ತದೆ. ಐದು ಅಥವಾ ಏಳನೇ ತಿಂಗಳಲ್ಲಿ ತವರು ಮನೆಗೆ ಕಳಿಸಲಾಗುತ್ತದೆ. ಐದನೇ ತಿಂಗಳಲ್ಲಿ ನೀರು ಬುತ್ತಿ ತವರು ಮನೆಯವರು ತೆಗೆದುಕೊಂಡು ಬಂಧುಗಳೊಂದಿಗೆ ಹೋಗುತ್ತಾರೆ. ಅವಳಿಗೆ ಸೀಮಂತ ಮಾಡಿ ೭ನೇ ತಿಂಗಳಲ್ಲಿ ತವರಿಗೆ ಕರೆತರಲಾಗುತ್ತದೆ. ಹೆರಿಗೆಯಾಗಿ ೫ನೇ ತಿಂಗಳ ವರೆಗೆ ತವರು ಮನೆಯಲ್ಲೆ ಇರುತ್ತಾರೆ.

ಮಾನವ ಜೀವರಾಶಿಯ ಅಸ್ತಿತ್ವ ಫಲವಂತಿಕೆಯ ಮೇಲೆ ನಿಂತಿದೆ. ಒಂದು ಜೀವ ಮತ್ತೊಂದು ಜೀವಕ್ಕೆ ಜನ್ಮನೀಡುವ ಶಕ್ತಿಯೇ ಫಲವಂತಿಕೆ. ಫಲವಂತಿಕೆ ಎಂದರೆ ಗರ್ಭಧಾರಣ ಶಕ್ತಿ. ಇದು ಪ್ರಾಣಿ, ಪಕ್ಷಿ, ಸಸ್ಯ, ಮಾನವ ಎಂಬ ಭೇದವಿಲ್ಲದೆ ಎಲ್ಲ ಜೀವರಾಶಿಗಳಲ್ಲಿಯೂ ಗೋಚರಿಸುವ ಸಾಮಾನ್ಯ ಅಂಶ. ನಿಸರ್ಗದ ಅನಂತ ಜೀವರಾಶಿಗಳನ್ನು ಗಮನಿಸಿದಾಗ ಮಾನವ ಭೂಮಿಯನ್ನು ಅದ್ಭುತ ಫಲವಂತಿಕೆಯ ಮೊತ್ತವೆಂದು ಭಾವಿಸಿರುವ ಸಾಧ್ಯತೆಯನ್ನು ಬುಡಕಟ್ಟು ಸಂಸ್ಕೃತಿಯಲ್ಲಿರುವ ಕೆಲವೊಂದು ಆಚರಣೆಗಳಿಂದ ವ್ಯಕ್ತವಾಗುತ್ತದೆ. ಮಹಿಳೆಗೆ ನಿಸರ್ಗ ನೀಡಿದ ವಿಶಿಷ್ಟ ಕೊಡುಗೆಯೆಂದರೆ ಗರ್ಭಧಾರಣಾ ಶಕ್ತಿ. ಆಕೆಗೆ ಸಮಾಜದಲ್ಲಿ ಸ್ಥಾನಮಾನವೇನಾದರೂ ದೊರೆತಿರುವುದು ಈ ಕಾರಣ ದಿಂದಲೇ ಎಂಬುದು ಸತ್ಯಸಂಗತಿ. ಫಲವಂತಿಕೆಯಿಂದಾಗಿ ಹೆಣ್ಣನ್ನು ನಿಸರ್ಗಕ್ಕೆ ಹೋಲಿಸಲಾಗುತ್ತದೆ. ಹೆಣ್ಣಿನ ಗರ್ಭಧಾರಣ ಶಕ್ತಿ ಮತ್ತು ಭೂಮಿಯ ಸಸ್ಯಧಾರಣ ಶಕ್ತಿಗೂ ಸಂಬಂಧವಿರುವುದನ್ನು ನಾವು ನೋಡುತ್ತೇವೆ.

"ಗದ್ದೆಗೆ ಹಸಿರು ಚಂದ, ಹೆಂಗಸಿಗೆ ಬಸಿರು ಚಂದ" ಎಂಬ ಗಾದೆಯನ್ನು ನೋಡಬಹುದು. ಫಲ ಬಿಡುವ ವೃಕ್ಷಕ್ಕೆ ಹೆಣ್ಣನ್ನು ಹೋಲಿಸಲಾಗುತ್ತದೆ. ಒಂದು ಹೆಣ್ಣು ಋತುಮತಿಯಾದ ಮೇಲೆ ಮಧ್ಯವಯಸ್ಸಿನಲ್ಲಿ ಆಕೆಯ ಋತುಚಕ್ರ ನಿಲ್ಲುವವರೆಗೆ ಇರುವ ಕಾಲವನ್ನು ಫಲವಂತಿಕೆಯ ಕಾಲ ಎಂದು ಗುರುತಿಸುತ್ತೇವೆ. ಜನಪದರು ತಮ್ಮ ಅನುಭವದಿಂದ ಹೆಣ್ಣಿನ ಸೃಷ್ಟಿಶಕ್ತಿಯನ್ನು ಗುರುತಿಸಿದ್ದರು. ಆದುದರಿಂದಲೆ ಋತುಮತಿ, ವಿವಾಹ, ಗರ್ಭಧಾರಣೆಯಂಥ ಸಂದರ್ಭಗಳಲ್ಲಿ ಕೆಲವೊಂದು ಆಚರಣೆಗಳನ್ನು ಮಾಡಲಾಗುತ್ತದೆ. 'ಕುಂತಾಗ ಬರಬ್ಯಾಡ, ನಿಂತಾಗ ಬರಬ್ಯಾಡ, ಮಲಗಿದಾಗ ಬರಬ್ಯಾಡ' ಎಂಬ ಮಾತನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ.

ಸಾವು

ಸಾಮಾನ್ಯವಾಗಿ ಎಲ್ಲ ಜನಾಂಗದವರ ಆಚರಣೆಯಲ್ಲಿರುವಂತೆ ಕೊರವರಲ್ಲಿಯೂ ಸಾವಿನ ಸಂದರ್ಭದಲ್ಲಿ ಕೆಲವು ಆಚರಣೆಗಳಿವೆ. ಯಾವ ಮನೆಯಲ್ಲಿ ಸಾವು ಸಂಭವಿಸುತ್ತದೆಯೋ ಆ ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಕೆಲವರು ರಾತ್ರಿ ವೇಳೆಯಲ್ಲಿ ಸತ್ತರೆ ಭಜನೆಯು ನಡೆಯುತ್ತದೆ. ಯಾವುದೇ ವ್ಯಕ್ತಿ ಸತ್ತಾಗ ಅವಳ ಅಥವಾ ಅವನ ತಲೆಯ ಮೇಲೆ ದೀಪ, ಊದುಬತ್ತಿ, ಹಚ್ಚುತ್ತಾರೆ ಅದು ಅವರನ್ನು ಮಣ್ಣು ಮಾಡುವವರೆಗೆ ಹಾಗೆಯೇ ಇರುತ್ತದೆ. ಶವವನ್ನು ಒಂದು ದಿನ ಮಾತ್ರ ಇರಿಸಿಕೊಳ್ಳುತ್ತಾರೆ. ಸತ್ತವ್ಯಕ್ತಿಯ ಹೊಟ್ಟೆಯ ಮೇಲೆ ಉಪ್ಪಿನ ಗಂಟು ಇಡಲಾಗುತ್ತದೆ. ಏಕೆಂದರೆ ಹೊಟ್ಟೆ ಉಬ್ಬಿ ಒಡೆಯಬಾರದೆಂದು ಈ ರೀತಿ ಮಾಡಲಾಗುತ್ತದೆ. ಬಂಧು ಬಳಗ, ಮಿತ್ರರುಗಳಿಗೆ ತಿಳಿಸುತ್ತಾರೆ. ಬಂದವರೆಲ್ಲ, ಹೂವು, ಕಾಯಿ ಕರ್ಪೂರ, ಊದಿನಕಡ್ಡಿ ಕಡ್ಡಾಯವಾಗಿ ತಂದೆ ತರುತ್ತಾರೆ. ಹಾರ ಹಾಕಿ, ಊದಿನ ಕಡ್ಡಿ ಬೆಳಗುತ್ತಾರೆ. ಆ ದಿನ ಮನೆಯಲ್ಲಿ ಬೆಂಕಿ ಹಾಕುವುದಿಲ್ಲ. ಅಕ್ಕ ಪಕ್ಕದವರೇ ಅವರಿಗೆ ಟೀ ಕಾಫಿ ತಂದುಕೊಡುತ್ತಾರೆ. ಬಂದವರೆಲ್ಲರೂ ದುಃಖತಪ್ತವಾದ ಕುಟುಂಬಕ್ಕೆ ಸಮಾಧಾನ ಮಾಡುತ್ತಿರುತ್ತಾರೆ. ಎಲ್ಲರೂ ಬಂದ ಮೇಲೆ ಶವ ತೆಗೆದುಕೊಂಡು ಹೋಗಲು ಹೇಳುತ್ತಾರೆ.

ಸತ್ತ ವ್ಯಕ್ತಿಗೆ ಸ್ನಾನ ಮಾಡಿಸಿ, ಬಟ್ಟೆ ಉಡಿಸಿ ಹಣೆಗೆ ವಿಭೂತಿ ನಾಮ ಇಟ್ಟು, ಕುಂಕುಮ ಇಟ್ಟು ಸಿದ್ಧ ಮಾಡಲಾಗುತ್ತದೆ. ಬಾಯಿಗೆ ಎಲೆ ಅಡಿಕೆ ಕುಟ್ಟಿ ಇಟ್ಟಿರುತ್ತಾರೆ. ಹೊಸ ಗಡಿಗೆ, ಮುಚ್ಚಳ ತಂದು ಕೂಳು ಮಾಡಿ (ಅನ್ನಮಾಡಿ) ಶವಕ್ಕೆ ಹೂ ಹಾಕಿ, ಹೆಂಡತಿಯನ್ನು ಪಕ್ಕಕ್ಕೆ ಕೂರಿಸಿ ಆಕೆಗೆ ಮಡಿಲಕ್ಕಿ ಹಾಕಲಾಗುತ್ತದೆ. ಮುತ್ತೈದೆಯ ಕೊನೆ ಮಡಿಲಕ್ಕಿ ಇದಾಗಿದೆ. ಹಿರಿಯ ಮಗ ಅಥವಾ ಕಿರಿಯ ಮಗನಿಗೆ ಬೆಂಕಿಯ ಕುಂಡವನ್ನು ಕೊಡುತ್ತಾರೆ. ಶವವನ್ನು ಚಟ್ಟದ ಮೇಲೆ ಮಲಗಿಸಿ ತೆಗೆದುಕೊಂಡು ಹೋಗುವಾಗ, ಜೊತೆಗೆ ಹೆಂಡತಿಯು ಹೋಗಬೇಕಾಗುತ್ತದೆ. ಮನೆಯಲ್ಲಿ ಆರೋಗ್ಯ ಸರಿಯಿಲ್ಲದವರು ಮತ್ತು ಮಕ್ಕಳು ಉಳಿದುಬಿಡುತ್ತಾರೆ. ದಾರಿಯುದ್ದಕ್ಕೂ ರಾಗಿ, ಹಣ, ಎಲೆ, ನವಣಕ್ಕಿ, ಮಂಡಕ್ಕಿ ಉಗ್ಗಿಕೊಂಡು ಹೋಗುತ್ತಾರೆ. ಏಕೆಂದರೆ ಸತ್ತ ವ್ಯಕ್ತಿ

ಗಾಳಿಯಾಗಿ ಅಥವಾ ದೆವ್ವವಾಗಿ ಮನೆಗೆ ಬರಬಾರದೆಂಬ ನಂಬಿಕೆ ಇಂದಿಗೂ ಇದೆ. ಒಂದು ವೇಳೆ ಆತ್ಮ ಬಂದರೆ ಅವುಗಳನ್ನು ಆರಿಸಿಕೊಂಡು ಬರಲು ಆಗುವುದಿಲ್ಲ ಎಂದು ಈರಮ್ಮಜ್ಜಿ ಹೇಳುತ್ತಾರೆ. ಅತಿಯಾದ ಪ್ರೀತಿ ಇರುವವರೂ ಇವುಗಳೆಲ್ಲ ಅರಿಸಿಕೊಂಡು ಬರುತ್ತಾರೆ. ಚಿಕ್ಕ ಮಕ್ಕಳಾದರೆ ಸೋದರಮಾವ ಕೈಯಲ್ಲಿ ಎತ್ತುಕೊಂಡು ಸ್ಮಶಾನಕ್ಕೆ ಕರೆದೊಯ್ಯುತ್ತಾನೆ. ಮೊದಲೆ ಹೊಲೆಯರಿಗೆ ಗುಂಡಿ ತೋಡಲು ಹೇಳಿರುತ್ತಾರೆ. ಕುಳಿಗೆ ಹೋಗುವುದಕ್ಕಿಂತ ಸ್ವಲ್ಪ ದೂರದಲ್ಲಿ ಶವವನ್ನು ಇಳಿಸಿ ತಂದ ಕುಳನು ಅಲ್ಲಿಯೇ ಇಟ್ಟು ಹಾಸಿಗೆ ಹೊದಿಕೆಗಳನ್ನು ಬಿಟ್ಟು ಶವವನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕುಣಿಯ ಹತ್ತಿರ ಹೋದ ಮೇಲೆ. ಕುಣಿಗೆ ಪೂಜೆ ಮಾಡಿ ದಕ್ಷಿಣ ದಿಕ್ಕಿನಲ್ಲಿ ಬೆತ್ತಲೆಯಲ್ಲಿ ಮಲಗಿಸಿ, ಮೈಮೇಲೆ ಸೊಪ್ಪುಗಳನ್ನು ಹಾಕುತ್ತಾರೆ. ನಂತರ ಮಣ್ಣುಹಾಕುತ್ತಾರೆ. ಬಂದವರೆಲ್ಲರೂ ಮಣ್ಣುಕೊಟ್ಟು ಹೋಗುತ್ತಾರೆ. ಸತ್ತ ವ್ಯಕ್ತಿಯ ಮಣ್ಣು ಎತ್ತರವಾಗಿದ್ದರೆ ಅವರ ಆಯುಷ್ಯ ಇಲ್ಲಿಗೆ ಮುಗಿದಿತ್ತು ಎಂದು ನಂಬಿಕೆ.

ಬಂದವರೆಲ್ಲರೂ ಮಣ್ಣು ಮಾಡಿದ ಜಾಗದಲ್ಲಿ ಕಾಯಿ ಹೊಡೆದು ಕರ್ಪೂರ, ಊದಿನಕಡ್ಡಿ ಹಚ್ಚಿ ಪೂಜೆ ಮಾಡುತ್ತಾರೆ. ನಂತರ ಬೀಗರು ತಂದ ಹೂವಿನ ಹಾರಗಳು ತುಂಬಾ ಇದ್ದರೆ ಅವರು ಸ್ವರ್ಗಕ್ಕೆ ದಾರಿ ಹಿಡಿದಿದ್ದಾರೆ ಎಂಬ ನಂಬಿಕೆ ಒಳ್ಳೆಯ ಮನುಷ್ಯ, ಅದೃಷ್ಟ ಮಾಡಿದನಪ್ಪ ಎಂದು ಹೇಳುತ್ತಾರೆ. ಆ ವ್ಯಕ್ತಿ ಬಳಸುತ್ತಿದ್ದ ವಸ್ತುಗಳನ್ನು ಸ್ಮಶಾನದಲ್ಲಿಯೇ ಬಿಟ್ಟುಹೋಗುತ್ತಾರೆ. ಸತ್ತ ವ್ಯಕ್ತಿಯನ್ನು ಮಣ್ಣು ಮಾಡಿದ ಮೇಲೆ ಹೆಂಡತಿಗೆ ೫ ಜನ ವಿಧವೆಯರಿಂದ ಅವಳ ಮುತ್ತೈದೆತನವನ್ನು ಕಳೆದುಹಾಕುತ್ತಾರೆ (ಹೂ, ಬಳೆ, ಕಾಲುಂಗರ, ತಾಳಿ ಕುಂಕುಮವನ್ನು ತೆಗೆದು ಹಾಕುತ್ತಾರೆ). ನಂತರ ಆ ಮಹಿಳೆ ಯಾರಿಗೂ ಕಾಣದಂತೆ ಮುಖವನ್ನು ಮುಚ್ಚಿಕೊಂಡು ಸಂಜೆಯ ನಂತರ ಮನೆಗೆ ಬರಬೇಕಾಗುತ್ತದೆ. ಅವಳ ಜೊತೆಗೆ ಕೆಲವರು ಇಲ್ಲಿಯೇ ಇರುತ್ತಾರೆ. ಮಣ್ಣು ಮಾಡಿದ ಮೇಲೆ ಬಂಧುಗಳು ದೀಪ ನೋಡಲು ಬರುತ್ತಾರೆ. ಬರುವುದರೊಳಗೆ ಮನೆಯನ್ನು ಸ್ವಚ್ಚವಾಗಿ ಮಾಡಿ, ಸೆಗಣಿಯಿಂದ ಮಾಡಿದ ದೀಪವನ್ನು ಬಾಗಿಲಿಗೆ ಕಾಣುವಂತೆ ಇಡಲಾಗುತ್ತದೆ. ಬಾಗಿಲ ಹೊರಗಡೆ ಹರಳೆಣ್ಣೆ, ನೀರು ಇಟ್ಟಿರುತ್ತಾರೆ. ಬಂದವರೆಲ್ಲರೂ ಕೈ ಕಾಲು ತೊಳೆದುಕೊಂಡು ಕೈಯನ್ನು ಎಣ್ಣೆಯಲ್ಲಿ ಅದ್ದಿ ದೀಪ ನೋಡಿಕೊಂಡು ಹೋಗುತ್ತಾರೆ. ಮನೆಯಲ್ಲಿರುವವರೆಲ್ಲರೂ ಸ್ನಾನ ಮಾಡಿ ಮನೆ ಸ್ವಚ್ಛ ಮಾಡಿರಬೇಕು. ಕೆಲವರು ಕಾಲುವೆಗಳಲ್ಲಿ ಸ್ನಾನ ಮಾಡಿಕೊಂಡು ಬರುತ್ತಾರೆ.

ಶವ ಮೆರವಣಿಗೆಯು ಜನರಿಗೆ ಎದುರು ಬಂದರೆ ಒಳ್ಳೆಯದು. ಸಂಸ್ಕಾರವಾದ ಮೇಲೆ ಜನ ಬರುವವರನ್ನು ನೋಡಬಾರದು ಎಂದು ಹೇಳುತ್ತಾರೆ. ಬಂದವರೆಲ್ಲರೂ ಸತ್ತ ವ್ಯಕ್ತಿಯ ಮನೆಯವರಿಗೆ ಬೀಗರು 'ವಿಷಬಾಯಿ' ತೊಳಿಸಬೇಕು. (ವಿಷಬಾಯಿ: ಸತ್ತ ಮನೆಯ ಅಣ್ಣ, ಮಗ, ತಮ್ಮಂದಿರುಗಳಿಗೆ ಬೀಗರು ಒಂದು ಲೋಟ ನೀರಿನಿಂದ ಬಾಯಿಯನ್ನು ತೊಳಿಸುತ್ತಾರೆ.

ನಂತರ ಟೀ ಕಾಫಿ ಕುಡಿಸುವುದಕ್ಕೆ ವಿಷಬಾಯಿ ತೊಳಿಸುವುದು ಎಂದು ಹೇಳುತ್ತಾರೆ) ಚಟ್ಟವನ್ನು ಹೊತ್ತುಕೊಂಡ ನಾಲ್ವರು, ೩ ದಿನದ ಕಾರ್ಯದವರೆಗೆ ಹೆಗಲು ಕೊಟ್ಟವರು ಇರುತ್ತಾರೆ. ಅಥವಾ ೩ನೇ ದಿನ ಕಾರ್ಯಕ್ಕೆ ಇರಲು ಹೇಳುತ್ತಾರೆ. ಮೂರನೇ ದಿನ ಮುಂಜಾನೆಯ ಸತ್ತ ವ್ಯಕ್ತಿ ಇಟ್ಟ ಜಾಗದಲ್ಲಿ ಕೋಳಿ ಅಡಿಗೆ ಮಾಡಿಕೊಂಡು ಸ್ಮಶಾನಕ್ಕೆ ಹೋಗಿ ಅವರಿಗೆ ಇಷ್ಟವಾದ ವಸ್ತುಗಳನ್ನಿಟ್ಟು ಪೂಜೆ ಮಾಡಿಕೊಂಡು ಬರುತ್ತಾರೆ. ಆ ದಿನ ಮಾಂಸದಡಿಗೆ ಮಾಡಲಾಗುತ್ತದೆ. ಇದಕ್ಕೆ ಮೂರು ದಿನದ ಕುಳು ಎಂದು ಕರೆಯುತ್ತಾರೆ. ಕನ್ನಡ ಜಾನಪದ ವಿಶ್ವಕೋಶದಲ್ಲಿ "ಅಲೆಮಾರಿ ಕೊರವ ಸತ್ತು ಹೋದರೆ ಸಾಧ್ಯವಾದಷ್ಟು ಬೇಗ ತಲೆಯನ್ನು ಉತ್ತರಕ್ಕಿಟ್ಟು ಹೂತು ಬಿಡುವರು ಎಂದು ತಿಳಿಸುತ್ತಾರೆ. ಆರ್.ಇ. ಎಂಥೋವನ್ ಅವರು "The dead are either burnt or buried, burying being more common" ಎಂದಿದ್ದಾರೆ.

ಈ ಪದ್ಧತಿಯನ್ನು ಶ್ರೀ ಎಚ್.ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು "The dead are buried. As soon as life if extinet, the body is washed, and a nama marüe in put on the fore head it a male and a kumkuma one if a female. Then it is covered with a new cloth and carried to the burial ground on a bier of bamboos. The carries must, if possible, be all related as agnates to the deceased, As usual, the body is placed on the l chief mourner going round it three times from right to left; breaks a new pot, standing by the head of the corpse and throus rice round about the bier. ನಂತರ ಹೆಣ ಹೊತ್ತವರು ಹೆಗಲು ಬದಲಾಯಿಸುವುದು, ಗಂಡಿಗೆ ಹೆಣವನ್ನು ಇಳಿಸಿ ಪೂಜೆ ಮಾಡುವುದು, ತೆಂಕ ದಿಕ್ಕಿಗೆ ತಲೆ ಇಡುವುದು, ನಂತರ ನೀರಿನ ಹತ್ತಿರ ಹೋಗಿ ಕೈ ಕಾಲು ತೊಳೆದು ಸಾವಿನ ಮನೆಯ ದೀಪ ನೋಡುವ ವಿವರಗಳನ್ನು ಹೇಳಿದ್ದಾರೆ".

ಸತ್ತ ವ್ಯಕ್ತಿಯ ಸುದ್ದಿಯನ್ನು ಬೇರೆ ಸ್ಥಳಗಳಲ್ಲಿರುವ ಬಂಧುಗಳಿಗೆ ಹೊಲೆಯರವನೇ ಹೋಗಿ ಹೇಳಬೇಕೆಂಬ ನಿಯಮವೇನೂ ಕಂಡುಬರುವುದಿಲ್ಲ. ಇಂದು ಸಾರಿಗೆ ವ್ಯವಸ್ಥೆ, ಫೋನ್ ಸಹಾಯದಿಂದ ಕ್ಷಣದಲ್ಲಿಯೇ ಸಂಬಂಧಿಕರಿಗೆ ತಿಳಿಸಬಹುದು.

ಮೂರನೆಯ ದಿನ ಗುಡ್ಡೆ ಪೂಜೆ ಮಾಡುತ್ತಾರೆ. ಸಮಾಧಿ ಹತ್ತಿರ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಮನೆಯಲ್ಲಿ ಮಾಡಿಕೊಂಡು ಹೋದ ಫಲಾಹಾರ, ಹೂವು, ಹಣ್ಣು ಇಟ್ಟು, ಕಾಯಿ ಒಡೆದು ಪೂಜೆ ಮಾಡುತ್ತಾರೆ. ಪೂಜೆಯಾದ ಮೇಲೆ ಫಲಾಹಾರವನ್ನು ಬಂದಿದ್ದವರೆಲ್ಲರಿಗೂ ಹಂಚಿ ತಿನ್ನುತ್ತಾರೆ. ಬರುವಾಗ ನೀರಿನ ಹತ್ತಿರ ಹೋಗಿ ಕೈ ಕಾಲು ಮುಖ ತೊಳೆದು ಮನೆಗೆ ಬರುತ್ತಾರೆ. ಮನೆಯಲ್ಲಿದ್ದ ಆಹಾರವನ್ನು ಮಾಡಿಕೊಂಡು ತಿನ್ನುತ್ತಾರೆ.

೫ನೇ ದಿನದ ಕಾರ್ಯ ಶವ ಸಂಸ್ಕಾರವಾದ ಐದನೇ ದಿನದಲ್ಲಿ ಹೆಗಲಿಳಿಸುವ ಶಾಸ್ತ್ರ ಮಾಡುತ್ತಾರೆ. ಹೆಗಲಿಳಿಸುವುದು ಎಂದರೆ ಹೆಣವನ್ನು ಹೊತ್ತುಕೊಂಡು ಹೋಗಿದ್ದ ಐದು ಜನರು ಸ್ನಾನ ಮಾಡಿ, ತಲೆಗೆ ಎಣ್ಣೆ ಹಾಕುತ್ತಾರೆ. ಹೆಗಲು ಹೊತ್ತವರು ಐದನೇ ದಿನಗಳವರೆಗೆ ಮನೆಯ ಹೊರಗೆ ಇರಬೇಕು, ಬೇರೆಯವರು ಮುಟ್ಟಿಸಿಕೊಳ್ಳುವಂತಿಲ್ಲ. ಐದನೆಯ ದಿನ ಸ್ನಾನ ಮಾಡಿದ ಮೇಲೆ ವಿಭೂತಿ ಹಾಕಿ, ತುಪ್ಪ ಮತ್ತು ಗೋಮೂತ್ರಗಳನ್ನು ಬೆರೆಸಿ ಒಂದು ಲೋಟದಲ್ಲಿ ಹಾಕಿಕೊಂಡು ಗರಿಕೆ ಹುಲ್ಲಿನಿಂದ ಆ ಮಿಶ್ರಣವನ್ನು ತೆಗೆದುಕೊಳ್ಳುತ್ತಾ ಆ ನಾಲ್ಕು ಜನರಿಗೂ ಹೆಗಲಿನಿಂದ ಕೆಳಕ್ಕೆ ಐದು ಬಾರಿ ಕೆಳಗೆ ಮೇಲೆ ಮಾಡಿ ಬಿಡುತ್ತಾರೆ. ಅಲ್ಲಿಗೆ ಅವರ ಹೆಗಲನ್ನು ಇಳಿಸಿದಂತೆ ಆಗುತ್ತದೆ. ಅವರಿಗೆ ಮಾಂಸದಡಿಗೆ ಮಾಡಿ ಉಣಬಡಿಸುತ್ತಾರೆ. ಅವರಿಗೆ ಕುಡಿಯುವಷ್ಟು ಸಾರಾಯಿ ಇಂದಿಗೂ ಕೊಡಲಾಗುತ್ತದೆ. ಒಂದು ಜಾನಪದ ಮಾತಿನಂತೆ ಸತ್ತ ಕೋತಿಯನ್ನಾಗಲಿ, ಕೊರವರ ಸ್ಮಶಾನವನ್ನಾಗಲಿ ಯಾರು ಕಂಡಿದ್ದಾರೆ ಎಂದು ಹೇಳುತ್ತಾರೆ. ಕೊರವರಿಗೆ ಒಂದು ಪ್ರತ್ಯೇಕವಾದ ಸ್ಮಶಾನವಿಲ್ಲ ಇವೆಲ್ಲ ಸಮುದಾಯಗಳ ಜನರ ಆಚರಣೆಯು ಪಳೆಯುಳಿಕೆಗಳು ಸಂಸ್ಕೃತೀಕರಣಗೊಂಡ ಮೇಲೆ ಇವು ಬದಲಾಗಿರುವುದು ಸ್ವಾಭಾವಿಕವೇ ಆಗಿದೆ.

ಹೆಗಲಿಳಿಸುವ ದಿನ ಸಾವಿನ ಮನೆಯವರೆಲ್ಲರೂ ಸ್ನಾನ ಮಾಡಿ ಒಂದು ಕೋಳಿ, ಶಕ್ತಿಯಿದ್ದರೆ ಹಂದಿ ಕಡಿದು ಅದರ ಹೊಟ್ಟೆಯ ಕಳ್ಳು ಪಚಡಿಗಳನ್ನು ತೆಗೆದುಕೊಂಡು ಬೇರೆ ಸಾರು ಮಾಡುತ್ತಾರೆ. ಇದರ ಜೊತೆ ಜೊತೆಗೆ ತಾವು ಮಾಡಿದ ಇತರ ಅಡಿಗೆಯನ್ನು ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೂವು, ಹಣ್ಣು ಕಾಯಿ, ಊದಿನಕಡ್ಡಿ ಕರ್ಪೂರ ತೆಗೆದುಕೊಂಡು ಹೋಗಿ ಸಮಾಧಿಗೆ ಪೂಜೆ ಮಾಡಿ ಕಾಯಿ ಹೊಡೆದು ಬರುತ್ತಾರೆ. ಅಲ್ಲಿಂದ ತಂದ ಆಹಾರವನ್ನು ಒಂದು ಕಡೆ ಎಡೆ ಹಾಕಿ ಪೂಜೆ ಮಾಡುತ್ತಾರೆ. ನಂತರ ಎಲ್ಲರೂ ದೂರ ಹೋಗಿ ಕುಳಿತುಕೊಳ್ಳುತ್ತಾರೆ. ಏಕೆಂದರೆ ಎಡೆಯನ್ನು ಕಾಗೆ ಮುಟ್ಟಬೇಕು ಎಂದೂ ಕಾಗೆಗಳು ಬೇಗ ಬಂದು ಆ ಎಲೆಗಳ ಆಹಾರವನ್ನು ಮುಟ್ಟಿದರೆ ಸತ್ತವರಿಗೆ ಮುಕ್ತಿ ಸಿಗುವುದು ಎಂದು ನಂಬುತ್ತಾರೆ. ನಂತರ ವಿಧವೆಯಾದ ಹೆಂಡತಿ ೧೬ ದಿನಗಳವರೆಗೆ ಎಲ್ಲಿಗೂ ಹೋಗುವಂತಿಲ್ಲ. ನಂತರ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಕೊಂಡು ತವರು ಮನೆ ಸೀರೆ, ಬಳೆ ತೊಟ್ಟುಕೊಂಡ ಮೇಲೆ ಹೊರಗಡೆ ಹೋಗಬಹುದು.

ತಿಥಿ

ತಿಥಿಯನ್ನು ವ್ಯಕ್ತಿ ಸತ್ತ ೧೬ನೇ ದಿನದಂದು ಮಾಡಲಾಗುತ್ತದೆ. ಅನುಕೂಲವಾಗದಿದ್ದರೆ ತಿಂಗಳೊಳಗೆ ಮಾಡುತ್ತಾರೆ. ತಿಥಿ ಮಾಡುವಾಗ ೧೬ನೇ ದಿನವೇ ಮನೆಯನ್ನು ಗುಡಿಸಿ ಸ್ವಚ್ಛ ಮಾಡಿಕೊಳ್ಳಬೇಕು. ಆ ದಿನ ಕುಲಸ್ಥರೆಲ್ಲರಿಗೂ ಊಟ ಹಾಕಲಾಗುತ್ತದೆ. ಇದ್ದವರು ಹೆಚ್ಚು

ಹಂದಿಗಳನ್ನು ಅಥವಾ ಕುರಿಯನ್ನು ಕಡಿದು ಅಡಿಗೆ ಮಾಡಿದರೆ ಬಡವರು ತಮ್ಮ ಯೋಗ್ಯತಾನುಸಾರವಾಗಿ ಊಟ ಹಾಕುತ್ತಾರೆ. ಸಾಮಾನ್ಯವಾಗಿ ತಿಥಿಯ ದಿನ ಮಾಂಸದೂಟವೇ ಪ್ರಮುಖವಾಗಿರುತ್ತದೆ. ಈ ಕಾರ್ಯವನ್ನು ರಾತ್ರಿ ಸಮಯದಲ್ಲಿ ಮಾಡಲಾಗುತ್ತದೆ. ಒಂದು ಕುರಿಯನ್ನು ಸತ್ತ ವ್ಯಕ್ತಿಯ ಫೋಟೋ ಮುಂದೆ ಪೂಜೆ ಮಾಡಿ, ಎರಡು ಎಡೆಯನ್ನು ಮಾಡಲಾಗುತ್ತದೆ. ಕುರಿಯನ್ನು ಬಾಗಿಲ ಮುಂದೆ ಕಡಿದು ಅದು ಎಷ್ಟು ಬಾರಿ ಬಾಯಿ ತೆರೆಯುತ್ತದೆಯೋ ಅಷ್ಟು ಸಾರಿ ಒಳ್ಳೆಯದು ಎಂಬ ನಂಬಿಕೆ ಇದೆ. ಕುರಿ ಕಡಿದ ಮೇಲೆ ಅಡಿಗೆ ಮಾಡಿ ೭ ಗಂಟೆಗೆ ಮೊದಲ ಅನ್ನ ಮಾಂಸದ ಪಲ್ಲೆಯನ್ನು ಎಡೆ ಮಾಡುತ್ತಾರೆ. ನಂತರ ಅವರಿಗೆ ಇಷ್ಟವಾದ ಎಲ್ಲ ಪದಾರ್ಥಗಳನ್ನು ಚಾಚೂ ತಪ್ಪದೆಯೇ ಅಲ್ಲಿ ಇಟ್ಟಿರುತ್ತಾರೆ ಮತ್ತು ದೂಪ ಹಾಕುತ್ತಾರೆ. ಎರಡನೇ ಎಡೆಗೆ ಮಾಂಸದ ಅಡುಗೆ ಮಾಡಿ ಮತ್ತೆ ಪೂಜೆ ಮಾಡಿ, ಎಲ್ಲರೂ ನಿಶ್ಯಬ್ದದಿಂದ ಮನೆಯನ್ನು ಒಂದು ಸುತ್ತುವರೆದು ಗಂಗಾಳದಿಂದ ಹಿಂದುಗಡೆ ಹೊಡೆಯುತ್ತಾರೆ. ಹೊಡೆಯುವುದರಿಂದ ಸತ್ತವ್ಯಕ್ತಿಗೆ ಯಾವುದು ಆಹಾರ ಇಷ್ಟವಾಗಿರುತ್ತದೆಯೋ ಆ ಪದಾರ್ಥವನ್ನು ಮುಟ್ಟಿಹೋಗುತ್ತಾನೆ ಎಂಬ ನಂಬಿಕೆ ಇಂದಿಗೂ ಇದೆ. ನಂತರ ಬಂದು ನೋಡಿದ ಮೇಲೆ ಎಡೆಯನ್ನು ಉಪವಾಸ ಇದ್ದವರು ಮೊದಲು ತಿನ್ನುತ್ತಾರೆ. ಎಲ್ಲರಿಗೂ ಎಡೆ ಹಂಚುತ್ತಾರೆ. ಇವೆಲ್ಲ ಆದ ಮೇಲೆ ಬಂದವರೆಲ್ಲರೂ ಬಂಧು ಬಳಗದವರು ಊಟ ಮಾಡಿಕೊಂಡು ಹೋಗುತ್ತಾರೆ. ಮುಂಚೆಯೇ ಸಮಾಧಿ ಹತ್ತಿರ ಹೋಗಿ ಎಡೆ ಮಾಡಿ ಬಂದಿರುತ್ತಾರೆ.

ಹಿರಿಯರಲ್ಲಿ ಕೂಡಿಸಿಕೊಳ್ಳುವುದು

ವ್ಯಕ್ತಿ ಸತ್ತ ಮೇಲೆ ಸಂಪ್ರದಾಯದಂತೆ ಎಲ್ಲ ಕಾರ್ಯಗಳು ಮಾಡಿದ ಮೇಲೆ ಸತ್ತವರು ನಮ್ಮನ್ನು ಕಾಡುವುದಿಲ್ಲ, ಅಂತ್ಯಕ್ರಿಯೆ ಎಲ್ಲವೂ ಸರಿಯಾಗಿ ಮಾಡಿದ್ದೇವೆ ಎಂದು ತಿಳಿದುಬಂದರೆ ಸತ್ತ ವ್ಯಕ್ತಿಯ ಆತ್ಮವನ್ನು ಆ ವರ್ಷದ ಹಿರಿಯರ ಹಬ್ಬದಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಅಂದರೆ ತಮ್ಮ ಪೂರ್ವಜರ ಆತ್ಮಗಳೊಂದಿಗೆ ಸೇರಿಸುವುದು. ಕೆಲವರು ದಸರಾದಲ್ಲಿ ಹಿರಿಯರನ್ನು ಸೇರಿಸಿಕೊಂಡರೆ, ಕೆಲವರು ದೀಪಾವಳಿ, ಯುಗಾದಿಯ ಹಬ್ಬದಲ್ಲಿ ಸೇರಿಸಿಕೊಳ್ಳುತ್ತಾರೆ. (ಹಬ್ಬಗಳ ದಿನ ವ್ಯಕ್ತಿ ಸತ್ತರೆ ಮೂರು ವರ್ಷಗಳವರೆಗೆ ಹಬ್ಬವನ್ನು ಆಚರಿಸುವಂತಿಲ್ಲ.) ಮುಂದೆ ಪ್ರತಿವರ್ಷವೂ ಪೂಜೆ ನಡೆಯುತ್ತಾ ಇರುತ್ತದೆ. ಹಿರಿಯರ ಪೂಜೆ ದಿನ ಹಿರಿಯರಿಗೆ ಬಟ್ಟೆ ತಂದು ಏರಿಸಿ ಮನೆಯವರು ಉಟ್ಟುಕೊಳ್ಳ ಬೇಕಾಗುತ್ತದೆ. ಹಿರಿಯರಲ್ಲಿ ಸೇರಿಸಿಕೊಂಡ ಮೇಲೆ ಸಾವಿನ ಸಂಪ್ರದಾಯಗಳು ಮುಗಿಯುತ್ತವೆ.

೧೬ನೇ ದಿನ ತಿಥಿಯಾದ ನಂತರ ಮಹಿಳೆಗೆ ತವರು ಮನೆಯವರು ೨೧ನೇ ದಿನದಂದು ದೇವಾಲಯದಲ್ಲಿ ಪುಣ್ಯಸ್ನಾನ ಮಾಡಿಸಿ ಅವರಿಗೆ ತವರು ಮನೆ ಸೀರೆಯನ್ನು ತೊಡಿಸಲಾಗುತ್ತದೆ. ನಂತರ ತಿಂಗಳ ಒಳಗೆ ಮನೆ ಮಗಳಿಗೆ ಸೀರೆ ನೀಡಿ, ತಾಯಿಗೆ ಐದು ತಿಂಗಳವರೆಗೆ ಸೀರೆ

ನೀಡಲಾಗುತ್ತದೆ. ಅವಳಿಗೆ ಶಾಂತಿ ಮಾಡಲಾಗುತ್ತದೆ. ಬಳೆ ತೊಡಿಸುತ್ತಾರೆ. ಹಿಂದಿನ ಕಾಲದವರು ಹಣೆಯಲ್ಲಿ ಕುಂಕುಮ, ಹೂವು ಇಡುತ್ತಿರಲಿಲ್ಲ. ಇಂದಿನ ಕಾಲದಲ್ಲಿ ಕೆಲವರಲ್ಲಿ ಕುಂಕುಮ ಹೂವು ತೊಡುವುದು ಕಂಡುಬರುತ್ತದೆ. ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಕೆಲವರಲ್ಲಿ ಕಂಡುಬರುತ್ತದೆ.

ಮದುವೆಯಾಗದೆ ಇದ್ದವರು ಸತ್ತರೆ ಅವರನ್ನು ಸೋದರ ಮಾವನಿಂದ ತಾಳಿ ಕಟ್ಟಿಸಿ ಮುತ್ತೈದೆಯಾಗಿ ಹೂಳುತ್ತಾರೆ. ಇತರೆ ಎಲ್ಲ ಆಚರಣೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುತ್ತಾರೆ. ದೋಷವೇನಾದರೂ ಇದ್ದರೆ ಬ್ರಾಹ್ಮಣರಿಂದ ಮನೆಗೆ ಶಾಂತಿ ಮಾಡಿಸುತ್ತಾರೆ. ನವಗ್ರಹಗಳ ಪೂಜೆ ಮಾಡಿಸಲಾಗುತ್ತದೆ. ಮುಂದೆ ಮಕ್ಕಳು ಮರಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿ ಕೊಳ್ಳಲಾಗುತ್ತದೆ. ಪೂಜೆಯಲ್ಲಿ ೯ ದಿನಸಿನ ಕಾಳುಗಳನ್ನು ತಂದು ೯ ತೆಂಗಿನ ಕಾಯಿ ೧ ಮರದಿಂದ ಇಳಿಸಿದ ತೆಂಗಿನಕಾಯಿಯನ್ನು ಒಂದು ಬಿಳಿಬಟ್ಟೆಯಲ್ಲಿ ಕಟ್ಟಿ ಪೂಜೆ ಮಾಡುತ್ತಾರೆ. ೯ ತರಹದ ಕಾಳುಗಳನ್ನು ಇಡಲು ಪಾತ್ರೆ ಮತ್ತು ಸತ್ತವರ ಫೋಟೋ ತೆಗೆದುಕೊಂಡು ಮೊದಲು ಗಣೇಶ ಪೂಜೆ ಮಾಡಿ ನವಗ್ರಹ ಪೂಜೆ ಮಾಡಿ, ನೀರುಕಾಯಿ ಮನೆಯ ಬಾಗಿಲ ಮೂಲೆಗೆ ಕಟ್ಟಿ ಗೋಮೂತ್ರದಿಂದ ಮನೆಯಲ್ಲಿ ಸಿಂಪಡಿಸಿ, ಶುಚಿ ಮಾಡುತ್ತಾರೆ. ಬ್ರಾಹ್ಮಣರಿಗೆ ದಾನವಾಗಿ ಪೂಜೆಗೆ ತಂದ ಎಲ್ಲ ವಸ್ತುಗಳನ್ನು ಕೊಡಲಾಗುತ್ತದೆ. ನಂತರ ಮನೆಯಲ್ಲಿ ಪೂಜೆ ಮೊದಲಾದ ಕಾರ್ಯಗಳನ್ನು ಮಾಡಿಕೊಳ್ಳಬಹುದಾಗಿದೆ.

ವಾರ್ಷಿಕಾವರ್ತನಗಳು

ಕೊರವರ ಸಮುದಾಯದವರು ಅಲೆಮಾರಿಗಳು ಆಗಿರುವುದರಿಂದ ಪ್ರದೇಶಾನುಗುಣವಾಗಿ ದೇವರುಗಳನ್ನು ಪೂಜಿಸುತ್ತಾರೆ. ಎಲ್ಲ ದೇವರುಗಳು ಇವರಿಗೆ ಪೂಜನೀಯವಾಗಿದೆ. ಕಂಡ ಕಂಡ ಕಲ್ಲಿಗೆ ಕೈ ಮುಗಿಯುವ ಇವರಿಗೆ ಮನೆ ದೇವತೆಗಳು, ಸ್ಥಳೀಯ ದೇವತೆಗಳು, ನಾಡದೇವತೆಗಳು ಒಂದೇ ಕಂಡುಬರುತ್ತವೆ. ತಮ್ಮ ಹಿರಿಯರು ಮೂಲ ನೆಲೆಯಿಂದ ಹೊರಟಾಗ ಅವರ ಜೊತೆಯಲ್ಲಿ ಬಂದ ದೇವತೆಗಳ ಬಗೆಗೆ ತಿಳಿದು ಬಂದಿಲ್ಲ. ಕೆಲವರು ವೆಂಕಟೇಶ್ವರ, ಸುಬ್ರಹ್ಮಣ್ಯ ಮೂಲ ದೇವರು ಎಂದು ತಿಳಿಸಲಾಗುತ್ತದೆ. ಇಂದಿನ ದಿನಗಳಲ್ಲಿ ಈ ಸಮುದಾಯದವರು ವೆಂಕಟೇಶ್ವರ, ಹನುಮಂತ, ಈರಣ್ಣ ದೇವರನ್ನು ಆರಾಧಿಸುವುದು ಹೆಚ್ಚಾಗಿ ಕಂಡುಬರುವುದುಂಟು. ಹೆಚ್ಚಿನವರು ತಿರುಪತಿಯನ್ನು ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ಮೂಢನಂಬಿಕೆಗೆ ದಾಸರಾದ ಇವರಿಗೆ ದೇವರ ಬಗೆಗೆ ವಿಶೇಷವಾದ ನಂಬಿಕೆ ಭಯಭಕ್ತಿಯನ್ನು ಕಾಣಬಹುದು. ವಾರದಲ್ಲಿ ಒಂದು ದಿನವನ್ನು ವಾರದ ದಿನವೆಂದು ಆಚರಿಸುತ್ತಾರೆ. ಕೆಲವರು ಶುಕ್ರವಾರ, ಮಂಗಳವಾರ, ಕೆಲವರು ಸೋಮವಾರ ಮಾಡಿದರೆ ಇತ್ತೀಚೆಗೆ ಕೆಲವರು ಗುರುವಾರವನ್ನು ಆಚರಿಸುತ್ತಾರೆ. ಅಂದರೆ ಇವರು ಪ್ರಾತಿನಿತ್ಯವು ದೇವರಿಗೆ ಪೂಜೆ ಮಾಡುತ್ತಿರಲಿಲ್ಲವೆಂದಲ್ಲ.

ಏಕೆಂದರೆ ಕೊರವರು ಕೆಲಸದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಅವರಿಗೆ ಸಮಯ ದೊರೆಯುವುದಿಲ್ಲ ಎಂದು ಕೆಲವರು ಹೇಳುತ್ತಾರೆ.

ಇವರು ಬೆಳಿಗ್ಗೆ ಎದ್ದ ಮೇಲೆ ಮನೆಯ ಬಾಗಿಲಿನಲ್ಲಿ ಹೊರಗಡೆ ಬಾಗಿಲಿಗೆ ಪೂಜೆ ಮಾಡಿ, ಮುಖ ತೊಳೆದುಕೊಂಡು ನಿತ್ಯ ಸೂರ್ಯ ನಮಸ್ಕಾರ ಮಾಡುವುದು ಕಂಡುಬರುತ್ತದೆ. ಕೆಲವು ಮನೆಗಳಲ್ಲಿ ಕೋಣೆಯಷ್ಟನ್ನೇ ಸಾರಿಸಿ ಯಾರಾದರೊಬ್ಬರು ಸ್ನಾನ ಮಾಡಿ ಪೂಜಿಸುವುದೂ ಇದೆ. ಕೆಲವರು ಆ ದಿನ ಕೋಣೆಯಲ್ಲಿ ಮಾಂಸದ ಅಡಿಗೆ ಮಾಡುವುದಿಲ್ಲ. ಹಿಂದಿನ ದಿನ ಮಾಡಿದ್ದು ಇದ್ದರೂ ಅದನ್ನು ಕೋಣೆಯಿಂದ ಹೊರಗಿಟ್ಟು ಶುಚಿಗೊಳಿಸುತ್ತಾರೆ. ಒಂದೊಂದು ವಂಶದ ಕುಟುಂಬ ಗಳು ಬೇರೆ ಬೇರೆ ಹೆಸರಿನ ಮನೆ ದೇವತೆಗಳನ್ನು ಪೂಜಿಸುತ್ತಾರೆ. ಕೈಕಾಡಿಗಳು ಭವಾನಿಯನ್ನು ಕೊರವರು ಸುಬ್ರಹ್ಮಣ್ಯವನ್ನು, ಯರಕಲರು ಲಕ್ಷ್ಮಿವೆಂಕಟೇಶರನನ್ನು ಪೂಜಿಸಿದರೆ, ಕೊಲ್ಲಾಪುರದಮ್ಮ ಪೆರಮಾಳಾಸ್ವಾಮಿ ಅಂದರೆ ವೆಂಕಟೇಶ, ಯಲ್ಲಮ್ಮ ಮೊದಲಾದ ದೇವತೆಗಳನ್ನು ಪೂಜಿಸುವವರಿದ್ದಾರೆ. ಮಾರುತಿಯನ್ನು ವಿಶೇಷವಾಗಿ ಪೂಜಿಸುತ್ತಾರೆ.

ಸಾಮಾನ್ಯವಾಗಿ ಇವರು ಹಿಂದೂಗಳು ಆಚರಿಸುವ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿ, ದಸರಾ (ಮಹಾನವಮಿ) ಮತ್ತು ದೀಪಾವಳಿಗಳನ್ನು ಆಚರಿಸುತ್ತಾರೆ.

ಯುಗಾದಿ

ಕೊರವರು ಸಹ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನಗಳಲ್ಲಿ ಕೆಲವರು ತಮ್ಮ ಹಿರಿಯರಿಗೆ ಬಟ್ಟೆ ಏರಿಸುವುದು ಕಂಡುಬರುತ್ತದೆ. ಚೈತ್ರ ಶುದ್ಧ ಪಾಡ್ಯಯಂದು ಯುಗಾದಿ ಹಬ್ಬ, ಯುಗಾದಿಯಿಂದ ಹೊಸ ವರ್ಷವು ಆರಂಭವಾಗುತ್ತದೆ. ಮನೆಮಂದಿಯೆಲ್ಲ ಅಭ್ಯಂಜನ ಸ್ನಾನ ಮಾಡಿ ಕೈಲಾದವರು ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಇಷ್ಟ ದೇವತೆಗಳಿಗೆ ಪೂಜೆ ಮಾಡಿ, ಬೇವು ಬೆಲ್ಲ, ಸಿಹಿ ಅಡುಗೆ ಮಾಡುತ್ತಾರೆ. ದೇವಸ್ಥಾನಗಳಲ್ಲಿ, ಉತ್ಸವ ವಿಶೇಷಗಳು ನಡೆಯುತ್ತವೆ. ಯುಗಾದಿ ಆಚರಣೆಯ ವಿಧಿಗಳಲ್ಲಿ ಬೇವು-ಬೆಲ್ಲ ಸೇವನೆ ಮಾಡಿ, ಚಂದ್ರದ ದರ್ಶನಮಾಡುತ್ತಾರೆ. ಬೇವು-ಬೆಲ್ಲಗಳು ಜೀವನದ ಸುಖ ದುಃಖಗಳು ಸಂಕೇತವಾಗಿದೆ. ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ನೋವು-ನಲಿವಿನಲ್ಲಿ ಬದುಕುವುದುಂಟು. ಚಂದ್ರ ದರ್ಶನಮಾಡಿ ಹಿರಿಯರ ಆರ್ಶೀವಾದ ಪಡೆಯುತ್ತಾರೆ. ಏಕೆಂದರೆ ವರ್ಷವೆಲ್ಲವು ಸುಖದಿಂದ ಇರಿ ಎಂದು ಹಾರೈಸುತ್ತಾರೆ. ಸಂಪೂರ್ಣ ಸುಖಾವಕಾಶಗಳ ಅಥವಾ ದುಃಖಾವಕಾಶಗಳ ನೆಲೆಯೂ ಅಲ್ಲಿ ಪ್ರಕೃತಿಯ ಕತ್ತಲು ಬೆಳಕಿನ ಚೆಲ್ಲಾಟದಂತೆಯೇ ಸುಖ ದುಃಖ, ಲಾಭ ನಷ್ಟಗಳ ದ್ವಂದ್ವದಿಂದಲೂ ಕೂಡಿದೆ. ಹಬ್ಬಗಳು ಆಚರಿಸುವುದು ಎಲ್ಲರೂ ಒಂದುಗೂಡಿ ಸುಖದುಃಖಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತದೆ.

ಶ್ರೀ ರಾಮನವಮಿ

ಕೊರವರಲ್ಲಿ ಕೆಲವರು ಶ್ರೀರಾಮನವಮಿಯನ್ನು ಆಚರಿಸುತ್ತಾರೆ. ವೆಂಕಟೇಶ್ವರ, ಹನುಮಂತ ಭಕ್ತರಾಗಿದ್ದರಿಂದ ಶ್ರೀರಾಮನವಮಿಯನ್ನು ಹನುಮಂತ ದೇವರಿಗೆ ಪೂಜೆ ಸಲ್ಲಿಸಿ, ಇಲ್ಲಿ ಪಾನಕ, ಪ್ರಸಾದವು, ಕೊಸಂಬರಿ ಮುಖ್ಯವಾಗಿರುತ್ತದೆ.

ನಾಗರ ಪಂಚಮಿ

ಶ್ರಾವಣ ಮಾಸದಲ್ಲಿ ನಾಗರ ಪಂಚಮಿಯನ್ನು ಆಚರಿಸಲಾಗುತ್ತದೆ. ಭಾರತೀಯರಲ್ಲಿ ನಾಗಪೂಜೆ, ನಾಗಾರಾಧನೆಗಳೂ ರೂಢಿಯಲ್ಲಿರುವಂತೆ ಕೊರವರಲ್ಲಿಯೂ ನಾಗರ ಪಂಚಮಿ ವಿಶಿಷ್ಟವಾಗಿದೆ. ತಮ್ಮ ಸರ್ಪದೋಷ, ಹರಕೆಯೆಂದರೆ ನಾಗಪ್ಪನಿಗೆ ಪೂಜೆ ಸಲ್ಲಿಸುತ್ತಾರೆ. ಕೊರವರಲ್ಲಿ ಕೆಲವರು ನಾಗರ ಪಂಚಮಿಯ ಮೊದಲ ವಾರ ಮಾಡಿದ್ದರೆ, ಕೆಲವರು ಕೊನೆಯವಾರ, ಸೋಮವಾರ ಅಥವಾ ಶನಿವಾರದಂದು ಹುತ್ತಿಗೆ ಅಥವಾ ಕಲ್ಲಿನ ಹಾವುಗಳಿಗೆ ಹಾಲು ಹಾಕುವುದು ಕಂಡುಬರುತ್ತದೆ. ಶ್ರಾವಣಮಾಸದಲ್ಲಿ ಹಾವುಗಳನ್ನು ಸಾಯಿಸಬಾರದು ಎಂಬ ನಂಬಿಕೆ ಇದೆ. ಹಾವಿನ ಹುತ್ತಕ್ಕೆ ಅಥವಾ ಕಲ್ಲಿನ ನಾಗಪ್ಪನಿಗೆ ಹಾಲು ಎರೆಯುವ ಪದ್ಧತಿ ಇದೆ. ಬೆಲ್ಲದ ನೀರು, ಒಡೆದ ಕಾಯಿಯ ಬಟ್ಟಲಿನಿಂದ ನಾಗಪ್ಪನಿಗೆ ಎರೆಯುವುದು ಇವರಲ್ಲಿರುವ ಪದ್ಧತಿ, ತಂಬಿಟ್ಟು ನೈವೇದ್ಯ ಮಾಡುತ್ತಾರೆ. ಅಕ್ಕಿಯನ್ನು ನೀರಿನಲ್ಲಿ ನೆನಸಿಟ್ಟು ಕುಟ್ಟಿ ಕಡುಬು ಮಾಡುತ್ತಾರೆ, ಜೋಳದ ಕಾಳುಗಳನ್ನು ಹುರಿದು ಅದನ್ನು ಕುಟ್ಟಿ ಕಡುಬು ಮಾಡುತ್ತಾರೆ. ಹಬ್ಬದಲ್ಲಿ ಕುಟ್ಟಿದ ಕಡುಬು ಮಾಡುವುದು ಕಡುಬು ಕರಿಯುವುದಿಲ್ಲ. ಏಕೆಂದರೆ ನಾಗಪ್ಪನ ಹೆಡೆ ಕರಿದಂತೆ ಎಂಬ ನಂಬಿಕೆ ಇದೆ.

ಮೋಹರಂ

ಕೊರವರು ಸಹ ಮೊಹರಂ ಆಚರಿಸುತ್ತಾರೆ. ಈ ಹಬ್ಬದ ದಿನ ಗುದ್ದಲಿ ಹಾಕಿದ ನಂತರ ಮೋಹರಂ ಕೊನೆಯ ದಿನಗಳವರೆಗೆ ಮಾಂಸದೂಟ ಮಾಡುವುದಿಲ್ಲ. ಮೊಹರಂ ದೇವರಿಗೆ ಸಕ್ಕರೆ ಹೊಯಿಸಿ, ಹರಕೆ ಹೊತ್ತವರು ಬೆಂಕಿ ಕುಂಡಕ್ಕೆ ಮೆಣಸು ಹಾಕುತ್ತಾರೆ.

ಮಕರ ಸಂಕ್ರಾಂತಿ

ಸಾಂಸ್ಕೃತಿಕ ದಿನ ಪೊಂಗಲ್ ಹಬ್ಬ ಎಂದು ಕರಿಯುತ್ತಾರೆ. ಈ ದಿನ ಪೊಂಗಲ್, ಕಬ್ಬಿನ ಜಿಲ್ಲೆ ಯನ್ನು ನೈವೇದ್ಯ ಮಾಡುತ್ತಾರೆ. ಹೆಣ್ಣು ಮಕ್ಕಳು ಹೊಸ ಬಟ್ಟೆ ಉಟ್ಟು ಎಳ್ಳು ಬೆಲ್ಲವನ್ನು ದೇವರಿಗೆ ನೈವೇದ್ಯ ನೀಡಿ ಎಲ್ಲರಿಗೂ ಹಂಚುತ್ತಾರೆ. ಎಳ್ಳು ಬೆಲ್ಲ ತಗೊಂಡು ಬೆಲ್ಲದಂತಾ ಮಾತನಾಡೋಣ ಎಂದು ಹೇಳಿ ಶುಭ ಹಾರೈಸುತ್ತಾರೆ.

ಶಿವರಾತ್ರಿ

ಶಿವರಾತ್ರಿ ಶಿವನ ಪೂಜೆ ಮುಖ್ಯವಾಗಿರುತ್ತದೆ. ಕೊರವರು ಸಹ ಎಲ್ಲರಂತೆ ಶಿವದೇವಾಲಯಕ್ಕೆ ಹೋಗಿ, ಉಪವಾಸವನ್ನು ಮಾಡುತ್ತಾರೆ. ಸಂಜೆ ವೇಳೆಯಲ್ಲಿ ಎಲ್ಲ ಶಿವನ ಗುಡಿಗೆ ಹೋಗಿ ಪೂಜೆ ಮಾಡಿಸಿ, ದೇವಾಲಯದ ಪ್ರಸಾದ ಸ್ವೀಕರಿಸಿ ಒಪ್ಪತ್ತು ಮಾಡುತ್ತಾರೆ. ರಾತ್ರಿಯಲ್ಲಿ ಜಾಗರಣೆ ಮಾಡಿ ಅಥವಾ ರಾತ್ರಿಯಲ್ಲಿ ಹಳೆಯ ದೇವಾಲಯ, ಸಿನಿಮಾಗಳು ನೋಡಿ ಹಿಂದಿನ ದಿನಗಳನ್ನು ನೆನೆಯುತ್ತಾರೆ. ಕಥೆಗಳನ್ನು ಹೇಳುವುದು ಕಂಡುಬರುತ್ತದೆ. ಮುಂಜಾನೆ ಮನೆಯಲ್ಲಿ ಪೂಜೆ ಮಾಡಿಕೊಂಡು ನೈವೇದ್ಯ ವನ್ನು ಅರ್ಪಿಸಿ, ಉಪವಾಸವನ್ನು ಬಿಡುತ್ತಾರೆ.

ಹೋಳಿಹಬ್ಬ

ಹೋಳಿ ಆಚರಣೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿರುವುದು ಸ್ವಾಭಾವಿಕ, ಹುಣ್ಣಿಮೆ ದಿನ, ಒಬ್ಬ ಮನುಷ್ಯನ ಮೂರ್ತಿಯನ್ನು ಮಾಡಿ ಅಥವಾ ಕಾಮನ ಸುಟ್ಟು, ನಂತರ ಹೋಳಿ ಎರಚುವ ಮೂಲಕ ಹೋಳಿ ಹಬ್ಬ ಆಚರಿಸುತ್ತಾರೆ.

ಭೀಮನ ಅಮವಾಸ್ಸೆ

"ಆಷಾಢ ಬಹುಳ ಅಮವಾಸ್ಯೆಗೆ ಭೀಮನ ಅಮವಾಸ್ಯೆ ಎನ್ನುವರು. ಮೃತನಾದ ಗಂಡನನ್ನು ಸತಿಶಿರೋಮಣಿಯೊಬ್ಬಳು ಪಾರ್ವತಿ ಪರಮೇಶ್ವರರ ಅನುಗ್ರಹದಿಂದ ಬದುಕಿಸಿ ದೀರ್ಘ ಸುಮಂಗಲಿತನ ಪಡೆದ ದಿನವಿದು ಆದ್ದರಿಂದ ಈ ದಿನ ಪತಿಸಂಜೀವಿನಿ ವ್ರತವೆಂದು ಕರೆಯುವರು". ಕೊರವರಲ್ಲಿಯು ಕೆಲವು ಮಹಿಳೆಯರು ಪತಿಯು ಆಯುಷ್ಯ ದೀರ್ಘವಾಗಿರಲೆಂದು ಪೂಜೆ ಮಾಡುವುದುಂಟು. ಆಷಾಢ ಮಾಸದಲ್ಲಿಯೇ ಹುಲಿಗೆಮ್ಮ ದೇವರಿಗೆ ತಮ್ಮ ಹಾರೈಕೆಯನ್ನು ಪ್ರಾಣಿಬಲಿಯ ಮೂಲಕ ನೆರವೇರಿಸಿಕೊಳ್ಳುತ್ತಾರೆ. ಬಳ್ಳಾರಿ ಜಿಲ್ಲೆಯವರು ಮಾತ್ರ ವರ್ಷಕ್ಕೊಮ್ಮೆ ಮಾಡಿಕೊಳ್ಳುತ್ತಾರೆ.

ರಕ್ಷಾಬಂಧನ

ಶ್ರಾವಣ ಮಾಸದ ಹುಣ್ಣಿಮೆಯ ದಿನ ಆಚರಿಸಲಾಗುವ ಈ ಹಬ್ಬವನ್ನು ರಕ್ಷಾಬಂಧನ, ನೂಲು ಹುಣ್ಣಿಮೆ ಎಂದು ಕರೆಯುತ್ತಾರೆ. ಈ ದಿನ ಸಹೋದರಿಯರು ತಮ್ಮ ಸಹೋದರರಿಗೆ ತಮ್ಮ ಮಾನ, ಪ್ರಾಣಗಳನ್ನು ಸದಾ ರಕ್ಷಿಸಿರೆಂದು ಮುಂಗೈಗೆ ದಾರದ ಎಳೆಗಳನ್ನು ಕಟ್ಟುತ್ತಾರೆ. "ಉತ್ತರ ಭಾರತದಲ್ಲಿ ಇದು ಅತ್ಯಂತ ಜನಪ್ರಿಯವಾದ ಹಬ್ಬ ಹಿಂದೆ ರಾಜಮಹಾರಾಜರ ಕಾಲದಲ್ಲಿ ಯುದ್ಧದ ಸಂದರ್ಭದಲ್ಲಿ ಶತ್ರುಗಳಿಂದ ತಮ್ಮ ಪತಿಯ ಮಾನಪ್ರಾಣಗಳ ರಕ್ಷಣೆಯಾಗಲೆಂದು ಪತಿಗೆ ಶ್ರೀರಕ್ಷೆಯೆಂದು ರಕ್ಷಾ ಎಳೆಗಳನ್ನು ಕಟ್ಟುವ ವಾಡಿಕೆ ಇತ್ತು. ಹಾಗೆಂದೇ ಇಂದ್ರನಿಗೆ

ಶುಚಿಯ ಮುಂಗಟ್ಟುಗಳನ್ನು ಕಟ್ಟುವುದರಿಂದಲೇ ಇಂದ್ರನಿಗೆ ಅಮರಾವತಿಯು ಲಭಿಸಿತೆಂದು ಹೇಳಲಾಗಿದೆ". ಕೊರವರ ಮಹಿಳೆಯರು ತಮ್ಮ ಸಹೋದರಿಗೆ ರಾಖಿಯನ್ನು ಕಟ್ಟಲಾಗುತ್ತದೆ. ಆದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಹಾಗೆ ವಿವಾಹವಾದ ಮೇಲೆ ಹೆಣ್ಣುಮಕ್ಕಳನ್ನು ನೋಡಿಕೊಳ್ಳುವುದು ಬಹಳ ಕಡಿಮೆ ಎಂದು ಹೇಳಬಹುದಾಗಿದೆ.

ಗಣೇಶ ಹಬ್ಬ

ಗಣೇಶ ಚತುರ್ಥಿ ಭಾದ್ರಪದ ಮಾಸದ ನಾಲ್ಕನೇ ದಿನ ಬರುತ್ತದೆ. ಇದು ಎಲ್ಲರಿಗೂ ಅತಿ ದೊಡ್ಡ ಹಬ್ಬವಾಗಿರುತ್ತದೆ. ಅಂದು ಶಾಲಾ ಕಾಲೇಜುಗಳಿಗೆ ರಜೆ ಮನೆಮಂದಿಯೆಲ್ಲ ಬಲು ಬೇಗನೆ ಏಳುತ್ತಾರೆ. ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಮನೆಗಳಲ್ಲಿ ಮೋದಕಗಳು, ಹೋಳಿಗೆ ತಯಾರಿಸಿ ಹಬ್ಬ ಸಡಗರದಿಂದ ಆಚರಿಸುತ್ತಾರೆ. ಗಣಪತಿ ಪ್ರತಿಮೆಯನ್ನು ಕೊಳ್ಳಲು ಪಟ್ಟಣಕ್ಕೆ ಹೋಗುವುದೇ ಒಂದು ಸಂಭ್ರಮ.

ಮನೆಗೆ ಬಂದ ಗಣಪತಿಯನ್ನು ವಿಶೇಷವಾಗಿ ಅಲಂಕರಿಸಿದ ಒಂದು ಮಂಟಪದಲ್ಲಿ ಕೂಡಿಸುವರು. ತಳಿರು ತೋರಣಗಳಿಂದ ಹಾಗೂ ವಿದ್ಯುದೀಪಗಳಿಂದ ಮಂಟಪವನ್ನು ಅಲಂಕರಿಸು ವರು. ನೆಂಟರಿಷ್ಟರ ಮತ್ತು ಸ್ನೇಹಿತರಿಗೆ ಹಬ್ಬಕ್ಕೆ ಬರಹೇಳುವರು. ಗಣೇಶನ ಹಬ್ಬದಂದು ಹಣ್ಣು-ಹಂಪಲಗಳನ್ನು ಮತ್ತು ಮೋದಕ ನೈವೇದ್ಯವೇ ಮುಖ್ಯವಾಗಿರುತ್ತದೆ.

ಹುಲಿಗಮ್ಮ

ಕೊರವರ ಬಹುತೇಕ ಕುಟುಂಬಗಳು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಹುಲಿಗಿ ಹುಲಿಗಮ್ಮನ ಆರಾಧಕರು ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ತಮ್ಮ ಕಷ್ಟ ಸುಖಗಳಿಗೆ ಹುಲಿಗಮ್ಮನ ಮೊರೆ ಹೋಗುವುದು, ಹರಕೆ ಹೊರುವುದು ಕಂಡುಬರುತ್ತದೆ. ದೇವರು ಮಾಡುವುದುಂಟು ಹೊಳೆಗೆ ಹೋಗಿ ಗಂಗೆ ಪೂಜೆ ಮಾಡಿ ಅಲ್ಲಿಂದಲ್ಲೆ ದಿಡ್ ನಮಸ್ಕಾರ ಹಾಕುತ್ತ ಬರುತ್ತಾರೆ. ದೇವಾಲಯ ಐದು ಸುತ್ತು ಹಾಕುತ್ತಾ ಮುಗಿಸುತ್ತಾರೆ. ನಂತರ ಅವರ ತವರು ಮನೆಯವರು ಹೆಣ್ಣು ಮಕ್ಕಳಿಗೆ ಹೊಸ ಬಟ್ಟೆ ಉಡಿಸಿ, ಉಡಕ್ಕಿ ಹಾಕಿ ಮುಯಿಮಾಡುತ್ತಾರೆ. ಸಂಬಂಧಿಕರೆಲ್ಲರೂ ಮುಯ್ಯಿಮಾಡುತ್ತಾರೆ. ದೀಡ್ ನಮಸ್ಕಾರ ಮಾಡಿ, ಕುರಿ ಬಲಿ ಕೊಟ್ಟನಂತರ ಹುಲಿಗೆಮ್ಮನಿಗೆ ಉಡಕ್ಕಿ ಸೀರೆ, ಕುಪ್ಪಸ, ದೇವರಿಗೆ ಅರ್ಪಿಸುತ್ತಾರೆ. ಮಾಂಸದಡಿಗೆ ಮಾಡಿದ ಮೇಲೆ ಜೋಗಮ್ಮನವರನ್ನು ಕರೆಯಿಸಿ ಉದೋ ಎಂದು ದೇವರಿಗೆ ನೈವೇದ್ಯ ಬಿಡುತ್ತಾರೆ. ಕೊರವರು ತಮ್ಮ ಸಂಬಂಧಿಕರನ್ನೆಲ್ಲ ಕರೆದು ದೈವ ಕಾರ್ಯಮಾಡಿದ ನಂತರ ದೇವತೆ ನಮ್ಮನ್ನು ಹರಸಿದ್ದಾಳೆ ಎಂದು ನಂಬುತ್ತಾರೆ.

ಮಹಾನವಮಿ (ದಸರಾ)

ದಸರಾ ಹಬ್ಬದಲ್ಲಿಯೂ ಹಿರಿಯರಿಗೆ ಎಡೆ ಹಾಕುವ ಪದ್ಧತಿ ಇದೆ. ದಸರಾ ಅಮವಾಸ್ಯೆಯಿಂದ ೯ ದಿನಗಳ ಕಾಲ ಹೆಣ್ಣು ಮಕ್ಕಳು ಬನ್ನಿಮರಕ್ಕೆ ಹರಕೆ ಹೊತ್ತು ಪೂಜೆಯನ್ನು ನೆರವೇರಿಸುತ್ತಾರೆ. ಏಕೆಂದರೆ ಹಲವಾರು ಸುಖ ದುಃಖಗಳನ್ನು ಪರಿಹರಿಸಲು ಹರಕೆ ಹೊರುತ್ತಾರೆ. ಒಂಬತ್ತು ದಿನಗಳು ದುರ್ಗಿಯನ್ನು ಒಂದೊಂದು ಹೆಸರಿನಲ್ಲಿ ಪೂಜೆ ಸಲ್ಲಿಸುತ್ತಾರೆ. ದಸರಾ ಹಬ್ಬವನ್ನು ಬನ್ನಿಹಬ್ಬ ಎಂದು ಸಹ ಹೇಳುತ್ತಾರೆ.

ಗೌರಿಹಬ್ಬ

ಮಹಿಳೆಯರಿಗೆ ಗೌರಿಹಬ್ಬವು ಮುಖ್ಯವಾಗುತ್ತದೆ. ಮದುವೆಯಾದ ಮೇಲೆ ಗೌರಿಹಬ್ಬದ ದಿನ ಸಹೋದರರೂ ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಹೊಸಬಟ್ಟೆಯನ್ನು ತಂದು ಹೆಣ್ಣು ಮಕ್ಕಳು ಸಹೋದರರಿಗೆ ಶುಭವಾಗಲಿ ಎಂದೂ, ಯಾವತ್ತಿಗೆ ಸುಖವಾಗಿರಲಿ ಎಂದು ಹಾರೈಸುತ್ತಾರೆ. ತವರು ಮನೆಯಲ್ಲಿ ಹೆಣ್ಣು ಮಕ್ಕಳು ಕಣ್ಣೀರು ಹಾಕಿದರೆ ತವರಿಗೆ ಕಷ್ಟಗಳು ಬರುತ್ತದೆ ಎಂದೂ, ಹೆಣ್ಣು ಮಕ್ಕಳು ಸುಖವಾಗಿ ಇದ್ದು ಹೋಗಲಿ ಎಂದು ಹಿರಿಯರು ಬಯಸುತ್ತಾರೆ. ಸಕ್ಕರಾರತಿ ಬೆಳಗುವುದು ಈ ಗೌರಿಹಬ್ಬದ ವಿಶಿಷ್ಟವಾಗಿದೆ.

ದೀಪಾವಳಿ

ಭಾರತೀಯರ ಪ್ರಮುಖ ಹಬ್ಬ ದೀಪಾವಳಿ. ಕರ್ನಾಟಕದಲ್ಲಂತೂ ಇದು ಬೆಳಕಿನ ಹಬ್ಬ, ದೊಡ್ಡ ಹಬ್ಬವೆಂಬ ಗೌರವಕ್ಕೆ ಪಾತ್ರವಾಗಿದೆ. ಆಶ್ವಯುಜ ಬಹುಳ ದ್ವಾದಶಿಯಿಂದ ಆರಂಭವಾಗಿ ಕಾರ್ತಿಕ ಶುದ್ಧ ಪಂಚಮಿಯವರೆಗೆ ಇದು ನಡೆಯುತ್ತದೆ. ದೀಪಗಳಿಂದ ಅಲಂಕೃತವಾಗುವ ಹಬ್ಬವೇ ದೀಪಾವಳಿ. ಭಾರತೀಯರ ಕಲ್ಪನೆಯಲ್ಲಿ ಮಹತ್ವದ್ದು. ಅದು ಸಾರ್ಥಕ ಬದುಕಿನ ಜೀವಂತಿಕೆಯ ಸಂಕೇತ. ಗುಡಿಸಲುಗಳಿಂದ ಗುಡಿಯವರೆಗೆ ದೀಪಾವಳಿಯ ತಳಿರುತೋರಣಗಳು ಕಾಣಿಸುತ್ತಿರುತ್ತವೆ. ನರಕ ಚತುರ್ದಶಿ, ಬಲಿಪಾಡ್ಯಮಿ, ಕರಿ ಎಂದು ಆಚರಿಸಲಾಗುತ್ತದೆ. ಶ್ರೀಕೃಷ್ಣ ನರಕಾಸುವ ಸಂಹಾರ ನರಕ ಚತುರ್ದಶಿ ಹೆಸರಿನಲ್ಲಿ ಶಾಶ್ವತವಾಗಿ ಉಳಿದು ಬಂದಿದೆ. ನರಕ ಚತುರ್ದಶಿಯಂದು ಹನುಮಂತ ಹುಟ್ಟಿದರೆಂಬ ನಂಬಿಕೆಯಿಂದ ಈ ದೇವರಿಗೂ ಪೂಜೆ ಸಲ್ಲಿಸುತ್ತಾರೆ. ವನವಾಸ ಮುಗಿಸಿಕೊಂಡು ಅಯೋಧ್ಯೆಗೆ ಬಂದಿದ್ದರಿಂದ ರಾಮನನ್ನು ದೀಪೋತ್ಸವದ ಮೂಲಕ ಜನರು ಬರಮಾಡಿಕೊಂಡರೆಂದು ಈ ಹಬ್ಬ, ಲಕ್ಷ್ಮೀಯನ್ನು ಒಲಿಸಿಕೊಂಡಿದ್ದರ ಸಂಕೇತವೆಂದು ಕೆಲವರು ಲಕ್ಷ್ಮೀ ಪೂಜೆ ಮಾಡುತ್ತಾರೆ. ಬಲಿಪಾಡ್ಯಮಿಯಂದು ಪಾಂಡವರು ಹಸ್ತಿನಾವತಿಗೆ ಬಂದು ಪುನಃ ರಾಜ್ಯಭಾರ ಮಾಡಿದರ ಕುರುಹು ಎಂದು ಭಾವಿಸಲಾಗಿದೆ. ಹಟ್ಟಿ ಹಬ್ಬ ಎಂದು ಸಹ ಕರೆಯುತ್ತಾರೆ. ಹೆಚ್ಚಾಗಿ ಪಾಡ್ಯ ಮುಖ್ಯ ಆಚರಣೆ ಯಾಗಿದೆ. ಅಭ್ಯಂಜನಕ್ಕೆ

ಮುಂದೆ ಅರಿಶಿನದ ಎಣ್ಣೆಯನ್ನು ಮೈಗೆ ಹಚ್ಚಿಕೊಳ್ಳುತ್ತಾರೆ. ತ್ವಚೆಯ ಕಾಂತಿಗೆ, ಚರ್ಮರೋಗಕ್ಕೆ ಇದು ಉಪಶಮನಕಾರಿಯಾಗಿದೆ.

ಹಟ್ಟಿಹಬ್ಬದ ದಿನ ಮನೆಯಲ್ಲಿ ಸ್ವಚ್ಛ ಮಾಡಿಕೊಂಡು, ಎಲ್ಲರೂ ಸ್ನಾನ ಮಾಡಿ ಪೂಜೆಯನ್ನು ಮಾಡಲಾಗುತ್ತದೆ. ಹಸು ದನಗಳಿದ್ದವರು ಅದರ ಜಾಗದಲ್ಲಿ ಸ್ವಚ್ಛ ಮಾಡಿ ವಿಭೂತಿ ಹಚ್ಚಿ ಅಲಂಕರಿ ಸುತ್ತಾರೆ. ಮನೆಯ ಅಂಗಳದಲ್ಲಿ ಹಟ್ಟಿ ಇಟ್ಟು (ಸಗಣಿಯಿಂದ ಮಾಡಿದ ಗುಂಡಾನಾಕಾರದ ಹುಂಡೆಗಳು) ಅವುಗಳಿಗೆ ಉತ್ತರಾಣಿ ಗಿಡ, ಹೂವೂ ಇಟ್ಟು ಪೂಜೆ ಮಾಡಲಾಗುತ್ತದೆ. ಹಟ್ಟಿಯಲ್ಲಿ ಇರುವ ಸಗಣಿಯ ರಾಶಿಗೆ ಪೂಜೆ ಮಾಡಿಸಿ, ಹೋಳಿಗೆ ಎಡೆ ಮಾಡಲಾಗುತ್ತದೆ. ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಕಡೆಗಳಲ್ಲಿ ಇದು ನಡೆಯುತ್ತದೆ.

ಕೊರವರಿಗೆ ಹಿರಿಯರ ಹಬ್ಬವು ಮುಖ್ಯವಾಗಿರುತ್ತದೆ. ದೀಪಾವಳಿಯಲ್ಲಿ ಹಿರಿಯರಿಗೆ ಎಡೆ ಹಾಕಿದರೆ, ಮತ್ತೆ ಕೆಲವರು ಮಹಾನವಮಿಯಲ್ಲಿ ಎಡೆ ಹಾಕುತ್ತಾರೆ. ಮನೆ ಮಟಗಳಗೆಲ್ಲ ಶುಚಿ ಮಾಡಿಕೊಂಡು, ಬಾಗಿಲಿಗೆ ತೋರಣ ಕಟ್ಟಿ ಅಲಂಕರಿಸುತ್ತಾರೆ. ಎಲ್ಲರೂ ಸ್ನಾನ ಮಾಡುತ್ತಾರೆ. ನೆಂಟರಿಷ್ಟರು ಕೂಡಿ ಹಬ್ಬ ಆಚರಿಸುತ್ತಾರೆ. ದೀಪಾವಳಿಯಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಹೊಸ ಬಟ್ಟೆ ಇದ್ದೇ ಇರುತ್ತದೆ. ರಾತ್ರಿಯ ವೇಳೆಯಲ್ಲಿ ಮಾಂಸದ ಅಡಿಗೆಯನ್ನು ಎಡೆ ಹಾಕಲು ಪ್ರಾರಂಭಿಸುತ್ತಾರೆ. ಕೆಲವರು ತಮ್ಮ ಮನೆಯಲ್ಲಿರುವ ಮುಖ್ಯ ಸಾಮಾನುಗಳನ್ನು ಇಟ್ಟು ಹಿರಿಯರಿಗೆ ಬಟ್ಟೆ ಏರಿಸುತ್ತಾರೆ. ಉಪವಾಸವಿದ್ದು ಎಡೆ ದೂಪ ಮಾಡಿದ ಮೇಲೆ ಉಪವಾಸ ಬಿಡುತ್ತಾರೆ. ಕೆಲವರು ಕೇರಿ ಹಬ್ಬ ಎಂದೇ ಮಾಡುತ್ತಾರೆ. ಕೆಲವರು ಸಿಹಿ ಅಡುಗೆ ಮಾಡುವುದು ಇತ್ತೀಚಿಗೆ ಕಂಡುಬರುತ್ತದೆ.

ಕ್ರೀಸ್‌ಮಸ್

ನಮ್ಮ ಭಾರತವು ಎಲ್ಲಾ ಧರ್ಮಗಳು ಹೊಂದಿರುವ ದೇಶವಾಗಿದೆ. ಕೊರವರಲ್ಲಿ ಮತಾಂತರ ನಡೆಯುತ್ತಾರೆ. ಕೆಲವರು ಕ್ರೀಸ್‌ಮಸ್ ಹಬ್ಬವನ್ನು ಆಚರಿಸುತ್ತಾರೆ. ಕ್ರಿಶ್ಚಿಯನ್ಸ್‌ಗಳು ಎಲ್ಲ ಕಡೆ ಇರುವುದರಿಂದ ಅವರ ಪ್ರಭಾವವು ಕೊರವಲ್ಲಿಯೂ ಆಗಿದೆ. ಕ್ರಿಸ್‌ಮಸ್ ಹಬ್ಬದಲ್ಲಿ ಕ್ರೈಸ್ತ ದೇವರಿಗೆ ಮುಂಬತ್ತಿಯನ್ನು ಹಚ್ಚಿಬರುವುದುಂಟು.

ಕೊರವರು ತಮ್ಮ ದೈನಂದಿನ ಜೀವನದಲ್ಲಿ ಹರಕೆ ಹೋರುವ ಪದ್ಧತಿಯೂ ರೂಢಿಯಲ್ಲಿದೆ. ಹರಕೆ ರೂಪದಲ್ಲಿ ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆ ದೇವಿಗೆ ಹೋತಗಳನ್ನು ಬಲಿ ಕೊಡುತ್ತಾರೆ. ಈ ಬಲಿ ಕೊಡುವ ಪದ್ಧತಿ ಈ ಜನಾಂಗದು. ಅಂದರೆ ಗಿರಿಜನ, ಲಂಬಾಣಿ, ತಳವಾರ, ಹರಿಜನ, ಕೊರವರು, ಒಡ್ಡರುಗಳಲ್ಲಿ ಕಂಡುಬರುತ್ತದೆ. ಬಲಿ ಕೊಡುವಾಗ ಪ್ರಾಣಿಯನ್ನು ಮಾತ್ರ ಬಲಿಕೊಡುವುದಿಲ್ಲ. ಬಲಿ ಕೊಡುವ ಕುರಿಯ ಕೋಡು ಮುರಿದಿರಬಾರದು.

ಕಾಲು ಯಾವುದೇ ಹಾನಿಯಾಗಿರಬಾರದು ಎಂಬ ನಿಯಮವಿದೆ. ಹೆಚ್ಚಾಗಿ ಜನಪದರು ತಮ್ಮ ಗ್ರಾಮ ದೇವಿಯ ಹೆಸರಿನಲ್ಲಿ ಒಟ್ಟು ಒಂದು ವರ್ಷಕ್ಕೆ ಅಥವಾ ಮೂರು ವರ್ಷಕ್ಕೆ ಮತ್ತೇ ೫ ವರ್ಷಕ್ಕೊಮ್ಮೆ ಬಲಿಕೊಡುತ್ತಾರೆ. ಹೀಗೆ ಭಕ್ತಿ ದೇವತೆಗಳಿಗೆ ಬಲಿಕೊಡುವ ಪದ್ಧತಿಯು ಹರಕೆಯ ರೂಪದಲ್ಲಿ ಇದೆ.

ಮುಡುಪಿನ ರೀತಿಯಲ್ಲಿ ಹರಕೆಯು ಸಹ ಬೇಡಿಕೊಂಡವರು ದೇವರ ಹೆಸರಿನಲ್ಲಿ ಹಣ ಸಂಗ್ರಹಿಸಿ ಆ ಹಣವನ್ನು ದೇವರ ಹುಂಡಿಗೆ ಹಾಕಿ ಅಥವಾ ಹಬ್ಬದಲ್ಲಿ ಬಳಸಿಕೊಳ್ಳುವುದು ಮಾಡುತ್ತಾರೆ. ನಮ್ಮ ಕಷ್ಟವನ್ನು ದೂರ ಮಾಡಲು ಸುಖಮಯವಾಗಿ ಜೀವಿಸಲಿಕ್ಕೆ ನಿನ್ನ ದಯೆ, ನಿನ್ನ ಆರ್ಶೀವಾದ ನಮ್ಮ ಮೇಲೆ ಸದಾ ಇರಲಿ ಎಂದು ಇಂದಿನ ಜನಪದರು ಬೇಡಿಕೊಳ್ಳುವುದು ಸರ್ವೇಸಾಮಾನ್ಯವಾದ ಪದ್ಧತಿ. ಭಕ್ತಾಧಿಗಳು ಹೆಣ್ಣು ದೇವರಿಗೆ ಸೀರೆ, ಮುಖರಾಮ, ಕಣ್ಣು, ಕೂರೆ ಮೋಸೆ, ಕುದುರೆ, ತೊಟ್ಟಿಲು, ಹಣ, ಒಡವೆ, ಮೊದಲಾದವುಗಳನ್ನು ನೀಡುತ್ತಾರೆ. ಹರಕೆಯ ರೂಪದಲ್ಲಿ ಹಾಕುವುದುಂಟು. ತಮ್ಮ ಊರಿನಿಂದ ತಂದ ಕೋಳಿಯನ್ನು ದೇವಿಯ ಹಬ್ಬದಲ್ಲಿ ಕೋಳಿ ಹಾರ ಮಾಡುವುದು ತಮ್ಮ ಕೈಯಿಂದ ಮಾಡುತ್ತಾರೆ. ದೇವಿಗೆ ಅರ್ಪಿತವೆಂದು ನಮ್ಮನ್ನೆಲ್ಲಾ ಕಾಪಾಡುವಳು ನೀನೇ ದೇವಿ ಎಂದು ಬೇಡಿಕೊಳ್ಳುತ್ತಾರೆ.

ದೇವತೆಗೆ ಆದಿದೈವ, ನಿಜವಾದ ದೈವ, ರಕ್ಷಣಾ ದೇವತೆ ಎಂದು ನಂಬಿ ದೇವತೆಯ ಬಗ್ಗೆ ಅಪಾರ ಶ್ರದ್ಧೆ ಗೌರವ ತೋರಿಸುವುದು ಹರಕೆಯ ರೂಪದಲ್ಲಿಯೇ. ಜಾತಿ ಪಂಥಗಳನ್ನು ಮೀರಿ ಎಲ್ಲಾ ಜಾತಿ ಜನಾಂಗದವರು ಶಕ್ತಿ ದೇವತೆಗಳಿಗೆ ಹರಕೆಯನ್ನು ಕೋಡುತ್ತೇನೆಂದು ಬೇಡಿಕೊಳ್ಳುವು ದುಂಟು. ಆಯಾ ಕ್ಷೇತ್ರಗಳಲ್ಲಿ ಸ್ತ್ರೀ ದೇವಾಲಯಗಳೇ ಆಗಿರುವುದರಿಂದ ಶಕ್ತಿ ದೇವತೆಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಉದಾಹರಣೆಗೆ ಹುಲಿಗಿಯ ಹುಲಿಗೆಮ್ಮ ದೇವಾಲಯ, ಊರಿನಲ್ಲಿರುವ ಊರಮ್ಮ ದೇವಾಲಯ, ಮಾರಮ್ಮ ದೇವಾಲಯ, ಸುಂಕಲಮ್ಮ ದೇವಾಲಯ, ಕಣವಿಯಮ್ಮ ಹೆಣ್ಣು ದೇವತೆಗಳಿಗೆ ಹರಕೆಯನ್ನು ಹೊತ್ತು ಏನಾದರೂ ಒಂದು ವಸ್ತುವನ್ನು ಕೊಡುತ್ತೇನೆಂದು ಬೇಡಿಕೊಳ್ಳುವ ಭಕ್ತಾದಿಗಳು ಈ ಸಮುದಾಯದಲ್ಲಿ ಕಾಣುತ್ತೇವೆ. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿಯು ಈ ಸಮುದಾಯ ದವರು ಸಹ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ. ಭಾವುಕರು ಪ್ರಕೃತಿಯ ಆರಾಧಕರು, ಕಷ್ಟ ಬಂದಾಗ ದೇವರಲ್ಲಿ ಮೊರೆ ಹೋಗುವುದು. ಅದಕ್ಕಾಗಿಯೇ ಹಳ್ಳಿಗರು ತಮ್ಮ ಗ್ರಾಮದಲ್ಲೊಂದು ಗುಡಿ ಕಟ್ಟಿ ತಮ್ಮ ಕಲ್ಪನೆಯ ಪ್ರತೀಕವೆನಿಸಿದ ಮೂರ್ತಿಯೊಂದನ್ನು ಗುಡಿಯಲ್ಲಿಟ್ಟು ಪೂಜಿಸಿ ತೊಡಗಿದರು. ಅದೇ ಅವರಿಗೆ ದೇವತೆಯ ಆಗಿ ಸಾಮೂಹಿಕ ಪೂಜೆ ನಡೆಯುತ್ತದೆ. ಅಮ್ಮಾ ಕಾರ್ಪಣ್ಯ ಬಂದಾಗ ದೇವಿಯು ಪರಿಹಾರ ಮಾಡುವಳು ಎಂಬ ಗಾಢವಾದ ನಂಬಿಕೆಯಿದೆ.

ಮನಸ್ಸಿನಲ್ಲಿ ಮೂಡಿದ ಬಯಕೆಯನ್ನು ಪೂರೈಸುವಂತೆ ದೇವರಲ್ಲಿ ಬೇಡಿಕೊಳ್ಳುವುದು, ಬಯಕೆ ಯನ್ನು ದೇವರು ಪೂರೈಸಿಕೊಟ್ಟದ್ದೆಯಾದರೆ ಅದಕ್ಕೆ ಪರ್ಯಾಯವಾಗಿ ಯಾವುದನ್ನು ಕೊಡುತ್ತೇವೆ ಎಂದು ಅಂದುಕೊಂಡಿರುತ್ತೇವೋ ಅದನ್ನು ಕೊಡುವುದು ಅಥವಾ ಪ್ರಮಾಣಿಕತೆಯಿಂದ ನಿಭಾಯಿಸುವುದು. ಧಾರ್ಮಿಕ ಆಚರಣೆಗೆ ಒಳಪಟ್ಟದಾಗಿದರಿಂದ ಹರಕೆ ಸಂಪ್ರದಾಯವಲ್ಲ. ಸಂಪ್ರದಾಯ ನಮ್ಮೊಂದಿಗೆ ತಾನಾಗಿ ಸಾಮಾಜಿಕ ಜೀವನದ ಅಂಗವಾಗಿ ಕೂಡಿ ಬಂದರೆ, ಹರಕೆ ಎನ್ನುವುದು ವ್ಯಕ್ತಿಗತವಾಗಿ ಬಯಸಿ ತಂದುಕೊಂಡದ್ದಾಗಿರುತ್ತದೆ.

ಉಡುಗೊರೆ, ಹರಕೆಗಳು, ಬಲಿಕೊಡುವ ಹರಕೆಗಳು, ನಿರ್ಮಾಣ ಹರಕೆಗಳು, ನಿಗದಿಯಾದ ವಸ್ತುವನ್ನು ಯಥಾವತ್ತಾಗಿ ದೇವರಿಗೆ ಅರ್ಪಿಸುವಂತವುಗಳನ್ನು ಉಡುಗೊರೆ ಎಂದು ಕರೆಯಲಾಗಿದೆ. ಎಲ್ಲ ಬಗೆಯ ಹರಕೆಗಳಿಗಿಂದ ಉಡುಗೊರೆ ಹರಕೆಗಳು ಬಹುವ್ಯಾಪಕ ಮತ್ತು ಸಮೃದ್ಧವಾಗಿದೆ.

ಭಾರತೀಯ ಜನಜೀವನ ದೈವಭಕ್ತಿ ಪ್ರಧಾನವಾದದ್ದು, ಜನತೆಯಲ್ಲಿ ದೈವ ಮಹಿಮೆ ಭಕ್ತಿ, ಶ್ರದ್ಧೆಗಳ ಪ್ರಕಾಶನಕ್ಕೆ, ಪ್ರಸಾರಕ್ಕೆ ಹಬ್ಬ ಹರಿದಿನ, ವ್ರತ, ಕತೆ, ಪುರಾಣ, ಯಾತ್ರೆ, ಜಾತ್ರೆಗಳೆಲ್ಲ ಪೋಷಕ, ಹಬ್ಬದಾಚಾರಣೆಯಾದರೂ ಸಾಂಕ್ರಮಿಕ. ಒಬ್ಬರೂ ಮಾಡಿದಂತೆಯೇ ಮತ್ತೊಬ್ಬರು ಮಾಡದೆ ಇದ್ದರೂ ಇನ್ನೊಬ್ಬರಿಗಿಂತ ಉತ್ತಮವಾಗಿ ಹಬ್ಬ, ಉತ್ಸವ, ದೈವಾರಾಧನಾತೆಯಿಂದ ಮಾಡಬೇಕೆಂಬ ಹಂಬಲ ಎಲ್ಲ ಭಕ್ತಾದಿಗಳಿಗೂ ಉಂಟು. ಕೊರಮರಿಗೆ ತಮ್ಮ ತಮ್ಮ ಮನೆ ದೇವರು, ಕುಲದೇವರು ತಮ್ಮ ಪಿತೃದೇವತೆಗಳು, ತಾವೂ ಮರೆಬಿದ್ದ ದೇವರು ತಮ್ಮನ್ನು ಮರೆಹೊಕ್ಕ ದೇವರು, ಕಾಡಿದ ಬೇಡಿದ ದೇವರು ಜೋಯಿಸರ ಶಾಸ್ತ್ರದಲ್ಲಿ ಹುಟ್ಟಿದ ದೇವರು ಇವರೆಲ್ಲರಿಗೂ ಭಕ್ತಿಯಿಂದ ನಡೆದು ಕೊಳ್ಳುತ್ತೇವೆ. ಪ್ರಾಕೃತಿಕವಾದ ನೆಲ ಮಳೆ, ಒಲೆ, ರಾಗೀಕಲ್ಲು, ಮೊರ, ಕಸಬಾರಿಕೆ ಇವು ಕೂಡ ಇವರಿಗೆ ದೈವವೇ. ನಾಯಿ ನಾರಾಯಣಸ್ವಾಮಿ, ಮೊರ, ಕಸಬಾರಿಕೆ ಇವು ಕೂಡ ಲಕ್ಷ್ಮೀ ಎಂಬ ನಂಬಿಕೆ. ಈ ಜನ ಮುಸ್ಲಿಮರ ರಂಜಾನ ಹಬ್ಬದಲ್ಲಿ ವೇಷ ಕಟ್ಟುತ್ತಾರೆ, ಹರಕೆಯನ್ನು ಕಟ್ಟಿಕೊಳ್ಳುತ್ತಾರೆ.

ತಮ್ಮ ಬಂಧುಬಳಗದವರಷ್ಟೇ ಸೇರಿಕೊಂಡು ಮಾಡುವ ಹಬ್ಬ ಹರಿದಿನಗಳು ಉದಾಹರಣೆಗೆ: ಒಂದು ಮನೆ ದೇವತೆ– ಹುಲಿಗೆಮ್ಮ, ಹರಕೆ ಒತ್ತುಕೊಂಡು ಪೂಜೆ ಸಲ್ಲಿಸಲಾಗುತ್ತದೆ.

ಕೊರವರು ಪ್ರಮುಖವಾಗಿ ಶಕ್ತಿದೇವತೆಗಳನ್ನು ಆರಾಧಿಸುತ್ತಾರೆ. ಹುಲಿಗೆಮ್ಮ, ಮಾರೆಮ್ಮ, ಸುಂಕಲಮ್ಮ, ಯಲ್ಲಮ್ಮ, ತಾಯಮ್ಮ, ಊರಮ್ಮ ಮೊದಲಾದ ದೇವತೆಗಳನ್ನು ಹೆಚ್ಚಾಗಿ ಪೂಜಿಸುತ್ತಾರೆ. ಈ ದೇವತೆಗಳು ಇವರ ಕುಲದೇವತೆಗಳು ಆಗಿದ್ದಾರೆ. ಎಲ್ಲ ದೇವತೆಗಳನ್ನು ಮಂಗಳವಾರ, ಶುಕ್ರವಾರ ಪೂಜಿಸುವುದು ಈ ತಾಯಮ್ಮ ದೇವತೆ. ಈ ದೇವತೆ ಊರನ್ನು, ತಮ್ಮನ್ನು ಕಾಪಾಡುತ್ತಾಳೆಂದು ನಂಬುತ್ತಾರೆ. ಪೂಜೆಯ ದಿನ ಸ್ನಾನಮಾಡಿ ಉಪವಾಸದಿಂದ ಪೂಜಿಸ

ಬೇಕಾಗುತ್ತದೆ. ಸಂಜೆ ಮಾತ್ರ ಊಟ ಮಾಡುತ್ತಾರೆ. ಈ ದೇವತೆಗೆ ವರ್ಷಕೊಂದು ಸಲ ಕುರಿ ಬಲಿ ಕೊಡುವುದು ಇವರ ಪದ್ಧತಿಯಾಗಿದೆ.

ಹಬ್ಬದ ದಿನ ಎಂಟು, ಒಂಬತ್ತು ಗಂಟೆಗೆ ಗಂಗೆಗೆ (ನೀರು ತರಲು ಹೋಗುವುದು) ಹೋಗುವರು. ಗಂಗೆಗೆ ಹೋಗುವಾಗ ಕೊರವರ ಬಂಧುಬಳಗ, ಓಲಗದೊಂದಿಗೆ ಹೋಗುತ್ತಾರೆ. ಪೂಜಾ ವಿಧಾನ ಪೂರೈಸಿದ ನಂತರ ನೀರಿನೊಂದಿಗೆ ಮೆರವಣಿಗೆ ಮಾಡುತ್ತಾ ದೇವಾಲಯಕ್ಕೆ ಬರಲಾಗುತ್ತದೆ.

ಉದಾಹರಣೆಗೆ ಕೊರವರು ಜಾತ್ರೆಗೆ ಹೋಗುವುದನ್ನು ಈ ಹಾಡು ತಿಳಿಸುತ್ತದೆ.

"ಹಚ್ಚೆ ಸುರಾರಂಗ ವಚ್ಚೆ ನುರಾ
ನೇನು ಮಾರೆಮ್ಮ ತೇರು ಜೂಡ ವಚ್ಚೆನೂರಾ
ಕಾರು ಕೋಡು ಕೂಸುಕೂಗಿ ಕಮ್ಮಂಗಿ
ಕಾಸಿನ ತೆಲ್ಲವಾರ್ಲ ವಚ್ಚೆ ನುರಾ
ಒಂದೇನೂರಂಗ ಒಂದೇನೋ
ನಾನು ಮಾರೆಮ್ಮ ತೇರು ನೋಡ ಒಂದೇನೋ
ಹಂದಿಕೋಳಿ ಕೊಯ್ದುಕೊಂಡು ಚೆನ್ನಾಗಿ ತಿಂದು ಬಿಟ್ಟ
ನಿದೆ ಇಲ್ಲದ ಹಗಲು ರಾತ್ರಿ ಒಂದೇನೋ"

ಈ ಹಾಡಿನಿಂದ ಕೊರವರ ಸಂಸ್ಕೃತಿ, ಅವರು ಜಾತಿಗೆ ಹೋಗುವ ರೀತಿಯನ್ನು ಇಲ್ಲಿ ಕಾಣುತ್ತೇವೆ. ಕೊರವ ಸಂಸ್ಕೃತಿಯಿಂದ ಅವರ ಜೀವನ ವಿಧಾನದಿಂದ ಅವರ ಪರಿಸರವನ್ನು ಕಾಣಬಹು ದಾಗಿದೆ. ಕೋಲಾಟದ ಹಾಡಿನಲ್ಲಿ ಉಪಮೆಗಳನ್ನು ಕೇಳಬಹುದು.

"ಒಳ್ಳೆದಯ್ಯ ಬಾಳು ಒಳ್ಳೆದಯ್ಯ
ಅನಂತದೇವರಿಗೆ ನಮಸ್ಕಾರಯ್ಯ
ಎರಡು ಕಾಲು ಎಮ್ಮೆ ಕಟ್ಟಬೇಕಂತೆ
ಬೆಂಕಿಯಿಲ್ಲದ ಹಾಲು ಕಾಯಿಸಬೇಕಂತೆ
ಬಾಯಿಯಿಲ್ಲದ ಬಾಲಕೇನು ಕುಡಿಬೇಕಂತ
ಒಳ್ಳೆಯದಯ್ಯ ಬಾಳ ಒಳ್ಳೆದಯ್ಯ"

ಇವರಿಗೆ ವಿಶಿಷ್ಟವಾಗಿರುವ ಯಾವ ಹಬ್ಬವೂ ಇಲ್ಲಿ ಅವರು ಉಳಿದ ಜನರೆಲ್ಲರೂ ಆಚರಿಸು ವಂತೆಯೇ ಯುಗಾದಿ, ಶಿವರಾತ್ರಿ, ನಾಗರಪಂಚಮಿ ಆಚರಿಸುತ್ತಾರೆ. ಕೊರವ ಸಮುದಾಯದವರು ತಮ್ಮ ಹಬ್ಬಗಳ ಜೊತೆಗೆ ನಾಡಹಬ್ಬಗಳನ್ನು ಆಚರಿಸುತ್ತಾರೆ. ಮೊದಲು ಕೇವಲ ತಮ್ಮ ಸಮುದಾಯಕ್ಕೆ ಸಿಮೀತ ಹಬ್ಬಗಳನ್ನು ಆಚರಿಸುತ್ತಿದ್ದರು. ಆದರೆ ಇತ್ತೀಚೆಗೆ ಬದಲಾವಣೆಯಿಂದಾಗಿ ಗಣೇಶ ಹಬ್ಬ, ದೀಪಾವಳಿ, ಯುಗಾದಿ, ಮಹಾನವಮಿ, ಆಯುಧ ಪೂಜೆ ಮೊದಲಾದ ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಇತ್ತೀಚೆಗೆ ಯುವಕರು ಸಾಮಾನ್ಯವಾಗಿ ನಗರ ಮತ್ತು ಹಳ್ಳಿಗಳಲ್ಲಿ ದೀಪಾವಳಿ ಹಬ್ಬವನ್ನು ಆಚರಿಸುವಂತೆ ಪಟಾಕಿಗಳೊಂದಿಗೆ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿ ಹಬ್ಬವು ಇತರೆ ಜನಾಂಗದವರಿಗೆ ಇದ್ದಂತೆ ಕೊರವ ಜನಾಂಗದವರಿಗೆ ಹೊಸ ವರ್ಷದ ಆರಂಭದ ದಿನವಾಗಿದ್ದರೂ ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಹಬ್ಬದ ದಿವಸ ಇವರು ತಮ್ಮ ತಮ್ಮ ದೇವರುಗಳಿಗೆ ಶೃಂಗರಿಸ್ಸಿ ವಿಶೇಷವಾಗಿ ಪೂಜಿಸುತ್ತಾರೆ. ಅದರಲ್ಲಿಯೂ ತಮ್ಮ ಆಭರಣಗಳಿಂದ ರಾತ್ರಿಯಲ್ಲಿ ಪೂಜೆ ಮಾಡಲಾಗುತ್ತಾರೆ. ಇವರು ಆಚರಿಸುವ ಹಬ್ಬಗಳಲ್ಲಿಯೂ ಕಾರಹುಣ್ಣಿಮೆಯು ಮುಖ್ಯವಾಗಿದೆ. ತಮ್ಮ ವ್ಯಾಪಾರವು ಕಾರಹುಣ್ಣಿಮೆಗೆ ಮುಗಿಯುವುದರಿಂದ ವರ್ಷದಲ್ಲಿ ದುಡಿದ ಹಣವು ಒಂದೇ ಸಾರಿ ಬರುತ್ತದೆ. ಆದ್ದರಿಂದ ತಮ್ಮ ಮನೆಗಳಲ್ಲಿ ಹಬ್ಬದ ವಾತಾವರಣವು ಹಬ್ಬದ ರೀತಿಯಲ್ಲಿ ನಡೆಯುತ್ತದೆ.

ಈ ಹಬ್ಬಗಳಲ್ಲಿ ಅವರು ಸ್ನಾನ ಮಾಡಿ, ಹಣ ಉಳ್ಳವರು ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಕೆಲವರು ಇದ್ದ ಬಟ್ಟೆಗಳನ್ನು ಧರಿಸಿ, ದೇವರಿಗೆ ಹಣ್ಣು ಕಾಯಿ ಮಾಡಿಸುತ್ತಾರೆ. ತಮ್ಮ ಕೈಲಾದ ಅಡುಗೆ ಮಾಡಿ, ಎಡೆ ಇಟ್ಟು ಊಟ ಮಾಡುತ್ತಾರೆ. ಅವರ ಹಬ್ಬಗಳಲ್ಲಿ ವಿಶೇಷವೆಂದರೆ ತಮ್ಮ ಕುಲದೇವತೆಯ ಹಬ್ಬಗಳು ಮಾತ್ರ ಹುಲಿಗೆಮ್ಮ ಕೊರವರ ಮಾರೆಮ್ಮ, ಸುಂಕಲಮ್ಮ ದೇವರುಗಳು ಮುಖ್ಯವಾಗಿರುತ್ತವೆ.

ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ದೈವಗಳ ಆಚರಣೆ ಇರುತ್ತದೆ. ಅಂತಾದ ದೈವಗಳನ್ನು ಅವರು ತಮ್ಮದೇ ಆದ ಕ್ರಮದಲ್ಲಿ ಪೂಜಿಸುವುದು, ಸ್ಥಾಪಿಸುವುದು ಅವುಗಳ ಕುರಿತ ನಂಬುಗೆಗಳನ್ನು ಇಟ್ಟುಕೊಳ್ಳುವುದು, ವಿಧಿ ನಿಷೇಧಗಳು ಇದ್ದೆ ಇರುತ್ತದೆ. ಮೂಲತಃ ಇವರು ಸ್ತ್ರೀಪ್ರಧಾನ ಸಂಸ್ಕೃತಿಯಲ್ಲಿ ಬೆಳೆದ ದ್ರಾವಿಡ ಮೂಲದ ಸಮುದಾಯವಾಗಿದೆ. ಇವರಿಗೆ ಸ್ತ್ರೀ ದೈವಗಳೇ ಪ್ರಧಾನವಾಗಿ ಕಂಡುಬರುತ್ತವೆ. ಪುರುಷ ದೈವಗಳೂ ಸಹ ಇವರಲ್ಲಿ ಪ್ರಾಮುಖ್ಯತೆ ಗಳಿಸಿದರೂ ಅವುಗಳಿಗೆ ಇವರು ಎರಡನೇ ಸ್ಥಾನದ ಕಲ್ಪನೆ ಇದೆ ಎಂದು ಹೇಳಬಹುದು. ಆ ಕಾರಣಕ್ಕಾಗಿಯೇ ಕೊರವರು ವೆಂಕಟೇಶ್ವರನಿಗೆ ಹುಲಿಗೆಮ್ಮ ದೇವಿ ಸಿಕ್ಕ ಪ್ರಾಧಾನ್ಯತೆ. ಇತರ ದೈವಗಳಿಗೆ ಸಿಕ್ಕಿರುವುದು ಕಡಿಮೆ ಎಂದು ತೋರುತ್ತದೆ. ಅವರ ಮೂಲ ಆರಾಧನ ದೈವ ಹುಲಿಗೆಮ್ಮ ಆಕೆಯ ನಂತರ ಹುಲಿಗೆಮ್ಮ, ಯಲ್ಲಮ್ಮ ಸುಂಕಲಮ್ಮ, ಮೊದಲಾದ

ದೈವಗಳನ್ನು ಆರಾಧಿಸುವ ಪರಿಪಾಠವಿದೆ. ಇವುಗಳ ನಂತರ ವೆಂಕಟೇಶ ಅಥವಾ ತಿರುಪತಿ ತಿಮ್ಮಪ್ಪನ ಕುರಿತು ಇವರು ಆರಾಧ್ಯ ಭಾವನೆಯನ್ನು ಒಳಕೊಂಡಿದ್ದಾರೆ.

ಕೆಲವರು ಹಲವಾರು ವಿಧಗಳಲ್ಲಿ ದೈವಗಳನ್ನು ಆರಾಧಿಸುತ್ತಾರೆ. ಯುಗಾದಿಯ ನಂತರದ ಜಾತ್ರೆ, ದೀಪಾವಳಿ ಸಂದರ್ಭದಲ್ಲಿ ಅಥವಾ ದಸರಾ ಸಂದರ್ಭದಲ್ಲಿ ಈರಣ್ಣ ದೇವರಿಗೆ ಹೋಗಿ ಬರುವುದು, ನಂತರ ಉರುಳು ಸೇವೆ, ಗಂಡಾರ್ತಿಸೇವೆ ಮೊದಲಾದವುಗಳು ನಡೆಯುತ್ತವೆ. ಇವರು ದಸರಾ ದೀಪಾವಳಿ, ಯುಗಾದಿಯಂತಹ ವಿಶೇಷ ದಿನಗಳಲ್ಲಿ ತಮ್ಮ ಕುಲದ ಸಾಮಗ್ರಿಗಳನ್ನು ಇಟ್ಟು ಪೂಜೆ ಮಾಡುವುದು. ಕೆಲವರು ಕೋಳಿ ಬಲಿ ಕೊಡುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಆದರೆ ಇಂದು ಬಹುತೇಕವಾಗಿ ಕೊರವರು ತಮ್ಮ ಮೂಲ ಕಸುಬಿಗೆ ದೂರಾಗುತ್ತಿದ್ದಾರೆ. ಆದರೂ ಸಹ ತಮ್ಮ ಹಬ್ಬ ಹರಿದಿನಗಳಲ್ಲಿ ಒಂದೆಡೆ ಸೇರಿ ಪೂಜೆ ಸಲ್ಲಿಸುವುದನ್ನು ನೋಡಬಹುದಾಗಿದೆ.

ಹುಲಿಗೆಮ್ಮ, ಯಲ್ಲಮ್ಮನ ಭಕ್ತರೂ ಸಹ ಆಗಿರುವ ಇವರು ಈ ದೈವಗಳನ್ನು ಕಾಳಿಯ ಸಹೋದರಿಯರೆಂದು ಪರಿಗಣಿಸುತ್ತಾರೆ. ಆದರೆ ಇವರಿಗಾಗಿ ವಿಶೇಷವಾದ ದೇವಾಲಯಗಳನ್ನು ನಿರ್ಮಿಸಿಕೊಂಡಿರುವ ಉದಾಹರಣೆಗಳಿವೆ. ಕೊರವರು ಇರುವ ಓಣಿ ಅಥವಾ ಕೇರಿಗಳಲ್ಲಿ ಹುಲಿಗೆಮ್ಮ, ಸುಂಕಲಮ್ಮ, ದುರ್ಗಮ್ಮನ ಗುಡಿಗಳನ್ನು ಕಟ್ಟಿಸಿಕೊಂಡಿರುವುದು ಬಳ್ಳಾರಿ ಜಿಲ್ಲೆಯ ಹಲವಾರು ಊರುಗಳಲ್ಲಿ ಕಂಡುಬರುವುದುಂಟು. ಕೆಲವು ವ್ಯಕ್ತಿಗಳಲ್ಲಿ ಹುಲಿಗೆಮ್ಮ ಆವಾಹಣೆಗೊಂಡು ವಿಶೇಷ ಸಂದರ್ಭಗಳಲ್ಲಿ ಹೇಳಿಕೆ ಇತ್ಯಾದಿ ನಡೆಯುವುದುಂಟು. ಇವುಗಳಿಗಾಗಿ ವಿಶೇಷ ಆಚರಣೆಗಳಿಲ್ಲ. ತಮ್ಮ ಮನೆಯಲ್ಲಿ ಯಾವುದೇ ಒಂದು ವಸ್ತು ಕಾಣೆಯಾದಾಗ, ಮನೆಯಲ್ಲಿ ಯಾರಾದರೂ ಸುಸ್ತುದಾಗ ಮನೆಗೆ ಯಾವುದಾದರೊಂದು ತೊಂದರೆ ಇದೆ ಎಂದು ತಿಳಿದು ಹುಲಿಗೆಮ್ಮನಲ್ಲಿ ಹೋಗಿ ಹೇಳಿಕೆ ಕೇಳಿಸಿಕೊಂಡು ಬರುತ್ತಾರೆ. ಇದು ಒಂದು ವಾಡಿಕೆಯಾಗಿದೆ.

ಯಲ್ಲಮ್ಮನಿಗೆ ಹೋಗುವಷ್ಟು ಅನುಕೂಲತೆಗಳನ್ನು ಹೊಂದಿದ ಕೊರವರು ಯಲ್ಲಮ್ಮ ಅಥವಾ ಹುಲಿಗೆಮ್ಮರ ಅಡ್ಡಲಿಗೆಗಳನ್ನು ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ಕೆಲವರು ಒಂದು ಹುಣ್ಣಿಮೆ ಅಥವಾ ಅಮಾವ್ಯಾಸೆಗಳಲ್ಲಿ ಜೋಗತಿಯರನ್ನು ಕರಸಿ ಅಡ್ಡಲಿಗೆ ತುಂಬಿಸಿ, ಜೋಗ ಹೇಳಿಸುವ ಮೂಲಕ ಆ ದೈವಗಳನ್ನು ಮನೆಗೆ ತುಂಬಿಸಿಕೊಳ್ಳುವ ವಾಡಿಕೆ ಇದೆ. ವಿಶೇಷ ಸಂದರ್ಭದಲ್ಲಿ ಯಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ ದೈವಗಳಿಗೆ ಕುರಿ ಕೋಳಿ ಬಲಿ ಕೊಡುವ ಪದ್ಧತಿಯು ಇದೆ. ವರ್ಷಕ್ಕೆ ಒಂದು ಬಾರಿ ಇಲ್ಲದೇ ಹರಕೆಯ ರೂಪದಲ್ಲಿ ಈ ರೀತಿ ಮಾಡಲಾಗುತ್ತದೆ. ಮೂರು ವರ್ಷಕ್ಕೊಂದು ಸಾರಿ ಕೊರವರ ಮಾರೆಮ್ಮನನ್ನು ಮಾಡುವುದು ವಾಡಿಕೆಯಾಗಿದೆ. ಈ ಸಂದರ್ಭದಲ್ಲಿ ಗಂಡ್ದೀರ್ಪ ತರುವುದು ಸಹ ಕಂಡುಬರುತ್ತದೆ.

ಹಬ್ಬ-ಹರಿದಿನಗಳು ಭಕ್ತಿ ಧರ್ಮ ಮತ್ತು ವ್ರತಾಚರಣೆ ಸಂಬಂಧಿಸಿದ ಶುಭ ದಿನಗಳು, ಸಾಂಸ್ಕೃತಿಕ ಸಂವರ್ಧಕ ದಿನಗಳೂ ಆಗಿದೆ. ಇವುಗಳು ಆಚರಣೆಯು ಪವಿತ್ರವಾಗಿದೆ. ಹಿಂದುಗಳಾದ ನಮಗೆ ಧರ್ಮವೇ ಬಾಳಿನ ಉಸಿರು ಆಗಿದೆ. ಧರ್ಮದ ಕುಶಲತೆಯೇ ಬಾಳಿನ ತಂತ್ರ, ಜ್ಞಾನ ಪೂರ್ಣ ಅರಿವೇ ಆಗಿರುತ್ತದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬ ಹರಿದಿನಗಳನ್ನು ಕೊರವರು ಆಚರಿಸಿ ಕೊಂಡು ಬರುತ್ತಿದ್ದಾರೆ. ಕಾಲಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳು ಸಾಗಿಬಂದಿದೆ. ನಂಬಿಕೆಗಳು ಜೀವನ ಮಾರ್ಗದ ಸಾಧನ ವಿಶೇಷಗಳು, ಜೀವನದ ದಾರಿ ಸಾಗಲು ಇರುವ ದಾರಿಯ ಮೈಲಿಗಲ್ಲುಗಳು.

ಶ್ಯಾಕಿ ಏರಿಸುವುದು

ಶ್ಯಾಕಿ ಏರಿಸುವುದನ್ನು ಕೊರವ ಸಮುದಾಯದಲ್ಲಿ ವಿಶೇಷವಾಗಿ ಆಚರಿಸಲಾಗುತ್ತಿದೆ. ಪ್ರತಿವರ್ಷವು ಭಾರತ ಹುಣ್ಣಿಮೆಯಿಂದ ಮುಂದೆ ಬರುವ ತಿಂಗಳಲ್ಲಿ ಒಂದು ದಿನ ಮಂಗಳವಾರ ಅಥವಾ ಶುಕ್ರವಾರದಂದು ಮಾತಂಗಿ ಮತ್ತು ಹುಲಿಗೆಮ್ಮನನ್ನು ಆರಾಧಿಸುವುದಕ್ಕೆ ಶ್ಯಾಕಿ ಏರಿಸುವುದು ಎನ್ನುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ ಮಾಡಲಾಗುತ್ತದೆ. ಪ್ರತಿಯೊಂದು ಕುಟುಂಬದವರು ಅವರವರ ಅನುಕೂಲಕ್ಕೆ ತಕ್ಕಂತೆ ಭಾರತ ಹುಣ್ಣಿಮೆಯಂದು ಶ್ಯಾಕಿ ಏರಿಸುವುದನ್ನು ಕಾಣುತ್ತೇವೆ. ಶ್ಯಾಕಿ ಎಂದರೆ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗಳಿಗೂ ಯಾವುದೇ ದೋಷವಾಗದಂತೆ ನಿವಾಳಿಸುವ(ಬೇವಿನ ಕಡ್ಡಿಗಳಿಂದ ಮಾತಂಗಿಯವರು)ಕಾರ್ಯವನ್ನು ಶ್ಯಾಕಿ ಏರಿಸುವುದು ಎಂದು ಹೇಳುತ್ತಾರೆ.

ಪ್ರತಿವರ್ಷದಿಂದ ಪ್ರತಿದಿನ ದುಡಿದ ಒಂದು ಭಾಗವನ್ನು ಹುಂಡಿಯಲ್ಲಿ ಹಾಕಲಾಗುತ್ತದೆ. ಇದರಲ್ಲಿ ಮಹಿಳೆಯರ ಪಾತ್ರವೇ ಮುಖ್ಯವಾಗಿರುತ್ತದೆ. ಶ್ಯಾಕಿ ಏರಿಸುವ ದಿನದಂದು ಹುಡಿ ಒಡೆದು ಅದರಲ್ಲಿರುವ ಹಣದಲ್ಲಿಯೇ ದೇವರಿಗೆ ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಳ್ಳುತ್ತಾರೆ. ಹೊಸ ಎರಡು ಗಡಿಗೆ ತೆಗೆದುಕೊಂಡು ಹೊಸದಾದ ಹುಂಡಿ ತರೆದುಕೊಂಡು, ಮನೆಯನ್ನು ಶುದ್ಧಿಕರಿಸಿ ಎಲ್ಲರೂ ಸ್ನಾನ ಮಾಡಿ ಹೊಸ ಗಡಿಗೆಯಲ್ಲಿ ಸಿಹಿ ಅಡಿಗೆ ಮಾಡಿ, ಎಡೆ ಹಾಕಲಾಗುತ್ತದೆ. ದೇವರ ಮನೆಯಲ್ಲಿ ಪೂಜೆಗೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡು ಮನೆಯ ಹಿರಿಯ ಮಗ–ಸೊಸೆ ಪೂಜೆಗೆ ಸಿದ್ಧರಾಗಬೇಕು. ಮಾತಂಗಿಯನ್ನು ಕರೆಸಿ ಮನೆಯ ಅಂಗಳದಲ್ಲಿ ಪೂಜೆಗೆ ಮಾತಂಗಿಯರೇ ಸಿದ್ಧಪಡಿಸಿಕೊಳ್ಳುತ್ತಾರೆ. ಮನೆಯ ಒಳ ಮತ್ತು ಹೊರ(ಹುಲಿಗೆಮ್ಮ ಮತ್ತು ಮಾತಂಗಿ)ದೇವರಿಗೆ ಬದನೆಕಾಯಿ, ಮೂರು ತರಹದ ಸೊಪ್ಪು, ಫಲಕ, ರಾಜಗಿರಿಸೊಪ್ಪು, ಮೆಣಸಿನಕಾಯಿ, ಈರುಳ್ಳಿ ಹಾಕಿ ಜೊತೆಗೆ ಸಿಹಿ ಅಡುಗೆಯನ್ನು ಎಡೆ ಇಡುತ್ತಾರೆ. ಮೊದಲು ಒಳಗೆ ಪೂಜೆ ನಡೆಯುತ್ತದೆ. ನಂತರದಲ್ಲಿ ಹೊರಗಿರುವ ಮಾತಂಗಿಗೆ ಪೂಜೆ ಮಾಡಲಾಗುತ್ತದೆ.

ನಂತರ ಕುಟುಂಬದ ಎಲ್ಲ ಬಂಧು ಬಳಗದವರು ಸೇರಿಕೊಂಡು ಸಾಲಾಗಿ ಮನೆ ಮುಂದೆ ನಿಲ್ಲಬೇಕು. ಪೂಜೆಗೆ ಕುಳಿತವರಲ್ಲಿ ಮಹಿಳೆಯು ಕಳಸವನ್ನು ಪುರುಷನು ಗಡಿಗೆಯಲ್ಲಿ, ನೀರು, ಬೇವಿನಸೊಪ್ಪು ತರುತ್ತಾರೆ. ಅದರಲ್ಲಿ ಮಾತಂಗಿಯರು ತಮ್ಮ ಪೂಜೆ ಮುಗಿಸಿದ ಮೇಲೆ ದಂಪತಿಗಳು ತಂದ ನೀರನ್ನು ಮಾತಂಗಿ ಮೇಲೆ ಹಾಕುತ್ತಾ ಹೋದರೆ, ಮಾತಂಗಿಯರು ಹಿಮ್ಮುಖವಾಗಿ ಕುಳಿದುಕೊಂಡು ಹಿಂದಕ್ಕೆ ಹೋಗುತ್ತಿರುತ್ತಾರೆ. ಅವರ ಮೇಲೆ ನೀರು ಸುರಿಯುತ್ತಾರೆ. ನಂತರ ಕೈಯಲ್ಲಿರುವ ಬೇವಿನಸೊಪ್ಪಿನಿಂದ ಕುಟುಂಬದ ಎಲ್ಲರಿಗೂ ನಿವಾಳಿಸುತ್ತಾ ಬರುತ್ತಾರೆ. ಮಕ್ಕಳಿಂದ ಹಿಡಿದು ಹಿರಿಯರವರೆಗೂ ನಿವಾಳಿಸುತ್ತ ತೆಗೆಯುತ್ತಾ ಮತ್ತೊಬ್ಬರಿಗೆ ನಿವಾಳಿಸುತ್ತ ಹೋಗುವಾಗ ಎಲ್ಲರು ತಮ್ಮ ತಮ್ಮ ಕೈಯಲಿಡಿದ ಹಣವನ್ನು ತಮಗೂ ಕಾಣದಂತೆ ಮಾತಂಗಿಯರಿಗೆ ನೀಡುತ್ತಾರೆ. ನಂತರ ಕುಟುಂಬ ಅರ್ಪಣೆ ಪಡೆದು ತಮ್ಮ ಮನೆಗೆ ಹಿಂದಿರುಗುತ್ತಾರೆ. ಮಾತಂಗಿ ಯವರು ಹೋದ ನಂತರ ಎಲ್ಲರೂ ಸೇರಿ ಸಹಭೋಜನ ವ್ಯವಸ್ಥೆ ಮಾಡಿ ದೇವರ ಮುಂದಿರುವ ಎಡೆಯನ್ನು ಪೂಜೆಗೆ ಕುಳಿತವರು ಪಡೆಯುತ್ತಾರೆ. ನಂತರ ಹೊಸ ಹುಂಡಿಯಲ್ಲಿ ಉಳಿದ ಹಣವನ್ನು ಪುನರ್‌ಹುಂಡಿಗೆ ಹಾಕಲಾಗುತ್ತದೆ. ನಂತರ ಬಂದವರಿಗೆ ಊಟ ಹಾಕಲಾಗುತ್ತದೆ. ಶ್ಯಾಕಿ ಏರಿಸುವವರಲ್ಲಿ ನಿವಾಳಿಸುವ ಮಾತಂಗಿಯು ಛಲವಾದಿ ಸಮುದಾಯಕ್ಕೆ ಸೇರಿದವರು.

ದೀಪಾವಳಿ ಆಚರಣೆ

'ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಹಬ್ಬಗಳು ನಮ್ಮ ಸಂಪ್ರದಾಯ ಆಚರಣೆಯಲ್ಲಿ ತಿಳಿಸುತ್ತವೆ. ಮಾನವ ತಮ್ಮ ಸಂಪ್ರದಾಯದಲ್ಲಿರುವ ಎಲ್ಲಾ ಹಬ್ಬಗಳನ್ನು ರೂಢಿಸಿಕೊಂಡು ಬಂದಿರುವುದುಂಟು. ಮೂಲತಃ ಹಬ್ಬಗಳೆಲ್ಲವು ವಿಜಯ ಸಂಕೇತವಾಗಿವೆ. ಅದರ ಜ್ಞಾಪಕರ್ಥವಾಗಿ ಹಬ್ಬಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಕೆಲವೊಂದು ಅಂಥ ವಿಜಯಕ್ಕೆ ಕಾರಣರಾದ ಮಹಾಪುರಷರ ಹುಟ್ಟಿದ ದಿನಗಳಲ್ಲಿ ಹಬ್ಬಗಳನ್ನು ಆಚರಿಸುತ್ತಾರೆ. ಕೆಲವು ಹಬ್ಬಗಳು ಸಾಮೂಹಿಕವಾಗಿ ಆಚರಿಸಲಾಗುವುದು, ಕೆಲವು ಅನುಕರಣೆಯಿಂದಲೂ ಬಂದಿರಬಹುದು. ಕೆಲವು ಹಬ್ಬಗಳ ಸಂಪ್ರದಾಯದವರಿಗೆ ಮಾತ್ರ ಮೀಸಲು ಆಗಿರುತ್ತದೆ. ಎಲ್ಲ ಹಬ್ಬಗಳಿಗೂ ಸಾಮಾನ್ಯವಾಗಿ ಐತಿಹ್ಯಗಳು, ಪುರಾಣಗಳು ಇದ್ದೆ ಇರುತ್ತವೆ. ಯಾವುದೇ ಹಬ್ಬ ಆಚರಣೆಗಳು ಎಂದರೆ ಸಡಗರ ಸಂಭ್ರಮದ ಪ್ರತೀಕವಾಗಿರುತ್ತವೆ.

ಹಬ್ಬಗಳ ಸಂದರ್ಭಗಳಲ್ಲಿ ಮಾವಿನ ತಳಿರು ತೋರಣಗಳಿಂದ ಮನೆಬಾಗಿಲನ್ನು ಅಲಂಕರಿಸುವುದು, ಮನೆಗೆ ಸುಣ್ಣ ಬಣ್ಣ, ರಂಗವಲ್ಲಿ ಮಿಂದು ಮನೆಯನ್ನು ಅಲಂಕರಿಸುತ್ತಾರೆ. ವಿಶೇಷ ಅಡುಗೆ ಹಬ್ಬದ ಆಚರಣೆಗೊಂದು ಮಹತ್ವ ನೀಡುತ್ತದೆ. ಒಂದೊಂದು ಹಬ್ಬ ಆರಣೆಗಳಲ್ಲಿ ವಿಶೇಷವಾದ ಪೂಜಾಪುನಸ್ಕಾರಗಳು ಇರುತ್ತವೆ. ಈ ಆಚರಣೆಗಳು ಮುಂದಿನ ಪೀಳಿಗೆಗೆ ಇದರ ಮಹತ್ವವನ್ನು ತಿಳಿಸುವಂತಹ ಅವಶ್ಯಕತೆ ಇದೆ. ಅದರಲ್ಲಿ ದೀಪಾವಳಿ ಹಬ್ಬದ ಆಚರಣೆಯೂ

ಒಂದು. ದೀಪಾವಳಿಯನ್ನು ನರಕ ಚತುರ್ಥಿ, ಬಲಿಪಾಡ್ಯಮಿ, ಹಟ್ಟಿಹಬ್ಬ ಎಂದು ಸಹ ಕರೆಯುತ್ತಾರೆ.

ದೀಪಾವಳಿ ಎಂದರೆ ದೀಪಗಳ ಅವಳಿ ಅಂದರೆ ದೀಪಗಳಿಂದ ಆವೃತ್ತವಾದ ಹಬ್ಬ. ಎಲ್ಲೆಲ್ಲೂ ದೀಪದ ಬೆಳಕು, ಮಾನವನ ಆತ್ಮದಲ್ಲಿ ಬೆಳಕು ಚೆಲ್ಲುವುದು, ತಿಳುವಳಿಕೆ ಜ್ಯೋತಿ ಮೂಡಿಸುವುದು, ಮಾನವನಿಗೆ ದಿಕ್ಕನ್ನು ಸೂಚಿಸುವ ಶಕ್ತಿಯು ದೀಪದಲ್ಲಿದೆ. ಕತ್ತಲೆಯು ಜಗತ್ತಿನಲ್ಲಿ ಬೆಳಕನ್ನು ತೋರಿಸುವ ಶಕ್ತಿ ದೀಪಗಳಾಗಿವೆ.

ಭೂಮಿಯ ಪುತ್ರನಾದ ನರಕಾಸುರ ಲೋಕ ಕಂಟಕನಾದಾಗ ಭೂಮಾತೆಯೇ ಶ್ರೀಕೃಷ್ಣನನ್ನು ಪ್ರಾರ್ಥಿಸಿ ನರಕಾಸುರನನ್ನು ಸಂಹಾರ ಮಾಡಿಸಿದಳೆಂದು ಪುರಾಣಗಳಿಂದ ತಿಳಿದುಬರುತ್ತದೆ. ಕೃಷ್ಣನ ದಶಾವತಾರಗಳಲ್ಲಿ ವಾಮನಾವತಾರವು ಒಂದು. ರಾಜನಾದ ಬಲಿಚಕ್ರವರ್ತಿಯನ್ನು ವಾಮನ ಮೂರು ವರ ಕೇಳುವಾಗ ಶುಕ್ರಚಾರ್ಯರು ತಡೆಯುತ್ತಾರೆ. ಆದರೆ ಅವರ ಮಾತನ್ನು ತಳಿಯಾಗಿ ವಾಮನಿಗೆ ವರ ನೀಡಿ, ಮೂರಡಿ ಜಾಗ ನೀಡುತ್ತಾನೆ. ಭೂಮಿ, ಆಕಾಶ ಮತ್ತು ಬಲಿಚಕ್ರವರ್ತಿಯ ತಲೆಯ ಮೇಲೆ ಕಾಲಿಟ್ಟು ಪಾತಾಳಕ್ಕೆ ತುಳಿಯುತ್ತಾನೆ. ಅದರಿಂದ ಬಲಿಪಾಡ್ಯಮಿ, ಬಲೀಂದ್ರ ಪೂಜೆಯನ್ನು ಮಾಡಲಾಗುತ್ತದೆ. ಮನುಷ್ಯನಲ್ಲಿರುವಂತಹ ರಾಕ್ಷಸಗುಣವನ್ನು ಸಂಹಾರ ಮಾಡುವ ಪರಿ ತಿಳಿಸುತ್ತದೆ. ಎಲ್ಲೆಡೆಯಲ್ಲೂ ದೀಪೋತ್ಸವ, ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ದುಷ್ಟಗುಣಗಳು ಸಂಹಾರವಾಗುವುದರ ಮೂಲಕ ಜ್ಞಾನದ ಜ್ಯೋತಿಯ ಬೆಳಗುತ್ತದೆ. ಬಾಣ ಬಿರುಸುಗಳಿಂದ ಹಬ್ಬವನ್ನು ಆಚರಿಸಲಾಗುತ್ತದೆ.

ದೀಪ ಎಂಬುದೇ ಬೆಳಕು. ಜ್ಞಾನ, ಅಗ್ನಿ, ಸೂರ್ಯ ಎಂದೂ ಹೆಣ್ಣಿಗೆ ಹೋಲಿಸಿದಾಗ ಆಡುಭಾಷೆಯಲ್ಲಿ ಮನೆ ಬೆಳಗುವವಳು ಎಂದೂ ಬಣ್ಣಿಸುತ್ತಾರೆ. ದೀಪ ಅಭಿವೃದ್ಧಿಯ ಮತ್ತು ಜ್ಞಾನದ ಸಂಕೇತ ಎಂದರೇ ತಪ್ಪಾಗಲಾರದು. ದೀಪಾವಳಿಯಿಂದಲೇ ಕಾರ್ತಿಕ ಮಾಸವು ಆರಂಭವಾಗುವುದು. ದೀಪೋತ್ಸವಕ್ಕೆ ಹೆಸರಾದ ದಿನ ಪಂಜನ್ನು ಹಿಡಿದು ತಿರುಗಿಸುತ್ತಾ ಊರಿನಲ್ಲೆಲ್ಲ ಸುತ್ತು ಹಾಕುವ ಪದ್ಧತಿ ಹಿಂದೆ ಇತ್ತು. ಉತ್ತರಗೋಗ್ರಹಣದ ಜ್ಞಾನಾರ್ಥವಾಗಿ ಹಾಗೆ ಮಾಡಬೇಕೆಂದು ನಂಬಿಕೆ. ಪಿತೃದೇವತೆಗಳಿಗೆ ಮರಳಿ ಹೋಗಲು ದಾರಿ ತೋರುವ ವಿಧಾನವಿದೆಂದು ಪುರಾಣ ವಾಕ್ಯ(ಕನ್ನಡ ವಿಷಯ ವಿಶ್ವಕೋಶ, ಪು.೧೪೨).

ಜನಪದರ ಕಥೇ ಪುರಾಣಗಳಲ್ಲಿ ಪ್ರೇರಕವೂ, ಪೋಷಕವೂ ಆಗುತ್ತದೆ. ದೇವತೆಗಳ ಶಕ್ತಿಯನ್ನು ಪೋಷಿಸಲು ರಕ್ತಬಲಿ ಅವಶ್ಯವೆಂಬ ಕಲ್ಪನೆಯಿತ್ತು. ಪವಿತ್ರರಾಜನನ್ನು ಬಲಿಕೊಟ್ಟು ರಾಜನ ದೇವತ್ವದ ಶಕ್ತಿಯನ್ನು ಕಾಪಾಡುವ ಒಂದು ಹಬ್ಬ ಬಲಿಪಾಡ್ಯಮಿ ಎಂದು ಆಚರಿಸುತ್ತಾರೆ. (ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭).

ಆದಿಮಾನವನ ಕಾಲದಿಂದಲೂ ಪ್ರಕೃತಿ ಆರಾಧಕರು, ಪಂಚಭೂತಗಳ ಪರಿಕಲ್ಪನೆಯು ಆಚರಣೆಯಲ್ಲಿ ದೊರೆಯುತ್ತವೆ. ಗಾಳಿ, ನೀರು, ಬೆಂಕಿ, ಭೂಮಿ, ಆಕಾಶ ಇತ್ಯಾದಿ ನೈಸರ್ಗಿಕ ಶಕ್ತಿಗಳು ಮಾನವನಿಗಿಂತ ಹೆಚ್ಚು ಶಕ್ತಿಯುಳ್ಳ ದೈವಗಳು. ಅವುಗಳು ಪೂರ್ವಕಾಲದಿಂದಲೂ ಆರಾಧಿಸಿಕೊಂಡು ಬರುತ್ತಿದ್ದೇವೆ. ಗಾಳಿಯು ಉಸಿರಿನ ಸಂಕೇತ, ಸಮಸ್ತ ಬ್ರಹ್ಮಂಡಕ್ಕೆ ಅವಶ್ಯಕ. ಉಸಿರು ನಿಂತು ಹೋದರೆ ಜಗತ್ತೆ ನಿಸಕ್ರಿಯವಾಗುತ್ತದೆ. ನೀರು ಸಮೃದ್ಧಿಯ ಸಂಕೇತ ಎನ್ನಬಹುದು. ಮಾನವನಿಗೆ ಚೈತನ್ಯವನ್ನು ನೀಡುವುದು. ಆಗ್ನಿ ಬೆಳಕಿನ ಸಂಕೇತ. ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯ, ಸೂರ್ಯನಿಲ್ಲದಿದ್ದರೆ ಜಗತ್ತೆ ಕತ್ತಲೆಯಲ್ಲಿಯು ಮುಳುಗಬೇಕಾಗುತ್ತಿತ್ತು. ಮಣ್ಣು ಮನುಷ್ಯ ಜೀವನಾವಶ್ಯಕತೆಯನ್ನು ಪೂರೈಸುವ ಮಾತೆ, ಗಾಳಿ, ಅಗ್ನಿ, ಅಕಾಶ, ನೀರು, ಮಣ್ಣು ಸೂಕ್ಷ್ಮವಾಗಿ ಗಮನಿಸಿದಾಗ ಸ್ತ್ರೀ–ಪುರುಷರ ಸಮಾನತೆಯನ್ನು ತಿಳಿಸುವಂತಹವು. ಇವೆಲ್ಲವು ಪ್ರಕೃತಿಯ ಶಕ್ತಿ. ಇವುಗಳ ಗುಣಧರ್ಮವನ್ನು ಅರಿತು ನಡೆಯುವುದು ಅತ್ಯವಶ್ಯಕ. ಬೆಂಕಿಯಿಂದ ಜಗತ್ತಿನ ತಿಳುವಳಿಕೆಯನ್ನು ಅರಿಯಲು ಸತ್ಯವಾಯಿತು.

ಆದಿಮಾನವ ಕಲ್ಲಿನಿಂದ ಉಂಟಾದ ಅಗ್ನಿಯ ಸೂಕ್ಷ್ಮ ಬೆಳಕು ಕಂಡು ಹಿಡಿದ. ಬೆಂಕಿಯಿಂದ ಬಂದ ಅಂಶವೇ ದೀಪ. ಹಿಂದಿನ ಕಾಲದಲ್ಲಿ ದೀಪದಿಂದಲೇ ಮನೆಯ ಬೆಳಕನ್ನು ಕಾಣುತ್ತಿದ್ದರು. ಇಲ್ಲಿ ದೀಪದ ನಂಬಿಕೆ ಮತ್ತು ಸಂಪ್ರದಾಯಗಳನ್ನು ಕಾಣುತ್ತೇವೆ. ಈ ಸಂಸ್ಕೃತಿಗೆ ಮಾನವನ ಅದ್ಭುತ ಸಂಶೋಧನೆ ಅಗ್ನಿಶೋಧನೆಯೇ ಮೂಲವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಅಗ್ನಿಗೆ ಮಹತ್ವಪೂರ್ಣವಾದ ಸ್ಥಾನವಿದೆ. ದೀಪವು ಅಗ್ನಿಯ ಮೂಲಕವೇ ದೇವತೆಗಳಿಗೆ ತಲುಪುತ್ತದೆಯೆಂಬ ನಂಬಿಕೆ ಇದೆ. ಉಗ್ರರೂಪವಾದ ಅಗ್ನಿ ಸೌಮ್ಯರೂಪವೇ ಜ್ಯೋತಿ. ಅಂದರೆ ದೀಪ ಎನ್ನಬಹುದು. ದೀಪ ನಮಗೆ ಬೆಳಕಿನ ಜೊತೆಗೆ ರಕ್ಷಣೆಯನ್ನು ನೀಡುತ್ತದೆ. ಕತ್ತಲೆಯಿಂದ ಬೆಳಕಿನಡೆಗೆ ಪಯಣಿಸುವ ಮಾನವನ ಹಂಬಲವನ್ನು ನಿರಂತರಗೊಳ್ಳಿಸುತ್ತದೆ. ಅರಿವೇ ಗುರು ಎಂಬುದೇ ಮನದ ಬೆಳಕು ಮೂಡಿಸುವುದು. ಮಾನವನ ಅಭಿವೃವೃದ್ಧಿ ಉಂಟಾಗುವುದು. ಸಾಧು–ಸಂತರು ತಮ್ಮ ಶಕ್ತಿಯಿಂದ ಜ್ಞಾನದ ದೀಪವನ್ನು ಜಗತ್ತಿಗೆ ತಿಳಿಸಿದರು.

ಭಾರತೀಯ ಸಂಸ್ಕೃತಿಯಲ್ಲಿ ಅವಿನಾಭಾವವಾದ ಸಂಬಂಧ ಮಾನವ ಮತ್ತು ದೀಪ. ಆದರಿಂದಾಗಿ ದೀಪವನ್ನು ಸಂರಕ್ಷಿಸಿ ಆರಾಧಿಸುವ ಪದ್ಧತಿಯು ನಿರಂತರವಾಗಿ ನಡೆಯುತ್ತಿದೆ. ಪ್ರಾಚೀನ ಕಾಲದಲ್ಲಿ ದೀಪವನ್ನು ಹಚ್ಚುವ ಪಾತ್ರೆಗಳನ್ನು ಕಲ್ಲು ಮತ್ತು ಚಿಪ್ಪಿನಿಂದ ಮಾಡಿ, ಬತ್ತಿ ಹಾಕಿ, ಎಣ್ಣೆ ಎರೆದು ದೀಪ ಬೆಳಗುತ್ತಿದ್ದರು. ಕೋಲಿಗೆ ಬಟ್ಟೆ ಸುತ್ತಿ ತುದಿಗೆ ದೀಪವನ್ನು ಹಿಡಿದುಕೊಂಡು ಹೋಗುವುದು ಕಂಡುಬರುತ್ತದೆ. ನಂತರದಲ್ಲಿ ಮಣ್ಣಿನ ಮತ್ತು ಲೋಹದ ದೀಪವನ್ನು ಬೆಳಗುವ ಸಂಪ್ರದಾಯ ಬೆಳೆದುಬಂದಿದೆ. ಒಂದೊಂದು ಆಚರಣೆಗಳಲ್ಲಿ ಹಲವಾರು ತರಹದ ದೀಪವನ್ನು ನೋಡಬಹುದು. ಮಣ್ಣಿನ ದೀಪಗಳ ಬದಲಾಗಿ, ಸಿಂಬೆ ಹಣ್ಣಿನ ದೀಪ,

ಹಿಟ್ಟಿನ ದೀಪ, ಬೆಲ್ಲದ ದೀಪ, ಸಕ್ಕರೆ ಗೊಂಬೆ ದೀಪ, ಬಾಳೆ ಹಣ್ಣಿನ ದೀಪ ಹೀಗೆ ಇತ್ಯಾದಿ ಕಂಡುಬರುತ್ತವೆ.

ಹಬ್ಬ ಹರಿದಿನಗಳಲ್ಲಿ ನಾನಾ ತರಹದ ದೀಪದ ಅಲಂಕಾರಗಳು ಕಣ್ಣಿಗೊಂದು ಹಬ್ಬ ವಾಗಿರುತ್ತದೆ. ಬೆಳಕಿನ ಹಬ್ಬ ದೀಪಾವಳಿ. ಆರತಿಯ ಬಗೆಗಳು ವಿಶಿಷ್ಟವಾಗಿರುತ್ತದೆ. ದೀಪರಾಧನೆ, ದೀಪೋತ್ಸವ, ಲಕ್ಷ ದೀಪೋತ್ಸವ ಆಚರಣೆಗಳು ದೇವಾಲಯಗಳಲ್ಲಿ ಕಾರ್ತಿಕ ಮಾಸದಲ್ಲಿ ನಡೆಯುವುದನ್ನು ಕಾಣುತ್ತೇವೆ. ದೇವಾಲಯಗಳ ಮುಂಭಾಗದಲ್ಲಿರುವ ದೀಪಸ್ತಂಭಗಳು ಕಂಡುಬರುತ್ತದೆ. ಇಂದು ಇಷ್ಟ ಸಿದ್ಧಿಗೋಸ್ಕರ ತುಪ್ಪದ ದೀಪ, ನಂದಾದೀಪ, ಹೊನ್ನೆಣ್ಣೆದೀಪ ಇನ್ನೂ ನಾನಾ ತರಹದ ದೀಪದ ಹರಕೆಯ ರೂಪದಲ್ಲಿ ದೀಪಗಳನ್ನು ಹಚ್ಚುವ ಪದ್ಧತಿ ಇದೆ.

ದೀಪಾವಳಿ ಅಮಾವಸೆಯಿಂದ ಬಲಿಪಾಡ್ಯಮಿಯವರೆಗೆ(ಮೂರು ದಿನಗಳು) ಪ್ರತಿ ಮನೆ, ಮಠ, ಗುಡಿ, ಗೋಪುರಗಳಡೆಯಲ್ಲಿ ಸಾಲು ದೀಪ, ಆಕಾಶ ದೀಪಗಳು, ಚಿನ್ನದ ಕುಡಿಗಳಂತೆ ಮಿನುಗುತ್ತಿರುತ್ತವೆ. ಅದೇ ತರಹ ಮಲೆನಾಡಿನಲ್ಲಿ ಅಂಟಿಗೆ ಪಂಟಿಗೆ ಸಂಪ್ರದಾಯವಿದೆ. ದೀಪಾವಳಿಯಲ್ಲಿ ದನಕರುಗಳ ಹಟ್ಟಿಗಳಲ್ಲಿರುವ ಸಗಣಿಗೂ ಪೂಜೆಸಲ್ಲಿಸಿ, ದೀಪಾ ಬೆಳಗಿಸಿ ನೈವೇದ್ಯ ಸಮರ್ಪಣೆ ಮಾಡಲಾಗುತ್ತದೆ. ಸಗಣಿಯನ್ನು ಲಕ್ಷ್ಮೀ ಎಂದು ಆರಾಧಿಸುತ್ತಾರೆ. ಹಟ್ಟಿಹಬ್ಬದಲ್ಲಿ ಗೋಮಾತೆಯ ಆರಾಧನೆ ಉಂಟು. ದೀಪಾವಳಿಯೆಂದು ಹಟ್ಟಿಯ ತುಂಬ ದೀಪವನ್ನು ಹಚ್ಚಿ ತಂಗಡಿ ಹೂವು ಹಾಕಿ ಪೂಜಿಸಲಾಗುತ್ತದೆ. ಮನೆಯಲ್ಲಿ ತಂಗಡಿ ಹೂವು (ಬಂಗಾರ ಹೂವು)ಅಲಂಕಾರವಾಗಿ ಹಾಕಿರುತ್ತಾರೆ.

ದೀಪದ ಬಗೆಗೆ ನಂಬಿಕೆಯುಂಟು. ದೀಪವನ್ನು ಪವಿತ್ರ ಭಾವನೆಯಿಂದ ಕಾಣುತ್ತಾರೆ. ದೀಪವನ್ನು ನಂದಿಸು, ನಂದಿತೆಂದು ಹೇಳುವುದಿಲ್ಲ. ದೀಪವನ್ನು ದೊಡ್ಡದು ಮಾಡು ಎಂದು ಹೇಳುತ್ತಾರೆ. ಮನೆಯಲ್ಲಿ ಅಗ್ನಿಮೂಲೆಯೊಂದು ಅಲ್ಲಿಯೇ ಅಗ್ನಿಯನ್ನು ಅಥವಾ ಒಲೆಯನ್ನು ಹಾಕಲಾಗುತ್ತದೆ. ಅಗ್ನಿಗೆ ತನ್ನದೆಯಾದ ಸ್ಥಾನ ಕಲ್ಪಿಸಲಾಗಿದೆ. ದೀಪ ಜ್ವಾಲೆಯ ಬೆಳಕು ಅದರ ಬಣ್ಣಗಳನ್ನಾಧರಿಸಿ ಬದುಕಿನ ಶುಭಾಶುಭಗಳನ್ನು ಹೇಳುವುದುಂಟು. ಸೂರ್ಯನ ಬೆಳಕಿನ ಏಳು ಬಣ್ಣಗಳಿರುವಂತೆ, ಮನುಷ್ಯನ ಜೀವನದಲ್ಲಿಯೂ ಬಣ್ಣವು ಇರುವುದುಂಟು. ದೀಪ ಕೈತಪ್ಪಿ ಕೆಳಗೆ ಬಿದ್ದರೆ, ನಂದಿದರೆ ಕೇಡೆಂದು ನಂಬುತ್ತಾರೆ.

ನರಕ ಚತುರ್ದಶಿ ನರಕ ಎಂಬುದು ಬದುಕಿನ ನೋವು ಹಿಂಸೆ, ಚತುರ್ದಶಿ ಎಂಬುದು ಹದಿನಾಲ್ಕು ಎಂದೂ, ರಾಮಾಯಣದಲ್ಲಿ ಶ್ರೀರಾಮ ಅನುಭವಿಸಿದ ಹದಿನಾಲ್ಕು ವರ್ಷ ನೋವುಗಳನ್ನು ಹೋಗಲಾಡಿಸಲು ನರಕ ಚತುರ್ದಶಿಯನ್ನು ಆಚರಿಸಲಾಗುತ್ತದೆ. ವನವಾಸದಿಂದ ಮರಳಿಬಂದ ಶ್ರೀರಾಮ ನೆನಪಿಗಾಗಿ ನರಕ ಚತುರ್ದಶಿಯನ್ನು ಆಚರಿಸಲಾಗುತ್ತದೆ. ಆ ದಿನ

ಶ್ರೀರಾಮ ಸೀತಾ ಲಕ್ಷ್ಮಣರನ್ನು ಆಯೋಧ್ಯೆಯ ಜನರು ದೀಪೋತ್ಸವಗಳಿಮದ ಸ್ವಾಗತಿಸಿಕೊಳ್ಳುತ್ತಾರೆ. ಅದರಿಂದ ಕಾಡಿನ ಕತ್ತಲೆ ಬದುಕಿನಿಂದ ನಾಡಿಗೆ ಬಂದ ಶ್ರೀರಾಮ ಜನರಿಗೆ ದೈವಸ್ವರೂಪ ಅಂದು ದೀಪಾವಳಿಯನ್ನು ಆಚರಿಸುತ್ತಾರೆ. ನರಕ ಎಂಬುದು ದುಃಖ, ನೋವು, ದರಿದ್ರಗಳು. ಅವುಗಳಿಂದ ಮುಕ್ತಿ ಪಡೆಯುವುದು, ಮನದಲ್ಲಿ ಒಂದು ಜ್ಯೋತಿ ಬೆಳಗಿಸಿಕೊಳ್ಳುವುದು. ಉದಾಹರಣೆಗೆ ಚಾಣಕ್ಯನ ಮಾತಿನಂತೆ ಉತ್ತಮ ಮಾರ್ಗದರ್ಶಿಯೆಂದರೆ ನರಕವನ್ನು ಸ್ವರ್ಗದಂತಿದೆ ಎಂದು ವರ್ಣಿಸಿ ನೀವು ಅಲ್ಲಿಗೆ ಹೋಗುವಂತೆ ಮಾಡುವವನು. ನರಕದ ಇಂತಹ ಜೀವನವನ್ನು ಸ್ವರ್ಗದಂತೆ ಮಾಡಿಕೊಂಡವನು ಶ್ರೀರಾಮ ಎಂದೇ ಹೇಳಬೇಕಾಗುತ್ತದೆ.

ಇಂದಿಗೂ ಸಹ ದೀಪಾವಳಿ ಹಬ್ಬದ ದಿನ ಪ್ರತಿಯೊಬ್ಬರು ಮನೆಯ ಕಷ್ಟಕಾರ್ಪಣ್ಯಗಳು ಅಳಿಸಿ ಹೋಗಲು ಅಥವಾ ಬೆಳಕನ್ನು ಕಾಣಲು ಹಂಬಲಿಸುವುದುಂಟು. ದೀಪದ ಸುತ್ತಲು ಕತ್ತಲು ಇದ್ದರೂ ಇತರರಿಗೆ ಬೆಳಕು ನೀಡುವುದು ಅದೇ ರೀತಿಯಲ್ಲಿ ಹೆಣ್ಣಿನ ಬದುಕು ಗಂಡನ ಮನೆ ಮತ್ತು ತವರು ಮನೆ ಬೆಳಕುವ ಬೆಳಕಾಗಬೇಕು ಎಂದು ಹಿರಿಯ ಮಾತಿದೆ(ಕನ್ನಡ ವಿಷಯ ವಿಶ್ವಕೋಶ, ಜಾನಪದ, ಪು.೭೪೭).

ಲಕ್ಷೀ ಪೂಜೆಯನ್ನು ಈ ಹಬ್ಬದಂದು ಆಚರಿಸಲಾಗುತ್ತದೆ. ಐಶ್ವರ್ಯ ವೃದ್ಧಿಗಾಗಿ ಪೂಜಿಸುತ್ತಾರೆ. ಆರ್ಥಿಕ ಬಲದಿಂದಲೇ ಮಾನವನ ಬದುಕು ಸುವ್ಯವಸ್ಥಿತವಾಗುವುದು. ಜೀವನ ನಿರ್ವಹಣೆಗಾಗಿ ಹಣ ಬೇಕು. ಲಕ್ಷ್ಮೀಯ ದೈವ ಸ್ವರೂಪ, ದೇಶದ ಅಭಿವೃದ್ಧಿಗೆ, ರಾಜ್ಯ ಸ್ಥಳೀಯ ಸಮುದಾಯ, ವ್ಯಕ್ತಿ ಪ್ರಬಲವಾಗಲು ಹಣದ ಅವಶ್ಯಕತೆಯು ಅತಿಮುಖ್ಯ.

“ಗೋವತ್ಸ, ದ್ವಾದಸಿ, ದನತ್ರಯೋದಶಿ, ನರಕಚತುರ್ದಶಿ, ಅಮಾವಾಸ್ಯೆ, ಲಕ್ಷ್ಮೀಪೂಜೆ, ಬಲಿಪಾಡ್ಯ, ಗೋಪೂಜೆ(ಹಟ್ಟಿಯ ಹಬ್ಬ) ಗೋವರ್ಧನ ಪೂಜೆ, ಭಾವ ಬೀದಿಗೆ, ಅಕ್ಕನ ತದಿಗೆ, ಅಮ್ಮನ ಚೌದ, ಪಾಂಡವ ಪಂಚಮಿ, ಹೊಸತು ಹೊಸಕ್ಕಿ, ಹನುಮಜಯಂತಿ ಮುಂತಾದವು ದೀಪಾವಳಿ ಹಬ್ಬದ ಸಂಕೀರ್ಣದೊಳಗೆ ಸೇರಿಕೊಂಡಿವೆ. ಆದರೆ ಪೌರಾಣಿಕ, ಐತಿಹ್ಯ ಹಾಗೂ ಜಾನಪದೀಯ ಅಂಶಗಳು ಸೇರಿಕೊಂಡು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಭಿನ್ನ ರೂಪವನ್ನು ಪಡೆದುಕೊಂಡು ದೀಪಾವಳಿ ಹಬ್ಬ ಆಚರಣೆಗೊಳ್ಳುತ್ತದೆ.”

ಬಲಿಪಾಡ್ಯದಿನಂದು ಗೋವರ್ಧನ ಪೂಜೆ ಸಲ್ಲಿಸಲಾಗುತ್ತದೆ. ಭಾರವು ಕೃಷಿ ಪ್ರಧಾನ ದೇಶ. ಕೃಷಿ ಅಭಿವೃದ್ಧಿಗೆ ಗೋ ಅವಶ್ಯಕ. ಶ್ರೀಕೃಷ್ಣನು ದೇವೇಂದ್ರನು ಅತಿವೃಷ್ಟಿ ಬರಿಸಿದಾಗ ತೊಂದರೆ ಒಳಗಾದ ಗೋಪಾಲಕರನ್ನು ಮತ್ತು ಗೋವುಗಳನ್ನು ಸಂರಕ್ಷಣೆಯನ್ನು ಗೋವರ್ಧನ ಗಿರಿಯನ್ನು ಕೊಡೆಯಂತೆ ಎತ್ತಿ ಹಿಡಿದು ಸಂರಕ್ಷಣೆ ಮಾಡಿದರಿಂದ ಗೋವತ್ಸ, ಗೋವುಗಳಿಗೆ ಶ್ರೀಕೃಷ್ಣನ ಸ್ವರವೇ ಮಧುರಗಾನವಾಗಿದೆ. ಆದರಿಂದ ಗೋಪೂಜೆ ಅಥವಾ ಗೋವರ್ಧನ

ಪೂಜೆ ಮಾಡಲಾಗುತ್ತದೆ. ಇದಕ್ಕೆ ಜನಪದರು ಹಟ್ಟಿಹಬ್ಬವನ್ನು ಮಾಡಲಾಗುತ್ತದೆ. ಗೋವುಗಳಿಗೆ ಶೃಂಗರಿಸಿ, ಅದರ ಕೊಠಡಿಗಳನ್ನು ಸ್ವಚ್ಛಗೊಳಿಸಿ, ಅದರ ಸಗಣಿಯ ಗುಡ್ಡೆ ಮಾಡಿ ಅದಕ್ಕೆ ಅಲಂಕರಿಸಿ, ಸಿಹಿ ಎಡೆ ಮಾಡಿ ಪೂಜೆ ಸಲ್ಲಿಸುವುದು ವಾಡಿಕೆ. ರೈತನ ಆಪ್ತಮಿತ್ರ ಗೋವು, ಗೋಪೂಜೆ ಮಾಡಲಾಗುತ್ತದೆ.

ಬಲಿಪಾಡ್ಯದಂದು ಪಾಂಡವರು ಕೌರವರೊಡನೆ ಜೂಜಾಡಿ ಸೋತದ್ದು ಮತ್ತು ವನವಾಸ ಮುಗಿಸಿ ಬಂದ ಪಾಂಡವರು ಹಸ್ತಿನಾಪುರಕ್ಕೆ ಬಂದು ಕೌರವರನ್ನು ಸೋಲಿಸಿ ಸಿಂಹಾಸನವೇರಿದ್ದ ದಿನವೆಂದು ಹೇಳಲಾಗುತ್ತದೆ. ಈ ವಿಜಯದ ಸಂಕೇತವಾಗಿ ದೀಪವನ್ನು ಬೆಳಗುತ್ತಾರೆ. ಈ ಸಂಕೇತವು ಜನಪದ ನಂಬಿಕೆಯಲ್ಲಿ ಪಾಂಡವರನ್ನು ಸಗಣಿಯ ರೂಪದಲ್ಲಿ ಮನೆ ಮುಂದೆ ಕೂರಿಸಿ, ಪಾಂಡವರಿಗೆ ಉತ್ತರಾಣಿ ಕಡ್ಡಿ, ತಂಗಡಿ ಹೂವು, ದೀಪವನಿಟ್ಟು ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ನಿರ್ದಶನವೆಂಬಂತೆ "ಸೂರ್ಯೋದಯಕ್ಕೆ ಮೊದಲು ಅಭ್ಯಂಗ ಸ್ನಾನಮಾಡಿ ಲಕ್ಷ್ಮೀಯನ್ನು ಪೂಜಿಸಿ ಹಿರಿಯರಿಗೆ ನಮಸ್ಕರಿಸಿ ಯಮನಿಗೆ ತರ್ಪಣ ಕೊಡಬೇಕು. ಅಂದರೆ ಇದರ ಹಿನ್ನೆಲೆ ಕೃಷ್ಣ ಅಭ್ಯಂಗ ಸ್ನಾನ ಮಾಡಿ ನರಕಸುರನನ್ನು ಸಂಹರಿಸಿದನೆಂದು ಪ್ರತೀತಿ. ಅಭ್ಯಂಗ ಕಾಲದಲ್ಲಿ ನೇಗಿಲಿನಿಂದ ಎದ್ದ ಮಣ್ಣಿನ ಹೆಂಟೆಯನ್ನು ತಂದು ಅದರೊಳಗೆ ಉತ್ತರಾಣಿ(ಅಪಾಮಾರ್ಗ)ಯ ಕಡ್ಡಿಯನ್ನು ಹಿಡಿದಕೊಂಡು ತಲೆಗೆ ಮೂರುಸುತ್ತು ತಿರುಗಿಸಿ ಬಿಸಾಡಿದರೆ ಯಮನ ಭಯ ನಿವಾರಣೆಯಾಗುತ್ತದೆಂದು ನಂಬಿಕೆ(ಕನ್ನಡ ವಿಷಯ ವಿಶ್ವಕೋಶ, ಜಾನಪದ, ಪು.೭೪೮).

ದೀಪಾವಳಿಯ ಸಂದರ್ಭದಲ್ಲಿ ದೀಪಗಳಿಂದ ಮನೆಯನ್ನು ಅಲಂಕರಿಸಿ ಸಂತಸವಾಗಿದ್ದರೆ ವರ್ಷವಿಡಿ ಆ ಮನೆಯಲ್ಲಿ ಹರ್ಷದ ಹೊನಲು ಹರಿಯುವುದು. ದೀಪ ಬೆಳಗಿಸದ ಮನೆಯಲ್ಲಿ ಲಕ್ಷ್ಮೀ ವಾಸಿಸುವುದಿಲ್ಲ. ಅದರಿಂದ ಬಲಿಪಾಡ್ಯದಂದು ಲಕ್ಷ್ಮೀ ನೆಲೆಸಿರಲಿ ಎಂದು ಎಲ್ಲೆಡೆ ದೀಪ ಬೆಳಗಿ ಸಂಭವಿಸುವುದೇ ಒಂದು ವಿಶೇಷ. ಗೋವಿನಲ್ಲಿ ಮೂಕೋಟಿ ದೇವತೆಗಳು ನೆಲಸಿರುತ್ತಾರೆ ಎಂಬುದು ತಿಳಿದುಬರುತ್ತದೆ. ಅದರಿಂದ ಗೋಮೂತ್ರ, ಗೋಸಗಣಿ, ಗೋಹಾಲು ವಿಶೇಷವಾಗಿರುತ್ತದೆ. ಮನೆ ಪ್ರದೇಶದ ಸಂದರ್ಭದಲ್ಲಿ ಮನೆಯ ಒಳಗೆ ಗೋಪೂಜೆ ಮಾಡಿ ಗೋ ಪ್ರದೇಶವಾಗಿದೆ. ಗೋ ಸಗಣಿ ಗೋ ಮೂತ್ರ ಹಾಕುವುದರಿಂದ ಧರಿತ್ರವು ಎಲ್ಲವೂ ಕಳೆದುಹೋಗುತ್ತದೆ ಎಂಬ ನಂಬಿಕೆ ಇಂದಿಗೂ ಕಾಣುತ್ತೇವೆ.

"ದೀಪಾವಳಿಯ ಅನ್ನಬ್ರಹ್ಮನ ಆರಾಧನೆಯ ಹಬ್ಬವಾಗುವುದರಿಂದ ಜೊತೆಯಲ್ಲಿ ಒಕ್ಕಲು ಮಕ್ಕಳ ಸಂಭ್ರಮದ ಹಬ್ಬವೂ ಆಗಿದೆ. ಸಂಪ್ರದಾಯವನ್ನು ಗುಜರಾತಿನ ಒಕ್ಕಲು ಮಕ್ಕಳು ಅನ್ನ ಸಗಣಿ ಮತ್ತು ಸಿಹಿ ತಿಂಡಿಯನ್ನು ಪರ್ವತಾಕಾರದಲ್ಲಿ ರಾಶಿ ಹಾಕಿ ಪೂಜೆ ಮಾಡುತ್ತಾರೆ ಎಂಬುದು ತಿಳಿದುಬರುತ್ತದೆ. ಇಂದಿಗೂ ಹಳ್ಳಿಗಳಲ್ಲಿ ದನದ ಕೊಠಡಿಯಲ್ಲಿ ಸಗಣಿ ರಾಶಿಯಾಕಿ ಪೂಜೆ ಸಲ್ಲಿಸಲಾಗುತ್ತದೆ"(ಕನ್ನಡ ವಿಷಯ ವಿಶ್ವಕೋಸ, ಪು.೭೪೮).

"ವಜ್ರಭೂಮಿನಾಥ ದೇವಸ್ಥಾನದಲ್ಲಿ ದೀಪಾವಳಿಯಲ್ಲಿ ವಿಶೇಷ ಉತ್ಸವವಿದ್ದು. ಅಲ್ಲಿ ೧೨೫ ಬಾರಿ ಅನ್ನದ ಮುದ್ದೆಗಳನ್ನು ಪರ್ವತಾಕಾರದಲ್ಲಿ ಜೋಡಿಸಿ ಪೂಜಿಸುತ್ತಾರೆ. ಅನಂತರ ರೈತ ಅದರ ಮೇಲೆ ಬಾಣ ಪ್ರಯೋಗಿಸಿ ಅನ್ನ ಪರ್ವತವನ್ನು ನೆಲಕ್ಕೆ ಉರುಳಿಸುತ್ತಾನೆ. ಇದರ ಹಿನ್ನೆಲೆ ಕೃಷ್ಣ ಗೋವರ್ಧನ ಪರ್ವತಕ್ಕೆ ಮಾಡಿದ ಪೂಜೆ ಮತ್ತು ಇಂದ್ರ ಮಳೆ ಸುರಿಸಿದ ಸಂಕೇತ.

ಆಶಾಕುಮಾರಿ ಬಿ.ಪಿ. ಅವರು ತಿಳಿಸುವಂತೆ(ದೀಪಾವಳಿಯ ವಿಶೇಷ ತಿಂಡಿ ಹೋಳಿಗೆ ಮತ್ತು ಪರಮಾನ್ನ) ಕೊರವರಿಗೆ ದೀಪಾವಳಿ ಪಿತೃಗಳಿಗೆ ಎಡೆ ಅರ್ಪಿಸುವ ಹಬ್ಬ. ಹಬ್ಬಕ್ಕೆ ಹೊರ ಊರಿನಲ್ಲಿರುವ ಕೊರವರೆಲ್ಲರೂ ಬಂದು ಸೇರುತ್ತಾರೆ. ಪಿತೃಗಳಿಗೂ ಹೊಸ ಬಟ್ಟೆ ತರುತ್ತಾರೆ. ಹಬ್ಬ ಮಾಡಲು ಹಂದಿಯನ್ನು ಕಡಿಯುತ್ತಾರೆ. ಇದನ್ನೇ ಎಡೆಗೂ ಇಡುತ್ತಾರೆ. ಮತ್ತು ಸತ್ತವ್ಯಕ್ತಿ ಉಪಯೋಗಿಸುತ್ತಿದ್ದ ವಸ್ತುಗಳನ್ನೆಲ್ಲ ಎಡೆಗೆ ಇಡುತ್ತಾರೆ. ಎರಡು ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟು ಅವುಗಳಿಗೆ ಒಡವೆ ವಸ್ತುಗಳಿಂದ ಅಲಂಕರಿಸಿ, ಅದರ ಕಂಠಕ್ಕೆ ವಿಳ್ಯೆದೆಲೆಯನ್ನು ಸಿಕ್ಕಿಸಿ, ಮಡಿಕೆಯ ತಳಭಾಗಕ್ಕೆ ಅಕ್ಕಿ ಸುರಿದಿಡುತ್ತಾರೆ. ಅನಂತರ ಸತ್ತ ವ್ಯಕ್ತಿಗಳ ಹೆಸರಿನಲ್ಲಿ ಮಾಡಿಸಿರುವ ತಾಳಿಗಳನ್ನು ನೀರು ತುಂಬಿದ ಮಡಿಕೆಗಳ ಕಂಠಕ್ಕೆ ಕಟ್ಟುತ್ತಾರೆ. ಆ ಮಡಕೆಗಳ ಮುಂದೆ ಐದು ಕುಡಿ ಬಾಳೆ ಎಲೆಯನ್ನು ಹಾಕಿ ಮಾಡಿದ ಪ್ರತಿಯೊಂದು ಅಡುಗೆಯನ್ನು ಬಡಿಸಿ ಇಡುತ್ತಾರೆ. ಮನೆಯ ಹಿರಿಯ ವ್ಯಕ್ತಿ ಎಡೆಗೆ ಪೂಜೆ ಸಲ್ಲಿಸಿ ಹಿರಿಯರಿಂದ ಆಶೀರ್ವಾದವನ್ನು ಬೇಡುತ್ತಾರೆ. ಅನಂತರ ಮನೆಯ ಸದಸ್ಯರೆಲ್ಲರೂ ಪೂಜೆ ಮಾಡಿದ ಮೇಲೆ ಮನೆಯ ಬಾಗಿಲನ್ನು ಹಾಕಿಕೊಂಡು ಹೊರಗೆ ಐದು ನಿಮಿಷ ಕಾಲ ಕಳೆಯುತ್ತಾರೆ. ಎಡೆ ಇಟ್ಟ ಪದಾರ್ಥಗಳು ಸಪ್ಪೆಯಾಗಿದ್ದರೆ ಸತ್ತ ವ್ಯಕ್ತಿಗಳು ಬಂದಿದ್ದರು ಎಂದು ನಂಬುತ್ತಾರೆ. ಈ ತೆರನಾಗಿ ಎಡೆ ಇಡದೆ ಇದ್ದರೆ ಅನಾಹುತಗಳು ಸಂಭವಿಸುತ್ತದೆ ಎಂಬ ಭಯವಿದೆ. ಈ ಎಲ್ಲ ಕಾರ್ಯಕ್ರಮ ಮುಗಿದ ಮೇಲೆ ಊಟ ಮಾಡಿ ವಿವಿಧ ವಿನೋದಾವಳಿಗಳಲ್ಲಿ ಪಾಲ್ಗೊಳ್ಳುತ್ತಾರೆ" ಎಂಬುದನ್ನು ತಿಳಿಸಿದ್ದಾರೆ(ಕ.ಜಾ.ವಿಶ್ವಕೋಶ, ಪು.೩೪೯). ಪೂರ್ವಜರಿಗೆ ಪೂಜೆ ಸಲ್ಲಿಸಿ ಸಕಲ ಸಂಪತ್ತು ಕೊಟ್ಟು ಕಾಪಾಡು ಎಂದು ಪ್ರಾರ್ಥಿಸಿಕೊಳ್ಳುತ್ತಾರೆ.

ದವಾಲಿ ಅಥವಾ ಕಾಳಿಮಾಸ ಎಂದೂ ಹನುಮನೆರ ಕೋಟ ಎಂದು, ಚರಗ ಎಂದೂ ಲಂಬಾಣಿಯರು ಕರೆಯುತ್ತಾರೆ. ಹಸಲರು ಹಬ್ಬ ಹಾಡುವುದು ಎಂದು ದೀಪಾವಳಿಯನ್ನು ಆಚರಿಸುತ್ತಾರೆ. ದಿವಳಿಗೆ ದಂಡು, ಜ್ಯೋತಿ ನೀಡುವುದು, ದೀಪ ಕೊಡುವುದು, ಭಂಗಿಪದ, ಬಲ್ಲಾಳಪದ ಎಂದು ಕರೆಯುತ್ತಾರೆ. ಸಾಗರ, ಸಿದ್ದಾಪುರ, ಸೊರಬ, ಶಿರಸಿ ಕಡೆಗಲಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಹರಿಕಾಂತರು ದೀಪಾವಳಿಯನ್ನು ಕೃಷ್ಣಸ್ವಾಮಿಯ ಹಬ್ಬವಾಗಿ ಆಚರಿಸುತ್ತಾರೆ. ಬಲಿಂದ್ರನನ್ನು ಕೃಷ್ಣಸ್ವಾಮಿ, ಧಾನ್ಯಾಧಿಪತಿಯೆಂದು ಹೇಳುತ್ತಾರೆ.

ದೇವರ ಮೇಲಿನ ಭಕ್ತಿಯಿಂದ ಮತ್ತು ಪಿತೃಗಳ ತೃಪ್ತಿಗಾಗಿ ಎಂಬ ನಂಬಿಕೆಯಿಂದ ಈ ಹಬ್ಬವನ್ನು ಮಾಡಲಾಗುತ್ತದೆ. ಹಳ್ಳಿಗಳಲ್ಲಿ ನಡೆಯುವ ಸಂಪ್ರದಾಯಗಳು, ಆಚರಣೆ, ಹಬ್ಬ ಹರಿದಿನ ಗೋವಿನ ವಿಶೇಷ ಅಂಶವಿದೆ. ಇವುಗಳು ಅಸ್ತಿತ್ವವನ್ನು ಜನರು ಉಳಿಸಿಕೊಂಡಿದ್ದರು. ಹಬ್ಬ ಹರಿದಿನಗಳಲ್ಲಿ ಹೊಸ ಬಟ್ಟೆಗಳನ್ನು ತೊಟ್ಟು ದೇವರ ದೀಪ ಹಚ್ಚಿ, ಗುರು ಹಿರಿಯರಿಗೆ ನಮಸ್ಕರಿಸಿ ಮನೆ–ಮನದ ಆರೋಗ್ಯ, ಐಶ್ವರ್ಯ, ಯಶಸ್ಸು, ಶಾಂತಿ ಉಂಟಾಗಲಿ, ಅಭಿವೃದ್ಧಿ ಹೊಂದಲಿ ಎಂದು ಬೇಡಿಕೊಳ್ಳುತ್ತಾರೆ. ದುಷ್ಟ ಶಿಕ್ಷಣ–ಶಿಷ್ಟ ರಕ್ಷಣೆಗಳು ಆಚರಣೆಯ ಮುಖ್ಯ ಉದ್ದೇಶವಾಗಿರುತ್ತದೆ. ಆರಾಧ್ಯ ದೈವ, ಧಾರ್ಮಿಕವೊಂದರ ಪ್ರಸಾರ ಮಾಡುವ ಉದ್ದೇಶದಿಂದ ಕೂಡಿರುತ್ತದೆ. ಐತಿಹಾಸಿಕ ಮತ್ತು ಪೌರಾಣಿಕ ಕಲ್ಪನೆಗಳು ಹೊಂದಿರುತ್ತವೆ. ಆದರ್ಶ ವ್ಯಕ್ತಿ ಜೀವನದ ವಿವರಗಳು, ಯಾತ್ರೆಯನ್ನು ಗುರುತಿಸುವಂತಹದು. ನಿರ್ದಿಷ್ಟ ದೈವದ ಭಕ್ತರು ಆಹ್ವಾನಿಸಿ ದೈವದ ಸಂಕೇತವಾಗಿ ಪೂಜಿಸಿ ದೇವರ ಕೃಪೆಗೆ ಭಾಗಿಯಾಗುತ್ತಾರೆ. ಪರಂಪರೆಯ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ.

ಸೂರ್ಯ

।

ಯಮ

।

ಅಗ್ನಿ

।

ಜ್ವಾಲೆ

।

ದೀಪ

।

ಬೆಂಕಿಕಡ್ಡಿ

।

ವೆಯ್ಸರ್

ಮಲೆ ಮಾದೇಶ್ವರ ಮಾವ್ಯದ ಶ್ರವಣದೊರೆ ಸಾಲಿನಲ್ಲಿ 'ಅಗ್ನಿದೇವತೆ ಅಡಿಗೆ ಮಾಡಿದ್ದಾಳೆ' ಎಂದು ಪ್ರಸ್ತಾಪ ಕಾಣುತ್ತದೆ.

ಆರಾಧನೆ

ಕುಲದೇವತೆಗಳ ಆರಾಧನೆಯೂ ಪ್ರಾಚೀನವಾದುದು. ಇಂದಿಗೂ ಆಯಾ ಊರುಗಳಲ್ಲಿ ಗ್ರಾಮಗಳಲ್ಲಿ, ನಗರದಲ್ಲಿ ಆಯಾ ಪ್ರದೇಶಗಳಲ್ಲಿ ಸ್ತ್ರೀ ದೇವತೆಯನ್ನು ಹೆಚ್ಚು ಆರಾಧಿಸಲಾಗುತ್ತದೆ. ಇವರೆಲ್ಲ ಕೆಳವರ್ಗದ ದೇವತೆಗಳಾಗಿದ್ದಾರೆಂಬುದು ಗಮನಾರ್ಹ. ಇದರಿಂದಾಗಿಯೇ ಗ್ರಾಮದೇವತೆಗಳು ಜಾತ್ರಾ ಆರಾಧನೆಯಲ್ಲಿ ಕೋಣ, ಕುರಿ, ಕೋಳಿ, ಬಲಿ ಕೊಡುವುದುಂಟು. ಹೆಂಡ ಎಡೆಯನ್ನು ನೈವೇದ್ಯವಾಗಿ ಅರ್ಪಿಸುವ ಪದ್ಧತಿಯೂ ಇದೆ. ಕುರುಬ, ಬೇಡ, ಹೊಲೆ ಮಾದಿಗರ ಪರಂಪರೆಯಲ್ಲಿ ಇರುವಂತೆಯೇ ಕೊರವ ಸಮುದಾಯದಲ್ಲಿಯೂ ಪೂಜಾರಿ ಮನೆತನದವರಿಂದಲೇ ತಮ್ಮ ದೇವ ದೇವತೆಯನ್ನು ಸ್ಥಾಪಿಸಿಕೊಂಡು ಆರಾಧಿಸಲಾಗುತ್ತದೆ. ಆಧುನಿಕ ಜೀವನ ಪದ್ಧತಿಯಲ್ಲಿಯೂ ಪೂರ್ವದಲ್ಲಿಯ ಆಚರಣೆಗಳು ಮುಖ್ಯವಾಗುತ್ತವೆ. ಊರಮ್ಮನ ಜಾತ್ರೆ, ಮಾರೆಮ್ಮನ ಜಾತ್ರೆ, ದುರ್ಗಮ್ಮನ ಜಾತ್ರೆ, ಕೊರವರ ಮಾರಮ್ಮ ಜಾತ್ರೆ, ಸುಗಲಮ್ಮ, ಹುಲಿಗೆಮ್ಮ, ತಾಯಮ್ಮ ಮತ್ತು ಹೊಲೆರಮ್ಮನ ಜಾತ್ರೆಗಳನ್ನು ಐದು, ಮೂರು ವರ್ಷಕ್ಕೊಮ್ಮೆ ಆಚರಿಸುವುದು ಕಂಡುಬರುತ್ತದೆ.

ಹಿಂದೆ ಯಾವುದೇ ಕಾಯಿಲೆಗಳು ಸಮುದಾಯದ ಜನರಿಗೆಸ ಬಂದರೆ ಜನರೆಲ್ಲರೂ ಆಯಾ ದೇವತೆಗಳಿಗೆ ಹರಕೆ ಕಟ್ಟಿಕೊಳ್ಳುತ್ತಿದ್ದರು. ಇಂದಿಗೂ ಕಟ್ಟಿಕೊಳ್ಳುತ್ತಿದ್ದಾರೆ. ಹಿಂದೆ ನಂಬಿಕೆಗಳೇ ಆಚರಣೆಗಳಿಂದ ತುಂಬಿ ಹೋಗಿತ್ತು. ಇದು ನಂಬಿಕೆ ವಿಶ್ವಾಸಗಳಲ್ಲಿ. ಆದರೆ ದೇವತಾರಾಧನೆಯ ಮಾಡಲಾಗುತ್ತದೆ. ಆ ಕಾಲದಲ್ಲಿ ಸಿಡುಬು, ಮೈಬೇನೆ, ಕಾಲರಾ ಮತ್ತು ಪ್ಲೇಗುಗಳು ಒಂದು ಹಳ್ಳೀಯಲ್ಲಿ ಕಾಣಿಸಿಕೊಂಡರೆ ಹಳ್ಳಿಗೆ ಹಳ್ಳಿಯೇ ನಾಶವಾಗುತ್ತಿತ್ತು. ಏಕೆಂದರೆ ವೈದ್ಯಕೀಯ ಸೌಲಭ್ಯಗಳ ಬಗೆಗೆ ಅವರಿಗೆ ತಿಳುವಳಿಕೆ ಇಲ್ಲದಿರುವುದು. ತಮ್ಮ ತಮ್ಮ ನಂಬಿಕೆಗೆ ತಕ್ಕಂತೆ ಆಚರಣೆಗಳು ನಡೆಯುತ್ತಿದೆ. ಕಾಯಿಲೆಗಳು ಬಂದಾಗ ಗ್ರಾಮದೇವತೆಯರಿಗೆ ಹಿಟ್ಟು ಬೊಟ್ಟು ಕೊಡುವುದಾಗಿ(ಹಿಟ್ಟು, ೨ ಬದನೆಕಾಯಿ, ೫ ಮೆಣಸಿನಕಾಯಿ, ಈರುಳ್ಳಿ) ಹರಕೆ ಕಟ್ಟಿಕೊಂಡು ನೆರವೇರಿದ ಮೇಲೆ ಹರಿಕೆಯನ್ನು ತೀರಿಸುತ್ತಿದ್ದರು. ಇಂದು ವೈದಕೀಯ ಸೌಲಭ್ಯಗಳಿಂದಲೂ ಸಹ ಅಮ್ಮ ಬಂದ ಸಂದರ್ಭದಲ್ಲಿ ಈ ಹರಕೆ ಮಾಡಲಾಗುತ್ತದೆ. ಯಾವುದೇ ರೀತಿಯ ದೇವಿಯ ಹೆಸರು ಹೇಲಿ ಬೇವಿನ ಸೊಪ್ಪಿನಿಂದ ರಸ ತಎಗೆದು ಹಚ್ಚಿದರೆ ಗುಣವಾಗುತ್ತದೆ ಎಂಬ ಜನರ ನಂಬಿಕೆ ಗಾಢವಾಗಿದೆ. ಇನ್ನು ಹಲವಾರು ರೀತಿಯಲ್ಲಿ ದೇವಿ ಆರಾಧನೆಯನ್ನು ಭಯಭಕ್ತಿಯಿಂದ ಸಮುದಾಯದ ಎಲ್ಲ ಜನರು ಆರಾಧಿಸುತ್ತಿದ್ದರೆ, ಈ ದೇವತೆಗಳಿಗೆ ಅದೇ ಜಾತಿಯ ಜನರಿಂದ(ಪೂಜಾರಿಯಿಂದ) ಪೂಜಿಸಲಾಗುತ್ತದೆ. ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಪ್ರಾಚೀನ ಮಾನವನು ಆಯಾ ಪ್ರದೇಸದ ಸಂಸ್ಕೃತ ಅಥವಾ ಜನಪದರ ಸಾಂಸ್ಕರತಿಕ ವೈಶಿಷ್ಟ್ಯಗಳನ್ನು ಸಾಮಾಜಿಕ ಪದ್ಧತಿಗಳನ್ನು ತಿಳಿಯುವುದಕ್ಕೆ ಸಹಾಯಕವಾಗಬಹುದು.

ನಂಬಿಕೆ ಎನ್ನುವುದು ಸಮುದಾಯದಲ್ಲಿ ಪರಂಪರಿಕವಾಗಿ ಜನತೆಯು ಒಪ್ಪಿಕೊಂಡು ಬಂದಂತಹ ತಿಳುವಳಿಕೆ. ಈ ನಂಬಿಕೆಗಳು ತಲೆತಲೆಮಾರುಗಳಿಂದಲೂ ಸಾರ್ವತ್ರಿಕವಾಗಿ ಅಂಗೀಕಾರಗೊಳ್ಳತ್ತಲೇ ಬಂದಿರುವುದು. ಬದುಕಿನುದ್ದಕ್ಕೂ ಹುಟ್ಟಿನಿಂದ ಸಾಯುವವರೆಗೂ ಅನುಸರಿಸುತ್ತಾ ಬಂದಿರುವ ಅಲ್ಪಸಂಖ್ಯಾತ ನಂಬಿಕೆಗಲೂ ರೂಢಿಯಲ್ಲಿದೆ. ಇವು ಮನುಷ್ಯನ ಮನಸ್ಸಿನ ಸ್ಥಿತಿಯನ್ನು ತಿಳಿಸಿ ಹೇಳುತ್ತದೆ. "ನಂಬಿಕೆಗಳು ಹುಟ್ಟುತ್ತಲೇ ನಂಬಿಕೆಗಳಾಗಿ ಹುಟ್ಟುವುದಿಲ್ಲ. ಯಾವುದೇ ಒಂದು ಅನುಭವದ ಹಿನ್ನೆಲೆಯಲ್ಲಿ ಮಾಡಿ ಬಂದ ಜ್ಞಾನವೇ ಹೇಲಿಕೆಯ ರೂಪ ಪಡೆದುಕೊಂಡು ಪರಂಪರೆಯಲ್ಲಿ ನಂಬಿಕೆಯಾಗಿ ರೂಪುಗೊಂಡಿರುತ್ತದೆ. ಸಾಮಾನ್ಯವಾಗಿ ಮನುಷ್ಯ ಯಾವ ವಿಷಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾನೋ ಅಂತಹ ವಿಷಯದ ಬಗೆಯೇ ಅತಂಕವು ಹೆಚ್ಚಾಗಿರುತ್ತದೆ. ಆದ್ದರಿಂದ ಅಂತಹ ವಿಇಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ನಂಬಿಕೆಗಳು ರೂಪುಗೊಂಡಿರುತ್ತದೆ.(ಡಿ.ಲಿಂಗಯ್ಯ ೧೯೯೭) ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಆಯಾ ಸಂಸ್ಕೃತಿಗೆ ವಿಶಿಷ್ಟರಾದ ನಂಬಿಕೆಗಳಿರುತ್ತದೆ. ನಂಬಿಕೆಗಳನ್ನು ನಿರ್ದಿಷ್ಟ ಪ್ರಾದೇಶಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನಿಸುವುದು ಅಗತ್ಯವಾಗುತ್ತದೆ.

ಹುಲಿಗೆಮ್ಮ ದೇವಿ

ಕಾಶ್ಮೀರ ಪಟ್ಟಣದ ರಾಜ ರೇಣೂಕ ರಾಜನ ಮಗಳು ಪಾರ್ವತಿಯ ಆರ್ಶೀವಾದದಿಂದ ಪಾರ್ವತಿಯೇ ಎಲ್ಲವ್ವನಾಗಿ ಹುಟ್ಟಿ, ಜಮದಗ್ನಿಯನ್ನು ವಿವಾಹವಾಗುತ್ತಾಳೆ. ಒಬ್ಬ ರೇಣುಕೆ ಜಮದಗ್ನಿಯ ಶಾಪಕ್ಕೆ ಗುರಿಯಾಗಿ ಮೈಲಾರಲಿಂಗನ ಭಂಡಾರ ಪಡೆದು ಹುಲಿಗಿ ಕ್ಷೇತ್ರಕ್ಕೆ ಬಂದು ತುಂಬಿ ಹರಿಯುವ ನದಿ ದಾಟಲು ಅಂಬಿಗರ ಸಹಾಯ ಪಡೆಯುತ್ತಾಳೆ. ಹೊಳೆ ನಡುವಿನಲ್ಲಿ ದೋಣಿಯಲ್ಲಿದ್ದ ಇತರರು ರೇಣುಕೆಯ ಮೇಲೆ ಮನಸ್ಸು ಮಾಡುತ್ತಾರೆ. ಉಧೋ ಎಂದು ಸೊಂಟದ ಭಂಡಾರ ತೆಗೆದು ಅವರ ಮೇಲೆ ಉಗ್ಗುತ್ತಾಳೆ. ದೋಣಿಯಲ್ಲಿರುವವರು ಪ್ರಜ್ಞೆ ತಪ್ಪಿ ಮಲಗುತ್ತಾರೆ. ನದಿ ದಾಟಿ ದೋಣಿಯನ್ನು ಮಾಯ ಮಾಡುತ್ತಾಳೆ. "ಇನ್ನು ಬೇರೆ ಯಾರಾದರೂ ತೊಂದರೆ ನೀಡುವುದು ಬೇಡ ಎಂದುಕೊಂಡು ಕೊರವಂಜಿ ವೇಷ ಹಾಕುತ್ತಾಳೆ. ಬಗಲಾಗಿನಲ್ಲಿ ಒಂದು ಕೂಸು ಕಟ್ಟಿಕೊಳ್ಳುತ್ತಾಳೆ. ಅಷ್ಟರಲ್ಲಿ ಮಲಗಿದ್ದ ಅಂಬಿಗ ಎಚ್ಚರವಾದಾಗ ಕೊರವಂಜಿ ಕಾಣಿಸುತ್ತಾಳೆ(ಹುಲಿಗೆಮ್ಮ ಪು.೮, ಪುರುಷೋತ್ತಮ ಬಿಳಿಮಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯). ಅವನ ಹಡಗು, ಹಗ್ಗ, ಹೆಣ್ಣು, ಮಗಳು ನೋಡಿದಿರಾ ಎಂದು ಹೇಳುತ್ತಾನೆ. ಕೊರವಂಜಿ ಇಲ್ಲ ಎಂದು ಹೇಳುತ್ತಾಳೆ. ಇದನ್ನು ಗಮನಿಸಿದಾಗ ಒಂದು ಹೆಣ್ಣು ತನ್ನನ್ನು ರಕ್ಷಿಸಿಕೊಳ್ಳಲು ಉಪಾಯ ಮಾಡಿ ಅವರಿಗೆ ಬುದ್ಧಿಕಲಿಸುವುದು ಕಾಣುತ್ತದೆ. ಇಂದು ಸಹ ಹುಲಿಗಿ ಕ್ಷೇತ್ರದಲ್ಲಿ ಕೊರವರು ಭಂಡಾರವನ್ನು ಹೆಚ್ಚಾಗಿ ಬಳಸುವುದುಂಟು.

"ಅಂಬಿಗರು ಮತ್ತೆ ಕೇಳಿದಾಗ ನಿಮ್ಮ ಮಕ್ಕಳನ್ನು ಕೊಂದು ಅಡಿಗೆ ಮಾಡಿ ಬಳಸಿದ್ರೆ ನಾವೇ ಸಿಗತಿದೆ" ಎನ್ನುತ್ತಾಳೆ. ಇವರು ಹಾಗೆ ಮಾಡುತ್ತಾರೆ. ಅವರ ನಿಷ್ಠೆಗೆ ಮೆಚ್ಚು ರೇಣುಕ ಸತ್ತ ಮಕ್ಕಳನ್ನು ಮತ್ತೆ ಬದುಕಿಸುತ್ತಾಳೆ. ನಮ್ಮದು ತಪ್ಪಾಯಿತು ಎಂದು ಬೇಡಿಕೊಂಡ ಆ ಅಂಬಿರನ್ನು ರೇಣುಕ ಕ್ಷಮಿಸುತ್ತಾಳೆ. ಹುಲಿಗಿಯಲ್ಲಿ ಈ ಘಟನೆ ನಡೆದುದ್ದರಿಂದ ಆಕೆ ಹುಲಿಗೆಮ್ಮ ಎಂದು ಹೆಸರು ಧರಿಸುತ್ತಾಳೆ. ಹುಲಿಗೆಮ್ಮ ನೆಲೆ ನಿಂತ ಜಾಗದಲ್ಲಿ ಸರಕಾರದವರು ರೈಲು ಪಟ್ಟಿ ಹಾಕುತ್ತಾರೆ ಎಂಬ ಸುದ್ದಿ ಬಂತು. ಹುಲಿಗೆಮ್ಮ ಪಾತ್ರೆ ಮಾರುವವಳಂತೆ ವೇಷ ಹಾಕಿ ಇಂಗ್ರಜಿಯವರನ್ನು ಹೆದರಿಸುತ್ತಾಳೆ. ಇಂಗ್ರಜಿ ಸರಕಾರ ಗುರಿ ಬಿಟ್ಟು ದೂರದಲ್ಲಿ ರೈಲು ಓಡಿಸಲು ವಚನ ನೀಡುತ್ತಾರೆ. ಹಾಗೆ ಮಾಡುತ್ತದೆ. ಹುಲಿಗೆಮ್ಮ ಮಾತಿನಂತೆ ಈಗಲೂ ಹುಲಿಗಿಯಲ್ಲಿ ರೈಲು ಹಾದು ಹೋಗುವಾಗ ಉದೋ ಉದೋ ಎನ್ನುತ್ತದೆ"(ಪು.೮, ಹುಲಿಗೆಮ್ಮ).

ಕಾಮಧೇನುವಿನ ಕಾರಣದಿಂದ ಜಮದಗ್ನಿಗೂ ಕಾರ್ತಿಕ ರಾಜನಿಗೂ ಯುದ್ಧ ನಡೆದು ಜಮದಗ್ನಿ ಸಾಯುತ್ತಾನೆ. ರೇಣೂಕೆ ಮುಂಡೆಯಾಗುತ್ತಾಳೆ. ಆಕೆ ಮುಂದೆ ಪರಮಾತ್ಮನನ್ನು ಧ್ಯಾನಿಸಿ ಪರಶುರಾಮನನ್ನು ಹೇರುತ್ತಾಳೆ. ಪರಶುರಾಮ ತಂದೆಯನ್ನು ಕೇಳುತ್ತಾನೆ. ಆತನಿಗೆ ತಾಯಿಯ ಪಾತಿವ್ರತ್ಯದ ಮೇಲೆ ಸಂಶಯ ಬರುತ್ತದೆ. "ಕರಿ ಸೀರಿ ಉಟ್ಟು ಉರಿಯಗೆ ನಿಲ್ಲು" ಎನ್ನುತ್ತಾನೆ. ಹಾಗೆ ನಿಂತ ರೇಣುಕಾಳು ಬಎಂಖಿಯಲ್ಲಿ ಉರಿದು ಹೋಗುತ್ತಾಳೆ. ಪರಶುರಾಮ ತಂದೆ ತಾಯಿ ಇಬ್ಬರನ್ನು ಕಳೆದುಕೊಂಡದ್ದಕ್ಕೆ ಪರಿತಪಿಸುತ್ತಾನೆ. ಆಗ ರೇಣುಕ ಮತ್ತೆ ಉರಿಯಿಂದ ಎದ್ದು ಬರುತ್ತಾಳೆ. "ನೀ ಸೂಳಿ ಅಂತ" ಪರಶುರಾಮ ಆಕೆಗೆ ಬೈಯುತ್ತಾನೆ. ಆಕೆ "ನಾ ಸೂಳೆ ಅಲ್ಲ" ಎನ್ನುತ್ತಾಳೆ. ಆಕೆಯ ಮಾತಿನಂತೆ ದೇವ ಲೋಕಕ್ಕೆ ಹೋಗಿ ಜಮದಗ್ನಿಯ ರುಂಡ ತರುತ್ತಾನೆ. ರುಂಡ ನಿಜ ಹೇಳುತ್ತದೆ. ಪರಶುರಾಮನೇ ಕಾರ್ತಿಕ ರಾಜನ ತಲೆ ತುಂಡರಿಸುತ್ತಾನೆ. ತಲೆಯಿಂದ ಚೌಡಿಕೆ, ಪಡಗ ಮಾಡುತ್ತಾನೆ. ದೊಕ್ಕೆಯಿಂದ ಸುತ್ತಿ ಮಾಡುತ್ತಾನೆ. ಚರ್ಮ ತೆಗೆದು ಚೌಡಿಕೆ ಮಾಡಿ ಕರುಳು ತೆಗೆದು ತಂತಿ ಮಾಡುತ್ತಾನೆ. ಕಾಲುಕಿತ್ತು ಕೋಲು ಮಾಡುತ್ತಾನೆ. ಟಿಂವ್ ಟಿಂವ್ ತಂತಿ ಅಂತ ಹಾಡುತ್ತ ರೇಣುಕ ತಾಯಿ ಬಳಿ ಬರುತ್ತಾನೆ.

ಈ ಕತೆಯ ಪ್ರಕಾರ ರಂಡಿ ಹುಣ್ಣಿಮೆಯಂದು(ಹೊಸ್ತಿಲ ಹುಣ್ಣಿಮೆ) ರೇಣುಕ ರಂಡಿ ಹಾಗುತ್ತಾಳೆ. ಹಾಗಾಗಿ ಹುಲಿಗೆವ್ವನ ದೇವಸ್ಥಾನದಲ್ಲಿ ಆ ದಿವಸ ಜೋಗತಿಯರು ಬಳೆ ಒಡೆಯುತ್ತಾರೆ. ಮುಂದಿನ ಭಾರತ ಹುಣ್ಣೀಮೆಯಂದು ಜಮದಗ್ನಿ ಮತ್ತೆ ಬದುಕಿದ್ದರಿಂದ ಆ ದಿವಸ ಬಳೆ ಹಾಕಿ ಮತ್ತೆ ಮುತ್ತೈದೆ ಆದುದ್ದನ್ನು ಸಂಕೇತಿಸುತ್ತಾರೆ(ಹುಲಿಗೆಮ್ಮ). ಇಂದಿಗೂ ಭಾರತ ಹುಣ್ಣಿಮೆಯೆಂದು ನೂರೊಂದು ಜಾತ್ರೆಗಳು ನಡೆಯುವುದುಂಟು. "ದೇವತೆಗಳನ್ನು ಕುರಿತ ಕಲ್ಪನೆಗಳೂ ಕಥೆಗಳು ವೇದಗಳ ಕಾಲದಿಂದಲೂ ಬೆಳೆದುಬಂದಿದ್ದವು. ಆರ್ಯರು ತಮ್ಮ ಜೀವನದ ಸೋಲು ಗೆಲುವುಗಳನ್ನು ದೇವತೆಗಳಿಗೆ ಆರೋಪಿಸಿ ಕತೆಯನ್ನು ಕಟ್ಟುತ್ತಿದ್ದುದೂ ಉಂಟು. ಹೀಗೆ

ಕಥೆಯನ್ನು ಕಟ್ಟುವ ಕಲ್ಪನಾ ಪ್ರತಿಭೆ ಇತಿಹಾಸ ಪುರಾಣಗಳಲ್ಲಿ ವಿಶೇಷವಾಗಿ ಬೆಳೆದಿದೆ. ಅದು ಕೆಲವು ವೇಳೆ ಬಹಳ ಅರ್ಥವತ್ತಾಗಿ ಇಡೀ ಜನಾಂಗ ಸಂಸ್ಕೃತಿಯನ್ನು ಪ್ರತಿಬಿಂಬಿಸುವಷ್ಟು ಸಶಕ್ತವಾಗಿ ಮೂಡಿ ಬಂದಿದೆ"(ಪು.೪೫, ಕರ್ನಾಟಕ ಸಂಸ್ಕೃತಿ ಸಮೀಕ್ಷೆ).

"ದುರ್ಗಮ್ಮ, ಮಾರಿಯಮ್ಮ, ಕೊಕ್ಕಲಮ್ಮ, ಕಾಳಮ್ಮ ಮೊದಲಾದ ದೇವತೆಗಳು, ಇನ್ನೊಂದು ಕಡೆಗಳ್ಲಲಿ ಅನೇಕ ರೋಗಗಳಿಗೆ ಕಾರಣವೆಂದು ನಂಬಿದ್ದ ಕ್ಷುದ್ರ ಶಕ್ತಿಗಳು. ಇವುಗಳ ಉಪಾಸನೆಯು ಜನಸಾಮಾನ್ಯರಲ್ಲಿ ಬಹುಮಟ್ಟಿಗೆ ಪ್ರಚಲಿತವಾಗಿತ್ತು. ಹಳ್ಳಿಗಳ ಸುತ್ತಲೂ ದುಷ್ಟಶಕ್ತಿಗಳು ಹೊಂಚು ಹಾಕಿಕೊಂಡು ಕಾಯಿಲೆಗಳನ್ನು ಕಷ್ಟಗಳನ್ನು ಜನರಿಗೆ ಉಂಟು ಮಾಡಲು ಕಾಯುತ್ತಿರುತ್ತವೆಂದೂ ಈ ಶಕ್ತಿಗಳನ್ನು ಹೋಗಲಾಡಿಸುವುದಕ್ಕಾಗಿ ದುರ್ಗಿ, ಮಾರಿ, ಚೌಡಿ ಇತ್ಯಾದಿಗಳನ್ನು ಒಲಿಸಿಕೊಳ್ಳ ಬಪಿಕೆಂದು ಜನಸಾಮಾನ್ಯರು ನಂಬಿದ್ದರು. ಈ ದೇವತೆಗಳು ಮುನಿದರೆ ರೋಗಗಳನ್ನು ನಾಶ ಮಾಡುವುದಕ್ಕೆ ಬದಲಾಗಿ ತಾವೇ ಅದನ್ನು ಹರಡುವುದಕ್ಕೂ ಕಾರಣವಾಗುತ್ತದೆಂಬ ಶ್ರದ್ಧೆಯೂ ಬೇರುಬಿಟ್ಟಿತ್ತು. ಆದುದರಿಂದ ಈ ದೇವತೆಗಳನ್ನು ಸಮಾಧಾನಪಡಿಸುವುದೇ ಅವರ ದೇವತಾರಾಧನೆಯ ಮುಖ್ಯ ಗುರಿಯಾಗಿದ್ದಿತೆನ್ನಬಹುದು. ಆ ದೇವತೆಯ ಒಂದು ಮೂರ್ತಿಯನ್ನು ಮಾಡಿ ಊರ ಹೊರಗೆ ಒಂದು ಗುಡಿಯನ್ನು ಕಟ್ಟಿ ಇಡುತ್ತಿದ್ದರು. ಕೆಲವು ವೇಳೆ ಸುಣ್ಣಬಣ್ಣ ಬಳಿದ ಒಂದು ಗುಂಡುಕಲ್ಲೆ ದೇವತೆಯಾಗಿ ಪ್ರತಿನಿಧಿಸಲು ಸಾಕಾಗುತ್ತಿತ್ತು. ಗ್ರಾಮದೇವತೆಗಳ ಪ್ರಿತ್ಯಾಧಿಕವಾಗಿ ಪ್ರಾಣಿಗಳನ್ನು ಬಲಿಕೊಡುವುದು ಯಥೇಚ್ಚವಾಗಿ ನಡೆಯುತ್ತಿತ್ತು"(ಪು.೧೯೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ).

ಇಂದಿಗೂ ಕೊರವ ಸಮುದಾಯವನನು ಕೊರವರ ಮಾರಮ್ಮನಿಗೆ ರಾತ್ರಿ ವೇಳೆಯಲ್ಲಿ ಬಲಿಕೊಡುವುದು ಕಂಡುಬರುತ್ತದೆ. ಸಮುದಾಯದ ಪ್ರತಿಯೊಬ್ಬರು ತಮ್ಮ ಹರಕೆಗಳನ್ನು ತೀರಿಸಿಕೊಳ್ಳುವುದು ಕಂಡುಬರುತ್ತದೆ. ದುರ್ಗಮ್ಮ, ಮಾರೆಮ್ಮ, ಚೌಡೇಶ್ವರಿ, ಕೊರಮ್ಮ ಎಂಬ ದೇವತೆಗಳು ಕಂಡುಬರುತ್ತವೆ.

ಸಮುದಾಯದ ಒಳಿತಿಗಾಗಿ ಮತ್ತು ಜೀವನದ ಉಳಿವಿಗಾಗಿ ಹೋರಾಟ ಮಾಡಿ ತೀರಿಕೊಂಡವರಾಗಿದ್ದು, ಅವರ ಯಾವುದಾದರೂ ಕುರುಹನ್ನು ಇಟ್ಟು ಪೂಜಿಸುತ್ತಿದ್ದಾರೆ. ಅವರು ನಾಶ ಮಾಡುವ ಗುಡಿಸಲುಗಳಲ್ಲಿಯೇ ದೈವಗಳು ವಾಸವಾಗಿರುತ್ತವೆ. ದೇವತೆಯನ್ನು ಆರಾಧಿಸುವವರೂ ಅದೇ ಸಮುದಾಯದ ವ್ಯಕ್ತಿಯಾಗಿರುತ್ತಾರೆ. ಅವರ ಪೂಜಾವಿಧಾನದ ಜಾತ್ರೆ, ಆಚರಣೆಯ ವಿಧಾನ ಸರಳವಾದುದಾಗಿರುತ್ತದೆ. ಒಂದು ಕಾಲಕ್ಕೆ ಬುಡಕಟ್ಟು ಘೂಜಿಸುತ್ತಿದ್ದ ಅತ್ಯಂತ ಪ್ರಾಚೀನ ದೇವತೆಗಳು ಇಂದು ಸಾಂಪ್ರದಾಯ ದೇವತೆಗಳಾಗಿ ಅವು ಒಂದು ನಾಡಿನ ಆರಾಧ್ಯ ದೈವಗಳಾಗಿ ಪರಿವರ್ತಿತವಾದ ಸಂದರ್ಭಗಳು ಇವೆ. ಇಂದಿಗೂ ದಟ್ಟ ಅರಣ್ಯದ ಪ್ರದೇಶದ ಮಧ್ಯದಲ್ಲಿರುವ ತಿರುಪತಿಯ ವೆಂಕಟೇಶ್ವರ, ಶ್ರೀಶೈಲ ಮಲ್ಲಿಕಾರ್ಜುನ, ಧರ್ಮಸ್ಥಳದ ಮಂಜುನಾಥೇಶ್ವರ, ಹಂಪಿ

ವಿರೂಪಾಕ್ಷೇಶ್ವರ, ಮೈಸೂರಿನ ಚಾಮುಂಡೇಶ್ವರಿ, ಹುಲಿಗೆ ಹುಲಿಗೆಮ್ಮ, ಬಳ್ಳಾರಿ ದುರ್ಗಮ್ಮ ಹಿಂದೆ ಬುಡಕಟ್ಟು ದೇವತೆಗಳೇ ಆಗಿದ್ದರು ಎಂಬುದು ತಿಳಿದುಬರುತ್ತದೆ.

ಕಾಲಕ್ರಮೇಣ ನಾಡದ ದೈವಗಳು ಮೇಲ್ವರ್ಗದ ಹತೋಟಿಯಲ್ಲಿ ಒಳಗಾದರೂ ಸಹ ಆಚರಣೆ ಮತ್ತು ಆರಾಧನೆಯ ಸಂದರ್ಭದಲ್ಲಿ ಬುಡಕಟ್ಟು ಸಮುದಾಯದ ಮೊಟ್ಟಮೊದಲ ಆರಾಧನೆ ನಡೆಯುತ್ತದೆ. ಕರ್ನಾಟಕದ ಬಹುತೇಕ ಬುಡಕಟ್ಟುಗಳ ಮನೆದೇವತೆಗಳೆಂದು ಕರೆಸಿಕೊಂಡಿವೆ. ಸಾಮಾನ್ಯವಾಗಿ ಕೆಳವರ್ಗದವರು ವರ್ಷಕ್ಕೊಮ್ಮೆಯಾದರೂ ಈ ದೇವತೆಗಳ ಯಾತ್ರೆ ಮಾಡಿ ಆರಾಧಿಸುತ್ತಾರೆ. ಎಲ್ಲ ಜಾತಿಯವರೂ ಈ ದೇವಾಲಯಗಳಲ್ಲಿ ಪ್ರವೇಶವಿದೆ. ಆದರೆ ಊರು ಪಟ್ಟಣದ ದೇವಾಲಯಗಳಲ್ಲಿ ಕೆಳವರ್ಗದವರಿಗೆ ಪ್ರವೇಶವಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಬಹುಮಟ್ಟಿಗೆ ಬುಡಕಟ್ಟು ಸಮೂಹಕ್ಕೆ ಜಾತಿಪ್ರಜ್ಞೆ ಇಲ್ಲದ ವೇಳೆ ಆ ದೇವಾಲಯಗಳಲ್ಲಿ ಈ ಪ್ರವೇಶ ಕ್ರಮ ಜಾರಿಗೆ ಬಂದಿರಬಹುದು. ಆದರೆ ಇದೀಗ ಬುಡಕಟ್ಟು ಸಮೂಹದ ಅಭಿವೃದ್ಧಿಯ ಸಂಗತಿ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗುತ್ತಿರುವಾಗ ಆ ಬುಡಕಟ್ಟು ಸಮೂಹವನ್ನು ಅದೇ ಹೆಸರಿನಿಂದ ಜಾತಿ ಎಂದು ಹೆಸರಿಸುವ ಪದ್ಧತಿ ಜಾರಿಗೆ ಬರುತ್ತದೆ.

ಬುಡ್ಡೆಕಲ್ಲು ಪೂಜೆ/ಗುಂಡೆಕಲ್ಲು ಪೂಜೆ

ಬುಟ್ಟೆಕಲ್ಲು ಪೂಜೆಯೂ ಸಹ ದನಕರುಗಳಿಗೆ ಒಳ್ಳೆಯದಾಗಲೆಂದು ಮಾಡುವ ಆಚರಣೆಯಾಗಿರುತ್ತದೆ. ಬುಡ್ಡೆಕಲ್ಲು ಊರ ಮುಖ್ಯಸ್ಥರ ಅಥವಾ ಅಗಸೆ ಬಾಗಿಲಿನಿಂದ ಸ್ವರ ಮುಂಭಾಗದಕ್ಕೆ ಇರುತ್ತದೆ. ಈ ಕಲ್ಲು ಊರವರ ದೃಷ್ಟಿಯಲ್ಲಿ ದೇವರ ಕಲ್ಲೇ ಆಗಿರುತ್ತದೆ. ಇದರ ಸುತ್ತ ಸೆಗಣಿಯಲ್ಲಿ ಕಟ್ಟೆ ಕಟ್ಟಿ ಅದರಿಂದದಾಚೆ ಅಷ್ಟೇ ದೂರದಲ್ಲಿರುವ ಯಾವುದಾದರೂ ಒಂದು ಲಿಪಿ, ಕಲ್ಲಿಗೆ (ಇದು ಶಾಸನವಿರಬಹುದು, ವೀರಗಲ್ಲು ಅಥವಾ ಒಂದು ಸತಿ ಕಲ್ಲು ಇರಬಹುದು) ಸುಮಾರು ನೂರೊಂದು ಕೊಡ ನೀಡು ಹುಯ್ಯುವರು. ಇತ್ತ ಬಂಡೆಕ್ಕಲಿಗೂ ಕೊಡಗಟ್ಟಲೆ ನೀರು ಹುಯ್ಯುವರು. ಊರ ಜನ ಬುಟ್ಟೆಕಲ್ಲಿನ ಸುತ್ತ ಪೂಜೆಗೆಂದು ತಂದಿಟ್ಟ ವೀಳೆಯದೆಲೆ, ಬಾಳೆಯ ಹಣ್ಣು ನೀರಿನಲ್ಲಿ ತೇಲುವುದು. ಆಗ ಊರ ದನಗಳನ್ನು ಹೊಡೆದುಕೊಂಡು ಬಂದು ಬುಡ್ಡೆಕಲ್ಲಿನ ಸುತ್ತ ಪ್ರದಕ್ಷಿಣೆ ಹಾಕಿಸುವರು. ಇದಾದ ಮೂರನೇ ದಿನ ಬುಡ್ಡೆಕಲ್ಲಿನ ಒಳಗೆ ಯಾರನ್ನು ಬಿಡುವುದಿಲ್ಲ.

ಮರುದಿನ ಆಯಾ ಮನೆಯ ಮಕ್ಕಳನ್ನು ಅವರವರ ಮನೆಯಲ್ಲಿ ಜನತೆಯ ಮೇಲೆ ಕೂರಿಗೆ ಮೊಸರನ್ನ ಊಟ ಮಾಡಿಸಿ ಅಲ್ಲಿಂದ ಕೈಗೆ ಬೇವಿನ ಸೊಪ್ಪು ಹಿಡಿಸಿಕೊಂಡು ಬುಡ್ಡೆಕಲ್ಲಿನ ಬಳಿ ತಂದು, ಸೊಪ್ಪನ್ನು ಕಲ್ಲಿನ ಮೇಳೆ ಹಾಕಿಸಿ, ಮೊಸರು ತಿಂದ ಎಂಜಲು ಕೈಯನ್ನು ಅವರ ಮೇಲೆ ತೊಳೆಸುವರು. ಇಷ್ಟೆಲ್ಲವನ್ನು ಮಕ್ಕಳಿಗೆ ಮಾಡಿಸುವವರು. ಗಂಡನನ್ನು

ಕಳೆದುಕೊಂಡು ಓಡಾಡುವರು. ಹಾಗೆ ತುಳಿದುಕೊಂಡು ಓಡಾಡುವುದರಿಂದ ಜನಗಳಿಗೂ ದನಗಳಿಗೂ ಒಳ್ಳೆಯದಾಗುವುದೆಂದು ಗ್ರಾಮಸ್ಥರು ಭಾವಿಸುವರು(ಪು.೧೮೫, ಮ್ಯಾಸಬೇಡರು, ಕೃಷ್ಣಮೂರ್ತಿ ಹನೂರು, ಪ್ರಕಾಶಕರು ಸುವಹನ ಮೈಸೂರು, ೨೦೦೬).

ಬಳ್ಳಾರಿ ಜಿಲ್ಲೆಯಲ್ಲಿ ಮೈಲಾರ ಲಿಂಗೇಶ್ವರ ಕಾಣಿಕ ನಡೆಯುತ್ತದೆ. ಬಳ್ಳಾರಿ ದುರ್ಗಮ್ಮನ ಜಾತ್ರೆ, ಸಿಡಿ ಕಾರ್ಯಕ್ರಮ ಸಮುದಾಯದ ಸುಂಕಲಮ್ಮ, ಕೋಲಾರಮ್ಮ, ಹುಲಿಗೆಮ್ಮ, ದೈವಗಳಣ್ನು ಆರಾಧಿಸುತ್ತಾರೆ. ಹಂಪಿ ವಿರೂಪಾಕ್ಷಸ್ವಾಮಿ(ಹಂಪಿ ಜಾತ್ರೇ) ಕೊರವರ ಮಾರಮ್ಮ, ತಾಯಮ್ಮ ಜಾತ್ರೆ, ಬಳ್ಳಾರಿಯ ಮಲ್ಲೇಶ್ವರ ಸ್ವಾಮಿ ಜಾತ್ರೆ, ಕುರುಗೋಳು ಬಸವಣ್ಣ ಜಾತ್ರೆ, ಬಸವೇಶ್ವರ ಜಯಂತಿ, ಸೊಂಡೂರು ಕುಮಾರಸ್ವಾಮಿ ಜಾತ್ರೆ, ಸಿದ್ಧ ರಾಮೇಶ್ವರ ಜಾತ್ರೆ, ಯಶವಂತನಗರ ಸೊಂಡೂರು, ಕೊಟ್ಟೂರು ಕೊಟೇಶ್ವರ ಜಾತ್ರೆ ನಡೆಯುತ್ತದೆ. ಕಂಪ್ಲಿ ಬಸವೇಶ್ವರ, ಸೋಮೇಶ್ವರ ಜಾತ್ರೆಗಳು, ಕೊಪ್ಪಳ ಹುಲಿಯ ಚಂದಯ್ಯ ಜಾತ್ರೆ, ಜಗದೇಶ್ವರ ಜಾತ್ರೆ, ಸಮುದಯದ ತಾಯಮ್ಮ, ಸೂರಮ್ಮ, ಹುಲಿಗೆಮ್ಮ ಜಾತ್ರೆಗಳು ನಡೆಯುವುದುಂಟು. ಗವಿಸಿದ್ದೇಶ್ವರ ಜಾತ್ರೆ, ಕೊಕನೂರ ಚಂದೇಶ್ವರ, ಮಾನವಿ ಕರಿಯಮ್ಮ, ಕುಷ್ಟಗಿಯ ಅಡವೀರಾಯನ ಜಾತ್ರೆಗಳು ನಡೆಯುತ್ತವೆ.

ರಾಯಚೂರು ಜಿಲ್ಲೆಯ ನಿಜಾಮರ ಪ್ರಭಾವ ಇರುವುದರಿಂದ ಉರುಸು, ಕೋಟಿಲಿಂಗ, ಅಮರೇಶ್ವರ, ಮಂಗಲೇಶ್ವರ ಜಾತ್ರೆ, ಅಂಬಮ್ಮ ಜಾತ್ರೆ ಇತ್ಯಾದಿಗಳು ಕೊರಮ್ಮನ ಜಾತ್ರೆ.

ಕಲ್ಬುರ್ಗಿ ಜಿಲ್ಲೆಯಲ್ಲಿ ಶರಣ ಬಸವೇಶ್ವರ ಜಾತ್ರೆ, ದತ್ತಾತ್ರೇಯ ಜಾತ್ರೆ, ಜೊತೆಗೆ ಸಮುದಾಯದಿಂದ ಜಾತ್ರೆಗಳು ನಡೆಯುತ್ತವೆ.

ಯಾದಗಿರಿ ಈ ಜಿಲ್ಲೆಯಲ್ಲಿಯೂ ನಿಜಾಮರ ಆಳ್ವಿಕೆ ಪ್ರಭಾವ ಅಧಿಕವಾಗಿರುವುದರಿಂದ ರಾಯಚೂರು, ಗುಲ್ಬಾರ್ಗ ದಐವಗಳ ಆರಾಧನೆಯು ಕಡಿಮೆಯೇ. ಏಕೆಂದರೆ ಕ್ಷೇತ್ರ ಕಾರ್ಯದಲ್ಲಿ ಪಡೆದ ಮಾಹಿತಿಯನ್ನು ನೀಡಲಾಗಿದೆ. ಬೀರ್‌ನಲ್ಲಿ ಕೈಕಾಡಿ ಮಹಾರಾಜರ ದೇವಾಲಯವನ್ನು ನಿರ್ಮಿಸಿಕೊಂಡು ಆರಾಧಿಸಲಾಗುತ್ತಿದೆ. ಪಂಡರಿಪುರಕ್ಕೆ ಹೋಗಿ ಕೈಕಾಡಿ ಮಹಾರಾಜರ ಮಠವು ಇದೆ ಎಂಬುದು ತಿಳಿದುಬಂದಿತ್ತು. ಸಾಮಾನ್ಯವಾಗಿ ದುಡಿಯುವ ವರ್ಗಗಳು ವಾರ್ಷಿಕ ಆಚರಣೆಯಲ್ಲಿ ದಸರಾ, ಯುಗಾದಿ, ದೀಪಾವಳಿ, ತಮ್ಮ ಪಿತೃ ಪೂಜೆಗಳನ್ನು ಪ್ರಧಾನವಾಗಿ ಮಾಡಲಾಗುತ್ತಿದೆ.

ದೈವದವರು

ಸಮುದಾಯದ ಅಸ್ತಿತ್ವದ ಉಳಿವಿಗಾಗಿ ಹಾಗೂ ಕ್ಷೇಮಕ್ಕಾಗಿ ಸಂಬಂಧವನ್ನು ನಿರ್ಣಯಿಸಲು ಮಾಡಿಕೊಂಡ ವ್ಯವಸ್ಥೆ ನ್ಯಾಯಪಂಚಾಯಿತಿ ಆದಿಕಾಲದಿಂದಲೂ ಸಮೂಹ ಜೀವಿಯಾಗಿಯೇ ಬದುಕು ನಡೆಸುತ್ತ ಬಂದ ಕೊರವ ಸಮುದಾಯದ ಸದಸ್ಯರಲ್ಲಿ ವಿಕಾಸ ತಲೆದೋರದಂತೆ, ಅವರವರ ಮನೋಧರ್ಮಕ್ಕೆ, ಶಕ್ತಿ ಸಾಮರ್ಥ್ಯಗಳಿಗೆ ತಕ್ಕಂತೆ ಎಲ್ಲರೂ ಸಮಾನಹಕ್ಕು,

ಚಲಾಯಿಸುವಂತೆ ವ್ಯವಸ್ಥೆ ಮಾಡಲು ಅನುಕೂಲವನ್ನು ಕಲ್ಪಿಸಬೇಕಾಗುತ್ತದೆ. ಸಮುದಾಯದ, ಶಕ್ತಿಯುತವಾದ, ಬುದ್ಧಿವಂತನೂ ಆದ ವ್ಯಕ್ತಿಯೊಬ್ಬರನ್ನು ಸ್ವಯಂ ನೇಮಕಾಯಿಸಿಕೊಮಡು ಸಮುದಾಯದ ಆಗು-ಹೋಗುಗಳು ತೀರ್ಪುಗಳನ್ನು ನೀಡುತ್ತಿರುತ್ತವೆ. ಸಮುದಾಯವನ್ನು ನಿಯಂತ್ರಿಸುತ್ತಿರುತ್ತದೆ. ಹೀಗೆ ನಿಯಂತ್ರಿಸುವಾಗ ಜನರ ಅಪೇಕ್ಷೆ, ಉಪೇಕ್ಷೆ, ಅಭ್ಯಾಸ ಹಾಗೂ ನಿರೀಕ್ಷೆಗಳನ್ನರಿತುಕೊಂಡು ಸಮುದಯದ ಭದ್ರತೆಗೆ ಹಾಗೂ ಕ್ಷೇಮಕ್ಕೆ ಅತ್ಯಗತ್ಯವೆಂದು ತೋರಿದ ರೀತಿ ನೀತಿಯ ರೂಢಿಗಳನ್ನು ಕಾರ್ಯಗತಗೊಳಿಸುತ್ತಾರೆ. ಈ ನೀತಿ ನೀತಿಗಳೇ ರೂಢಿಗೆ ಬಂದು ಸಂಪ್ರದಾಯಗಳಾಗಿ ಪರಿಣಮಿಸಿವೆ.

ಅಧ್ಯಾಯ: ನಾಲ್ಕು

ಆರ್ಥಿಕ ವ್ಯವಸ್ಥೆ

ಅಧ್ಯಾಯ: ನಾಲ್ಕು

ಆರ್ಥಿಕ ವ್ಯವಸ್ಥೆ

ವಿಶ್ವದ ಮೂಲನಿವಾಸಿಗಳು ಅಲೆಮಾರಿ, ಅರೆಅಲೆಮಾರಿ ಅಥವಾ ಆದಿವಾಸಿಗಳು. ಇವರಲ್ಲಿ ಹಲವಾರು ಪ್ರಕೃತಿಯ ಮಡಿಲಿನ ಪಾರಂಪರಿಕ ಅಲೆಮಾರಿ ಆದಿವಾಸಿಗಳು. ಪಾರಂಪರಿಕ ಧಾರ್ಮಿಕ ಭಿಕ್ಷಾವೃತ್ತಿಯ ಅಲೆಮಾರಿಗಳು ಹೊಂದಿರುವ ಜನಸಮುದಾಯಗಳಾಗಿವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿವ್ಯವಸ್ಥೆ ಎನ್ನುವಷ್ಟರ ಮಟ್ಟಿಗೆ ಬಂದಿದೆ ಎಂಬುದು ತಿಳಿದಿರುವ ವಿಷಯ. ವೇದ, ಪುರಾಣಗಳ ಕಾಲದಿಂದಲೂ ಅಸ್ತಿತ್ವದಲ್ಲಿರುವ ಜಾತಿ ವೃತ್ತಿಗಳು ಜೊತೆಗೆ ಯಾವ ಜಾತಿಗಳಿಗೂ ಸೇರದ ಇವೆಲ್ಲದರಿಂದ ಪ್ರತ್ಯೇಕವಾಗಿ ಗುಡ್ಡ–ಕಾಡು–ಕೊಳ–ಕಣಿವೆಗಳಲ್ಲಿ ಉಳಿದಿರುವ ಹಲವು ಬುಡಕಟ್ಟುಗಳು ಹೊರಬಂದು ತಮ್ಮ ವಿಶಿಷ್ಟವಾದ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕುಶಲಕಲೆ ಮೊದಲದ ಹಲವಾರು ಅಂಶಗಳಿಂದ ವಿಶಿಷ್ಟತೆಯನ್ನು ಪಡೆದಿವೆ. ಇಂತಹ ಸಮುದಯಗಳ ಮೇಲೆ ನಾಗರಿಕತೆಯ ಪ್ರಭಾವ ವಸಾಹತುಶಾಹಿಯ ದಟ್ಟವಾದ ಕರಿನೆರಳು ಅವರ ಬದುಕಿನ ಚರಿತ್ರೆಯಲ್ಲಿ ಮುಳುವಾಗುತ್ತಾ ಬಂದಿತ್ತು. ವಸಾಹತುಶಾಹಿ ಸಂದರ್ಭದಲ್ಲಂತೂ ಅವರ ಜೀವನದ ಸ್ಥಿತಿ ತುಂಬಾ ಆತಂಕಕೊಳ್ಳಪಟ್ಟಿತು.

ಕಾಡಿನಿಂದ ಬರುತ್ತಿದ್ದ ಉತ್ಪನ್ನಗಳಿಂದ ಬದುಕುತ್ತಿದ್ದ ಸಮುದಾಯಗಳಿಗೆ ಕಾಡು ಪ್ರದೇಶಗಳಿಗೆ ನಿರ್ಬಂಧಿಸುವುದರ ಮೂಲಕ ಹಾಗೂ ಕಾಡಿನಿಂದ ಒಕ್ಕಲೆಬ್ಬಿಸುವ ಮುಖಾಂತರ ಅವರನ್ನು ಅತಂತ್ರ ಸ್ಥಿತಿಗೆ ತಳಿತ್ತು. ಕಾಡಿನ ನಡುವೆ ಆಸಕ್ತಿಯಿಂದ ಸ್ವಚ್ಛಂದವಾಗಿ ಬದುಕುತ್ತಿದ್ದ ಇವರ ಅಸ್ತಿತ್ವಕ್ಕೆ ವಸಾಹತುಶಾಹಿ ಪ್ರಾರಂಭವಾದಾಗಿನಿಂದ ಇಂದಿನವರೆಗೂ ಸಂಚಾಕಾರ ಬರುತ್ತಿದೆ. ಕಾರ್ಖಾನೆ ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ನೀಡುವ ಸರ್ಕಾರ ಜನಸಾಮಾನ್ಯರು ಕಾಡನ್ನು ನಂಬಿ ಬದುಕುವ ಸ್ಥಿತಿಯನ್ನು ಅರಿಯದಿರುವುದು ವಿಪರ್ಯಾಸ. ಅರಣ್ಯ ರಕ್ಷಣೆಗೆ ಮಾಡುವ ನೆಪದಲ್ಲಿ ಲೂಟಿ ಮಾಡುವ ಲೂಟಿಕೊರರು ಅಪರಾಧಿಗಳಲ್ಲ. ಕಾಡಿನಿಂದ ಕಚ್ಚಾ

ವಸ್ತುಗಳನ್ನು ತರುವವರು, ಬೇಟೆಯಾಡುವವರು ಅಪರಾಧಿಗಳೆಂದು ಬಿಂಬಿಸುವುದು ವಿಪರ್ಯಾಸದ ಸಂಗತಿ.

ಅಂಬಳಿಕೆ ಹಿರಿಯಣ್ಣ ಅವರು ಜಾತಿ ಮತ್ತು ವೃತ್ತಿಗಳ ಸಂಬಂಧಗಳ ಬದಲಾವಣೆಗೆ ನಾಲ್ಕು ಮುಖಗಳಲ್ಲಿ ಸಂಭವಿಸುತ್ತದೆ.

೧. ಪರಂಪರಾಗತ ವೃತ್ತಿಯಲ್ಲೇ ಮೇಲು ಜಾತಿಯ ಕಸುಬುಗಳನ್ನು ಅಳವಡಿಸಿಕೊಳ್ಳುವುದು.

೨. ಜಾತಿ ಮುಕ್ತ ವೃತ್ತಿಯ ಅವಲಂಬನೆ

೩. ಪರಂಪರಾಗತ ಜಾತಿ, ಕಸಬನ್ನು ತೊರೆದು ಸಮಾನವಾದ ಕೆಳವರ್ಗದ ಕಸಬನ್ನು ಅವಲಂಬಿಸುವುದು.

೪. ಪರಂಪರಾಗತ ವೃತ್ತಿಯಲ್ಲಿ ಮುಂದುವರೆದು, ಜಾತಿ ಕಸಬನ್ನು ಮುಂದುವರೆಸಿಕೊಂಡು ಹೋಗುವುದು.

ಈ ಮೇಲಿನ ಅಂಶಗಳಲ್ಲಿ ಕೊರವ ಸಮುದಾಯಕ್ಕೆ ಅನ್ವಯಿಸುತ್ತವೆ. ಏಕೆಂದರೆ ಕೆಲವರು ಕಸಬನ್ನು ಉಳಿಸಿಕೊಂಡು ಬರುವುದುಂಟು. ಜಾಗತೀಕರಣದ ಸಂದರ್ಭದಲ್ಲಿ ಕಸುಬುಗಳಿಗೆ ಪರಿಕರಗಳು ದೊರೆಯದೆ ಇದ್ದಾಗ ಬೇರೆ ವೃತ್ತಿಗಳನ್ನು ಅವಲಂಬಿಸಿ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿರುವ ಸ್ಥಿತಿಯು ಇದೆ.

ಕೊರವ ಸಮುದಾಯದ ವೃತ್ತಿಗಳ ಬಗೆಗೆ ವಿದ್ವಾಂಸರ ಅಭಿಪ್ರಾಯಗಳು ತಿಳಿದುಬರುತ್ತವೆ. ಅವುಗಳು ಶ್ರೀ ರೈಸ್ ಅವರು ಕೊರವರ ವೃತ್ತಿಗಳ ಕುರಿತಂತೆ ಹೇಳುತ್ತಾರೆ. "Thieves and robbers, moving with draves of cattle and asses, carrying salt and grain and making bamboo mats and baskets"ಎಂದು ದಾಖಲಿಸಿದ್ದಾರೆ(B.E.Enthovan, Vol-1, P.312, 350).

R.F.Enthovan "They ara wandering tribes of huniess, fortune telless, cattle breedess, carriess, musicions, basket makers and thieves"ಎಂದು ದಾಖಲಿಸಿದ್ದಾರೆ (B.E.Enthovan, The Tribes and Cates of Bombay, Vol-III, P.214).

Abbe Dubois "Carries and baskets makers, who ere perpetually wandering about and showet much affinity with the gypsies of Europe, especially in telling fortures. The women according to him ere skillful tatoess, but the tribes in his tine had an evil reputation forthieving and house breading"ಎಂದು ದಾಖಲಿಸಿದ್ದಾರೆ(Vol-II, P.267).

E.Thurston ಅವರು ಬಿದಿರಿನಿಂದ ವಿವಿಧ ರೀತಿಯ ಬುಟ್ಟಿಗಳನ್ನು ನೇಕಾರರಿಗೆ ಬೇಕಾಗುವ ಕುಚ್ಚುಗಳನ್ನು, ಉಪ್ಪಿನ ವ್ಯಾಪಾರ ಮಾಡುತ್ತಿದ್ದನ್ನು ಎಂಬುದನ್ನು ದಾಖಲಿಸಿದ್ದಾರೆ. (Caste and Tribes of Souther India Vol.III, P.54)

ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಐಯ್ಯರ್ ಅವರು "Korachas also known as Koramas or Koravas are a tribe of huntess, fortune tellers, cattle breedss, basket makers and thieves"(The Mysore Tribes and Castes, Vol.III, P.583). ಅಷ್ಟೇ ಅಲ್ಲದೆ ಎತ್ತು,ಕತ್ತೆಗಳ ಮೇಲೆ ಉಪ್ಪ ಸಾಗಿಸಿ ಮಾರಾಟ ಮಾಡುತ್ತಿದ್ದ, ಕೋತಿ ಆಡಿಸಿ ಜೀವನ ಸಾಗಿಸುವವರ ಬಗ್ಗೆ ಮತ್ತು ವಾದ್ಯ ನುಡಿಸುತ್ತಿದ್ದ ಬಗ್ಗೆ, ಹಚ್ಚೆ ಹಾಕುತ್ತಿದ್ದವರ ಬಗ್ಗೆ ತಿಳಿಸುವುದುಂಟು. ಇಂದಿಗೂ ಕೊರವ ಸಮುದಾಯದಲ್ಲಿ ವಾದ್ಯ ನುಡಿಸುತ್ತಿರುವುದನ್ನು ಹೈದಾರಾಬಾದ್ ಕರ್ನಾಟಕದಲ್ಲಿ ಕಾಣುತ್ತೇವೆ. ಕತ್ತೆಗಳ ಮೇಲೆ ವ್ಯಾಪಾರ ಮಾಡುವವರನ್ನು ಭಾಲ್ಕಿ ತಾಲ್ಲೂಕಿನ ಕಮಲಾನಗರದಲ್ಲಿ ಕಾಣುತ್ತೇವೆ.

ದಲಿತರ ಬದುಕು ಮತ್ತು ಸಂಸ್ಕೃತಿ ಕೃತಿಯಲ್ಲಿ ಅರ್ಜುನ್ ಗೊಳಸಂಗಿ ಅವರು ಕೊರವ ಸಮುದಾಯ ಬುಟ್ಟಿ–ತಟ್ಟೆ ಹೆಣೆಯುವುದು, ಇಲಿ ಹಿಡಿಯುವುದು, ಹಂದಿ ಸಾಕುವುದು, ಬೇಟೆ ಯಾಡುವುದು, ಬುಟ್ಟಿ ಮತ್ತು ಚಾಪೆ ಹೆಣೆಯುವುದು, ಹಚ್ಚೆ ಹಾಕುವುದು, ಕಣಿ ಹೇಳುವುದು, ಔಷಧಿ ಮಾರುವುದು, ಸನಾದಿ ಊದುವುದು, ಕಂಚು ತಯಾರಿಸುವುದರ ಬಗೆಗೆ ವಿಸ್ತಾರವಾಗಿ ಮಾಹಿತಿಯನ್ನು ನೀಡುತ್ತಾರೆ.

ಕೊರವರ ಪಾರಂಪರಿಕ ಕಸುಬುಗಳು

ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡ ಕಾಲದಿಂದಲೇ ಸಮಾಜ ಮತ್ತು ಸಂಸ್ಕೃತಿಗಳು ಅವನೊಂದಿಗೆ ಹುಟ್ಟಿ ಬೆಳೆದವು ಎಂದು ಹೇಳಬಹುದು. ಸಮಾಜವೆನ್ನುವುದು ಒಂದುಗೂಡಿ ಬಾಳುವ ಒಂದು ಜನತೆಯ ಘಟಕವಾದರೆ, ಸಂಸ್ಕೃತಿಯು ಆಯಾ ಸಮಾಜದ ಭಾಗಗಳಾಗಿ ಬಾಳುತ್ತಿರುವ ಜನತೆಯ ಜೀವನ ರೀತಿ ನೀತಿ, ನಡವಳಿಕೆ, ಭಾವನೆ, ಕಷ್ಟ–ನಷ್ಟ, ಆಗು–ಹೋಗು–ನಂಬಿಕೆ, ಪಾರಂಪರಿಕ ವೃತ್ತಿ ಮೊದಲಾದವುಗಳು ಆ ಸಮಾಜದಲ್ಲಿ ಸಂಸ್ಕೃತಿಯಾಗಿ ಆಯಾ ಸಮುದಾಯದ ಸಾಮಾಜಿಕ ಜೀವನ ವ್ಯವಸ್ಥೆಯ ಅಂಶಗಳಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಸಮುದಯವನ್ನು ಅಧ್ಯಯನ ಮಾಡುವುದೆಂದರೆ ಕೇವಲ ಮಾಹಿತಿಯನ್ನು ಪಡೆದು ದಾಖಲೀಕರಣ ಮಾಡುವುದು ಸಾಮಾನ್ಯವಾಗಿ ಸಮುದಾಯ ಅಧ್ಯಯನಗಳಲ್ಲಿ ಸಂಸ್ಕೃತಿ, ಆಚರಣೆ, ಕಲೆ ಮೊದಲಾದವುಗಳ ಬಗ್ಗೆ ಹೆಚ್ಚಿನ ಗಮನ ನೀಡಲಾಗುತ್ತದೆ. ಆದರೆ ಅದನ್ನು ಸೃಷ್ಟಿಸುವ ಜನಗಳ ಬಗ್ಗೆ ಕಾಳಜಿ ವಹಿಸಲಾಗುವುದಿಲ್ಲ. ಅವರ ಕಸುಬುಗಳು ಅವ ಜೀವನಾಧರದ ಜೊತೆ ಸಮಾಜದ ಕಾಳಜಿಯನ್ನು ಹೊಂದಿರುತ್ತದೆ ಎಂದು ಹೇಳಬಹುದು. ನಾನು ನಿರ್ದಿಷ್ಟವಾಗಿ

ಅಧ್ಯಯನ ಮಾಡಲು ಹೈದರಾಬಾದ್ ಕರ್ನಾಟಕದ ಜಿಲ್ಲೆಯಲ್ಲಿ ನೆಲೆಸಿರುವಂತಹ ಕೊರವರ ಸಮುದಾಯವನ್ನು ಆರಿಸಿಕೊಂಡಿದದೇನೆ. ಕುಲಕಸುಬು ಹಾಗೂ ಕೊರವರ ಬದುಕನ್ನು ತಿಳಿಯುವ ಪ್ರಯತ್ನವಾಗಿದೆ.

ಸ್ಥಳೀಯ ಕುಲಕಸುಬುಗಳು ಸಮುದಾಯ ಮನಸ್ಸಿನಲ್ಲಿಟ್ಟುಕೊಂಡು ಸಮುದಾಯವು ಮುಂದುವರಿಯುತ್ತಿದೆ. ವೃತ್ತಿಯಲ್ಲಿ ಮುಂದುವರಿಯುತ್ತಿರುವವರ ಜನ ಜೀವ ವೃತ್ತಿಯಲ್ಲಿನ ತೊಡಕುಗಳು ಅವ ಸ್ಥಿತಿಗಳು, ವೃತ್ತಿಯನ್ನು ಮುಂದುವರೆಸಿರುವ ಬಗ್ಗೆ ಅವರ ವೃತ್ತಿಯ ಬಗೆಗೆ ಯಾವ ಸಮುದಾಯಕ್ಕಿರುವ ಅಭಿಪ್ರಾಯಗಳು ಮತ್ತು ಇಂದು ಕುಲಕಸುಬಿನಲ್ಲಿ ಮುಂದುವರೆಯದೆ ಪರ್ಯಾಯ ಕೆಲಸಗಳನ್ನು ಹುಡುಕಿಕೊಂಡಿರುವವರು ಇಂದು ಸಾಮಾಜಿಕವಾಗಿ, ಆರ್ಥಿಕವಾಗಿ ಯಾವ ಹಂತದಲ್ಲಿದ್ದಾರೆ ಹಾಗೂ ತಮ್ಮ ಮೂಲ ವೃತ್ತಿಯನ್ನು ತೊರೆದು ಪರ್ಯಾಯ ಕೆಲಸಗಳನ್ನು ಮಾಡುತ್ತಿರುವುದಕ್ಕೆ ಕಾರಣಗಳನ್ನು ತಿಳಿಯುವುದಾಗಿದೆ. ಕುಲಕಸುಬಿನ ಆಧಾರದ ಮೇಲೆ ವಿಭಜನೆಗೊಂಡಿರುವಂತಹ ಜಾತಿಗಳು ಪ್ರಸ್ತುತ ತಮ್ಮದೇ ಆದ ಕಾರಣಗಳಿಗಾಗಿ ಕುಲಕಸುಬನ್ನು ಬದಿಗೊತ್ತಿ ಪರ್ಯಾಯ ಕೆಲಸಗಳಲ್ಲಿ ತೊಡಗಿಕೊಂಡಿರುವಂತಹ ಪ್ರಸ್ತುತ ಸಂದರ್ಭದಲ್ಲಿ ಇವುಗಳನ್ನು ಹೇಗೆ ಗ್ರಹಿಸಬೇಕೆಂಬುದು ಸದ್ಯದ ಸವಲಾಗಿದೆ.

ಕರ್ನಾಟಕದಾದ್ಯಂತ ಹರಡಿರುವ ಕೊರವ ಸಮುದಾಯವು ತನ್ನ ಪಾರಂಪರಿಕವಾಗಿ ಬಂದಿರುವ ವೃತ್ತಿಯನ್ನು ಉಳಿಸಿಕೊಂಡಿರುವುದು ತನ್ನ ಕಸುಬನ್ನು ತೋರಿಸುತ್ತದೆ. ಮಾನವನು ಭೂಮಿಗೆ ಬಂದ ಮೇಲೆ ಒಂದಿಲ್ಲೊಂದು ವೃತ್ತಿಯನ್ನುಕೆಲಸವನ್ನು ಅವಲಂಬಿಸುವುದುಂಟು. ತಮ್ಮ ಮೂಲ ಕಸುಬು ಜೊತೆಗೆ ಆಧುನಿಕತೆಗನುಗುಣವಾಗಿ ಅನೇಕ ವೃತ್ತಿಗಳನ್ನು ಅಲವಂಬಿಸಿ ಜೀವನ ಮಾಡುತ್ತಿದ್ದಾರೆ. ಆಯಾ ಭಾಗಗಳಾಗಿ ಬಾಳುತ್ತಿರುವ ಜನತೆಯು ಜೀವನ ವೃತ್ತಿಯನ್ನು ಗಟ್ಟಿಯಾಗಿ ನಿಲ್ಲುತ್ತದೆ ಮತ್ತು ನಿಂತುದ್ದನ್ನು ಕಾಣುತ್ತೇವೆ. ಆದ್ದರಿಂದ ಆಯಾ ಸಾಮಾಜಿಕ ಜೀವನ ನಿರ್ವಹಣೆಗೆ ಅವರ ಪಾರಂಪರಿಕ ವೃತ್ತಿಯು ಒಂದು ಉದ್ಯೋಗವನ್ನು ಒದಗಿಸಿ ಕೊಡುತ್ತಾದಾಗಿದೆ. ವೃತ್ತಿ ಎಂದ ತಕ್ಷಣ ಸರ್ಕಾರಿ ನೌಕರಿ ಮಾತ್ರವಲ್ಲ. ಅವರು ಮಾಡುವ ಕೆಲಸಗಳು ಅವರಿಗೆ ವೃತ್ತಿಯಾಗಿ ಪರಿಣಮಿಸಿದೆ.

ಕೊರವ ಸಮುದಾಯವು ಆಹಾರ ಸಂಗ್ರಹಣೆ, ಬೇಟೆಯಾಡುವುದು, ಪ್ರಕೃತಿಯಲ್ಲಿ ಪಕ್ಷಿಗಳು ನಿರ್ಮಿಸುವ ಗೂಡುಗಳನ್ನು ಅನುಸರಿಸುವುದನ್ನು ಕಂಡು ಬುಟ್ಟಿ ಹೆಣೆಯುವುದು ಕಸಬಾರಿಕೆ ಕಟ್ಟುವುದು, ಕಣಿ ಹೇಳುವುದು, ನಾಟಿ ವೈದ್ಯ, ಓಲಗ ಊದುವುದು, ಹಣ್ಣು ವ್ಯಾಪಾರ, ಪಾತ್ರೆ ವ್ಯಾಪಾರ ಮೊದಲಾದವುಗಳು ಕಂಡುಬರುತ್ತವೆ. ಬೆಟ್ಟ ಗುಡ್ಡಗಳೊಂದಿಗೆ ತಮ್ಮ ಬದುಕನ್ನು ರೂಢಿಸಿಕೊಂಡಿದ್ದ ಕೊರವರು ನಾಡಿನೊಂದಿಗೆ ಸಂಪರ್ಕ ಹೊಂದಿದ ಮೇಲೆ ಅರೆ

ಅಲೆಮಾರಿಗಳಾದರೆ, ಇನ್ನು ಕೆಲವರು ಒಂದೆ ಕಡೆ ನೆಲೆನಿಂತು ನಾನಾ ಕೆಲಸಗಳಲ್ಲಿ ಭಾಗಿಗಳಾಗಿ ಜೀವನವನ್ನು ಸಾಗಿಸುತ್ತಿರುವುದು ಕಾಣುತ್ತೇವೆ.

ಪಶುಸಂಗೋಪನೆಯೊಂದಿಗೆ ಕಾಡಿನಲ್ಲಿದ್ದ ಕೊರವ ಸಮುದಾಯ ಅರಣ್ಯ ಉತ್ಪನ್ನಗಳಾದ ಈಚಲುಗರಿ, ಬಿದಿರು, ಬೆತ್ತ, ಬಳ್ಳಿಗಳಿಂದ ಬುಟ್ಟಿ, ಕಸಬಾರಿಗೆ, ಹಗ್ಗ ಮೊದಲಾದವುಗಳನ್ನು ಮಾಡುತ್ತಾ ಇವುಗಳನ್ನು ಮಾರಿ ಜೀವನ ಸಾಗಿಸಲು ಪ್ರಾರಂಭಿಸಿದರು. ಹಗ್ಗ ತಯಾರಿಕೆಯು ಕೃಷಿಗೆ ಸಂಬಂಧಿಸಿದಂತಹ ವಸ್ತುಗಳನ್ನು ತಯಾರಿಸಿ ಕೊಡಲಾಗುತ್ತಿತ್ತು. ಕೃಷಿ ಪ್ರಧಾನವಾದ ಭಾರತಕ್ಕೆ ಈ ಸಮುದಾಯದವರು ನೀಡುತ್ತಿರುವ ಕೊಡುಗೆ ಎಂದು ಹೇಳಬಹುದು. ಕಷ್ಟಪಡುವ ಕೆಲಸ ಮಾಡುವುದು ಅಥವಾ ಕೊರವರು ಕೃಷಿಗೆ ಅನುಕೂಲವಾಗುವ ಪರಿಕರವನ್ನು ಶಾರೀರಿಕ ಶ್ರಮವೆ ಸಂಪತ್ತಾಗಿ ತಯಾರಿಸುತ್ತಿದ್ದರು.

ಮಾನವನಲ್ಲಿ ಸಂಸ್ಕೃತಿಯನ್ನು ಗುರುತಿಸುವುದರಿಂದ ಪ್ರಪಂಚದ ಅಧಿಪತಿಯಾಗಿದ್ದಾನೆ. ಮಾನವನು ತನಗಿದ್ದ ಆಲೋಚನಾ ಶಕ್ತಿಯಿಂದ ದಿನನಿತ್ಯದ ಅನೇಕ ವ್ಯವಹಾರಗಳನ್ನು ನಿಭಾಯಿಸಿಕೊಂಡು ಹೋಗುವುದರ ಜೊತೆಗೆ ತನ್ನ ಸಹವರ್ತಿಗಳ ಮೇಲೆ ಪ್ರಭಾವವನ್ನು ಬೀರುತ್ತಿರುತ್ತಾನೆ. ಕೊರವರು ತಮ್ಮ ಸಂಸ್ಕೃತಿಯ ಆಚಾರ ವಿಚಾರ, ಸಂಪ್ರದಾಯ, ಪಾರಂಪರಿಕ ಜ್ಞಾನ, ಪಾರಂಪರಿಕ ವೃತ್ತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಮುಖ್ಯವಾಗಿ ಕೊರವರು ಬೇರೆ ಬೇರೆ ಪ್ರದೇಶಗಳಿಗೆ ತೆರಳಿ ತಮ್ಮ ಕೆಲಸವನ್ನು ನಿಷ್ಠೆಯಿಂದ ನಿಭಾಯಿಸಿಕೊಂಡು ಬರುವುದುಂಟು. ಕೊರವರ ಹೆಣ್ಣುಮಕ್ಕಳು ಕಣಿ ಹೇಳುತ್ತಾ ಊರುರು ಅಲೆಯುತ್ತಾಳೆ. ಅವಳನ್ನು ಕೊರತಿ ಅಥವಾ ಕೊರವಂಜಿ ಎಂದು ಕರೆಯುತ್ತಾರೆ. ರಾಜ ಮಹಾರಾಜರ ಕಾಲದಿಂದಲೂ ಕಣಿ ಹೇಳುತ್ತಾ ಗೌರವ ಸ್ಥಾನವನ್ನು ಪಡೆದಿದ್ದಾರೆ. ಆದರೆ ಜಾಗತೀಕರಣದಲ್ಲಿ ಕಣಿ ಹೇಳುವವರು ಸವದತ್ತಿ, ಉಚ್ಚಂಗಿದುರ್ಗ, ಗೌರಿಸಂದ್ರ ಮಾರೆಮ್ಮನ ಜಾತ್ರೆಗಳಲ್ಲಿ ಕಂಡುಬರುತ್ತಾರೆ. ಬೆಳಗಾವಿಯ ರಾಯದುರ್ಗದಲ್ಲಿ ಕೊರವಂಜಿಗಳ ಓಣಿಯೇ ಕಂಡುಬರುತ್ತದೆ.

ಪ್ರಾದೇಶಿಕ ಕ್ಷೇತ್ರ

ಆಯಾ ಪ್ರದೇಶಕ್ಕೆ ಅನುಗುಣವಾಗಿ ತಮ್ಮ ಕಸುಬುಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಜೊತೆ ತಮ್ಮ ಕುಲಕಸುಬುಗಳನ್ನು ರೂಢಿಸಿಕೊಂಡು ಬಂದಿರುವುದುಂಟು. ಹಳೆಬೇರು, ಹೊಸ ಚಿಗುರು ಎಂಬ ಮಾತಿನಂತೆ ತಳಸಮುದಾಯಗಳ ಕಸುಬುಗಳೇ ಇಂದಿಗೂ ಅನಿವಾರ್ಯವಾಗುವ ಸಂದರ್ಭಗಳು ಬಂದಿದೆ. ಆದರೆ ಅಂತಹ ಕಸುಬುಗಳು ಜನರ ಕಣ್ಣಿಗೆ ಕಾಣುತ್ತಿರುವುದು ವಿಪರ್ಯಾಸ. ಬಳ್ಳಾರಿ ಜಿಲ್ಲೆಯಲ್ಲಿ ಕೊರವರು ತಮ್ಮ ಪೂರ್ವಿಕರಿಂದ ಪಡೆದ ಬುಟ್ಟಿ, ಕಸಬಾರಿಕೆ, ಬ್ಯಾಂಡ್, ಹಣ್ಣು ವ್ಯಾಪಾರ, ಪಾತ್ರೆ ವ್ಯಾಪಾರವನ್ನು ಮಾಡುತ್ತಿರುವುದುಂಟು.

ಕೊಪ್ಪಳ ಜಿಲ್ಲೆಯಲ್ಲಿಯು ಬುಟ್ಟಿ, ಕಸಬಾರಿಕೆ, ಬ್ಯಾಂಡ್, ಹಣ್ಣು, ವ್ಯಾಪಾರ, ಪಾತ್ರೆ ವ್ಯಾಪಾರ, ಕಣಿ ಹೇಳುವವರು ಕಂಡುಬರುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಬಳ್ಳಾರಿ ಮತ್ತು ಕೊಪ್ಪಳ, ರಾಯಚೂರು, ಯಾದಗಿರಿ ಮತ್ತು ಗುಲ್ಬರ್ಗಾದಲ್ಲಿ ಇವೇ ವೃತ್ತಿಗಳು ಕಂಡುಬರುತ್ತದೆ. ಆದರೆ ಬೀದರ ಜಿಲ್ಲೆಯಲ್ಲಿ ಮಾತ್ರ ಬುಟ್ಟಿ, ಬ್ಯಾಂಡ, ಮಾತ್ರ ಕಂಡುಬರುತ್ತದೆ. ಜಾಗತೀಕರಣ ಸಂದರ್ಭದಲ್ಲಿ ತಮ್ಮಮ್ಮ ಅನುಕೂಲಕ್ಕೆ ತಕ್ಕಂತೆ ವೃತ್ತಿಗಳನ್ನು ರೂಢಿಸಿಕೊಳ್ಳುತ್ತಿರುವುದುಂಟು. ಶಿಕ್ಷಣವನ್ನು ಪಡೆಯುತ್ತ ಬೇರೆ ಬೇರೆ ವೃತ್ತಿಗಳ ಕಡೆ ಇಂದಿನ ಪೀಳಿಗೆಯು ಯುವ ಪೀಳಿಗೆ ಹೋಗುತ್ತಿರುವುದುಂಟು.

ವೃತ್ತಿಗಳು

ಕೊರವ ಸಮುದಾಯದ ಹಲವಾರು ವೃತ್ತಿಗಳೆಂದರೆ

೧. ಬುಟ್ಟಿ ಹೆಣೆಯುವುದು

೨. ಸಿಂಬೆ ಕಟ್ಟುವುದು

೩. ಸನಾದಿ ಊದುರುವುದು ಅಥವಾ ಓಲಾಗ ಊದುವುದು

೪. ಹಂದಿ ಸಾಕಾಣಿಕೆ

೫. ಕಣಿ ಹೇಳುವುದು

೬. ಕಸಬಾರಿಕೆ ಕಟ್ಟುವುದು

ಜನರು ಆಹಾರ ಹುಡುಕಿಕೊಂಡು ಅಲೆದಾಡುವುದು ಕಡಿಮೆಯಾಯಿತು. ಆಹಾರದ ಉತ್ಪಾದನೆಗೆ ನಿಸರ್ಗವನ್ನು ಮಾತ್ರ ನಂಬಿದೆ. ಪರಿಶ್ರಮದ ಮೂಲಕ ಸಾಧಿಸುವುದು ಕಂಡುಬರುತ್ತದೆ. ಇದಕ್ಕಾಗಿ ಸಾಕು ಪ್ರಾಣಿಗಳ ನೆರವನ್ನು ಪಡೆಯ ತೊಡಗಿದರು. ಮನುಷ್ಯ ಬೆಳವಣಿಗೆಯಾಗುತ್ತ ಹಣದ ಬಳಕೆಯನ್ನು ಬಾರದ ದಿನಗಳಲ್ಲಿ ತನ್ನ ಸಂಪಾದನೆಯನ್ನು ಕೂಡಿಡುವ ಪ್ರಕೃತಿ ಇರಲಿಲ್ಲ. ದವಸ ಧಾನ್ಯಗಳನ್ನು ಬಹುಕಾಲ ಕೂಡಿಡುವ ಹಾಗೂ ಇಲ್ಲಿ ಅವರಲ್ಲಿ ಏಕತಾಭಾವನೆಯು ದಟ್ಟವಾಗಿತ್ತು ಮತ್ತು ಭೇದಭಾವಗಳಿರಲಿಲ್ಲ. ಬ್ರಿಟಿಷರು ಸಮುದಾಯಗಳ ವೃತ್ತಿ ಆಹಾರದ ಮೇಲೆ ಜಾತಿಗಳನ್ನು ವರ್ಗೀಕರಿಸುವುದು ಅಧ್ಯಯನದಿಂದ ಕಂಡುಬರುತ್ತದೆ.

ಈ ಸಮುದಾಯಕ್ಕೆ ಕೊರವ, ಕೊಂಚ, ಕುಂಚಿಕೊರವ, ಕೊರಮ, ಭಜಂತ್ರಿ, ಕೈಕಾಡಿ, ಕುರುವನ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಕರ್ನಾಟಕದ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳಾಗಿರುವುದು ಕಂಡುಬರುತ್ತದೆ. ಅಯ್ಯಂಗಾರ ಸಮಿತಿಯ ವರದಿ ಪ್ರಕಾರ ಕೊರಚ, ಕೊರಚರ, ಅಲೆಮಾರಿ ಬುಡಕಟಟುಗಳಲ್ಲಿ ಕೊರಮ, ಕೊರವ, ಕೊರವನ್ ಎಂದೂ, ಹಿಂದುಳಿದ

ವರ್ಗದಲ್ಲಿ ಕೊರವರ, ಮರಕಲ ಎಂಬ ಹೆಸರುಗಳು ಇರುವುದನ್ನು ಕಾಣುತ್ತೇವೆ. ಎಡ್ಗರ್ ಥರ್ಸ್ಟನ್ ಅವರ ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾದಲ್ಲಿ ಕೊರವರು ಎಂದೂ ಸಮ್ಮೂಹ ಸಿರಾಜ್ ವಿಲ್ ಹಸನ್ ರವರ ದ ಕ್ಯಾಸ್ಟ್ ಅಂಡ್ ಟ್ರೈಬ್ಸ್ ಎನ್ನುವ ಕೃತಿಯಲ್ಲಿ ಸಮುದಾಯದ ಕುರಿತು ತಿಳಿಸಿದ್ದಾರೆ.

ಬುಟ್ಟಿ ತಯಾರಿಕೆ: ನಿಸರ್ಗ ಮಡಿಲಿನಲ್ಲಿ ವಾಸಿಸುವ ಇವರು ಗೂಡುಗಳ ನಿರ್ಮಾಣವನ್ನು ಕಂಡು ಬುಟ್ಟಿ ಹೆಣೆಯುವುದನ್ನು ಕಲಿತುಕೊಂಡರೆಂದು ಹೇಳಬಹುದು. ಬೆಟ್ಟ, ಗುಡ್ಡಗಳಲ್ಲಿ ದೊರೆಯುವ ಈಚಲು ಗರಿ, ಬಿದಿರು ಬೆತ್ತಗಳನ್ನು ಲಾರಿಗಟ್ಟಲೆ ತಂದು ಬುಟ್ಟಿ ತಯಾರಿಸುತ್ತಿದ್ದರು. ವೃತ್ತಿಯಲ್ಲಿ ಪರಿಣಿತರಾದ ಹಿರಿಯರು ತಮ್ಮ ಮಕ್ಕಳಿಗೆ ಬುಟ್ಟಿಯನ್ನು ಯಾವ ರೀತಿ ತಯಾರಿಸಬೇಕು ಎಂಬುದನ್ನು ಕಲಿಸಿಕೊಡುತ್ತಾರೆ. ಆದರೆ ಹಿರಿಯರು ಮಾಡುವ ವೃತ್ತಿಯನ್ನು ಹಾಡುತ್ತಲೇ ಕಲಿಯುತ್ತಿದ್ದರು. ಬೆತ್ತವನ್ನು ಈಚಲುಗರಿಯ ಮಧ್ಯವಿರುವ ಕಡ್ಡಿಯಿಂದ ಬುಟ್ಟಿಯನ್ನು ತಯಾರಿಸುತ್ತಾರೆ. ಲಕ್ಕಿ ಗಿಡದಿಂದ ಸಹ ಬುಟ್ಟಿಯನ್ನು ಕೊರವರು ತಯಾರಿಸುತ್ತಾರೆ. ಬಿದಿರಿನಿಂದ ಮೇದಾರರು ಬುಟ್ಟಿ ಮಾಡುತ್ತಾರೆ. ಬಿದಿರಿನಿಂದ ಇವರು ಧಾನ್ಯ ಶೇಖರಿಸುವ ಬುಟ್ಟಿ, ಗೊಬ್ಬರ ಹೊರುವ ಬುಟ್ಟಿ ಮತ್ತು ವಿವಿಧ ಅಲಂಕಾರಿಕ ವಸ್ತುಗಳನ್ನು ತಯಾರಿಸುವರು. ಇವರನ್ನು ಬಿದಿರು ಕೊರವರೆಂದು ಕರೆಯುವರು. ಎತ್ತಿನ ಕೊರವರು ಸಾಮಾನು ಸಾಗಿಸುವ ಉದ್ಯೋಗದಲ್ಲಿ ತೊಡಗಿದ್ದು, ಎತ್ತನ್ನು ಹೆಚ್ಚು ಬಳಸುತ್ತಿದ್ದರು ಇಂದು ಬಳಕೆ ಇಲ್ಲ. ಸಂಚಾರಿ ವ್ಯವಸ್ಥೆವಿರುವುದರಿಂದ ಎತ್ತುಗಳ ಬಳಕೆ ಇಲ್ಲವಾಗಿದೆ.

'ಕುಂಚಿ ಕೊರವರು' : ನೇಕಾರರಿಗೆ ಬೇಕಾಗುವ ಕುಂಚವನ್ನು ಒಕ್ಕಲಿಗರಿಗೆ ಬೇಕಾಗುವ ನೆಲುವು, ಬುಟ್ಟಿ, ಪೊರಕೆ, ಜಿಲ್ಲಿ ಮೊದಲಾದವುಗಳನ್ನು ಈಚಲ ಕಡ್ಡಿ, ಹಾಗಡಿಯ ಬಳ್ಳಿಗಳಿಂದ ಮಾಡಿ ಮಾರಾಟವನ್ನು ಮಾಡುತ್ತಾ ಜೀವನ ಸಾಗಿಸುತ್ತಾರೆ. ಜಲ್ಲಿ ಎತ್ತಿನ ಗಾಡಿಯ ಪಕ್ಕದಲ್ಲಿ ಹಾಕವುದು. ನೆಲಗಣಿ–ಕಥಳಿ ಗಿಡದಿಂದ ಹಗ್ಗವನ್ನು ತಯಾರಿಸಿ ನೆಲಗಣಿ ತಯಾರಿಸುತ್ತಾರೆ. ಚಿಕ್ಕ ಎತ್ತಿನ ಬಾಯಿಗೆ ಕಡಿವಾಣ ಹಾಕುವ ವಸ್ತು. ಬುಟ್ಟಿ ಹೆಣಿದು ಗಳಿಸಿದ ಹಣವು ಅವರ ಜೀವನದ ಅಗತ್ಯ ವಸ್ತುಗಳಿಗೆ ಸಾಕಾಗುವುದಿಲ್ಲ. ಬುಟ್ಟಿಗಲು ಕೃಷಿಗೆ ತುಂಬ ಅಗತ್ಯವಾಗಿತ್ತು. ಆದರೆ ಇಂದಿಗೂ ಹಬ್ಬ ಹರಿದಿನಗಳಲ್ಲಿ, ಮದುವೆಗಳಲ್ಲಿ, ತಿಥಿ ಮುಂತಾದ ಕಾರ್ಯಗಳಿಗೆ ಮೇಲ್ವರ್ಗದ ಸಮುದಾಯದವರಿಗೆ ಬುಟ್ಟಿಗಳು ಅಗತ್ಯವಾಗಿ ಬೇಕು. ಈ ಸಮುದಾಯವು ಕುಟುಂಬ ನಿರ್ವಹಣೆಯಲ್ಲಿ ಪುರಷ ಮತ್ತು ಮಹಿಳೆಯರ ಬಹುಪಾಲು ಹೆಚ್ಚಾಗಿ ಬುಟ್ಟಿ ತಯಾರಿಕೆಯಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಸುಗ್ಗಿಯ ಕಾಲದಲ್ಲಿ ಯಾವ ಯಾವ ಊರುಗಳಲ್ಲಿ ಯಾವ ಯಾವ ತಿಂಗಳುಗಳಲ್ಲಿ ಸುಗ್ಗಿಯಿದೆ ಎಂದು ತಿಳಿದು ಇವರು ಬುಟ್ಟಿಗಳನ್ನು ತಯಾರು ಮಾಡಿ ಮಾರಾಟಕ್ಕೆ ಹೋಗುತ್ತಾರೆ. ಇನ್ನು ಕೆಲವರು ಮನೆಗೆ ಬಂದು ಹೇಳಿದ ಮೇಲೆ ತಯಾರು ಮಾಡಿಕೊಡಲಾಗುತ್ತದೆ.

ಆ ದಿನ ಬದುಕಿಗೆ ಸರಿ ಹೋಗುವುದಿಲ್ಲ. ಅರಣ್ಯದಲ್ಲಿ ಗಿಡಮರಗಳ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಕಚ್ಚಾವಸ್ತುಗಳು ದೊರೆಯುವುದು ಕಡಿಮೆ ಯಾಗುತ್ತಿದೆ. ಅರ್ಜುನ ಗೊಳಸಂಗಿ ಅವರು ತಮ್ಮ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಬುಟ್ಟಿ ಬಗೆಗಿನ ಹಾಡು, ಕೆರೆ, ಹಳ್ಳಿಗಳಲ್ಲಿ ಬೆಳೆದು ನಿಂತಿರುವ ಸಿಂದಿ ಗಿಡದ ಪರಕಿಯ ಕಡ್ಡಿಯಿಂದಲೇ ಕೊರವರು ಬುಟ್ಟಿಗಳನ್ನು ಹೆಣೆಯುತ್ತಾರೆ ಎಂಬುದನ್ನು ತಿಳಿಸುತ್ತದೆ.

ಕಟ್ಟೀಯ ನೆಳ್ಳಾಗ ಬುಟ್ಟಿ ಹೆಣೆಯೋತ
ದಿಕ್ಕೀನ ದೂಲ ಎದಿಮ್ಯಾಗ। ಬಿದ್ದರ
ಸೆರಗೀಲೆ ಒರೆಸಿ ಇರುವೆನ

ಬುಟ್ಟಿ ತಯಾರಿಸುವವರು ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಕಂಡುಬರುತ್ತಾರೆ. ಬೀದರ್ ಜಿಲ್ಲೆಯಲ್ಲಿ ಬುಟ್ಟಿಯನ್ನು ಮಾತ್ರ ತಯಾರಿಸುವುದು ಮಾತ್ರ ಕಂಡುಬರುತ್ತದೆ. ಅತ್ಯಂತ ಹಿಂದುಳಿದ ಪ್ರದೇಶವಾದ ಬೀದರ ಯಾದಗಿರಿಯಲ್ಲಿ ತಮ್ಮ ಜೀವನಕ್ಕೆ ಮಾತ್ರ ಆಧಾರವಾಗಿದೆ. ಸಮುದಾಯ ಆರ್ಥಿಕ ಸ್ಥಿತಿಯು ಶೋಚನೀಯ ಎಂದೇ ಹೇಳಬೇಕಾಗುತ್ತದೆ. ಕೃಷಿಯು ದೇಶದ ಬೆನ್ನಲುಬು ಎನ್ನುವ ಕಾಲದಲ್ಲಿ ಕಾರ್ಖಾನೆಗಳ ಸ್ಥಾಪನೆಯಿಂದಾಗಿ ಕೃಷಿಯು ಕಡಿಮೆಯಾಗು ತ್ತಿರುವುದುಂಟು ಅವರಿಗೆ ಬೇಕಾಗುವ ವಸ್ತುಗಳು ಭೂಮಿಗೆ ಹಾನಿ ಮಾಡುವ ವಸ್ತುಗಳಲ್ಲ ಪ್ರಕೃತಿಯನ್ನು ಉಳಿಸಿ ತಮ್ಮ ಜೀವನದ ಆಹಾರಕ್ಕೆ ಪ್ರಾಮುಖ್ಯತೆ ಪಡೆದಿರುವುದು ಬುಟ್ಟಿ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಕೋಳಿ ಬುಟ್ಟಿ, ಗೊಬ್ಬರ ಬುಟ್ಟಿ, ಹೆಂಡಿರಸದ ಬುಟ್ಟಿ ಇನ್ನು ಮೊದಲಾದ ಬುಟ್ಟಿಗಳ ಉಂಟು. ಮದುವೆ ಕಾರ್ಯದಲ್ಲಿ ಬುಟ್ಟಿಗಳ ಬಳಕೆಯುಂಟು. ಪ್ಲಾಸ್ಟಿಕ್ ಬುಟ್ಟಿಗಳು ಒಂದೇ ಸಾರಿ ಬಳಕೆ ಬಂದರೂ ಭೂಮಿಗೆ ಹಾನಿಯಾಗಿ ಪರಿಣಮಿಸುತ್ತದೆ. ಆದರೆ ಈಚಲು ದಗಡಿ ಬಳ್ಳಿಯಿಂದ ತಯಾರಿಸಿದ ಬುಟ್ಟಿಗಳು ಭೂಮಿಗೆ ಹಾನಿ ಮಾಡುವುದಿಲ್ಲ. ಆದರೆ ಪ್ಲಾಸ್ಟಿಕ್ ಬುಟ್ಟಿಗೆ ಅಧಿಕ ಬೆಲೆ. ಇದನ್ನು ಜನಸಾಮಾನ್ಯರು ತಿಳಿದುಕೊಳ್ಳುವುದು ಅನಿವಾರ್ಯವಾಗಿದೆ. ಇದರಿಂದಾಗಿ ಸುತ್ತಮುತ್ತಲ ಹಳ್ಳಿಗಳ ಜನರಿಗೆ ಕೊರವರು ಚಿರಪರಿಚಿತರಾಗಿರುತ್ತಾರೆ. ಹಿಂದೆ ದವಸಧಾನ್ಯ ಕೇಳಿ ಪಡೆದು ಬುಟ್ಟಿಯನ್ನು ನೀಡುತ್ತಿದ್ದರು. ಆದರೆ ಇದು ಹಣವೇ ಮುಖ್ಯವಾದ ಸಂದರ್ಭದಲ್ಲಿ ಹಣವನ್ನು ಪಡೆಯಲಾಗುತ್ತದೆ. ಬೇರೆ ಊರುಗಳಿಗೆ ಹೋಗಿ ವಾಸವಾಗಿ ಬುಟ್ಟಿಗಳನ್ನು ತಯಾರಿಸಿಕೊಂಡು ಊರಿಗೆ ಬರುವವರು ಕೆಲವರು ಇದ್ದಾರೆ.

ವಾಲಗ ಊದುವವರು: ಭಜಂತ್ರಿ ಎಂದು ಕರೆಸಿಕೊಳ್ಳೂವುದು ಜಾತಿಯಲ್ಲಿ. ಅದೊಂದು ವೃತ್ತಿಯ ಜನಸಮೂಹ ಕೊರವರಲ್ಲಿ ಮೇಳ ಊದುವವರು ಇದ್ದಾರೆ. ಅವರನ್ನು ಭಜಂತ್ರಿ

ಎಂದು ಕರೆಯುತ್ತಾರೆ. ಸನಾದಿ ಅಪ್ಪಣ ಎಂಬ ವ್ಯಕ್ತಿಯು ಕೊರವ ಸಮುದಾಯಕ್ಕೆ ಸೇರಿದವರು ಎಂಬುದು ತಿಳಿದುಬರುತ್ತದೆ. "ಸನಾದಿ ಅಪ್ಪಣ" ಸಿನಿಮಾದಿಂದಲೇ ಎಲ್ಲರಿಗೂ ಕೊರವ ಸಮುದಯಕ್ಕೆ ತಿಳಿದುಬಂದ್ದು ಎಂದೇ ಹೇಳಬೇಕಾಗುತ್ತದೆ. ಏಕೆಂದರೆ ಮನುಷ್ಯನಿಗೆ ಇಂದಿನ ದಿನಗಳ್ಲಿ ಮಾಧ್ಯಮಗಳು ಅಷ್ಟೇ ಪ್ರಭಾವ ಬೀರುತ್ತಿವೆ. ಸನಾದಿಯು ಹೆಸರೇ ಸೂಚಿಸುವಂತೆ ಒಂದು ವಾದ್ಯ. ಸನಾದಿ ಕೊರವರು ಗ್ರಾಮವಾಸಿಗಳು. ಅವರು ಹಬ್ಬ ಹರಿದಿನಗಳಲ್ಲಿ, ಮದುವೆ-ಮುಂಜಿಗಳಲ್ಲಿ ಯಾವುದೇ ಶುಭಕಾರ್ಯಗಳಲ್ಲಿ ವಾದ್ಯದವರನ್ನು ಕರೆಸಿ ವಾಲಗ ಊದಿಸುವುದನ್ನು ಕಾಣುತ್ತೇವೆ. ಭಜಂತ್ರಿ ಸಮುದಾಯಕ್ಕೆ ವೃತ್ತಿಯಾಗಿದೆ.

ವಾಲಗದವರಿಗೆ ಬಂಡವಾಳ ಶೂನ್ಯ ಎಂದೇ ಹೇಳಬೇಕು. ಏಕೆಂದರೆ ಸಿಜನ್ ಇದ್ದಾಗ ಮಾತ್ರ ವಾಗ ಊದಲು ಹೋಗಬೇಕಾಗುತ್ತದೆ. ೮-೧೦ ಜನರ ಗುಂಪುಗಳಾಗಿ ಮಾಡಿ ಬಾರಿಸಲು ಹೋಗಿ ಬಂದ ಹಣದಲ್ಲಿ ತಮ್ಮ ಖರ್ಚುವೆಚ್ಚ ತೆಗೆದು ಹಂಚಿಕೊಳ್ಳಬೇಕು. ಇಂದು ಶ್ರೀಮಂತ ವರ್ಗದ ಮದುವೆ ಸಂದರ್ಭದಲ್ಲಿ ಅವರಿಗೆ ತಕ್ಕಂತೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗು ತ್ತದೆ. ಬ್ಯಾಂಡ್ ಅವರ ಬಟ್ಟೆಬರಿಗಳು, ಪರಿಕಾರಗಳಿಗೆ ಸಂಬಂಧಿಸಿದ ಕಚ್ಚಾವಸ್ತುಗಳನ್ನು ಸಿದ್ಧಪಡಿಸಿ ಕೊಂಡು ಬರುವುದುಂಟು. ಮದುವೆ ಎಂದರೆ ಓಲಗದ ಧ್ವನಿ ಕೇಳಿಸಬೇಕಾಗುತ್ತದೆ. ಆಯಾ ಪ್ರಾದೇಶಿಕ ಹಿನ್ನೆಲೆಯೊಳಗೆ ಅವರ ಆದಾಯವನ್ನು ಕೊಡಬೇಕು.

ಜಾಗತೀಕರಣದ ಸಂದರ್ಭದಲ್ಲಿ ವಸ್ತುಗಳ ಬೆಲೆ ಗಗನಮಯವಾದ ಸಂದರ್ಭದಲ್ಲಿ ತಮ್ಮ ಮನೆಯ ಖರ್ಚುಗಳಿಗೆ ಸರಿ ಹೋಗುತ್ತದೆ. ಒಂದು ಮದುವೆಗೆ ೫-೧೫ ಸಾವಿರದವರೆಗೆ ಹಣವನ್ನು ನಿಗದಿ ಮಾಡುತ್ತಾರೆ. ಆದರೆ ಮದುವೆ ಮಾಡುವವರು ನಿರ್ಧರಿಸುವ ಬೆಲೆಗೆ ಹೊಂದಾಣಿಕೆ ಮಾಡಿಕೊಂಡು ಬಾರಿಸಿಬರುವುದುಂಟು. ಜನರು ವಾಗದವರನ್ನು ನೋಡುವ ದೃಷ್ಟಿಯು ಒಮ್ಮೊಮ್ಮೆಯು ತಿಳುವಳಿಯುಳ್ಳವರು ಗೌರವದಿಂದ ಕಂಡರೆ, ಕೆಲವರು ಅವರನ್ನು ಹೀನಾಯವಾಗಿ ನೋಡುವುದಂಟು. ಪ್ರಸ್ತುತದ ಸ್ಥಿತಿಯಲ್ಲಿಯು ಇವರನ್ನು ನೋಡುವ ದೃಷ್ಟಿಕೋನವು ಬದಲಾಗಬೇಕಾಗಿದೆ. ಇಂದು ಮುಂದೆ ಕಣ್ಮರೆಯಾಗುವ ಸಂದರ್ಭಗಳು ಉಂಟಾಗಬಹುದು. ಪ್ರೇಮವಿವಾಹ ಮತ್ತು ದಾಖಲೀಕರಣ ವಿವಾಹಗಳಿಂದ ಮಂಗಳವಾದ್ಯದವರಿಗೆ ಹಾನಿಯಾಗಬಹುದು.

ಭಜಂತ್ರಿ ಬಾರಿಸುವವರು ಬೇರೆ ಸಮುದಾಯದವರು ಕೂಡ ಮಾಡುವುದು ಕಂಡುಬರುತ್ತದೆ. ಕೆಲವು ವಂಶಪಾರಂಪರ್ಯವಾಗಿ ವೃತ್ತಿಯನ್ನು ರೂಢಿಸಿಕೊಂಡು ಬರುತ್ತಿದ್ದರೆ. ಇನ್ನು ಕೆಲವರು ಆಧುನಿಕತೆಗೆ ಹೊಂದಿಕೊಳ್ಳಲು ಆರ್ಕೆಸ್ಟ್ರಗಳಿಂದ ಮದುವೆಗಳನ್ನು ಮಾಡುತ್ತಿರುವುದುಂಟು. ಸನಾದಿ ಕೊರವರು ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧ ಜನಪದ ಕಲೆಯಾದ 'ಕರಡಿ ಮಜಲು' ಪ್ರಸಿದ್ಧಿ ಪಡೆದಿದು ಇವರಿಂದಲೆ ಎಂದು ಅರ್ಜುನ ಗೊಳಸಂಗಿ ಅವರು ತಿಳಿಸುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಆಷಾಡಮಾಸದಲ್ಲಿ ಕೊರವರು ತಮ್ಮ ಬಾರಿಸಿದ ಹಣದಿಂದ ಹುಲಿಗೆಮ್ಮ ದೇವಿಯನ್ನು ಪೂಜಿಸುವುದುಂಟು. ಕೆಲವರು ಬಂಡವಾಳ ಮಾಡಿದರೆ ಇನ್ನು ಕೆಲವರು ಬಂಡವಾಳ ಶೂನ್ಯವಾಗಿಸಿಕೊಳ್ಳುತ್ತಾರೆ. ಏಕೆಂದರೆ ದುಶ್ಚಟಗಳಿಗೆ ಬಲಿಯಾಗಿ ತಮ್ಮ ದುಡಿಮೆಯ ಶೇ.೫೦ ಹಣವನ್ನು ವ್ಯಯ ಮಾಡುವುದು ಕಾಣುತ್ತೇವೆ.

ಕೊರವರ ಬಗ್ಗೆ R.E.Enthovan Musicians ಎಂದು ಕರೆಯುತ್ತಾರೆ. Abbe I.A.Dubais ಅವರು ಒಂದು ಗುಂಪು ವಾದ್ಯಕಾರರಾಗಿದ್ದ ಬಗ್ಗೆಯೂ ಬರೆಯುತ್ತಾರೆ.

ಪೊರಕೆ ಮಾಡುವವರು/ಮಾರುವವರು

ಕುರುಚಲು ಕಾಡಿನಲ್ಲಿ ಅಥವಾ ಬೆಟ್ಟ ಗುಡ್ಡಗಳು ಬೆಳೆಯುವ ಈಚಲು ಗರಿಯಿಂದ ಪೊರಿಕೆಯನ್ನು ತಯಾರಿಸಲಾಗುತ್ತದೆ. ಕಸಬಾರಿಗೆ ತಯಾರಿಸುವುದು ಒಂದು ಕಲೆಯಾಗಿದೆ. ಹುಲ್ಲುನಿಂದಲೂ ಕಸಬಾರಿಕೆ ಕಟ್ಟುತ್ತಾರೆ. ದೇವಸ್ಥಾನದಲ್ಲಿ ಕಸ ಸ್ವಚ್ಛಮಾಡಲು ಉಪಯೋಗಿಸುತ್ತಾರೆ. ಪ್ರತಿ ಮನೆಯಲ್ಲಿಯು ಪೊರಕೆ(ಕಸಬಾರಿಕೆ)ಯನ್ನು ಕಾಣುತ್ತೇವೆ. ಕಣಗಳ ಸ್ವಚ್ಛಗೊಳ್ಳಿಸಲು ಮುಖ್ಯವಾಗುತ್ತದೆ. ಮುಖ್ಯವಾಗಿ ಬೇಕಾಗಿರುವ ಕಸಬಾರಿಗೆ ತಯಾರಿಸುವವರು ಕೊರವರು.

ಈಚಲು ಗಿಡವನ್ನು ಲಕ್ಷ್ಮೀಗೆ ಹೋಲಿಸಿ ಪೂಜೆ ಮಾಡಲಾಗುತ್ತದೆ. ಈಚಲಗರಿಯನ್ನು ತರಲು ಸುತ್ತಮುತ್ತಲಿನ ಬೆಟ್ಟಗುಡ್ಡಗಳಲ್ಲಿ ಸಿಗುವ ಸ್ಥಳಗಳಿಗೆ ಹೋಗಿ ತರುವುದುಂಟು. ಇನ್ನು ಕೆಲವರು ಆಂಧ್ರಪ್ರದೇಶದ ಗಡಿಭಾಗದಲ್ಲಿ ಹದಿನೈದು ಅಥವಾ ಇಪ್ಪತ್ತು ದಿನಗಳ ಕಾಲ ವಾಸವಿದ್ದು, ಲಾರಿಗಟ್ಟಲೆ ಈಚಲು ಗರಿಯನ್ನು ತರಲಾಗುತ್ತದೆ. ಆದರೆ ಬೀದರ್ ಜಿಲ್ಲೆಯಲ್ಲಿ ಬುಟ್ಟಿ ಮಾತ್ರ ಮಾಡುತ್ತಾರೆ. ಕಸಬಾರಿಗೆ ಕಟ್ಟುವುದಿಲ್ಲ. ಶಿಕ್ಷಣಕ್ಕೆ ತೆರೆದುಕೊಳ್ಳುವ ಸಂದರ್ಭದಲ್ಲಿ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಈಚಲು ಗರಿತರಲು ಹೋಗುತ್ತಾರೆ. ಬದುಕಿನ ಅನಿವಾರ್ಯತೆಗೆ ಅಂಟಿಕೊಳ್ಳಬೇಕಾಗಿರುವುದರಿಂದ ಅಜ್ಜಿಯ ಜೊತೆ ಹೋಗಿ ಕಸಬರಿಗೆ ಕಟ್ಟುವುದು, ಕಸಬರಿಗೆ ಮಾರಾಟ ಮಾಡುವುದು. ಕಸಬರಿಗೆಯನ್ನು ಸಂತೆ ಅಥವಾ ನಗರದ ಮಾರುಕಟ್ಟೆಯಲ್ಲಿ ಕಾಣುತ್ತೇವೆ. ಇಂದು ಈಚಲು ಕಸಬಾರಿಗೆ ಬದಲು ಕಂಪನಿ ಬ್ರ್ಯಾಂಡ್ ಕಸಬರಿಕೆಗಳಿಗೆ ಜನರು ಹೆಚ್ಚಿಗೆ ಮೊರೆ ಹೋಗುತ್ತಿರುವುದುಂಟು.

ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯ ಮಾಡುವ ಒಂದು ಕಸಬಾರಿಕೆಗೆ ೨೦-೨೫ ರೂಪಾಯಿಗಳು ಮಾತ್ರ, ಆದರೆ ಬೇರೆ ಕಂಪನಿಗಳ ಕಸಬಾರಿಗೆಗೆ ೭೦-೧೦೦ರ ವರೆಗೆ ಇರುವುದುಂಟು. ದೇಹಕ್ಕೆ ಹಾನಿಯಾಗದೆ, ಭೂಮಿಗೂ ಹಾನಿಯಾಗದ ಈಚಲು ಕಸಬಾರಿಕೆಯೂ ಅದರ ಬೆಲೆ ಕಡಿಮೆ. ಅದೇ ಹಾನಿ ಮಾಡುವ ಕಬಾರಿಗೆಗೆ ಬೆಲೆ ಹೆಚ್ಚು. ಜಾಗತೀಕರಣಕ್ಕೆ

ಒಳಗಾದಂತೆ ನಿಸರ್ಗದತ್ತವಾದ ವಸ್ತುಗಳಿಗೆ ಬೆಲೆ ಹೆಚ್ಚು ಎಂಬುದು ಸತ್ಯಸಂಗತಿ. ಕಸಬಾರಿಗೆಗಳನ್ನು ಊರೂರು ಸುತ್ತಿ ಮಾರಾಟ ಮಾಡಿಕೊಂಡು ಬರುವಷ್ಟರಲ್ಲಿ ಹರಸಾಹಸ ಪಡುವುದಂಟು.

ಕೊರವಂಜಿ/ಕಣಿ ಹೇಳುವುದು

Fortune tellers of the contry ಎಂದು ಉಲ್ಲೇಖಿಸಿರುವುದಂಟು. ಕಣಿ ಹೇಳುತ್ತಿದ್ದರು ಜೊತೆಗೆ ಪೊರಕೆ, ಹಗ್ಗ ಮಾಡುವುದುಂಟು ಎಂಬುದು ತಿಳಿದುಬರುತ್ತದೆ. ತಮಿಳಿನ ಪ್ರಾಚೀನ ಕಾವ್ಯ 'ಶಿಲ್ಪಾಧಿಕಾರಮ್'ನಲ್ಲಿ ಅಲೆಮಾರಿ ಸಮುದಾಯದ ಸ್ತ್ರೀಯರು ಕಣಿ ಹೇಳುವ ಸಲುವಾಗಿ ಪಕ್ಕದ ಕಾಡಿನಿಂದ ಬರುವ ವರ್ಣನೆ ಇದೆ. ಮನುಷ್ಯನ ಸತ್ಯ ಜೀವನದ ಬದುಕಿನಲ್ಲಿ ಜಂಜಾಟದಿಂದ ಪರಾಗಲು ಹತ್ತು ಹಲವಾರು ಉಪಾಯವನ್ನು ಮಾಡುತ್ತಲೆ ಇರುತ್ತದೆ. ಅಂತವರ ಮನಸ್ಥಿತಿಯನ್ನು ಪರಿಹಾರ ತೋರಿಸುವ ಕಣಿ ಹೇಳುವ ಸ್ತ್ರೀಯು ಅವರ ಜಂಜಟವನ್ನು ಹೋಗಲಾಡಿಸುವ ಕಾರ್ಯ ಮಾಡುತ್ತಿದ್ದಳು ಎಂಬುದು ತಿಳಿದುಬರುತ್ತದೆ.

ಕೊರವ ಸಮುದಾಯದ ಪ್ರತಿನಿಧಿ ಈ ಕೊರವಂಜಿ, ಕೊರವಂಜಿ ಸಾಹಿತ್ಯ ಪ್ರಕಾರಗಳಾದ ಕಾವ್ಯ ನಾಟಕಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಬಂದಿರುವುದು ಕಂಡುಬರುತ್ತದೆ. ತನ್ನ ಮೂಲ ಕೊರವ ಸಮುದಾಯದ ವಿಷಯಗಳು ಪ್ರಸ್ತಾಪಗೊಂಡಿದೆ. ಶಿವ ಕೊರವಂಜಿ, ಪಾರ್ವತಿ ಕೊರವಂಜಿ, ಕೃಷ್ಣ ಕೊರವಂಜಿ, ಮನ್ಮಥ ಕೊರವಂಜಿ, ನಾರದ ಕೊರವಂಜಿ ಎಂಬುದು ಕನ್ನಡ ಸಾಹಿತ್ಯದಲ್ಲಿ ಕಂಡುಬರುವುದುಂಟು.

ಕೊರವಂಜಿ ಪದ

ಬೀದಿ ಬೀದಿಯ ಮೇಲೆ ಹೊರಟಳು ಕೊರವಂಜಿ
ಕೇರಿ ಕೇರಿಯ ಮೇಲೆ ಹೊರಟಾಳೋ
ಕಣಿಯೇ ಕಣಿಯೇ ಎಂದು ಸಾರ್‍ಯಾಳು
ಬಾರಮ್ಮ ಕೊರವಂಜಿ ಬಾರೆ ನಮ್ಮನೆಗೆ
ಕಾಸು ಕೊಟ್ಟೆವು ನಾವು ಕಣಿ ಹೇಳಿ ಕೊರವಿ
ಕಾಸು ನಮ್ಮದೆಯ ಮತ್ತಿನ ರಾಣಿ ಕಾಣಿ
ಒಂಟೆ ಕೊಟ್ಟೆವು ನಾವು ಕಣಿ ಹೇಳಿ ಕೊರವಿ
ಒಂಟೆ ನಮ್ಮದೆಂದು ಕುಂಟೆಮ್ಮೆ ಹಿಂಡು ಕಾಣು
ಆನೆ ಕೊಟ್ಟೆವು ನಾವು ಕಣಿ ಹೇಳೆ ಕೊರವಿ

ಆನೆ ನಮ್ಮನೆಯ ಆಡಿನ ಹಿಂದು ಕಾಣು
ಇನ್ನೇನು ಬೇಕಮ್ಮ ಭಿನ್ನಣಿ ಕೊರವಿ
ಮತ್ತೇನು ಬೇಕಮ್ಮ ಮಾಯಾವಿ ಕೊರವಿ
ತೆಂಗಿನ ದೇಶಕ್ಕೆ ಹೋಗಿದ್ದೆ ಮಗಳೆ
ತೆಂಗಿನ ಮಂದಡಿ ಮಲಗಿದ್ದೆ ಮಗಳೆ
ಆ ತೆಂಕಣಗಾಳಿಯು ಬೀಸ್ಸಾವೆ ಮಗಳೆ
ತರತರದ ಕಣಿಯನ್ನು ಪೇಳುವೆನು

ತೆಂಕಣ ದೇಶದವಳು ಎಂಬುದು ಈ ಹಾಡಿನಿಂದ ತಿಳಿದುಬರುತ್ತದೆ. ಊರಿನ ಸಮಾಚಾರವೆಲ್ಲವನು ಬಲ್ಲವಳು. ಅದಕ್ಕೆ ತಕ್ಕಂತೆ ಪರಿಹಾರವನ್ನು ನೀಡುವ ಜಾಣ್ಮೆಯುಳ್ಳವಳು. ಮನೋವಿಜ್ಞಾನಿಯಂತೆ ಕಾರ್ಯ ಮಾಡುವವಳು ಎಂಬುದು ತಿಳಿದುಬರುತ್ತದೆ. ಕಾಸು, ಒಂಟಿ ಮತ್ತು ಆನೆ ಯಾವುದು ಬೇಡ ಮನೆಯ ಸಿರಿವಂತಿಕೆಯನ್ನು ತಿಳಿಸುತ್ತದೆ. ಒಂದು ಕಾಲದಲ್ಲಿ ಸಿರಿವಂತರಾಗಿದ್ದ ಕಣಿ ಹೇಳುವವರು ಇಂದು ಕಣ್ಮರೆಯಾಗುತ್ತಿದ್ದಾರೆ. ಆ ಕಲೆಯು ಇಂದಿನ ಪೀಳಿಗೆಗಳಿಗೆ ಇಲ್ಲದಿರುವುದು. ಹೆಚ್ಚಿನ ಜನ ಜ್ಯೋತಿಷ್ಯ ಮೊರೆ ಹೋಗುವುದು ಕಂಡುಬರುತ್ತದೆ.

ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಕಡಿಮೆ ಕಂಡುಬಂದರೂ ಬೆಳಗಾವಿ, ಬಿಜಾಪುರ, ದಾವಣಗೆರೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ರಾಯದುರ್ಗದಲ್ಲಿ ಕೊರವಂಜಿಗಳ ಒಣಿಯೇ ಇದೆ ಎಂಬುದನ್ನು ಸಿದ್ದು ಭಜಂತ್ರಿ ರಬಕವಿ ಅವರು ತಿಳಿಸುತ್ತಾರೆ. ಹಾಗೆ ಧಾರ್ಮಿಕ ಸ್ಥಳಗಳಲ್ಲಿ ಕೊರವಂಜಿಗಳು ಭಿಕ್ಷೆ ಬೇಡುವುದನ್ನು ಕಾಣುತ್ತೇವೆ.

ತ್ರಿಲೋಕದ ವಿಚಾರಗಳನ್ನು ತಿಳಿಸುವ ಜ್ಞಾನವುಳ್ಳವನು ನಾರದ ಭೂ ಪ್ರದೇಶಗಳ ಅಥವಾ ಮನುಷ್ಯನ ಆಳದ ಜ್ಞಾನವನ್ನು ತಿಳಿಸುವ ಕೊರವಂಜಿ ಈ ಜ್ಞಾನವು ಇಂದು ಜ್ಯೋತಿಷ್ಯದ ಪಾಲು ಎಂದೇ ಹೇಳಬೇಕು.

ಹಚ್ಚೆ ಹಾಕುವವರು

ಕೊರವಂಜಿಗಳೇ ಹಚ್ಚೆ ಹಾಕುವವರು. ಪ್ರಾಚೀನ ಕಲೆಗಳಲ್ಲಿ ಹಚ್ಚೆಯೂ ಒಂದು. ಕ್ರಿ.ಪೂ.೭೦೦೦ವರ್ಷಗಳಷ್ಟು ಹಿಂದೆಯೇ ಈಜಿಪ್ಟ್‌ನಲ್ಲಿ ಹಚ್ಚೆ ಕಲೆಯಿದ್ದುದು ಕಂಡುಬರುತ್ತದೆ. ಗ್ರೀಕರು ರೋಮನ್ನರು ಪೂರ್ವಜರ್ಮನರಲ್ಲಿ ಇದು ಪ್ರಚಲಿತವಿತ್ತೆಂದು ತಿಳಿಯುತ್ತದೆ. ಇಂಥ ಒಂದು ಪ್ರಾಚೀನ ಕಲೆಯನ್ನು ರೂಢಿಸಿಕೊಂಡು ಬೆಳೆಸಿಕೊಂಡು ಬಂದವರಲ್ಲಿ ಕೊರವಂಜಿಯರು

ಪ್ರಮುಖರು. ಧಾರ್ಮಿಕ ಭಾವನೆಯನ್ನು ಹೆಚ್ಚಿಸಲು, ವ್ಯಕ್ತಿಗಳ ನಡುವಿನ ಪ್ರೀತಿಯನ್ನು ತೀರಿಸಲು, ದೈಹಿಕ ಸೌಂದರ್ಯ ಹೆಚ್ಚಸಲು ಒಂದು ಸಾಧನವಾಗಿ ಹೊರ ಹೊಮ್ಮಿದ ಹಚ್ಚೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕೊರವಂಜಿಯರು ಬಳಸಿಕೊಂಡರು.

ಪ್ರಾಚೀನ ಕಾಲದಿಂದಲೂ ಅತಿ ನೈಪುಣ್ಯತೆಯನ್ನು ಪಡೆದವರು ಕೊರವ ಸಮುದಾಯಯದ ಮಹಿಳೆಯರು ಹಚ್ಚೆ ಹಾಕುವವರು ಮಹಿಳೆಯರು. ಗ್ರಾಮೀಣ ಹೆಣ್ಣು ಮಕ್ಕಳ ಮೈಮೇಲೆ ಗಂಡಸರಿಂದ ಹಚ್ಚೆ ಹಾಕಿಸಿಕೊಳ್ಳಲು ನಾಚಿ ಕೊಳ್ಳುವುದುಂಟು. ಅವರು ಅತ್ತೆ, ಮಾವ, ಹೆಚ್ಚಿನ ವ್ಯಕ್ತಿಯ ಹೆಸರುಗಳನ್ನು ಹಾಕಿಸಿಕೊಳ್ಳುವುದುಂಟು. ಹೆಚ್ಚೆ ಎಂಬುದು ಗುರುತು ಸಂಕೇತ ಎಂಬುದು ತಿಳಿದುಬರುತ್ತದೆ. ಅಳಸಿ ಹೋಗದ ಗುರುತು ಮಹಿಳೆಯರಿಗೆ ಹಣೆಯ ಮೇಲೆ ಸೌಭಾಗ್ಯದ ಸಂಕೇತವಾಗಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಇದನ್ನು ನಿಸರ್ಗದಲ್ಲಿ ದೊರೆಯುವ ವಸ್ತುವಿನಿಂದ ತಯಾರಿಸಲಾಗುತ್ತದೆ. ಜನರಿಗೆ ಯಾವುದೇ ತೊಂದರೆಯಾಗುತ್ತಿರಲಿಲ್ಲ.

ಜಾಗತೀಕರಣದಲ್ಲಿ ಹಲವಾರು ಕಾಯಿಲೆಗಳಿಗೆ ಒಳಗಾಗಿ ಹಚ್ಚೆ ಚುಚ್ಚುವ ಸೂಜಿಯು ಕಾಯಿಲೆಗೆ ಒಳಮಾಡಬಹುದೆಂದು ಭಯವಾಗಿತ್ತು. ಇಂದು tattoo ಎಂಬುದು ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಸಿನಿಮಾ ವ್ಯಕ್ತಿಗಳವರೆಗೆ ಹಚ್ಚೆಯೂ ಪ್ರಸಿದ್ಧವಾಗಿದೆ. ಈ ಸಮುದಾಯ ಮಾಡದೆ ಬೆರೆಯವರು ಇದನ್ನು ಒಂದು ಉದ್ದಿಮೆ ತರಹ ಬಳಸಿಕೊಳ್ಳುತ್ತಿದೆ ಅಥವಾ ಆರ್ಥಿಕ ಉದ್ದಿಮೆಯಾಗಿದೆ. ಹಲವಾರು ತಂತ್ರಗಳನ್ನು ಬಳಸಿಕೊಂಡು ಬೇರೆ ಬೇರೆ ಜನರು ಆಧುನಿಕತೆಗೆ ತಕ್ಕಂತೆ ಬಳಕೆಯಾಗುತ್ತಿವೆ.

ಹಚ್ಚೆಯ ಬಗೆಗೆ ಹಲವಾರು ವಿದ್ವಾಂಸರು ಉಲ್ಲೇಖಿಸಿರುವುದುಂಟು ೧೨ನೇ ಶತಮಾನದ ಮಲ್ಲಿಕಾರ್ಜುನನ ಸೂಕ್ತ ಕಾವ್ಯದಲ್ಲಷ್ಟೆ ಅಲ್ಲದೆ ಶಿವಶರಣರ ಗಮನವನ್ನು ಮನ ಸೆಳೆಯುತ್ತದೆ. ಬಸವಣ್ಣನವರು ತಮ್ಮ ವಚನದಲ್ಲಿ "ಐದೆ ಹಚ್ಚೆಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ" ಎಂದು ಹೇಳುವಲ್ಲಿ ಆ ಕಾಲಕ್ಕೆ ಹಚ್ಚೆಯ ಸೌಭಾಗ್ಯದ ಕುರುಹಾಗಿ ಬೆಳೆದುಬಂದಿರುವ ನಂಬಿಕೆಯನ್ನು ಸೂಚಿಸುತ್ತದೆ. ಊರೂರು ತಿರುಗಿ ಹಚ್ಚೆ ಹಾಕುತ್ತಿದ್ದಳು. ಇದು ಜಗತ್ತಿನಾದ್ಯಂತ ಜಾನಪದದಲ್ಲಿ ಸಾರ್ವತ್ರಿಕ ಪದ್ಧತಿಯಾಗಿ Tattoo ಗುರುತು ಸೆಳೆಯುತ್ತದೆ. ಆದರೆ ಹಚ್ಚೆ ಹಾಕುವ ಕೊರವರು ಕಣ್ಮರೆಯಾಗುತ್ತಿದ್ದಾರೆ. ಗಂಡಸರು-ಹೆಂಗಸರು ಎಂಬ ಭೇದವಿಲ್ಲದೆ ಕೈ-ಮೈ-ಮುಖಗಳಿಗೆ ಹೆಚ್ಚೆಯನ್ನು ಹಾಕಿಸಿಕೊಳ್ಳುವುದರ ಹಿನ್ನೆಲೆಯಲ್ಲಿ ನಾನಾ ಕಾರಣಗಳು ಇರಬಹುದಾಗಿದೆ. ತಮ್ಮ ಶರೀರದ ಸೌಂದರ್ಯವನ್ನು ಹೆಚ್ಚಿಸಲು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಇಂದಿನ ಸಂದರ್ಭದಲ್ಲಿ ಟ್ಯಾಟೂ ಬಣ್ಣ ಮಕ್ಕಳಿಗೆ ಆಟಿಕೆ ರೂಪದಲ್ಲಿ ಕೈಗಳಿಗೆ ಅಂಟಿಸಿಕೊಳ್ಳುವುದು, ಜಾತ್ರೆ ಹಬ್ಬ ಹರಿದಿನಗಳಲ್ಲಿ ಹಚ್ಚೆ ಹಾಕುವವರು ತಮ್ಮ ನೆಚ್ಚಿನ ವ್ಯಕ್ತಿಗಳ ಚಿತ್ರವನ್ನು ಹಾಕಿಸಿಕೊಳ್ಳುತ್ತಾರೆ.

ಹಂದಿ ಸಾಕಾಣಿಕೆ

ಇದು ಸಮುದಾಯದ ಆರ್ಥಿಕ ಮೂಲವಾಗಿದೆ ಎಂದೇ ಹೇಳಬಹುದು. ವರಾಹ ಎಂದು ಕರೆಯುತ್ತಾರೆ. ಇದರಲ್ಲಿ ಊರ ಹಂದಿ, ಕಾಡುಹಂದಿ ಎಂಬ ವಿಧಗಳಿವೆ. ಹಂದಿಯ ಕೊಬ್ಬು ಔಷಧಿ ಗುಣವುಳ್ಳದಾಗಿರುತ್ತದೆ. ಕೋಳಿಗಳ ಕೊಕ್ಕರೆ ರೋಗಕ್ಕೆ, ದನಗಳ ಗಾಯಗಳಿಗೆ ಹಂದಿ ಕೊಬ್ಬನ್ನು ಔಷಧಿಯಾಗಿ ಬಳಸುತ್ತಾರೆ. ಗಾದೆ ಮಾತಿನಂತೆ ಹಂದಿ ಸಾಕಿ ಹಾಗೇವು ಹಾಳು, ಕೋಳಿ ಸಾಕಿ ಕೊಟಾರ ಹಾಳು ಎಂಬಂತೆ ಹಂದಿ ಕೋಳಿಗಳನ್ನು ಸಾಕುವುದನ್ನು ಬಿಡುವುದಿಲ್ಲ. ಹಂದಿಗತ್ರಿ ಕಾಡು ಹಂದಿಗಳ ಬೇಟೆಗೆ ಬಳಸುವ ಸಾಧನ. ಕಾಡಿನಲ್ಲಿ ಹಂದಿಯನ್ನು ಬೇಟೆಯಾಡಲು ಹಂದಿಗಳು ಓಡಾಡುವ ಜಾಗದಲ್ಲಿ ಹಂದಿಗತ್ರಿಯನ್ನು ಒಡ್ಡಿ ಹುಲ್ಲುಹಾಕಿ ಮುಚ್ಚಿರುತ್ತಾರೆ. ಅದರ ಮೇಲೆ ಕಾಲಿಟ್ಟಾಗ ಹಂದಿ ಸಿಕ್ಕಿಕೊಳ್ಳುತ್ತದೆ. ಅದನ್ನು ಸಮುದಾಯದವರು ಆಹಾರವಾಗಿ ಸ್ವೀಕರಿಸುತ್ತಾರೆ.

ಸಾಕು ಹಂದಿಗಳು ಇರುವುದು ಕಡಿಮೆ. ಆದರೆ ಹಂದಿಗಳನ್ನು ಸ್ವತಂತ್ರವಾಗಿಯೇ ಬಿಡುವುದುಂಟು. ಇವರು ತಮ್ಮ ಗುಡಿಸಲುಗಳ ಪಕ್ಕದಲ್ಲೇ ಹಂದಿಗಳಿಗೆ ಪ್ರತ್ಯೇಕವಾದ ಗುಡಿಸಲುಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಇವುಗಳ ಆಹಾರಕ್ಕಾಗಿ ಹೋಟೆಲು ಮತ್ತು ಶಾಲೆಗಳಲ್ಲಿ ಮಿಕ್ಕ ಆಹಾರವನ್ನು ಮೂಸರೆಯನ್ನು ತಂದು ಹಾಕುವುದುಂಟು. ಹಂದಿಯನ್ನು ಕುರಿಯಂತೆ ಮಾರಾಟ ಮಾಡುವುದು ಹಾಸನ ಜಿಲ್ಲೆಯಲ್ಲಿರುವುದುಂಟು. ಆದರೆ ಕೊರವ ಸಮುದಾಯದವರು ಊರಲ್ಲಿ ಬಿಡುವುದೇ ಹೆಚ್ಚು. ರಾಯಚೂರು, ಬಳ್ಳಾರಿ, ಹೊಸಪೇಟೆ, ಕಂಪ್ಲಿಯಲ್ಲಿ ರಾತ್ರಿ ಹೊತ್ತಿನಲ್ಲಿ ಸಾಗಿಸಲಾಗುತ್ತಿದೆ.

ಆದರೆ ಪ್ರಸ್ತುತ ದಿನಗಳಲ್ಲಿ ಹಂದಿಗಳಿಂದ ಕಾಯಿಲೆ ಬರುತ್ತಿವೆ ಎಂದು ಸ್ಥಳಾಂತರ ಮಾಡುವುದು ಅಥವಾ ವಿಷವಿಟ್ಟು ಕೊಲ್ಲುವುದು ಪತ್ರಿಕೆ, ಮಾಧ್ಯಮಗಳಲ್ಲಿ ವರದಿಯಾಗುತ್ತಿರುವುದುಂಟು. ಎಷ್ಟು ವರ್ಷಗಳಿಂದ ಸಾಕುವ ಮತ್ತು ಊರಲ್ಲಿ ಬಿಟ್ಟ ಹಂದಿಗಳ ಜೊತೆ ಇರುವವರಿಗೆ ಕಾಯಿಲೆ ಬಂದಿರುವುದಿಲ್ಲ ಎಂಬುದನ್ನು ಸರ್ಕಾರದ ಅಧಿಕಾರಿಗಳು ಅರ್ಥಮಾಡಿಕೊಳ್ಳದಿರುವುದು ವಿಪರ್ಯಾಸ. ವರಹ ಎಂದರೆ ಲಕ್ಷ್ಮಿ, ಹಣ, ಕೊರವರಿಗೆ ಹಂದಿಯಿಂದಲೆ ಹಣವನ್ನು ಪಡೆಯುವುದು ನೋಡುತ್ತೇವೆ. ತಿಂಗಳಿಗೆ ಒಂದು ಬಾರಿ ಊರಿಗಟ್ಟಲೆ ಬೇರೆ ಊರುಗಳಿಗೆ ರಫ್ತು ಮಾಡಲಾಗುತ್ತದೆ. ಅದರಿಂದ ಅವರ ಜೀವನ ನಡೆಯುತ್ತಿದೆ.

ಜೋಪಾನ ಮಾಡಿ ಬೆಳೆಸಿದ ಹಂದಿಗಳಿಂದ ಕೊರವರು ಅನೇಕ ಪ್ರಯೋಜನಗಳನ್ನು ಪಡೆಯುತ್ತಾರೆಂಬುದನ್ನು ಕೆಲವು ಬಲ್ಲರು. ಶಿಕ್ಷಣಕ್ಕೆ ಬಂದ ಮೇಲೆ ಹಂದಿ ತಿನ್ನುವವರು ಎಂದು ನಿಂದಿಸುವವರು ಎಂದು ಅವುಗಳ ಬಗೆಗೆ ಕಾಳಜಿ ಇಲ್ಲವಾಗುತ್ತದೆ. ಅದರಿಂದ ರೈತರಿಗೆ ಸಹಾಯವಾಗಿತ್ತು ಎಂಬುದನ್ನು ಕುರಿಮಯ್ಯ ಮತ್ತು ಅಂಕುಶದೊಡ್ಡಿ ಎಂಬ ಕಾದಂಬರಿಯಿಂದ

ಹಂದಿಗೊಬ್ಬರ ಸಲುವಾಗಿ ಸಮುದಾಯವನ್ನೇ ಅಲ್ಲಿಂದ ಬೇರೆ ಊರಿಗೆ ಹೋಗಿಸುವಂತೆ ಮಾಡುವುದು ಸ್ಪಷ್ಟವಾಗಿ ತಿಳಿಸಲಾಗಿದೆ. 'ಹಂದಿಗೊಬ್ಬರ ಮತ್ತು ಹಂದಿಗಳ ಕೂದಲುಗಳನ್ನು ಕತ್ತರಿಸಿ ಪಟ್ಟಣಗಳಿಗೆ ಹೋಗಿ ಮಾರುವುದು, ಇವುಗಳಿಂದ ಹಂದಿಯ ಕೂದಲುಗಳಿಗೆ ಮಾರುಕಟ್ಟೆ ಯಲ್ಲಿ ಬಹಳ ಬೇಡಿಕೆಯಿದೆ. ಇವುಗಳಿಂದ 'ಮಾರಗಟ್ಟ(ದಾಡಿ) ಮಾಡಿಕೊಳ್ಳುವ ಹಾಗೂ ಗೋಡೆಗೆ ಬಣ್ಣ ಬಳಿಯುವ, ಬೂಟ್ ಪಾಲೀಸ್ ಮಾಡುವ ವರಹ ಕಟ್ಟುಗಳನ್ನು ತಯಾರಿಸುತ್ತಾರೆ ಎಂಬುದನ್ನು ಅರ್ಜುನ ಗೋಳಸಂಗಿ ಅವರು ಅಭಿಪ್ರಾಯ ಪಡುತ್ತಾರೆ.

ಅಂಗಾರಕ: ಹಂದಿಯ ರೂಪವನ್ನು ತಾಳಿದ ಒಬ್ಬ ಅಸುರ. ಈತ ತನ್ನ ಮಗಳಿಂದಲೇ ಕೊಲ್ಲಲ್ಪಟ್ಟು ಕಥಿಸಾರಿಸ್ಯಾಗರದ ಕಥಾಮುಖ ಲಂಬಿಕ್‌ದಲ್ಲಿ ಬರುವ ಕಥೆ ಹೀಗಿದೆ(ಪು.೫-೬).

ಹಂದಿಗಳ ಉಲ್ಲೇಖ

ಕರ್ನಾಟಕ ರಾಜ್ಯವು ಪ್ರಾಣಿ ವರ್ಗ ಮತ್ತು ಸಸ್ಯ ವರ್ಗದ ಸಂಪದ್ಭರಿತ ಪರಂಪರೆಯನ್ನು ಹೊಂದಿದ್ದು, ಕರಾವಳಿ ಪ್ರದೇಶ ಅತಿ ಹೆಚ್ಚು ಕಾಡು ಹಂದಿಗಳಿವೆ ಎಂಬುದು ಕಂಡುಬರುತ್ತದೆ. ಪಶ್ಚಿಮ ಘಟ್ಟಗಳ ಶಿಖರ ಪ್ರದೇಶಗಳಲ್ಲಿ ಕಾಡು ಹಂದಿಗಳು ಎಲ್ಲ ಕಡೆಗೆ ಕಂಡುಬರುವವು. ಮಲೆನಾಡು ಪ್ರದೇಶದ ಎರಡನೆಯ ವನ್ಯಜೀವಿ ಸಾಂದ್ರೀಕರಣದ ಪ್ರದೇಶ ಎಂದು ಹೇಳಲಾಗಿದೆ. ಇಲ್ಲಿ ಕಾಡು ಹಂದಿಯ ಉಲ್ಲೇಖವಿದೆ. ಮೈಸೂರು ಪ್ರಸ್ಥಭೂಮಿಯ ಪಶ್ಚಿಮ ಅಂಚು ಸಹ್ಯಾದ್ರಿಯ ದಕ್ಷಿಣ ಶ್ರೇಣಿ, ನೀಲಗಿರಿ ಶ್ರೇಣಿ, ಬೆಟ್ಟಗಳು ಮತ್ತು ಬಿಳಿಗಿರಿರಂಗನಬೆಟ್ಟದ ಪೂರ್ವಕ್ಕೆ ಚಾಚಿ ಕೊಂಡಿರುವ ಬೆಟ್ಟದ ಸಾಲುಗಳಿಂದ ಆವೃತ್ತಗೊಂಡಿದ್ದು ಏರಿಳಿತಗಳಿಂದ ಮೈದಾನವಾಗಿದೆ. ಅದು ತೇವಭರಿತ ಮತ್ತು ಶುಷ್ಕ ಎಲೆ ಉದುರುವ ಕಾಡುಗಳಿಂದ ಆವೃತ್ತವಾಗಿದೆ. ದಕ್ಷಿಣ ಭಾರತದಲ್ಲಿಯೇ ಅತ್ಯಂತ ಹೆಚ್ಚು ಸಂಪದ್ಭರಿತವಾದ ವನ್ಯಜೀವಿ ಕೇಂದ್ರೀಕರಣವು ಈ ಪ್ರದೇಶದಲ್ಲಿದೆ ಎಂದು ಉಲ್ಲೇಖಿಸಲಾಗಿದೆ.

ಅರಣ್ಯ ಹೊಂದಿರುವ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆ ಪ್ರಾಣಿಗಳಿರುವುದು ಸಾಮಾನ್ಯ. ನೈಸರ್ಗಿಕವಾಗಿದ್ದ ಅರಣ್ಯದಲ್ಲಿ ಕಾಡುಹಂದಿಗಳನ್ನು ಕಾಣಬಹುದಾಗಿದೆ. ಮನುಷ್ಯ ಸಾಕಾಣಿಕೆ ಮಾಡಲು ಪ್ರಾರಂಭಿಸಿದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಂಡುಬರುತ್ತದೆ. ಊರಲ್ಲಿ ಬಿಟ್ಟು ಸಾಕುವವರುಂಟು ಮತ್ತು ಬಿಳಿ ಹಂದಿಗಳನ್ನು ಸಾಕುವವರು ಒಂದು ಹಟ್ಟಿ ಮಾಡಿಕೊಂಡು ಅಥವಾ ಗುಡಿಸಲು ನಿರ್ಮಿಸಿಕೊಂಡು ಸಾಕುವುದು ಇಂದಿಗೂ ನೋಡಬಹುದಾಗಿದೆ.

ಹಂದಿ ವ್ಯಾಪಾರ

ಕೊರವ ಸಮುದಾಯದಲ್ಲಿ ಹಂದಿಗಳನ್ನು ಸಾಕುತ್ತಾರೆ. ಇನ್ನು ಕೆಲವರು ಸ್ವಚ್ಛಂದವಾಗಿ ಊರಲ್ಲಿ ಬಿಡುತ್ತಾರೆ. ಹಂದಿ ಸಾಕುವುದರಿಂದ ಅವುಗಳಿಗೆ ಆಹಾರವನ್ನು ಹೊಟೇಲ್, ಶಾಲೆಯಲ್ಲಿನ

ಬಿಸಿಯೂಟ, ಹಾಸ್ಟೆಲ್‌ಗಳಲ್ಲಿ ದೊರೆಯುವ ಮೂಸರೆಗಳೇ ಹಂದಿಗಳಿಗೆ ಆಹಾರ. ಬೀದಿಗಳಲ್ಲಿ ಅಥವಾ ಊರಲ್ಲಿ ಬಿಟ್ಟ ಹಂದಿಗಳಿಗೆ ಆಹಾರ ಸಂಗ್ರಹಿಸುವುದಿಲ್ಲ. ಆದರೆ ಹಲವಾರು ರೋಗ ರುಜಿನೆಗಳಿಂದ ಬರುತ್ತಿರುವ ರೋಗಗಳಿಂದ ಹಂದಿಗಳನ್ನು ಸಾಯಿಸುವ ಕಾರ್ಯಗಳು ರಾಜ್ಯದಲ್ಲಿ ನಡೆಯುತ್ತಿದೆ. ಹಂದಿಯಿಂದಲೇ ರೋಗಗಳು ಬರುತ್ತವೆಂದು ಹಂದಿಗಳಿಗೆ ವಿಷ ಹಾಕಿ ಸಾಯಿಸುವ ಪ್ರಕ್ರಿಯೆ ಜಿಲ್ಲೆ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಇನ್ನೊಂದು ವಿಷಯವೆಂದರೆ ತಾವು ಸಾಕಿದ ಹಂದಿಗಳನ್ನು ಬೇರೆಯುವರು ಕಳ್ಳತನ ಮಾಡಿ ಲಾಭವನ್ನು ಪಡೆಯುತ್ತಿದ್ದಾರೆ ಎಂದು ಕೊಪ್ಪಳದ ಕರಿಯಪ್ಪನವರ ಅಭಿಪ್ರಾಯ. ಹಂದಿಯು ಕೊರವ ಸಮುದಾಯದ ಆದಾಯವಾಗಿದೆ. ಅದರಿಂದ ಬರುವ ಎಣ್ಣೆಯು ಪ್ರಾಣಿಗಳು, ವ್ಯಕ್ತಿಯ ರೋಗಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ.

ಕತ್ತೆ ವ್ಯಾಪಾರ: ಗಬ್ಬೂರಿನಲ್ಲಿ ಕತ್ತೆಗಳು ಎಲ್ಲೆಲ್ಲಿ ಸಿಗುತ್ತವೆಯೋ ಅವುಗಳನ್ನು ತೆಗೆದುಕೊಂಡು ಬಂದು ಆಂಧ್ರಕ್ಕೆ ಹೋಗಿ ಮಾರಾಟ ಮಾಡುತ್ತಾರೆ. ಆದರೆ ಹೈದ್ರಾಬಾದ್ ಕರ್ನಾಟಕದಲ್ಲಿ ಕತ್ತೆ ಸಾಕಾಣಿಕೆ ಕೊರವರಲ್ಲಿ ಕಾಣುವುದಿಲ್ಲ. ಆದರೆ ಬೀದರ್ ಜಿಲ್ಲೆಯ ಕಮಲಾನಗರದಲ್ಲಿ ಕತ್ತೆಗಳ ಸಾಕಾಣಿಕೆ, ವ್ಯಾಪಾರ ಮಾಡಲು ಸಾಕಾಣಿಕೆ ಕಾರ್ಯ ನಿರ್ವಹಿಸುತ್ತಿವೆ. ಮಾರಾಟ ಮಾಡುವಲ್ಲಿ ಕತ್ತೆ ಮಾಂಸವನ್ನು ಐನೂರು ರೂಪಾಯಿಗೆ ಮಾರುತ್ತಾರೆ. ಕತ್ತೆ ಮಾಂಸವನ್ನು ಆಂಧ್ರಪ್ರದೇಶದಲ್ಲಿ ತಿನ್ನುವವರು ಇದ್ದಾರೆ. ಇಲ್ಲಿ ಕುರಿ ಮಾಂಸವನ್ನು ತಿನ್ನುವಂತೆ ಆಂಧ್ರಪ್ರದೇಶದಲ್ಲಿ ಮಾಂಸ, ಕತ್ತೆಯ ತಲೆಯನ್ನು ಮಾರಾಟ ಮಾಡಿಕೊಂಡು ಬರುತ್ತಾರೆ. ಇದಕ್ಕೆ ಘಡ್ಡಿಕುರ ಎಂದು ಕರೆಯುತ್ತಾರೆ ಎಂದು ದುರುಗಪ್ಪ ಅವರು ತಿಳಿಸುತ್ತಾರೆ.

ಕತ್ತೆ ವ್ಯಾಪಾರದಲ್ಲಿ ಸಂತೆಯಲ್ಲಿ ಕತ್ತೆಗಳನ್ನು ಮಿಕ್ಕ ಕುರಿ ವ್ಯಾಪಾರ ಮಾಡುವಂತೆ ಕತ್ತೆ ಮಾರಾಟ ಮಾಡುತ್ತಾರೆ. ಇಂದು ಕತ್ತೆಯನ್ನು ಊರೂರು ಸುತ್ತಿಸುತ್ತಿ ಕತ್ತೆಯ ಒಂದು ಲೋಟ ಹಾಲಿಗೆ ೫೦ ರೂಪಾಯಿಗಳನ್ನು ನೀಡಿ ಕುಡಿಯುತ್ತಿರುವುದುಂಟು. ಕೆಮ್ಮು, ಕಪ್ಪಾ ಬಂದರೆ ಹಾಲನ್ನು ಕುಡಿಸಿದರೆ ಕಡಿಮೆಯಾಗುತ್ತದೆ ಎಂದು ಹಿರಿಯರು ತಿಳಿಸುತ್ತಾರೆ. ಇಂದಿಗೂ ಕತ್ತೆಯ ಹಾಲು ಮಾರಾಟ ಮಾಡುತ್ತಿರುವುದು ಕಾಣುತ್ತೇವೆ.

ಸಿಂಬೆ: ಪಾತ್ರೆಗಳ ತಳಕ್ಕೆ ಇಡುವ ವಸ್ತು. ಹೊರೆ ಹೊರಲು ತಲೆಯ ಮೇಲೆ ಇಟ್ಟುಕೊಳ್ಳುವ ಸುರುಳಿ, ಸುತ್ತು, ಸಿವುಡು, ಇರುಕೆ, ಏಳುತಲೆ ಸರ್ಪ, ಸಿಂಬಿ ಹಿಡುವ ಮಂಕ್ರಿಗೆ ಎಂದೂ ರೇಣುಕಾ ಎಲ್ಲಮ್ಮನ ಕತೆಯಲ್ಲಿ ಉಲ್ಲೇಖವಿದೆ.

ಕಂಬದ ಮೇಲೆ ಕೂರಿಸುವ ಮರದ ಸಣ್ಣ ದಿಂಡು; ಕಂಬ ಇದ್ದರೆ ಸಿಂಬಿ ಇಲ್ಲದೆ ಇದ್ದರೆ ಸಿಂಬಿಗೆಲ್ಲ ಇಂಬು ಎಂದು ದೊಡ್ಡಮನೆಯಲ್ಲಿ ಉಲ್ಲೇಖಿಸುತ್ತಾರೆ(ದೊಡ್ಡಮನೆ, ಪು.೫೫೭). ಸಮುದಾಯಗಳು ಒಂದಕ್ಕೊಂದು ಆಧಾರ ಸ್ತಂಭಗಳು. ಒಬ್ಬರು ಇನ್ನೊಬ್ಬರಿಗೆ ಸಹಾಯಕರು

ಎಂಬುದು ತಿಳಿದುಬರುತ್ತದೆ. ಕೊರವರು ಒಕ್ಕಲಿಗರಿಗೆ ಬೇಕಾಗುವ ವಸ್ತುಗಳನ್ನು ತಯಾರಿಸಿಕೊಡುತ್ತಿದ್ದರು. ಸಿಂಬೆ ಒಂದು ಆಧಾರವಾದರೆ ಇನ್ನು ಹಲವು ಸಮುದಾಯಗಳು ಮಾಡುವ ಕಾಯಕವು ಶ್ರೇಷ್ಠವೆಂಬುದು ಸತ್ಯ. ಸಿಂಬೆ ಅಲಂಕೃತವಾದ ದುಂಡನೆಯ ಚೊಂಬನ್ನು ಸಿಂಬೆಯಿಲ್ಲದೆ ತಲೆಯ ಮೇಲಿಟ್ಟುಕೊಂಡು ಕುಣಿಯುವ ನೈಪುಣ್ಯ ನೋಡುವವರನ್ನು ಬಎರಗುಗೊಳಿಸದಿರದು(ಸಿಂಬೆಯ ಹಾಕ್ಯಾನೆ ಗುಂಬಾದ ನಿಕ್ಯಾನೆ, ಧ್ವನಿಸುರಳಿ, ೧೯೩–೩).

ಬೇಟೆಯಾಡುವುದು

ಅಲೆಮಾರಿಗಳಿಗೆ ಅಥವಾ ಅದಿವಾಸಿಗಳಿಗೆ ಬೇಟೆಯು ಒಂದು ಪ್ರಧಾನ ವೃತ್ತಿ. ಬೇಟೆಯಾಡುವುದು ಕೊರವ ಸಮುದಾದಯಲ್ಲಿಯೂ ಕಂಡುಬರುತ್ತದೆ. ಇಂದು ಬೇಟೆ ನಿಷೇಧವಾಗಿರುವುದರಿಂದ ಸಣ್ಣ ಪುಟ್ಟ ಪಕ್ಷಿ–ಪ್ರಾಣಿಗಳನ್ನು ಬೇಟೆಯಾಡುವುದು ಕಂಡುಬರುತ್ತದೆ. ಕಾಡಿನಲ್ಲಿ ವಾಸಿಸುವಾಗ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಕೆಲ ಪ್ರಾಣಿಗಳನ್ನು ಹತೋಟಿಎಗೆ ತೆಗೆದುಕೊಂಡು ಸಾಕಲು ಪ್ರಾರಂಭಿಸಿದರು ಎಂಬುದು ತಿಳಿದುಬರುತ್ತದೆ. ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಾ ಪಶುಪಾಲಕರಾಗಿ, ಬೇಟೆಯಾಡುವುದು ಜೀವನೋಪಾಯಕ್ಕೆ ಅನುಸರಿಸಿದರು. ಅದನ್ನು ಇಂದಿನವರೆಗೂ ಉಳಿಸಿಕೊಂಡು ಬಂದಿರುವುದುಂಟು. ಇಂದಿನ ರಾಜಕಾರಣದಲ್ಲಿ ಅಥವ ಸರ್ಕಾರದ ನಿಯಮಗಳಲ್ಲಿ ಪ್ರಾಣಿಗಳ ಬಲಿ ನಿಷೇಧ ಕಾಯ್ದೆ ತಂದರು. ಕಾಡನ್ನು ಸಂರಕ್ಷಿಸುತ್ತಾ ಪ್ರಾಣಿಗಳನ್ನು ತಮ್ಮಗೆಷ್ಟು ಅಷ್ಟನ್ನೇ ಆಹಾರವಾಗಿ ಬಳಸುತ್ತಿದ್ದಾರೆ. ಆದರೆ ಇಂದು ಕಾಯ್ದೆಗಳ ಹೆಸರಿನಲ್ಲಿ ಕಾಡಿನಲ್ಲಿ ವಾಸಿಸುವ ಪ್ರಾಣಿಗಳನ್ನು ಬೇಟೆಯಾಡುತ್ತಿರುವುದನ್ನು ಗಮನಿಸುತ್ತಿಲ್ಲ.

ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ತಿನ್ನುವುದು ಸಾಮಾನ್ಯವಾದ ಸಂಗತಿಯಾದುದರಿಂದ ಅವುಗಳನ್ನು ಬೇಟೆಯಾಡುವ ತಂತ್ರಗಳನ್ನು ತಲೆಮಾರಿನಿಂದ ತಲೆಮಾರಿಗೆ ಬೆಳೆಸಿಕೊಂಡು ಬಂದಿರುವುದು ಪ್ರಾಣಿಗಳನ್ನು ಹಿಡಿಯಲು ಬಳಸುವ ಉಪಾಯಗಳು ಎಂದು ಕರೆಯಲಾಗಿತ್ತು. ಹಾರಾಡುವ ಪಕ್ಷಿಗಳನ್ನು ಹಿಡಿಯುವುದರ ಉಪಾಯವೇ ಬೇರೆಯಾಗಿತ್ತು. ಜೀವನದ ಒಂದು ಭಾಗವಾಗಿತ್ತು. ಇಂದು ನಿಜವಾಗಿ ಹೇಳಬೇಕಾದರೆ ಜನರ ಕಾಡು ಅನ್ಯೋನ್ಯ ಸಂಬಂಧ ಹೊಂದಿದ್ದರು ಎಂಬುದು ನಿಜ. ಆದರೆ ಮನುಷ್ಯನೆ ಮನುಷ್ಯನನ್ನು ಬೇಟೆಯಾಡುತ್ತಿರುವುದು ವಿಪರ್ಯಾಸ. ಇದು ಸಮುದಾಯದಿಂದ ಜನರಿಗೆ ತಿಳಿಯದಾಗಿದೆ.

ಆಹಾರವಾಗಿಯೇ ಬೇಟೆಯಾಡುವ ವೃತ್ತಿಯಾಗಿತ್ತು. ಇಂದು ಹಣಕ್ಕಾಗಿ ಬೇಟೆಯಾಡುವುದು ಒಂದು ಕೆಲಸವಾಗಿದೆ. ಬೇಟೆಯಾಡುವುದು ಅಜ್ಜನ ಕಾಲಕ್ಕೆ ನಾಶವಾಯಿತು ಎನ್ನಬಹುದು. ಮೊಲ, ಜಿಂಕೆ, ಮುಳ್ಳುಹಂದಿ, ಚಿಪ್ಪಂದಿ, ಕಾಡುಬೆಕ್ಕು, ಬೆಕ್ಕು, ಮುಂಗಸಿ, ಅಳಿಲು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇಂದು ಕಟ್ಟಡದ ಸಮೀಪ ದೊರೆಯುವ ಉಡ, ಬೆಕ್ಕು, ಮುಂಗಿಸಿ, ಅಳಿಲುಗಳನ್ನು ಕೆಲವರು ತಿನ್ನುವುದುಂಟು.

ಗೌಬುಗ, ಪಾರಿವಾಳ, ಬೆಳವನಹಳ್ಳಿ, ಸಂಬಾರಕಾಗೆ(ರತ್ನಪಕ್ಷಿ) ಬಾವುಲಿ ಮೊದಲಾದವುಗಳು ನಮ್ಮಜ್ಜನ ಹತ್ತಿ ಕಣ್ಣಿ, ಪಾಜಿ, ಉಳ್ಳಬಿಲ್ಲುಗಳನ್ನು ಇರುವುದು ನೋಡಿದೆ. ಇಂದು ಕಣ್ಮರೆಯಾಗುತ್ತಿದೆ. ನಾನು ಎರಡು ಮೂರು ತರಗತಿಯಲ್ಲಿ ಓದುತ್ತಿರುವಾಗ ಅಜ್ಜ ಸಹೋದರ ಜೊತೆ ಬೇಟೆ ಹೋಗಿರುವುದುಂಟು. ನನ್ನಗಿಂತ ಅಣ್ಣ, ಅಕ್ಕ, ಮಾಮ ಹೆಚ್ಚು ಸ್ಥಳೀಯ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಿದ್ದೆವು.

ಸಿಂಬಿ ಬಗ್ಗೆ ಹೆಂಡರಿಬ್ಬರನಾದ ಏಡಿಯ ಮುಳ್ಳಾದ

ಕೋಡಿಗನಾದ ಕೊರವಾದ ಬಾಲೆಯ

ಮಾಡಿಟ್ಟ ಸಿಂಬಿ ಅರಿವ್ಯಾದ

ಇದರಲ್ಲಿ ಇಬ್ಬರು ಹೆಂಡತಿಯರಿರುವ ಕೊರವನ ಜೀವನ ಸ್ಥಿತಿಯನ್ನು ಹೇಳುವುದರೊಂದಿಗೆ ಕೊರವರು ಸಿಂಬಿ ಮಾಡುವುದುಂಟು ಗಂಡಸರು ಅಡವಿಗೆ ಹೋಗಿ ಕಾಡಿನಲ್ಲಿ ಬೆಳೆಯುವ ಬಳ್ಳಿಗಳಿಂದ ಸಿಂಬೆಯನ್ನು ತಯಾರಿಸಲಾಗುತ್ತದೆ.

ವ್ಯಕ್ತಿಗೆ ಅನುಗುಣವಾಗಿ ಆರ್ಥಿಕಸ್ಥಿತಿಯನ್ನು ಸುಧಾರಿಸಲು ಹಲವಾರು ಕೆಲಸ ಮಾಡಲಾಗುತ್ತಿತ್ತು. ಅವು ಕುಕ್ಕೆ ಕೊರಮರ, ದಬ್ಬೆ ಕೊರವರು, ಕುಂಚಿ, ಕೊಂಚೆ ಕೊರವರು, ಉಪ್ಪು ಕೊರವರು, ಸನಾದಿ ಕೊರವರು, ಹಗ್ಗ ಕೊರವರು, ಚಾಪೆ ಕೊರವರು ಇನ್ನು ಮುಂತಾದವುಗಳ ಹೆಸರುಗಳು ಮುಂದಿನ ಪೀಳಿಗೆಗೆ ಚಿತ್ರಗಳ ಮೂಲಕ ತಿಳಿಸುವ ಅನಿವಾರ್ಯತೆ ಬರುವುದು.

ಅಧ್ಯಾಯ: ಐದು

ಕಲೆ ಮತ್ತು ಸಾಹಿತ್ಯ

ಅಧ್ಯಾಯ: ಐದು

ಕಲೆ ಮತ್ತು ಸಾಹಿತ್ಯ

ಜನಪದ ಕಲೆಯು ಅಥವಾ ಸಮುದಾಯದ ಕಲೆಯು ಜೀವನೋಪಾಯದ ಆಧಾರವಾಗಿದ್ದು, ಆಧುನಿಕತೆ ಜೀವನಕ್ಕೆ ನೆರವಾಗುತ್ತಿದೆ. ವಿದ್ಯೆಯು ಕಲಿಯಲು ಶಿಕ್ಷಣವು ಅನುವು ಮಾಡಿಕೊಡವ ಒಂದು ಸಂಸ್ಥೆಯಾದರೆ, ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ಅಥವಾ ಜ್ಞಾನವನ್ನು ನಿರ್ಮಿಸುವುದು. ಆದರೆ ಸಮುದಾಯದ ಕಲೆಯು ಜೀವನದ ಮೌಲ್ಯಗಳನ್ನು ತಿಳಿಸಿ ಹೇಳುತ್ತದೆ. ಕಲೆ–ಶಾಸ್ತ್ರ–ಜಾನಪದ–ಅಭಿಜಾತ–ದೇಸಿ–ಮಾರ್ಗ, ಪರಕೀಯ–ಸ್ವಕೀಯ, ಪೌರ್ವಾತ್ಯ–ಪಾಶ್ಚಾತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿ ಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಅಭಿವ್ಯಕ್ತಿಯನ್ನು ತಿಳಿಸುವಂತಹದ್ದು. ಜನಪದರು ತಿಳಿಸುವ ಪರಿ, ಅಭಿವ್ಯಕ್ತಿ, ಮುಗ್ಧತೆ ಎಲ್ಲವೂ ಎದ್ದು ಕಾಣುತ್ತದೆ. ಮುಂದಿನ ಪೀಳಿಗೆಗೂ ಅದು ಮುಂದು ವರೆಯುತ್ತದೆ. ಆದರೆ ಜಾಗತೀಕರಣದ ಸಂದರ್ಭದಲ್ಲಿ ಸಮುದಾಯದ ಕಲೆಯು ಅವರ ಬದುಕಿನ ಸ್ಥಿತಿಯೂ ಅಧೋಗತಿಗೆ ತಳುತ್ತಿರುವುದು ವಿಪರ್ಯಾಸವೇ ಎನ್ನಬೇಕು.

ಜಾಗತೀಕರಣದ ಸಂದರ್ಭಕ್ಕನುಗುಣವಾಗಿ ಕಲೆಯನ್ನು ಬಳಸಿಕೊಳ್ಳುತ್ತಾ ಸಮುದಾಯ ಸ್ಥಿತಿಯನ್ನು ಯಾವ ರೀತಿಯಲ್ಲಿ ರೂಪಿಸಿಕೊಳ್ಳಬೇಕೆಂದು ತಿಳಿಯುವ ಅಗತ್ಯವಿದೆ. ನಾಡಿನ ಸಂಸ್ಕೃತಿಯ ಸಾಮರ್ಥ್ಯಕ್ಕೆ ಜನಪದ ಕಲೆಗಳೇ ಆಧಾರ. ಇಡೀ ಸಮುದಾಯ ಕಲೆಯ ಸೃಷ್ಟಿಯಲ್ಲಿ ಕಲಾನುಭವದಲ್ಲಿ ಹಾಗೂ ಅದರ ಪ್ರಯೋಗದಲ್ಲಿ ಭಾಗವಹಿಸುವುದರ ಜೊತೆಗೆ ಕಲೆಯ ಆರಾಧನೆ, ಆಚರಣೆ ಹಾಗೂ ನಂಬಿಕೆಗಳಲ್ಲಿ ಗಾಢವಾದ ವಿಶ್ವಾಸವನ್ನು ಇಟ್ಟುಕೊಂಡಿರುವ ಸಂಗತಿ ಅಪೂರ್ವವಾದುದು ಎಂಬುದನ್ನು ಡಾ.ಚಂದ್ರಶೇಖರ ಕಂಬಾರರು ತಿಳಿಸುತ್ತಾರೆ. ಬದುಕಿನ ಕಲೆಯನ್ನು ಬಳಸಿಕೊಂಡು ಜೀವಿಸುತ್ತಿರುವ ಸಮುದಾಯಗಳೇ ಅಧಿಕ. ಅದರಲ್ಲಿಯೂ ಮಹಿಳೆಯು ಜನಪದ ಕಲೆಯಲ್ಲಿ ಜಾಣ್ಮೆಯಿಂದ ಸಬಲೀಕರಣವಾಗಲೂ ಕೊರವಂಜಿ ಕಲೆಯನ್ನು ರೂಢಿಸಿಕೊಳ್ಳುವುದನ್ನು ಕಾಣುತ್ತೇವೆ.

ಮನುಷ್ಯನ ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಆದ್ದರಿಂದಾಗಿ ಕರ್ನಾಟಕದಲ್ಲಿರುವ ಕಲೆಗಳು ಹೆಚ್ಚು ವೈವಿಧ್ಯಮಯವಷ್ಟೇಲ್ಲ. ಸಂಖ್ಯೆಯಲ್ಲಿಯೂ ಅಧಿಕವಾಗಿರುವುದು ಕಂಡುಬರುತ್ತದೆ. ಆಯಾ ಪ್ರಾದೇಶಿಕ ಹಿನ್ನೆಲೆಗನುಗುಣ ವಾಗಿ ಕಲೆಯ ವೈಶಿಷ್ಟ್ಯತೆಯನ್ನು ಕಾಣಲು ಸಾಧ್ಯ. ಧಾರ್ಮಿಕ ಕಲೆ, ಮನರಂಜನಾ ಕಲೆ, ಅಲೆಮಾರಿ ಕಲೆ, ರಂಭೂಮಿ ಕಲೆ, ಲೌಕಿಕ ಕಲೆ ಇತ್ಯಾದಿಗಳನ್ನು ಗುರುತಿಸಬಹುದು. ಕೊರವಂಜಿ ಕಲೆಯು ಹಿಂದೆ ರಾಜನಿಗೆ ಭವಿಷ್ಯ ಹೇಳುತ್ತಾ ಜನಸಾಮಾನ್ಯರ ಮನೋಭಾವನೆಗೆ ಅನುಗುಣವಾಗಿ ಮನೋವೈದ್ಯನಾಗಿ ಕೆಲಸ ಮಾಡುತ್ತಿದ್ದಳು. ಇಂದು ಧಾರ್ಮಿಕ ಕಲೆಯಾಗಿ ಮಾತ್ರ ಕಾಣುತ್ತೇವೆ.

ಅನಾದಿ ಕಾಲದಿಂದಲೂ ಮಾನವನು ತನ್ನ ಬದುಕಿಗೆ ಅಗತ್ಯವೆನಿಸಿದ ಅನೇಕ ವಸ್ತುಗಳನ್ನು ಸ್ವತಃ ತಯಾರಿಸಿ ಬಳಸುತ್ತಾ ಬಂದಿದ್ದಾನೆ. ಅಂತಹ ಉಪಯೋಗಿ ವಸ್ತುಗಳ ತಯಾರಿಕೆಯಲ್ಲಿ ತನ್ನ ಸೃಜನಶೀಲ ಮನಸ್ಸನ್ನು ದುಡಿಸಿಕೊಂಡಿದ್ದಾನೆ. ಅಲ್ಲದೆ ಅವುಗಳನ್ನು ಕಲಾತ್ಮಕವಾಗಿಯೂ ರೂಪಿಸಿಕೊಂಡಿದ್ದಾನೆ. ಮಾನವ ಕಲೆಗಾಗಿ ಕಲೆಯಲ್ಲಿ ರೂಪಿಸುವುದಕ್ಕೆ ಮೊದಲೇ ಅದನ್ನು ಬದುಕಿನ ಅವಿಭಾಜ್ಯ ಅಂಗವಾಗಿಯೇ ರೂಪಿಸಿಕೊಂಡಿದ್ದಾನೆ. ಪ್ರಜ್ಞಾಪೂರ್ವಕವಾಗಿಯೇ ಕಲೆ ದೈನಂದಿನ ವ್ಯವಹಾರಿಕ ಲೋಕದೊಳಗೆ ತಲೆ ಹಾಕಿರುವುದು ನಮ್ಮ ಅನೇಕ ಪಾರಂಪರಿಕ ಕಲೆಗಳನ್ನು ಗಮನಿಸಿದರೆ ವೇದ್ಯವಾಗುತ್ತದೆ(ಕರಕುಶಲ ಕಲೆಗಳು ಪ್ರಸ್ತಾವನೆ, ಹಿ.ಚಿ.ಬೋರಲಿಮಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦). ನಂತರ ಮಾನವ ತನ್ನ ಬುದ್ಧಿಯನ್ನು ಉಪಯೋಗಿಸಿ ಕೈಗಳ ಕೌಶಲದಿಂದಲೇ ತಯಾರಾಗುತ್ತಿದ್ದ ವಸ್ತುಗಳಿಗೆ ಮಾರುಹೋಗ ತೊಡಗಿದರು. ಇದರಿಂದ ನಮ್ಮ ಪೂರ್ವಜರಿಗೆ ಇರುವ ಕಲಾಪ್ರಜ್ಞೆಯೂ ಸ್ಪಷ್ಟವಾಗುತ್ತದೆ. ಬುಡಕಟ್ಟು ಜನರು ಸರ್ವಚೇತನವಾದಿಗಳು, ಪ್ರಕೃತಿಯಲ್ಲಿರುವ ಕಲಿಕೆಗೆ ಅವರಿಗೆ ಪಾಠ. ನಿಸರ್ಗದಿಂದಲೇ ತಮ್ಮ ಕಲೆಗಳನ್ನು ಕಲಿತದ್ದು ಎಂಬುದು ತಿಳಿದುಬರುತ್ತದೆ.

ಸಮುದಾಯದ ಕುಶಲ ಕಲೆಗಳಿಂದ ಸಮುದಾಯದ ಪರಂಪರೆ ಅಥವಾ ಚಾರಿತ್ರಿಕ ಅಂಶವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಸಮುದಾಯದ ಕಲೆಗಳ ವಸ್ತುಗಳ ಹುಟ್ಟು ಮತ್ತು ಉಪಯೋಗ ಜನಪದದ ನಂಬಿಕೆಗಳ ಮಹತ್ವ ಅರಿಯುವಂತಹದ್ದಾಗಿದೆ. ಪ್ರಕೃತಿಯ ಸೌಂದರ್ಯವನ್ನು ಕಂಡು ಕರಕುಶಲ ವಸ್ತುವಿನ ರಚನೆಗೆ ಪ್ರೇರಣೆಯಾಗಿರುವುದುಂಟು. ಗುಬ್ಬಿ ಗೂಡು ಕಟ್ಟುವಂತೆ ಮನುಷ್ಯನು ತನ್ನ ಬುದ್ಧಿಶಕ್ತಿಯಿಂದ ಬಳಸಿ ಇಂತಹ ಕರಕುಶಲತೆಯನ್ನು ಕಂಡುಕೊಂಡಿದ್ದಾನೆ. ಇಂತಹ ಕಲೆಗಳು ಸಮಕಾಲೀನ ಸಂದರ್ಭದಲ್ಲಿ ಆಧುನಿಕತೆಯ ತಂತ್ರಜ್ಞಾನದ ವ್ಯವಸ್ಥೆಯು ಪಾರಂಪರಿಕ ಕಲೆಯನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ ಮತ್ತು ಸಮುದಾಯ ಸಾಮಾಜಿಕ ಜೀವನವು ಯಾವ ರೀತಿಯಲ್ಲಿದೆ ಎಂಬುದು ತಿಳಿದುಬರುತ್ತದೆ. ಕೌಶಲ್ಯ ಅಂದರೆ ದಕ್ಷತೆ, ನೈಪುಣ್ಯ, ಪರಿಣಿತಿ, ಪ್ರೌಢಿಮೆ, ಚಾಕಚಕ್ಯತೆ, ಕುಶಲ, ಹಸ್ತಕೌಶಲ,

ಕೌಶಲ್ಯ ಚಾತುರ್ಯ, ಜಾಣತನ, ಕೈಚಳಕ ಎಂದೂ ಕರೆಯುತ್ತಾರೆ. ಇಂತಹ ಕೌಶಲ್ಯವುಳ್ಳ ಒಂದು ಸಮುದಾಯವು ಕೊರವ ಸಮುದಾಯ. ಸಮುದಾಯದ ಅನನ್ಯತೆಯನ್ನು ಗುರುತಿಸಲು ಕಲೆಗಳು ಸಹಾಯಕವಾಗುತ್ತದೆ.

ಕಲೆಗಳ ಬಗೆಗೆ ಹೇಳುವಾಗ ಅರವತ್ತು ನಾಲ್ಕು ಕಲೆಗಳು ಎಂಬ ಮಾತು ಬರುತ್ತದೆ. ನಮ್ಮ ನಿತ್ಯ ಬದುಕಿನಲ್ಲಿ ಒಂದಿಲ್ಲೊಂದು ರೂಪದಲ್ಲಿ ಕಲೆಗಳು ಪ್ರಕಟವಾಗುತ್ತಿರುತ್ತವೆ. ಉಪಯುಕ್ತ ಕಲೆಗಳಲ್ಲಿ ಕರಕುಶಲ ಕಲೆಯು ಒಂದು ಸಾಂಪ್ರದಾಯಿಕ ದೃಷ್ಟಿಯೂ ಒಂದು ಬಗೆಯದು. ಅದು ಕರಕುಶಲ ಕಲೆಗಳ ಉಗಮ ದೈವಿ ಮೂಲವಾದುದು ಎನ್ನಲಾಗುತ್ತದೆ. ಮನುಷ್ಯರು ಕಾಡಿನಲ್ಲಿ ಸಂಚರಿಸುತ್ತಿರುವಾಗ ಅವರ ಬುದ್ಧಿ ಪರಿಸರ ಪರಿಕರಗಳನ್ನು ಬಳಸಿಕೊಂಡು ಬಂದಿರುವಂತಹಾಗಿದೆ. ಕರಕುಶಲ ಕಲೆಗಳ ವಿಕಾಸಕ್ಕೂ ಮಾನವ ಬುದ್ಧಿ ಭಾವನೆಗಳ ಬೆಳವಣಿಗೆಗೂ ನೇರ ಸಂಬಂಧವಿದೆ.

"ಬಹುಶಃ ಮಾನವನ ಸಾಂಘಿಕ ಜೀವನದ ಪ್ರಾರಂಭಿಕ ದಿಸೆಯಲ್ಲಿಯೇ ಕರಕುಶಲಗಾರ ಅಸ್ತಿತ್ವಕ್ಕೆ ಬಂದನೆನ್ನಬಹುದು. ಅದಕ್ಕೂ ಮೊದಲಿನ ಒಬ್ಬಂಟಿ, ಅನಂತರದ ಕುಟುಂಬ, ಗುಂಪು ಜೀವಿಯ ಹಂತದಲ್ಲಿ ತಮತಮಗೆ ಬೇಕಾದ ವಸ್ತು ಪಾತ್ರೆ, ಸಾಧನಗಳನ್ನು ಅಗತ್ಯಗಳಿಗೆ ಅನುಗುಣವಾಗಿತಾನೆ ತಯಾರಿಸಿಕೊಳ್ಳುತ್ತಿದ್ದಿರಬೇಕು. ಬಹಳವಾದರೆ ಆಗ ಪರಸ್ಪರರು ಸಹಕರಿಸು ತ್ತಿದ್ದಿರಬಹುದು. ಇಂಥ ಸಂದರ್ಭದಲ್ಲಿ ಒಬ್ಬನು ಇನ್ನೊಬ್ಬನಿಗಿಂತ ಅಥವಾ ಇನ್ನುಳಿದವರಿಗಿಂತ ಕೆಲಸದಲ್ಲಿ ಕುಶಲಿ ಎಂದು ಕಂಡುಬಂದಾಗ ಅಥವಾ ಕೆಲಸವನ್ನು ಅವನಿಗೆ ಒಪ್ಪಿಸಿಕೊಟ್ಟಿರುವುದು ಸಹಜವಾಗಿದೆ. ಇಂತಹ ಸಂದರ್ಭವೇ ಅವನ ಗುಂಪಿನ ಅಥವಾ ಗ್ರಾಮದ ಇತರರಿಗಿಂತ ಹೆಚ್ಚು ಕುಶಲತೆ ಸಾಧಿಸಲು ಸಾಧ್ಯವಾಗಿಸಿರಬಹುದು. ಹೀಗೆ ತಾನು ಸಾಧಿಸಿದ ಕುಶಲತೆಯಿಂದ ಸಾಮೂಹಿಕ ಜೀವನ ಅಗತ್ಯಗಳನ್ನು ಪೂರೈಸಿಕೊಡುತ್ತಾ ಬಂದುದೇ ಕುಶಲಕಲೆಗಳು ಹಾಗೂ ಕುಶಲ ಕಲೆಗಾರರು ಅಸ್ತಿತ್ವಕ್ಕೆ ಬರಲು ಕಾರಣವಾಗಿರಬೇಕು(ಕರಕುಶಲ ಕಲೆಗಳು, ಹಿ.ಚಿ. ಬೋರಲಿಂಗಯ್ಯ, ಪು.೩).

Encyclopaedia of Indian Literature ಎಂಬ ಕೃತಿಯಲ್ಲಿ Amaresh Datta ಅವರು ಜಾನಪದ ಸಾಹಿತ್ಯ ತೆಲಗು ಎಂಬ ಲೇಖನದಲ್ಲಿ ಕೊರವಂಜಿಯ ಬಗೆಗೆ ಮಾಹಿತಿ ನೀಡಿದ್ದಾರೆ. "Kuravanji is a metophysical operatic playlet in which Jiva-sati represends Javatma and Kriyakanda represents the adions indulged in by creatares singadu represents primeval nature, Kuravanji the gnostic enlightenment and singi the original Kinetic energy of the cosms. The fundamental tenets of religions are amusingly exponded through this dramatic medium. Kuravanji also refess to the female soothsayer ther cry 'eruka' can be translated into awarness. The arrival of Kuravanji on to the

stage is the most eagerly awarited and leasing feature in the play.She is particularly introduced the coming events of a pining lover. Kurvaniji has its counter part 'Kuratti-ppatta' in tamis and Karatti yattam in Malayalam Rajamohana 'Kuravanji and Koravani kattle date back to 17th century(P.1292)

ಕನ್ನಡ ಸಾಹಿತ್ಯಕ್ಕೆ ಪ್ರಥಮ ಕಾಣಿಕ ನೀಡಿದ ರಾಷ್ಟ್ರಕೂಟರ ಮಾನ್ಯಖೇಟ ಹೈದ್ರಾಬಾದ್ ಕರ್ನಾಟಕದ ಕಿರೀಟ. ಈ ಕಾಲದಲ್ಲಿ ನೃಪತುಂಗನ ಆಳ್ವಿಕೆಯಲ್ಲಿರುವ ಶ್ರೀವಿಜಯ ಬರೆದ ಕವಿರಾಜಮಾರ್ಗ ಮತ್ತು ವಡ್ಡಾರಾಧನೆ ಪದ್ಯಗದ್ಯಗಳೆರಡಕ್ಕೂ ದಾರಿದೀಪವಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಾಹಸಭೀಮ ವಿಜಯ ಅಥವಾ ಗದಾಯುದ್ಧವನ್ನು ಬರೆದವರು ರನ್ನ ಕವಿ. ಈ ನೆಲದಿಂದಲೇ ಹೆಸರುವಾಸಿ. ಹನ್ನೆರಡನೆಯ ಶತಮಾನ ಪ್ರಮುಖವಾಗಿ ವಚನ ಸಾಹಿತ್ಯಕ್ಕೆ ಮೀಸಲಾದದ್ದು. ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣದ ಕ್ರಾಂತಿಗೆ ನೆಲವೀಡಗಿತ್ತು. ಈ ನಾಡಿನ ಈ ದೇಶದ ಅಂದಿನ ಬುದ್ಧಿಜೀವಿಗಳಾದ ಶರಣರು, ವಚನಕಾರರಾಗಿ ಒಂದು ಸಮಾಜೋ-ಧಾರ್ಮಿಕ ಕ್ರಾಂತಿವೆಸಗಿದ್ದು, ಆ ಮೂಲಕ ಅಂತರ್ಜಾತಿಯ ಮದುವೆ ಮಾಡಿದ್ದು, ಜಗತ್ತಿನ ಇತಿಹಾಸದಲ್ಲಿ ನೆನಪಿಡುವ ಸಂಗತಿ.

ಹೈದ್ರಾಬಾದ್ ಕರ್ನಾಟಕದ ರಾಯಚೂರು ಜಿಲ್ಲೆ ದಾಸ ಸಾಹಿತ್ಯದ ತವರೂರು. ಜಗನ್ನಾಥ ದಾಸರು, ವಿಜಯದಾಸರು, ವಿಠ್ಠಲದಾಸರು, ಗೋನವಾರ ರಾಮದಾಸರು ಹೀಗೆ ಅನೇಕರು ದಾಸಸಾಹಿತ್ಯಕ್ಕೆ ಅಪಾರವಾದ ಕಾಣಿಕೆ ನೀಡಿದವರಲ್ಲಿ ಈ ಭಾಗದ ಸತ್ವಶಕ್ತಿ ಮತ್ತು ಸೊಬಗು ಗುರುತಿಸುವಂತಹದು. ಕವಿ ಲಕ್ಷ್ಮೀಶ ಕೂಡಾ ಈ ಪ್ರದೇಶಕ್ಕೆ ಸೇರಿದವರು. ಸುರಪುರ ತಾಲೂಕಿ ನಲ್ಲಿರುವ ದೇಶಪುರದವರು. ಹದಿನೇಳು ಮತ್ತು ಹತ್ತೊಂಬತ್ತನೆ ಶತಮಾನದ ಕತ್ತಲ ಯುಗದಲ್ಲಿ ಕೂಡ ತತ್ತ್ವಪದಕಾರ ನೆಲೆಯಾಗಿದ್ದು ದಾಸರ ಬಾಯಿಯಲ್ಲು ತತ್ವಪದಗಳ ಹಾಡುಗಳು ಹರಿದುಬರುತ್ತವೆ. ಹೈದರಾಬಾದ ಕರ್ನಾಟಕ ಪ್ರದೇಶವು ಯಾವ ಕಾಲದಲ್ಲಿ ಎಂಥಹ ಸಂದರ್ಭದಲ್ಲಿ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಹಿಂದೆ ಬಿದ್ದಿಲ್ಲ. ಆಧುನಿಕತೆಯ ಸಂದರ್ಭದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಅಭಿವೃದ್ಧಿ ದೃಷ್ಟಿಯಿಂದ ಹಿಂದೆ ಉಳಿದರೂ ಸಂಸ್ಕೃತಿ, ಸಿರಿವಂತಿಕೆ ಈ ಪ್ರದೇಶವನ್ನು ಗುರುತಿಸಬಹುದಾಗಿದೆ. ದಲಿತ ಬಂಡಾಯ ಸಂದರ್ಭದಲ್ಲಿ ಡಾ.ಹೆಚ್.ಟಿ.ಪೋತೆ, ಜಂಬಣ್ಣ ಅಮರಚಿಂತ, ರಾಜಶೇಖರ ನೀರಮಾನ್ವಿ, ಅಲ್ಲಮಪ್ರಭು ಬೆಟ್ಟದೂರ, ಡಾ.ಬಸವರಾಜ ಸಬರದ, ದಿ.ಜೋಳ ಬೆಂಡೆಪ್ಪ, ಬಾಬು ಬಂಡಾರಿಗಲ್, ಭರತರಾಜ ನಿಜಾಮತರ, ಬಿ.ಟಿ. ಲಲಿತಾನಾಯಕ, ಅಮರೇಶ ನುಗಡೋಣಿ, ಮುಕ್ತಾಯಕ್ಕ, ಈರಣ್ಣ ಕೋಸಂಗಿ ಇವರ ತುಂಬ ಗಮನಾರ್ಹವಾದ ಕೃತಿಗಳನ್ನು ತಂದಿದ್ದಾರೆ.

ಜನಪದ ಗೀತ ಕಲೆಗಳ ಏಕಮುಖಿಯಲ್ಲಿ, ಬಹುಮುಖಿಯಾದ್ದು ದಲಿತ ಹಿಂದುಳಿದ ಸಂವೇದನೆಯಿಂದ ಕೂಡಿದ್ದು, ಸಮುದಾಯದ ಸೃಷ್ಟಿಯಿಂದ ಹೊರಬಿದ್ದ ಕಲೆಗಳಾಗಿವೆ. ಜನಪದ ಜನ ಊದಿ ಬಾರಿಸಿ, ಒಡೆದು, ನುಡಿಸಿ, ಜಾನಪದ ಸಂಗೀತ ಸುಖ ಪಡೆಯುತ್ತಿದ್ದರೆಂದು ಎಚ್.ಟಿ.ಪೋತೆಯವರು ವ್ಯಕ್ತಪಡಿಸುತ್ತಾರೆ.

ಮಾನವನ ಸೃಷ್ಟಿಗಿಂತಲೂ ಪ್ರಕೃತಿಯ ಸೃಷ್ಟಿ ಅತ್ಯಂತ ಪ್ರಾಚೀನವಾದುದು. ಪ್ರಕೃತಿ ಹಾಗೂ ಮಾನವ ಸಂಬಂಧ ಅದ್ಭುತವೂ ಮತ್ತು ಸೋಜಿಗವೂ ಆಗಿದೆ. ಮಾನವರು ಹಿಂದೆ ಅನಾದಿಕಾಲದಲ್ಲಿ ಭಯ, ಭೀತನಾಗಿ ರಕ್ಷಣೆಯ ಮಾರ್ಗಕ್ಕಾಗಿ ತನ್ನ ಉಳಿವಿಗಾಗಿ ಹಾಗೂ ಶ್ರೇಯಸ್ಸಿಗಾಗಿ ಪ್ರಕೃತಿಯ ಮೊರೆ ಹೊಕ್ಕಿದ್ದಾನೆಂಬುದು ಸ್ಪಷ್ಟವಾಗುತ್ತದೆ. ಪ್ರತಿಯೊಂದು ಹಬ್ಬಗಳ ಆಚರಣೆಯ ಬಗೆ ಹೇಗೆ ಪ್ರಾರಂಭವಾಯಿತೆಂಬುದನ್ನು ಹೇಳುವುದು ಕಷ್ಟ ಸಾಧ್ಯವಾಗಿದೆ. ಅಸುರೀ ದಮನ ಮತ್ತು ದೈವೀ ವಿಕಾಸದ ಬಗೆಯನ್ನು ತಿಳಿಯಲು ಹಬ್ಬಗಳು ವಿಶಿಷ್ಟ ರೀತಿಯ ಅಚರಣೆಗಳಿಂದ ನಡೆದು ಬಂದಿದೆ. ಜನಪದವು ಸಂಪ್ರದಾಯಗಳನ್ನು ಅಂಧಶ್ರದ್ಧೆಯಿಂದ ನಂಬಿಕೊಂಡು ಬಂದಿದೆ. ಕಾಲದಿಂದ ಕಾಲಕ್ಕೆ ಅವುಗಳನ್ನು ಆಚರಿಸಿ ಜನಾಂಗದ ಪೀಳಿಗೆಗಾಗಿ ಹೊಸದಾಗಿ ಕೊಡುತ್ತಾ ಬಂದಿದೆ. ಈ ಸಂಪ್ರದಾಯಗಳ ಅರ್ಥ ತಿಳಿಯದಿದ್ದರೂ ಜನಮಾನಸದಲ್ಲಿ ಇಂದು ಜೀವಂತವಾಗಿ ಉಳಿದುಬಂದಿದೆ. ಪ್ರಕೃತಿಯ ವೈಚಿತ್ರ್ಯಗಳ ಹಿಂದೆ ದೈವಶಕ್ತಿಯ ಅದೃಶ್ಯ ಶಕ್ತಿ ಇರಬಹುದೆಂದು ಗ್ರಹಿಸಿ ಪಂಚಭೂತಗಳ ಆರಾಧನೆ ನಡೆಯುತ್ತದೆ.

ಕೊರವಂಜಿ: ಕೊರಚ ಒಂದು ಗುಡ್ಡಗಾಡು ಜನಾಂಗದ ಹೆಸರು ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ. ಇವರು ಬಿದಿರಿನಿಂದ ಬಾಚಣಿಗೆ ಮುಂತಾದ ಸಾಮಾನುಗಳನ್ನು ಮಾಡುತ್ತಾರೆ. ಇವರು ಕೊರವಂಜಿಗಳೆಂದೇ ಖ್ಯಾತರು. ಕಣಿ ಹೇಳುವುದು, ಹಚ್ಚೆ ಹೊಯ್ಯುವುದು, ಇವರ ವೃತ್ತಿ ಕೊರವರು ಕೊರಚರು(ಕೊರಸು) ಎಂದು ಕರೆಯುತ್ತಾರೆ.

ಕೊರತಿ: ಕೊರವರ ಹೆಣ್ಣು ಕೊರವ ಸ್ತ್ರೀ.

ಕೊರವ: ಕೊರಮ ಒಂದು ಅಲೆಮಾರಿ ಬುಡಕಟ್ಟು ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ. ಕೊರವರು, ಒಡ್ಡರು. ಇವರೆಲ್ಲ ಹಚ್ಚೆ ಹಾಕುವ ಕಾರ್ಯ ಮಾಡುತ್ತಾರೆ. ಒಂದು ಬಗೆಯ ಮೀನು.

ಕೊರವಂಜಿ ಕುಕ್ಕೆ: ಕಣಿ ಹೇಳುವಾಗ ಕೊರವ ಹೆಣ್ಣು ಉಪಯೋಗಿಸುವ ಬುಟ್ಟಿ, ಇದರಲ್ಲಿ ಆಕೆ ತಾನು ಮಾರಾಟ ಮಾಡುವ ವಸ್ತುಗಳನ್ನು ಇಟ್ಟುಕೊಂಡಿರುತ್ತಾಳೆ. ಜಾನಪದ ಲೋಕದಲ್ಲಿ ಕೊರವಂಜಿ ಹಾಡಿನ ಧ್ವನಿ ಸುರಳಿ ಮಾಡಲಾಗಿದೆ. "ಕೊರವಂಜಿ ಕುಕ್ಕೆಯ ತಲೆ ಮೇಲೆ ಹೊತ್ತು" ಎಂಬುದು.

ಕುಕ್ಕೆ: ಬಿದಿರಿನಿಂದ ಹೆಣೆದ ಬುಟ್ಟಿ, ಸೊಪ್ಪಿನ ಮಕ್ಕರಿ ಕುಕ್ಕೆ.

ಕುಕ್ಕೆ ಕೊರಮ: ಬುಟ್ಟಿ ಹೆಣೆಯುವ ಕೊರಮ ಜಾತಿಗೆ ಸೇರಿದವರು. ಕುಕ್ಕೆ ಕೊರಮರು, ಕರೆಗಾರರು, ಬೆಸ್ತರು, ಹಚ್ಚೆ ಹಾಕುತ್ತಾರೆ.

ಕುಕ್ಕೆ ಮಾರಮ್ಮ: ಬುಟ್ಟಿಯಲ್ಲಿ ಇಟ್ಟಿರುವ ಮಾರಿವಿಗ್ರಹ. ಕುಕ್ಕೆ ಮಾರಮ್ಮ ಪಟ್ಟಿಗೆ ಮಾರಮ್ಮ, ಇವರು ಮಾರು ಬಂದರೂ ರಾಶಿ ಕೊಟ್ಟು ಕಳಿಸುವುದು ಗೌಡರಿಗೆ ಬಂದ ಚಾಳಿ.

ಕುರುಮನ್: ಒಂದು ಜನಾಂಗ ಮತ್ತು ಅದಕ್ಕೆ ಸೇರಿದ ವ್ಯಕ್ತಿ ಕುರುಮರ.

ಕುರುವೆ ಹೆಣೆದ ಬುಟ್ಟಿ: ಚಿಕ್ಕ ಹೆಡಗ; ಕುರಿವೇಲಿ ಧಾನ್ಯ ತುಂಬಿಸು.

ಕೊರವಂಜಿ ಹಾಡು: ಕೊರವರ ಹೆಣ್ಣು ಕಣಿ ಹೇಳುವಾಗ ಹಚ್ಚೆ ಹೊಯ್ಯುವಾಗ ಹಾಡುವ ಪದ. ಕೊರವಂಜಿ ಹಾಡು ಜನಪದ ಸಾಹಿತ್ಯದಲ್ಲಿ ಉಜ್ವಲ ಸ್ಥಾನ ಪಡೆದುಕೊಂಡಿದೆ.

ವಿಜಯನಗರ ಸಾಮ್ರಾಜ್ಯದ ದಕ್ಷಿಣ ಭಾರತದ ಸಂಸ್ಕೃತಿಯು ಪ್ರಾಚೀನವಾಗಿದ್ದು ಸಂಗೀತ, ಸಾಹಿತ್ಯ, ವಾದ್ಯಗಾರಿಕೆ, ನೃತ್ಯ, ಮಾಗಳು, ದೇಶೀ ಎಲ್ಲ ಪ್ರಕಾರಗಳು ಆ ಕಾಲದಲ್ಲಿ ಸಮೃದ್ಧಿಯಾಗಿ ಬೆಳೆದಿರುವುದನ್ನು ಕಾಣುತ್ತೇವೆ.

"ದ್ಯಾರಿ ನಮ್ಮ ದ್ಯಾವರು ಬಂದರು
ಬನ್ನಿರೆ ನೋಡ ಬನ್ನಿರೆ
ಡೊಳ್ಳಿನ ಮೇಲಕೈಯ ಭರುಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಟಾಣ್ಯ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಯಾ"

ಎಂಬ ಜನಪದ ಮನೋಧರ್ಮವನ್ನು ಕನಕದಾಸರ ಪಾಂಡಿತ್ಯವನ್ನು ತಿಳಿಸುತ್ತದೆ.

ಕೊರವಂಜಿ ಕುಣಿತ: ಈ ರಾಜ ತನ್ನ ದ್ವಾರಗಳೊಳಗೆ ನಾಲ್ಕು ಸಾವಿರಕ್ಕೂ ಹೆಚ್ಚು ಸ್ತ್ರೀಯರನ್ನು ಹೊಂದಿದ್ದಾನೆ ಎಂಬುದಾಗಿ ಸಿವೆಲ್ ತಿಳಿಸುತ್ತಾನೆ. ಆದರೆ ಅವರೆಲ್ಲ ಸಂಗೀತ ಹಾಗೂ ನೃತ್ಯಗಾರ್ತಿಯರು. ಕಣಿ ಹಾಗೂ ಭವಿಷ್ಯನುಡಿಯುವ ಸ್ತ್ರೀಯರು ಎಂಬುದಾಗಿ ತಿಳಿದು ಬರುತ್ತದೆ. ಅಲ್ಲದೆ ಕಣಿ ಪುಟ್ಟಿ ಹಿಡಿದು ನರ್ತಿಸುತ್ತಿರುವ ಕೊರವಂಜಿಯ ಉಬ್ಬುಶಿಲ್ಪವೊಂದು ಮಾಲ್ಯವಂತ ರಂಗನಾಥ ದೇವಾಲಯದ ಮುಖ ಮಂಟಪದಲ್ಲಿ ಕಂಡುಬರುತ್ತದೆ. ರಾಜನಿಗೆ ಸಾಮ್ರಾಜ್ಯದ ಅಭಿವೃದ್ಧಿ, ಪ್ರಜೆಗಳ ಏಳಿಗೆ ಬಗೆಗೆ ವರದಿ ಸಲ್ಲಿಸಿ, ಮಾರ್ಗದರ್ಶನ ನೀಡುತ್ತಿದ್ದ ಪುರೋಹಿತಶಾಹಿ ಗಳಂತೆಯೇ ರಾಜನ ಕಷ್ಟ ಸುಖ ಮುಂದೆ ಆತನ ಆಡಳಿತದಲ್ಲಿನ ಸುಧಾರಣೆ, ಮಾರ್ಪಾಡುಗಳು,

ಜನಸಾಮಾನ್ಯರ ಅಭಿಪ್ರಾಯಗಳನ್ನು ಸಂಗ್ರಹಿಸುವ ಮೂಲಕ ರಾಜನಿಗೆ ಆತನ ಆಡಳಿತದ ಸುಸ್ಥಿತಿಯ ವಿಷಯದಲ್ಲಿ ಕಣಿ ಕೊರವಂಜಿಗಳ ಮಹತ್ವದ ಪಾತ್ರ ವಹಿಸುತ್ತಿದ್ದರು(ಪು.೯೧೫, ವಿಜಯನಗರ ಅಧ್ಯಯನ/ಶಾಸನಗಳು, ಪು.೨೧೫). ಈ ಉಲ್ಲೇಖವನ್ನು ಗಮನಿಸಿದಾಗ ಕೊರವ ಸಮುದಾಯದ ಮಹಿಳೆಯು, ಕಣಿ ಹೇಳುವ ಜೊತೆಗೆ ಗುಪ್ತಚಾರಿಯಾಗಿ ಕೆಲಸ/ಕಾರ್ಯ ಮಾಡುತ್ತಿದ್ದಳು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಸಾಮ್ರಾಜ್ಯದ ಆಗು-ಹೋಗುವಿನ ಬಗೆಗೆ ಕಾಳಜಿ ವಹಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಆಂಧ್ರ ಪ್ರದೇಶದಲ್ಲಿ ಎರಕಮ್ಮಳದೇವಿಯ ಪೂಜೆಯನ್ನು ವೈಭವಿಯುತವಾಗಿ ಮಾಡಲಾಗುತ್ತದೆ. ಎರಕ ಎಂದರೆ ಭವಿಷ್ಯ ಹೇಳುವುದು. ದೇವತೆ, ದಸರ ಹಬ್ಬದಂತೆ ಇಂದಿಗೂ ಎರಕುಲದೇವಿಗೆ ಪೂಜೆ ಪಡೆಯುತ್ತಾರೆ. ಅದಕ್ಕೆ ಉದಾಹರಣೆ ಎಂಬಂತೆ ಎರಕಮ್ಮದೇವಿ ವಿಶಾಖ ಪಟ್ಟಣ ಜಿಲ್ಲೆಯ ಶೃಂಗವಾರಪುರ ಕೋಟ ಗ್ರಾಮದಲ್ಲಿ ಸತಿಸಹಗಮನವಾಗಿರುವುದುಂಟು. ಇದರ ಬಗೆಯು ಅಧ್ಯಯನ ನಡೆಯಬೇಕಾಗಿದೆ.

ಕರ್ನಾಟಕದ ಜನಪದ ಕಲೆ ವಿಶಿಷ್ಟವಾದದ್ದು. ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ದೃಷ್ಟಿಯಿಂದ ಭಾರತೀಯ ಜನಪದ ಕ್ಷೇತ್ರಕ್ಕೆ ಕರ್ನಾಟಕವು ಮಹತ್ವದ ಕೊಡುಗೆಯನ್ನು ನೀಡಿದೆ. ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಹೆಚ್ಚಿಸುವಲ್ಲಿ ಹೈದರಾಬಾದ್ ಕರ್ನಾಟಕದ ಪಾತ್ರವೂ ಪ್ರಧಾನವಾಗಿದೆ. ಹೈದರಾಬಾದ್ ಕರ್ನಾಟಕದ ಭಾಗವು ಜನಪದ ಕಲೆಗಳ ಕಣಜ. ತುಂಬಾ ವೈವಿಧ್ಯತೆಯಿಂದ ಕೂಡಿದ ಪ್ರದೇಶ. ಹಿರಿಯ ಭಾಷೆಗಳ ಸಂಸ್ಕೃತಿಯನ್ನು ಹೊಂದಿದೆ. ಕನ್ನಡ, ತೆಲುಗು, ಮರಾಠಿ, ಉರ್ದು, ಹಿಂದಿ ಭಾಷೆಗಳ ಸಂಗಮದಿಂದಾಗಿ ಇಲ್ಲಿ ಕಲೆ ಸಾಹಿತ್ಯದಲ್ಲಿ ಒಂದೊಂದರ ಪ್ರಭಾವ ಇನ್ನೊಂದರ ಮೇಲಾದುದು ಸಹಜ. ತಮ್ಮ ತಮ್ಮ ಮೂಲದಿಂದ ಸಂಸ್ಕೃತಿ ಕಲೆಗಳನ್ನು ಗೌಣಗೊಳಿಸಿಕೊಳ್ಳದೆ, ಯಥಾವತ್ತಾಗಿ ಕಾಪಾಡಿಕೊಂಡು ಬಂದಿರುವುದು ಈ ಪ್ರದೇಶದ ವೈಶಿಷ್ಟತೆಯೇ ಎನ್ನಬೇಕು.

ವಾಸ್ತವವಾಗಿ ಜನಪದ ಕಲೆಗಳ ಬಳಕೆ ಜಾತಿ ಆಧಾರಗಳ ಮೇಲೆ ಅವಲಂಬಿಸಿರುತ್ತದೆ. ಕೊರವರು, ಹೊಲೆ ಮಾದಿಗರು, ಸವದಿಗರು ಅಲ್ಲದೆ ಹಿಂದುಳಿದ ಹಲವು ಪಂಗಡದವರು ಹೈದರಬಾದ್ ಕರ್ನಾಟಕದಲ್ಲಿ ಕಲೆಗಳನ್ನು ಉಳಿಸಿಬೆಳೆಸಿಕೊಂಡು ಬಂದಿದ್ದಾರೆ. ಆದರೆ ಜಾಗತೀಕರಣದ ಪ್ರಭಾವವು ಸಮುದಾಯದ ಮೇಲೆ ಬೀಳುವುದರಿಂದ ಕಲೆಯು ಅಳಿವಿನಂಚಿಗೆ ಸರಿಯುತ್ತದೆ. ಅನುಕರಣೆ ಮನುಷ್ಯನ ಗುಣವಾಗಿದೆ. ಕೊರವಂಜಿ, ಮೇಳಗಳು ಇಂದು ಜನಮನದಿಂದ ಬಹುದೂರ ಸರಿಯುತ್ತಿವೆ. ಜಾತಿಯ ಮಡಿವಂತಿಕೆಯ ಮನೋಭಾವನೆಯಿಂದ ಹೊರಬಂದು ಈ ಕಲೆಗಳಿಗೆ ಜೀವತುಂಬ ಬೇಕಾದುದು ತೀರ ಜವಾಬ್ದಾರಿಯ ಕೆಲಸವಾಗಿದೆ. ಇಂದು ಹಣದ ಆಸೆಯಿಂದ ಜನರ ಮೂಢನಂಬಿಕೆಯನ್ನು ಬಳಸಿಕೊಂಡು ಭವಿಷ್ಯ, ಜ್ಯೋತಿಷ್ಯ, ಪಂಡಿತರಿಂದ

ಮೋಸ ಹೋಗುತ್ತಿರುವ ಘಟನೆಗಳು ಇಂದಿನ ಸಂದರ್ಭದಲ್ಲಿ ಕಾಣಬಹುದಾಗಿದೆ. ಆದರೆ ಕೊರವಂಜಿ ಕಲೆಯು ಮನಶಾಂತಿಯನ್ನು ಸಮಾಜದ ಸಮಾಚಾರವನ್ನು ತಿಳಿಸುವ ಕಾರ್ಯವನ್ನು ಮಾಡತ್ತಿದ್ದಳು. ಇಂದು ಜಾತ್ರೆ, ಹಬ್ಬಗಳಲ್ಲಿ ಮಾತ್ರ ಕೊರವಂಜಿ ಕಂಡಬರುತ್ತಾಳೆ.

ಕಣಿ: ಭವಿಷ್ಯ ಕೊರವಂಜಿಯ ಹೇಳುವ ಕಣಿ ಹೇಳುವ ಕಣಿ ಎಂದು ಬೆಡಗಿನಿಂದ ಹಾಡುತ್ತಾ ಬರುತ್ತಾರೆ.

ಕಣಿಶಾಸ್ತ್ರ: ಭವಿಷ್ಯ ನುಡಿಯುವುದು, ಕಣಿಶಾಸ್ತ್ರವನ್ನು ಸಾಮಾನ್ಯವಾಗಿ ಹೇಳುವುದು ಯುಗಾದಿ ಕಳೆದ ಮೂರನೆ ದಿನ ಕಣಿಶಾಸ್ತ್ರ ಹೇಳಲಾಗುತ್ತದೆ ಎಂದು ಜಾನಪದ ಜಗತ್ತಿನಲ್ಲಿ ಉಲ್ಲೇಖಿಸಲಾಗಿದೆ.

ಕಣಿ ಕಡ್ಡಿ ಅಥವಾ ಕೊರವಂಜಿ ಕೋಲು: ಕೊರವಂಜಿಯವರು ಕಣಿ ಹೇಳುವಾಗ ಬಳಸುವ ಸಣ್ಣ ಕೋಲು

ಕಣಿಗೊಡೆ: ಕೊರವಂಜಿ ಗೂಡೆ, ಧಾನ್ಯ ಹಾಕಿಸಿಕೊಳ್ಳುವ ಬುಟ್ಟಿ, ಕೊರವಂಜಿ ಇವಳಲ್ಲಿ ಕಣಿ ಗೊಡೆ, ಕಣಗೋಲು ಮತ್ತು ಹಾಡಿನ ರೂಪದ ಪದಗಳನ್ನು ಹೇಳುತ್ತಾ ಬರುತ್ತಿದ್ದಳು. ಇಂದು ಕಣ್ಮರೆಯಾಗುತ್ತಿರುವುದುಂಟು.

ಕೊರವಂಜಿ: ಕಣಿ ಹೇಳುವ ಕೊರವರ ಹೆಂಗಸು. ಇವರು ಭವಿಷ್ಯವನ್ನು ಹಾಡಿನ ಧಾಟಿಯಲ್ಲಿ ಹೇಳುತ್ತಾರೆ. ಈಚಲುಗರಿಯಿಂದ ಮಾಡಿದ ಗಿಲಗಂಜಿ, ನೆಲವು, ಶಿಂಬಿ ಮೊದಲಾದ ವಸ್ತುಗಳನ್ನು ಮಾರಾಟ ಮಾಡುವರು ಮತ್ತು ಹಚ್ಚೆ ಹೊಯ್ಯುವರು. ಯಕ್ಷಿಣಿಗಾರರು, ಕೊವಂಜಿಯರು ಎಂದು ಜಾನಪದ ಜಗತ್ತು ಉಲ್ಲೇಖಿಸಲಾಗಿದೆ.

ಕೊರವಂಜಿ ಕೋಲಾಟ: ಕೊರವಂಜಿ ವೇಷದೊಡನೆ ಆಡುವ ಕೋಲಾಟವನ್ನು ಕೊರವಂಜಿ ಕೋಲಾಟ ಎನ್ನುತ್ತಾರೆ. ಒಂದು ಕಡೆ ನಾಲ್ಕು ಜನ ಇನ್ನೊಂದು ಸಾಲಿನಲ್ಲಿ ನಾಲ್ವರು ಎದುರು ಬದುರಾಗಿ ನಿಂತು ಕೋಲು ಹಾಕುತ್ತಾರೆ. ಸಾಲಿನಲ್ಲಿ ಇನ್ನಿಬ್ಬರ ರುಕ್ಮಿಣಿ ಮತ್ತು ಕೊರವಂಜಿಯ ವೇಷಧರಿಸಿ ಒಂದೊಂದು ತುದಿಯಲ್ಲಿರುತ್ತಾರೆ. ಕೊರವಂಜಿಯೇ ಇಲ್ಲಿ ಪ್ರಧಾನ ಪಾತ್ರವಾಗಿದೆ. ಪೂಜಾಕುಣಿತ, ಒನಕೆ ಕುಣಿತ, ಕೊರವಂಜಿ ಕುಣಿತವು ಒಂದು.

ಶ್ರೀ ಎಚ್.ವಿ.ನಂಜುಂಡಯ್ಯ ಮತ್ತು ಶ್ರೀ ಎಲ್.ಕೆ.ಅನಂತಕೃಷ್ಣ ಐಯ್ಯರ್ ಅವರ ಅಭಿಪ್ರಾಯದಂತೆ ಕೊರಚರು, ಕೊರವರು ಕೊರಮರು ಎಂದು ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಬುಡಕಟ್ಟು ಸಮುದಾಯದವರು, ಬೇಟೆಗಾರರು, ಕಣಿ ಹೇಳುವವರು, ಪಶುಪಾಲಕರು, ಬಟ್ಟೆ ನೆಯುವವರು, ಜೊತೆಗೆ ಕಳ್ಳತನ ಮಾಡುವವರಾಗಿದ್ದರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

Abbe duboie ಅವರು ಯುರೋಪಿನ ಜಿಪ್ಸಿ ಜನಾಂಗವನ್ನು ಹೋಲುವ ಈ ಬುಡಕಟ್ಟಿನ ಹೆಣ್ಣುಮಕ್ಕಳು ಹಚ್ಚೆ ಹಾಕುವುದರಲ್ಲಿ ನೈಪುಣ್ಯತೆ ಪಡೆದಿದ್ದರು, ಕಣಿ ಹೇಳುತ್ತಿದ್ದರು. ಕೊರಮ ಸ್ತ್ರೀಯರು ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ತಮ್ಮ ಉದ್ಯೋಗದ ಮುಖಾಂತರ ಕಣಿ ಹೇಳುವ(ಹಚ್ಚೆ ಹಾಕು) ಪ್ರಮುಖ ವಾಹಿದಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂಬುದು ತಿಳಿದುಬರುತ್ತದೆ. ಆಂಧ್ರಪ್ರದೇಶದಲ್ಲಿ ಎರಕವಾರು ಎಂದು ಕರೆಯುತ್ತಾರೆ. ಎರಕ ಎಂದರೆ ಜ್ಞಾನ ಅಥವಾ ಪರಿಚಯ ಎನ್ನು ಅರ್ಥವಿದೆ. ಕಣಿ ಹೇಳುವ ಜ್ಞಾನದಿಂದ ಎರಕಲವರಾಗಿ ಪ್ರಸಿದ್ಧರಾಗಿದ್ದಾರೆ. ಆದರೆ ಇಂದಿನ ಸಂದರ್ಭದಲ್ಲಿ ಕೊರವಂಜಿಯ ಬೇರು ಸ್ಥಿತಿಗತಿಗಳನ್ನು ನೋಡಿದಾಗ ಇತಿಹಾಸ ಪುಟಗಳಲ್ಲಿ ಮಹತ್ವ ಸ್ಥಾನವಿತ್ತು ಎಂದೂ ತಿಳಿದುಬರುತ್ತದೆ. ಆದ್ದರಿಂದಾಗಿ ಕೊರವಂಜಿಯ ಇತಿಹಾಸವನ್ನು ತೆರೆದು ನೋಡುವ ಅವಶ್ಯಕತೆ ಇದೆ.

E. Thurstan ಅವರು ಹೇಳುವಂತೆ "Old Tamil books refere to the Koravas as forture telles to kings and queens" ಇದರಿಂದ ತಿಳಿದುಬರುವುದೇನೆಂದರೆ ರಾಜಕಾರಣಿಯರಿಗೆ ಕಣಿ ಹೇಳುತ್ತಿದ್ದ ವಿಷಯ, ನಂತರದಲ್ಲಿ ಜನ ಸಾಮಾನ್ಯರಿಗೂ ಕಣಿ ಹೇಳುತ್ತಿದ್ದದ್ದು ತಿಳಿದುಬರುತ್ತದೆ. ಮಹಿಳೆಯರು ಸಾಂಪ್ರದಾಯಿಕವಾಗಿ ಕಣಿ ಹೇಳುವುದನ್ನು ಉಳಿಸಿಕೊಂಡು ಬಂದಿದ್ದಾರೆ.

ಕೊರವಂಜಿ ಎಂಬ ಹೆಸರು ದಕ್ಷಿಣ ಭಾರತದಲ್ಲೆಲ್ಲ ಚಿರಪರಿಚಿತವಾಗಿತ್ತು. ಈ ಸಮುದಾಯವು ಹೊಟ್ಟೆಪಾಡಿಗಾಗಿ ಮನೆಮನೆಗೆ ಹೋಗಿ ಭವಿಷ್ಯ ಹೇಳಿ, ದವಸ-ಧಾನ್ಯ ಮತ್ತು ಹಣವನ್ನು ಪಡೆಯುತ್ತಿದ್ದರು. ಪ್ರಾಚೀನ ಭಾರತದ ದಕ್ಷಿಣ ಭಾಗದಿಂದ ಬಂದವರು ಎಂಬುದು ಸ್ಪಷ್ಟವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಕೊರವಂಜಿಯು ನಿರ್ವಹಿಸಿಕೊಂಡು ಬಂದಿರುವ ಕಾರ್ಯ ಸಮಾಜದಲ್ಲಿ ಒಂದು ಸ್ಥಾನಪಡೆದಿದೆ ಎಂದು ತಿಳಿದುಬರುತ್ತದೆ. ಭಾರತೀಯ ಸಮಾಜದಲ್ಲಿ ಕೊರವರ ಸಂಸ್ಕೃತಿಯು ಎದ್ದು ಕಾಣುತ್ತದೆ. ಅಲೆಮಾರಿಗಳಾಗಿದ್ದ ಈ ಸಮುದಾಯ ನೆಲೆನಿಂತ ಜನಸಮುದಾಯ ವಾಗಿತ್ತು. ಆದಿವಾಸಿಗಳ ಜೀವನದ ಆಚಾರ ವಿಚಾರಗಳು, ನುಡಿ-ನಂಬಿಕೆಗಳು, ಬಡವನ ಬವಣೆ, ಶ್ರಮಜೀವನ ಗ್ರಾಮೀಣ ಬದುಕಿನ ಅಂಗವೇ ಆಗಿದೆ. ಸಾಮಾಜಿಕ ರಂಗದಲ್ಲಿ ಜನಸಾಮಾನ್ಯರ ಬದುಕಿಗೆ ನೆಮ್ಮದಿ ನೀಡುವ ಕಣಿ ಹೇಳುವ ಪ್ರಕ್ರಿಯೆಯಿಂದ ಜನರಿಗೆ ಮನೋರಂಜನೆ ನೀಡುವುದು ಮತ್ತು ಮನೋವೈದ್ಯರಾಗಿದ್ದರು ಎಂದರೆ ತಪ್ಪಾಗಲಾರದು. ಅಂದು ಬೆಟ್ಟಗುಡ್ಡಗಳಲ್ಲಿ ನೆಲೆಸುತ್ತ, ದನಕರುಗಳ ಪಾಲನೆ ಪೋಷಣೆ ಜೊತೆ ಜೊತೆಗೆ ಬೆತ್ತ ಬಿದಿರಿನ ಬುಟ್ಟಿಗಳನನ್ನು ಮಾಡುವ, ಕಣಿ ಹೇಳುವ, ಅಂತ್ರಕಟ್ಟುವ, ಹಚ್ಚೆ ಹಾಕುವ ಕೆಲಸಗಳನ್ನು ಕೊರವ/ಕೊರಚರು ಮೈಗೂಡಿಸಿಕೊಂಡು ಬಂದಿದ್ದಾರೆ. ಜನರಿಗೆ ಕಣಿ ಹೇಳುವುದರಿಂದ ಮನಸ್ಸಿಗೆ

ಮುದವನ್ನು ನೀಡಿತ್ತು, ಪರಿಹಾರವನನ್ನು ಉಂಟು ಮಾಡುತ್ತಿದ್ದರಿಂದ ಜನರ ಗಮನ ಕೊರವಂಜಿ ಕಡೆ ಹರಿಸಿದರು. ಕನ್ನಡ ಜಾನಪದ ಸಾಹಿತ್ಯದಲ್ಲಿ ಕೊರವಂಜಿಯ ವರ್ಣಮಯ ಬದುಕನ್ನು ಪರಿಚಯಿಸುತ್ತದೆ.

ಕಣಿ ಹೇಳುವ ಕೊರವ ಹೆಂಗಸರು. ಇವರು ಭವಿಷ್ಯವನ್ನು ಹಾಡಿನ ದಾಟಿಯಲ್ಲಿ ಹೇಳುತ್ತಾರೆ. ಈಚಲು ಗರಿಯಿಂದ ಮಾಡಿದ ಗಿಲಗಂಚಿ, ನೆಲವು, ಸಿಂಬಿ ಮೊದಲಾದ ವಸ್ತುಗಳನ್ನು ಮಾರಾಟ ಮಾಡುವರು ಮತ್ತು ಹಚ್ಚೆ ಹೊಯ್ಯುವರು, ಯಕ್ಷಣಿಗಾರರು, ಕೊರಮಜಿಯವರು ಎಂದು ಕನ್ನಡ ಜಾನಪದ ಕೋಶದಲ್ಲಿ ಎಚ್.ಎಲ್.ನಾಗೇಗೌಡರು ಉಲ್ಲೇಖಿಸುತ್ತಾರೆ. ಸೂಳೆ ಮುಪ್ಪಾಗಿ ಕೊರವಂಜಿಯಾದಳು. ಹಾವು ಮುಪ್ಪಾಗಿ ಉರಿಸಿಂಗಿಯಾಯಿತು ಎಂಬ ಗಾದೆಯಿದೆ. ಕೊರವಂಜಿ ಹಾಡು ಜಾನಪದ ಸಾಹಿತ್ಯದಲ್ಲಿ ಉಜ್ವಲಸ್ಥಾನ ಪಡೆದುಕೊಂಡಿದೆ.

"ಭವಿಷ್ಯದ ವಚನದಲ್ಲಿ ಸಂಗಮ್ ಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವ ಪೂಜಾರಿಗಳ ಪರಂಪರೆಯಲ್ಲಿ ಬಂದವರು ಅಥವಾ ನಿಮಿತ್ತಕಾರರು ದೇವಾಲಯಗಳಲ್ಲಿ ಕಣಿ ಹೇಳುತ್ತವೆ. ದೇವಾಲಯದ ಸೇವೆಗಳು ಮುಗಿದ ಮೇಲೆ ಇವರು ಭವಿಷ್ಯದ ವಾಚನವನ್ನು ಮಾಡುತ್ತಾರೆ. ಸಂಗಮ್ ಕೃತಿಯಲ್ಲಿ ಹೆಸರಿಸಲ್ಪಟ್ಟಿರುವ ಅಘವಲ್ ಮಗಳಿರ ಮೂಲಕ್ಕೆ ಸೇರಿದವರೆಂದು ಹೆಸರಾಗಿರುವ ಕೊರವಂಜಿಯರಿಗೆ ಕಣಿ ಹೇಳುವುದು ಒಂದು ಲಾಭದಾಯಕ ವೃತ್ತಿ. ಪ್ರಾಚೀನ ಕಾಲದಿಂದ ಈ ಹೆಂಗಸರಿಗೆ ಕಣಿ ಹೇಳುವುದೊಂದು ವೃತ್ತಿಯಾಗಿದೆ. ಅವರು ಕವಣೆಗಳಿಂದ ಹಕ್ಕಿಗಳನ್ನು ಅಳಿಲುಗಳನ್ನು ಕೊಲ್ಲುತ್ತಾರೆ. ಗಾಜಿನ ಮಣಿಗಳನ್ನು ಹೊಲೆಯುವ ಸೂಜಿಗಳನ್ನು ಮಾರುತ್ತಾರೆ. ಅವರ ಬದುಕಿನ ಬಗೆಯಲ್ಲಿ ಮಳೆಯ ಸೂಚನೆಯನ್ನು ಹೇಳುವುದು ಮತ್ತು ವ್ಯಕ್ತಿಗಳ ಭವಿಷ್ಯ ಹೇಳುವುದು ಎರಡೂ ಸೇರುತ್ತದೆ(ಎಸ್.ಎಂ.ಎಲ್.ಲಕ್ಷ್ಮಣನ ಚಟ್ಟಿಯರ್, ಅನು: ಪರಮಶಿವಯ್ಯ, ತಮಿಳುನಾಡಿನ ಜಾನಪದ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೧೯೯೪).

ಕುರವಂಜಿ ತಮಿಳರಿಗೆ ವಿಶಿಷ್ಟವಾದ ಒಂದು ನೃತ್ಯನಾಟಕ. ಕುರವಂಜಿ ಒಂದು ಮನರಂಜನೆಯಾಗಿ ಇದು ಅಭಿಜಾತ ಹಾಗೂ ಜಾನಪದ ಕಲೆಗಳ ನಡುವೆ ಇಟ್ಟು ತೂಗಬಹುದಾದ ಕಲೆ. ತಮಿಳಿನಲ್ಲಿ ನೂರಾರು ಕುರವಂಜಿಗಳಿವೆ. ಕೆಲವು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿವೆ. ಇನ್ನು ಅನೇಕ ಹಸ್ತಪ್ರತಿರೂಪದಲ್ಲಿ ಇವೆ. ಸ್ವರಪ್ರಸ್ತಾಪದೊಡನೆ ಪ್ರಕಟವಾದವುಗಳೂ ಇವೆ. ಸಂಶೋಧನ ವಿದ್ಯಾರ್ಥಿಗಳಿಂದ ಕೆಲವು ಪುನರಚಿತಗೊಂಡು ಮದರಾಸು ನಗರದಲ್ಲಿ ಪ್ರದರ್ಶಿತವಾಗಿರುವುದುಂಟು. ಇವುಗಳನ್ನು ಜನಪ್ರಿಯಗೊಳಿಸುವುದರಲ್ಲಿ ಶ್ರೀಮತಿ ರುಕ್ಮಿಣಿದೇವಿ ಅವರಿಂದ ನಡೆಯುತ್ತಿರುವ ಕಲಾಕ್ಷೇತ್ರವು ಗಮನಾರ್ಹ ಕೆಲಸ ಮಾಡಿವೆ. ತಮಿಳು ಇಸೈಚಂಗಮಂ ಇದನ್ನು ಮುಂದುವರಿಸಿದೆ. ಈ ಕಲೆಯ ಆದ್ಯ ಆಶ್ರಯದಾತನಾಗಿದ್ದವನು ರಾಜ ಚೋಳಚಕ್ರವರ್ತಿ.

ವಾರ್ಷಿಕ ಉತ್ಸವದಲ್ಲಿ ಕುರವಂಜಿ ಆಟವನ್ನು ಆಡಲು ತಂಜಾವೂರಿನ ದೊಡ್ಡ ದೇವಸ್ಥಾನದಲ್ಲಿ ಅವನು ವೇದಿಕೆಯನ್ನು ಕಟ್ಟಿಸಿದ್ದ ಅದನ್ನು 'ಕುರವಂಜಿ ಮೇಡೈ' ಎಂದು ಕರೆಯಲಾಗುತ್ತದೆ. ಪ್ರತಿ ಕುರುವಂಜಿ ಆಟದಲ್ಲೂ ಒಬ್ಬ ನೃತ್ಯಗಾರ್ತಿಯಾದ ನಾಯಕಿ ಸ್ಥಳೀಯ ದೇವತೆಯಲ್ಲಿಯೇ ನಾಡನ್ನು ಆಳುವ ರಾಜನಲ್ಲಿಯೇ ಅನುರುಕ್ತಳಾಗುತ್ತಾಳೆ. ಅವಳು ಪ್ರೇಮದ ದೇವತೆ ಎಂದು ಕಾಣಿಸಿಕೊಂಡು ತನ್ನಾಸೆಯನ್ನು ಈಡೇರಿಸಿ ಕೊಡುವಂತೆ ಕೇಳುತ್ತಾಳೆ. ದೇವತೆಗಳ ಮೆರವಣಿಗೆಯನ್ನು ಬಣ್ಣಿಸುತ್ತಾಳೆ. ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಅದರ ಫಲವತ್ತಾದ ನೆಲವನ್ನು ಬಣಿಸುತ್ತಾಳೆ. ಓಲೆಯಯ ಗರಿಗಳನ್ನು ಓದಿ ಭವಿಷ್ಯವನ್ನು ಹೇಳುವುದು ಕುರುವಂಜಿಯರ ಕೆಲಸಗಳಲ್ಲೊಂದು. ಕುರವಂಜಿಯರ ಜೊತೆಗೆ ಹಾಡುಗರರೂ ವಾದ್ಯ ಸಂಗೀತಗಾರರೂ, ನೃತ್ಯಗಾರ್ತಿಯರು ಈ ಕಲೆಯ ಆಕರ್ಷಣೆಯನ್ನು ಹೆಚ್ಚಿಸಿದ್ದಾರೆ. ನಾಯಕಿಯು ಪ್ರೇಮಿಯನ್ನು ಕರೆತಂದು ತನ್ನ ಸಂಕಟವನ್ನು ಪರಿಹರಿಸಲು ಸಖಿಯನ್ನು ಕಳಿಸಿಕೊಡುತ್ತಾಳೆ. ಇತ್ತೀಚಿನ ಕೆಲವು ದಶಕಗಳವರೆಗೆ ಕುರುವಂಜಿಯ ದೇವಾಲಯಗಳಲ್ಲಿ ನಿಯತವಾಗಿ ಪ್ರದರ್ಶಿಸಲ್ಪಡುತ್ತಿತ್ತು. ಕಲಾವಿದರು ಅದನ್ನು ಅಚ್ಚುಕಟ್ಟಾಗಿ ಶ್ರದ್ಧೆಯಿಂದ ಉಳಿಸಿಕೊಂಡು ಬಂದಿದ್ದರು.

ದೇವಾಲಯಗಳಲ್ಲಿ ದೇವದಾಸಿ ನೃತ್ಯವನ್ನು ನಿಷೇಧಿಸಿದ ಮೇಲೆ ಕುರುವಂಜಿಯ ಪ್ರದರ್ಶನವನ್ನು ಕೈಬಿಡಲಾಯಿತು. ನಮ್ಮ ಸಂಸ್ಕೃತಿಯ ಪುನರುತ್ಥಾನದಲ್ಲಿ ಆಸಕ್ತಿ ಬಂದ ಮೇಲೆ ಕುರುವಂಜಿಗಳ ಶೋಧ ಆರಂಭವಾಗಿದೆ. ಕುರವಂಜಿಗಳ ಆಕೃತ್ರಿಮವಾದ ಸಂಶೋಧನೆಗೆ ಒಳ್ಳೆಯ ವಸ್ತು. ಒಳ್ಳೆಯ ವಾಗ್ಧಾರಿಯಿಂದ ಕೂಡಿದ ತನ್ನ ಗಿರಿಧಾಮದ ಅಭಿವೃದ್ಧಿ ಮತ್ತು ಹಿರಿಮೆ ಕುರಿತು ಕೊರವಿ ಹಾಡುವ ಗ್ರಾಮೀಣ ಮಟ್ಟುಗಳು ಹಾಗೂ ಸರಳವಾದ ಮಟ್ಟುಗಳಾಗಿವೆ. ತಿರುಕಟ್ರಾಲ ಕುರುವಂಜಿಗಳಂಥ ರಚನೆಗಳು ತಮ್ಮ ಕಾವ್ಯ ಮೌಲ್ಯಕ್ಕೆ ಹೆಸರಾಗಿವೆ. ವಿರಾಳಿಮಲೈ ಕುರವಂಜಿಯು ಸಂಗೀತ ಮೌಲ್ಯಕ್ಕೆ ಹೆಸರಾಗಿದೆ. ಅಟಜಗಾರ ಕುರವಂಜಿ ಮತ್ತು ತಿರುಮಲೈ ಆಂಡವರ ಕುರವಂಜಿಗಳಲ್ಲಿ ಸಂಗೀತ ಮತ್ತು ಸಾಹಿತ್ಯ ಎರಡೂ ಸಮಾನವಾಗಿವೆ.

ತಿರುಕ್ಕುಟ್ಟಕಲ್ ಕೊರವಂಜಿಯಲ್ಲಿ ಗಿರಿಕನ್ಯೆಯೊಬ್ಬಳು ಸ್ಥಳೀಯ ದೇವತೆಯಲ್ಲಿ ಪ್ರೇಮಗೊಂಡಿದ್ದ ಶ್ರೀಮಂತ ಕುಟುಂಬಕ್ಕೆ ಸೇರಿದ್ದ ಕನ್ಯೆಯೊಬ್ಬಳ ಕೈಯನ್ನು ನೋಡಲು ಆಹ್ವಾನಿತಳಾಗುತ್ತಾಳೆ. ಅವಳು ಅಪಾರ ಉಡತೊರೆಗಳೊಡನೆ ಮನೆಗೆ ಮರಳಿದಾಗ ಅವಳ ಗಂಡನಿಗೆ ಅನುಮಾನ ಬರುತ್ತದೆ. ಅವಳೊಡನೆ ಜಗಳವಾಗುತ್ತಾನೆ. ಕೊನೆಗೆ ಅವರಿಬ್ಬರೂ ರಾಜಿಯಾಗುತ್ತಾರೆ. ಇದನ್ನು ಒಂದು ನೃತ್ಯನಾಟಕವನ್ನಾಗಿ ಬೆಳೆಸಲಾಗಿದೆ. ತಲೆಮಾರುಗಳಿಂದ ದೇವಾಲಯಗಳ ಒಳಾಂಗಣದಲ್ಲಿ ಪ್ರದರ್ಶಿಸಿಕೊಂಡು ಬರಲಾಗುತ್ತಿತ್ತು.

ತಿರುಚೂದೂರಿನ ಆದಿದೈವದ ಸುತ್ತ ಹೆಣೆದಿರುವ ನೃತ್ಯನಾಟಕ ಸೆಂದಿಲ್ ಕುರುವಂಜಿಯಲ್ಲಿ ಕಥನಾಯಕಿ ಮದನಮೋಹಿನಿಯು ತನ್ನ ಸಖಿಯರ ಜೊತೆಯಲ್ಲಿ ವಿಲಾಸದಿಂದ ಕಾಳಕಳೆಯುತ್ತ

ಕಾಣಿಸಿಕೊಳ್ಳುತ್ತಾಳೆ. ಅವಳು ಮೆರವಣಿಗೆಯಲ್ಲಿ ಬರುತ್ತಿದ್ದ ಆರುಮುಗಸ್ವಾಮಿಯನ್ನು ನೋಡಿ ಅನುರಕ್ತಳಾಗುತ್ತಾಳೆ. ಮೆರವಣಿಗೆಯಲ್ಲಿ ಬರುತ್ತಿದ್ದ ವ್ಯಕ್ತಿಯ ಬಗ್ಗೆ ಅವಳು ತನ್ನ ಗೆಳತಿಯನ್ನು ಕೇಳುತ್ತಾಳೆ. ಅವರು ಸೆಂದಿಲ್ ಮುರುಗ ಎಂದು ಅವರು ಉತ್ತರಿಸುತ್ತಾರೆ. ಮದನ ಮೋಹನಿಯ ಈ ಪ್ರೇಮೋನ್ಮಾದ ಅವಳು ತನ್ನ ಸಖಿಯರನ್ನು ನಿರ್ದೇಶಿಸಿ ಹೇಳುವ ದ್ವಿಪದಿಗಳಲ್ಲಿ ಸಮರ್ಥವಾಗಿ ಚಿತ್ರಿತವಾಗಿದೆ. ಅವಳ ಗೆಳತಿಯೊಬ್ಬಳು ಮುರುಗಸ್ವಾಮಿಗೆ ಈ ಸಂದೇಶವನ್ನು ಒಯ್ಯುತ್ತಾಳೆ. ಕಂದಮಲೆಯ ಕೊರವಂಜಿಯೊಬ್ಬಳು ಈಗ ಕಾಣಿಸಿಕೊಂಡು ಮೋಹಕ ಹಾಡುಗಳಲ್ಲಿ ವಾಸಲ್ವಲಂ ಮತ್ತು ದೇಸಲ್ವಲಂ ಎಂದರೆ ಹಾಡಿನ ಅಭಿವೃದ್ಧಿಯನ್ನು ಕುರಿತು ವಿವರಿಸುತ್ತಾಳೆ. ಕಥಾನಾಯಕಿಯ ಕೈಯನ್ನು ನೋಡಿ ಅವಳ ಆಸೆ ನೇರವೇರುವುದಾಗಿ ತಿಳಿಸುತ್ತಾಳೆ. ಮುರುಗನ ಜೊತೆಯಲ್ಲಿ ವಿವಾಹ ಸಂದರ್ಭದಲ್ಲಿ ಬೆರತಂತೆ ಮದನಮೋಹನಿ ಕನಸುಕೊಂಡು ಕೊರವಿಗೆ ಬೆಲೆಬಾಳುವ ಉಡುಗೊರೆಗಳನ್ನು ಕೊಡುತ್ತಾಳೆ. ಕೊರವಿಯ ಗಂಡನಾದ ಸಿಂಗ ಅವಳನ್ನು ಹುಡುಕಿಕೊಂಡು ಬರುತ್ತಾನೆ. ಅಪಾರ ನೆಲವನ್ನು ವಿನೋದವನ್ನು ನೀಡುವ ಪ್ರಸಂಗ ಇದು. ಮದನ ಮೋಹನಿಯಿಂದ ತನ್ನ ಮಡದಿ ಪಡೆದ ಬೆಲೆಬಾಳುವ ಉಡುಗೊರೆಗಳನ್ನು ಕಂಡ ಕೂಡಲೆ ಸಿಂಗನ ಕೋಪವೆಲ್ಲ ಮಾಯವಾಗುತ್ತದೆ. ಸ್ವಸ್ತಿಗೀತೆಯೊಡನೆ ನಾಟಕ ಮುಕ್ತಾಯವಾಗುತ್ತದೆ(ತಮಿಳು ಜಾನಪದ, ಪು.೧೮೪–೧೮೭).

ಕುರುವಂಜಿ

ಈ ತರಹದ ಸಂಗೀತ ರೂಪದಲ್ಲಿ ಮುಖ್ಯ ಗುಣವೆಂದರೆ ಆಧ್ಯಾತ್ಮಿಕತೆ ಪಾತ್ರಗಳು ವಿಶಿಷ್ಟವಾದ ಸಂಕೇತಗಳಾಗಿರುತ್ತದೆ. ಜೀವಸತಿ ಜೀವಾತ್ಮವನ್ನು ಕ್ರಿಯಾಕಾಂತ ಜೀವಿಗಳ ಕ್ರಿಯೆಗಳನ್ನು ಸಿಂಗಡು ಅನಾದಿ ಕಾಲದ ಪ್ರಕೃತಿವನ್ನು ಪ್ರತಿನಿಧಿಸುತ್ತಾರೆ. ಕುರುವಂಜಿ ಆಧ್ಯಾತ್ಮಿಕ ಜ್ಞಾನದ ಸಂಕೇತವಾಗಿಯೂ ಸಿಂಗಿ ವಿಶ್ವದ ಮೂಲಭೂತ ಚಲನಶಕ್ತಿಗೆ ಸಂಕೇತವಾಗಿಯೂ ಇರುತ್ತಾರೆ. ಇಂತಹ ಸಂಗೀತ ಲಘುರೂಪಕಗಳ ಮಾಧ್ಯಮದಲ್ಲಿ ಜನಪದರಿಗೆ ಮುಕ್ತಿ ಮತ್ತೆ ತತ್ವ ಬೋಧನೆ ಮಾಡಲಾಗುತ್ತದೆ. ಧರ್ಮದ ಪ್ರಾಥಮಿಕ ಸಿದ್ಧಾಂತಗಳನ್ನು ನಾಟಕದ ನಡುವೆ ವಿನೋದವಾಗಿ ತಿಳಿಸಲಾಗುತ್ತದೆ. ಕುರವಂಜಿ ಕಣಿ ಹೇಳುವ ಹೆಂಗಸರಲ್ಲಿ ಅನ್ವಯವಾಗುವ ಹೆಸರು ಸಾಂಪದ್ರದಾಯಿಕವಾಗಿ ಒಂದು ವರ್ಗದ ಹೆಂಗಸರು ಮುಂಬರುವ ಘಟನೆಗಳನ್ನು ಹೇಳುವ ತರಬೇತಿಯನ್ನು ಪಡೆದಿರುತ್ತಾರೆ. ಅವರಿಗೆ ಕೊಡಬೇಕಾದ ಶುಲ್ಕ ಬಹಳ ಕಡಿಮೆ. ಒಂದು ಹಿಡಿ ಅಕ್ಕಿ ಭತ್ತ ಅಥವಾ ಧಾನ್ಯ ಅಥವಾ ಸ್ವಲ್ಪ ಹಣ ಕೊಟ್ಟರೆ ಸಾಕು. ಭವಿಷ್ಯತ್ತನ್ನು ಕುರಿತು ಹೇಲುವ ಶಕ್ತಿ ಅವರಿಗಿದೆ ಎಂದು ನಂಬುವುದರಿಂದ ಅವರನ್ನು ಆಶ್ರಯಿಸಲಾಗುವುದು. ಇವರು ಗ್ರಾಮದ ಬೀದಿಗಳಿಗೆ ಬರುವುದನ್ನು ಜನರು ನಿರೀಕ್ಷಿಸುತ್ತಲೇ ಇರುತ್ತಾರೆ. ಆಕೆಯ ಕೂಗಾದ 'ಎರುಕ' ಎಂದರೆ ಅರಿವು ಎಂದರ್ಥ(ಅಸ್ತಿತ್ವದ ಅರಿವನ್ನು ಪಡೆದಿರುವುದು). ಹತ್ತಿರದ ಸ್ಥಳಗಳಲ್ಲಿರುವ

ದೇವದೇವತೆಯರನ್ನು ಪ್ರಾರ್ಥಿಸುವ ಒಂದು ಸಾಂಪ್ರದಾಯಿಕ ಗೀತೆಯನ್ನು ಇವರು ಹಾಡುತ್ತಾರೆ. ಅನಂತರ ಗುರುವಿಗೆ ಪ್ರಾಣಾಮವನ್ನು ಸಲ್ಲಿಸಲಾಗುತ್ತದೆ. ಅನಂತರ ಗುರುವಿಗೆ ಪ್ರಣಾಮವನ್ನು ಸಲ್ಲಿಸಲಾಗುತ್ತದೆ. ಅನಂತರ ಕಣಿ ಹೇಳುವುದು ಪ್ರಾರಂಭವಾಗುತ್ತದೆ. ಅದನ್ನು ಒಗಟುಗಳಲ್ಲಿ ಅಥವಾ ರಹಸ್ಯಾರ್ಥವುಳ್ಳ ಚುಟುಕಗಳಲ್ಲಿ ಹೇಳಲಾಗುತ್ತದೆ. ಅವರು ಹೇಳುವ ಮಾತುಗಳು, ವ್ಯಥೆಗಳಿಂದ ಪಾರಾಗಬೇಕೆಂದು ಬಯಸುವ ಅನೇಕರಿಗೆ ಅನ್ವಯವಾಗುತ್ತದೆ. ಕಣಿ ಕೇಳುವವರು ಸಾಮಾನ್ಯವಾಗಿ ಚಿಂತೆಗೂ ಕಳವಳಕ್ಕೂ ಈಡಾದ ಗೃಹಸ್ಥರು, ಆಸ್ತಿಯನ್ನು ಕಳೆದುಕೊಂಡವರು, ಆಸ್ತಿಯನ್ನು ಗಳಿಸಬೇಕೆಂದುಕೊಂಡವರು, ಸಾಕು ಪ್ರಾಣಿಗಳನ್ನು ಕಳೆದುಕೊಂಡದವರು. ತಮ್ಮ ಪ್ರೀತಿಯವರು ಹತ್ತಿರದವರು ರೋಗ ಪೀಡಿತರಾಗಿರುವವರು ಆಗಿರುತ್ತಾರೆ. 'ಎರಕ' ಕೇಳುವುದು ಅವರಿಗೆ ನೆಮ್ಮದಿಯನ್ನು ಕೊಡುತ್ತದೆ.

ಇಂತಹ ಒಬ್ಬ ವ್ಯಕ್ತಿಯನ್ನು ಈ ಜನಪದ ರೂಪಕದಲ್ಲಿ ಸೇರಿಸಲಾಗಿದೆ. ರಂಗಸ್ಥಳದ ಮೇಲೆ ಕುರುವಂಜಿ ಬರುವುದನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತದೆ. ಇದು ಸಂತೋಷವ ನ್ನುಂಟು ಮಾಡುವ ನಾಟಕದ ಒಂದು ವಿಷಯವಾಗಿರುತ್ತದೆ. ಅವಳ ಕೂಗು ಹಿಂದಿನ ದೃಶ್ಯರ ಒತ್ತಡವನ್ನು ಸಡಿಲಗೊಳಿಸುತ್ತದೆ. ಮುಖ್ಯವಾಗಿ ಈ ಕುರವಂಜಿ ಪಾತ್ರವನ್ನ ಶೃಂಗಾರದ ವಸ್ತುಗಳಲ್ಲಿ ಸೇರಿಸಲಾಗುತ್ತದೆ. ಕೆಲವು ಸಾರಿ ಪ್ರೇಮಿಯೇ ಕೊರವಂಜಿಯ ಪಾತ್ರಧರಿಸಿ ವಿರಹಿಯಾದ ತನ್ನ ಪ್ರೇಯಸಿಯ ಮುಂದೆ ಬರುತ್ತಾನೆ. ಅವರ ಭೇಟಿ ಅವರ ಕೋರಿಕೆಯನ್ನು ಈಡೇರಿಸುತ್ತದೆ(ಪುಟ ೧೫೩, ೧೫೪, ಆಂಧ್ರ ಪ್ರದೇಶದ ಜನಪದ).

ಶ್ರೀ ಎಂ.ರಾಮನ್ ಅನುವಾದ ಕೃತಿಯಲ್ಲಿ, ಭರತನಾಟ್ಯದ ನೆಲೆಯಾಗಿರುವ ತಮಿಳುನಾಡು ನೃತ್ಯ ಮತ್ತು ನಾಟಕದ ಶಾಸ್ತ್ರೀಯ ಪರಂಪರೆಯಲ್ಲಿ ಮಾತ್ರವಲ್ಲ ಜಾನಪದ ಪರಂಪರೆಯಲ್ಲೂ ಸೌಂದರ್ಯಯುಕ್ತವಾಗಿದೆ. ಒಂದೆಡೆ ಶಾಸ್ತ್ರೀಯ, ಕೃತ್ಯ ಮತ್ತು ಇನ್ನೊಂದೆಡೆ ಜಾನಪದ ನೃತ್ಯಮಾರ್ಗ ಇವುಗಳೆರಡಕ್ಕೂ ನಿಕಟ ಸಂಪರ್ಕ ಹೊಂದಿದ ಅನೇಕ ಜಾನಪದ ನೃತ್ಯಗಳು ತಮಿಳುನಾಡಿನಲ್ಲಿದೆ. ಇವುಗಳಲ್ಲಿ ಹೆಚ್ಚಿನವು ಇಲ್ಲವಾಗಿದೆ. ಮಿಕ್ಕ ಕೆಲವು ಜನತೆಯು ಜೀವನದ ಸಜೀವ ಪರಂಪರೆಯಾಗಿ ಉಳಿದಿದೆ. ಕುರಂವಜಿ ದೃಶ್ಯ ಸಂಪದ್ಭರಿತ ಕಲಾತ್ಮಕ ನೃತ್ಯಮಾರ್ಗ. ಗಿರಿಜನರಾದ ಕೊರತಿಯರಿಂದ ಇಳಿದು ಉಳಿದು ಬಂದ ಈ ನೃತ್ಯದ ಈ ನೃತ್ಯದ ಬಗೆಗೆ ಶಿಲಪ್ಪದಿಕಾರಮ್ ಗ್ರಂಥದಲ್ಲೂ ಉಲ್ಲೇಖವಿದೆ. ಗಿರಿ ಪ್ರದೇಶದಿಂದ ಇಳಿದು ಬಂದು ಅರಸ–ಅರಸಿಯರಿಗೆ ಭವಿಷ್ಯ ಹೇಳುವ ಕೊರತಿ ಈ ನೃತ್ಯದ ನಾಯಿಕೆ. ತಮ್ಮನ್ನು ದೇವತೆಗಳು ಮೋಹಿಸಿ ಸೆಳೆಯದಂತೆ ಮುಖದ ಮೇಲೆ ಬೊಟ್ಟುಗಳನ್ನು ಬರೆದುಕೊಂಡ ಸುಂದರ ತರುಣಿಯರು ಈ ನೃತ್ಯಗಾರ್ತಿಯರಾಗಿದ್ದು, ಗ್ರಾಮಾಂತರದಲ್ಲಿ ಸಂಚರಿಸುತ್ತ ಸಂಭಾವನೆ ನೀಡಬಲ್ಲವರಿಗೆ ನೃತ್ಯ ಕಲಿಸಲೂ ಮುಂದಾಗುತ್ತಾರೆ.

ಕುರುವಂಜಿ ನೃತ್ಯ ವಿಧಾನ ಭರತನಾಟ್ಯಕ್ಕಿಂತ ಸರಳ ಆದರೂ, ಭರತನಾಟ್ಯದಲ್ಲಿರುವ ಹೆಚ್ಚಿನ ಅಂಗಭಿನಯ, ನಡೆ-ನಿಲುವುಗಳನ್ನು ನಾವಿಲ್ಲಿ ಕಾಣಬಹುದು. ವಾಸ್ತವವಾಗಿ ಕುರುವಂಜಿ ನರ್ತಕಿಯರು ಭರತನಾಟ್ಯ ಪ್ರೇಮಿಗಳ ಮನಸೆಳೆದುದರಿಂದ ಅವರೂ ಭರತನಾಟ್ಯದಲ್ಲಿ ಕುರುವಂಜಿ ನೃತ್ಯಕಥೆಗಳನ್ನು ಅಭಿನಯಿಸುತ್ತಾರೆ.

ಚಿಂದು ನೃತ್ಯ

ಪಾಂಡಿಚೇರಿಯ ಕೊರವರು, ಕಲ್ಲವರು ಮತ್ತು ಕುರಿವಿಕಾರರು ಎಂಬ ಗಿರಿಜನರಲ್ಲಿ ಪ್ರಚಾರದಲ್ಲಿರುವ ನೃತ್ಯ ವಿಧಾನವಿದು. ಸಣ್ಣ ಪ್ರಾಣಿಗಳನ್ನು ಪಕ್ಷಿಗಳನ್ನು ಹಿಡಿಯುವುದು ಈ ಜನರ ದುಡಿಮೆ. ಅವರ ಜಾನಪದ ಗೀತೆಗಳಲ್ಲೂ ಇದು ಪ್ರತಿಬಿಂಬಿತವಾಗಿದೆ. ಅವರ ಜಾತಿಗೆ ತಕ್ಕಂತೆ ಮೋಹಕ ಉಡಿಗೆ ಧರಿಸಿದ ಆರು ಮಂದಿ ಹಿನ್ನೆಲೆಯ ಜಾನಪದ ಗೀತೆಗೆ ಅನುಗುಣವಾಗಿ ಅವರು ನರ್ತಿಸುತ್ತಾರೆ. ನಾಯಕಿಯ ಹಾಡಿನ ಚರಣ ಹಾಡಿದೊಡನೆ ಜತೆಗಾರರು ಅದರ ಪಲ್ಲವಿಯನ್ನೆತ್ತಿ ಹಾಡುತ್ತಾರೆ. ಹೀಗೆ ಸಾಗಿದಾಗ ನರ್ತಕರು ವಿವಿಧ ರೀತಿಯಿಂದ ನರ್ತಿಸುತ್ತಾರೆ(ಪು.೧೨೪, ೧೨೫, ಗಿರಿಜನ ಜಾನಪದ ನೃತ್ಯಗಳು).

ಗ್ರಾಮೀಣ ಜನತೆಯ ಸರಳ ಜೀವನ, ಅವರ ನಲಿವು ನೋವುಗಳು, ಅವರು ಎದುರಿಸ ಬೇಕಾಗಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ದೇವರಲ್ಲಿ ನಂಬಿಕೆ, ಅವರ ಸಂತೃಪ್ತಿ ಮನೋಭಾವ, ಅವರ ವಿಚಾರಧಾರೆ ಮತ್ತು ವರ್ತನೆ ಈ ಎಲ್ಲ ಗ್ರಾಮೀಣ ಜೀವನದ ಇನ್ನು ಹಲವಾರು ಮುಖಗಳನ್ನು ಜನಪದ ಸಾಹಿತ್ಯದಲ್ಲಿ ದೊರೆಯುತ್ತದೆ. ಕಾವ್ಯ ಸ್ತ್ರೀಯರು ಕಲಾತ್ಮಕ ವಾದ ಹಾಡು ಹಾಡಿ ತೃಪ್ತಿಪಡುತ್ತಾರೆ. ಶತಮಾನಗಳಿಂದಲೂ ನಮ್ಮ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಜನಪದ ಹಾಡುಗಾರರ ಸುಖ-ದುಃಖಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಭಾರತವು ದೇಶದ ವಿಶ್ವದಲ್ಲಿಯೇ ಜಾನಪದ ಶ್ರೀಮಂತಿಕೆ ಒಳಗೊಂಡಿದ್ದು, ವಿದೇಶಿಯರು ಬಂದು ಭಾರತೀಯ ಜಾನಪದವನ್ನು ಅಧ್ಯಯನ ಮಾಡುವುದನ್ನು ಕಾಣುತ್ತೇವೆ. ಆದರೆ ಅದೇ ನಮ್ಮ ಸಮುದಾಯಗಳ ಹಾಡು ಕೇಳಿದರೂ ಸುಮ್ಮನೆ ಇರುವ ನಮ್ಮವರಿಗೆ ಕೊರವ ಸಮುದಾಯದ ಕೊರವಂಜಿ ಹಾಡುಗಳನ್ನು ಸಂಗ್ರಹಿಸಿದ ಮಾಹಿತಿ ತಿಳಿಸುವ ಪುಣ್ಯಕಾರ್ಯವನ್ನು ಮಾಡಲಾಗುತ್ತಿದೆ. ಇವುಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಜನಪದವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಸಂರಕ್ಷಿಸಿಡುವ ಹಾಗೂ ಮುಂದಿನ ಪೀಳಿಗೆಯವರೆಗೆ ಸಂರಕ್ಷಿಸುವ ಅಗತ್ಯವನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಆಧುನಿಕತೆಯ, ಜಾಗತೀಕರಣ ಮತ್ತು ತಂತ್ರಜ್ಞಾನದ ಸಂದರ್ಭದಲ್ಲಿ ಒತ್ತಡಕ್ಕೆ ಸಿಲುಕಿರುವ ಜಗತ್ತಿಗೆ ಜನಪದ ಹಾಡುಗಳು ಮನೋವೈದ್ಯವಾಗಿಯೂ ಕಾರ್ಯ ಮಾಡುತ್ತದೆ.

ಕೊರವಂಜಿ ಮಹಿಳೆಯರ ಸ್ಥಿತಿಗತಿ

ಪ್ರಾಚೀನ ಭಾರತೀಯ ಇತಿಹಾಸವನ್ನು ಗಮನಿಸಿದಾಗ ಕೊರವಂಜಿ ಮಹಿಳೆಯರ ಸ್ಥಾನಮಾನಗಳು ಅರಿಯುವುದು ಮುಖ್ಯವಾಗುತ್ತದೆ. ಏಕೆಂದರೆ ಕೊರವಂಜಿ(ಕೊರವ) ಮಹಿಳೆರಿಗೆ ಸಂಬಂಧಿಸಿದಂತೆ ಹಲವಾರು ವೃತ್ತಿಗಳಿವೆ. ಅವುಗಳಲ್ಲಿ ಕಸೂತಿ ಹಾಕುವುದು, ಕವದಿ ಹೊಲಿಯುವುದು, ಚಾಪೆ ಹೆಣೆಯುವುದು, ಹಚ್ಚೆ ಹಾಕುವುದು ಕಣಿ ಹೇಳುವುದು ಇನ್ನೂ ಮುಂತಾದವುಗಳಾಗಿವೆ. ಅದರಲ್ಲಿ ಕೊರವಂಜಿ ಮಹಿಳೆಯು ಕಣಿ ಹೇಳುವ ವೃತ್ತಿಯು ಒಂದಾಗಿದೆ. ಈ ವೃತ್ತಿಯಿಂದ ರಾಜಮಹಾರಾಜರಿಗೆ ಕಣಿ ಮುಖಾಂತರ ಭವಿಷ್ಯ ಹೇಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇದರಿಂದಾಗಿ ಕೊರವಂಜಿ ಮಹಿಳೆಯ ಅನೇಕರಿಗೆ ಚಿರಪರಿಚಿತಳಾಗಿ ಮತ್ತು ರಾಜರ ಜೀವನದ ಮೇಲೆ ಪರಿಣಾಮಗಳನ್ನು ಬೀರಿರುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯದ ಹನ್ನೆರಡನೆಯ ಶತಮಾನದ ಪೂರ್ವಾರ್ಧದ ನೇಮಿನಾತ ಪುರಾಣದಲ್ಲಿ ತಿಳಿದುಬರುತ್ತದೆ.

ಭಾರತೀಯ ಸಂಸ್ಕೃತಿಗೆ ಒಂದು ಕೊಡುಗೆಯನ್ನು ನೀಡಿರುವ ಕೊರವಂಜಿ ಅಲೆಮಾರಿ ಸಮುದಾಯದಿಂದ ನೆಲೆನಿಂತು ತಮ್ಮ ಬದುಕಿನ ಸ್ಥಿರತೆಯನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿದ್ದಾಳೆ. ಈ ಕುರಿತು ಅರಿಯುವುದು ಮುಖ್ಯವಾದುದಾಗಿದೆ. ಏಕೆಂದರೆ ಆನೇಕ ಕಾರಣಗಳಿಂದ ಚದುರಿದ (ಕೊರವಂಜಿ) ಕೊರಮರ ಮೂಲದ ಉಲ್ಲೇಖವು ಪ್ರಾಚೀನ ಕೃತಿಯಾದ 'ಶಿಲಪ್ಪದಿಗಾರಮ್' ಆಧಾರದ ಪ್ರಕಾರ ಅಲೆಮಾರಿ ಕೊರವ ಮಹಿಳೆಯು ಕಣಿ ಹೇಳುವ ಸಲುವಾಗಿ ರಾಜ ರಾಣಿಯರಲ್ಲಿಗೆ ಬರುತ್ತಿರುವ ವಿಷಯ ತಿಳಿಸಲಾಗಿದೆ. ಕಾಡಿನಿಮದ ನಾಡಿನ ದೊರೆಗಳವರೆಗೂ ತನ್ನ ಮಾತಿನಿಂದ ಸಂಪರ್ಕವನ್ನು ಸಾಧಿಸಿ ಸಾಧನೆ ಮಾಡಿದವಳು ಇಂದಿಗೂ ತಂಜಾವೂರು ಭಾಗದಲ್ಲಿ ಕೊರವಂಜಿ ಜನಪ್ರಿಯವಾಗಿರುವುದು ಕಂಡುಬರುತ್ತದೆ. ಜೊತೆಗೆ ಕೊರವಂಜಿ ನೃತ್ಯ ಇಂದಿಗೂ ಪ್ರಸಿದ್ಧಿಗೊಂದು ಸಾಕ್ಷಿ. ತಮಿಳು ಸಾಹಿತ್ಯದಲ್ಲಿ ಅದರಲ್ಲೂ ನಾಟಕದಲ್ಲಿ ಕುರಟ್ಟಿಯ ಪಾತ್ರ ಪ್ರಾಮುಖ್ಯವಾದುದು. ಇಂಥ ನಾಟಕಗಳಿಗೆ ಕುರುವಂಜಿಗಳು ಎಂಬ ಹೆಸರು ಬಂದಿದೆ. ಇಂಥ ಒಟ್ಟು ೩೬ ಕುರುವಂಜಿಗಳಿವೆ ಎಂಬುದನ್ನು ತಿಳಿಸಿದ್ದಾರೆ. ಕೊರವಂಜಿಯನ್ನು ಶಿಷ್ಟ ಸಾಹಿತ್ಯದಲ್ಲಿ ಹಾಗೂ ಜನಪದ ಸಾಹಿತ್ಯದಲ್ಲೂ ವಿಶೇಷವಾಗಿ ಕಾಣಲಾಗುತ್ತದೆ. ಕೊರವಂಜಿಯ ಜಾಣ್ಮೆ, ತಂತ್ರಗಾರಿಕೆ, ಮಾತಿನ ಲಹರಿ, ಆಕರ್ಷಿಸುವ ಪರಿಯನ್ನು ತಿಳಿದುಕೊಳ್ಳುವುದರ ಜೊತೆಗೆ ಅವಳ ಸಾಂಸ್ಕೃತಿಕ ಹಿನ್ನೆಲೆ ಅರಿಯಲು ಸಹಾಯಕವಾಗುತ್ತದೆ.

ಶ್ರೀ ಬಿ.ವಿ.ಮಲ್ಲಾಪುರ ಅವರು 'ಕೊರವರು-ಕೊರವಂಜಿ'ಎಂಬ ಲೇಖನದಲ್ಲಿ ಕೊರವ ಸಮುದಾಯಕ್ಕೆ ಸಂಬಂಧಿಸಿದ್ದಂತೆ ಹಾಗೂ ಅವರ ಜೀವನದ ಐತಿಹಾಸಿಕ ಮಾಹಿತಿಯನ್ನು ತಿಳಿಸಿದ್ದಾರೆ. ಜಾನಪದರು ತಮ್ಮ ಹಳ್ಳಿಹಳ್ಳಿಗೆ ಬರುವ ಕೊರವಂಜಿ ದೇವದೇವತೆಗಳಿಗೆ ಭವಿಷ್ಯವನ್ನು

ಹೇಳಿದ ಕೊರವಂಜಿಯ ಪಾತ್ರವು ಬಹಳ ಮುಖ್ಯ ಎನ್ನಿಸುತ್ತದೆ. ಸಾಮಾಜಿಕವಾಗಿ ಪ್ರಸಿದ್ಧಿಯನ್ನು ಪಡೆದುಕೊಂಡವಳು ಕೊರವಂಜಿ. ಅಹಂಕಾರಿಯಾದ ರಾಜನಿಗೆ ಕಷ್ಟ, ಸಂಕಷ್ಟ ಬಂದಾಗ ಪರಿಹಾರ ಮಾಡಿ ಅವರನ್ನು ಸರಿದಾರಿಗೆ ತರುವ ಕೆಲಸವನ್ನು ಕೊರವಂಜಿ ಮಾಡಿದ್ದಾಳೆ.

ಕೊರವಂಜಿಯು ಹೊಟ್ಟೆಪಾಡಿಗಾಗಿ ಮನೆಮನೆಗೆ ಹೋಗಿ ತನ್ನ ವೇಷಭೂಷಣದಿಂದಲೂ, ಭವಿಷ್ಯವನ್ನು ಹೇಳುವ ಕಾಯಕದಿಂದಲೂ ಆಕರ್ಷಿಸುತ್ತಾಳೆ. ಆದರೆ ಇಂದು ಆಧುನಿಕತೆಗೆ ಒಳಗಾಗಿ ಅವರ ಬದುಕು ಶೋಚನಿಯ ಸ್ಥಿತಿ ಕಂಡುಬರುತ್ತದೆ. ಬಡತನ ಎನ್ನುವಂತಹದು ಮಹಿಳಾ ಬದುಕನ್ನು ಅತ್ಯಂತ ಕಷ್ಟದ ಪರಿಸ್ಥಿತಿಗೆ ಒಳಪಡಿಸುತ್ತದೆ. ಪುರುಷಶಾಹಿ ವ್ಯವಸ್ಥೆಯು ಅಧಿಕಾರದ ನೆಲೆಯಲ್ಲಿ ಅವಳನ್ನು ಶೋಷಣೆ ಮಾಡುತ್ತಿರುತ್ತದೆ. ಮೊದಲು ಪಿತೃಪ್ರಧಾನ ವ್ಯವಸ್ಥೆಯಿಂದ ಮಾತ್ರ ಸಮಸ್ಯೆ, ನೋವುಗಳನ್ನು ಅನುಭವಿಸುತ್ತಿದ್ದಳು. ಆದರೆ ಪ್ರಸ್ತುತದಲ್ಲಿ ಬಂಡವಾಳಶಾಹಿಗಳ ಧೋರಣೆಗಳಿಂದಲೂ ಸಾಕಷ್ಟು ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದಾಳೆ. ಕೊಪ್ಪಳ, ಬಳ್ಳಾರಿ ಜಿಲ್ಲೆಯ ಕಂಪ್ಲಿ ಮತ್ತು ತೋರಣಗಲ್ಲುಗಳ ಪರಿಸರದ ಪರಿಸ್ಥಿತಿಯನ್ನು ವಿಶ್ಲೇಷಿಸುವ ಪ್ರಯತ್ನಪಡಲಾಗಿದೆ. ಮಹಿಳಾ ಬದುಕಿನ ಮೇಲೆ ಆಗುವಂತ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಮಹಿಳೆಯು ಪ್ರತಿದಿನವು ಬದುಕಿಗಾಗಿ ಹೋರಾಟ ನಡೆಸುತ್ತಿದ್ದಾಳೆ. ಇಲ್ಲಿಗೆ ಬರುವಂತಹ ಮಹಿಳೆಯರು ಸಾಮಾನ್ಯವಾಗಿ ಬಡತನದ, ಅನಿವಾರ್ಯವಾದ ಪರಿಸ್ಥಿತಿಗೆ ಬಂದು ದುಡಿದರು. ಜೀವನ ನಿರ್ವಹಣೆಯಲ್ಲಿ ಅನೇಕ ಬಗೆಯ ಸಮಸ್ಯೆಗಳನ್ನು ಅನುಭವಿಸುತ್ತಾಳೆ.

ಅಲೆಮಾರಿ ಸಮುದಾಯದಲ್ಲಿ ಒಂದಾದ ಕೊರವ ಸಮುದಾಯವು ಭಾರತೀಯ ಸಮಾಜದಲ್ಲಿ ತನ್ನದೆಯಾದ ಸಂಸ್ಕೃತಿಯನ್ನು ಗುರುತಿಸಿಕೊಂಡಿದೆ. ಅಲೆಮಾರಿಗಳಾಗಿದ್ದ ಕೊರವರು ಇಂದು ನೆಲೆನಿಂತ ಜನಸಮುದಾಯವಾಗಿದೆ. ಇವರ ಜೀವನದ ಆಚಾರ-ವಿಚಾರಗಳು, ಸಂಪ್ರದಾಯಗಳು, ನಡೆ-ನಂಬಿಕೆಗಳು, ಜೀವನವು ಗ್ರಾಮೀಣ ಬದುಕಿನ ಅಂಗವೇ ಆಗಿದೆ. ಈ ಸಮುದಾಯದ ಮಹಿಳೆಯು ಸಾಮಾಜಿಕ ರಂಗದಲ್ಲಿ ಜನಸಾಮಾನ್ಯರಿಗೆ ಕಣಿ ಹೇಳುವ ಪ್ರಕ್ರಿಯೆಯಿಂದ ಜನಪ್ರಿಯಳಾಗಿದ್ದಳೂ. ಜೊತೆಗೆ ಜನರಿಗೆ ಮನೋರಂಜನೆ ನೀಡುವುದು ಮತ್ತು ಮನೋವೈದ್ಯರಾಗಿ ಕೆಲಸ ಮಾಡಿದಳು ಎಂದರೆ ತಪ್ಪಾಗಲಾರದು. ಇವರ ಕುರಿತು ರಾಜಾಶ್ರಯಗಳಲ್ಲಿ ರಾಜ ರಾಣಿಗೆ ತಮ್ಮ ಮುಂದಿನ ಭವಿಷ್ಯ ಅಥವಾ ಕಣಿ ಹೇಳುತ್ತಿದ್ದರು ಎಂಬುದು ಪುರಾಣಗಳಿಂದ ತಿಳಿದುಬರುತ್ತದೆ. ಹಾಗಾಗಿ ಕೊರವಂಜಿ ಮಹತ್ವವನ್ನು ಪುರಾಣ ಮತ್ತು ಇತಿಹಾಸಗಳಿಂದ ತಿಳಿಯಬಹುದಾಗಿದೆ.

ಅಂದು ಬೆಟ್ಟಗುಡ್ಡಗಳಲ್ಲಿ ನೆಲೆಸುತ್ತಾ, ದನಕರುಗಳ ಪಾಲನೆ-ಪೋಷಣೆಯ ಜೊತೆ ಜೊತೆಗೆ ಬೆತ್ತ ಬಿದಿರಿನ ಬುಟ್ಟಿಗಳನ್ನು ಮಾಡುವ, ಕಣಿ ಹೇಳುವ, ಅಂತ್ರ ಕಟ್ಟುವ, ಹಚ್ಚೆ ಹಾಕುವ ಕೆಲಸಗಳನ್ನು ಕೊರವ/ಕೊರಚರು ಮೈಗೂಡಿಸಿಕೊಂಡು ಬಂದಿದ್ದಾರೆ. ಇವರ ಕುರಿತು ಕನ್ನಡ

ಜಾನಪದ ಸಾಹಿತ್ಯದಲ್ಲಿ ಕೊರವಂಜಿಯ ವರ್ಣಮಯ ಬದುಕನ್ನು ಪರಿಚಯಿಸುತ್ತದೆ. ಭಾರತೀಯ ಸಂಸ್ಕೃತಿಯ ವಿಚಾರ ಮಾಡುವಾಗ ಜಾತಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ಸಮುದಾಯಗಳ ಸಂಸ್ಕೃತಿಯನ್ನು ಕಡೆಗಣಿಸುವುದು ಕಂಡುಬರುತ್ತದೆ. ಶ್ರೀ ಎಚ್.ವಿ.ನಂಜುಂಡಯ್ಯ ಮತ್ತು ಶ್ರೀ ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರ ಅಭಿಪ್ರಾಯದಂತೆ "ಕೊರಚರು, ಕೊರವರು, ಕೊರಮರು ಎಂದು ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಬುಡಕಟ್ಟು ಸಮುದಾಯದವರು ಬೇಟೆಗಾರರು, ಕಣಿ ಹೇಳುವವರು, ಪಶುಪಾಲಕರು, ಬುಟ್ಟಿ ಹೆಣೆಯುವವರು ಜೊತೆಗೆ ಕಳ್ಳತನ ಮಾಡುವವರಾಗಿದ್ದರು ಎಂಬ ಅವರ ವಿವಿಧ ವೃತ್ತಿ ಪ್ರವೃತ್ತಿಗಳನ್ನು ದಾಖಲಿಸಿದದಾರೆ." ಆದರೆ ಇಂದು ಕೊರವರು ವಿವಿಧ ವೃತ್ತಿಗಳನ್ನು ಮಾಡುತ್ತಿದ್ದಾರೆ. ಒಂದು ಕಾಲಮಾನದಲ್ಲಿ ಉನ್ನತ ಸ್ಥಾನಮಾನದಲ್ಲಿರುವವರು ಇಂದು ಕೆಳಸ್ಥರದಲ್ಲಿರುವುದುಂಟು. ಬ್ರಿಟಿಷರು ಹೇರಿದ ಅಪರಾಧಿ ಪಟ್ಟಿಯಲ್ಲಿ ಕಳ್ಳರಾದವರು ಇಂದಿಗೂ ಇವರನ್ನು ಕಳ್ಳರು ಎಂದು ಕರೆಯುವುದಂಟು ಅವರು ಕಳ್ಳರಲ್ಲ.

ಇವರು ಯುರೋಪಿನ ಜಿಪ್ಸಿ ಜನಾಂಗವನ್ನು ಹೋಲುವ ಈ ಬುಡಕಟ್ಟಿನ ಹೆಣ್ಣುಮಕ್ಕಳು ಹಚ್ಚೆ ಹಾಕುವುರಲ್ಲಿ ನೈಪುಣ್ಯತೆ ಪಡೆದಿದ್ದರು, ಕಣಿ ಹೇಳುತ್ತಿದ್ದರು ಎಂಬುದನ್ನು ತಿಳಿಸುತ್ತಾರೆ. ಕೊರಮರ ಸ್ತ್ರೀಯರು ಅಂದಿನ ಸಾಮಾಜಿಕ ಮತ್ತು ಸಾಂಸ್ಕರತಿಕ ಸಂದರ್ಭದಲ್ಲಿ ತಮ್ಮ ಉದ್ಯೋಗದ ಮುಖಾಂತರ(ಕಣಿ ಹೇಳುವ/ ಹಚ್ಚೆ ಹಾಕುವ) ಪ್ರಮುಖ ವಾಹಿನಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂಬುದು ತಿಳಿದುಬರುತ್ತದೆ. ಕೊರಮರನ್ನು ತೆಲುಗು ಜನ ಎರಕುಲವಾಡು ಎಂದು ಕರೆಯುತ್ತಾರೆ. ತೆಲುಗಿನಲ್ಲಿ ಈ ಹೆಸರು ಎರಕ ಎಂಬ ಶಬ್ದದಿಂದ ಬಂದಿದೆ. ಎರಕ ಎಂದರೆ ಜ್ಞಾನ ಅಥವಾ ಪರಿಚಯ ಎನ್ನುವ ಅರ್ಥವಿದೆ. ಕಣಿ ಹೇಳುವ ಜ್ಞಾನದಿಂದ ಎರಕಲವರು ಇಂದು ಪ್ರಸಿದ್ಧರಾಗಿದ್ದಾರೆ. ಆದರೆ ಇಂದಿನ ಸಂದರ್ಭದಲ್ಲಿ ಕೊರವಂಜಿಯ ಸ್ಥಿತಿಗತಿಯನ್ನು ನೋಡಿದಾಗ, ಇತಿಹಾಸ ಪುಟಗಳನ್ನು ತೆರೆದು ನೋಡುವಾಗ, ಇವರ ಸ್ಥಿತಿಗತಿಯು ತುಂಬಾ ಶೋಚನೀಯವಾಗಿದೆ. ಬ್ರಾಹ್ಮಣರ ಪ್ರಭಾವದಿಂದಾಗಿ ಎಲ್ಲಿ ಜ್ಯೋತಿಷ್ಯವನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಜಾಗತೀಕರಣದ ಸಂದರ್ಭದಲ್ಲಿ ಇವರನ್ನು ಕೇಳುವವರೆ ಇಲ್ಲ. ಊರೂರು ಅಲೆದು ತಮ್ಮ ಕಸಬನ್ನು ಮುಂದುವರಿಸುತ್ತಿದ್ದರು. ಇವರು ಮುಂದಿನ ಪೀಳಿಗೆಗೆ ಕಾಣುವುದು ಕಷ್ಟಸಾಧ್ಯ.

E.Thurston ಅವರು ಹೇಳುವಂತೆ "Orld Tamil books refere to the Koravas as fortune tellres to kings and Queens..."ಇಂದರಿಂದ ತಿಳಿದುಬರುವುದೇನೆಂದರೆ ರಾಜ ರಾಣಿಯರಿಗೆ ಹಾಗೂ ಜನಸಾಮಾನ್ಯರಿಗೂ ಕಣಿ ಹೇಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇಂದಿಗೂ ಮಹಿಳೆಯರು ಊರಿಂದೂರಿಗೆ ಅಲೆದು ಸಾಂಪ್ರದಾಯಿಕವಾಗಿ ಕಣಿ ಹೇಳುವುದನ್ನು

ಉಳಿಸಿಕೊಂಡು ಬಂದಿದ್ದಾರೆ. ಕೊರವಂಜಿ ಎಂಬ ಹೆಸರು ದಕ್ಷಿಣ ಭಾರತದಲ್ಲೆಲ್ಲ ಚಿರಪರಿಚಿತ ವಾಗಿತ್ತು. ಹೊಟ್ಟೆ ಪಾಡಿಗಾಗಿ ಮನೆಯ ಬಾಗಿಲಿಗೆ ಹೋಗಿ ಭವಿಷ್ಯ ಹೇಳಿ, ದವಸ-ಧಾನ್ಯ ಹಣವನ್ನು ಪಡೆಯುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಸಾಮಾಜಿಕ ಜೀವನದಲ್ಲಿ ಕೊರವಂಜಿಯು ನಿರ್ವಹಿಸಿಕೊಂಡಿ ಬಂದಿರುವ ಕಾರ್ಯ ಸಮಾಜದಲ್ಲಿ ಒಂದು ಸ್ಥಾನ ಪಡೆದಿದೆ ಎಂದು ಹೇಳಬೇಕಾಗುತ್ತದೆ. ಹೀಗೆ ಕೊರವಂಜಿ ಸಮುದಾಯದ ಮಹಿಳೆಯರ ವಿವಿಧ ಮಜಲುಗಳನ್ನು ಪ್ರಸ್ತುತಪಡಿಸಲಾಗುವುದು.

ಒಂದೊಂದು ಸಮುದಾಯದಲ್ಲಿಯೂ ವಿಶೇಷವಾದ ಗುಣಗಳಿರುತ್ತವೆ. ಅದರಂತೆ ಕೊರವ ಸಮುದಾಯವು ಅವರ ಕಸುಬುಗಳಲ್ಲಿ ಕಣಿ ಹೇಳುವುದು ಒಂದು. ಕೊರವ ಸಮುದಾಯವು ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ವಲಸೆ ಬಂದ ಸಮುದಾಯವಾಗಿದೆ. ಇವರಲ್ಲಿ ಕೊರವಂಜಿಯ ಮಹಿಳೆಯ ಮಹತ್ವವನ್ನು ಕಂಡುಬರುತ್ತದೆ. ಕೊರವಂಜಿಯು ಅಂದು ರಾಜ್ಯದ ಜನಮನದಲ್ಲಿ ಗಮನಸೆಳೆಯುತ್ತಿದ್ದಳು. ಜೊತೆಗೆ ಅವಳ ವೇಷಭೂಷಣಗಳಿಂದಲೂ ಕೊರವಂಜಿ ಯನ್ನು ಗುರುತಿಸಲಾಗುತ್ತಿತ್ತು. ಕಥೆ-ಪುರಾಣಗಳನ್ನು ಗಮನಿಸಿದಾಗ ಕೊರವಂಜಿಯ ಉಲ್ಲೇಖ ಇದೆ. ಕನ್ನಡ ಸಾಹಿತ್ಯದಲ್ಲಿಯೂ ಕೊರವಂಜಿಯ ಸಂಗತಿ, ಜಾನಪದ ಸಾಹಿತ್ಯದಲ್ಲಿ ಕಾಣಸಿಗುತ್ತವೆ. ಹಲವಾರು ಜನರ ನೋವುಗಳಿಗೆ ಸ್ಪಂದಿಸುತ್ತಿದ್ದಳು. ಅವಳ ಮೋಹಕ ಮಾತುಗಳಿಂದ ಆಕರ್ಷಿಸು ತ್ತಿದ್ದಳು. ಆಂಧ್ರಪ್ರದೇಶದಲ್ಲಿ ಕಣಿ ಹೇಳುವವರಿಗೆ 'ಸೋದಿ ಚಪ್ಪೇವಾಡ್ಲು" ಎಂದು ಕರೆಯುತ್ತಾರೆ. "ಸೋದಿ ಚಪ್ಪುತ್ನನಾಮ್ಮಾ ಸೋದಿ" ಎಂದರೆ ಕನ್ನಡದಲ್ಲಿ ಕಣಿ ಹೇಳ್ತಿನಾಮ್ಮ ಕಣಿ ಎಂದರ್ಥ. ಇವರು ಊರುಗಳಿಗೆ ಬಂದರೆಂದರೆ ಎಲ್ಲರೂ ಸಂತೋಷಪಡುತ್ತಿದ್ದರು. ಹಾಗೆ ತಮ್ಮ ಮನದ ಮಾತುಗಳನ್ನು ಕೇಳಲು ಆತೊರೆಯುತ್ತಿದ್ದರು. ಇಂದು ಜ್ಯೋತಿಷ್ಯದ ಮೋರೆ ಹೋಗುತ್ತಿದ್ದಾರೆ.

ಪುರಾಣದಲ್ಲಿ ನಾರದ ಮುನಿಯು ತ್ರಿಲೋಕದ ಸಮಾಚಾರಗಳನ್ನು ತಿಳಿಸುವ ಜ್ಞಾನಿಯಾದಂತೆ. ಸಮಾಜದ ಜನರ ಲೋಕಸಮಾಚಾರವನ್ನು ತಿಳಿಸುವ ಕಾರ್ಯ ಮಾಡುವವಳು ಕೊರವಂಜಿ. ಕೊರವ ಸಮುದಾಯ ಪ್ರತಿನಿಧಿ ಈ ಕೊರವಂಜಿ. ಕೊರವಂಜಿ ಸಾಹಿತ್ಯ ಪ್ರಕಾರಗಳಾದ ಕಾವ್ಯ, ನಾಟಕ, ಯಕ್ಷಗಾನಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಬಂದಿರುವುದು ಕಂಡುಬರುತ್ತದೆ. ತನ್ನ ಮೂಲಕ ಕೊರವ ಜನಾಂಗದ ವಿಷಯಗಳು ಪ್ರಸ್ತಾಪಗೊಂಡಿದೆ. ಕನ್ನಡ ಸಾಹಿತ್ಯದ ಕೊರವಂಜಿಯ ವಿಚಾರ ಬಂದಿರುವುದು ಹನ್ನೆರಡನೆಯ ಶತಮಾನದ ಪೂರ್ವಾರ್ಧದ ನೇಮಿನಾಥ ಪುರಾಣದಲ್ಲಿ ಅಲೆಮಾರಿ ಜನಾಂಗವಾದ ಇವರು ನಾಡಿನ ಸಂಪರ್ಕದಿಂದ ಸಮಾಜದ ಗಮನ ತಮ್ಮ ಕಡೆಗೆ ಸೆಳೆದುಕೊಂಡಿರುವುದು ಸಾಮಾನ್ಯ ಸಂಗತಿಯಲ್ಲ. ವ್ಯಕ್ತಿ ಬೆಳೆದರೆ ಮಾತ್ರ ಸಮಾಜ ಬೆಳೆಯುತ್ತದೆ. ಜೀವನದ ಎದುರು ನಿಂತಿರುವ ಅನೇಕ ಪ್ರಶ್ನೆಗಳನ್ನು ಎದುರಿಸಲು ಮಾನವನ ವ್ಯಕ್ತಿತ್ವ ವಿಕಾಸವಾಗ ಬೇಕಾದುದ್ದು ಅನಿವಾರ್ಯವು ಹೌದು. ಅಂಥ ಬೆಳವಣಿಗೆ ಇಂದಾಗಿಯೇ ೨೨ನೇ ತೀರ್ಥಂಕರ

ನೇಮಿನಾಥನ ಚರಿತ್ರವಾದ ಈ ಪುರಾಣದಲ್ಲಿ ಜೈನಕವಿ ಒಬ್ಬ ತನ್ನ ಉದ್ದೇಶ ಸಾಧಿಸಿಕೊಳ್ಳಲು ಈ ಸಂದರ್ಭಕ್ಕೆ ಅತಿ ಸೂಕ್ಷ್ಮವಾಗಿ ಕಂಡುಬಂದ ಕೊರವಿಯನ್ನು ಬಳಸಿಕೊಂಡಿದ್ದಾನೆ"(ಜಾನಪದ ಸಾಹಿತ್ಯ ದರ್ಶನ–೩, ಡಾ.ಎಂ.ಎಸ್.ಸುಂಕಾಪುರ, ಪು.೬೧)ಎಂದು ತಿಳಿಸಲಾಗಿದೆ. ಇದು ಶಿಷ್ಟ ಸಾಹಿತ್ಯದ ದಾಖಲೆಯಾಗಿದ್ದರು ಜನಪದರಲ್ಲಿ ಇದು ಮುಂಚೆಯೇ ತೋರಿರಬಹುದು.

'ಕೊರವಂಜಿ ಕಥೆಗಳು ನಮ್ಮಲ್ಲಿ ತಮಿಳುನಾಡಿನ ರಾಮಾನುಜಾಚಾರ್ಯರೊಡನೆಯೇ ಪ್ರವೇಶಿದಂತೆ ತೋರುತ್ತದೆ. ೧೭ನೇ ಶತಮಾನದ ಚಿಕ್ಕ ದೇವರಾಯನ ಕಾಲದ ವೈಷ್ಣವ ಸಾಹಿತ್ಯ ಪ್ರಕಾರದಿಂದಲೇ ಇಂತಹ ಕಥೆಗಳ ಉಗಮವಾಗಿದೆ. ವಿಜಯನಗರ ಕಾಲಕ್ಕೆ ತೆಲುಗರೊಡನೆ ಹೊಕ್ಕು ಬಳಕೆ ಹೆಚ್ಚಿದ್ದರಿಂದ ತೆಲುಗಿನಲ್ಲಿ ಜನಪ್ರಿಯವಾದ ಭಾಮಾ ಕಲಾಪ(ಕುಚಿಪುಡಿ) ವಲಸೆ ಬಂದಷ್ಟು ಕೊರವಂಜಿ ಪಾತ್ರ ಸೃಷ್ಟಿ ಕನ್ನಡ ನೆಲದ್ದಲ್ಲ. ಆಂಧ್ರ ಮತ್ತು ತಮಿಳುನಾಡಿನಿಂದ ಕನ್ನಡ ನಾಡಿಗೆ ಬಂದು ಪ್ರಸಿದ್ಧಿ ಪಡೆಯಿತು"(ದಕ್ಷಿಣ ಕರ್ನಾಟಕದ ಕೊರಮರು ಬಿ.ಪಿ.ರಾಮಯ್ಯ, ಪು.೪೨) ಎಂದು ತಿಳಿಸಿದ್ದಾರೆ. ಆದರೆ ಕೊರವಂಜಿಯು ಕನ್ನಡಿಗರ ಜನಜೀವನದಲ್ಲಿ ಬೆರೆತದ್ದನ್ನು ಕಾವ್ಯದಲ್ಲಿ ಕಾಣುತ್ತೇವೆ. ಕ್ರಿ.ಶ.೧೧೧೫ರಲ್ಲಿದ್ದ ಕರ್ಣಪಾರ್ಯನ ನೇಮಿನಾಥನ ಪುರಾಣವೇ ಇದಕ್ಕೆ ಸಾಕ್ಷಿಯೆಂದು ತಿಳಿಸಿದ್ದಾರೆ.

"ಅರ್ಜುನನ ತಪಸ್ಸು ಪಕ್ವಗೊಂಡಾಗ ಪರೀಕ್ಷಿಸಲು ಶಿವನು ಕಿರಾತನಾದನು. ಶಿವೆಯು ಕಿರಾತೆಯಾದಳು. ಆ ಕಿರಾತತೆಯೇ ಕೊರವಿ ಎಂದು ಹೇಳುವರು. ಪುರಾಣದಲ್ಲಿ ನಾರದನ ಪಾತ್ರವಿದ್ದಂತೆ ಜನಪದ ಸಾಹಿತ್ಯದಲ್ಲಿ ಕೊರವಂಜಿ ಪಾತ್ರವಿದೆ. ಕೊರವಂಜಿ ಕನ್ನಡದ ನಾರದ ನಾರದೆಯರು ಎಂದು ತಿಳಿಸಲಾಗುತ್ತದೆ. ಮಹಾದೇವಿಯಕ್ಕ ಕೊರವಂಜಿಯ ಕಣಿದಾಟಿಯನ್ನು ಅನುಸರಿಸಿ ಹೇಳು ಕೈ ತೊರೆದುಂಡಿ ಎಂಬ ಗೀತ ವಚನವಂತೂ ಕೊರವಂಜಿಯ ಪ್ರತಿಭೆಯನ್ನು ಸಾಕ್ಷಾತ್ಕರಿಸುತ್ತದೆ.

> "ಕೈತೊರೆ ಕೈತೊರೆ ದುಂಡಿ ನಿನ್ನ
> ಮೈಯೊಳಗಿರುವ ವಸ್ತುವನ್ನು ಪೇಳುವೆನು ಎಂದು
> ತಿಳಿಸುತ್ತಾಳೆ"(ಅದೇ, ಪು.೪೩)

ಕಣಿ ಕೇಳುವವರ ಕೈಗಳನ್ನು ಹಿಡಿದುಕೊಂಡು ಅವರ ಮನದಳಾದಲ್ಲಿರುವ ಆಸೆಗಳನ್ನು ತಿಳಿಸಿ ಹೇಳುವೆ ಎಂದು ನುಡಿಯುತ್ತಾಳೆ. ಕೈ ಭವಿಷ್ಯವನ್ನು ತಿಳಿಸುವ ಕಾರ್ಯ ಇಂದಾಗಿತ್ತು. ಕೊರವಂಜಿ ಒಂದು ಕಾಲಕ್ಕೆ ಜನಪದದ ಪ್ರೀತ್ಯಾದರಗಳಿಗೆ ಒಳಗಾದವಳು. ಕಾರ್ಯನೈಪುಣ್ಯತೆಗೆ ಆಕೆಯ ಪ್ರಸಿದ್ಧಿಗೆ ಕಾರಣವಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಜನ ಆಕೆಗೆ ಶರಣು ಹೋಗುತ್ತಿದ್ದರು. ಆಕೆಯ ಪ್ರಭಾವ ಹಾಗೆಯೇ ಇತ್ತು ಎಂಬುದು ಹಿಂದಿನ ಅನುಭವಗಳಿಂದ ತಿಳಿದುಬರುತ್ತದೆ.

"ಕಣಿ ಹೇಳಲು ಬಂದೆ ಕೇಳಮ್ಮ

ಮಣಿ ಮಂತ್ರವ ಬಲ್ಲ ಕೊರವಂಜಿ ನಾನಮ್ಮ

ಮಂತ್ರ ಮಾಟವ ಮಾಡಲು ಬಲ್ಲೆ

ಬಿದ್ದ ಬೀಳನು ಎತ್ತಲು ಬಲ್ಲೆ

ಕದ್ದೋಡೊ ಕಳ್ಳನ ಹಿಡಿದು ಕೂಗಾಡಬಲ್ಲೆ

ಒದ್ದೋಡೊ ಗಂಡನ ಕರೆದು ಕೂಡಿಸಬಲ್ಲೆ

ಇದ್ದಂತೆ ಮಾಡಿದು ನನ್ನ ಮಗಳೆ

ಎಲ್ಲ(ವ) ಬಲ್ಲ ದೇವಲೋಕದ ಕೊರವಿ ನಾನಮ್ಮ"

(ಕರ್ನಾಟಕದ ಬುಡಕಟ್ಟು ಸಂಪುಟ-೨, ಎಂ.ಎಂ.ಕಲಬುರ್ಗಿ, ಪು.೨೯೩)

ಭೂಲೋಕದ ಅಥವಾ ಈ ಲೋಕದ ಜನರನ್ನು ಸೃಜನಶೀಲರಾಗಿ ಮಾಡುವ ಚಿಕಿತ್ಸೆ ರೀತಿಯಲ್ಲಿ ಮನೋವೈದ್ಯ ಆಗಿದಳು. ಕಳ್ಳರನ್ನು ಗುಪ್ತಾಚಾರಿ ಕಾರ್ಯ, ತಪ್ಪು ಮಾಡುವವರಿಗೆ ಶಿಕ್ಷೆ ಕೊಡುವ ಕಾರ್ಯವು ಕೊರವಂಜಿಯದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮಾಟ ವಿದ್ಯೆ, ಮಾಯ ಮಂತ್ರ, ಆಸೆಗಳನ್ನು ಕಳೆದುಕೊಂಡವರನ್ನು ಎದ್ದು ನಿಲ್ಲಿಸಬಲ್ಲಳು. ಮೋಸ ನಿಂದನೆಗಳು ಗುಪ್ತಚಾರಿನಿ ಎಂದೆ ನೋಡಬಲ್ಲಳು. ಹೆಂಡತಿ ಬಿಟ್ಟ ಗಂಡನನ್ನು ಕರೆದು ಸಂಧಾನ ಮಾಡಬಲ್ಲಳು. ಕಣಿ ಹೇಳುವ ದಾಟಿಯಿಂದ ಸಂಗೀತದ ಜ್ಞಾನವು ಕಂಡುಬರುತ್ತದೆ. ಕೊರವರು ಮಾಟ ಮಂತ್ರ ವೈದ್ಯಗಳ ಬಗ್ಗೆ ತಿಳಿದವರು ಎಂಬುದು ಈ ಮಾತುಗಳಿಮದ ತಿಳಿದುಬರುತ್ತದೆ. ಕಣಿ ಹೇಳುವುದು ಕೊರವಂಜಿಯರ ಜನ್ಮಸಿದ್ಧ ಹಕ್ಕು. ಕಣಿ ಹೇಳುವ ವಿಧಾನಗಳು ಹಲವಾರು

೧. ಕೊರವಂಜಿಯರು ಮೊರದಲ್ಲಿ ಅಕ್ಕಿ ಕಾಳುಗಳನ್ನು ಹಾಕಿಕೊಂಡು ಅದನ್ನು ಎಣಿಸುವುದರ ಮೂಲಕ ಕಣಿ ಹೇಲುತ್ತಾರೆ. ಇಂದಿಗೂ ಗೌರಸಂದ್ರದ ಮಾರೆಮ್ಮನ ಜಾತ್ರೆಯಲ್ಲಿ ಕಣಿ ಹೇಳುವ ಕೊರವಂಜಿಯರು ಒಟ್ಟಾರೆ ಸೇರುತ್ತಾರೆ. ಕಣಿ ಹೇಳುವ ಕೊರವಂಜಿಯರಲ್ಲಿ ಒಂದು ಮಂತ್ರದ ಕೋಲು, ಒಂದು ಗೂಡೆ(ಬುಟ್ಟಿ) ಅದರೊಳಗೆ ಮನೆಯ ದೇವರ ಕಟ್ಟು ಇರುತ್ತದೆ. ದೇವರ ಕಟ್ಟಿಗೆಗೆ ಕವಡೆಗಳನ್ನು ಅಂಟಿಸಿರುತ್ತಾರೆ. ಅದರೊಳಗೇನಿದೆ? ಎಂದು ಕೇಳಿದರೆ ಅದು ಬಾಣತಿಯ ಹಸ್ತ, ಇದನ್ನು ಭಾನುವಾರ ಸ್ಮಶಾನದಿಂದ ಶಾಂತಿ ಮಾಡಿ ತಂದು ಇಟ್ಟುಕೊಳ್ಳುತ್ತೇವೆ(ಅದೇ, ಪು.೨೮೩). ಇದು ಸೂರ್ಯಗ್ರಹಣ ಅಥವಾ ಚಂದ್ರಗ್ರಹಣದ ಭಾನುವಾರವೇ ಆಗಿರಬೇಕು ಎನ್ನುತ್ತಾರೆ. ಇವರು ಕಣಿ ಹೇಳುವಾಗ ದೇವರ ಗುಡಿಯನ್ನು ಮುಂದೆ ಇಟ್ಟುಕೊಂಡು ಅದರ ಮೇಲೆ ಕಣಿ ಕೇಳುವವನ ಕೈ ಹಿಡಿದು ರೇಖೆಗಳನ್ನು

ನೋಡುತ್ತ ಬಲಗೈಯಲ್ಲಿ ಮಂತ್ರದ ಕೋಲನ್ನು ತಮ್ಮ ಮನೆಯ ದೇವರನ್ನು ಸ್ಮರಿಸಿ ಕಣಿ ಹೇಳಲು ಪ್ರಾರಂಭಿಸುತ್ತಾರೆ. ಇವರ ಕಣಿಯಲ್ಲಿ ದ್ವಂದ್ವಾರ್ಥ ಬರುವ ಶಬ್ಧಗಳೇ ಹೆಚ್ಚು. ಉದಾಹರಣೆಗೆ 'ಲಕ್ಷ್ಮಿ ವಿಷಯ–ಕೇಳ್ತ ಇದೀಯಾ ಅಂದರೆ ಲಕ್ಷ್ಮೀ ಹೆಣ್ಣು ಆಗಬಹುದು, ಭೂಮಿ ಆಗಬಹುದು, ಸಂಪತ್ತು ಆಗಬಹುದು, ಅದೇನೇ ಇರಲಿ ಆಕೆ ಸಮಾಜದ ಸ್ವಾಸ್ಥ ಕಾಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ ಎಂದು ಹೇಳಬಹುದು.

೨. "ಕೊರವಂಜಿ ಕಣಿ ಹೇಳುವಾಘ ಭವಿಷ್ಯವನ್ನು ಹಾಡಿನ ಧಾಟಿಯಲ್ಲಿ ಹೇಳುತ್ತಾರೆ. ಈಚಲ ಗರಿಯಿಂದ ಮಾಡಿದ ಗಿಲಗಂಜಿ, ನೆಲವು, ಸಿಂಬಿ ಮೊದಲಾದ ವಸ್ತುಗಳನ್ನು ಮಾರಾಟ ಮಾಡುವುದು ಮತ್ತು ಹಚ್ಚೆ ಹೊಯ್ಯುವುದು ಕಂಡುಬರುತ್ತದೆ."(ಕನ್ನಡ ಜಾನಪದ ಕೋಶ(ಸಂ), ಎಚ್.ಎಲ್.ನಾಗೇಗೌಡ, ಪು.೨೪೯) ಈ ತರಹದ ಸಂಗೀತ ರೂಪದಲ್ಲಿ ಮುಖ್ಯ ಗುಣವೆಂದರೆ ಆಧ್ಯಾತ್ಮಕತೆ ಪಾತ್ರಗಳು ವಿಶಿಷ್ಟವಾದ ಸಂಕೇತಗಳಾಗಿರುತ್ತವೆ. ಜೀವಸತಿ ಜೀವಾತ್ಮವನ್ನು ಕ್ರಿಯಾಕಾಂತ ಜೀವಿಗಳು ಕ್ರಿಯೆಗಳನ್ನು ಸಿಂಗಡು ಅನಾಧಿ ಕಾಲದ ಪ್ರಕೃತಿಯನ್ನು ಪ್ರತಿನಿಧಿಸುತ್ತದೆ. ಕುರುವಂಜಿ ಆಧ್ಯಾತ್ಮಜ್ಞಾನದ ಸಂಕೇತವಾಗಿಯೂ ಸಿಂಗಿ ವಿಶ್ವದ ಮೂಲಭೂತ ಚಲನಾಶಕ್ತಿಗೆ ಸಂಕೇತವಾಗಿಯೂ ಇರುತ್ತದೆ. ಇಂತಹ ಸಂಗೀತ ಲಘು ರೂಪಕಗಳ ಮಾಧ್ಯಮದಲ್ಲಿ ಜನಪದರಿಗೆ ಮತ್ತೆ ಮತ್ತೆ ತತ್ವ ಬೋಧನೆ ಮಾಡಲಾಗುತ್ತದೆ. ಧರ್ಮದ ಪ್ರಾಥಮಿಕ ಸಿದ್ಧಾಂತಗಳನ್ನು ನಾಟಕದ ನಡುವೆ ವಿನೋದವಾಗಿ ತಿಳಿಸಲಾಗುತ್ತದೆ(ಶ್ರೀ ಕೃಷ್ಣ ಪಾರಿಜಾತ).

ಇಂತಹ ಒಬ್ಬ ವ್ಯಕ್ತಿಯನ್ನು ಈ ಜನಪದ ರೂಪದಲ್ಲಿ ಸೇರಿಸಲಾಗಿದೆ. ರಂಗಸ್ಥಳದಲ್ಲಿ ಮೇಲೆ ಕೊರವಂಜಿ ಬರುವುದನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತದೆ. ಇದು ಸಂತೋಷ ವನ್ನುಂಟು ಮಾಡುವ ನಾಟಕದ ಒಂದು ವಿಷಯವಾಗಿರುತ್ತದೆ. ಅವಳ ಕೂಗು ಹಿಂದಿನ ದೃಶ್ಯದ ಒತ್ತಡವನ್ನು ಸಡಿಲಗೊಳಿಸುತ್ತದೆ. ಮುಖ್ಯವಾಗಿ ಈ ಕೊರವಂಜಿ ಪಾತ್ರದಲ್ಲಿ ಶೃಂಗಾರದ ವಸ್ತುಗಳನ್ನು ಸೇರಿಸಲಾಗುತ್ತದೆ. ಕೆಲವು ಸಾರಿ ಪ್ರೇಮಿಯೇ ಕೊರವಂಜಿಯ ಪಾತ್ರಧರಿಸಿ ವಿರಹಿ ಯಾದ ತನ್ನ ಪ್ರೇಮಿಸಿಯೇ ಮುಂದೆ ಬರುತ್ತಾರೆ. ಅವರ ಭೇಟಿ ಅವರ ಕೋರಿಕೆಗಳನ್ನು ಈಡೇರಿಸುತ್ತದೆ. ಉದಾಹರಣೆಗೆ ಶ್ರೀಕೃಷ್ಣನು ಸತ್ಯಭಾಮೆಗೆ ತಿಳುವಳಿಕೆ ಹೇಳಲು ಕೊರವಂಜಿಯ ರೂಪದಲ್ಲಿ ಬಂದು ತಿಳುವಳಿಕೆ ಹೇಳಿ ಹೋಗುವುದನ್ನು ಶ್ರೀಕೃಷ್ಣ ಪಾರಿಜಾತದಲ್ಲಿ ಕಂಡುಬರುವುದುಂಟು. ಸತ್ಯಭಾಮೆಯ ಅಹಂಕಾರ, ಜಂಬವನ್ನು ಇಳಿಸಿ ಅವಳ ಮನಪರಿವರ್ತನೆ ಮಾಡುವ ಶಕ್ತಿ ಕೊರವಂಜಿ ಕಣಿಯಲ್ಲಿತ್ತು ಎಂಬುದು ತಿಳಿದುಬರುತ್ತದೆ.

"ಕೊರವಂಜಿ ಕಣಿ ಹೇಳುವ ಹೆಂಗಸರಿಗೂ ಅನ್ವಯವಾಗು ಹೆಸರು, ಸಾಂಪ್ರದಾಯಿಕವಾಗಿ ಒಂದು ವರ್ಗದ ಹೆಂಗಸರು, ಮುಂಬರುವ ಘಟನೆಗಳನ್ನು ಹೇಳುವ ತರಬೇತಿಯನ್ನು ಪಡೆದಿರುತ್ತಾರೆ.

ಅವರಿಗೆ ಕೊಡಬೇಕಾದ ಶುಲ್ಕ ಬಹಳ ಕಡಿಮೆ. ಒಂದು ಹಿಡಿ ಅಕ್ಕಿ, ಭತ್ತ ಅಥವಾ ಧಾನ್ಯ ಮತ್ತು ಸ್ವಲ್ಪ ಹಣ ಕೊಟ್ಟರೆ ಸಾಕು. ಭವಿಷ್ಯವನ್ನು ಕುರಿತು ಹೇಳುವ ಶಕ್ತಿ ಅವರಿಗಿದೆ ಎಂದು ನಂಬುವುದರಿಂದ ಅವರನ್ನು ಆಶ್ರಯಿಸಲಾಗುವುದು. ಇವರು ಗ್ರಾಮದ ಬೀದಿಗಳಿಗೆ ಬರುವುದನ್ನು ಜನರು ನಿರೀಕ್ಷಿಸುತ್ತಾ ಇರುತ್ತಾರೆ. ಆಕೆಯ ಕೂಗುವ 'ಎರುಕ' ಎಂದರೆ ಅರಿವು ಎಂದರ್ಥ, (ಅಸ್ತಿತ್ವದ ಅರಿವನ್ನು ಪಡೆದಿರುವುದು) ಹತ್ತಿರದ ಸ್ಥಳಗಳಲ್ಲಿರುವ ದೇವದೇವತೆಯನ್ನು ಪ್ರಾರ್ಥಿಸುವ ಒಂದು ಸಾಂಪ್ರದಾಯಿಕ ಗೀತೆಯನ್ನು ಇವರು ಹಾಡುತ್ತಿದ್ದರು. ಅನಂತರ ಗುರುವಿಗೆ ಪ್ರಣಾಮವನ್ನು ಸಲ್ಲಿಸಲಾಗುತ್ತದೆ. ಆ ನಂತರ ಕಣಿ ಹೇಳುವುದು ಪ್ರಾರಂಭವಾಗುತ್ತದೆ. ಅದನ್ನು ಒಗಟುಗಳಲ್ಲಿ ಅಥವಾ ರಹಸ್ಯಾರ್ಥವುಳ್ಳ ಚಟುವಟಿಕೆಗಳಲ್ಲಿ ಹೇಳಲಾಗುತ್ತದೆ. ಅವರು ಮಾತುಗಳು, ವ್ಯಥೆಗಳಿಂದ ಪಾರಾಗಬೇಕೆಂದು ಬಯಸುವ ಅನೇಕರಿಗೆ ಅನ್ವಯವಾಗುತ್ತದೆ. ಕಣಿ ಕೇಳುವವರು ಸಾಮಾನ್ಯವಾಗಿ ಚಿಂತೆಗೂ ಕಳವಳಕ್ಕೂ ಈಡಾದ ಗೃಹಸ್ಥರು, ಆಸ್ತಿಯನ್ನು ಕಳೆದುಕೊಂಡುವರು, ಆಸ್ತಿಯನ್ನು ಗಳಿಸಬೇಕೆಂದು ಕೊಂಡವರು, ಸಾಕುಪ್ರಾಣಿಗಳನ್ನು ಕಳೆದುಕೊಂಡವರು. ತಮ್ಮ ಪ್ರೀತಿಯವರು ಹತ್ತಿರದವರು ರೋಗಪೀಡಿತರಾಗುವವರು, ಆಗಿಸುತ್ತಾ 'ಎರಕ' ಕೇಳುವುದು ಅವರಿಗೆ ನೆಮ್ಮದಿಯನ್ನು ಕೊಡುತ್ತದೆ."

ಅಕ್ಷರ ಹೋದದಿದ್ದರೂ ಲೋಕ ಜೀವನದ ತಿಳುವಳಿಕೆ ಅವರಲ್ಲಿರುತ್ತದೆ. ಊರೂರು ಶಾಂತಿ, ನೆಮ್ಮದಿಯನ್ನು ನೀಡುವವಳು ಎಂಬುದು ಈ ಮಾತುಗಳಿಂದ ಹೇಳಲಾಗುತ್ತದೆ. ಹೇಳಿಕೆಗೆ ಕೇಳುವುದು ಸಾಮಾನ್ಯವಾಗಿ ಇದೇ ರೀತಿಯಲ್ಲಿರುತ್ತದೆ. ಇಲ್ಲಿಯ ತಮ್ಮ ಪ್ರತಿಯೊಂದು ಸಮಸ್ಯೆಗಳ ಬಗ್ಗೆ ತಿಳಿಸಿ, ಪರಿಹಾರ ಕೇಳಿಕೊಳ್ಳುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯು ಇಂದಿನ ದಿನಗಳಲ್ಲಿ ಅನೇಕ ದೇವರುಗಳಿಗೆ ಹೇಳಿಕೆ ಕೇಳುವುದಕ್ಕೆ ಹೋಗುತ್ತಾರೆ. ಅವು ಎಲ್ಲ ಜಾತಿಯ ದೇವರುಗಳಾಗಿರಬಹುದು. ತಮ್ಮ ನೋವು, ಕೆಲಸಗಳನ್ನು ನಿರ್ವಹಿಸಿಕೊಳ್ಳಲು, ಮಾನಸಿಕ ನೆಮ್ಮದಿಯನ್ನು ಪಡೆಯಲು ಹೇಳಿಕೆ ಕೇಳಲಾಗುತ್ತದೆ.

"ಕುರುತ್ತಿಯಾಟ ಒಂದು ಮೋಹಕ ದೃಶ್ಯಕಲೆ. ಇದು ಕೇರಳದಲ್ಲಿ ಬಹಳ ಕಡೆ ಇದೆ. ನಡೆಸುವವರು ಕುರುವರು. ಇದನ್ನು ನಾಯರ ಜನಾಂಗವೂ ಇದನ್ನು ನಡೆಸುತ್ತಾರೆಂದು ತಿಳಿಯುತ್ತದೆ. ದೇವಸ್ಥಾನದ ಹೊರಗೆ ಉತ್ಸವ ಸಂದರ್ಭದಲ್ಲಿ ಸಾಮಾನ್ಯ ಜನರಿಗಾಗಿ ಪ್ರದರ್ಶಿಸುವ ಕಲೆ, ದೇವಸ್ಥಾನದ ಒಳಗೆ ಸಂಭಾವಿತರಾಗಿ ಕೊತ್ತಂಗಳದಲ್ಲಿ ಕೂತ್ತು ನಡೆಯುತ್ತಿರುತ್ತದೆ. ಕುರುತ್ತಿಯಾಟದಲ್ಲಿ ತಾಯಿ ಮುತತಿಯಮ್ಮ ಸಾಮಾನ್ಯ ಅಟ್ಟು ಮುಂಭಾಗದಲ್ಲಿ ಕಂಚಿನ ದೀಪ ಅವರ ಪಕ್ಕ ಹಾಡುಗಾರರು, ಮೃದಂಗ ಮತ್ತು ಎಲೆತಾಳ, ವಾದ್ಯಗಳು ಜನಾಂಗದ ಉಡುಗೆ-ತೊಡುಗೆ ಪಾತ್ರಗಳ ವೇಷ ನಾಟಕಾರಂಭದಲ್ಲಿ ಗಣಪತಿ ಮತ್ತು ಸರಸ್ವತಿ ಪ್ರಾರ್ಥನೆ. ನಂತರ ಕುರುತ್ತಿಯರ ಪ್ರವೇಶ ಈ ಇಬ್ಬರಲ್ಲಿ ಒಬ್ಬಳು ಪಾರ್ವತಿ, ಮತ್ತೊಬ್ಬಳು ಲಕ್ಷ್ಮಿಯಾಗಿ ತಮ್ಮ ತಮ್ಮ

ಗಂಡಂದಿರ ಮಹತ್ವ ಮತ್ತು ತಮ್ಮ ಸೌಂದರ್ಯ ಪ್ರಶಂಸೆ, ಇದು ಮುಗಿಯದ ಕಥೆಯಾಗಿ ಬಹಳ ಕಾಲ ಮುಂದುವರೆಯುತ್ತದೆ. ಸರಸ್ವತಿ ಪ್ರವೇಶಿಸಿ ಅವರಿಬ್ಬರನ್ನು ಸಮಾಧಾನ ಪಡಿಸುತ್ತಾಳೆ. ಅನೇಕ ವರಸೆಗಳ ನೃತ್ಯವನ್ನು ಮಾಡುತ್ತಾ ಕುರುವ ಪ್ರವೇಶಿಸುತ್ತಾನೆ. ಇದು ಉತ್ತರ ಸಂಪ್ರದಾಯ. ದಕ್ಷಿಣ ಸಂಪ್ರದಾಯದಲ್ಲಿ ಕುರುವ ಕುರುತ್ತಿಗಳು ಮುತ್ತಿರಮ್ಮ ಸೇಂದಿ ವ್ಯಾಪಾರಿಗಳು ಮತ್ತು ಊರಗೌಡ ಬರುತ್ತಾರೆ. ಕುರುತಿಯರು ಪಾರ್ವತಿ ಮತ್ತು ಲಕ್ಷ್ಮಿಯಾಗಿ ಜಗಳವಾಡಿ ಹೋದ ಮೇಲೆ ಮೂರನೆಯ ರಂಗದಲ್ಲಿ ಕುರುವ ಪ್ರವೇಶಿಸುತ್ತಾನೆ. ಕಳೆದ ರಾತ್ರಿ ತನ್ನನ್ನು ಕೈ ಬಿಟ್ಟು ಹೋಲದ ಕುರತ್ತಿ ಎಲ್ಲಿ ಎಂದು ಹುಡುಕುವಾಗ ಕುರತ್ತಿ ಎದುರು ಬರುತ್ತಾಳೆ. ಹೆಂಡತಿಯ ಬಗ್ಗೆ ಸಂಶಯಗ್ರಸ್ತದಿಂದ ಕುರುವ ಅನೇಕ ರೀತಿಯ ಪ್ರಶ್ನೆಗಳನ್ನು ಹಾಕುತ್ತಾನೆ. ಆಕೆ ತನ್ನ ಅನುಭವಗಳನ್ನು ವಿವರಿಸುವುದರ ಜೊತೆಗೆ ಕುರುವನ ಪ್ರಶ್ನೆಗಳಿಗೆ ಜಾಣ್ಮೆಯಿಂದ ಉತ್ತರ ಕೊಡುತ್ತಾಳೆ. ಉತ್ತರ ಸಂಪ್ರದಾಯದಲ್ಲಿ ಏಕದೃಶ್ಯವಾಗಿ ರೂಪಿತವಾದ ಈ ನಾಟಕ ಹೆಚ್ಚು ರಂಗಗಳನ್ನು ನಿರ್ಮಿಸಿಕೊಂಡಿದೆ.

ಜಾಗತೀಕರಣ ಸಂದರ್ಭದಲ್ಲಿ ಅನೇಕ ಪಂಡಿತರು ಜ್ಯೋತಿಷ್ಯರ ಬಳಿ ಹೋಗಿ ಭವಿಷ್ಯ ಕೇಳುತ್ತಾರೆ. ಆದರೆ ಅದಕ್ಕೆ ನೀಡುವ ಪ್ರಾಶಸ್ತ್ಯ, ಕೊರವಂಜಿಗಿಲ್ಲ. ಅವಳನ್ನು ನಿರ್ಲಕ್ಷ್ಯದಿಂದ ನೋಡುತ್ತಾರೆ. ಸಮಾಜದಲ್ಲಿ ನೋಡುವ ಪರಿಯಿದು. ವಿದ್ಯೆ ಇಲ್ಲದಿದ್ದರೂ ಸರಸ್ವತಿಯ ಕೃಪೆ ಇವರಲಿರುತ್ತದೆ. ಜ್ಞಾನ ಎಂಬುದು ಅಕ್ಷರದಿಂದಲ್ಲ, ತಿಳುವಳಿಕೆಯಿಂದಲೂ ಜ್ಞಾನ ಜನಸಾಮಾನ್ಯರಲ್ಲಿ ಪಸರಿಸಿದೆ. ಕುರುತ್ತಿಯಾಟವನ್ನು ನಡೆಸುವರಲ್ಲಿ ತುಳ್ಳಲ್ ನೃತ್ಯವನ್ನು ನಡೆಸುವವರೂ ಉಂಟು. ಇದರಿಂದ ನೃತ್ಯದಲ್ಲಿ ಅವರು ಹೆಚ್ಚು ಪರಿಗಣಿತರಾಗಿರುತ್ತಾರೆ. ನಂತರ ಕಾಲದಲ್ಲಿ ಹೆಣ್ಣುಗಳೇ ಹೆಣ್ಣು ವೇಷಗಳನ್ನು ಕಟ್ಟುತ್ತಿದ್ದರೆಂದು ತಿಳಿಯುತ್ತದೆ."(ಆಂಧ್ರಪ್ರದೇಶದ ಜಾನಪದ, ಬಿ.ರಾಮರಾಜು, (ಅನು) ಆರ್.ವಿ.ಸುಂದರಂ, ಪು.೧೪೪)

ಕೇರಳ ಜನಪದ ರಂಗಭೂಮಿಯಲ್ಲಿ ಕೊರವಂಜಿಯ ಸಾಂಪ್ರದಾಯಿಕ ಪಾತ್ರವನ್ನು ನಡೆಸುವವರು ಕೊರವರು ಎಂದು ತಿಳಿಸಲಾಗಿದೆ. ದೇವಾಲಯಗಳ ಹೊರಭಾಗದಲ್ಲಿ ಹಬ್ಬದ ಉತ್ಸವದ ದಿನಗಳಲ್ಲಿ ಪಾತ್ರವನ್ನು ನಡೆಸುತ್ತಾರೆ ಎಂದು ತಿಳಿಸಲಾಗಿದೆ.

"ಎಂಟು ಮಂದಿ ನಂಟರು ನಿನಗಮ್ಮ
ಉಂಟಾದ ಹತ್ತು ದಿಕ್ಕಿನ ಒಳಗಮ್ಮ
ಗಂಟಲು ಮೆಟ್ಟಲು ಕೊಂಡೈದಾರೆ ಅಮ್ಮ
ಸುಂಟರಗಾಳಿ ತಿರುಗುವೆಯಮ್ಮ ನೀಲ

ಕಂಠನಂಪ್ರಿಯನು ಬಿಡದಿರು ಪಿಡಿಯಮ್ಮ-ಇದಕ್ಕ ಜನಪದವೇ ಮೂಲ ಆಕರವೆಂದು ಮಹಾದೇವಿಯಕ್ಕ ತನ್ನ ವಚನಕ್ಕೆ ನೆರವಾಗಿದೆ ಎಂದು ತಿಳಿಸುತ್ತಾರೆ.

ಎಂಟು ಮಂದಿಯು ನಿನ್ನಹ ನಂಟರು ಕಾಣೆ
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ
ಸುಂಟರಗಳೀಲಿ ತಿರುಗೂವೆಯಲ್ಲೇ"

"ಕೊರವಂಜಿಯ ಪ್ರಭಾವಯುತವಾದ ವರ್ಚಸ್ಸು ಅಂದರೆ ಸುಮಾರು ಕ್ರಿ.ಶ.೧೧೧೫ಕ್ಕೆ ಕಂಡು ಬರುತ್ತಿದ್ದುದರಿಂದಲೇ ಕರ್ಣಪಾರ್ಯನು ಕೊರವಂಜಿಯನ್ನು ಬಳಸಿಕೊಂಡಿದ್ದಾನೆ.

ಕೊರವಿಯರ ರೂಪಿನಿಂದವ
ರರಿತಂ ಪೇಳಂ ಪೇವೆನತ್ತು ಮೆಳ್ತಿರೆ ಕಂಡಾ
ಪರಮೆಯ ವೊಲೆಸೆವ ಕುಂತಳೆ
ಯುರುಗುಜ್ಜಂ ಪೇಳ್ಗುಮೆಂದು ಕರೆಯಿಸೆ ಬಂದಿರ್
ವ। ಅಂತು ಬರಲವರೆ ಕಾಂತಕ್ಕಾಕ್ಕಾಂತೆಯೆಯ್ದು ಮನದ ಮಾದಿಂಗರೊಳ್
ಸೊಗಯಿಪೊರ್ವನ ನೆಂದೊಡಲ್ತು ಪ್ರಸಿದ್ಧೈಪೇಳೆಂದು ನಕ್ಕಳ್ಗೆ ಪೇರ
ಮೃಗಾಶಾ ಬೇರ್ಪಣೆ ಪೇಳ್ದು ತಪ್ಪೆ ನನಗೆ ನೀನು ಮುಚ್ಚುವ್ಯೆಸ್ವೇಚ್ಛೆಯಾ
ಗಗೆ ಪೇಳ್ವೆಂ ನಿಜಕಾರ್ಯ ಸಿಧಿಯನೆನಲ್ ಕೇಳ್ದಾಕೆ ಪೇಳೆಂಬುದುಂ
ಕಂ॥ ಅದು ನಿಗಾದಪ್ಪುದು ಸ।
ಮ್ಮದದಿಂದಿರು ದೇವಿ ದೇವಿಯಾಣೆ ವಿಷಾದಾ
ಸ್ಪದೆ ಯಾಗದಿರೆನೆ ಮನ್ನಿಸೆ
ಸುದತಿ ಸಮುತ್ಸವದಿನಿರ್ದು ಕೊರವಿಯತಾಗಳ
ವ॥ ಪೋಗಿ ತದ್ರೂಪರ್ಮನಪುಹರಿಸಿ"

(ಜಾನಪದ ವ್ಯಕ್ತಿ ಮತ್ತು ವಿಚಾರ, ಡಾ.ಹಿ.ಚಿ. ರಾಮಚಂದ್ರೇಗೌಡ, ಪು.೧೯೧–೧೯೨)

ಎಂಬುದರಿಂದ ಕೊರವಂಜಿಯರು ರಾಜಾಸ್ಥಾನಕ್ಕೆ ಬಂದು, ರಾಣಿಯರ ಏಕಾಂತ ಸ್ಥಳಗಳಿಗೆ ಹೋಗಿ ಕಣಿ ಹೇಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇದರಿಂದ ಅಂದಿನ ಕೊರವಂಜಿಯ ಸ್ಥಾನಮಾನದ ಬಗೆಯು ಪಾರಿಜಾತವೂ ಹೇಳಿದೆ. ಸಮಾಜದಲ್ಲಿ ಪ್ರಭಾವಯುತವಾಗಿ ಬೆಳೆದಿದ್ದಳು ಎಂಬುದು ಇದರಿಂದ ತಿಳಿದುಬರುತ್ತದೆ.

ಕಣಿ ಹೇಳುವ ವರ್ಣಮಯ ವ್ಯಕ್ತಿತ್ವದ ಕೊರವಂಜಿ ಬರಹಗಳಲ್ಲಿಯೂ ಹಾಡುಗಳಲ್ಲಿಯೂ ಕಾಣಸಿಗುತ್ತಾಳೆ. ಹನ್ನೆರಡನೇ ಶತಮಾನಕ್ಕಾಗಲೀ ದಾಟಿ ನಮ್ಮ ಉಪದೇಶಕ್ಕೂ ಅನುಕೂಲವಾಗುತ್ತದೆಂದು ಅದನ್ನು ಶರಣರು ಅಳವಡಿಸಿಕೊಂಡಂತೆ ತೋರುತ್ತದೆ. ಇದಕ್ಕೆ ತಮ್ಮ ಆರಾಧ್ಯ

ದೈವವಾದ ಶಿವಪಾರ್ವತಿಯರು ಕೊರವ-ಕೊರವಂಜಿ ವೇಷದಿಂದ ಜನರಿಗೆ ಕಾಣಿಸಿಕೊಳ್ಳುವ ಚಿತ್ರವು ಪ್ರೇರಣೆ ನೀಡಿರಬಹುದು.

ಪಾರ್ವತಿ ಕೊರವಂಜಿಯಾಗಿ ಕೌಸಲ್ಯೆಗೆ ಕಣಿ ಹೇಳಿದ ಕಥೆ ಅಲ್ಲದೆ ಪುರಾಣಗಳಲ್ಲಿ ಕಂಡುಬರುವ ಧರ್ಮರಾಜನನ್ನು ವಹಿಸಿದ ಕೊರವಂಜಿ ಹೆಣ್ಣೊಬ್ಬಳ ಕಥೆ ಪ್ರಧಾನವಾಗಿದೆ. ಹದಿನಾರರ ಹರೆಯದ ಗಿರಿಜೆ ಶಿವನನ್ನು ಮೆಚ್ಚಿಸುವ ಅತ್ಯುಗ್ರ ತಪಸ್ಸನ್ನು ಆಚರಿಸುತ್ತಿದ್ದಾಗ ಆಕೆಯನ್ನು ಪರೀಕ್ಷಿಸಲು ಈಶ್ವರ ಹಲವಾರು ವೇಷ ಧರಿಸುತ್ತಾನೆ. ಅಂಥ ಹಲವಾರು ಪಾತ್ರಗಳಲ್ಲಿ ಕೊರವಂಜಿಯ ಪಾತ್ರವೂ ಒಂದು.

ಡಾ.ಕೃಷ್ಣ ಕಟ್ಟೆಯವರು ಶೋಭಾನ ಪದ ಮತ್ತು ತಾಳಿಕೋಟೆಯ ಹಸ್ತಪ್ರತಿ ಹಾಗೂ ಜೀಜಾಬಾಯಿಯವರ ಚಿತ್ರರಹಿತ ಶ್ರೀಕೃಷ್ಣ ಪಾರಿಜಾತದಲ್ಲಿ ತಿಳಿಸುತ್ತದೆ. ಕೊರವಂಜಿ ಕುಕ್ಕೆ, ಎಂದರೆ ಕಣಿ ಹೇಳುವಾಗ ಕೊರವ ಹೆಣ್ಣು ಉಪಯೋಗಿಸುವ ಬುಟ್ಟಿ. ಇದರಲ್ಲಿ ಆಕೆ ಅವರು ಮಾರಾಟ ಮಾಡುವ ವಸ್ತುಗಳನ್ನು ಇಟ್ಟುಕೊಂಡಿರುತ್ತಾಳೆ. ಕೊರವಂಜಿ ಕುಕ್ಕೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಳು ಎಂಬುದು ತಿಳಿಯುತ್ತದೆ.

ಸಾಮಾನ್ಯ ಜನರು ಸಂಕಟ ನೋವಿನಲ್ಲಿ ನರಳುತ್ತ ಓರುಗಲ್ಲುರಾಯ ಕಣಿಯವರನ್ನು ಕರೆತರುವಂತೆ ಹೇಳಿದ್ದು, ದೇವಿಯೇ ಕಣ್ಣಿಯವಳ ರೂಪ ತಾಳಿ ತಾನೇ ಬಂದು ಎಲ್ಲಮ್ಮನಿಗೆ ಓಲೆ, ಬರೆದುದರ ಫಲವೆಂದು ವಿವರಿಸಿದಳು. ಪರಿಹಾರವಾಗಿ ಮೈಮೇಲಿನ ಶತಕೋಟಿ ಲಿಂಗವನ್ನು ತೆಗೆದು ಪ್ರಪಂಚಕ್ಕೆ ಬಿಟ್ಟು ಎಲ್ಲಮ್ಮನಿಗೆ ಒಕ್ಕಲಾಗಬೇಕೆಂದು ಸೂಚಿಸಿದ್ದಳು. ಕೊರವಂಜಿ ಹೇಳಿಕೊಟ್ಟ ಕಿರೀಟ ಧರಿಸಿ ಶೋಧಿಸಿದನು. ಕೊರವಂಜಿ ಹೇಳಿದ ಮಾತುಗಳು ಒಂದಲ್ಲ ಒಂದು ದಿನ ಸತ್ಯವಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ.

ಡಾ.ಓಪರ್ಟ್ ಅವರು It is highly probable that name and the occupation of the forune telling kuruvanlu inde the Telugu people to calle this tribe yarukulavandlu ಎಂದು ಹೇಳುವ ಈ ಮಾತಿನಿಂದ ಅವರ ಮಾಡುವ ವೃತ್ತಿಯಿಂದಲ್ಲೇ ಜಾತಿಯ ಹೆಸರು ಬಂದಿದೆ ಎಂಬುದು ತಿಳಿಯುತ್ತದೆ(ದಕ್ಷಿಣ ಕರ್ನಾಟಕದ ಕೊರಮರು, ಬಿ.ವಿ.ರಾಮಯ್ಯ, ಪು.೪೩). ಕರ್ನಾಟಕದಲ್ಲಿ ಇವರನ್ನು ಕೊರವರು, ಕೊರವ ಶೆಟ್ಟರು, ಭಜಂತ್ರಿಗಳು ಎಂದೆಲ್ಲ ಗುರುತಿಸಿದ್ದಾರೆ. "ಹೆಣ್ಣು ಮಕ್ಕಳನ್ನು ಕೊರವಿ, ಕೊರವಂಜಿ ಮೊದಲು ಹೆಸರುಗಳಲ್ಲಿ ಗುರುತಿಸುತ್ತಾರೆ. ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ತಮಿಳಿನ ಪುಲ್ಲಿಂಗ ರೂಪ ಕುರುವನ ಎಂದಾದರೆ 'ಕುರತ್ತಿ'. ಕುರವಿ, ಕುರವಂಜಿ ಎಂಬ ಹಲವಾರು ಸ್ತ್ರೀ ರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕೊರವಂಜಿ, ಕೊರವತಿ, ತೆಲುಗಿನಲ್ಲಿ ಕೊರವತ, ಕೊರವಂಜಿ

ರೂಪಗಳು ಪ್ರಯೋಗದಲ್ಲಿದೆ. ಕು–ಕುರ–ಕುರು–ಕುರುವಿ–ಕೊರವಿ–ಕೊರವತಿ–ಕುರಂಜಿ–ಕೊರಮಿ–ಕೊರವಂಜಿ ಎಂದು ಕಾಲದಿಂದ ಕಾಲಕ್ಕೆ ರೂಪಾಂತರ ಗೊಂಡಿದೆ ಎಂದು ಹೇಳಲಾಗುತ್ತದೆ"(ಅದೇ, ಪು.೪೦).

ಜನರಲ್ಲಿ ಪ್ರಾಚೀನ ಕಾಲದಿಂದಲೂ ಅತಿ ನೈಪುಣ್ಯತೆಯನ್ನು ಪಡೆದವರು ಕೊರಮ ಬುಡಕಟ್ಟಿನ ಮಹಿಳೆಯರು. ಹಚ್ಚೆ ಹಾಕುವವರು ಮಹಿಳೆಯರು. ಪುರುಷು ಹಚ್ಚೆ ಹೊಯ್ಯುವವರಲ್ಲ. ಇದು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಗಂಡಸರು ಅಲ್ಲಿ ಇಲ್ಲಿ ಅಪರೂಪಕ್ಕೆ ಹೊಯ್ಯಬಹುದು. ಗ್ರಾಮೀಣ ಹೆಣ್ಣು ಮಕ್ಕಳ ಮೈ ಮೇಲೆ ಗಂಡಸರಿಂದ ಹಚ್ಚೆ ಹಾಕಿಸಿಕೊಳ್ಳಲು ನಾಚಿಕೊಳ್ಳುವುದುಂಟು. ಆದರೆ ಕೊರವಂಜಿಯರು ಹಚ್ಚೆ ಹಾಕುತ್ತಿದ್ದ ಬಗ್ಗೆ ಅಬೆ ದುಬಾಬೋಯಿಸ್ ಅರು "Them as carries and basket makers who were perpetually wandering about and showed much affinity with the Cypsies of Europe, especially in telling fortunes, the women were Skill full tattoers"(ಕರ್ನಾಟಕ ಬುಡಕಟ್ಟು, ಸಂಪುಟ ೭, ಎಂ.ಎಂ.ಕಲಬುರ್ಗಿ, ಪು.೨೮೮) ಎಂದಿದ್ದಾರೆ.

ಹಚ್ಚೆ ಹೊಯ್ಯುವುದರಲ್ಲಿ ಸಾಮಾನ್ಯವಾಗಿ ಹೆಂಗಸರು, ಕಣಿ ಹೇಳಿ ಭಿಕ್ಷೆ ಎತ್ತುತ್ತ ಊರೂರು ತಿರುಗುವ ಅವರು ಕಪ್ಪು, ಕೆಂಪು, ಹಸಿರು ಮೊದಲಾದ ಬಣ್ಣವನ್ನು ಸೂಜಿಯಲ್ಲಿ ಅದ್ದಿಕೊಂಡು ಹಚ್ಚೆ ಹೊಯ್ದಿಕೊಳ್ಳುವರು. ಚರ್ಮಕ್ಕೆ ಚುಚ್ಚಿ ಬೇಕಾದ ಆಕಾರವನ್ನು ನಿರ್ಮಿಸುತ್ತಾರೆ. ಈ ದಿನಗಳಲ್ಲಿ ಯಂತ್ರಗಳ ಮೂಲಕ ಪುರುಷರು ಜಾತ್ರೆ, ಉತ್ಸವಗಳಲ್ಲಿ ಆಧುನಿಕ ಹಚ್ಚೆ ಹಾಕುವುದನ್ನು ಕಾಣಬಹುದು. ಕೊರವರು ತಮ್ಮ ಕುಳುವ ಭಾಷೆಯಲ್ಲಿ ಪಚ್ಚೆ ಎಂದು ಹಚ್ಚೆಯನ್ನು ಕರೆಯುತ್ತಾರೆ. ಒಂದು ಕಾಲದಲ್ಲಿ ಕೊರವಂಜಿಗಳಿಗೆ ಕಣಿ ಹೇಳುವುದೇ ವೃತ್ತಿಯಾಗಿದ್ದು. ಇದರಿಂದ ಹೊಟ್ಟೆ ತುಂಬದೆ ಹೋದಾಗ ಜೀವನೋಪಾಯಕ್ಕೆ ಈಗೀಗ ಈಚಲ ಕಡ್ಡಿಗಳಿಂದ ಬುಟ್ಟಿ, ತಟ್ಟೆ ಜಿಲ್ಲೆಗಳನ್ನು ಹೆಣೆದು ಮಾರಿ ಜೀವಿಸುತ್ತಿದ್ದಾರೆ. ಈ ಸಮುದಾಯದವರು ಕಣಿ ಹೇಳುವುದರ ಜೊತೆಗೆ ತಮ್ಮ ಮೂಲ ಕಸುಬಾದ ಬುಟ್ಟಿ, ಮೊದಲಾದವನ್ನು ಹೆಣೆಯುವ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಸನಾದಿ ಚನ್ನಬಸಪ್ಪ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಸದಾ ಬರಪೀಡಿತ ಪ್ರದೇಶ. ಆದರೆ ಈ ಬೆಂಗಾಡಿನಲ್ಲಿ ಕಲೆಗೆ ಮಾತ್ರ ಬರವಿಲ್ಲ. ಕಲೆಯ ಕಣಜದ ತುಂಬ ಕಲಾವಿದರ ಸುಗ್ಗಿ, ಹಳ್ಳಿಗೆ ಹತ್ತಾರು ಪ್ರತಿಭಾವಂತ ಕಲಾವಿದರ ದಂಡೆ ಕಾಣಬಹುದು. ಅಂಥ ಅಪರೂಪದ ಕಲಾವಿದರಲ್ಲಿ ಮತ್ಯಮುದ್ರದ ಸನಾದಿ ಚನ್ನಬಸಪ್ಪ ಅಗ್ರಗಣ್ಯರು. ಅವರು ಕೈಯಲ್ಲಿ 'ಸೈನಾಯಿ'(ಇದನ್ನು ಸಾಹನಾಯಿ ಎಂದು ಕರೆಯುತ್ತಾರೆ) ಹಿಡಿದು ನುಡಿಸತೊಡಗಿದರೆಂದರೆ ಕಿವಿಗಳಿಗೆ ಅದೊಂದು

ರಸದೌತಣ. ಕೇವಲ ಎರಡೂವರೆ ಮೂರಡಿ ಉದ್ದದ ಈ ಕಟ್ಟಿಗೆಯ ಕೊಳವೆಯಿಂದ ಹೊಮ್ಮುವ ನಾದ ಅಮೋಘವಾದುದು. ನಾನಾಡಿ ಕಲಾವಿದರ ಈ ಮಧುರ ಸ್ವರಸಂಗೀತಕ್ಕೆ ಎಂಥ ಗಾಂಪನೂ ತಲೆ ತೂಗಲೇಬೇಕು. ನಾದದ ಕಿನ್ನರಲೋಕ ಸೃಷ್ಟಿಸುತ್ತ ನೆರೆದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಿಬಿಡಬಲ್ಲ ಅಪೂರ್ವ ಸ್ವರ ಶಿಲ್ಪ. ಶೃತಿಯ ಏಕನಾದದ ಹಿನ್ನೆಲೆಯಲ್ಲಿ ಆಲಾಪ ತೆಗೆಯುವ ಪರಿ ಅನನ್ಯವಾದುದು. ಚಮಾಳ ವಾದ್ಯದ ತಾಳಕ್ಕೆ ತಕ್ಕಂತೆ ದೃಶ್ಯಗತಿಗೆ ಏರಿಬರುವ ಸಂಗೀತದ ಲಹರಿ ನಮ್ಮನ್ನು ಯಕ್ಷಲೋಕಕ್ಕೆ ಒಯ್ಯುತ್ತದೆ. ಇಂಥ ಶ್ರೇಷ್ಠ ಸೃಜನಶೀಲ ಕಲಾವಿದರಿಗೆ ೧೯೮೬ರ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಸಮಾಜದ ಅತ್ಯಂತ ಕೆಳವರ್ಗವಾದ ಆದಿದ್ರಾವಿಡ ಜಾತಿಯ ಶೋಷಿತ ವರ್ಗದಿಂದ ಬಂದಿರುವ ಇವರು ಸಮಾಜಕ್ಕೆ ಅಸ್ಪೃಶ್ಯರೆನಿಸಿದರೂ ಇವರ ಸಂಗೀತ ಮಾತ್ರ ಎಲ್ಲರಿಗೂ ಪ್ರಿಯ. ಇವರ ವಾದ್ಯಸಂಗೀತವಿಲ್ಲದಿದ್ದರೆ ಮದುವೆ, ಮುಂಜಿ ಮುಂತಾದ ಶುಭ ಕಾರ್ಯಗಳು, ತಿಥಿ, ದಿವಸ ಮುಂತಾದ ಶೋಕ ಕಾರ್ಯಗಳು ನಡೆಯುವುದೇ ಇಲ್ಲ. ಆಯಾಯ ಸಂದರ್ಭದ ಮಹತ್ವ ಅರಿತುಕೊಂಡು ಅದಕ್ಕೆ ತಕ್ಕ ರಾಗ ನುಡಿಸುವ ಚನ್ನಬಸಪ್ಪನವರ ಜಾಣ್ಮೆ ನಮ್ಮ ಬಹುಪಾಲು ಹಳ್ಳಿಗಾಡಿನ ಕಲಾವಿದರಿಗೆ ಇಲ್ಲ. ಸನಾದಿ ಅಪಣ್ಣನೆಂದೇ ಈ ಸುತ್ತಿನಲ್ಲಿ ಹೆಸರಾಗಿರುವ ಚನ್ನಬಸಪ್ಪ ೫೦ರ ಆಚೆ ಈಚೆ ಇದ್ದಾರೆ. ಇಂದು ೮೭ ವರ್ಷದವರು.

ಕಂಠದ ಉಸಿರಿನ ಸಂಗೀತ ಸಿರಿಯಿಂದಲೇ ಹೊಟ್ಟೆಯ ಪಾಡು ನಡೆಸಬೇಕಾದ ಇವರಿಗೆ ೩ ಗಂಡು, ೨ ಹೆಣ್ಣು ಮಕ್ಕಳ ಸಂಸಾರದ ಭಾರ ಬೇರೆ. ಇವರೆಲ್ಲರ ಅಗತ್ಯ ವೃಂದಕ್ಕೆ ಎಲ್ಲಿಲ್ಲದ ಬೇಡಿಕೆ. ಒಂದೇ ಒಂದು ಕ್ಷಣವೂ ನಿಲ್ಲಿಸದಂತೆ ಗಂಟೆಗಟ್ಟಲೆ ವಾದ್ಯ ನುಡಿಸುವ ಇವರ ಪರಿ ರೋಮಾಂಚನಕಾರಿಯಾದುದು. ಅದರಲ್ಲೂ ಇವರ ನಾಗಸ್ವರದ ಸಂಗೀತ ಎಂಥವರೂ ಬೆಪ್ಪಾಗಿ ನಾಗರಹಾವಿನಂತೆ ತಲೆಯಾಡಿಸತೊಡಗುತ್ತಾರೆ. ಜಾತಿಯ ಕೀಳರಿಮೆಯ ನೋವನ್ನು ಈ ವಾದ್ಯದ ಸಂಗೀತ ಸಾಕಷ್ಟು ಕಡಿಮೆ ಮಾಡಿದೆ. ಎಲೆ ಮರೆಯ ಕಾಯಿಯಂತೆ ಮರೆಯಾಗಿದ್ದ ಈ ಕಲಾವಿದರನ್ನು ಗುರುತಿಸಿದವರು ಮೀರಾಸಾಬಿಹಳ್ಳಿ ಶಿವಣ್ಣ. ಚಳ್ಳಕೆರೆಯ ಪ್ರಥಮ ಕಾಲೇಜಿನ 'ಸಾಹಿತ್ಯ ಕೂಟ'ವೆಂಬ ಸಂಸ್ಥೆ. ಇವರ ಸಂಗೀತ ಕಛೇರಿ ಏರ್ಪಡಿಸಿ ಸನ್ಮಾನಿಸಿದ್ದು. ಒಬ್ಬ ಹಳ್ಳಿಯ ಕಲಾವಿದನಿಗೆ ದೊರೆತ ಗೌರವ ಎನ್ನಬಹುದು. ಅಕಾಡೆಮಿಯ ಪ್ರಶಸ್ತಿ ಪಡೆದ ನಂತರ ತಾವು ಕಲಿತ ಅನೇಕ ರಾಗಗಳೊಂದಿಗೆ ಇನ್ನಷ್ಟು ಹೊಸ ರಾಗಗಳನ್ನು ಕಲಿಯಲು ವಿದ್ಯಾರ್ಥಿಯ ಕುತೂಹಲ ತೋರಿಸುತ್ತಿದಂತಹ ಚನ್ನಬಸಪ್ಪನವರ ನಡವಳಿಕೆ ನಮ್ಮ ಬಹಳಷ್ಟು ಕಲಾವಿದರಿಗೊಂದು ದಾರಿದೀಪವಾಗಿದೆ. (ಪ್ರಶಸ್ತಿ ಪಡೆದ ಮಹನೀಯರು ಕೃತಿ, ಸಂ.ಎಚ್.ಎಚ್.ನಾಗೇಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೭).

ನಮ್ಮ ಭಾರತದ ಸಂಸ್ಕೃತಿಕ ಇತಿಹಾಸದಲ್ಲಿ ವಿದ್ವಾಂಸರಿಗೆ, ಸಾಹಿತಿಗಳಿಗೆ, ಕಲಾವಿದರಿಗೆ, ರಾಜ ಮಹಾರಾಜರಿಗೆ ಸಂಗತಿಗಳು ಅಧಿಕ, ಅದಾಗೆ ಸಂಸ್ಕೃತಿಯನ್ನು ಸಾಕುಸಲಹುವ ಪಾಮರರು ಅವರ ಸಂಗೀತ, ಸಾಹಿತ್ಯ ನಾಟಕಗಳಿಗೆ ತಾಯಿ ಬೇರಿನ ಸ್ವರೂಪದಲ್ಲಿದ್ದು, ಗುಡಿಗೋಪುರಗಳನ್ನು ಕಟ್ಟಿದ, ಎಲೆಮರೆಯ ಕಾಯಂತೆ ದುಡಿದು ಇಡೀ ಸಮಾಜವನ್ನೇ ಸಾಕಿ ಸಲಹಿದ ನಿದರ್ಶನಗಳು ಕಡಿಮೆ. ಜಾನಪದ ಅಕಾಡೆಮಿಗಳು ಈ ಪಾಮರರನ್ನು ಗುರುತಿಸಿ, ಬೆಳೆಸಿವು ಕೆಲಸವನ್ನು ಮಾಡಲಾಗಿದೆ. ತಮ್ಮ ಜಾಣ್ಮೆಯನ್ನು ಒಂದು ಕಲೆಗಳ ಮುಖಾಂತರ ಪರಿಚಯವಾಗಿ ಜನಮನಗಳಿಗೆ ಜನಪ್ರಿಯರಾದವರಿಗೆ ಗೌರವ ಸಲ್ಲಿಸಿರುವುದುಂಟು. ಇಂಂದಿಗೂ ಇಂತಹ ಕಲೆಯುಳ್ಳವರುಂಟು. ಅಂತಹವರನ್ನು ಗುರುತಿಸಿ ಸಮಾಜಕ್ಕೆ ತೋರಿಸುವ ಅಗತ್ಯವಿದೆ.

ಇಂತಹ ಗ್ರಾಮೀಣ ಕಲಾವಿದರ ಯೋಗಕ್ಷೇಮಕ್ಕಾಗಿ ತಮ್ಮ ಕೈಲಾದ ಕೆಲಸ ಮಾಡಿದವರು ಎಚ್.ಎಲ್.ನಾಗೇಗೌಡರು. ಅನೇಕ ಹೊಸ ಹೊಸ ಆಲೋಚನೆಗಳ ಮೂಲಕ ವಿರಚಿಸಿದವರು ಗ್ರಾಮೀಣ ಕಲೆಗಳ ಮತ್ತು ಕಲಾವಿದರ ಸಂರಕ್ಷಣೆಗೆ ಇನ್ನು ಹೆಚ್ಚು ಬೆಲೆಯಾ ಶಾಶ್ವತವಾದ ಕೆಲಸ ಮಾಡಿದವರು. ಒಬ್ಬ ಕಲಾವಿದನ ದುಡಿಮೆಯಿಂದಲೇ ಬದುಕಬೇಕಾದ ಸಂಸಾರ. ಪದ ಕಲೆಯಾವುದು ಹಿರಿಯರ ರಾಶಿ ರಾಶಿ ಪದಗಳ ಭಂಡಾರವನ್ನು ಸಾಗಿಸುವವರು. ಆದರೆ ಇಂತಹ ಕಲೆಗಳನ್ನು ಕಲಿತಾರು? ಎಂಬುದು ಪ್ರಶ್ನೆ. ತಂತ್ರಜ್ಞಾನದ ಕಾಲದಲ್ಲಿ ಇಂತಹ ಕಲೆಗಳನ್ನು ಯಾವ ರೀತಿಯಲ್ಲಿ ಬಳಸಿಕೊಂಡು ಪ್ರಯೋಗಿಸುವ ಜಾಣತನವನ್ನು ಮಾಡಬೇಕಾಗಿದೆ. ಮುಂದಿನ ಕಾಲಕ್ಕೆ ಕಲೆಗಳು ಈ ನೀತಿಯಲ್ಲಿ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಇಲ್ಲವಾದರೆ ನಮ್ಮ ಸಮುದಾಯದಲ್ಲಿರುವ ಕಲೆಯ ಹೇಳಲೂ ಹೆಸರಿಲ್ಲದಂತೆ ಅಳಿಸಿ ಹೋಗುವುದು ಖಂಡಿತ. ಕಲೆಯನ್ನು ಕೆಲವರಿಗಾದರೂ ಹೇಳಿ ಕೊಟ್ಟರೆ ಕಲೆ ಉಳಿಯುತ್ತದೆ. ಇಲ್ಲವಾದರೆ ನಮ್ಮೊಂದಿಗೆ ಇದು ಹೋಗಿ ಬಿಡುತ್ತದೆ ಎಂಬುದು ಹಿರಿಯರ ಹಂಬಲ. ಇಂಥ ಸಾಂಪ್ರದಾಯಿಕ ಕಲೆಗಳ ಬಗ್ಗೆ ಸರ್ಕಾರದ ಗಮನಹರಿಸುವುದು ಅಗತ್ಯ.

Tribal Tattoo Designs

A great many cultures throught the world have at one time or an other practised tattooing the decoration of the body by Puncturing the skin in a speofic design and inserting an indelible pigment. When from the 16th century onwards, European explorers and colonists started to make inroads in regions hitherto knowon in the west they came into contact with civilisation where tattooing was an important cultural tradition. In the wake followed anthropologists. Who described

and recorded the designs and the customs associated with them and it are these records that from the basis of this book from the pepin press design series.

A survey of the worlds tribal tattoo designs reveals an enoromous variety, one unifying factor is the use of black pigment which leaves a bluish colour on the skin. The only notable exception to this standard is the red dye. used by the Haidah tribe of queen charlotte's Island in Canada.

Tribal desinges were often abstract images based on objects found in the local surroundings which were applied either as a means of adornment or as symbols representing religious beliefs or fears. Another purpose was to mark the status of the tattoo bearer. For instance to show success, nobility or power and in the case of women to suggest nubility. By depiding animals the tattoo bearer hoped to adopt the animal's symbolic attributes it would give the bearer the same attributes. In Japan for example, the carp symbol represented courage and steed fastness and to the Northern American Indian the bear stood for strength. Another use of animal designs was as a lucky charm on some pacific islands shark teeth were tattooed to guard against shark attacks; the mainland of South east Asia, Figherman wrought designs of dragons, snakes and water animals into intricate trouser tattoos as a pratection against the hazards of their profession for the same reason, designs of tigers were used by hunters in Thailand.

In North Africa and South america, tattos were not only applied as tribal marks, but also us a magical defence against spirits and deseases. For this reason the North Africen Berber and Bedouin women were tattoed an the lips, checks, nose, forcheads and sometimes around the breasts and the belly. The fearsome mundurncu of Brazil covered their whale bodies with a lace work of lines to protect them from the spirits of their slain enemies.

Some designs appear to have been uniersal. The cross for example has been found from North Africa where it was used as a charm against the evil eye to the Ryakya Islands mear Japan where a design resembling the maltese cross is used as an ornamental mark for women. The abipones of paraquary tattoed a cross on their Foreheads as a from of tribal distination and in the Gilbert Islands

in Micronesia this symbol was a frequently recurring design. Euroean crusaders would sometimes have a tattoo in the shape of an Armenian or captic cross to mark their expedition to the Holyland.

Original tribal tattooing has became very rare not in the least because it was suppresed by christian missionaries who considered tattoing a heathen cussom Nevertheless there are still regions where it is practised in borneo, for example or in the mentawai island in indonessia. In Polymesia there is after a gap of many years a revival of tattooing.

Indicating a renewed pride in traditional culture. It is interesting to note that the word `tattoo' origionated from the thitian tatqu whilst the pradice of tribal tattoing has been decding there has been an upsurge in what could be termed new tribal tattooing especially in western countries here the original tribal designs are applied but without any of the associated cultural links. In particular, Dayak and kayan designs from Borneo are popular and to a lesser extent designs originating from the pacific Islans

1. Mediaeval pict Tattoos, Great Britain C 400AD

2. Tattooed pict warrior, Great Britain C 400 Ad

3. Neolithic day Figures with Tattoo Designs, Rumania

5. Leg Designs of a Scythian Chief(50 BC) Contral Asia

6. Tattooed pict wpoman, Great Britain C 400 AD

7. African Lady with chest and face Tattoos C 1850 Ad

8. Tattoo designs of a scythian Fhief(CSBC)

9. Tatoo designs of a scythian chief Central Asia

10. Tatooed saythian chief central Asia

11. copict Tattoo of an orthodox bishop, Egypt

12. coptie tattoo of an angel and the crucifition egypt

13. coptie tatto of the crucifition Egypet

14. Ancient femate Tattoos persia

15. Ancient female hand and wrist Tattoos persia

16. Egyptian Tatoo desigins C 1900

17. Ancient Egyptian Tattoo Designs C 2000 BC

18. Egyption female Tattoo designs C 1850

19. Noth Afrian Medial Tattoo designs C 1850

20. North African Ornamental Tattoo dsigns C 1850

21. Moroccan Tattoced Identity Marks C.1880

22. North African female Tatoo Designs C.1880

23. Algerian Tattoo Designs C 1900

24. North African Berber Female Tattoo Designs C 1880

25. Algerian or Morrocan Tattoo Designs C 1880

26. Tunesian Berber Ankle Tattoo Designs C 1880

27. Tunesian Berber Arm Tattoo Design C 1850

28. Tunesian Berber Hand Tatto Design C 1850

39. Tunesian Berber Arm Tatto Designs C 18850

ಪ್ರಪಂಚದಲ್ಲಿರುವ ಹಚ್ಚೆಯ ಅಲಂಕಾರದ ಬಗೆಗಿನ ಮಾಹಿತಿಯನ್ನು ಇಲ್ಲಿ ತಿಳಿಸಲಾಗಿದೆ.

ಹಚ್ಚೆ ಪ್ರಸಿದ್ಧವಾದ ಜನಪದ ಕಲೆಯಾಗಿದೆ. ಆಧುನಿಕತೆಯ ಸಂದರ್ಭದಲ್ಲಿ ಪರ್ಯಾಯ ರೂಪ ಪಡೆದು TaToo ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆಯುತ್ತಿರುವುದನ್ನು ಕಾಣುತ್ತೇವೆ. ಹಚ್ಚೆ ಹಸಿರು ಗಿಡ ಮೂಲಿಕೆಗಳಿಂದ ತಯಾರಿಸಿದ ರಸ. ದೇಹದ ಮೇಲೆ ಹಳದಿ ಮಿಶ್ರಿತ ಹಸಿರು ರೂಪದ ದ್ರವದಿಂದ ಶಾಶ್ವತವಾಗಿ ಹಣೆ, ಮೈಮೇಲಿನ ಕೆಲವೊಂದು ಕಡೆ ಹಚ್ಚೆ ಹಾಕಿಸಿ ಕೊಳ್ಳುವುದುಂಟು ಅದಕ್ಕೆ ಹಚ್ಚೆ, ಪಚ್ಚೆ ಎನ್ನುವ ಹೆಸರಿದೆ. ಬದುಕಿದ್ದಾಗ ಮತ್ತು ಸತ್ತ ಮೇಲೆ ನಮ್ಮೊಡನೆ ಬರುವುದು ಎಂದರೆ ಹಚ್ಚೆ ಎಂಬ ಗಾಢವಾದ ನಂಬಿಕೆಯು ಜನದಪರಲ್ಲಿರುವುದುಂಟು. ಹಚ್ಚೆ ಕಲೆ ಉಳಿವಿಗೂ ಇದು ಕಾರಣವಾಗಿದೆ. ಒಂದು ಮೋಹಕ ಕಲೆಯೂ ಎಂದು ಹೇಳಬಹುದಾಗಿದೆ.

ರಾಜ್ಯದ ಅನೇಕ ಭಾಗಗಳಲ್ಲಿ ಹಲವು ಸಮುದಾಯದವರು ಹಚ್ಚೆ ಹೊಯ್ಯುವ ಕಾಯಕದಲ್ಲಿ ತೊಡಗಿದ್ದಾರೆ. ಕೊರವರು, ಶಿಳ್ಳೆಕ್ಯಾತರು ಇತ್ಯಾದಿ ಹಚ್ಚೆ ಹಾಕುವವರು ಮಹಿಳೆಯರೇ ಆಗಿರುತ್ತಾರೆ. ತಮ್ಮ ಹಚ್ಚೆ ಪರಿಕರಗಳನ್ನು ತೆಗೆದುಕೊಂಡು ಹೋಗಿ ಹಚ್ಚೆ ಹಾಕುವುದುಂಟು. ಸಣ್ಣ ಸಣ್ಣ ಸೂಜಿಗಳ ಗುಂಪನ್ನು ತಾವೇ ವಿಶೇಷವಾಗಿ ತಯಾರಿಸಿ, ಪರಿಸರದಲ್ಲಿ ದೊರೆತ ಹಸಿರು ಗಿಡ ಮೂಲಿಕೆಯಿಂದ ಬಣ್ಣ ತಯಾರಿಸಿ, ಆ ಬಣ್ಣದಲ್ಲಿ ಅದ್ದಿ ಅಂಗೈ, ಮುಂಗೈ, ಮೊಳಕೈ, ತೊಳು, ಕೆನ್ನೆ, ಗಲ್ಲ, ಹಣೆ, ಹುಬ್ಬು, ಕಣ್ಣಿನ ಅಂಚು, ಎದೆ, ನಡ, ಹೊಕ್ಕಳು, ಮೊಳಕಾಲು, ಮೀನಕಂಡ, ಕಾಲಿನ ಮೇಲ್ಭಾಗ, ಹಿಮ್ಮಡಿ, ಹೊಟ್ಟೆ, ಬೆನ್ನು ಮುಂತಾದ ಭಾಗಗಳಲ್ಲಿ ಹಚ್ಚೆ ಹೊಯ್ಯುತ್ತಾರೆ.

ಹಚ್ಚೆ ಹಾಕಿಸಿಕೊಳ್ಳುವವರ ಆಸೆಯ ಮೇರೆಗೆ ಚಿತ್ರದ ಗಾತ್ರ, ಆಕಾರಕ್ಕೆ ತಕ್ಕಂತೆ ಸೂಜಿಯ ಕಟ್ಟನ್ನು ಬಾಗಿದಂತೆ ಹಿಡಿಸಿಕೊಂಡು ಚರ್ಮಕ್ಕೆ ಚುಚ್ಚುತ್ತಾರೆ. ಹಚ್ಚೆ ಹಾಕಿಸಿಕೊಳ್ಳುವವರ ಗಮನವನ್ನು ಬೇರೆಡೆಗೆ ಸೆಳೆಯಲು ಹಾಡುಗಳನ್ನು ಹೇಳುತ್ತ, ಚಿಕ್ಕ ಮಕ್ಕಳಾಗಿದ್ದರೆ ಹಾಸ್ಯ ಮಾಡುತ್ತಾ ನಗಿಸುತ್ತಾರೆ. ಒಂದೊಂದು ಸ್ಥಳದಲ್ಲಿ ಒಂದೊಂದು ಚಿತ್ರ ಹಚ್ಚೆಯಿಂದ ಬಿಡಿಸುವುದುಂಟು. ಸಾಮಾನ್ಯವಾಗಿ ಪ್ರಕೃತಿಯಲ್ಲಿರುವ, ದೇವರ ಹೆಸರುಗಳಿಂದ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹನುಮಂತ, ಬಾಸಿಂಗ, ಸೂರ್ಯ, ಚಂದ್ರ, ಹೂವು, ನಕ್ಷತ್ರ, ಹಾವುಗಳಿಂದ ಕೂಡಿದ ಚಿತ್ರಗಳಾಗಿರುತ್ತದೆ.

ಹಚ್ಚೆ ಹಾಕಿಸಿಕೊಳ್ಳುವುದರಿಂದ ಸೌಂದರ್ಯವು ಹೆಚ್ಚುತ್ತದೆ ಎಂಬ ನಂಬಿಕೆಯಿದೆ. ಹಚ್ಚೆ ಹಾಕಿಸಿಕೊಂಡ ಮಹಿಳೆ ಅಡುಗೆ ಮಾಡಿದರೆ ಅದು ಅಳುಕುವುದಿಲ್ಲ. ಕೆಟ್ಟ ಕಣ್ಣಿರುವವರ ದೃಷ್ಟಿ ದೋಷ ಬೀಳಬಾರದೆಂಬ ನಂಬಿಕೆಯಿಂದ ಹಾಕಿಸಿಕೊಳ್ಳುವರು.

ಸಾಮಾನ್ಯವಾಗಿ ಹೆಂಗಸರು ಹಣೆ, ಗಲ್ಲ, ಕೆನ್ನೆ, ತೋಳು, ಪಾದ, ಕಾಲು, ಮುಂಗೈ, ಗದ್ಯ, ಹುಬ್ಬುಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು ರೂಢಿಯಲ್ಲಿದೆ.

ಇವರು ತಮ್ಮ ಪ್ರೇಯಸಿಯ ಅಥವಾ ಗೆಳೆಯರ, ಆತ್ಮೀಯರ ಹೆಸರು, ತಂದೆ ತಾಯಿಯರ ಹೆಸರನ್ನು ಹಾಕಿಸಿಕೊಳ್ಳುವರು. ಹೆಂಗಸರು ಮುತ್ತಿನ ಬಾಸಿಂಗ, ತೇರು, ಸ್ವಸ್ತಿಕ್, ಗೌರಿ ಮಂಡಪ, ಶಿವನಚಿತ್ರ, ಇತ್ಯಾದಿ ಚಿತ್ರಗಳನ್ನು ಹಾಕಿಸಿಕೊಳ್ಳುವರು ಮತ್ತು ಇವರು ಮನುಷ್ಯ ಸತ್ತಾಗ ಆತನೊಂದಿಗೆ ಏನೂ ಬರದೆ ಹಚ್ಚೆ ಮಾತ್ರ ಬರುತ್ತದೆ ಎಂದು ಹೇಳುತ್ತಾರೆ. ಕೆಲವರು ಮಾಂಶ, ಖಂಡಗಳ ನೋವಿಗೆ ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಗರುಡ, ಚೇಳು, ಹಾವು, ಹಲ್ಲಿ ಇತ್ಯಾದಿ ವಿಷ ಜಂತುಗಳ ಹಚ್ಚುಗಳನ್ನು ಹಾಕಿಸಿಕೊಂಡರೆ ವಿಷ ಜಂತುಗಳು ಕಚ್ಚವುದಿಲ್ಲ. ಎಂದು ಬಲವಾಗಿ ನಂಬುತ್ತಾರೆ. ಈ ಹಚ್ಚೆಯು ಸೌಭಾಗ್ಯದ ಹಾಗೂ ಪಾವಿತ್ರ್ಯತೆಯ ಪ್ರತೀಕವಾಗಿದೆ. ಹೆಣ್ಣು ಮಕ್ಕಳ ಹಣೆಗೆ ಶಾಶ್ವತ ಮುತ್ತೈದೆಯ ಸ್ಥಾನಕ್ಕಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ.

ಈ ಸಮುದಾಯಗಳಲ್ಲಿರುವ ಕಲೆ ಮತ್ತು ಸಾಹಿತ್ಯ, ಗ್ರಾಮೀಣ ಜನತೆಗೆ ಬಹಳ ಉಪಯೋಗಿಯಾಗಿರುವುದರಿಂದ ಇವುಗಳು ಗ್ರಾಮೀಣ ಪ್ರದೇಶಗಳಲ್ಲಿ ಅಲೆದಾಡಿ ಕಲೆಗಳಿಂದ ಜೀವನ ನಡೆಸಲು ಸಾಧ್ಯವಾಗದೆ ಇದ್ದ ಸಂದರ್ಭಗಳಲ್ಲಿ ಭಿಕ್ಷಾಟನೆಗೆ ಮೊರೆ ಹೋಗುವರು.

ಪಾಶ್ಚಾತ್ಯರು ಹಚ್ಚೆಯನ್ನು ಕೈದಿಗಳಿಗೆ ಹಾಕಿ ಅವರು ತಪ್ಪಿಸಿಕೊಂಡರೆ ಗುರ್ತಿಸಲು ಬಳಸುತ್ತಿದ್ದರು ಎಂದು ಹೇಳುತ್ತಿದ್ದರು. ಬೈಬಲದಲ್ಲಿ ಹಚ್ಚೆ ಹಾಕಿಸುವುದು ನಿಷಿದ್ಧ.

ಬ್ರಹ್ಮಾಂಡದ ಪರಿಕಲ್ಪನೆಯಲ್ಲಿ ಮಾನವ ಹುಟ್ಟುವುದಕ್ಕೆ ಮುಂಚೆ ಆಕಾಶ, ಭೂಮಿ, ನೀರು, ವಾಯು, ಅಗ್ನಿ ಈ ಪಂಚಭತಗಳು ಸೃಷ್ಟಿಯಾದವು. ಈ ಪಂಚಭೂತಗಳ ಮಿಲನದಿಂದ ಓಂ ಎಂಬ ಓಂಕಾರ ಶಬ್ದವೂ ಉತ್ಪತ್ತಿಯಾಯಿತು. ಈ ಓಂಕಾರ ಶಬ್ದದಿಂದ ಶಕ್ತಿ ಉದಯವಾಯಿತು. ಆ ಶಕ್ತಿ ಬ್ರಹ್ಮಾಂಡವನ್ನು ಮೋಹಿಸಿ ತ್ರಿಮೂರ್ತಿಗಳನ್ನು ಹೆತ್ತಳು ಬ್ರಹ್ಮ, ವಿಷ್ಣು, ಮಹೇಶ ಆ ಶಕ್ತಿಯು ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಹೇಳಿದಾಗ ತ್ರಿಮೂರ್ತಿಗಳು ಒಲ್ಲೆ ಎಂದು ಹೇಳಿ ನೀನು ತಾಯಿ ಸಮಾನ ಎಂದು ತಿಳಿಸಿದರು. ಆಗ ಸಿಟ್ಟಿನಲ್ಲಿ ಶಕ್ತಿಯು ಬೆಂಕಿ(ಅಗ್ನಿ)ಗೆ ಆಹುತಿಯಾದಳು. ಆ ಬೂದಿಯನ್ನು ಮೂರು ಭಾಗಗಳನ್ನಾಗಿ ಮಾಡಿಕೊಂಡು ಆ ಭಾಗಗಳಿಗೆ ಪ್ರಾಣ ಪ್ರತಿಷ್ಠೆ ಮಾಡಿದಳು. ಇದರಿಂದ ಲಕ್ಷ್ಮಿ, ಪಾರ್ವತಿ, ಸರಸ್ವತಿ ಹುಟ್ಟಿದ್ದು. ಒಂದು ದಿನ ಶಿವ ಪಾರ್ವತಿಯರು ವಿಹಾರಕ್ಕಾಗಿ ಬಂದಾಗ ಶಿವನು ನೀರಡಿಕೆಯಿಂದ ಬಳಲುತ್ತಿದ್ದ. ಶಿವನಿಗೆ ನೀರಿಗಾಗಿ ಈಚಲು ಗಿಡ ಸೃಷ್ಟಿ ಮಾಡಿ ಆ ಈಚಲು ಮರಕ್ಕೆ ತೂತನ್ನು ಕೊರೆದು ಅದರಿಂದ ಬಂದ ಹಾಲನ್ನು ಸೇವಿಸಲು ಪಾರ್ವತಿ ಪರಮೇಶ್ವರರು ತೃಪ್ತಿಯಾದರು. ನಂತರ ಆ ಈಚಲು ಮರವು ಶಿವನಲ್ಲಿ ಬೇಡಿಕೊಂಡಿತು. ನಿನ್ನ ದಾಹ ನಾನು ತೀರಿಸಿದೆ ಸ್ವಾಮಿ, ಇದೆ ರೀತಿಯ ಹಾಲನ್ನು ಹಿಡಿಯಲು ಒಬ್ಬ ಮಾನವನನ್ನು ಸೃಷ್ಟಿ ಮಾಡು ಎಂದಾಗ ಶಿವನು ಒಬ್ಬ ಈಡಿಗ ಗೌಡನನ್ನು ಸೃಷ್ಟಿ ಮಾಡಿ ಆ ಈಚಲು ಗಿಡದಿಂದ ಬಂದ ಹಾಲನ್ನು ಶಿವನಿಗೆ ನೀಡಲು ಆಜ್ಞಾಪಿಸಿದ. ಸ್ವಲ್ಪ ದಿನಗಳ ನಂತರ ಈಡಿಗ ಗೌಡನು ಶಿವನಲ್ಲಿ ಬೇಡಿಕೊಂಡ ನನಗೂ ಜೋಡಿಯನ್ನು ಪ್ರಸಾದಿಸು ಎಂದನು. ಈ ರೀತಿಯಾಗಿ ಮಾನವ ಸಂತತಿ ಬೆಳೆಯಿತು. ಶಿವನು ಕುಡಿದ ತೀರ್ಥ(ಹೆಂಡವನ್ನು) ನಮ್ಮ ಅಲೆಮಮಾರಿ ಸಮುದಾಯದ ಶುಭ–ಅಶುಭ ಕಾರ್ಯಗಳಿಗೆ ಪವಿತ್ರ ಎಂದು ಭಾವಿಸುತ್ತಾರೆ(ಬುಡ್ಗಜಂಗಮ, ಅಲೆಮಾರಿ ಸಮುದಾಯಕ್ಕೆ ಅಧ್ಯಯನ, ಮಾಲೆ, ಪು.೨೦–೨೧).

ಬುಡ್ಗ ಜಂಗಮ ಸಮುದಾಯದ ಆಂಧ್ರಪ್ರದೇಶಸದ ಡೊಕ್ಕ ಪಟ್ಟಾಭಿ ರಾಮುಲು ಇವರು ೧೮೭೬ರಲ್ಲಿ ಜೀವಿಸಿದ್ದ ಇವರು ಸಾಮುದ್ರಿಕ ಜೋತಿಷ್ಯಕಲೆಗಳಲ್ಲಿ ಪರಿಣಿತರು. ಇವರು ಅನೇಕ ಕವಿಗಳನ್ನು(ಕವನಗಳನ್ನು) ಬರೆದಿರುವರೆಂದು, ಮೆಹಾಬೂಮಿ ನಗರ ಜಿಲ್ಲೆಯ ವಸಂತಪುರ ಎಂಬ ಗ್ರಾಮದಲ್ಲಿ ಈಗಲೂ ಇವನ ಸಮೂಹ ಇದೆ ಎಂದು ತಿಳಿದುಬಂದಿದೆ. ಇವರು

ಆಮಪವಾಕುಲ ಎಂಬ ಗ್ರಾಮದಲ್ಲಿ ಶಿವರೆಡ್ಡಿ ಎಂಬ ಜಮೀನದಾರನಿಗೆ ಜೋತಿಷ್ಯ ಹೇಳಿದಾಗ ಆ ರೆಡ್ಡಿಗೆ ನಿಜವಾಗಿದ್ದರಿಂದ ಇವರಿಗೆ ೩೫ ಎಕರೆ ಜಮೀನು ಇನಾಮು ಆಗಿ ಕೊಟ್ಟಿದ್ದಾರೆ. ಇವರ ಕವಿತೆಗಳು ಕೆಲವು ಗ್ರಂಥಗಳಾಗಿದ್ದವು. ಆತನ ಮಗ ಡೊಕ್ಕ ಶ್ರೀರಾಮ ಅವರ ಹತ್ತಿರ ಇದ್ದನೆಂದೂ ನಂತರ ಇವು ಕಾಣೆಯಾಗಿರುವುದು ತಿಳಿದುಬರುತ್ತದೆ(ಪು.೯).

"ಬುಡ್ಗ ಜಂಗಮ್ ಸಮುದಾಯದ ಹೆಣ್ಣು ಹಾಗೂ ಗಂಡು ಮಕ್ಕಳು ಹಚ್ಚೆ ಹಾಕಿಸುವುದು ರೂಢಿ. ಇದರಲ್ಲಿ ಹೆಣ್ಣಿಗೆ ಕೆನ್ನೆಗೆ , ಗದ್ದಕ್ಕೆ, ಕೈಗಳಿಗೆ ಕಾಲುಗಳಿಗೆ ಹಚ್ಚೆ ಹಾಕಿಸುವುದು ರೂಢಿ. ಇದರಲ್ಲಿ ಹಣೆ ಮೇಲೆ ಚುಕ್ಕಿ, ಕೈ ಮೇಲೆ ಸೀತಮ್ಮ ಮುಸುಗು ರಾಮಲಕ್ಷ್ಮಿ ತೊಟ್ಟಿಲು, ಮೀನಿನ ಮುಳ್ಳು, ರಥ, ಜಲ್ಲಡಿ, ಕೃಷ್ಣ, ಗೌರಿ, ಕಣ್ಣು, ಅಕ್ಕ ತಂಗಿಯರು, ಗೊಲ್ಲ ಬಾಮೆಯರು."

ಹಚ್ಚೆ ಹಾಡು

ಹಚ್ಚೆ ಹಾಕಿಸು ಬಾ ಭಾವ – ನಾಲ್ಕಾಣೆ ಉದ್ರಿ ಹೇಳು ಬಾ ಭಾವ
ಗುಡ್ಡದ ಮೇಲೆ ಗುಡಿಯಂತೆ – ಗುಡಿಯಲ್ಲಿ ದೇವರಂತೆ
ಶಾಲೋರಿಯಂಕನ್ನಾನ – ಹಣೆಯಲ್ಲಿ ಸಾಧು ಬೊಟ್ಟಿದೆ.
ಹಂತಿತಾ ಹಚ್ಚೆ ಅಲ್ಲ – ಹಚ್ಚೆ ಹಾಕಿಸು ಬಾವ
ನನ್ನ ಹಣೆ ಬೊಳು ಬೋಳಗಿದೆ
ನಾಲ್ಕಾಣೆ ಉಯಿಹೇಳು ಭಾವ
ಚುಕ್ಕಿ ಚಂದ್ರನಂತಿರಬೇಕು – ಬಣ್ಣ ಬಣ್ಣದಾಗಿರಬೇಕು
ಆಕಾಶ ಗಂಗೆ ಇರಬೇಕು ರಾಮನ ಪಾದದಂತೆ ಲಕ್ಷ್ಮಣನ
ನೆನಪಿನಂತೆ ಹಚ್ಚೆ ಹಾಕಿಸು ಭಾವ.

ಗಂಡು ಮತ್ತು ಹೆಣ್ಣು ಮಕ್ಕಳಲ್ಲಿ ಹಚ್ಚೆ ಅಲೆಮಾರಿ ಬುಡ್ಗ ಸಮುದಾಯದ ಗಂಡು ಮಕ್ಕಳಿಗೂ ಸಹ ಹಣೆಯ ಮೇಲೆ ಹಚ್ಚೆ ಹಾಕಿಸುತ್ತಾರೆ. ಹೆಣ್ಣು ಮಕ್ಕಳ ಹಣೆಯ ಮೇಲೆ ಸಾಂಪ್ರದಾಯಿಕ ಹಚ್ಚೆ ಹಾಕಕಿಸುವುದು ಒಂದು ಕಟ್ಟುಪಾಡು. ಅದು ಹೆಣ್ಣು ಮಕ್ಕಳು ಕುಂಕುಮ ಇಡುವ ಜಾಗದಲ್ಲೆ. ೨ ಗಲ್ಲದ ಮೇಲೆ ಗದ್ದದ ಮೇಲೆ ಹಾಕಿಸುವುದು ಸಾಮಾನ್ಯ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಕೆಲವು ನರಸಂಬಂಧ ಕಾಯಿಲೆಗಳು ಇದ್ದರೂ ಹಚ್ಚೆ ಹಾಕಿಸಿಕೊಳ್ಳುವರು. ಕೆಲವು ಕಾಯಿಲೆಗಳು ಇದರಿಂದ ವಾಸಿಯಾಗಿದ್ದುಂಟು ಎಂದು ತಿಳಿಸಲಾಗಿದೆ.

ಕೊರವಂಜಿಯ ಹಾಡುಗಳು

ಹಾಡು, ಚೆಲ್ಯಾರೆ ನಾಡಿಗೆ ಎಂಬ ಜನಪದ ಕಲಾ ಸಂಪುಟದಲ್ಲಿ ಕೆ.ಆರ್.ಕೃಷ್ಣಸ್ವಾಮಿ ಸಂಪಾದಿಸಿದ ಪಾರಿಜಾತ ಮುಡಿಸಿದ ಕೃಷ್ಣ ಕೊರವಂಜಿ ಮತ್ತು ಶ್ರೀಕೃಷ್ಣ ಪಾರಿಜಾತ ಎಂಬ ಹಾಡುಗಳು ಮುಖ್ಯವಾಗಿ ಕಂಡುಬರುತ್ತವೆ.

ಪಾರಿಜಾತ ಮುಡಿಸಿದ

ಯದುಕುಲೇಶನ್ ಸ್ವಾಮಿ ಪದುಮನಾಭನೆ
ಮುದದಿನೆನೆದೆನು ಶ್ರೀಕೃಷ್ಣನ ಪದದ ಪೇಳ್ವೆನು।

ದ್ವಾರವತಿಯಲಿ ಹದಿನಾರು ಸಾವಿರಾ
ನೂರೆಂಟನೆ ಶ್ರೀಹರಿ ಆಳುತಿರ್ಪನು
ಸುಜನರೆಲ್ಲರು ಶ್ರೀಕೃಷ್ಣನ ಅಜನಪಿತನೆಂದು
ಭಜನೆ ಮಾಡಲು ಅಷ್ಟ ಜನವೆ ಬಂದರು
ಬಂದ ವಿಪ್ರಗೆ ತಂದು ಆಸನ ಹಾಕಿರಿ
ವಂದನೆ ಮಾಡ್ವರೆ ಸುಖವೆಂದು ಕೇಳ್ವರೆ
ಅಷ್ಟಲೇಖವು ಸಂತೃಪ್ತಿಲಿರುವುದು

ಶ್ರೀಕೃಷ್ಣರಾಯಗೆ ಹೂವ ಕೊಟ್ಟ ನಾರದ
ಪಾರಿಜಾತದ ಹೂವು ಮುರಿಗೆ ಸಲ್ವದು
ನಾರೀ ರುಕ್ಮೀಣಿ ಹೀಗೆ ಬಾರೆ ಎನು ತಲಿ
ವಾರೆ ದುರುಬೀಗೆ ಪಾರಿಜಾತ ಮುಡಿಸಿದ।
ಇಲ್ಲಾದ ಸುದ್ದಿಯ ಸತ್ಯಭಾಮೆಗೆ ಹೇಳಿದ ನಾರದ
ಹೇಳಿದಾಕ್ಷಣ ಭಾಮೆ ತಾಳಿಕೋಪವ
ಮುದ್ದು ಮಂಚದ ತಟ್ಟನೆ ಎದ್ದು ಕುಳತಳು।

ಬಿದ್ದು ಬೆವತಳು ಆಕೆ ಪದ್ಮಮುಖದೊಳು
ಗಿಡವನಾರಲೆ ದೊಡ್ಡ ಮಡುವನಾರಲೆ
ಯಾರಿಗೆಳಲೆ ದೊಡ್ಡ ಸುಖವೆಂದು ಕಾಣಲೆ
ನಲ್ಲೆ ಶ್ರೀಕೃಷ್ಣನು ರುಕ್ಮಿಣಿಗಲ್ಲೆ ಒಲಿದನು
ಯಾರಿಗೆಳಲೆ ಮನವ ಘೋರ ತಾಪವ।
ಮುಂದ್ದು ಶ್ರೀಕೃಷ್ಣನು ರುಕ್ಮಿಣಿಗ್ಹತ್ತ ಒಲಿದನು।

ಎತ್ತ ಹೋಗಲೆ ಸುಖವೆಂದು ಕಾಣಲೆ
ಮೇಘ ಪರ್ವತ ಹತ್ತಿ ಹಾರಿ ಬೀಳಲೆ
ಯಾರಿಗೇಳಲೆ ಮನದ ಘೋರ ತಾಪವ।

ಕಾಲಂದ್ಗಿಗೆ ಪಂಕಿ ತೋಳ ಬಾಪುರಿ
ಗುಜ್ಜಾರಿ ಮಿಂಟಗೆ ಹೆಜ್ಜೆಜ್ಜೆ ಗ್ಹೊಗೆದಾಳು।

ನೀಲದುಂಗುರ ಮೇಲೆ ಸರಗಳು
ತಾಳಲಾರದೆ ಸತ್ಯಭಾಮೆ ಭೂಮಿರ್‍ಹೊಗೆದಾಳು।
ಹಾರೆ ಪದರವು ಮುತ್ತಿನ ಹರಡಿದ್ವಾರವು
ಭಾರಿ ಭಾರಿಗೆ ತೆಗೆದು ದೂರ ಹೊಗೆದಳು
ಹಿಡಿದು ಕಾಳೆಯ ಒಡೆಯ ತಮಟೆ ಬೇರಿಯ
ಒಡೆಯ ಶ್ರೀಕೃಷ್ಣನು ತಾನಲ್ಲೆ ನಡೆದನು।

ಹೊರಗಿನಿಂದಲೆ ಆಕೆ ಸುಳಿವು ಕಾಣದು
ಒಳಗೆ ಹೋದನೆ ಆಕೆ ಒಳಗೆ ನಿಂದನೆ
ಮಚ್ಚೆ ಹಂಗಳೆ ಮಲಗ್ಹಿದ್ದ ತಾವಿಗೆ
ಎಚ್ಚರಿಸಿದ ಸಾಕ್ಷಾತ್ ಶ್ರೀಕೃಷ್ಣನು
ಸೆರಗು ಹಿಡಿದರೆ ಆಕೆ ಮನಸು ಕರಗದು
ತಿರುಗಿ ನೋಡಳೆ ಹರಿಧ್ಯಾನ ಮಾಡ್ಯಾಳೆ
ಸತ್ಯಭಾಮೆಯ ಮತ್ತೇನ ಜಗರ್‍ಹೇನುದರು।

ಯಾರ್‍ಹೆನಂದರು ಆಕೆ ಮುಖವ ಬಾಡಿದೆ
ಸರಿಯ ಸವತಿಗೆ ಈ ಪರಿಯ ಮಾಡಿರಿ
ಹರಿಯೆ ಎನುತಲಿ ಕಪಟ ಮರೆಯ ಮಾಡಿರಿ।

ಒಂದು ಹೂವಿಗೆ ಭಾಮೆ ಇಂದು ಮುನಿವರೆ
ತಂದು ಮುಡಿಸುವ ಇಂದ್ರನಪುರದ ಪುಷ್ಪವ
ಸತ್ಯಭಾಮೆಯ ವಸ್ತ್ರದೊಳ್ಗೆ ಕುಳ್ಳಿರಿಸಿ
ಪುಷ್ಪದಾಸೆಯ ಮಾಡಿ ಲೆಗ್ಗೆಯ ನಾಡ್ಯಾನೆ
ಸತ್ಯಭಾಮೆಯು ಸ್ವಾಮಿ ಹತ್ತಿ ಗರುಡನ
ಸ್ವರ್ಗದ ಪುಷ್ಪ ತಂದು ಕೊಡುವೆಯಾ
ಪರಿಜಾತದ ಪದವ ಹೇಳಿದವರಿಗೆ
ಪದವ ಕೇಳಿದವರಿಗೆ
ವಾರದಯ್ಯನ ಮುದ್ದು ಬಾಲ ಒಲಿವನು। (ಪು.೧೮೯)

ಆಗ ತನ್ನದೊಂದು ಅವತಾರ ತಾಮಾನಂ ಮಾಡಿ।
ಹೆಣ್ಣು ಒಂದವತಾರ ನೋಡಬೇಕೆಂದು।
ಬಾಸಿಯ ಬಗುತಾಲೆ ತೆಗೆದಾನು ದೇವ।
ಪಂಜರದ ವಾಲೆರಡು ಕಿವಿತುಂಬಿ ತೊಟ್ಟು।
ತಾನು ಸೀರೆಯ ಉಟ್ಟಾನು ದೇವ।

ವಾಲೆ ಚಿಂತಾಕೆಂಬ ಒಡವೆಯ ಧರಿಸಿ।
ಅಪರಂಜಿ ಬಳೆಗಳ ಕೈತುಂಬ ಧರಿಸಿ।
ಒಳ್ಳೆ ಬೆತ್ತದ ಕೋಲು ಬಲಗೈಲಿ ಹಿಡಿದು।
ಮಾಯವ ಮಾಗುವನ್ನು ಬೆನ್ನಿಗೆ ಬಿಗಿದು।
ಚಿನ್ನದ ಗಿಲಕೆಯ ಕೈಯಲ್ಲಿ ಹಿಡಕೊಂಡು।
ಚಿನ್ನದ ಸಿಂಬಿಯ ತಲೆಮೇಳೆ ಮಡಗಿ।
ಚಿನ್ನದ ಸಿಂಬಿಯ ಮೇಲೆ ಗೂಡೆಯ ಇರಿಸಿ।
ತಾನು ಬೀದಿ ಬೀದಿಯೊಳಗೆ ಸಾರುತ ಬಂದ।

ಅಪರೂಪ ಕೊರವಂಜಿ ಆದಾನು ದೇವ।
ಬೀದಿ ಬೀದಿಯ ಮೇಲೆ ಸಾರುತ ಬಂದು।
ಕಣಿಯ ಕೇಳುವವರಿಗೆ ಕಣಿಯ ಹೇಳುವೆನು।
ಗುರುತು ಕೇಳುವವರಿಗೆ ಗುರುತು ಹೇಳುವೆನು।

ಕಣಿ ಎಂಬೊ ಆ ಮಾತ ರುಕ್ಷಿಣಿ ಕೇಳಿ।
ಕರೆದಾರೆ ಕೊರವಂಜಿಯ ಅರಮನೆ ದಾದೀರೆ।
ಓಡೋಡಿ ಓಡೋಡಿ ಬಂದು ಕೊರವಂಜಿ।
ಅಮ್ಮಯ್ಯ ನೀ ಬಾರೆ ಅಕ್ಕ ನೀ ಬಾರೇ।
ನಮ್ಮ ರಾಣಿ ಕರೆದಾಳು ಬಾರೆಲಾ ಕೊರವಂಜಿ।
ನಿಮ್ಮ ರಾಣಿಯ ಹೆಸರೇನು ನಿನ್ನ ಊರೇನು।
ನಮ್ಮ ರಾಣಿಯ ಹೆಸರಮ್ಮ ರುಕ್ಷಿಣಿ ದೇವಿ।

ನಾವು ಈ ಅರಮನೆ ದಾದೀರು ಕಣೆ।
ದಾದೀರಲ್ಲದೆ ಮನೆ ಸೇರುವಳಲ್ಲಾ।

ಪುರುಷರಿಲ್ಲದ ಮನೆ ಸೇರುವಳಲ್ಲಾ।
ಮಕ್ಕಳಿಲ್ಲದ ಮನೆ ಹೊಕ್ಕವಳಲ್ಲಾ।

ನಾವೆಲ್ಲಾ ಇರುವಾಗ ನಿನಗೇನು ಭಯವು।
ನಮ್ಮ ರುಕ್ಮಿಣಿ ಇರುವಾಗ ನಿನಗೇನು ಚಿಂತೆ।
ಅಂಜಿಕೊ ಬೇಡನೆ ಅಕ್ಕಯ್ಯ ನಾರಿ।

ಅಂಜಂತ ಆಳೊಂದೆಜ್ಜೆ ಅಂಬೆದೊಂದೆಜ್ಜೆ।
ಹಾದಿನಾರು ಬಾಗಿಲ ದಾಟಿ ಬಂದಾಳು।
ವಜ್ರದ ಬಾಗಿಲ ಹೊರಗೆ ನಿಂತಳು।

ಕಡೆಯ ಬಾಗಿಲ ತಾವ ಬಂದು ನಿಂತಾಳು।
ಕೊರವಂಜಿ ಬರೋದಾರಿ ರುಕ್ಮಿಣಿ ನೋಡಿ।
ಮುತ್ತಿನ ಗದ್ದುಗೆ ಇಳಿದು ಬಂದಾಳು।
ರತ್ನಗಂಬಳಿ ತಂದು ನೆಲಕೆ ಹಾಸಿದಳು।

ಚಿನ್ನದ ಚಾಪೆ ತನ್ನಸಿಕೊಂಡು
ಕೂತುಕೊ ಎಲೆ ನಾರೀ. ಎಂದಾಳೆ ರುಕ್ಷಿಣಿ।
ಕೂತು ಕೊಂಡಮ್ಯಾಲೆ ಕೇಳ್ಯಾಕೆ ನಿಮ್ಮದಾವೂರೆಂದು।
ಯಾವೂರು ಯಾವ ಸೀಮೆ ಎಲ್ಲಿಂದ ಬಂದೆ
ನಮ್ಮೂರು ನಮ್ಮ ಸೀಮೆ ಕೇಳಿಯೂ ನೀನು
ಅಕಟೆಂಕಿಣಿ ನಮಗೆ ಗೌರಮ್ಮಳಿಯಾಳೂ
ಆಡಿಗಣೇಶ್ವರರ ಮಗಳಲ್ಲವೇನೆ?

ಸಿದ್ದಲಿಂಗೇಶ್ವರನು ಚಿಕ್ಕಪ್ಪ ನನಗೆ।
ವಯ್ಯಾರಿ ಪುರದಿಂದ ನಾ ಒಬ್ಬಾಳೆ ಬಂದೆ।

ಹೊಟ್ಟೆಗೆ ಬಟ್ಟೆಗೆ ಬಂದ ಹೆಣ್ಣು ನಾನಲ್ಲ।
ತೊಟ್ಟು ಗೂಡೆಯ ತಂದು ನಾ ಮಾರೋಳಲ್ಲ।
ಹೊಟ್ಟೆಗೆ ಹಿಟ್ಟಿಗೆ ಬಂದ ಹೆಣ್ಣು ನಾನಲ್ಲ
ಸುಳ್ಳಿಲ್ಲ ಕಣಮ್ಮ ಮಗು ಮೇಲೊಂದಾಣೆ।

ಮಾಯದ ಮಗುವಿನ ಹಣೆಯ ಮುಟ್ಟಿದನು।
ಹಣೆಯ ಮುಟ್ಟಿದ ನಾರಿ ಭಾಷೆ ಮಾಡಿದನು।
ಕಣಿಯ ಹೇಳೋದಕ್ಕೆ ಏನು ಕೊಡಬೇಕು।
ಮುತ್ತು ನಾ ಕೊಡಿಸೇನು ಕಣಿ ಹೇಳೆ ನಾರಿ
ಮುತ್ತು ನನ್ನರಮಾನೆ ಮಿಕ್ಕೆ ಚೋಳಮ್ಮ।
ಹವಳಾವ ನಾ ಕೊಡಿಸೆನು ನೀ ಕಣಿ ಹೇಳೆ ಕೊರಮಿ।
ಮಾಣಿಕ್ಯ ನಾ ಕೊಡಿಸೇನು ನೀ ಕಣಿ ಹೇಳೆ ನಾರಿ।
ಮಾಣಿಕ್ಯ ನನ್ನರಮನೆ ಮಲ್ಲಿಗೆ ಹೂವು।
ನಾನು ನವರತ್ನ ಕೊಡಿಸೇನು ನೀ ಕಣಿ ಹೇಳೆ ನಾರಿ।
ನವರತ್ನ ನನ್ನರಮನೆ ರಾಗಿಯ ಕಾಳು।

ಕುದುರೆಯ ನಾ ಕೊಡಿಸೇನು ನೀ ಕಣಿ ಹೇಳೆ ಕೊರಮಿ।
ಕುದುರೆಯು ನನ್ನಾರಮಾನೆ ಕುರಿ ಹಿಂಡು ಕಣೆ।
ಒಂಟೆಯ ನಾ ಕೊಡಿಸೇನು ನೀ ಕಣಿ ಹೇಳೆ ನಾರಿ।
ಒಂಟೇಯು ನನ್ನರಮನೆ ಬಂಟಾರು ಕಣೆ।
ಏನು ಕೊಟ್ಟೆನೆಂದಾರು ಒಲ್ಲೆನಂದೀಯ।
ಮತ್ತೇನು ಕೊಡಬೇಕೆ ಮಾಯದ ನಾರಿ।

ನೀ ಕೊಡೊ ಆಭರಣ ನನಗೇನು ಬೇಕು।
ನಿನ ಮನಸಿನಲ್ಲಿರುವಂಥ ಮಾತು ಹೇಳಿದ್ರೆ।
ನಿನ್ ಕನಸಿನಲ್ಲಿ ಕಂಡಂಥ ಕಾರ್ಯವೇಳಿದರೆ।
ನಿನ ನೆಪ್ಪಿನಿನ ಗುರುತು ನಿನಗೆ ಹೇಳಿದರೆ।
ಕೃಷ್ಣ ಬರೋ ದಾರಿ ತಿಳಿದು ಹೇಳಿದರೆ।
ಮತ್ತೇನೂ ಕೊಡಿಸ್ತೀಯಾ ರುಕ್ಮಿಣಿ ನನಗೆ।

ಮಗುವಿಗೊಂದು ಒಡವೆಯ ಮಾಡೀಸಿ ಕೊಡುವೆ।
ಬೆಳ್ಳಿ ಬೆತ್ತದ ಕೋಲು ಹೆಣಿಸಿ ನಾ ಕೊಡುವೆ।
ಅಪರಂಜಿ ಬಳೆಗಳ ಕೈ ತುಂಬ ನಾ ಕೊಡುವೆ।
ಪಟ್ಟೆ ಸೀರೆಯ ನಾ ನೇಯಿಸಿ ಕೊಡುವೆ।
ಈ ಮಾತಿಗೆ ಕೊರಮಿ ಒಪ್ಪಿಕೊಂಡಾಳು।

ಒಪ್ಪಿಕೊಂಡ ನಾರಿ ಏನಂತಾಳೀದ
ಮಟ್ಟ ಮಂಗಳವಾರ ಮನೆ ಸಾರಿಸು ಹೆಣ್ಣೆ
ಗಂಟು ಮೂಟೆಗಳನೆಲ್ಲಾ ಹೊರಗೆ ತಂದಿರಿಸು।
ಎಂಟು ಗಾಡಿಯ ನೀರಿನಲಿ ನೀ ತನದ ಮಾಡು।
ಎಂಟು ತರಹದ ಕಾಸು ನೀ ತಂದು ಮಡಗು।

ಗೊನೆಯ ಬಾಳೆಯ ಹಣ್ಣು ನೀ ತಂದಿರಸು।
ಗೊನೆಂದು ತೆಂಗಿನಕಾಯಿ ನೀ ತಂದಿರಿಸು।
ನಾಕು ಮೂಲೆಗೆ ನಾಕು ಹಣ ಒಂದೇ ಇರಿಸು।
ನೆನೆ ಅಕ್ಕಿ ನೆನಗಡಲೆ ತಂದು ನೀನ್ ಮಡಗು।
ಆಭರಣ ಒಡವನೆಲ್ಲಾ ನೀನು ತಂದು ಸಿಂಗರಿಸು
ನಿನ್ನ ದೇವರು ನೀನ ನೆನಕೊಳ್ಳೆ ದೇವಿ।
ನಮ್ಮ ದೇವರು ನಮ್ಮ ಭಾಗವಲ್ಲವನೆ।

ಮೂಡಲು ತಿಮ್ಮರಾಯ ಮತ್ತೊತ್ತರಾಯ।
ಆರಣೆ ಜ್ಞಾನೇಶ್ವರ ಹನುಮಂತರಾಯ।
ಹಲ್ಲೂರಿ ಪಲ್ಲೂರಿ ಹನುಮಂತರಾಮ।

ಕೈತಾರೆ ರುಕ್ಮಿಣಿ ಕೈ ನೋಡಿ ನಿನಗೊಂದು।
ನಾ ಕಣಿಯ ಹೇಳುವೆನು।

ಅಂಟಾದೆ ಮುಂಟಾದೆ ಕಣ ಹೇಳು ನನಗೆ।
ಅಂಟಾದೆ ಮುಂಟದೆ ಕಣಿ ಹೇಳೋಂದಿಲ್ಲಾ।
ಅಂಜಿಕೊಂಡು ಅಂಜಿಕೊಂಡು ಕೈಕೊಟ್ಟಾಳಾಗ।

ಕೈ ನೋಡಿ ಕೃಷ್ಣ ಏನನ್ನು ತಾನೆ।
ಎಂಟು ಮಂದಿಯು ನಿನಾ ನೆಂಟರು ಕಣೆ।
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ
ಸುಂಟರ ಗಾಳೀಲಿ ತಿರುಗೂತೀಯಲ್ಲೆ।

ಉಂಟವೊ ಇಲ್ಲಿವೆನೆ ಅನುಮಾನ ಬೇಡ।
ಮೂಡಲ ಸೀಮೆಗೆ ಹೋಗ್ಯವನೆ ಸ್ವಾಮಿ।

ಮುತ್ತು ನವರತ್ನ ನಿನಗೆ ತರುತಾನೆ।
ವಜ್ರ ವೈಡೂರ್ಯ ನಿನಗೆ ತರುತಾನೆ।

ಇವತ್ತೆ ಬರುವ್ವೋನೆ ನಾಳೆ ಬರುವ್ವೋನೆ।
ಬರುವ್ವೋದು ತಡವಾಗಿ ಮದ್ವೆಯಮ್ಮ ನಿನದು।
ಈ ಮನೆ ಮುಂದುಗಡೆ ಒಪ್ಪರ ಹಾಕುವರು।
ಈ ಮನೆ ಮುಂದುಗಡೆ ಧಾರೆ ಎರೆವರು।
ಈ ಮನೆ ಮುಂದುಗಡೆ ತಾಲಿ ಕಟ್ಟುವರು।

ಇಷ್ಟೊಂದೆಲ್ಲಾ ಹೇಳಿ ತಾ ನಿಜರೂಪ ತೋರಿ।
ಇದು ಎಲ್ಲ ಹೆಣ್ಣು ಮಾಯವೆಂದು ತಿಳಿದ ರುಕ್ಷಿಣಿ।
ನಾಚಿಕೆ ಪಟ್ಟಾಳು ಕೋಣೆ ಸೇರ್‍ಯಾಳು।

ಹೆಂಗಸರ ನಾಚಿಕೆ ಕೆಡಸಬಾರದೆಂದು।
ಇದ್ದೋನು ಇದ್ದಂಗೆ ಮಾಯವಾದನು ಸ್ವಾಮಿ।
ದ್ವಾರಕಪುರ ಪಟ್ಟಣ ಸೇರಿದಾನು ಸ್ವಾಮಿ।

ಕೊರಮರ ಗೂಡೆಯ ಕೊರಮಂಗೆ ಕೊಟ್ಟು।
ಅಭರಣ ಒಡವೆನೆಲ್ಲ ಪೆಟ್ಟಿಗೆ ಮಡಗಿದಾನು।
ಮಾಯದ ಮುಗುವನು ಮಾಯ ಮಾಡಿದಾನು।

ಕಾವೇರಿ ನದಿಯಲ್ಲಿ ತಾನ ಮಾಡುತಾನೆ।
ಪಟಪಟ್ಟೆ ನಾರುಗಳ ಧರಿಸಿದ ಸ್ವಾಮಿ।
ಹವಳದ ಕಿರೀಟ ಧರಸೀದ ಸ್ವಾಮಿ।
ಅಲ್ಲಿಂದ ತಾಳಮೇಳದಿಂದ ಬರುತಾನೆ ಸ್ವಾಮಿ।

ಕೃಷ್ಣ ಬರುವ್ವೋದೆ ತಡವಾಗಿ ಪಾದ ಹಿಡಿದಾಳು।
ಪನ್ನೀರು ತಂದೀಗ ಪಾದವ ತೊಳೆದಾಳು
ಪಾದ ತೊಳೆದ ನೀರ ಪಾವನವ ಮಾಡಿದಳು।

ಆಕಾಶ ಏಣಿಯಸ್ಟ ಚಪ್ಪರ ಹಾಕಿದರು।
ದೊಡ್ಡ ದೊಡ್ಡ ಮುತ್ತುಗರ ಸಾಸುವೆ ಇಕ್ಕಿದರು।
ಚಿಕ್ಕ ಚಿಕ್ಕ ಮುತ್ತುಗಳ ಸಾಸುವೆ ಇಕ್ಕಿದರು।

ಆನೆ ಮುತ್ತು ತಂದು ಧಾರೆ ಎರೆದಾರು।
ಕೃಷ್ಣನ ತಾಯಿ ತಂದೆ ಧಾರೆ ಎರೆದಾರು।
ರುಕ್ಮಣಿ ತಾಯಿ ತಂದೆ ಧಾರೆ ಎರೆದಾರು।
ಗೊಲ್ಲ ಸ್ತ್ರೀಯರ ಕರೆದು ಸೋಭಾನದ ಹಾಡು ಹಾಡಿಸಿದರು।
ರಂಬೆ ಊರ್ವಸಿ ಕರೆಸಿ ನಾಟ್ಯ ಮಾಡ್ಯಾರು
ಹನ್ನೆರಡು ದಿವಸಕ್ಕೆ ಲಗ್ನ ತೀರಸ್ಯಾರು।

ಕಲ್ಯಾಣವಾಗೀತು ಕೃಷ್ಣ ನಿನಗೆ
ಮದುವೆ ಆಗಿತು ರುಕ್ಮಿಣಿ ನಿನದು।
ಕೃಷ್ಣನ ಕತೆಯನು ಕೇಳಿದವರಿಗೆ
ಮಾಡಿದ ಪಾಪ ಪರಿಹಾರವೆಂದು
ರುಕ್ಮಿಣಿಯ ಕತೆಯನು ಕೇಳಿದವರಿಕೆ
ಮಾಡಿದ ಪಾಪ ಪರಿಹಾರವೆಂದು
ಹೇಳ್ವಾರು ಜನರು ಧರಣಿಯಲೆಲ್ಲಾ

ಶ್ರೀಕೃಷ್ಣ ಪಾರಿಜಾತ

ಯದು ಕುಲೇಶನೇ ಸ್ವಾಮಿ ಪದುಮನಾಭನೇ
ಮೊದಲು ನೆನೆದೆನು ಕೃಷ್ಣನ ಪದವ ಹೇಳುವೆನು।

ದ್ವಾರವತಿಯಲ್ಲಿ ಹದಿನಾರು ಸಾವಿರ
ಗೋಪಿ ಸ್ತ್ರೀಯರು ಹದಿನಾರು ಸಾವಿರ
ನೂರೆಂಟನೆ ಸ್ತ್ರೀಯರ ಆಳುತಿರ್ಪನಿಂ
ನೂರು ಹೆಂಡಿರು ಸ್ತ್ರೀಯರಾಳುತಿರ್ಪನು।

ಸುಜನರೆಲ್ಲರು ಕೃಷ್ಣಗೆ ಅಜನು ಪಿತನೆಂದು।
ಭಜನೆ ಮಾಡಲೂ ಅಲ್ಲಿಗೆ ದ್ವಿಜನು ಬಂದರು।
ಬಂದ ದ್ವಿಜನಿಗೆ ಆಜನೆ ತಂದು ಹಾಕಿದ
ವಂದನೆ ಮಾಡಿದ ಸುಖವೆ ಎಂದು ಹೇಳಿದ

ದೇವಲೋಕದ ಪಾರಿಜಾತ ಪುಷ್ಪವು।
ನಾರೀ ರುಕ್ಮಿಣೀಗಲ್ಲದೆ ಬೇರೆ ಸಲ್ಲದು।

ನಾರೀ ರುಕ್ಮಿಣೀ ಹೀಗೆ ಬಾರೆ ಎನ್ನತಲೀ
ಅವಳ ವಾರೆ ತುರುಬಿಗೆ ಪಾರಿಜಾತ ಮುಡಿಸಿದ।

ಶ್ರೀಕೃಷ್ಣ ಪಾರಿಜಾತ ಮುಡಿಸಿದ
ಪಾರಿಜಾತದ ಪರಮಳೂರು ತಂಬಿತು
ಮೂರು ಲೋಕಕೆ ಹರುಷ ಮಿರಿ ಹೋಯಿತು।

ಯೋಗಿ ನಾರದ ಸಾಗಿ ಸತ್ಯಭಾಮೆಗೆ।
ಇಲ್ಲದ ಸುದ್ದಿಯ ಹೋಗಿ ಬೇಗ ಹೇಳಿದ।
ಕೇಳಿದಾಕ್ಷಣ ಭಾಮೆ ಬಹಳ ಕೋಪದಿ।
ತಾಳಲಾರದೆ ಮನದ ಹಾಳು ಕೊಂಡಳು।

ವಾಲೆ ಸರಗಿಯೂ ವಂಕಿ ತೋಳ ಬಾಪುರೀ।
ಕೀಲು ಕಂಕಣಭೂಮಿ ಮೇಲೆ ಒಗೆದಳೇ।
ಸರಿಯ ಸವತಿಯೂ ಈಕೆ ಮೆರೆವ ಭಾಗ್ಯವೋ।

ಗಿಡವ ಆಯಾಲೊ ದೊಡ್ಡ ಮಾಡುವ ದುರ್ಮುಲೋ
ಏಳು ಪರ್ವತ ಹತ್ತಿ ಹಾರಿ ಬೀಳಲೋ
ಯಾರಿಗೆಳಲೊ ಮನದ ಘೋರ ತಾಪವ।

ಒಂದು ಹೂವಿಗೆ ಭಾಮೆ ಇಂದು ಮುರಿದರೆ।
ಇಂದ್ರಲೋಕದ ಮರವ ತಂದು ಇಳುಹುದೆ।
ಹರಿದು ಹಾರುವ ತೆಗೆದು ಅತ್ತ ಒಗೆದಳು।
ಸತ್ಯಭಾಮ ತೆಗೆದು ಇತ್ತ ಒಗೆದಳು।

ಹರಿವ ಹಾರವ ಕೃಷ್ಣ ಕೊರಳಿಗೆ ಹಾಕಿದ
ಒಂದೇ ಹೂವಿಗೆ ನೀನು ಹಿಂದೆ ಮುನಿದರ।
ತಂದು ನಿಲ್ಲಿಸುವೆ ಪಾರಿಜಾತವನವನು?
ಒಂದೇ ಹೂವನು ನಾನು ಹೇಂಗೆ ಸಲುವೆನು।

ತಂದು ಕೊಡುವೆನು ಪಾರಿಜಾತ ಮರವನು।
ಯಾಕೆ ಕೃಷ್ಣನೆ ನಿನಗೆ ಕಾಕ ಬುದ್ಧಿಯು?

ಯಾರೇನೆಂದರೆ ನಿನ್ನ ಪೋರೆ ಬಾಡಿದೆ।
ತಾಳಲಾರೇನು ಮನದ ಘೋರ ತಾಪವ

ನಾ ಒಂದೇ ಹೊರನು ನಾ ಹೀಗೆ ಸಾಕೀಯೋ।
ಯಾಕೆ ಸತ್ಯಭಾಮೆ ನಿನ್ನ ಮುಖವೆ ಬಾಡಿದೆ
ತಡೆಯಲಾರೆನು ಮನದ ಘೋರ ತಾಪವ।
ಸಾಕು ನಡಿ ನಡಿ ಸರಿದು ಸವತಿಯ ಮನೆಗೆ।

ಕೈಲಾಸನಿಂದಲಿ ನಾರದ ಮುನಿವರ
ಒಂದೇ ಹೂವನು ತಂದನಾಗಲೇ।
ತಂದನಾಗಲೇ ನಾರದ ಮುನಿದರು।

ಹಿರಿಯ ಕಂಡನು ಅವನಲ್ಲೆ ಮುನಿದನು।
ಏನೋ ನಾರದ ನೀನೆಲ್ಲಿ ಬಂದೆಯೋ।
ಏನು ಚೌಡಿಯ ನೀನು ಹೇಳಲು ಬಂದೆಯೋ।

ಇಂದ್ರಲೋಕ ದಿ ಸ್ವಾಮಿ ತಂದೆ ಹೂವನು।
ಒಳ್ಳೆ ಪಾರಿಜಾತದ ಸ್ವಾಮಿ ಇಲ್ಲಿ ತಂದೆನು।
ನಾನು ಸ್ವಾಮಿ ತಂದೆ ಹೂವನು

ಏನೋ ನಾರದ ಹೂವೂ ಯಾರಿಗೆ ಕೊಡುವೆ?
ನೀನು ಹೂವು ಯಾರಿಗೆ ಕೊಡುವೆ?
ಏನು ಮಾಯವೋ ಏನಿದೊ ವಿಚಿತ್ರವೋ। (ಪು.೨೩೩–೩೬)

ಕೊರವಂಜಿ ಲಾವಣಿ ಪದ್ಯ

ಕೊರವಂಜಿ ಸಂಬಂಧಿಸಿದ ಮಾತುಗಳು ಈ ಕೆಳಗಿನಂತಿವೆ.
ಸಣ್ಣೀಲಿಂದ ಸೂಳಿ ಹೂ ಮುಡಿದಿದ್ದೆ
ಮುಂದಾದ ಅಂಗಡೀಲಿ ಉಳಿದಿದ್ದೆ
ನಿಂಬೆ ಹಣ್ಣಿನಂತ ತುಂಬಿ ಬಿಂದವೆ ಜವನ
ನಿತ್ತು ನಿಂದರಸಿ ತೆಗಿನಾರೆ
ಮಾವಯ್ಯ ಮಾವಯ್ಯ ಕೇಳಿ

ಮಾವಯ್ಯ ನೀವೆ ಕೇಳಿ

ಸೂಳಿಗೆ ಹೋದವನ ಕರತನ್ನಿ
ಅತ್ತಾನೆ ತಿರುಗಾನೆ ಇತ್ತಾನೆ ತಿರುಗಾನೆ
ದೇಶ ಸಂಚಾರ ಹೊರಟಾನೆ
ಸೂಳೆ ಇದ್ದರ ಮನೆಗೆ ನಡುದಾನೆ
ಸೂಳೆಯ ಮನೆಯಲ್ಲಿ ಗಜಚೆಂಡು ಆಡಾನೆ
ಬಾ ಕಂದ ಮುದ್ದು ಮನಿಗೆ ಹೋಪ
ಹೊಳೆಗಾರು ಕೆರೆಗಾರು ದೂಕು
ನಿನ್ನ ಮನೆಗೆ ನೀ ಹೋಗು ನಾ ಬರಲಾರೆ
ಸಣ್ಣೇಲಿಂದ ಸೂಳಿ ಹೂ ಮುಡಿದಿದ್ದೆ
ಮುಂದಾದ ಅಂಗಡೀಲಿ ಉಳಿದಿದ್ದೆ
ನಿಂಬಿಹಣ್ಣಿನಂತಹ ತುಂಬಿ ಬಂದವೆ ಜವನ
ನಿತ್ತು ನಿಂದರಸಿ ತೆಗಿನಾರೆ
ಅತ್ತಮ್ಮ ನೀವೇ ಕೇಳಿ
ಸೂಳಿಗೆ ಹೋದವನ ಕರತನ್ನಿ

ಕರಿಯಾದ ತೆಗಿದಾಳೆ ಬಿಳಿಯಾದ ತೊಟ್ಟಾಳೆ
ಕೊರಬಾರ ವ್ಯಾಸ ತೊಟ್ಟಾಳೆ
ಅತ್ತಾನೆ ತಿರುಗಾಳೆ ಇತ್ತಾನೆ ತಿರುಗಾಳೆ
ದೇಶ ಸಂಚಾರ ಹೊರಟಾಳೆ
ಸೂಳಿ ಇದ್ದರ ಮನೆಗೆ ನಡುದಾಳೆ
ಸೂಳಿಗಿಂತಲೂ ಮಡದಿ ಕಡು ಚೆಲುವೆ
ಬಾ ಕಂದ ಮುದ್ದು ಮನಿಗೆ ಹೋಪ
ಅಷ್ಟೊಂದು ಮಾತ ಎಷ್ಟೊಂದು ಹೇಳಿದರು
ನೀ ಹೋಗಮಮ್ ನಿನ ಮನೆಗೆ
ಮಾವಯ್ಯ ಮಾವಯ್ಯ ಕೇಳಿ

ಮಾವಯ್ಯ ನೀವೇ ಕೇಳಿ

ಮೂರು ಕೊರವಾರ ಬುಟ್ಟಿಯಾದರು ನೆಯ್ಯಿಕೊಡಿ
ಕರಿಯಾದ ತೆಗೆದಾಳೆ ಬಿಳಿಯಾದ ತೊಟ್ಟಾಳೆ

ಮೂರು ಕೊರವಾರ ಬುಟ್ಟಿ ಹಿಡಿದು ದೇಶಸಂಚಾರ ಹೊರಟಾಳೇ.
ಸೂಳಿ ಇದ್ದರ ಮನೆಗೆ ನಡುದಾಳೆ
ಅಕ್ಕಿಯಾದರೆ ಮೂರು ಕೊಳಗ
ಭತ್ತವಾದರೆ ಆರು ಕೊಳಗ
ಬೇಕಾದ್ರೆ ಒಂದು ಬುಟ್ಟಿ ತಗಬೋದು
ಅಕ್ಕಿಯಾದರೆ ಮೂರು ಕೊಳಗ ಕೊಡುವೆ
ಭತ್ತವಾದರೆ ಆರು ಕೊಳಗ ಕೊಡುವೆ
ಇವತ್ತೊಂದು ರಾತ್ರಿ ಉಳುದೋಗು

ಗುಡುವೇಲಿ ಬೈತಾರೆ ನನ ಕೊರಬೋರು
ನಾ ಹೋಗ್ತೀನಿ ನನ ಮನಿಗೀಗ
ಅಷ್ಟೊಂದು ಮಾತ ಹೇಳಾಳೆ ಕೊರವಂಜಿ
ಮೆಟ್ಟಿಲ ತಗ್ಗಿ ಇಳಿದಾಳೆ
ಮೆಟ್ಟಿಲ ತಗ್ಗಿ ಇಳಿದು ಬರುವಾಗ
ಬೆನ್ನ ಹಿಂದೆ ಬಂದಾನೆ ಕೊರವಂಜಿ
ಸಿಪ್ಪೆಯ ಸುಣ್ಣಾಕು ಪಂಚಳ್ಳಿ ಎಲೆಗು
ಏನ ಕೊರವಂಜಿ ಪರಬೇದ
ಇಲ್ಲೊಂದಿಳ್ಳೆಯ ಮೆಲುವೋನ
ಆಚೆ ಅಸುವಂತ ಕಟ್ಟೆ
ಈಚೆಗೆ ಮಾವಿನ ಕಟ್ಟೆ
ಮತ್ತೆ ಏಳೆಜ್ಜೆ ನಡೆಯೋಣ

ಸಿಪ್ಪೆಯ ಸುಣ್ಣಾಕು ಪಂಚಳ್ಳಿ ಎಲೇಗು
ಏನೆ ಕೊರವಂಜಿ ಪರಬೇದ
ಇಲ್ಲೊಂದಿಳ್ಳೆಯ ಮೆಲುವೋನ
ಆಚೆಗೆ ಹೊನ್ನೆ ಮರ
ಈಚೆಗೆ ಪೊನ್ನೆ ಮಗ
ಮತ್ತೆ ಏಳೆಜ್ಜೆ ನಡೆಯೋಣ
ಅಷ್ಟೊಂದು ಮಾತ ಹೇಳಾಳೆ ಕೊರವಂಜಿ
ಮೆಟ್ಟಿಲ ತಗ್ಗಿ ಇಳಿದಾಳೆ

ಸೂಳೆಗೆ ಹೋದ ನಾಮಿ ಹಿಂದುಗುಟ್ಟ ಬರುತಾದೆ
ಕಂಡೊಂಡು ಹಿಡಿಕುಂಟೆ ತಗೊಳ್ಳಿ ಅತ್ತಮ್ಮ (ಪು.೪೩–೪೫, ಕಾಡು ಮಲ್ಲಿಗೆ, ಸಂ.ಎಂ.ಬಿ.ನಳಿನಿ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ೧೯೮೨).

ಮನೆಯಲ್ಲಿದ್ದ ಮುತ್ತಿನಂತಹ ಹೆಂಡತಿ ಬಿಟ್ಟು ನೆರೆಮನೆ ಸಾರೇ ರುಚಿ ಎಂದು ಸೂಳೆಗೆ ಹೋದವನ ಸರಿದಾರಿಗೆ ಕರೆತರುವ ಹೆಣ್ಣಿನ ಜಾಣ್ಮೆಯ ಚಿತ್ರಣವೇ ಕೊರವಂಜಿ ಲಾವಣಿ. ಪ್ರಸ್ತುತ ಲಾವಣಿಯಲ್ಲಿ ಬರುವ ಪ್ರಾರಂಭದ ಹೆಣ್ಣು ತನ್ನ ಸಣ್ಣ ವಯಸ್ಸಿನಲ್ಲಿದ್ದ ಸುಖವನ್ನು ನೆನಸಿಕೊಂಡು ಮರುಗಿ ತನ್ನ ಮಾವಯ್ಯ ಅತ್ತಮ್ಮನ ಬಳಿ ತನ್ನ ಗಂಡನನ್ನು ಕರೆತನ್ನಿ ಎಂದು ಅಂಬಲಾಚುತ್ತಾಳೆ. ಈ ಭಾಗದಲ್ಲಿಯ ಕೊರವಂಜಿಯು ಈ ಲಾವಣಿಯಲ್ಲಿ ಗಂಡನನ್ನು ನಾಯಿ ಎಂದು ಸಂಬೋಧಿಸುವ ಜನಪದ ಹೆಣ್ಣಿನ ಧೈರ್ಯ ಮೆಚ್ಚುವಂಥಹುದು.

ಒಂದು ಕಲೆಯು ಸಜೀವಗೊಳಿಸುವ ಸಂದರ್ಭದಲ್ಲಿ ಕಲೆ ಮತ್ತು ಸಮಾಜದ ಗಾಢವಾದ ತಿಳುವಳಿಕೆ ಇರುತ್ತದೆ. ಸಮಾಜದ ಅನುಭವಗಳನ್ನು ತನ್ನ ಜ್ಞಾನದ ಮೂಲಕ ಜನರನ್ನು ಸರಿದಾರಿಗೆ ಬರುವಂತೆ ಮಾಡುವ ಜ್ಞಾನ ಜಾಣ್ಮೆ ಕೊರವಂಜಿಯಲ್ಲಿತ್ತು ಎಂಬುದು ತಿಳಿದುಬರುತ್ತವೆ. ಕೊರವಂಜಿ ಕೇವಲ ಒಂದು ಕಲೆ ಮಾತ್ರವಲ್ಲ. ಅದು ಒಂದು ಸಮುದಾಯದ ಬದುಕಿನ ಅಭಿವೃದ್ಧಿಯ ಮಾಧ್ಯಮ ಎನ್ನಬಹುದು. ಅದು ನಮ್ಮ ಸಂಸ್ಕೃತಿಯೊಳಗೆ ಒಂದು ಸಾಂಸ್ಕೃತಿಕ ಆಶಯವಾಗಿ ಹುಟ್ಟಿಕೊಂಡದ್ದು. ಆ ಆಶಯಗಳು ಜನ ಮತ್ತು ಸಂಸ್ಕೃತಿಯನ್ನು ತನ್ನ ವಿವಿಧ ರಚನಾತ್ಮಕ ಘಟನೆಗಳ ಮೂಲಕ ಪ್ರದರ್ಶಿಸುವಂತಹ ಕಾರ್ಯ ನಡೆದಿದೆ. ಮತ್ತೊಂದು ಅರ್ಥದಲ್ಲಿ ಸಮುದಾಯದ ಜೀವನ ಮತ್ತು ನಂಬಿಕೆಯ ಅಭಿನಯ. ಈಗ ಈ ಕಲೆಯ ಜನವೆಂದರೆ ಕರ್ನಾಟಕದ ಕೊರಮರು ಕರ್ನಾಟಕದ ಕೆಲವೊಂದು ಪ್ರದೇಶಗಳಲ್ಲಿ ಕಂಡು ಬರುವುದುಂಟು. ಕಾಲಾನಂತರದಲ್ಲಿ ತನ್ನ ಸ್ಥಾನ ಬದಲಾವಣೆಗಳು ಜಾಗತೀಕರಣದ ಸಂದರ್ಭದಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿ ಪ್ರತಿನಿಧಿಸುತ್ತಿದೆ.

ಮುಂದಿನ ಪೀಳಿಗೆಗೆ ಜ್ಞಾನ ತಿಳಿಯಲಾರದೆ ಆಧುನಿಕತೆಗೆ ಹೊಂದಿಕೊಳ್ಳಲಾಗದೆ ತೊಳಲಾಟದಲ್ಲಿ ಇರುವ ಚಿತ್ರಣವನ್ನು ಕೊರವಂಜಿ ಬದುಕಿನಲ್ಲಿ ಕಾಣುತ್ತದೆ. ಅವರ ಸಂಸ್ಕಾರ ಜನಪದ ಮೌಲ್ಯದಿಂದ ನಿರ್ಧರಿತವಾದ ಸಂಸ್ಕಾರ. ಇಲ್ಲಿ ಶೈವ, ವೈಷ್ಣವ ಬದುಕಿನ ಸಂಸ್ಕೃತಿಗಳ ಮಿಶ್ರಣ ಉಂಟಾಗಿರುವುದುಂಟು. ಪ್ರತ್ಯೇಕವಾದಂತೆಯೂ ಹೊಸ ಬದುಕಿನ ಕಡೆಗೆ ಕುಡಿಯುವ ವರಾಗುತ್ತಿದ್ದಾರೆ. ಇದು ವಿಚಾರ ವೈಜ್ಞಾನಿಕ ಬದುಕಿನ ಚಿಂತನೆ ಎಂದು ಹೇಳಲಾರೆ. ಕಲೆಯಾಗಿ ಪ್ರದರ್ಶಿಸಲಾದರೂ ಸಮುದಾಯದ ಬದುಕಿಗೆ ನೆರವಾಗುತ್ತಿಲ್ಲ. ಆದರೆ ಅರಸನ ಕಾಲದಲ್ಲಿ ಗುಪ್ತ ವಿವರಗಳನ್ನು ರಾಜ್ಯನಿಷ್ಠೆಗೆ ಕಾರಣೀಭೂತರು ಎಂಬುದು ನಿಜವೇನೋ ಎನ್ನಿಸುತ್ತಿದೆ. ತಾವು ಜನಪದರ ವಿಚಾರಗಳನ್ನು ಚಿಂತಿಸಿತು. ಅವರ ಹಿತೈಷಿಯೂ ಆಗಿ ಅದರ ಅಭಿವೃದ್ಧಿ

ಸಾಧನೆಗಳನ್ನು ಸ್ವಚ್ಛಗೊಳಿಸುವ, ಕ್ರಿಯಾಶೀಲವಾಗಿಸುವ ಪ್ರಯತ್ನವನ್ನು ಮಾಡುತ್ತಾಳೆ. ಪ್ರತಿ ಸಮುದಾಯ ತಮ್ಮ ಸಮುದಾಯದ ಸಾಂಸ್ಕೃತಿಕ ನೆಲೆಯ ಮೇಲಿಂದ ಸಮಾನತೆಯನ್ನು ಅರಗಿಸಿಕೊಂಡು ಬದುಕುವುದೇ ನೈಜವಾದ ಪ್ರಗತಿಯಾಗಿದೆ. "ಯಾವ ಕಲೆಯೇ ಆಗಲಿ, ಸಂಸ್ಕಾರವೇ ಆಗಲಿ, ದೇಶೀಯ ಆವರಣದಲ್ಲಿ, ಪ್ರೇರಣೆಯಲ್ಲಿ ಹುಟ್ಟಿ ಬೆಳೆದುದ್ದಾದರೆ, ಅದು ದೀರ್ಘಕಾಲ ಬಾಳುತ್ತದೆ" ಎಂದು ಕಾರಂತರ ಮಾತು ಸ್ಪಷ್ಟಪಡಿಸುತ್ತದೆ(ಪು.೩, ಯಕ್ಷಗಾನ ಬಯಲಾಟ, ಕಾರಂತ).

ತಂತ್ರಜ್ಞಾನದ ಸಂದರ್ಭದಲ್ಲಿ ಕೊರವಂಜಿ ನೈಜ ಸ್ಥಿತಿಯೇ ಬೇರೆ. ಶಾಲಾ ಕಾಲೇಜು ವಿದ್ಯಾರ್ಥಿಗಳು ಪ್ರದರ್ಶಿಸುವ ದೃಶ್ಯಗಳೇ ಬೇರೆಯಾಗುತ್ತದೆ.

"ಜನಪದ ಕಲೆಗಳು ಬೆಳೆಯವ ಸಮಾಜದೊಂದಿಗೆ ಹುಟ್ಟಿ ಬೆಳೆಯುವಂಥವು. ಸಾಮಾಜಿಕ ಅಸಲಿತನವೇ(Social evence) ಅವುಗಳ ಬದುಕುವಿಕೆಯ ಜೀವಾಳ ಒಂದು ಸಮಾಜದ ಅಥವಾ ಜನಪದ ಬೆಳೆಯುತ್ತಾ ಹೋಗುತ್ತಿದ್ದಾರೆ. ಅದರಲ್ಲಿನ ಕಲೆಗಳು ಅಂಥ ಜನಪದದ ಅವಶ್ಯಕತೆಗಳನ್ನು ಅನುಸರಿಸುತ್ತಾ ತಾನು ಬೆಳೆಯುತ್ತಾ ಹೋಗುತ್ತದೆ. ಒಂದು ಕಾಲದ ಅಸಲಿತನದಿಂದ ಹುಟ್ಟಿದ ಈ ಜನಪದ ಕಲೆ ಆ ಜನಪದ ತನ್ನ ಅಸಲಿತನವನ್ನು ಕಳೆದುಕೊಳ್ಳುವುದರೊಂದಿಗೆ ನಾಶವಾಗುತ್ತಾ ಹೋಗುತ್ತದೆ"(ಪು.೧೦೦, ಜಾನಪದ ವ್ಯಕ್ತಿ ಮತ್ತು ವಿಚಾರ, ಡಾ.ಹಿ.ಶಿ.ರಾಮಚಂದ್ರ ಗೌಡ, ಮಾನವಿ ಪ್ರಕಾಶನ, ಮೈಸೂರು, ೧೯೮೨).

ಕುರತ್ತಿಯಾಟ ಒಂದು ಮೋಹಕ ದೃಶ್ಯಕಲೆ. ಇದು ಕೇರಳದಲ್ಲಿ ಬಹಳ ಕಡೆ ಇದೆ. ನಡೆಸುವವರು ಕುರವರು. ನಾಯರ್ ಜನಾಂಗವೂ ಇದನ್ನು ನಡೆಸುತ್ತಾರೆಂದು ತಿಳಿಯುತ್ತದೆ. ದೇವಸ್ಥಾನದ ಹೊರಗೆ ಉತ್ಸವದ ಸಂದರ್ಭದಲ್ಲಿ ಸಾಮಾನ್ಯ ಜನರಿಗಾಗಿ ಪ್ರದರ್ಶಿಸುವ ಕಲೆ, ದೇವಸ್ಥಾನದ ಒಳಗೆ ಸಂಭಾವಿತರಾಗಿ ಕೊತ್ತಂಗಳದಲ್ಲಿ ಕುತ್ತು ನಡೆಯುತ್ತಿರುತ್ತದೆ. ಕುರತ್ತಿಯಾಟದಲ್ಲಿ ಮೂರು ಪಾತ್ರಗಳು ಮಾತ್ರ ಇದೆ. ಕುರವ ಕುರತ್ತಿ ಮತ್ತು ಕುರುವನ ತಾಯಿ ಮುಕ್ತಿಯಮ್ಮ. ಸಾಮಾನ್ಯ ಅಟ್ಟು ಮುಂಭಾಗದಲ್ಲಿ ಕಂಚಿನ ದೀಪ ಅದರ ಪಕ್ಕಾ ಹಾಡುಗಾರರು ಮೃದಂಗ ಮತ್ತು ಎಲೆತಾಳ ವಾದ್ಯಗಳು, ಜನಾಂಗದ ಸಂಪ್ರದಾಯಿಕ ಉಡುಗೆ ತೊಡುಗೆ ಪಾತ್ರಗಳವೇ ನಾಟಕಾರಂಭದಲ್ಲಿ ಗಣಪತಿ ಮತ್ತು ಸರಸ್ವತಿಯರ ಪ್ರಾರ್ಥನೆ. ನಂತರ ಕುರತ್ತಿಯರ ಪ್ರದೇಶ. ಈ ಇಬ್ಬರಲ್ಲಿ ಒಬ್ಬಳು ಪಾರ್ವತಿಯಾಗಿ ಮತ್ತೊಬ್ಬಳು ಲಕ್ಷ್ಮಿಯಾಗಿ ತಮ್ಮ ತಮ್ಮ ಗಂಡಂದಿರ ಮಹತ್ವ ಮತ್ತು ತಮ್ಮ ಧೌರ್ಯ ಪ್ರೇರಣೆ.

ಇದು ಮುಗಿಯದ ಕಥೆಯಾಗಿ ಬಹಳ ಕಾಲ ಮುಂದುವರಿಸುತ್ತಾರೆ. ಸರಸ್ವತಿ ಪ್ರವೇಶಿಸಿ ಅವರಿಬ್ಬರನ್ನು ಸಮಾಧಾನ ಪಡಿಸುತ್ತಾಳೆ. ಅನೇಕ ವರಸೆಗಳ ನೃತ್ಯವನ್ನು ಮಾಡುತ್ತ, ಕುರವ

ಪ್ರವೇಶಿಸುತ್ತಾನೆ. ಇದು ಉತ್ತರದ ಸಂಪ್ರದಾಯ, ದಕ್ಷಿಣದ ಸಂಪ್ರದಾಯದಲ್ಲಿ ಕುರವ, ಕುರತ್ತಿಗಳು, ಮುಕ್ತಿಯಮ್ಮ ಸೇಂದಿ ವ್ಯಾಪಾರಿಗಳು ಮತ್ತು ಊರಗೌಡ ಬರುತ್ತಾರೆ. ಕೊರತಿಯರು ಪಾರ್ವತಿ ಮತ್ತು ಲಕ್ಷ್ಮಿಯಾಗಿ ಜಗಳವಾಡಿ ಹೋದ ಮೇಲೆ ಮೂರನೆಯ ರಂಗದಲ್ಲಿ ಕುರುವ ಪ್ರವೇಶಿಸುತ್ತಾನೆ. ಕಳೆದ ರಾತ್ರಿ ತನ್ನನ್ನು ಕೈಬಿಟ್ಟು ಹೋದ ಕುರತ್ತಿ ಎಲ್ಲಿ ಎಂದು ಹುಡುಕುವಾಗ ಕುರತ್ತಿ ಎದುರು ಬರುತ್ತಾಳೆ. ಹೆಂಡತಿಯ ಬಗ್ಗೆ ಸಂಶಯಗ್ರಸ್ತದಿಂದ ಕುರವ ಅನೇಕ ರೀತಿಯ ಪ್ರಶ್ನೆಗಳನ್ನು ಹಾಕುತ್ತಾನೆ.

ಆಕೆ ತನ್ನ ಅನುಭವಗಳನ್ನು ನಿವಾರಿಸುವುದರಿಂದ ಜೊತೆಗೆ ಕುರುವನ ಪ್ರಶ್ನೆಗಳಿಗೆ ಜಾಣ್ಮೆಯಿಂದ ಉತ್ತರ ಕೊಡುತ್ತಾಳೆ. ಉತ್ತರ ಸಂಪ್ರದಾಯಗಳಲ್ಲಿ ಏಕದೃಶ್ಯವಾಗಿ ರೂಪಿತವಾದ ಈ ನಾಟಕ ಉತ್ತರ ಸಂಪ್ರದಾಯಗಳಲ್ಲಿ ಹೆಚ್ಚು ರಂಗಗಳನ್ನು ನಿರ್ಮಿಸಿಕೊಂಡಿದೆ. ಕುರತ್ತಿಯಾಟವನ್ನು ನಡೆಸುವಲ್ಲಿ ತುಳ್ಳಲ ನೃತ್ಯವನ್ನು ನಡೆಸುವವರೂ ಉಂಟು. ಇದರಿಂದ ನೃತ್ಯದಲ್ಲಿ ಅವರು ಹೆಚ್ಚು ಪರಿಣತರಾಗಿರುತ್ತಾರೆ. ನಂತರ ಕಾಲದಲ್ಲಿ ಹೆಣ್ಣುಗಳೇ ಹೆಣ್ಣು ವೇಷಗಳನ್ನು ಹಾಕುತ್ತಿದ್ದರೆಂದು ತಿಳಿಯುತ್ತದೆ(ಪು.೧೯೧-೧೯೨).

ಸಂಗೀತ ಹಿನ್ನೆಲೆ

ಸೇವುಣರ ಕಾಲದಲ್ಲಿ ಗಣಿತಶಾಸ್ತ್ರಜ್ಞ ಭಾಸ್ಕರಾಚಾರ್ಯನ ಬರಹಗಳಿಂದ ಸಂಗೀತ ಕುರಿತು ಬರೆದಿರುವ ಪ್ರಖ್ಯಾತ ಕವಿ ಶಾಸ್ತ್ರಜ್ಞ ದೊರೆ ಮತ್ತು ಪ್ರಖ್ಯಾತ ವಿದ್ವಾಂಸ ಹೇಮಾದ್ರಿಯಿಂದ ಇತಿಹಾಸದಲ್ಲಿ ಅಮರರಾಗಿದ್ದಾರೆ. ಶಾಙ್ಗದೇವನ ಕೃತಿ ಸಂಗೀತ ರತ್ನಕಾರವು ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಆಧಾರವಾಯಿತು. ೧೪ನೇ ಶತಮಾನದಲ್ಲಿ ವಿದ್ಯಾರಣ್ಯರು ಸಂಗೀತ ರತ್ನಾಕರವನ್ನು ಆಧರಿಸಿ ಸಂಗೀತಸಾರವನ್ನು ಬರೆದರು. ವಿಜಯನಗರದಲ್ಲಿ ಸಂಸ್ಕೃತ, ತಮಿಳು ಮತ್ತು ತೆಲುಗು ಸಾಹಿತ್ಯಗಳು ಪ್ರವರ್ಧಮಾನಕ್ಕೆ ಬಂದವು. ವೀರಶೈವ ಧರ್ಮವು ಪುನರುತ್ಥಾನವಾಯಿತು. ವಿದ್ಯಾರಣ್ಯ, ಕಲ್ಲಿನಾಥ, ರಮಣಾಮತ್ಯ, ಪುರಂದರದಾಸ ಮತ್ತು ಕನಕದಾಸರ ಕೃತಿಗಳಿಂದ ಕರ್ನಾಟಕ ಸಂಗೀತವು ಅರಳಿತು. ಅದನ್ನು ಜನಪ್ರಿಯಗೊಳಿಸಲು ಪುರಂದರದಾಸರು ಆ ಸಂಗೀತವನ್ನು ಬೋಧಿಸಲು ಪ್ರಾಥಮಿಕ ರಚನೆಯನ್ನು ಸಂಯೋಜಿಸಿದ್ದು ಮತ್ತು ಆ ಕಾರಣದಿಂದಲೇ ಪುರಂದರ ದಾಸರನ್ನು ಸಂತ ತ್ಯಾಗರಾಜರು "ಕರ್ನಾಟಕ ಸಂಗೀತ ಜನಕ" ಎಂದು ಸೂಕ್ತವಾಗಿ ಬೋಧಿಸಿದ್ದಾರೆ.

ಮಾನವನ ಮನಸ್ಸಿನಲ್ಲಿಯ ನೆಮ್ಮದಿಯ ಪರಮಾನಂದಗಳನ್ನುಂಟು ಮಾಡಿ ಆರೋಗ್ಯ ಜೀವನವನ್ನು ರೂಪಿಸುವಲ್ಲಿ ಕಲಾವಿದರ ಪಾತ್ರ ಬಹಳ ಮುಖ್ಯವಾಗುತ್ತದೆ. ಮಾನವನು ಸಮಾಜದ ಸಂಘಜೀವಿಯಾಗಿರುವುದರಿಂದ ಬೇರೆಯ ಜನರ ಜೊತೆಗೆ ತನ್ನ ಬದುಕಿನ ಬೇಸರಗಳನ್ನು

ನೀಗಿಸಿಕೊಂಡು ಜೀವನದಲ್ಲೊಂದು ಉತ್ಸಾಹ, ಚೈತನ್ಯವನ್ನು ಪಡೆಯುತ್ತಾ ಮುಂದುವರೆಯುತ್ತಾರೆ. ತಮ್ಮ ಬದುಕಿನಲ್ಲಿ ಕಷ್ಟನಷ್ಟಗಳಿಂದಲೂ ಹಾಡಿನ ಮೂಲಕ ಸಂಗೀತದ ಮೂಲಕ ಮನಶಾಂತಿಯನ್ನು ಬಯಸುವುದುಂಟು. ಆದರೆ ಕಾಲಕಳೆಂತೆ ಹೊಸ ಹೊಸ ಕಲೆಗಳನ್ನು ರೂಢಿಸಿಕೊಂಡು ಒಂದೊಂದು ಕಲೆಗಳಿಗೆ ಒಂದೊಂದು ವಿಶಿಷ್ಟವಾದ ನಿಯಮ ಮತ್ತು ವೈಶಿಷ್ಟ್ಯತೆಗಳನ್ನು ರೂಢಿಸಿ ಪರಂಪರಾಗತ ವಾಗಿ ಕಾಪಾಡಿಕೊಂಡು ಬಂದಿರುವುದುಂಟು.

ಜನಪದ ಕಲಾವಿದರ ಜನವಸತಿಯು ಗ್ರಾಮದಲ್ಲಿ ಕೊನೆಯಲ್ಲಿ ತನ್ನ ವಂಶಪರಂಪರೆಯ ಹಿರಿಯರಿಂದ ಕಲೆಯತ್ತ ಬಂದಿರುವುದುಂಟು. ಕಲೆಯನ್ನು ಜಾಗತೀಕರಣದ ಸಂದರ್ಭದಲ್ಲಿ ಆರ್ಥಿಕತೆಗೆ ಮಾತ್ರ ಬಳಕೆಯಾಗದೆ ತಳಸಮುದಾಯಗಳ ಕಲೆಗಳ ಪ್ರೋತ್ಸಾಹಕ್ಕೆ ನೆರವಾಗಲಿ ಎಂಬುದಾಗಿದೆ. ಕೈಗಾರಿಕೀಕರಣ, ಜಾಗತೀಕರಣ, ತಂತ್ರಜ್ಞಾನಗಳಿಂದ ಜನಪದರ ಕಲೆಗಳ ಮೇಲೆ ಪ್ರಭಾವ ಬೀರುತ್ತಿರುವುದುಂಟು. ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ಒಂದು ಸವಾಲುಗಳನ್ನು ಎದುರಿಸಬೇಕಾಗುತ್ತದೆ.

ಕೊರವ ಸಮುದಾಯಕ್ಕೆ ಮೂಲಭೂತವಾದ ಕೊರತೆ ಎದ್ದು ಕಾಣುತ್ತದೆ. ತಾವು ನೈಪುಣ್ಯತೆ ಹೊಂದಿದ ಕಲೆಯನ್ನು ಪ್ರದರ್ಶಿಸಬೇಕೆಂದರೆ ಸಾಂಪ್ರದಾಯಿಕ ಪರಿಕರಗಳನ್ನು ಹೊಂದಿರುವುದು ಕಾಣುತ್ತೇವೆ. ಹೊಸ ಪರಿಕರಗಳನ್ನು ಕೊಂಡುಕೊಳ್ಳಲು ಆರ್ಥಿಕತೆಯ ಕೊರತೆ ಎದ್ದು ಕಾಣುತ್ತಿದೆ. ಓಲಗ ಬಾರಿಸುವವರಿಗೆ ಕಲೆಯೆಂದು ಪರಿಗಣಿಸದೆ ಆಚರಣೆಯಲ್ಲಿರುವ ಕಲೆಯಾಗಿ ಪರಿಗಣಿಸಲಾಗುತ್ತಿದೆ. ಹಬ್ಬ ಹರಿದಿನಗಳಲ್ಲಿ, ಮದುವೆ, ಶುಭ ಸಂದರ್ಭದಲ್ಲಿ, ಮರಣ ಸಂದರ್ಭದಲ್ಲಿ ಬಾರಿಸುವುದುಂಟು. ಪ್ರಸ್ತುತ ಸಂದರ್ಭದಲ್ಲಿ ದೇವಾಲಯದಲ್ಲಿ ತಂತ್ರಜ್ಞಾನ ಬಳಸುತ್ತಿರುವುದರಿಂದ ಅವರ ಬೇಡಿಕೆಯು ಕಡಿಮೆಯಾಗುತ್ತದೆ.

ಕೊರವ ಸಮುದಾಯದಲ್ಲಿ ಬಸವಕಲ್ಯಾಣ, ರಾಯಚೂರು, ಕೊಪ್ಪಳ, ಬಳ್ಳಾರಿ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾರಿಸುವವರು ಇದ್ದರೂ ಅವರಿಗೆ ಸರ್ಕಾರದ ಮಾಶಾಸನದ ಬಗ್ಗೆ ಅರಿವಿಲ್ಲ. ಇದ್ದರೂ ಸಹ ಅದನ್ನು ಹೇಗೆ ಪಡೆಯಬೇಕು ಎಂಬುದರ ಕಲ್ಪನೆ ಇಲ್ಲದೇ ಬದುಕುತ್ತಿದ್ದಾರೆ. ಇದಕ್ಕೆಲ್ಲ ಕಾರಣವೆಂದರೆ ಶಿಕ್ಷಣದ ಕೊರತೆ ಎಂದು ಹೇಳಬೇಕಾಗುತ್ತದೆ. ಶಿಕ್ಷಣ ಪಡೆದ ಕೆಲವರು ಸಮುದಾಯದಿಂದ ಹೊರಬಂದರೆ ಸಮುದಾಯದ ಏಳಿಗೆಗೆ ಶ್ರಮಸದೇ ಇರುವುದು ಇನ್ನೊಂದು ಕಾರಣ ಎಂದು ಹೇಳಬಹುದು.

ಸಂಗೀತ ಮತ್ತು ಕೊರವಂಜಿ

ವಿಜಯನಗರ ಕಾಲದಲ್ಲಿ ಅರಸರು ಸಂಗೀತ ಮತ್ತು ನೃತ್ಯಕ್ಕೆ ಮಹತ್ವವನ್ನು ನೀಡಿದ್ದರು. ಭಾರತೀಯ ಸಂಸ್ಕೃತಿಯಲ್ಲಿ ಸಂಗೀತವು ಒಂದು. "ಇದರ ಮೂಲವು ಸಾಮವೇದ. ಆದ್ದರಿಂದ

ವಿಶ್ವದ ಸಂಗೀತ ಪದ್ಧತಿಗಳಲ್ಲಿ ಅತ್ಯಂತ ಪುರಾತನವಾದುದು. ಇದು ನಾದ ವಿದ್ಯೆ, ಧ್ವನಿಯ ವಿಜ್ಞಾನ, ಒಂದು ಉಪದೇಶ, ಭಾರತೀಯ ಸಂಗೀತದ ಸಪ್ತ ಸ್ವರಗಳಾದ ಸ.ರಿ.ಗ.ಮ.ಪ.ದ.ನಿ. ನಾರದ ಪರಿವ್ರಾಜಕ ಉಪನಿಷತ್ತಿನಲ್ಲಿ ಮೊಟ್ಟ ಮೊದಲನೆಯ ಸಲ ಉಕ್ತವಾಗಿದೆ. ತ್ರಿಸ್ಥಾಯಿಗಳು, ಸ್ವರದ ಗಮಕಗಳನ್ನು ಋಕ ಪ್ರತಿಶಾಖ್ಯದಲ್ಲಿ ಹೇಳಿರುವುದು. ಅತ್ಯಂತ ಪುರಾತನವಾದುದು (ವಿಜಯನಗರ ಶಾಸನಗಳು, ಸಂ.೧ ಬಿ.ಆರ್.ಗೋಪಾಲ, ಪು.೧೫೨) ಕೊರವ ಸಮುದಾಯವು ಸಂಗೀತದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕೊರವ ಸಮುದಾಯದ ಸನಾದಿ ಅಪ್ಪಣ್ಣನವರೇ ಸಾಕ್ಷಿ ಆದ್ದರಿಂದಲೇ ಕೊರವ ಸಮುದಾವನ್ನು ಭಜಂತ್ರಿಗಳೆಂದು ಕರೆಯುವುದುಂಟು. ವಿಜಯಪುರದಲ್ಲಿರುವ ಭಜಂತ್ರಿ ಸಮುದಾಯಗಳೇ ಸಾಕ್ಷಿ. ಬ್ಯಾಂಡ್ ಬಾರಿಸವುದರಿಂದ ತಮ್ಮ ಸ್ವರದಿಂದ ಆಧುನಿಕತೆಗೆ ತಕ್ಕಂತೆ ಬಾರಿಸುತ್ತಾ ನುಡಿಸುತ್ತಾರೆ.

"ಹಾಸನ ಜಿಲ್ಲೆಯ ಆಲೂರು ತಾಲೂಕು, ಪಾಳ್ಯಗ್ರಾಮದ ಕ್ರಿ.ಶ.೧೩೬೯ರ ಬುಕ್ಕರಾಯನ ಕಾಲದ ಶಾಸನವು ಓಲಗದವನಿಗೆ ಮತ್ತು ದಾವಣಿ ಬಾರಿಸುವವರಿಗೆ ಅವರ ಸೇವೆಗಾಗಿ ದತ್ತಿಯನ್ನು ಕೊಡುತ್ತಿದ್ದ ಬಗ್ಗೆ ವಿವರಣೆ ನೀಡುತ್ತದೆ"(ಬಿ.ಆರ್.ಗೋಪಾಲ, ವಿಜಯನಗರ ಶಾಸನಗಳು, ಸಂ.೧, ಪು.೪೦೦-೪೦೨ ಮತ್ತು ಸಂಪುಟ ೨, ಪು.೭೯೭). ಇದನ್ನು ಗಮನಿಸಿದಾಗ ವಿಜಯನಗರದ ಆಳ್ವಿಕೆಯಲ್ಲಿ ಕೊರವ ಸೇವೆಗಾಗಿ ನೀಡಿದ ಭೂಮಿಯನ್ನು ಸಮುದಾಯದವರು ಕೆಲವರು ಉಳಿಸಿಕೊಂಡಿದ್ದಾರೆ. ಇನ್ನು ಕೆಲವರು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಮಾರಾಟ ಮಾಡಿರುವುದುಂಟು. ಕುಡುತಿನಿ, ತೋರಣಗಲ್ಲು ಪ್ರದೇಶದಲ್ಲಿ ಕಾರ್ಖಾನೆಯ ಅಭಿವೃದ್ಧಿಗಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ದೇವಾಲಯದ ಸೇವೆಗಾಗಿ ನೀಡಿದ ಭೂಮಿ ಹಂಪಿ ಪಕ್ಕದಲ್ಲಿರುವ ಹೇಮಗಿರಿ ಆಂಜನೇಯಸ್ವಾಮಿ ಪೂಜೆಗಾಗಿ ನೀಡಲಾಗಿರುವ ಭೂಮಿಯನ್ನು ಉಳಿಸಿ ಹೂವಿನ ಸೇವೆ ಮಾಡುತ್ತಾ ಹೋಗುತ್ತಿರುವುದುಂಟು(ಹುಲಿಗೆಮ್ಮ, ೬೫ ವರ್ಷ, ಕಮಲಾಪುರ, ಕೂಲಿ).

ಮಾತಂಗ ಮುನಿಯ ಬೃಹದ್ದೇಶಿಯಲ್ಲಿ ಪ್ರಥಮ ಬಾರಿ ರಾಗದ ವಿವೇಚನೆಯನ್ನು ಮಾಡಲಾಗಿದೆ ಎಂಬುದನ್ನು ತಿಳಿಸುತ್ತಾರೆ(೯ನೇ ಶತಮಾನ), ೨೬೪ ರಾಗಗಳನ್ನು ಪ್ರಸಿದ್ಧವಾಗಿದ್ದ ದೇಶಿ ರಾಗಗಳನ್ನು, ೧೭೦ ತಾಳಗಳನ್ನು ಒಂದು ರಾಗವನ್ನು ಹಾಡುವಾಗ ಅನುಸರಿಸಬೇಕಾದ ನಿಯಮವನ್ನು ಶಾರ್ಙ್ಗದೇವನ ಸಂಗೀತ ರತ್ನಾಕರ ಗ್ರಂಥದಲ್ಲಿ ನೀಡಲಾಗಿದೆ. ಹಲವಾರು ರಾಜಮಹರಾಜರು ಸಂಗೀತಕ್ಕೆ ಪ್ರೋತ್ಸಾಹ ನೀಡಿರುವುದುಂಟು.

"ವಿಜಯನಗರದ ದೊರೆಗಳು ಸಂಗೀತ ಮತ್ತು ಇತರ ಲಲಿತ ಕಲೆಗಳ ಪೋಷಕರಾಗಿದ್ದರು. ಸಂಗೀತ ಮತ್ತು ನೃತ್ಯ ಇವು ಯಮಳ ತಲೆಗಳಿಗೆ ಪರಸ್ಪರ ಪೋಷಕಗಳಾಗಿದ್ದವು. ಇವು ಸಾರ್ವಜನಿಕ ಸಮಾರಂಭಗಳು, ಉತ್ಸವಗಳು, ಧಾರ್ಮಿಕ ಸಮಾರಂಭಗಳು, ರಾಜಸ್ಥಾನಗಳು ಮತ್ತು ಸಭೆಗಳು, ಕಲಾಪಗಳು ಒಂದು ಅಂಗವಾಗಿದ್ದವು. ಈ ಲಲಿತಕಲೆಗಳ ಪೋಷಣೆ ಮತ್ತು

ವಿಕಾಸದಲ್ಲಿ ದೇವಾಲಯಗಳು ಮಹತ್ತರ ಪಾತ್ರ ವಹಿಸಿದ್ದವು. ಅನೇಕ ಸಂಗೀತ ವಿದ್ವಾಂಸರು ಮತ್ತು ವಾದ್ಯಗಾರರು, ರಾಜರು, ಶ್ರೀಮಂತರು, ರಾಜಪುರುಷರು ನೀಡಿದ ವೃತ್ತಿಗಳಿಂದ ಜೀವನ ಮಾಡುತ್ತಿದ್ದರು"ಎಂಬುದನ್ನು ತಿಳಿಸಿದ್ದಾರೆ(ಸಂಪತ್ತ ಮಾರಾಚಾರ್ಯ, ಸಂಗೀತ ಮತ್ತು ನೃತ್ಯ ಕೊಡುಗೆ, ಪು.೧೫೩).

ಆಗಿನ ಸಂಗೀತ ವಾದ್ಯಗಳಲ್ಲಿ ತಂಬೂರಿ, ಕೊಂಬಂ, ಡೋಲು, ತಾಳಗಳು, ಶಂಖ, ದಂಡಿಗೆ, ಸ್ವರಮಂಡಲ, ಕಿನ್ನರಿ, ವೇಣು, ಪಲ್ಲಕ್ಕಿ, ಒತ್ತು, ಕಂಡೆ, ಮೃದುಂಗ, ಅವುಜ, ದುಂದುಂಬಿ, ಪಣವ, ಡಮರು, ರವಳಿ, ಘಂಟೆ, ಕಿಂಕಣಿ, ಕಂಸಾಲ ಇವು ಜನರು ಬಳಸುತ್ತಿದ್ದ ಸಂಗೀತ ವಾದ್ಯಗಳಾಗಿದ್ದವು. ಕೊರವ ಸಮುದಾಯದಲ್ಲಿಯು, ತಾಳಗಳು, ಓಲಗ ಸಹನಾಯಿ, ತಬಲ ಮೊದಲಾದ ವಾದ್ಯಗಳ ಬಳಕೆ ಇಂದಿಗೂ ಕಾಣಬಹುದಾಗಿದೆ. ಹಂಪಿ ವಿರೂಪಾಕ್ಷ ದೇವಾಲಯದ ಸೇವೆಗಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿದ್ದಾರೆಂಬುದು ನಿರ್ದಶನ.

ಸನಾದಿ ಮೇಳ

ಭಜಂತ್ರಿಯವರೆ ನಡೆಸಿಕೊಂಡು ಬರುವ ಸನಾದಿ ಮೇಳ ಎಲ್ಲ ಮಂಗಳ ಕಾರ್ಯಕ್ರಮಗಳಿಗೂ ಬೇಕು. ಕೊನೆ ಮರಣ ಸಂದರ್ಭದಲ್ಲಿಯೂ ಬೇಕು. ಸನಾದಿ, ಸಣ್ಣ ಡೊಳ್ಳು, ತಾಸೆ, ಸಂತಿ ಇವು ಈ ಮೇಳದ ವಾದ್ಯಗಳು. ಸನಾದಿಯನ್ನು ಅಪ್ಪಟ ಶಾಸ್ತ್ರೀಯವಾಗಿ ಸಂಗಮವಾಗಿ ಎರಡು ರೀತಿಯಲ್ಲಿ ಬಾರಿಸುವುದಿದೆ. ಗುಡಿಯ ಪೌಳಿಯಲ್ಲಿ ಸಂಜೆ, ಮುಂಜಾವು ಕುಳಿತುಕೊಂಡು ಸೇವೆಯೆಂದು ವಾದನ ನುಡಿಸುವಲ್ಲಿ ಅಪ್ಪಟ ಶಾಸ್ತ್ರೀಯವಾಗಿಯೇ ಸನಾದಿಯಿಂದ ಊದುತ್ತಾನೆ. ಸ್ತುತಿಯವ ಭಂವ ಎಂದು ಒಂದೇ ಬಗೆಯಾಗಿ ಶ್ರುತಿ ಹಿಡಿಯುತ್ತಾನೆ. ತಸೆ, ಡೊಳ್ಳಿನವರು ಸನಾದಿಯವನ ತಾಳಗಾಸರೆಯಾಗುತ್ತಾನೆ. ಉತ್ಸವ ಮೆರವಣಿಗೆಗಳ ಮುಂದೆ ಇವರು ಬಾರಿಸುತ್ತಾ ಹೊರಟಾಗ ಸಿನಿಮಾ ಬೀಚ ಊದುತ್ತಾರೆ. ಇವರು ಮುಂಚೆ ಹೇಳಿದಂತೆ ಹಲಗೆ ಮಜಲಿನವರಿಗೆ, ಕರಡಿಯವರಿಗೆ, ಡೊಳ್ಳಿನ ಕೈ ಪಟ್ಟಿನವರಿಗೆ ಸಾಥ ನೀಡುತ್ತಾರೆ. ಹಲಗಿ ಮಜಲಿನಲ್ಲಿ ಹಲಗಿ, ತಾಳ, ಟೋಕರಾಗಗಳಿದ್ದು ಹಲಗೆಯೇ ಪ್ರಮುಖ ವಾದ್ಯವಾಗಿರುವುದರಿಂದ ಮೇಳಕ್ಕೆ ಈ ಹೆಸರು ಬಂದಿದೆ. ಸಂಗಡ ಸನಾದಿಯವರಿರುತ್ತಾರೆ. ಸನಾದಿಯವರು ಇತ್ತೀಚಗೆ ಸಿನಿಮಾ ಹಾಡುಗಳನ್ನು ದೇವರ ಉತ್ಸವ, ಮೆರವಣಿಗೆ, ಮರಣ ಸಂದರ್ಭ ಮುಂತಾದ ಹತ್ತು ಹಲವಾರು ಸಂದರ್ಭಗಳಲ್ಲಿ ಬಾರಿಸುವುದುಂಟು(ಜಾನಪದ ಕೈಪಿಡಿ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭, ಪು.೧೮೧).೭

ಕಾಲಕಣ್ಣಿ ಕಾಮಮ್ಮ

ಶಿವಶರಣೆ ಕಾಲಕಣ್ಣಿಯ ಕಾಮಮ್ಮನ ಜೀವಿತ ಕಾಲ ಹನ್ನೆರಡನೆಯ ಶತಮಾನ ಕಣ್ಣಿ ಎಂದರೆ ದನಕರುಗಳನ್ನು ಕಟ್ಟುವ ಹಗ್ಗ. ಈ ಹಗ್ಗವನ್ನು ಹೊಸೆದು ಮಾರುವ ಕಾಯಕದಿಂದಾಗಿ

ಕಾಮಮ್ಮನಿಗೆ ಕಾಲಕಣ್ಣಿ ಎಂಬ ಕಾಯಕ ವಿಶೇಷಣ ಸೇರಿಕೊಂಡಿದ್ದು. ಈಕೆ ಕೊರವರ ಜಾತಿಗೆ ಸೇರಿದವಳೆಂದು ತಿಳಿದುಬಂದಿದೆ.

ಕಾಮಮ್ಮ ಅಂದಿನ ಬಸವಾದಿ ಶಿವಶರಣರ ಪ್ರೇರಣೆಗೊಳಗಾಗಿ ಲಿಂಗಜಂಗಮ ಸೇವೆಯಲ್ಲಿ ತೊಡಗಿಕೊಂಡು ಕಾಯಕ-ದಾಸೋಹ ನಡೆಸುತ್ತಿದ್ದಳು. ಅವಳು ಬರೆದ ಒಂದೆ ಒಂದು ವಚನ ದೊರಕಿದ್ದು ಅದು ನಿರ್ಭೀತ ನಿಜಲಿಂಗ ಎಂಬ ಅಂಕಿತವನ್ನು ಹೊಂದಿದೆ.

"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ
ಗುರುಲಿಂಗ ಜಂಗಮದ ಕಾಲ ಕಟ್ಟುವೆ
ವ್ರತಭಷ್ಟರ ನಿಟ್ಟೊರಸುವೆ
ಸುಟ್ಟು ತುರುತುರನೆ ತೂರುವೆ
ನಿರ್ಭೀತ ನಿಜಲಿಂಗದಲ್ಲಿ"

ಕಾಲಕಣ್ಣಿಯ ಕಾಮಮ್ಮನ ಬಗೆ ನಮಗೆ ಏನೇನೂ ಮಾಹಿತಿಗಳು ಸಿಕ್ಕುವುದಿಲ್ಲ. ಸಕಲ ಪುರಾತನರ ವಚನಗಳು ಕಟ್ಟುಗಳಲ್ಲಿ ಬಸವಾದಿ ಪ್ರಥಮರ ಸಮಕಾಲೀನ ಶರಣೆಯರ ಜೊತೆಗೆ ಆಕೆಯ ಒಂದೆ ಒಂದು ವಚನ ದೊರೆತಿರುವುದರಿಂದ ಕವಿಚರಿತೆಕಾರರಾದ ಆರ್.ನರಸಿಂಹಾಚಾರ್ಯರು ಈಕೆ ಸು.೧೨೦೦ ಕಾಲಕ್ಕೆ ಸೇರಿದವಳಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಕಾಲಕಣ್ಣಿ ಎಂಬುದು ಕಾಮಮ್ಮನ ವೃತ್ತಿಸಂಬಂಧೀ ವಿಶೇಷಣವಾಗಿದೆ. ಕಣ್ಣಿ ಎಂದರೆ ದನ, ಕರು, ಕುರಿ-ಮುಂತಾದ ಪ್ರಾಣಿಗಳನ್ನು ಕಟ್ಟುವ ಹಗ್ಗ. ಬಹುಶಃ ಈಕೆ ಇಂತಹ ಹಗ್ಗವನ್ನು ತಯಾರಿಸುವ ಕಾಯಕವನ್ನು ಮಾಡುತ್ತಿದ್ದಳಾದ್ದರಿಂದ ಈಕೆಗೆ ಕಾಲಕಣ್ಣಿ ಎಂಬ ವಿಶೇಷಣ ಬಂದಿರುವಬಹುದು. ಈಕೆ ಕೊರವರ ಜಾತಿಗೆ ಸೇರಿದವಳಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕಾಮಮ್ಮ ವ್ರತಭ್ರಷ್ಟತೆಯನ್ನು ಕುರಿತು ಕಟು ವಿರೋಧವನ್ನು ವ್ಯಕ್ತಪಡಿಸುತ್ತಾಳೆ. 'ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರು ತರುವೆ ತೂರುವೆ' ಎನ್ನುವಲ್ಲಿ ಆಕೆ ತೀಕ್ಷ್ಣಕೋಪವನ್ನು ಪ್ರಕಟಿಸುತ್ತಾಳೆ. ವ್ರತಭ್ರಷ್ಟರನ್ನು ಆಕೆ ಸಟ್ಟು ತುರುತುರುನೆ ತೂರಲೆ ಸಿದ್ಧಳಿದ್ದಾಳೆ. ಆಕೆಯ ನಾಲ್ಕು ಸಾಲಿನ ವಚನದಲ್ಲಿ ಮೊದಲೆರಡು ಸಾಲುಗಳಲ್ಲಿ ವೃತ್ತಿ ಸಂಬಂಧಿತ ಭಾಷೆ ಇದೆ. ಹಸು, ದನ, ಕರುಗಳನ್ನು ಬಂಧಿಸಲು ಹಗ್ಗವನ್ನು ತಯಾರಿಸುವ ಕಾಯಕದಲ್ಲಿ ಆಕೆ ನಿರತಳಾಗಿರುವುದರಿಂದ ಕಟ್ಟುವ ಕ್ರಿಯೆಯ ಕಡೆಗೆ ಹೆಚ್ಚಿನ ಗಮನವಿದೆ.

ಚಂಚಲವಾದ ಇಂದ್ರಿಯಗಳನ್ನು ಲಿಂಗದಲ್ಲಿ ಕಟ್ಟುವ ಬಂದಿಸುವ ಪರಿಕಲ್ಪನೆ ಅದ್ಭುತವಾದುದು. ಪಂಚೇದ್ರಿಯಗಳು ತುಡುಗು ದನ, ಕರುಗಳಂತೆ ಅವುಗಳನ್ನು ಸಂಯಮದಿಂದ ದನ ಕರುಗಳಂತೆ ಅವುಗಳನ್ನು ಸಂಯಮದಿಂದ ಬಂಧಿಸುವುದು. ಕಟ್ಟುವುದಾದರೂ ಎಲ್ಲಿ? ಅದಕ್ಕೆ ಆಕೆಯ ಉತ್ತರ ಗುರು–ಲಿಂಗ–ಜಂಗಮರ ಕಾಲದೆಸೆಯಲ್ಲಿ ಎಂಬುದು ಕಾಲಕಣ್ಣಿಯ ಕಾಮಮ್ಮನ ಜೀವನ ವೃತ್ತಾಂತಗಳು ಯಥಪ್ರಕಾರ ಎಲ್ಲ ವಿವರವಾಗಿ ದೊರೆಯುವಂತಿಲ್ಲ. ಆದರೆ ಸಕಲ ಪುರಾತನರ ವಚನಗಳು ಹಸ್ತಪ್ರತಿಯಲ್ಲಿ ಇವಳ ವಚನವೂ ಸೇರ್ಪಡೆಯಾಗಿರುವುದರಿಂದ ಈಕೆ ಬಸವಾದಿ ಶರಣ ಪ್ರಥಮರ ಸಮಕಾಲೀನ ಶರಣೆ ಎಂಬುದರಲ್ಲಿ ಸಂದೇಹವೇನೂ ಉಳಿಯುವುದಿಲ್ಲ.

ಈ ಶರಣೆಯ ಹೆಸರಿನ ಹಿಂದೆ ಸೇರಿರುವ ಕಣ್ಣಿ ಎಂಬ ವೃತ್ತಿಸೂಚಕ ಪದ ಯೋಚನಾರ್ಹವಾದುದು. ಏಕೆಂದರೆ ಕಣ್ಣಿ ಎಂದರೆ ದನ ಕರುಗಳಿಗೆ, ಸುಂದರವಾದ ದೇಹ ಸೌಷ್ಟವವುಳ್ಳ ಕಡಸುಗಳಿಗೆ ಮತ್ತು ಮುಖ್ಯವಾಗಿ ಗಾಡಿಗೆ ಹೂಡುವ ಜೋಡೆತ್ತುಗಳ ಕೊರಳಿಗೆ ಗೆಜ್ಜೆಯ ಸಹಿತ ಕಟ್ಟಲಾಗುವ ಒಂದು ಹಗ್ಗ ವಿಶೇಷ. ಈ ಕಣ್ಣಿ ಎಂಬ ಹಗ್ಗ ವಿಶೇಷವನ್ನು ಕರ್ನಾಟಕದ ದಕ್ಷಿಣದ ಭಾಗದಲ್ಲಿ ಮಿಣಿ ಅಥವಾ ಮಿಳಿ ಎಂಬುದಾಗಿಯೂ ಕರೆಯಲಾಗುತ್ತದೆ. ಅಂದರೆ ಚರ್ಮದ ಪಟ್ಟಿಗಳಿಂದ ಹೆಣೆದ ಒಂದು ತೊಗಲಿನ ಹಗ್ಗ. ಈ ವೃತ್ತಿಯ ಸಮುದಾಯ ಕೊರವರು, ಕೊರಚರು, ಕೊರಮರು ಎಂಬ ಜಾತಿಗೆ ಸೇರಿದವರು. ಮಿಣಿಗಳನ್ನು ಮಾರಲು ಇವರು ಬೀದಿಗಳ ಮೇಲೆ ಬರುವುದಕ್ಕಿಂತಲೂ ಸಾಮಾನ್ಯವಾಗಿ ಇವರು ವಾರದ ಸಂತೆಗಳಲ್ಲಿ ಹೆಚ್ಚಾಗಿ ಮಾರುವುದು ಕೆಲವೆಡೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಈ ಕಣ್ಣಿ ಹೆಣೆಯುವ ವೃತ್ತಿಯ ಜನ, ಈ ವೃತ್ತಿಯನ್ನೆ ನಂಬಿ ಮುಂದುವರಿದಿರುವುದನ್ನು ನೋಡಿದರೆ ಕಾಮಮ್ಮ ಕೊರವ ಜಾತಿಗೆ ಸೇರಿದವಳಾಗಿರಬೇಕೆಂಬುದರಲ್ಲಿ ಸಂದೇಹವೇನೂ ಇಲ್ಲ. ಬುಟ್ಟಿ, ಮೊರ, ಕುಕ್ಕೆ ಹೆಣೆಯುವುದು ಕೂಡ ಈ ಸಮುದಾಯದ ವೃತ್ತಿಯಾಗಿರುತ್ತದೆ.

ಶರಣೆ ಕಾಮಮ್ಮನ ಹೆಸರಿನ ಹಿಂದಿರುವ ಕಾಲಕಣ್ಣಿ ಎಂಬುದಕ್ಕೆ ಇನ್ನೊಂದು ವಿಶೇಷವಾದ ಅರ್ಥವು ಇದೆ. ಅದೆಂದರೆ ಈ ಕಾಲಕಣ್ಣಿ ಎಂಬುದು ಕಾಲಕಣಿ ಮತ್ತು ಮುಖ್ಯವಾಗಿ ಕಣಿ ಎಂಬುದು ಇದರ ಮೂಲಶಬ್ದ. ಏಕೆಂದರೆ ಕಣಿ ಹೇಳುವುದು ಕೂಡ ಇದೆ ಕೊರವರ ಅಥವಾ ಕೊರವಂಜಿ ಸಮುದಾಯದ ಇನ್ನೊಂದು ವೃತ್ತಿಯೂ ಆಗಿದೆ. ಅದಾಗಿ ಕಾಲಕಣ್ಣಿ ಎಂದರೆ ಕಾಲಕಣ್ಣಿ ಅಥವಾ ಕಣಿ ಹೇಳುವ ಅಥವಾ ಕಾಲಜ್ಞಾನ ಅಥವಾ ಕಾಲ ಮಹಿಮೆ ಅಥವಾ ಶಾಸ್ತ್ರ ಹೇಳುವ ಕೊರವಂಜಿ ಮತ್ತು ಆ ವೃತ್ತಿಯನ್ನು ಮಾಡಿಕೊಂಡು ಊರೂರು ಅಲೆಯುವ ಈ ಜನ, ಇಂದಿಗೂ ಅಲೆಮಾರಿ ಸಮುದಾಯವಾಗಿಯೇ ಉಳಿದಿರುವುದನ್ನು ನೋಡಿದರೆ ವೈದಿಕ ಧರ್ಮ ಅಥವಾ ವರ್ಣ ವ್ಯವಸ್ಥೆ ಸಣ್ಣಪುಟ್ಟ ಅಥವಾ ಒಂದೊಂದು ವೃತ್ತಿಗೂ ಒಂದೊಂದು ಜಾತಿಯನ್ನಾಗಿ ಮಾಡಿ, ದೇಶದ ಅನ್ಯಾನ್ಯ ಜನಾಂಗಗಳನ್ನು ಎಷ್ಟೊಂದು

ಅಮಾನುಷವಾದ ಒಡೆದು ಆಳುವ ಕರ್ವರೂಪಕ್ಕೆ ದೂಡಲಾಗಿದೆ ಎಂಬುದರ ಹಿಂದಿನ ಕರ್ಮಕಾಂಡವನ್ನು ಇಲ್ಲಿ ಸುಲಭವಾಗಿಯೆ ಗ್ರಹಿಸಬಹುದಾಗಿದೆ. ಆದರೆ ಇಪ್ಪತ್ತನೆ ಶತಮಾನ ಹಾವನೂರು ವರದಿಯಲ್ಲಿ ಮಾತ್ರ ನಾಗರೀಕರನ್ನಾಗಿ ಪರಿಗಣಿಸಲಾಗಿರುವ ಈ ಜನಾಂಗವನ್ನು ಬಸವಾದಿ ಶರಣ ಪ್ರಥಮರು ಈಗ್ಗೆ ಎಂಟುನೂರು ವರ್ಷಗಳ ಹಿಂದೆಯೆ ಹೇಗೆ ಶೈಕ್ಷಣಿಕ ಅವಕಾಶಗಳಿಂದಲೂ ಆಧ್ಯಾತ್ಮಿಕ ಗೌರವದಿಂದಲೂ ಅವರನ್ನು ತಮ್ಮೊಳಗೆ ಬರಮಾಡಿಕೊಂಡ ರೆಂಬುದಕ್ಕೆ ಕಾಲಕಣ್ಣಿಯ ಕಾಮಮ್ಮ ಮತ್ತು ಅವಳ ಸುತ್ತಲಿರುವ ಅಲ್ಪಸ್ವಲ್ಪ ಇತಿಹಾಸವು ಸ್ಪಷ್ಟವಾಗಿ ದಾಖಲಾತ್ಮಕ ಸಾಕ್ಷ್ಯವನ್ನೆ ನುಡಿಯುತ್ತವೆ. ಹೀಗೆ ಶರಣರೊಡಗೂಡಿ ಹರಪಾರಮ್ಯದ ಮಹೋನ್ನತಿಯನ್ನು ಮುಟ್ಟಿದುದೆ ಶರಣಧರ್ಮದ ವಿಸ್ಮಯಗಳಲ್ಲೊಂದಾಗಿದೆ.

ಅಧ್ಯಾಯ: ಆರು

ಸಮಕಾಲೀನ ಸಮಸ್ಯೆಗಳು ಮತ್ತು ಸವಾಲುಗಳು

ಅಧ್ಯಾಯ: ಆರು

ಸಮಕಾಲೀನ ಸಮಸ್ಯೆಗಳು ಮತ್ತು ಸವಾಲುಗಳು

ಪೀಠಿಕೆ

ಪ್ರಪಂಚದ ಬೇರಾವ ದೇಶಗಳಲ್ಲೂ ಕಾಣಿಸಿಕೊಳ್ಳದೆ ಭಾರತದಲ್ಲಿ ಮಾತ್ರವೆ ಉದ್ಭವಿಸುವ ವಿಶಿಷ್ಟ ಸಮಸ್ಯೆಯೆಂದರೆ ಬುಡಕಟ್ಟು ಮತ್ತು ಜಾತಿ ಇವುಗಳ ನಡುವೆ ಇರುವ ವ್ಯತ್ಯಾಸ. ಅದು ಹೇಗೆಂದರೆ ಭಾರತದಲ್ಲಿ ವೇದಗಳ ಕಾಲದಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಪ್ರಮುಖ ನಾಲ್ಕು ವರ್ಗಗಳಿಂದ ಆರಂಭದಲ್ಲಿ ವೃತ್ತಿಗನುಗುಣವಾಗಿ ಮಾತ್ರ ವರ್ಗೀಕರಿಸಲ್ಪಟ್ಟಿದ್ದ ಈ ವ್ಯವಸ್ಥೆಯು ಕಾಲಕ್ರಮೇಣ ಜಾತಿಗಳಾಗಿ ಸಾಮಾಜಿಕ ಶೋಷಣೆಯ ಪ್ರಮುಖ ಸಾಧನವಾಗಿ ಪರಿಣಮಿಸಿತು. ಈ ರೀತಿಯ ವೈದಿಕ ಧರ್ಮದ ಪ್ರಮುಖ ನಾಲ್ಕು ಜಾತಿಗಳಲ್ಲಿ ಯಾವ ಜಾತಿಯ ಶೃಂಬಲೆಗೂ ಸಿಗದೆ ತಾವೇ ತಾವಾಗಿ ಸ್ವತಂತ್ರವಾಗಿ ಉಳಿಸಿಕೊಂಡವುಗಳೇ ಬುಡಕಟ್ಟುಗಳು. ಹೀಗೆ ಉಳಿದೆಲ್ಲಾ ಜಾತಿಗಳಿಂದ ದೂರವಿರಲು ಈ ಬುಡಕಟ್ಟುಗಳು ಕಾಡುಮೇಡು, ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತದ್ದುದೆ ಕಾರಣವಾಗಿತ್ತು. ಈ ಬುಡಕಟ್ಟುಗಳಲ್ಲಿ ಹಿಂದೂ ಧರ್ಮದ ಪ್ರಭಾವದಿಂದ ತಪ್ಪಿಸಿಕೊಂಡಿದ್ದರಿಂದ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿಕೊಂಡವು. ಇವರು ಆರ್ಯಧರ್ಮದ ಪ್ರಭಾವಕ್ಕೆ ಒಳಗಾಗಿರುವುದಕ್ಕಿಂತಲೂ ದ್ರಾವಿಡ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವುದೇ ಅಧಿಕ. ಆದರೆ ಇಂತಹ ಅವಕಾಶ ನಗರ ವಾಸಿಗಳಾದ ಜಾತಿಗಳಿಗೆ ಲಭ್ಯವಾಗಲಿಲ್ಲ. ಆರಂಭದಿಂದಲೂ ಈ ಜಾತಿಗಳು ಹಿಂದೂ ಧರ್ಮದ ವೈದಿಕ ಸಂಪ್ರದಾಯದ ಹಿಡಿತಕ್ಕೆ ಸಿಕ್ಕಿದ್ದರಿಂದ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಆಚಾರ ವಿಚಾರ ಸಂಪ್ರದಾಯಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಮೂಲಭೂತವಾಗಿ ಹಿಂದು ಧರ್ಮದಿಂದ ಪ್ರತ್ಯೇಕವಾಗಲೂ ಸಾಧ್ಯವಾಗಲಿಲ್ಲ. ಹೀಗಾಗಿ ಹಿಂದೂ ಧರ್ಮದ ಪ್ರಭಾವ ಯಾವ ಪ್ರಮಾಣದಲ್ಲಾಗಿದೆ ಎಂಬ ಅಂಶ ಜಾತಿ ಹಾಗೂ ಬುಡಕಟ್ಟು ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸುವ ಸಾಧನವಾಗಿದೆ. ಕೊರವ ಸಮುದಾಯ ದವರು ಸಹ ದ್ರಾವಿಡರ ಒಂದು ಸಂಪ್ರದಾಯವನ್ನು

ಒಳಗೊಂಡಿದ್ದು, ಒಂದೊಂದೂ ಪ್ರದೇಶದಲ್ಲಿ ಒಂದೊಂದು ಹೆಸರಿನಿಂದ ಕರೆಯಲಾಗುತ್ತಿದೆ ಮತ್ತು ರಾಜ್ಯಗಳಲ್ಲಿ ಎಸ್‌ಸಿ, ಎಸ್‌ಟಿ ಮತ್ತಯ ಓಬಿಸಿ ಪಟ್ಟಿಯಲ್ಲಿರುವುದು ಕಾಣುತ್ತೇವೆ.

ಎಲ್ಲಾ ಜಾತಿ ಜನಾಂಗಗಳಲ್ಲಿರುವ ಶೋಷಿತ ಜನ ದಲಿತರು ಎಂದು, ಇನ್ನೊಂದು ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದರೋ ಅವರು ಮಾತ್ರ, ದಲಿತರು ಎಂದು ಸಮಾಜದಲ್ಲಿ ಹಿಂದುಳಿದವರು, ದಮನಕ್ಕೊಳಗಾದವರು, ಸಾಮಾಜಿಕವಾಗಿ ಅಧಿಕವಾಗಿ ಕೆಳಮಟ್ಟದಲ್ಲಿರುವ ಎಂಬ ಅರ್ಥಗಳಿವೆ. ಈ ಕೊರವ ಸಮುದಾಯವು ಹಿಂದುಳಿದ ಸಮುದಾಯವಾಗಿ, ಸಾಮಾಜಿಕ ಆರ್ಥಿಕವಾಗಿ ಅತ್ಯಂತ ಕೆಳಮಟ್ಟದಲ್ಲಿರುವುದುಂಟು.

"ಡಾ. ಅರವಿಂದ ಮಾಲಗತ್ತಿರವರ ಹೇಳಿಕೆ ಶತಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು, ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರಹೊರಗೆ ವಾಸಿಸಿ, ಕೀಳು ವೃತ್ತಿಗೆ ಅವಲಂಬಿತವಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಮತ್ತು ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ"(ಡಾ.ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ, ಪು.೩). ಆದರೆ ಕೆಲವು ಕಡೆ ಅಸ್ಪೃಶ್ಯತೆಯ ಅನುಭವವಿಲ್ಲದಿದ್ದರೂ ಅತ್ಯಂತ ವೇದನೆಗೊಳಗಾದ ಚದುರಿ ಹೋಗಿರುವ ಸಮುದಾಯದ ಪ್ರತಿನಿಧಿಗಳು ಪ್ರಗತಿಪರ ದಲಿತ ಸಂಘಟನೆಯೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡು ತಮ್ಮ ಸಾಹಿತ್ಯ ಮತ್ತು ಸಂಘಟನೆಗಳ ಮೂಲಕ ಅಸ್ಪೃಶ್ಯತೆಯನ್ನು ಅಸಮಾನತೆಯನ್ನು ತೊಡೆದು ಹಾಕಲು ಪ್ರಯತ್ನ ಪಡುವಂಥವರೂ ಆಗಿರುತ್ತಾರೆ. ಅವರು ತಲೆತಲೆಮಾರಿನಿಂದಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಸಮುದಾಯ ಸಾಮಾಜಿಕ ಶೋಷಣೆಯನ್ನು ಅನುಭವಿಸುತ್ತಿವೆ. ಒಂದು ಕಾಲದಲ್ಲಿ ಸಮುದಾಯದ ಕಲೆಗೆ ಇದ್ದ ಗೌರವ ಇಂದು ಹೀನಾಯ ಸ್ಥಿತಿಯಲ್ಲಿರುವುದುಂಟು ಆ ಕಲೆಗೆ ಧಾರ್ಮಿಕ ಕಲೆಗೆ ಮಾತ್ರ ಸೀಮಿತವಾಗಿದೆ. ಅವರು ಬದುಕು ಸಹ ಶೋಚಯನೀಯ ಸ್ಥಿತಿಯಲ್ಲಿದೆ. ಅಲೆಮಾರಿಗಳಂತೆ ತಮ್ಮ ಪ್ರದೇಶದಲ್ಲಿ ಸ್ಥಿರವಾಗಿ ನಿಲ್ಲದೆ ಸಂಚಾರ ಸಮುದಾಯವಾಗಿರುವ ಒಂದು ಸಮುದಾಯ ಎಂದು ಹೇಳಬಹುದು.

"ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವರಸಾಯಿ, ದಸ್ಯು, ಆದಿಮಜನಾಂಗ, ತಿರುಕುಲತ್ತರ, ಪಂಚಮರು, ಬಹಿಸ್ಕೃತರು, ಆದಿಕರ್ನಾಟಕ, ಆದಿದ್ರಾವಿಡ, ಅನುಸೂಚಿತ, ಜಾತಿ, ಹರಿಜನ ಎಂದು ಮುಂತಾಗಿ ಕರೆಯುತ್ತಿದ್ದುದರ ಬಗೆಗೆ ಇತಿಹಾಸ ನುಡಿಯುತ್ತದೆ. ಉತ್ತರ ಕರ್ನಾಟಕದಲ್ಲಿ ನೆಲೆನಿಂತಿರುವ ದಲಿತ ಜನಪದವೃಂದಗಳಲ್ಲಿ ಕೆಲವನ್ನು ಹೆಸರಿಸಬಹುದು. ಹೊಲೆಯರು, ಮಾದಿಗರು, ಮಗಾರರು, ಡೋರರು, ದಾಸರು, ಡೊಕ್ಕಲಿಗರು, ಡೊಂಬರು, ಕಿಳ್ಳಿಕ್ಯಾತರು, ದುರಗಮುರಗಿಯರು, ಒಡ್ಡರು, ಕೊರವರು, ಸುಡಗಾಡಸಿದ್ದರು, ಪಾಸಿಪರದಿಗಳು,

ಲಂಬಾಣಿಗರು, ಈಳಗೇರರು, ಹಕ್ಕಿಪಕ್ಕಿಗರು ಮುಂತಾದವರು"(ಡಾ.ಅರ್ಜುನ ಗೋಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ಪು.೧೭). ಇವುಗಳಲ್ಲಿ ಕೊರವ ಸಮುದಾಯದ ಬದುಕಿನ ಬಗೆ ಚರ್ಚಿಸಿದ್ದಾರೆ. ಇವರ ಮೂಲ ವೃತ್ತಿಯನ್ನು ಬುಟ್ಟಿ ತಯಾರಿಕೆ, ಕಸಬಾರಿಕೆ ಮಾಡುವುದನ್ನು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಕಾಣುತ್ತೇವೆ. ಆದರೆ ಪ್ರದೇಶಕ್ಕೆ ಅನುಕೂಲವಾಗಿ ಕಸಬುಗಳನ್ನು ಕಾಣುವುದುಂಟು ಬೀದರ ಗುಲ್ಬರ್ಗಾ ಭಾಗದಲ್ಲಿ ಬುಟ್ಟಿಯನ್ನು ಹಂದಿಸಾಕಾಣಿಕೆ ಕಂಡುಬರುತ್ತದೆ. ಆದರೆ ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿಯಲ್ಲಿ ಕಸಬಾರಿಕೆ ಬುಟ್ಟಿ ತಯಾರಿಕೆಯನ್ನು ಕಾಣುತ್ತೇವೆ.

ಕರ್ನಾಟಕದಲ್ಲಿ ಕೊರವ ಸಮುದಾಯರ ಜೀವನ ವ್ಯವಸ್ಥೆಯು ತುಂಬಾ ಶೋಚನಿಯ ಸ್ಥಿತಿಯಲ್ಲಿದೆ. ಇವರನ್ನು ಒಂದೆಡೆ ಅಸ್ಪೃಶ್ಯತೆ, ಇನ್ನೊಂದು ಕಡೆ ನಾಗರಿಕ ಜಗತ್ತಿನಲ್ಲಿರುವ ಧಾರ್ಮಿಕ ಭಿಕ್ಷಕರು ಎಂದು ಕಳ್ಳರು ಎಂಬ ಮನೋಭಾವದಿಂದಲೆ ನೋಡಲಾಗುತ್ತದೆ. ಕನ್ನಡ ನಾಡಿನಲ್ಲಿ ಗುಡಿಸಲುಗಳು, ಕಾಣುವುದು ವಿರಳ. ಒಂದು ಕಡೆ ಬಂಡವಾಳ ಶಾಹೀಗಳು ಕಾಂಕ್ರೇಟ್ ಕಟ್ಟಡಗಳಲ್ಲಿ ಆರಾಮದ ಜೀವನ ನಡೆಸುತ್ತಿದ್ದಾರೆ. ಇನ್ನೊಂದೆಡೆ ಗುಡಿಸಲುಗಳಲ್ಲಿ ವಾಸಮಾಡುವ ಬಡತನದ ಜೀವನವನ್ನು ನಡೆಸುತ್ತಿದ್ದಾರೆ. ಕತ್ತಲಿನ ಪ್ರದೇಶದಲ್ಲಿ ಚಿಂದಿ ಬಟ್ಟೆಯನ್ನು ತೊಟ್ಟು ಅನಾಗರಿಕ ಎಂಬ ಹೊಸ್ತಿಲಿನಲ್ಲಿಯೂ ಬಿದ್ದು ಹೊರಳಾಡುತ್ತಿರುವುದು ನೋಡಬಹುದು. ಬಂಡವಾಳ ಶಾಹಿಗಳು ತಮ್ಮ ಕುಟುಂಬಗಳ ಅಭಿವೃದ್ಧಿ ಹೊಂದಬೇಕು. ಶ್ರೀಮಂತರಾಗಬೇಕು ಎಂಬ ಕಲ್ಪನೆಯಿಂದ ಸಾರ್ವತ್ರಿಕ ಬದುಕಿನಲ್ಲಿ ಸರ್ಕಾರ ಸಂಪರ್ಕದಿಂದ ಮುಂದೆ ಬಂದಿದ್ದಾರೆ. ಇಂತಹ ಸಂದರ್ಭಗಳಲ್ಲಿ ಅಸಮಾನತೆಯನ್ನು ಬಿತ್ತುವ ತಾಂತ್ರಗಾರಿಕೆ ಸಮಾಜದಲ್ಲಿ ಒಂದೊದಾಗಿದೆ. ಕೊರವ ಸಂಸ್ಕೃತಿ, ಕಲೆ, ಸಾಹಿತ್ಯ, ವೇಷದೊಂದಿಗೆ ಭಿಕ್ಷಟನೆ, ಕಸಬಾರಿಗೆ, ವ್ಯಾಪಾರ, ಕೂದಲು ವ್ಯಾಪಾರ, ಶುಭ ಸಂದರ್ಭದಲ್ಲಿ ಬಾರಿಸುವ ಕಲೆ ಇಂದಿಗೂ ಜನರ ದೃಷ್ಟಿಯಲ್ಲಿ ಅಜರಾಮರವಾಗಿದೆ. ಇದಕ್ಕೆ ಇಂದು ಸಮಾಜದಲ್ಲಿ ಮಾನ್ಯತೆ ಕಡಿಮೆಯಾಗು ತ್ತಿರುವುದುಂಟು. ಹಳ್ಳಿ ಗಾಡು ಪ್ರದೇಶದಲ್ಲಿ ನಗರದಲ್ಲಿ ಅಲ್ಪ ಸಲ್ಪ ಕಂಡುಬರುತ್ತದೆ. ಆಧುನಿಕತೆಯ ಸಂದರ್ಭದಲ್ಲಿ ಯಂತ್ರೋಪಕರಣಗಳ ಬಳಕೆಯಾಗುತ್ತಿರುವುದುಂಟು. ಕೊರವ ಸಮುದಾಯದ ಜನರಿಗೆ ಬಂಡವಾಳಶಾಹಿ ಸಮಾಜ ಮತ್ತು ಸರ್ಕಾರ ಸಹಕಾರವನ್ನು ನೀಡುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ. ಸಮೃದ್ಧ ಭಾರತದಲ್ಲಿ ಏಕರೂಪ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಕಾರಣ ಸರ್ವಾಂಗಿಣ ಅಭಿವೃದ್ಧಿ ಅಸಾಧ್ಯವಾಗುತ್ತಿದೆ. ದೇಶ, ಪರರ ದಾಸ್ಯದಿಂದ ವಿಮುಕ್ತಿ ಹೊಂದಿದ್ದರೂ ದೇಶದೊಳಗಿರುವ ಬಂಡವಾಳ ಶಾಹಿಗಳು ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ತಮಗೆ ಇಷ್ಟ ಬಂದ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಇತರ ಸಮುದಾಯಗಳು ಇವರ ದುರ್ವರ್ತೆಯನ್ನು ಕಂಡು ಕಾಣದ ರೀತಿಯಲ್ಲಿ ಬದುಕುತ್ತಿದ್ದಾರೆ. ಜಾತಿ ಮತ್ತು

ಬುಡಕಟ್ಟುಗಳ ಅಧ್ಯಯನಗಳಿಗಿಂತ ಹೆಚ್ಚಾಗಿ ಅಧ್ಯಯನ ನಡೆದದ್ದು ಕುಶಲಕರ್ಮಿ, ಆದಿವಾಸಿ, ಅಲೆಮಾರಿಗಳ ಮೇಲೆ ಎಂಬುದು ತಿಳಿಯುತ್ತದೆ. ಸಮುದಾಯಗಳನ್ನು ಅಧ್ಯಯನ ಮಾಡಲು ಕಂಪನಿ ಆಡಳಿತಕ್ಕೆ ಈ ತರದ ಆದ ಅನೇಕ ರಾಜಕೀಯಾಧಿಕಾರ ಕಾರಣಗಳು ಇದ್ದವು. ಕಂಪನಿ ಆಡಳಿತದ ಹೊಸ ಕೃಷಿ ನೀತಿ, ಭೂ ಕಂದಾಯ ತೆರಿಗೆ ವ್ಯವಸ್ಥೆಗಳು, ದೇಶೀಯ ವ್ಯವಸಾಯ ಸಂರಚನೆಯನ್ನು ಮತ್ತು ವಾಣಿಜ್ಯ ವ್ಯವಹಾರಗಳನ್ನು ನಿಯಂತ್ರಿಸತೊಡಗಿದವು. ದೇಶೀಯ ಊಳಿಗಮಾನ್ಯ ವ್ಯವಸ್ಥೆ ರೂಪುರೇಷೆಗಳು ಮತ್ತು ಅದರ ಪರಂಪರಿಕ ಆರ್ಥಿಕ ಚಟುವಟಿಕೆಗಳು ಕಂಪನಿ ಆಡಳಿತದ ಹೊಸಕಾಯ್ದೆಗಳಿಂದ ನಿಯಂತ್ರಣಕೊಳ್ಳಪಟ್ಟವು. ಆರ್ಥಿಕತೆಯ ಜೊತೆಗೆ ಸಂಬಂಧ ಎರಿಸಿಕೊಂಡಿದ್ದ ಕುಶಲಕರ್ಮಿ, ವ್ಯಾಪಾರಿ ಮತ್ತು ಸೇವಕವರ್ಗಗಳು ದಿಕ್ಕುತಪ್ಪಿದವು(ಕರ್ನಾಟಕದ ಡೊಂಬರ ಮಹಾ ಪ್ರಬಂಧ, ಪು.೪೬). ವಸಾಹತುಶಾಹಿ ಆಡಳಿತದ ಕಾಯ್ದೆಗಳಿಂದಾಗಿ ತಳವರ್ಗಗಳ ದುಡಿಮೆಯ ಮೇಲೆ ತುಂಬಾಲಾರದ ನಷ್ಟವಾಯಿತು. ಕೈಗಾರಿಕೆಗಳ ಪ್ರಭಾವದಿಂದಾಗಿ ಕೈಕಸುಬಿಗೆ ಪೆಟ್ಟು ಬಿತ್ತು. ಸ್ಥಳೀಯ ಕೌಶಲಗಳನ್ನು ಮೈಗೂಡಿಸಿಕೊಂಡಿದ್ದ ಸಮುದಾಯಗಳು ಆರ್ಥಿಕವಾಗಿ ಒಡೆಯದ ವ್ಯವಸ್ಥೆಯಲ್ಲಿಯೊ ಅವಲಂಬಿಸಿದ್ದವು. ಇನ್ನೂ ಅಲೆಮಾರಿ ವ್ಯಾಪರಿಗಳು ಹಳ್ಳಿ ಮತ್ತು ನಗರಗಳ ನಡುವೆ ಸೇತುವೆಯಾಗಿದ್ದುಕೊಂಡು ಸ್ಥಳೀಯ ವ್ಯವಹಾರಗಳನ್ನು ಘೋಷಿಸುತ್ತಿದ್ದವು. ಬ್ರಿಟಿಷರು ಕಾಯ್ದೆಗಳು ಕಂಪನಿ ಆಡಳಿತ ಹೇರಿದ ತಾವ ಪಾರಂಪರಿಕ ಉತ್ಪಾದನಾ ಸಂಬಂಧಗಳನ್ನು ನಿರ್ಣಾಯಕವಾಗಿ ತಲೆಕೆಳಗಾಗಿ ಮಾಡಿದವು.

ಸೇವಕ ವರ್ಗಗಳಿಗೆ ಸೇರಿದ್ದು ಅಲೆಮಾರಿ ಸಮುದಾಯಗಳು ವಿರೋಧಿಸಿದವು. ಯಾವ ಸಮುದಾಯಗಳು ಸ್ಥಳೀಯ ಯೋಜನೆ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿಕೊಂಡು ಬದುಕುತ್ತಿದ್ದವು. ಅವು ಬೇರೆಡೆ ವಲಸೆ ಹೋಗವುದು ಮತ್ತು ಜೀವನ ನಿರ್ವಹಣೆಗೆ ಪರ್ಯಾಯ ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲೇ ಬೇಕಾದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ಸತ್ಯದ ಬದುಕಿನ ದಾರುಣಗೊಂಡಾಗ ಈ ಸಮುದಾಯಗಳು ದಿಕ್ಕು ಕಾಣದೇ ಸ್ಥಳೀಯ ಯಾವ ಮಾನವರ ಜೊತೆ ಒಡನಾಟ ಬೆಳೆಸಿಕೊಂಡರು. ಬದುಕಿನ ಪ್ರಶ್ನೆ? ಕೃಷಿಗೆ ಸಂಬಂಧಿಸಿದಂತೆ ಉಪಕರಣಗಳನ್ನು ಒದಗಿಸಿಕೊಂಡು ಕೆಲಸ ಮಾಡುತ್ತಿದ್ದರು. ಸ್ಥಳೀಯ ಸಮುದಾಯಗಳ ವಿವರಗಳು ಮಾತ್ರ ಬೇಕಿದ್ದ ಕಾರಣ ದೇಶೀಯ ಪಂಡಿತರ ಸಹಾಯವನ್ನು ಪಡೆದು ವರದಿಗಳನ್ನು ಸಿದ್ದಪಡಿಸಿದರು. ಅದರಲ್ಲೂ ೧೮೭೧ ಕ್ರಿಮಿನಲ್ ಟ್ರೆಜ ಆಕ್ಟನ್ ಕಾಲಂ ೨೧ ಪ್ರತಿ ಹಳ್ಳಿಯ ಯಜಮಾನ ಮತ್ತು ತಳವಾರ ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಜೀವಿಸುವ ಯಾವುದೇ ಆದಿವಾಸಿ ಗುಂಪು ಅಥವಾ ಅಲೆಮಾರಿ ಸಮುದಾಯಗಳನ್ನು ಕ್ರಿಮಿನಲ್ ಎಂದು ಘೋಷಿಸುವ ಮತ್ತು ಅನಂತರ ಆ ಸಮುದಾಯಗಳ ಭೂಮಿಯನ್ನು ವಶಪಡಿಸಿಕೊಂಡು ತಮ್ಮ ಹತ್ತಿರದ ಪೊಲೀಸ್ ಠಾಣೆಗೆ ದೂರು ಕೊಡುವ ಅಧಿಕಾರವನ್ನು ನೀಡುತ್ತದೆ(ಅದೇ, ಪು.೪೯).

* ಕೊರವ ಸಮುದಾಯವನ್ನು ಅಲೆಮಾರಿ ಸೈನಿಕ ಸಮುದಾಯದ ಯುದ್ಧೋಪಜೀವಿ ಎಂದ ಥರ್ಸ್‌ಟನ್ Case and tribes of Southern Indiaದಲ್ಲಿ ಸೂಚಿಸಿದ್ದಾರೆ(ಅದೇ, ಪು.೬೦) (೨೦೮ಳ ಆದಿವಾಸಿ ಅಲೆಮಾರಿ ಮತ್ತು ಸೈನಿಕ ಸಮುದಾಯಗಳಿಗೆ ಮೀಸಲಾದ ಪುಟಗಳು)
* The Mysore tribe and castes ಇವರನ್ನು ಕ್ರಿಮಿನಲ್ ಸಮುದಾಯದಲ್ಲಿ ಕೊರವ ಸಮುದಾಯವು ಒಂದು.
* ಜನರನ್ನು ಯುರೋಪಿನ ಕಣ್ಣುಗಳ ನೋಡಿ ತಮ್ಮ ಆಡಳಿತಕ್ಕೆ ಅನುಕೂಲವಾಗಬಲ್ಲ ವರದಿಗಳು ಪಂಡಿತರಿಂದ ತಿಳಿದು ಸಿದ್ದಪಡಿಸಿಕೊಂಡರು ಎಂಬುದು ತಿಳಿದುಬರುತ್ತದೆ.
* ವಸಾಹತುಶಾಹಿ ಸಂದರ್ಭದಲ್ಲಿ ಸಮುದಾಯಗಳನ್ನು ಮಾಹಿತಿ ನೀಡುವ ಆಕಾರಗಳನ್ನಾಗಿ ಮಾತ್ರ ನೋಡುವ ದೃಷ್ಟಿಕೋನ ರೂಪುಗೊಂಡಿತು. ಕೈಗಾರಿಕಾರಣಕ್ಕಾಗಿ ಉಲ್ಬಣಗೊಂಡ ಆರ್ಥಿಕ ಪೈಪೋಟಿಯ ಬಂಡವಾಳ ಶಾಹಿಗಳ ಸೃಷ್ಟಿ ಮೇಲೆ ಕಾರಣವಾಗಿತ್ತು. ಬಂಡವಾಳ ಶಾಹಿಗಳ ನಷ್ಟವನ್ನು ಒದಗಿಸಿತ್ತು. ಸಮಾಜದಲ್ಲಿ ಬದುಕ ಬೇಕಾದರೆ ಆರ್ಥಿಕ ಮೂಲವೇ ಕಾರಣ ಆದರೆ ಆರ್ಥಿಕ ಮೂಲವನ್ನು ಕಳೆದುಕೊಳ್ಳುತ್ತಾ ಜೀವನ ನಿರ್ವಹಣೆಗಾಗಿ ಬೇರೆ ಬೇರೆ ದುಡಿಮೆಯನ್ನು ಅವಲಂಬಿಸಿ ಬದುಕುತ್ತಿರುವುದುಂಟು. ಇನ್ನೊಂದು ಕಡೆಗೆ ರಾಜಕಾರಣಗಳ ಪ್ರಭಾವದಿಂದ ಜಾತೀಯತೇ ಇನ್ನೂ ಬೆಳೆಯುತ್ತಿರುವುದು.

ಸಮಸ್ಯೆಗಳು

ಕೊರವ ಸಮುದಾಯದ ಸಮಸ್ಯೆಗಳು ಇಂದು ನಿನ್ನೆಯದಲ್ಲ, ಅದು ನಿರಂತರವಾದ ಸಮಸ್ಯೆಗಳಾಗಿಯೇ ಬಂದಿವೆ. ಅದು ಕಷ್ಟಗಳನ್ನು ಅನಿವಾರ್ಯವಾಗಿ ಅನುಭವಿಸಬೇಕಾಗುತ್ತದೆ. ಸಮಸ್ಯೆ ಸಾಮಾನ್ಯವಾಗಿ ಒಂದು ಅಸಹಜವಾದ ಪರಿಸ್ಥಿತಿಯಾಗಿರುತ್ತದೆ. ತೊಂದರೆಯು ಸಮಸ್ಯೆಯಾಗಿ ರೂಪುಗೊಳ್ಳುವಾಗ ಅದನ್ನು ನಿವಾರಿಸಲು ತುಂಬಾ ಅಸಹಜವಾದ ಸಮಸ್ಯೆಯಾಗುತ್ತದೆ. ಅದರಿಂದ ಬಿಡುಗಡೆ ಪಡೆಯಲು ಪ್ರಯತ್ನಿಸುವಾಗ ಹಲವಾರು ಸಮಸ್ಯೆಗಳಿಗೆ ಗುರಿಯಾಗಬೇಕಾಗುತ್ತದೆ. ಇಷ್ಟೆ ದಿನಗಳಲ್ಲಿ ಸಂಪೂರ್ಣ ಪರಿಹಾರ ಸಾಧ್ಯ ಎನ್ನುವುದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಅಕ್ಷರವಂತರಾಗಿ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವರೆಗೆ ಎಷ್ಟು ಶತಮಾನಗಳು ಬೇಕಾಗುತ್ತದೆ.

ಕೊರವರು ಅಲೆಮಾರಿಗಳಾಗಿ ಸ್ಥಿರವಾಗಿ ನೆಲನಿಂತ ಮೇಲೆ ಸಮುದಾಯ ತಮ್ಮ ವೃತ್ತಿ ಬದುಕಿನಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ವಾಸ್ತವಿಕವಾಗಿದ್ದವು. ಹಿಂದಿನ ಸಮಸ್ಯೆಗಳಿಗೂ ವ್ಯತ್ಯಾಸವಿದೆ. ಸಮುದಾಯದ ಹಿಂದಿನ ಸಮಸ್ಯೆಗಳು ಸಾಮಾಜಿಕ ಜೀವನದಲ್ಲಿ ಅನಿವಾರ್ಯ ಪ್ರಸಂಗಗಳಾಗಿದ್ದವು. ಹೆಚ್ಚು ಹೆಚ್ಚು ಕಾಣಿಸುತ್ತಿರಲಿಲ್ಲ. ಆದರೆ ಇಂದಿನ ಸಮಸ್ಯೆಗಳು ಸಾಮಾಜಿಕ

ಜೀವನದಲ್ಲಿ ಅನಿವಾರ್ಯ ಕಂಡುಬರುತ್ತವೆ. ಸಮುದಾಯದ ಜನ ಸಂಖ್ಯೆಯು ಬೆಳೆಯುತ್ತಲಿದೆ. ಸ್ವಾತಂತ್ರ ಬಂದು ೬೦ ವರ್ಷಗಳು ಗತಿಸಿದರು, ಒಂದೊತ್ತಿನ ಊಟಕ್ಕಾಗಿ ಪರದಾಡುವ ಪರಿಸ್ಥಿತಿಯಿದೆ. ವ್ಯಾಪಾರ ಮಾಡುತ್ತಲೇ ಮನೆ ಮನೆಯಲ್ಲಿ ದೊರೆತ ಆಹಾರ ಪಡೆದು ಬದುಕುವಂತಹ ಜನರು ಇರುವುದು ಸತ್ಯ ಸಂಗತಿ. ಸಮುದಾಯದ ಸ್ಥಿತಿಗತಿಗಳಲ್ಲಿ ಬದಲಾವಣೆಯಾಗಬೇಕಿದೆ. ಸಮಸ್ಯೆಗಳ ಮಧ್ಯೆ ನೆಲೆನಿಂತಿದ್ದಾರೆ. ಅಂತಹವುಗಳಲ್ಲಿ ಆರ್ಥಿಕ ಸಮಸ್ಯೆ, ರಾಜಕೀಯ ಸಮಸ್ಯೆ, ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ, ಶೈಕ್ಷಣಿಕ ಸಮಸ್ಯೆ, ಇನ್ನೂ ಮುಂತಾದ ಸಮಸ್ಯೆಗಳನ್ನು ಕಾಣಬಹುದು.

ಆರ್ಥಿಕ ಸಮಸ್ಯೆ

ಕೊರವ ಸಮುದಾಯ ಮೂಲ ವೃತ್ತಿ ಕಸಬಾರಿಗೆ ಮತ್ತು ಬುಟ್ಟಿ ನೆಯ್ಯುವುದು. ಜೊತೆಗೆ ಭಿಕ್ಷೆ ಮತ್ತು ಬೇಟೆಯನ್ನು ಮಾಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ೫೦ರಷ್ಟು ಜನರು ಕಸಬಾರಿಕೆ ಮತ್ತು ಬುಟ್ಟಿ ವ್ಯಾಪಾರವನ್ನು ಮಾಡುತ್ತಾ ಬದುಕುತ್ತಿರುವುದುಂಟು ಊರೂರು ಅಲೆಯುತ್ತಾ ಭಿಕ್ಷೆ ಬೇಡಿ ತಿನ್ನುವುದುಂಟು. ದಿನವೊಂದರಲ್ಲಿ ಭಿಕ್ಷಟನೆ ಕಡಿಮೆಯಾಯಿತು. ಇಂದು ಈ ಚಲ ದೊರೆಯದ ಕಾರಣದಿಂದಾಗಿ ಕಸಬಾರಿಗೆ ಕಟ್ಟುವುದು ಕಡಿಮೆಯಾಗಿದೆ. ಬಳ್ಳಾರಿ ಜಿಲ್ಲೆ ೫೦% ಕಸಬಾರಿಕೆ, ಬುಟ್ಟಿ ವ್ಯಾಪಾರ ಮಾಡುತ್ತಾನೆ. ಆದರೆ ಇನ್ನೂಳಿದ ಜಿಲ್ಲೆಗಳಲ್ಲಿ ಇದರ ವ್ಯಾಪಾರ, ಕೊಪ್ಪಳಜಿಲ್ಲೆ, ರಾಯಚೂರು, ಗುಲ್ಬರ್ಗಾ, ಬೀದರ್‌ಗಳಲ್ಲಿ ಕಂಡುಬಂದರೂ ಕೂಡುಕೊಳ್ಳುವವರ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಆದ್ದರಿಂದಾಗಿ ಇವರಲ್ಲಿ ಕೆಲವರು ಇತ್ತೀಚೆಗೆ ಇತರ ವೃತ್ತಿಗಳನ್ನು ನಂಬಿಕೊಂಡು ವ್ಯಾಪಾರಮಾಡುವುದುಂಟು ಈ ಸಮುದಾಯ ಆರ್ಥಿಕ ಪರಿಸ್ಥಿತಿ ತುಂಬಾ ಶೋಚನೀಯ ಎಂದೇ ಹೇಳಬೇಕಾಗುತ್ತದೆ. ಗುಡಿಸಲಿನಲ್ಲಿ ವಾಸಿಸುವ ಜನರು ಅವರು ಉಡಿಗೆ ಮತ್ತು ತೊಡಿಗೆ ಮತ್ತು ದೈಹಿಕ ಲಕ್ಷಣಗಳಿಂದ ಅವರ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಬಹುದು. ಜಾಗತೀಕರಣದ ಸಂದರ್ಭದಲ್ಲಿ ಅನೇಕ ವೃತ್ತಿಗಳು ಇದ್ದರೂ ಇವರು ಕಸಬಾರಿಕೆ, ಬುಟ್ಟಿ, ಕೂದಲು ವ್ಯಾಪಾರ, ಹಣ್ಣು ವ್ಯಾಪಾರಗಳನ್ನು ಮಾಡುವುದರಲ್ಲಿ ಮತ್ತು ಕೂಲಿ, ಸಣ್ಣ ವ್ಯಾಪಾರ ಇತ್ಯಾದಿ ವೃತ್ತಿಗಳನ್ನು ಮಾಡಿಕೊಂಡು ಜೀವನವನ್ನು ನಿರ್ವಹಿಸಿಕೊಳ್ಳುತ್ತಿದ್ದಾರೆ. ಗಂಡು-ಹೆಣ್ಣು ಎಂಬ ಬೇಧಭಾವವಿಲ್ಲದೆ ಕೆಲಸ ನಿರ್ವಹಿಸಿಕೊಂಡು ಹೋಗುತ್ತಾರೆ. ಆದರೂ ಹೆಚ್ಚಿನ ಶ್ರಮ ಮಾತ್ರ ಹೆಣ್ಣಿನದು ಎಂದೇ ಹೇಳಬೇಕು. ತಮ್ಮ ಕುಲಕಸುಬಿನ ಜೊತೆಗೆ ಹಲವಾರು ವ್ಯಾಪಾರ ಮಾಡುತ್ತ ಬದುಕುವ ಜನರಿದ್ದಾರೆ. ದಿನದ ಊಟಕ್ಕಾಗಿ ಇಡೀ ದಿನವೂ ಪರಿಶ್ರಮದಿಂದ ದುಡಿದು ತಿನ್ನುತ್ತಾರೆ. ಬಿಸಿಲು ಮಳೆ ಎನ್ನದೇ ಕೆಲಸವನ್ನು ಅರೆಸುತ್ತಾ ಹೋಗುವುದುಂಟು ಇಂದು ಭಿಕ್ಷೆ ಮತ್ತು ಬೇಟೆಯಾಡುವುದು ನಿಷೇಧವಾದ್ದರಿಂದ ಪೋಷಕ ಆಹಾರದ ಕೊರತೆಯು ಎದ್ದು ಕಾಣುತ್ತದೆ. ಈಚಲು ಸಿಗದ

ಕಾರಣ ನಗರಗಳ ಕಡೆ ಉದ್ಯೋಗ ಹರಸಿ ವಲಸೆ ಹೋಗುತ್ತಿದ್ದಾರೆ. ನಗರಗಳ ಬೆಳವಣಿಗೆಯಿಂದ ಕಾಡುಗಳು ಅಳಿಸಿಹೋಗುತ್ತಿವೆ. ಕಾಡಿನಲ್ಲಿ ದೊರೆಯುವ ಈಚಲು ಚುರುಗಳು ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಕಸಬಾರಿಕೆ ಮತ್ತು ಬುಟ್ಟಿ ಮಾಡಲು ಪರಿಕೆಗಳ ಅಗತ್ಯಬೇಕಲ್ಲವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಕಸುಬು ಸವಾಲುಗಳು

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕ ಆಧುನಿಕ ಇತಿಹಾಸದಲ್ಲಿ ಜಗತ್ತಿನ ವ್ಯಾಪಾರ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಜ್ಞಾನವನ್ನು ಅಲಿಖಿತ ರೂಪದಲ್ಲಿ ಇಲ್ಲದಿರುವುದು ಯಾವುದೇ ರಾಷ್ಟ್ರದ ಅತ್ಯಂತ ಪ್ರಾಚೀನ ಸಮುದಾಯಗಳು ಮತ್ತು ಅತ್ಯಂತ ಪ್ರಾಚೀನವಾದ ನುಡಿ, ನಡೆ, ಜೀವನ ವಿಧಾನಗಳನ್ನು ಇನ್ನು ತಮ್ಮ ಪ್ರತಿನಿತ್ಯದ ಜೀವನ ಕ್ರಮದಲ್ಲಿ ಬಳಸಿಕೊಂಡು ಬಂದಿರುವವರು, ಆಧುನಿಕ ಜ್ಞಾನ ವಿಜ್ಞಾನಗಳ ಹಾಗೂ ನಾಗರಿಕತೆಗಳ ಪ್ರಬಲ ದಾಳಿಯ ತೀವ್ರ ಒತ್ತಡದಲ್ಲೂ ತಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಂಡು ಬಂದಿರುವ ನಾಗರಿಕ ಸಮುದಾಯವೆಂದು ತಮ್ಮನ್ನು ತಾವೇ ಕರೆದುಕೊಳ್ಳುವ ಜನರಿಂದ ದೂರವಾಗಿಯೇ ಬದುಕುವ ಮತ್ತು ಬದುಕಲಿಚ್ಛಿಸಿರುವ ಜನಸಮುದಾಯವನ್ನು ಕಾಣುತ್ತೇವೆ.

ಭಾರತ ಮೂಲತಃ ಬುಡಕಟ್ಟುಗಳ ಮಾತೃಭೂಮಿ, ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಆರ್ಯರು ಮುಂತಾದ ಸಮುದಾಯಗಳು ಈ ಭೂ ಭಾಗವನ್ನು ತಮ್ಮ ನಾಗರಿಕ ಶಕ್ತಿಯಿಂದ ಆಕ್ರಮಿಸ ತೊಡಗಿದ ಕೂಡಲೇ ಈ ದೇಶದ ಮೂಲನಿವಾಸಿಗಳಾದ ಬುಡಕಟ್ಟುವರ್ಗದವರು ಅವರ ಆಧುನಿಕ ಶಾಸ್ತ್ರಾಸ್ತ್ರಗಳ ಮತ್ತು ಬಹುಸಂಖ್ಯೆಯ ಜನಪರಿವಾರದ ದಾಳಿಗೆ ಹೆದರಿ ಕಾಡಿನ ಅಜ್ಞಾತ ಮೂಲೆಗಳಲ್ಲಿ ಪ್ರಾಣರಕ್ಷಣೆ ಮಾಡಿಕೊಳ್ಳುತ್ತಾ ಬದುಕನ್ನು ಮಾಡತೊಡಗಿದರು. ಆದರೆ ಇಂದು ಕಾಡುಗಳಿಂದ ಗ್ರಾಮಗಳ ಅಂಚಿನಲ್ಲಿ ಬದುಕುತ್ತಿರುವ ಸಮುದಾಯಗಳಿವೆ. ಅದರಲ್ಲಿ ಗ್ರಾಮವಾಸಿಗಳಾಗಿ ತಮ್ಮ ವೃತ್ತಿಗಳನ್ನು ರೂಢಿಸಿಕೊಂಡು ಅನುಸರಿಸಿ ಹೋಗುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನೆಲೆ ಇಲ್ಲದೆ ಸಮುದಾಯಗಳ ಹಲವಾರು ಸಮಸ್ಯೆಗಳಿಗೆ ಎದುರಾಗಬೇಕಾಗಿದೆ. ಬೇರೆ ಬೇರೆ ರೂಪದಲ್ಲಿ ಜನರನ್ನು ಕಾಡುತ್ತಲೆ ಬಂದಿದೆ. ಆಧುನಿಕತೆಯ ಗಂಧ ಗಾಳಿ ಸೋಕಿದರೂ ಜೀವನದ ಆಳದ ಸ್ತರಗಳಿಗೆ ಇಳಿಯದ ಪರಿಸ್ಥಿತಿಯಲ್ಲಿ ಮತ್ತು ತಾವು ತಮ್ಮವರು ಕೂಡಿಕೊಂಡು ಕಟ್ಟಿದ ಮಿತಪರಿಕಲ್ಪನೆಗಳ, ಮಿತವಾದ ಆಶೋತ್ತರಗಳು ಮಿತವಾದ ಅಗತ್ಯಗಳ ಬದುಕನ್ನು ನಗರಗಳಿಂದ ದೂರವಾಗಿಯೇ ನಡೆಯುತ್ತಾ ತಮ್ಮ ಮೂಲತನ ವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ.

ಅಕ್ಷರಜ್ಞಾನ, ಯಂತ್ರ ನಾಗರೀಕತೆ, ಸುಖಜೀವನ ಆಕರ್ಷಣೆಗಳು ಅವರ ಮೇಲೆ ಪ್ರಬಲ ಬಲೆಯನ್ನು ಬೀಸುತ್ತಿದ್ದರೂ ಅವರಲ್ಲೇ ಕೆಲವು ಈ ಪ್ರತಿಹಂತ ತೊಳಲಾಡುತ್ತಿದ್ದಾರೆ. ಇನ್ನು ಆಕರ್ಷಣೆಗೆ ಬಲಿಯಾಗುತ್ತಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಮೂಲ ಸೊಗಡುಗಳನ್ನು ಉಳಿಸಿಕೊಂಡಿದ್ದಾರೆ. ಸರ್ಕಾರ ನೀಡುವ ಸವಲತ್ತುಗಳಲ್ಲಿ ಬಹುಪಾಲು ಮಧ್ಯವರ್ತಿಗಳ ಪಾಲಾಗುತ್ತಿರುವುದರಿಂದ ಅವುಗಳ ಸಂಪೂರ್ಣ ಅರಿವು ಮತ್ತು ಉಪಯೋಗ ಅವರಿಗೆ ದೊರೆಯುತ್ತಿಲ್ಲ. ಬದಲಾಗಿ ಮತ್ತಷ್ಟು ಶೋಷಣೆಗೆ ಮತ್ತು ಅಮೀಷಗಳಿಗೆ ಸಮುದಾಯದ ಜನರು ತುತ್ತಾಗುತ್ತಿದ್ದಾರೆ.

ರಾಮಾಯಣ, ಮಹಾಭಾರತ ಮೊದಲಾದ ನಮ್ಮ ಪ್ರಾಚೀನ ಗ್ರಂಥಗಳು ಒಂದಲ್ಲ ಒಂದು ರೀತಿಯಲ್ಲಿ ಜನರ ನೀತಿ ರೀತಿಗಳನ್ನು ಸಾಂದ್ರವಾಗಿ ಚಿತ್ರಿಸುವ ಗ್ರಂಥಗಳೆ ಆಗಿವೆ. ಭಾರತದ ಮೊದಲು ಆದಿಕವಿಗಳೆ ಬುಡಕಟ್ಟು ಸಮುದಾಯ ಮೂಲಕ್ಕೆ ಸೇರಿರುವಂತಹದ್ದು ಸೋಜಿಗದ ಮತ್ತು ಕುತೂಹಲದ ಸಂಗತಿಯಾಗಿದೆ. ಈ ಬುಡಕಟ್ಟುಗಳ ಬಗೆಗೆ ಅಧ್ಯಯನಗಳನ್ನು ಮಾಡಲು ಮೊದಲು ಮನತೆತ್ತವರು ಪಾಶ್ಚಾತ್ಯರು. ಅವರು ಸಮಾಜವಿಜ್ಞಾನದ ದೃಷ್ಟಿಯಿಂದ ಮುಖ್ಯವಾಗಿ ಇವರ ಜೀವನ ವಿವರಗಳನ್ನು ಸಂಗ್ರಹಿಸಲು ಸಂಶೋಧಿಸಲು ಮತ್ತು ವಿಶ್ಲೇಷಿಸಲು ಮೊದಲು ಮಾಡಿದರು. ಆ ಲಭ್ಯ ಮಾಹಿತಿಗಳನ್ನು ಮೂಲವಾಗಿಟ್ಟುಕೊಂಡು ಸ್ವತಃ ತಮ್ಮ ಅಧ್ಯಯನದ ಫಲಗಳನ್ನು ಒಂದುಗೂಡಿಸಿ ಕರ್ನಾಟಕದಲ್ಲಿ ಇರುವ ಹಲವಾರು ಸಮುದಾಯಗಳ ಅಧ್ಯಯನಕ್ಕೆ ಅನುಕೂಲವಾಯಿತು. ಇಂದು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬೇಕಾದರೆ ಪಾಶ್ಚಾತ್ಯರ ಅಧ್ಯಯನಗಳಿಂದ ಸಂಶೋಧಿಸಲು ಅನುಕೂಲವಾಗುತ್ತದೆ.

ಕರ್ನಾಟಕ ಅಲೆಮಾರಿ ೩೨ ಸಮುದಾಯಗಳಲ್ಲಿ ಎಸ್‌ಸಿ ಪಟ್ಟಿನಲ್ಲಿ ಕೊರಮ, ಕೊರವ, ಕೊರವನ್ ಎಂದೂ ದಾಖಲಿಸಿದೆ. ಓಬಿಸಿಯಲ್ಲಿ ಕೊರಮರ್, ಯರಕಲ, ಯರುಕುಲ ಎಂದೂ ಕರೆಯುತ್ತಾರೆ. ಅಲೆಮಾರಿಗಳ ಮೌಖಿಕ ಕಾವ್ಯ ಕಲೆ, ನೃತ್ಯಗಳು ನೆಲ ಕಚ್ಚಿದವು. ಕಲೆಗಳು ಕಳೆಗುಂದಿ ಭಿಕ್ಷಾಟನೆಗೆ ಎಡೆಯಾದವು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳು ಇಲ್ಲವಾಗಿ ಶೋಷಣೆಗೆ ಒಳಗಾಗಿ ಬದುಕಿನ ಅತಂತ್ರತೆಗೆ ಗುರಿಯಾದವು. ಇವುಗಳ ವಿಮೋಚನೆಯು ಸಮುದಾಯಗಳ ಮತ್ತು ಸರ್ಕಾರದ ಇಚ್ಚಾಶಕ್ತಿಯ ಕೊರತೆಯಿಂದ ವಿಳಂಬವಾಗುತ್ತಿವೆ. ಸಮಾಜದ ಪಾರಂಪರಿಕ ಜ್ಞಾನ ಶಾಖೆಯನ್ನು ಕಳೆದುಕೊಳ್ಳುತ್ತಿವೆ. ಬುಡಕಟ್ಟುಗಳಲ್ಲಿ ಏನು ಬದಲಾವಣೆಯಾಗುತ್ತಿದೆ ಮತ್ತು ಹೇಗೆ ಬದಲಾವಣೆಯಾಗುತ್ತಿದೆ. ಬದಲಾಗುತ್ತಿರುವುದಕ್ಕೆ ಮುಖ್ಯಕಾರಣಗಳೇನು? ಎಷ್ಟು ಪ್ರಮಾಣದಲ್ಲಿ ಬದಲಾವಣೆಯಾಗಿದೆ. ಈ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಬದಲಾವಣೆಯಿಂದ ಶೈಕ್ಷಣಿಕ ನೀತಿಗಳ ಮೇಲೆ ಆದ ಪರಿಣಾಮಗಳೇನು ಮುಂತಾದ ಅಧ್ಯಯನ ಇಂದು ಅವಶ್ಯಕವಾಗಿದೆ.

ಯಾವುದೇ ಒಂದು ಸಮುದಾಯ ಬಹುಕಾಲದವರೆಗೆ ಒಂದೆ ಕಸುಬಿನಲ್ಲಿ ಸ್ಥಗಿತಗೊಂಡಾಗ ಆ ಕಸುಬಿನ ಹೆಸರಿನಿಂದಲೇ ಆ ಸಮುದಾಯವನ್ನು ಗುರುತಿಸಿ ಕರೆಯುವುದು ಲೋಕ ರೂಢಿಯಾಗಿತ್ತು. ಈ ರೂಢಿ ಭಾರತದಲ್ಲಿ ನೂರಾರು ಕಸುಬಾಧಾರಿತ ಜಾತಿಗಳ ಸೃಷ್ಟಿಗೆ ಕಾರಣವಾಯಿತು. ಸಮಾಜ ಚಲನಶೀಲವಾಗಿರುವುದರಿಂದ ಕಸುಬಾಧಾರಿತ ಜಾತಿಗಳು ವೃದ್ಧಿಗೊಂಡವು. ಆದರೆ ಇಂದು ಕಸುಬಾಧಾರಿತ ಜಾತಿಗಳನ್ನು ಪರಿಚಯಿಸುವುದು ಕಷ್ಟಸಾಧ್ಯ. ಕಾರಣ ಕೊರವರು ಕೊರವರಾಗಿರದೆ ಪಶುಪಾಲಕರಾಗಿದ್ದರೂ, ಕೃಷಿಕರೂ ಅಷ್ಟೇ ಅಲ್ಲ ಅವರಲ್ಲಿ ವಿದ್ಯಾವಂತರಾದವರು ಸಾರ್ವಜನಿಕ ಸೇವೆಗಳಲ್ಲಿದ್ದಾರೆ. ಇಂದು ಇವರನ್ನು ಕಳ್ಳಬಳ್ಳಿ ಆಧಾರಿತ ಸಾಮಾಜಿಕ ಸಂಘಟನೆಯಿಂದ ಹಾಗೂ ಅವರು ಆಚರಿಸುವ ಆಚಾರಗಳಿಂದ ಪರಿಚಯಿಸಬಹುದಾಗಿದೆ. ಕೊರವರು ಕಾಡಿನ ಮೂಲದವರೆ ಎಲ್ಲರೂ ಸರ್ವಚೇತನಾವಾದಿಗಳೆ, ಪರಿಸರದಲ್ಲಿರುವ ಗಿಡ, ಮರ ಸೂರ್ಯ, ಚಂದ್ರ, ಆರಾಧಕರು, ಬೇವು, ಪ್ರಾಣಿ ಪಕ್ಷಿ ಇವರಲ್ಲಿ ದೇವರ ಕಲ್ಪನೆಯು ಅಮೋಘವಾಗಿದೆ.

ಕೊರವರು ಎಲ್ಲ ಸಮುದಾಯದವರಿಗೆ ಬೇಕಾದವರು. ಕೃಷಿಗಾರಿಕೆ ಬೇಕಾಗುವ ಉಪಕರಣಗಳನ್ನು ಮಾಡಿಕೊಂಡವವರು. ದೇವಾಲಯಗಳಲ್ಲಿ ದೇವ ಪೂಜಾ ಸಂದರ್ಭದಲ್ಲಿ ವಾದ್ಯ ನುಡಿಸಲು ಬೇಕಾಗುವವರು ಸಮಾಜದಲ್ಲಿ ನಡೆಯುವ ಶುಭ ಕಾರ್ಯಗಳಿಗೆ ಬೇಕಾದವರು ಕೊರವರು, ಕಳ್ಳುಬಳ್ಳಿಯ ಸಂಬಂಧಿ ಬುಡಕಟ್ಟಿನವರೆ ಆಗಿರುವರು. ಆದರೆ ಕಾಲಾಂತರದಲ್ಲಿ ಭಿನ್ನ ಪಶುಗಳ ಪಾಲನೆಯಿಂದಾಗಿ ಭಿನ್ನ ಭೌಗೋಳಿಕ ನೆಲೆಗಳಲ್ಲಿಯೂ ವಾಸದಿಂದಾಗಿ ಮತ್ತು ವೃತ್ತಿಯ ಸಂಕೀರ್ಣತೆಯಿಂದಾಗಿ ಪರಸ್ಪರ ರಕ್ತ ಸಂಬಂಧದ ನಿಲುಗಡೆಯಿಂದಾಗಿ ಸ್ವಾತಂತ್ರ ಸಮುದಾಯಗಳಾಗಿ ರೂಪಗೊಂಡು ಹಲವಾರು ಹೆಸರುಗಳಿಂದ ಕರೆಯಲ್ಪಟ್ಟರು. ಕೊರವ, ಕೊರಮ, ಕುಂಚಿ ಕೊರವ, ಭಜಂತ್ರಿ ಯರಕುಲ, ಕೈಕಾಡಿ, ಕುರುವನ್, ಕುರು, ಕೊರ್ಜ ಮೊದಲಾದ ಹೆಸರುಗಳಿಂದ ಕರೆಯುವುದುಂಟು.

ಇವರು ಹೈದರಾಬಾದ ಕರ್ನಾಟಕದಲ್ಲಿ ಕೊರವರು ತಮ್ಮ ಬದುಕನ್ನು ತಮ್ಮ ಕಸುಬಿನ ಮೂಲಕ ತಮ್ಮನ್ನ ಗುರುತಿಸಿಕೊಂಡವರು, ಬೀದರ್ ಜಿಲ್ಲೆಯಲ್ಲಿ ಕೈರಾಡಿ, ಭಜಂತ್ರಿಗಳೆಂದೂ, ಗುಲಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಕೊರವರು ಭಜಂತ್ರಿ ಎಂದು ಕರೆದುಕೊಳ್ಳುತ್ತಾರೆ. ಸಮುದಾಯದ ಪ್ರಸ್ತುತ ಜೀವನ ವ್ಯವಸ್ಥೆಯನ್ನು ಗಮನಿಸಿದಾಗ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿ ಮತ್ತು ಶಿಕ್ಷಣದಲ್ಲಿ ಅಲ್ಪಸ್ವಲ್ಪ ಮುಂದುವರೆದಿದ್ದರೂ ಸಂಘಟನೆಗಳಲ್ಲಿ ತೊಡಗಿಕೊಳ್ಳಲು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬ್ರಿಟೀಷರ ಆಳ್ವಿಕೆಗಳ ಒಳಪಟ್ಟ ಬಳ್ಳಾರಿ ಜಿಲ್ಲೆ ಕೊರವ ಸಮುದಾಯ ಸೆಂಟ್ಲಮೆಂಟ್ ಏರಿಯಾದಲ್ಲಿ ನೆಲೆಸದೇ ತಮ್ಮ ಸ್ಥಳದಲ್ಲಿ ನೆಲೆಯಾರಿದ್ದಾರೆ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಸೆಂಟ್ಲಮೆಂಟ್ ಏರಿಯಾದಲ್ಲಿ ಇಂದಿಗೂ ೧೫೦ ಮನೆಗಳು ಇದೆ. ಇನ್ನು ೧೦೦ ಮನೆಗಳು ಗವಿಸಿದ್ದಮಠದ ಹತ್ತಿರ ಕೊರವ ಸಮುದಾಯದ

ಓಣಿಯಲ್ಲಿ ಕಂಡುಬರುತ್ತದೆ. ಸಮುದಾಯದ ಜೀವನದಲ್ಲಿಯ ಮೌಲ್ಯಗಳು ಜೋಪಾನ ಮಾಡಲು ಯೋಗ್ಯವಾದುದು ಬಹಳಷ್ಟು ಇವೆಯಾದರೂ ಅವರು ಎದುರಿಸಬೇಕಾದ ಸಮಸ್ಯೆಗಳು ಸಾಕಷ್ಟಿದೆ. ಅವುಗಳಲ್ಲಿ ಮುಖ್ಯವಾದುದು ಆರ್ಥಿಕ ಸಮಸ್ಯೆ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಬಲ್ಲ ಬೇಟೆ ಮತ್ತು ಕೃಷಿಯನ್ನು ಧರಿಸಿದ ಆರ್ಥಿಕ ವ್ಯವಸ್ಥೆಯನ್ನು ಬೆಳೆಸಿಕೊಂಡಿದೆ. ಆದರೆ ಮತ್ತೆ ಕೆಲವು ಸಮೂಹಗಳು ಆಹಾರದ ಕೊರತೆಯಿಂದ ಬಳಲುತ್ತಿವೆ. ನೀರಾವರಿ ಸೌಕರ್ಯಗಳು ಇಲ್ಲರಿರುವುದರಿಂದಲೂ ಗುಡ್ಡಗಳ ಇಳಿಜಾರುಗಳಲ್ಲಿ ಮಣ್ಣಿನ ಸವಕಳಿಯಿಂದಾಗಿ ಫಲವತ್ತತೆಯು ಹಾಳಾಗಿ ಹೋಗುವುದರಿಂದಲೂ ಕೃಷಿಯ ಬಹುತೇಕ ಅನುತ್ಪಾದಕವಾಗಿರುತ್ತದೆ. ಅದೇ ರೀತಿ ಆರೋಗ್ಯದ ಸಮಸ್ಯೆ ಕುಡಿಯುವ ನೀರಿನ ಕೊರತೆಯೂ ಸಮಸ್ಯೆಯು ಇದೆ. ಕಸುಬಿನಲ್ಲಿ ಬದಲಾವಣೆಯಾಗಿದರಿಂದ ಅನಿವಾರ್ಯವಾಗಿ ಬೇರೆ ಕಸುಬಿಗೆ ಬೇಕಾಗಿದೆ.

ಕಾಡಿನ ಮಕ್ಕಳಾದ ಸಮುದಾಯ ಸ್ವಾತಂತ್ರ್ಯ ನಂತರ ನಮ್ಮ ಸರ್ಕಾರಿ ವ್ಯವಸ್ಥೆಯಲ್ಲಿ ಆಡಳಿತ ನಿರ್ವಹಣೆಗಾಗಿ ಅನೇಕ ಇಲಾಖೆಗಳು ಹುಟ್ಟಿಕೊಂಡವು. ಅದರಲ್ಲಿ ಪ್ರಮುಖ ಇಲಾಖೆಗಳಲ್ಲಿ ಅರಣ್ಯ ಇಲಾಖೆಯೂ ಒಂದೊಂಬುದು ಎಲ್ಲರಿಗೂ ತಿಳಿದ ವಿಷಯ. ಈ ಇಲಾಖೆಯ ಮುಖ್ಯ ಕೆಲಸ ಅರಣ್ಯ ಇಲ್ಲದಿರುವ ಕಡೆ ಅರಣ್ಯ ಬೆಳೆಸುವುದು ಹಾಗೂ ಅರಣ್ಯ ಇರುವ ಕಡೆ ಅದನ್ನು ರಕ್ಷಿಸುವುದು ಅರಣ್ಯ ಇಲ್ಲದಿರುವ ಕಡೆ ಅರಣ್ಯದ ಕಣ್ಣಿಗೆ ಗೋಚರವಾಗುತ್ತಿಲ್ಲ. ಕೊರವ ಸಮುದಾಯವು ಗುಡ್ಡಕಾಡಿನ ಪ್ರದೇಶದಲ್ಲಿ ಬೆಳೆಯುವ ಈಚಲು, ಕುರುಚಲು ಕಾಡಿನಲ್ಲಿ ದೊರೆ ಯುವ ಅನೇಕ ಗಿಡಮರಗಳಿಂದ ತಮ್ಮ ಉಪಜೀವನ ನಡೆಸುತ್ತಿದ್ದರು. ಆದರೆ ಅರಣ್ಯ ರಕ್ಷಣೆಯ ನೆಪದಲ್ಲಿ ಈ ಕಾಡಿಗೆ ದಾಳಿ ಇಟ್ಟು ಕಾಡೇ ಇಲ್ಲದಂತೆ ಮಾಡುತ್ತಿರುವುದುಂಟು.

ರೈಲು, ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಮತ್ತು ಅರಣ್ಯದ ಗರ್ಭದಲ್ಲಿ ಅಡಗಿ ಜೀವಿಸುತ್ತಿದ್ದ ಬುಡಕಟ್ಟು ಸಮುದಾಯಗಳನ್ನು, ಅದುವರೆಗೂ ಸ್ವಂತ ಆಸ್ತಿಯ ಕಲ್ಪನೆಯಿಲ್ಲದೆ ಸ್ವಚ್ಛಂದವಾಗಿ ಬದುಕುತ್ತಿದ್ದ ಸಮುದಾಯಗಳನ್ನು ಇವರು ನಿಮ್ಮ ಖಾತೆ ಎಲ್ಲಿ? ನಿಮ್ಮ ಹಕ್ಕು ಯಾವುದು? ಎಂದು ಪ್ರಶ್ನಿಸುವ ಹೊಸ ಬಗೆಯ ಜನ ಒಂದದ್ದನ್ನು ಕಂಡು ದಿಕ್ಕೆಟ್ಟು ಹೋದರು. ಇಂದಿಗೂ ಕಾಡಿನಲ್ಲಿ ಸಿಗುವ ಕಚ್ಚಾವಸ್ತುಗಳನ್ನು ತೆಗೆದುಕೊಳ್ಳಲು ಹೋದಾಗ ಅರಣ್ಯ ಅಧಿಕಾರಿಗಳು ಜಮೀನಿನ ಮಾಲೀಕರು ಹಣವನ್ನು ಪಡೆದು ಈಚಲು ಕೊಯ್ಯುವ ಅನುಮತಿ ನೀಡುತ್ತಾರೆ ಎಂದು ರಾಮಪ್ಪ ಕೊರವರು ತಿಳಿಸುತ್ತಾರೆ.

ಕಾಡನ್ನು ಸಂರಕ್ಷಿಸಿ ತಾವು ಬದುಕುತ್ತಿದ ಸಮುದಾಯಗಳು ಇದು ನಮ್ಮದು ಎಂದು ಬಂದಾಗ ಅರಣ್ಯದ ಮಕ್ಕಳು ಬೀದಿಪಾಲಾದವು ಎಂಬುದು ತಿಳಿದುಬರುತ್ತದೆ. ಅಂದಿನಿಂದ ಇಂದಿನವರೆಗೂ ಅನೇಕ ಬುಡಕಟ್ಟುಗಳು ಡೋಲಾಯಮಾನದಲ್ಲಿ ಬದುಕುತ್ತಿವೆ. ಅಭಿವೃದ್ಧಿ ಎಂದರೆ ಬಹುದೊಡ್ಡ ಕಾರ್ಖಾನೆಗಳ ಸ್ಥಾಪನೆ, ಬೃಹತ್ ಅಣೆಕಟ್ಟುಗಳ ನಿರ್ಮಾಣ, ಬಂದರು

ಮತ್ತು ಗಣಿಗಳ ಏಳಿಗೆ ಎಂದೇ ಭಾವಿಸಿರುವ ಸಮಾಜ ಪ್ರತಿನಿಧಿಗಳು ಜನಸಾಮಾನ್ಯರ ಬದುಕಿನ ಬಗೆಗೆ ಆಲೋಚಿಸದೆ ಇರುವಂತಹದು ವಿಷಾದನೀಯ. ಅದೇ ರೀತಿಯಲ್ಲಿ ಯುರೋಪಿನಲ್ಲಿ ನಡೆದ ಆಧುನಿಕ ಆವಿಷ್ಕಾರಗಳು ಹೊಸಶೋಧಗಳು ಸಾಂಪ್ರದಾಯಿಕ ಉತ್ಪದನಾ ಸಂಬಂಧಗಳನ್ನು ಇನ್ನಿಲ್ಲದಂತೆ ಬದಲಿಸಿದವು. ಹೊಸ ತಂತ್ರಜ್ಞಾನದಿಂದಾಗಿ ಕೊರವ ಸಮುದಾಯದ ಉತ್ಪಾದನಾ ವಿಧಾನವು ರೂಪಾಂತರವಾಗುತ್ತಿದೆ. ಸ್ಥಳೀಯ ಭಾಷೆಗಳನ್ನಾಡುತ್ತಿದ್ದ ಜನ ತಮ್ಮ ಕಲೆ, ಸಾಹಿತ್ಯ ಮತ್ತು ಜೀವನ ವಿಧಾನಗಳು ಚಹರೆಗಳನ್ನು ಹುಡುಕತೊಡಗಿದರು. ಒಂದು ಕಡೆ ಅನಿಸುವಂತೆ ತಮ್ಮ ಭಾಷೆ. ಆಚರಣೆ, ಸಂಸ್ಕೃತಿ ಮತ್ತು ಕಲೆ ಮೊದಲಾದವು ತಂತ್ರಜ್ಞಾನಕ್ಕೆ ಒಳಗಾಗಿ ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿದೆ ಎಂಬ ಅನುಮಾನ

ಯಾವ ಸಮುದಾಯವೆ ಆಗಲಿ ಅದರ ಬೆಳವಣಿಗೆಯ ಚಾರಿತ್ರಿಕ ಹಂತಗಳಲ್ಲಿ ರೂಪುಗೊಳ್ಳುವ ವೈವಿಧ್ಯಮಯ ಆಯಾಮಗಳು ಹಿಂದೆ ಆ ಜನಸಮುದಾಯದ (ಕೊರವ) ಆರ್ಥಿಕತೆಯ ನಿಶ್ಚಿತವಾಗಿ ಪ್ರಭಾವ ಬೀರುತ್ತದೆ. ಹೀಗಾಗಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಒಂದು ಸಮುದಾಯಿಕ ಚಹರೆ ರೂಪುಗೊಳ್ಳುವುದು ಆಯಾ ಭಾಷೆಯನ್ನಾಡುವ ಜನ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿದ್ದಾರೆ ಎಂಬುದನ್ನು ತಿಳಿಯುತ್ತದೆ.

ಪ್ರಗತಿ ಮತ್ತು ಅಭಿವೃದ್ಧಿ ಬೇಡದಲ್ಲ, ಆದರೆ ಕಾಡನ್ನೆ ನಂಬಿ ಅಲ್ಲಿನ ಸಂಸ್ಕೃತಿಗೆ ಹೊಂದಿಕೊಂಡು ಕಾಡಿನ ಸಂಪನ್ಮೂಲಗಳನ್ನು ನಂಬಿ ಬದುಕುತ್ತಿದ್ದ ಸಮುದಾಯಗಳು ಇಂದು ಉದಯ ಪೋಷಣೆಗಾಗಿ ಅನಿವಾರ್ಯವಾಗಿ ನಾಗರಿಕ ಸಂಪರ್ಕದಲ್ಲಿ ಬದುಕಬೇಕಾಗಿದೆ. ನಾಗರಿಕ ಸಂಪರ್ಕದ ಹೊಡೆತದಿಂದ ಕುಟುಂಬಗಳು ತತ್ತರಿಸುತ್ತಿವೆ. ಕುಲ, ಬಳಿ, ಸಂಪ್ರದಾಯ ಗಳ ಬಗ್ಗೆ ಅಚಲವಾದ ವಿಶ್ವಾಸವಿಟ್ಟಿದ್ದ ಸಮುದಾಯಗಳ ಔಪಚಾರಿಕ ಶಿಕ್ಷಣದ ಅರೆ ಪ್ರಜ್ಞೆಯ ಅಟ್ಟಹಾಸದಿಂದ ನೌಕರಿಯ ಆಸೆ ಅಮಿಷಗಳಿಗೆ ಬಲಿಯಾಗಿ ತಮ್ಮ ಸಂಪ್ರದಾಯಿಕ ಬದುಕಿಗೆ ತಿಲಾಂಜಲಿಯನ್ನು ಕೊಡುತ್ತಿವೆ. ಇಂತಹ ಜನರು ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟು ತಮ್ಮದಲ್ಲದ ಬೇರೆಯವರ ಸಂಸ್ಕೃತಿಯಿಂದ ಇಲ್ಲವೆ ಕೆಲವರು ಉನ್ನತ ಸ್ಥಾನಪಡೆದ ತಕ್ಷಣ ತಮ್ಮ ಸಂಸ್ಕೃತಿಯನ್ನೇ ಮರೆತು ಆ ಜಗತ್ತಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಾರೆ. ತಾಯಮ್ಮ, ಸುಂಕಮ್ಮ, ಹುಲಿಗೆಮ್ಮ ದೇವರುಗಳು ಆಚರಣೆಯನ್ನು ಮಾಡಿದರು. ಸತ್ಯನಾರಾಯಣ, ರಾಘವೇಂದ್ರ, ತುಳಸಿ ಪೂಜೆ ಮಾಡುತ್ತಾರೆ. ಇಂಥವುಗಳಿಂದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವುದಾದರೂ ಹೇಗೆ ಎಂಬ ಪ್ರಶ್ನೆ ನಮ್ಮ ಕಣ್ಣ ಮುಂದೆ ಇದೆ. ನಗರದಲ್ಲಿ ವಾಸಿಸುವವರು ತಮ್ಮ ದೈವಗಳ ಬಗೆಗೆ ವಿಚಾರಿಸಿದಾಗ ದೈವ ಯಾವುದು? ತಮ್ಮ ಸಮುದಾಯದ ಆಚರಣೆ ಯಾವುದು ಎಂಬುದು ತಿಳಿಯದೆ ಇರುವುದು. ಬೀದರ ಜಿಲ್ಲೆಯಲ್ಲಿ ಕೈಕಾಡಿ ಮಹಾರಾಜನ ಆರಾಧನೆ

ಮತ್ತು ಬಸವಣ್ಣನ ಆರಾಧನೆ ಮಾಡಿದರೆ ಸಾಕು. ತಮ್ಮ ಸಮುದಾಯದಲ್ಲಿ ಆಚರಿಸುವ ದೈವಗಳ ಬಗೆಗೆ ತಿಳಿದಿಲ್ಲ.

"ಒಂದು ಸಾಮಾಜಿಕ ಸ್ಥಿತಿಯಿಂದ ಮತ್ತೊಂದು ಸಾಮಾಜಿಕ ಸ್ಥಿತಿಗೆ ಕಸುಬು ಸಾಮಾಜಿಕ ಸ್ಥಾನಮಾನ, ಐಶ್ವರ್ಯ ಮತ್ತು ಅಧಿಕಾರ ಹೀಗೆ ನಾಲ್ಕು ಪ್ರಮುಖ ಕಾರಣಗಳಿಂದಾಗಿ ಸ್ಥಿತ್ಯಂತರಕೊಳ್ಳಗಾಗುವ ಮಾನವ ಗುಂಪುಗಳ ಸಾಮಾಜಿಕ ಚಲನೆ ಪ್ರಕ್ರಿಯೆ ಕುತೂಹಲಕರ ವಿಷಯವಾಗಿದ್ದು ಅಧ್ಯಯನ ಯೋಗ್ಯವಾಗಿದೆ"(ಗಿರಿಜನ ಸಿರಿ, ಪು.೨೫೫)ಅಂಬಳಿಕೆ ಹಿರಿಯಣ್ಣನವರು ಜಾತಿ ಮತ್ತು ವೃತ್ತಿಗಳ ಸಂಬಂಧಗಳ ಬದಲಾವಣೆ ನಾಲ್ಕು ಮುಖ್ಯಗಳಲ್ಲಿ ಸಂಭವಿಸುತ್ತದೆ.

೧. ಪರಂಪರಾಗತ ವೃತ್ತಿಯನ್ನೆ ಮೇಲೆರಿ ಮೇಲು ಜಾತಿಯ ಕಸುಬುಗಳನ್ನು ಅಳವಡಿಸಿಕೊಳ್ಳುವುದು.

೨. ಜಾತಿ ಮುಕ್ತ ವೃತ್ತಿಯ ಅವಲಂಬನೆ

೩. ಪರಂಪರಾಗತ ಜಾತಿ, ಕಸುಬನ್ನು ತೊರೆದು ಸಮಾಜದ ಕೆಳವರ್ಗದ ಕಸುಬನ್ನು ಅವಲಂಬಿಸುವುದು.

೪. ಪರಾಂಪರಾಗತ ವೃತ್ತಿಯಲ್ಲಿ ಮುಂದುವರೆದು, ಜಾತಿ ಕಸುಬನ್ನು ಮುಂದುವರೆಸಿಕೊಂಡು ಹೋಗುವುದು.

ಈ ನಾಲ್ಕು ಅಂಶವನ್ನು ಗಮನಿಸಿದಾಗ ಕೊರವ ಸಮುದಾಯವು ತಮ್ಮ ಕಸುಬನ್ನು ಕೆಲವು ಕಡೆ ಮಾಡಿದರೆ ಇನ್ನು ಕೆಲವು ಕಡೆ ಬೇರೆ ವೃತ್ತಿಗಳನ್ನು ಅವಲಂಬಿಸಿದೆ. ಕಸಬಾರಿಕೆ, ಬುಟ್ಟಿ, ಹಂದಿ ಸಾಕಾಣಿಕೆ, ಬ್ಯಾಂಡ್ ಬಾರಿಸುವುದು, ಸನಾದಿ ಊದುವುದು ಇವು ತಮ್ಮ ಕಸುಬುಗಳಾಗಿವೆ. ಜೊತೆಗೆ ಪಾತ್ರೆ ವ್ಯಾಪಾರ. ಎಲ್ಲ ಮೂಲದವರು ದೊಡ್ಡ ದೊಡ್ಡ ಅಂಗಡಿಗಳನ್ನು ಮಾಡಿ ವ್ಯಾಪಾರ ಮಾಡಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು ಮದುವೆ ಸಂದರ್ಭಗಳಲ್ಲಿ ಬ್ಯಾಂಡ್ ಬಾರಿಸುವ ಕಾರ್ಯಮಾಡಿ, ಬೇರೆ ಅನೇಕ ವೃತ್ತಿಗಳ ಕಡೆ ಒಲಿದ್ದಾರೆ. ಪರಂಪರಾಗತ ಜಾತಿ ಹೆಸರು ಹೇಳಿಕೊಳ್ಳಲಾಗದೆ ಕಸುಬನ್ನು ತೊರೆದು ಬೇರೆ ಉದ್ಯೋಗದಲ್ಲಿದ್ದು ಬದುಕುತ್ತಿರುವುದುಂಟು. ತಮ್ಮ ಕುಲಕಸುಬಿಗೆ ದೊರೆಯುವ ಕಚ್ಚವಸ್ತುಗಳು ಎಲ್ಲಿಯವರೆಗೆ ದೊರೆಯುತ್ತಿದ್ದೆಯೇ ಅಲ್ಲಿಯವರೆಗೆ ಕಸುಬು ಮುಂದುವರೆಯುತ್ತದೆ. ಜೊತೆಗೆ ಬೇರೆ ವೃತ್ತಿಗಳನ್ನು ಮಾಡಿಕೊಳ್ಳಲು ಹವಣಿಸಬೇಕಾಗಿದೆ.

ಬದಲಾದ ಸಂದರ್ಭದಲ್ಲಿ ಜೀವನೋಪಾಯ ಮೂಲಗಳು, ಆರ್ಥಿಕ ಚಟುವಟಿಕೆಗಳಲ್ಲಿ ಕೆಲಸದ ವಿಂಗಡನೆ, ವಯಸ್ಸು ಮತ್ತು ಲಿಂಗ ವ್ಯತ್ಯಯ ಪರಂಪರಾಗತ ವೃತ್ತಿಗಳು ಮತ್ತು ಅವಲಂಬಿತ ಹೊಸವೃತ್ತಿಗಳು, ಆರ್ಥಿಕ ಚಟುವಟಿಕೆಯ ಮೇಲೆ ಒಡತನಾದ ಪ್ರಭಾವ ಬೀರಿದೆ.

ಹೊಸ ಆರ್ಥಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವುದು ಏಕೆಂದರೆ ಆ ಕೆಲಸಕ್ಕೆ ತಕ್ಕಂತೆ ಅವರಲ್ಲಿ ಅರ್ಹತೆ ಇಲ್ಲ. ತಮ್ಮ ಕಸುಬಿನಿಂದ ಬಂದವರು ಶಿಕ್ಷಣವಿಲ್ಲದೆ ಸಣ್ಣಪುಟ್ಟ ಕಸುಬುಗಳನ್ನು ನೋಡಿಕೊಂಡು ಜೀವಿಸುವ ಬದುಕು ಈ ಸಮುದಾಯಗಳಿದ್ದು, ಶಿಕ್ಷಣವನ್ನು ಹೊಂದಿದವರಿಗೆ ಸಾಮಾಜಿಕ ಪ್ರತಿಷ್ಠೆಯೂ ಲಭಿಸುತ್ತದೆ. ಸಮುದಾಯದ ಜನರ ವಿವೇಚನಾಶಕ್ತಿಯನ್ನು ಬೆಳೆಸಿರುವುದರೊಂದಿಗೆ ಸಂಸ್ಕೃತಿ ಅನುಷ್ಠಾನದಲ್ಲಿ ಬದಲಾವಣೆ ಗೋಚರಿಸಿವೆ. ನೆರೆಹೊರೆಯ ಸಮುದಾಯಗಳಲ್ಲಿ ಪ್ರಚಲಿತವಿರುವ ವಿಧಿ ನಿಷೇಧ ಸಂಪ್ರದಾಯ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುವ ಇಚ್ಚೆಯೂ ವ್ಯಕ್ತಗೊಳ್ಳುತ್ತದೆ.

ಒಂದು ಕಾಲದಲ್ಲಿ ಕೊರವರು ಬಾರಿಗೆ ವ್ಯಾಪಾರಕ್ಕೆ ಹೋದರೆ ಜನರು ನೀಡುವ ದವಸ ದಾನ್ಯ, ಬಟ್ಟೆ ಮತ್ತು ಹಣ ನೀಡುತ್ತಿದ್ದರು. ಕೊಡುಕೊಳದಳುವಿಕೆಯ ಸಂಬಂಧ ಏರ್ಪಾಡುತ್ತಿತ್ತು ಇಂದು ಎಲ್ಲಾ ಸಂಬಂಧಗಳಿಗೆ ಪೂರ್ಣವಿರಾಮ ಬಂದು ಬಿಟ್ಟಿದೆ. ಮಾನವೀಯ ಮೌಲ್ಯದ ಕೊರತೆ ಇಂದು ಎದ್ದು ಕಾಣುತ್ತಿದೆ. ಸಂಬಂಧಗಳ ಅರಿವೆ ಇಲ್ಲದಿರುವುದರಿಂದ ಕಾಲ ಬದಲಾವಣೆ ಯಾದಂತೆ ಕೊಡುವವರ ಸ್ವಾರ್ಥಬುದ್ದಿಯು ಬೆಳೆಯುತ್ತದೆ. ದಿನದಲ್ಲಿ ಒಂದ್ಹೊತ್ತಿನ ಊಟಕ್ಕಾಗಿಯೇ ಯೋಚಿಸಬೇಕಾಗುತ್ತದೆ.

ದುಡಿಮೆ ಸಿಗದೆ ಹೋದಾಗ ದುಡಿಮೆಗಾಗಿ ಬೇರೆ ಬೇರೆ ಪ್ರದೇಶಗಳಿಗೆ ತೆರಳುತ್ತಾರೆ. ಮುಂಬೈ, ಚೆನ್ನೈ, ಬೆಂಗಳೂರು, ದೆಹಲಿ, ಸೊಲ್ಲಾಪುರ, ಅನಂಪುರ, ಹೈದರಾಬಾದ್ ಪ್ರದೇಶಗಳಿಗೆ ವಲಸೆ ಹೋಗಿ ಕೂಲಿ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ. ಕೆಲವೊಂದು ಪ್ರದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳು ಸಣ್ಣ ವ್ಯಾಪಾರದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಪುರುಷರು ಬ್ಯಾಂಡ್ ಬಾರಿಸುವುದು, ಪಾತ್ರ ವ್ಯಾಪಾರ, ಗುಜ್ಜರಿ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಹುಪಾಲು ಕೊರವರು ಬಡತನ ರೇಖಯಲ್ಲಿರುವುದುಂಟು. ಅದೂ ಕೂಲಿ, ವ್ಯಾಪಾರ ಮತ್ತು ಇತರೆ ವೃತ್ತಿಗಳು ನಿರ್ವಹಿಸಿಕೊಂಡು ಜೀವನ ನಿರ್ವಹಿಸುತ್ತಿರುವುದು ಬಹುದೊಡ್ಡ ಸವಾಲಾಗಿದೆ.

ಒಂದು ಸಮುದಾಯ ಅಭಿವೃದ್ಧಿಯಾಗಬೇಕಾದರೆ ಆ ಸಮುದಾಯ ಸಮಾನತೆಯನ್ನು ಪಡೆದಾಗ ಅಭಿವೃದ್ಧಿ ಎಂದು ಹೇಳಬೇಕಾಗುತ್ತದೆ. ದೇಶದ ಅಭಿವೃದ್ಧಿಯಾಗಬೇಕಾದರೆ ದೇಶದೊಳಗಿರುವ ಸಮುದಾಯದ ಅಭಿವೃದ್ಧಿ ಅನಿವಾರ್ಯವಾಗಬೇಕು. ಹನಿ ಹನಿ ಸೇರಿದರೆ ಹಳ್ಳಿ ಎಂಬಂತೆ ಸಮುದಾಯ ಸಮುದಾಯಗಳ ಅಭಿವೃದ್ಧಿಯಾದಾಗ ದೇಶದ ಅಭಿವೃದ್ಧಿ ಬೆಳವಣಿಗೆಯಾಗುತ್ತಾ ಹೋಗುತ್ತದೆ.

ಇಂದು ಹಣಕ್ಕೆ ಪ್ರಾಧ್ಯಾನತೆ ತೋರಿಸುವುದರಿಂದ ಆರ್ಥಿಕ ಸಮಾನತೆ ಇದ್ದಾಗ ಸಾಮಾಜಿಕ ಸ್ಥಾನಮಾಗಳು ದೊರೆಯಲು ಸಾಧ್ಯವಾಗುತ್ತದೆ. ಆದರೆ ಕೊರವ ಸಮುದಾಯದವರಿಗೆ ಎಲ್ಲ

ರೀತಿಯ ಸೌಲಭ್ಯಗಳು ಅರಿವು ಮೂಡಬೇಕು. ಸೇವೆ ಸಲ್ಲಿಸುವ ಸರ್ಕಾರದ ಪ್ರತಿನಿಧಿಗಳು ಸಮುದಾಯಗಳಿಗೆ ಸರ್ಕಾರದ ಸೌಲಭ್ಯಗಳು ಅರಿವನ್ನು ಮೂಡಿಸುವ ಕಾರ್ಯಮಾಡುವುದು ಅನಿವಾರ್ಯ. ಇಲ್ಲವಾದರೆ ವಿದ್ಯಾವಂತರು, ರಾಜಕೀಯ ವ್ಯಕ್ತಿಗಳು ಚಿಂತಕರು, ಸಮಾಜ ಸುಧಾರಕರು ಜನಸಮಾನ್ಯರು ಸಮುದಾಯದ ಬಗೆಗೆ ಕಾಳಜಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಇನ್ನು ಕೆಲವರು ತಮ್ಮ ಸಮಾಜದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಒಂದು ಉದಾಹರಣೆಯನ್ನು ನೋಡಿದಾಗ ಹೈದರಾಬಾದ್ ಕರ್ನಾಟಕದ ಕೊರವ ಸಮುದಾಯದ ಪರಿಸ್ಥಿತಿಯು ನಮ್ಮಗೆ ತಿಳಿಯುತ್ತದೆ. ಕೊರವರ ಕೂಗು ಕೇಳೋರ್‍ಯಾರು? ಎಂಬ ವಿಷಯ ಕುರಿತು ಬೆಳಗಾವಿ ವಿಜಯ ಕರ್ನಾಟಕ ಸುದ್ದಿಲೋಕದಲ್ಲಿ ಪ್ರಕಟಿಸಲಾಗಿದೆ. 'ಕಿತ್ತೂರಾಗ ಎಲ್ಲಾ ಕಡೆ ಗಟಾರ್, ಕುಡ್ಯಾರ ನೀರು, ರಸ್ತಾ, ಎಲ್ಲಾ ಐತ್ರಿ ನಮ್ಮ ಓಣ್ಯಾಗ ಮಾತ್ರ ಏನೂ ಇಲ್ರ, ಮನಿ ಬಾಗಲೂ ತಗೆದ್ರ ಸಾಕ್ರಿ ಗಟಾರ ವಾಸನಿ ಮೂಗಿಗೆ ಬಡಿತೈತಿ, ಭಜಂತ್ಯಾರ ಓಣಿ ಅಂದ್ರದಾದ ಇಲ್ಲ. ದಾರಕಾರ ಇಲ್ರಿ, ಈ ಓಣ್ಯಾಗ ೩೬ ಭಜಂತ್ರಿ, ಕುಟುಂಬಗಳಲ್ಲಿ ನೂರಾರು ಜನವಾಸ ಅಗ್ಯಾರ್ರಿ ಎಲ್ಲಾವದೂ ಇದ ಪರಿಸ್ಥಿತಿ ಆಗೇತ್ರಿ ಎಂದು ಶಾಂತಪ್ಪಾ ಭಜಂತ್ರಿ ನೋವಿನಿಂದ ಹೇಳಿದಳು.

ಓಣಿಗೆ ಬಂದ ಸಾರ್ವಜನಿಕ ನಳಾ ಐತ್ರಿ, ಗಟಾರ್ ನೀರು ಹರಿವಲ್ಲೆ ಮಾಡಿದಾರ್ರಿ ಮ್ಯಾಗೀನ ಓಣಿನಿಂದ ಎಲ್ಲ ಹೊಸಲ ನೀರ ಇಲ್ಲೆ ಹರೀತೈತ್ರಿ ಅಂತಾ ನೀರಿನ್ಯಾಗ ಕೊಡಾ ಇಟ್ಟ ನೀರ ತುಂಬ ಬೇಕ್ರಿ, ನೀರಿನ ಪೈಪ ಸೀಳಿದ್ದರಿಂದ ಕೊಳಚೆ ನೀರ ನಳದ ನೀರಾಗ ಕೂಡಾರತ್ತೈತ್ರಿ. ನೀರ ಕುಡದ ನಮ್ಮ ಮನ್ಯಾಗ ರೋಗ ಬಂದ ಎಲ್ಲರೂ ಹಾಸಿಗೆ ಹಿಡದಾರ್ರಿ ಎಂದು ದುಃಖಿಸಿದಳು ಸವಿತಾ ಭಜಂತ್ರಿ ಹೀಗೆ ಕಿತ್ತೂರಿನ ಕೊಂಡವಾಡ ಚೌಕದಲ್ಲಿನ ಭಜಂತ್ರಿಗಳಲ್ಲಿ ಮಹಿಳೆಯರು ಒಬ್ಬೊಬ್ಬೊರಾಗಿ ತಮ್ಮ ಕಹಿ ಅನುಭವಗಳನ್ನು ಪತ್ರಕರ್ತರ ಮುಂದೆ ಹೇಳಿದರು. ಮಂಗಳವಾರ ಗ್ರಾಮಪಂಚಾಯಿತಿನಲ್ಲಿ ಮೀಟಿಂಗ್ ಅಂತಗೊತ್ತಾತ್ರಿ ಅದಕ್ಕೆ ಎಲ್ಲ ಹೆಂಗಸೂರ ಸೇರಿ ಹೋದೂದ್ರಿ, ನಿಮ್ಮ ಓಣಿಗೆ ಬರತೇವಿ ನಡಿರಿ ಅಂತ ಗ್ರಾಮಪಂಚಾಯಿತಿ ಅಧ್ಯಕ್ಷರು ಸದಸ್ಯರು ಹೇಳಿ ಕಳಿಸ್ಯಾರ್ರಿ, ಆದರೆ ಈವರೆಗೂ ಯಾರು ಬಂದೀಲ್ರಿ ಸರಸ್ವತಿ ಭಜಂತ್ರಿ, ಸವಕ್ಕ ಭಜಂತ್ರಿ, ಬಾಳಾವ್ವ ಭಜಂತ್ರಿ, ಶಾರದ ಭಜಂತ್ರಿ ಎಂದು ಹಾಗೂ ಇನ್ನೂ ಅನೇಕ ಮಹಿಳೆಯರು ಓಣಿಯಲ್ಲಿ ದುರ್ದರ ಬದುಕಿನ ಕ್ಷಣಗಳ ವಿವರಣೆ ನೀಡಿದರು.

ಬಾಳಪ್ಪ ಹೇಳಿದ್ದು ಇನ್ನು ಘೋರವಾಗಿತ್ತು. ನಮಗ ಸಂಡಾಸಕ್ಕೆ ಹೋಗಾಕದ ಜಾಗ ಇಲ್ಲಿ ಓಣಿ ದಾಟಿ ಬ್ಯಾರೇ ಕಡೆ ಬಯಲಾಗ ಹೋಗಬೇಕ್ರಿ ನಮ್ಮ ಓಣಿಗೆ ಏನೂ ಸೌಲಭ್ಯ ಇಲ್ಲರ್ರಿ, ಗ್ರಾಮಪಂಚಾಯಿತಿನಿಂದ ಸಂಡಾಸ ಕಟ್ಟಿಸಿಕೊಳ್ಳಕ ರೊಕ್ಕ ಬರತೈತಿ ಅಂತಾರ್ರಿ ಆದ್ರ ನಮಗ ಯಾವ ಗ್ರಾಮ ಪಂಚಾಯಿತಿ ಸದಸ್ಯರೂ ಸೌಲಭ್ಯ ಒದಗಿಸಿಲ್ಲರ್ರಿ ಕೇಳಾರ ಹೋದ್ರ

ರೊಕ್ಕ ಕೊಡಬೇಕ ಅದರ ಅಂತಾ ಏನಾದರೊಂದು ಸಬೂಬಹೇಳಿ ಕಳಸುತ್ತಾರ್ರಿ. ಓಣ್ಯಾಗ ಒಬ್ಬ ಹಂದಿ ಸಾಕಾದ್ರ ಮನಿ ಮಾಡ್ಯಾರ್ರಿ. ಹೀಗಾಗಿ ಹಂದಿಗಳ ಕಾಟ ವಿಪರೀತ ಆಗೇತ್ರಿ. ಹಂದಿಗಳು ಹಾಗೂ ನಾವು ಎಲ್ಲ ಒಟ್ಟಾಗೆ ಬದುಕಬೆಕಾಗೇತ್ರಿ ಎಂದಳು. ಹೀಗೆ ಒಬ್ಬೊಬ್ಬರದು ಒಂದೊಂದು ಸಮಸ್ಯೆಗಳೆ ಇಲ್ಲಿ ಇದ್ದರೂ ಯಾವ ಗ್ರಾಮ ಪಂಚಾಯಿತಿ ಸದಸ್ಯರೂ ಇವರ ಸಮಸ್ಯೆಗಳಿಗೆ ಈವರೆಗೆ ಸ್ಪಂದಿಸದಿರುವುದು ಕಿತ್ತೂರಿನ ೭ನೇ ವಾರ್ಡ್‌ನಲ್ಲಿರುವ ಜನರ ಬದುಕಿನ ನಿದರ್ಶನವಾಗಿದೆ. ಇಂಥ ಓಣಿಯಲ್ಲಿ ಒಮ್ಮೆಯಾದರೂ ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತು ಅಧ್ಯಕ್ಷರು, ಸದಸ್ಯರು ಹಾಗೂ ಶಾಸಕರು ಭೇಟಿ ನೀಡಿ ಇವರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿಯಾರೆಯೆ ಎಂದು ಈ ಗಲ್ಲಿ ಜನ ಕಾಯುತ್ತಲೇ ಇದ್ದಾರೆ. ಆದರೆ ಜನ ಪ್ರತಿನಿಧಿಗಳ ಸುಳಿವಿಲ್ಲ. ಮುಂದೇನು ಎಂಬುದು ಇಲ್ಲಿನ ಜನರ ಪ್ರಶ್ನೆ ಯಾಗಿದೆ(Updatd my 28. 2014. 423 Belagavi News. ವಿಜಯಕರ್ನಾಟಕ ಸುದ್ದಿಲೋಕ).

ಮೇಳದವರು

ಇವರೆಲ್ಲರದೂ ವಿಷಾದರಾಗ : ಅನ್ನ, ಬಟ್ಟೆ ನೀರಿನಷ್ಟೇ ಸಂಗೀತವೂ ಮಾನವನಿಗೆ ಅಗತ್ಯವಾಗಿದೆ. ಶುಭ ಸಂದರ್ಭದಲ್ಲಿ ಸಂಗೀತ ಕೇಳಿ ಆನಂದಿಸುವ ಪರಿಪಾಠ ಇಂದು ಸಂಪ್ರದಾಯವಾಗಿ ಮಾರ್ಪಟ್ಟು ಮುಂದುವರಿದುಕೊಂಡು ಬಂದಿದೆ. ಈ ಮಹತ್ವದ ಕಾರ್ಯಕ್ಕೆ ಅನುವಾದವರು ಭಜಂತ್ರಿಯವರು.

ಯಾರು ಭಜಂತ್ರಿ: ಕೊರವರು, ಕೊಂಚರು, ಕುಂಚಿಕೊರವರು ಎಂದೆಲ್ಲ ಕರೆಸಿಕೊಳ್ಳುವ ಸಮುದಾಯಕ್ಕೆ ಸೇರಿದವರು ಭಜಂತ್ರಿಯವರು. ಈ ಸಮುದಾಯದಲ್ಲಿ ಈಚಲು ಉತ್ಪನ್ನಗಳನ್ನು ಮಾಡುವವರು ಹಾಗೂ ಹಂದಿ ಸಾಕಣಿಮಾಡುವವರು ಒಂದೆಡೆಯಾದರೆ ಶುಭಕಾರ್ಯಕ್ಕೆ ಇಳಿದ ಭಜಂತ್ರಿಯವರು ಒಂದು ವರ್ಗ. ಹೇಗಿದ್ದರು ಆಧುನಿಕತೆಗೆ ತಕ್ಕಂತೆ ಭಜಂತ್ರಿಯ ವರ ವೇಷಭೂಷಣಗಳು ಹಾಗೂ ಸಂಗೀತ ಪರಿಕರಗಳು ಬದಲಾವಣೆ ಕಂಡಿವೆ. ಆದರೆ ಭಜಂತ್ರಿಯವರ ಬದುಕು ಮಾತ್ರ ಬವಣೆಯಲ್ಲಿದೆ ಮತ್ತು ಸಾಗಿದೆ. ಸುಮಾರು ೫೦ ವರ್ಷ ಹಿಂದೆ ಶಹನಾಯ್ ಪ್ರತಿಗ್ರಾಮದಲ್ಲಿ ತನ್ನ ನಾದವನ್ನು ಪಸರಿಸುತ್ತಿತ್ತು. ಅದರ ಮೇಲೆ ಬೆರಳುಗಳಾಡುತ್ತಿದ್ದುದು ಭಜಂತ್ರಿ ಅಜ್ಜನದು. ಗ್ರಾಮದ ಪ್ರಮುಖ ದೇವಸ್ಥಾನದಲ್ಲಿ ಪೂಜಾ ಕಾರ್ಯ ಸಂದರ್ಭದಲ್ಲಿ ನಿತ್ಯಭಜಂತ್ರಿ ಸೇವೆಯೂ ಅಗತ್ಯವಾಗಿತ್ತು. ಆಗ ಮದುವೆಗೂ ಬೇಕು. ಸತ್ತರೂಬೇಕು. ದೊಡ್ಡವರ ಮಕ್ಕಳ ಹೆಸರು ಇಡುವುದಕ್ಕೂ ಬೇಕು. ಕಾಲ ಬದಲಾದಂತೆ ಭಜಂತ್ರಿಯವರ ಸಂಗೀತ ಪರಿಕರಗಳಲ್ಲಿ ಬದಲಾವಣೆ ಗಳಾದವು. ಮೊದಲು ಒಬ್ಬ ಹಾಡು ಬಾರಿಸುವವರು ಇನ್ನೊಬ್ಬ ಸ್ವರ ಹಿಡಿಯುವವರು ಮಾತ್ರ ಬರುಬರುತ್ತಾ ಸೊನಾಮಿ ಜತೆ ಕ್ಲಾರ್ಯಿಯೋನೆಟ್, ಬ್ಯಾಂಡು, ಡ್ರಮ್ಮು ಸೇರಿಕೊಂಡವು. ಇದಕ್ಕೆ ಆಗ ಗಂಚಟಮೇಳ ಎನ್ನಲಾಗುತ್ತಿತ್ತು. ಈಗ ಕನಿಷ್ಟ ೫ ಜನ ಈ ತಂಡದಲ್ಲಿರುತ್ತಾರೆ ಇನ್ನು

ಅನೇಕ ವಾದ್ಯಗಳು ಸೇರಿಕೊಂಡಿದೆ. ದಿನಕ್ಕೆ ೨.೫ರಿಂದ ೩ ಸಾವಿರ ರೂಪಾಯಿವರೆಗೆ ಗಳಿಸುತ್ತಾರೆ. ಆದರೆ ಮದುವೆ ಸಿಜನನಲ್ಲಿ ಮಾತ್ರ ಈ ದುಡಿಮೆ ಮಳೆಗಾಲ, ಆಷಾಢ ಹಾಗೂ ಮೂಹೂರ್ತವಿಲ್ಲದ ಸಂದರ್ಭದಲ್ಲಿ ಕಾಲಿ ಕುಳಿತುಕೊಳ್ಳಬೇಕು. ಇದರಿಂದ ಜೀವನ ಅತ್ತ ಏರಲಿಲ್ಲ ಇತ್ತ ಇಳಿಯಲಿಲ್ಲ ಎಂಬ ಸ್ಥಿತಿಯಾಗಿದೆ ಎಂದು ೩೦ ವರ್ಷಗಳಿಂದ (೧೨ ವರ್ಷದವನಾಗಿದ್ದಲೇ) ಈ ವೃತ್ತಿಮಾಡಿಕೊಂಡು ಬಂದ ಅನಂತಶಯನಗುಡಿಯ ಕೆ. ವೆಂಕಟಪ್ಪ ತಿಳಿಸುತ್ತಾರೆ.

ಆಂಧ್ರದ ವಲಸೆ : ಆಂಧ್ರಪ್ರದೇಶದಿಂದ ಬಳ್ಳಾರಿ ಜಿಲ್ಲೆಗೆ ಭಜಂತ್ರಿ ಜನ ವಲಸೆ ಬಂದಿದ್ದು, ಸ್ಥಳೀಯ ಭಜಂತ್ರಿಯವರ ಕಾರ್ಯಕ್ಕೆ ಸಂಚಕಾರ ತಂದಿದ್ದಾರೆ. ಅಲ್ಲದೆ ಸಿರಗುಪ್ಪ ಹಾಗೂ ಬಳ್ಳಾರಿಯಲ್ಲಿ ಮದುವೆಗೆ ಆಂಧ್ರದವರನ್ನು ಕರೆಸುತ್ತಿದ್ದು, ಊರಿನ ಭಜಂತ್ರಿಯವರು ಕುಲಕಸುಬು ಮುಂದುವರಿಸುವುದು ಕಷ್ಟಸಾಧ್ಯವಾಗಿದೆ. ಜಿಲ್ಲೆಯಲ್ಲಿ ೧೮ ಸಾವಿರ ಭಜಂತ್ರಿ ಜನರಿದ್ದು, ಅದರಲ್ಲಿ ಬಳ್ಳಾರಿ, ಸಿರಗುಪ್ಪ ಹಾಗೂ ಹೊಸಪೇಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜಿಲ್ಲೆಯಲ್ಲಿ ಭಜಂತ್ರಿಯವರ ಶೈಕ್ಷಣಿಕ ಪ್ರಮಾಣ ಶೇ.೪ ಮಾತ್ರ, ಹೀಗಾಗಿ ಸರಕಾರಿ ಉದ್ಯೋಗ ಕಂಡುಕೊಂಡ ವರು ಅಷ್ಟೆ ಪ್ರಮಾಣ, ಶಿಕ್ಷಣದ ಕೊರತೆಯಿಂದ ಬೇರೆ ಉದ್ಯೋಗ ಬರಲು ಹೇಗೆ ಸಾಧ್ಯ? ಕರೆ ಬಂದರೆ ಊದುವ ಕೆಲಸ ಇಲ್ಲಿದಿದ್ದರೆ ಇಲ್ಲ ಎಂದು ಕಾಲ ನೂಕುತ್ತಿದ್ದಾರೆ. ವರ್ಷಕ್ಕೆ ಬರುವ ೧೫ ರಿಂದ ೨೦ ಸಾವಿರ ರೂ ಒಂದು ಕುಟುಂಬದ ಎಲ್ಲ ಸಮಸ್ಯೆ ನೀಗಿಸಬೇಕು. ಹೀಗಾಗಿ ಕುಟುಂಬದ ಮಕ್ಕಳು ೧೨ ವರ್ಷವಾಗುತ್ತಿದ್ದಂತೆಯೇ ಶಿಕ್ಷಣ ನಿಲ್ಲಿಸಿ ಕೈಯಲ್ಲಿ ಶಹನಾಯ್ ಹಿಡಿಯುತ್ತವೆ. ಹೀಗಾಗಿ ಸಮುದಾಯದ ಶೇ ೭೦ ರಷ್ಟು ಜನ ಅನಕ್ಷರಸ್ಥರಾಗಿದ್ದಾರೆ.

ಬಳಸಿಕೊಂಡಿಲ್ಲ: ಮೀಸಲಾತಿಯಲ್ಲಿ ಇವರು ಪರಿಶಿಷ್ಟ ಜಾತಿಗೆ ಸೇರಿದ್ದರೂ ಸರಕಾರಿ ಸೌಲಭ್ಯ ಮಾತ್ರ ಬಳಸಿಕೊಂಡಿಲ್ಲ. ಆದ್ದರಿಂದ ನಮ್ಮ ಸಮುದಾಯದ ಜನತೆಗೆ ಶಿಕ್ಷಣಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು ಎಂದು ಬಳ್ಳಾರಿಯ ಹನುಮಂತಪ್ಪ ಕೋರುತ್ತಾರೆ. ಜನಸಂಖ್ಯೆಯಲ್ಲಿ ಊರಿಗೆ ೪ ರಿಂದ ೮ ಕುಟುಂಬಗಳು ಇರುವುದರಿಂದ ಸಂಘಟನೆಯಾಗಿಲ್ಲ. ಇವರ ಪ್ರತಿನಿಧಿಗಳು ಗ್ರಾಮ ಪಂಚಾಯಿತಿನಿಂದ ವಿಧಾನಸೌಧದವರೆಗೂ ಇಲ್ಲದೆ ಅವರ ಬೇಡಿಕೆ ಕೇಳುವವರು ಇಲ್ಲದಂತಾಗಿದೆ. ಪಕ್ಷಗಳು ನಮ್ಮನ್ನು ಮತಬ್ಯಾಂಕ್‌ಗಳಾಗಿ ನೋಡುತ್ತಿವೆಯೇ ಹೊರತು ನಮ್ಮ ಕಷ್ಟಗಳಿಗೆ ಆಗುತ್ತಿಲ್ಲ. ನಮ್ಮದೇ ಆದ ಸಮುದಾಯ ಭವನ ನಿರ್ಮಿಸಿಕೊಡಬೇಕೆಂದು ಭಜಂತ್ರಿಯವರು ಸರಕಾರಕ್ಕೆ ಕಳಕಳಿಯ ಮನವಿ ಮಾಡುತ್ತಾರೆ. ಕುಲಕಸುಬು ಬಿಡಲೂ ಆಗದೆ ಬಿಟ್ಟು ಬದುಕಲು ಸಾಧ್ಯವಾಗದೆ ಇಕ್ಕಟ್ಟಿನ ಸ್ಥಿತಿಯಲ್ಲಿ ಸಾಗಿದೆ. ಭಜಂತ್ರಿಗಳ ಬದುಕು ಎಂದೂ ವಿ.ಸಿ. ಹಿರೇಮಠ ವ್ಯಕ್ತಪಡಿಸುತ್ತಾರೆ. ತಾಳಿ ಕಟ್ಟುವ ಶುಭವೇಳೆ ನಮ್ಮನ್ನು ಮರೆಯದಿರಿ ಎಂಬುದು ಬ್ಯಾಂಡ್ ವಾದ್ಯಕಾರರ ಬದುಕಿನ ಸ್ಥಿತಿಯಾಗಿದೆ. ಕೊರವರಿಗೆ ಸಂಗೀತ ನಮ್ಮ ಬದುಕಿನ ಭಾಗವಾಗಿದೆ. ಮಾನವನ ಹುಟ್ಟಿನಿಂದ ಅಂತ್ಯಕ್ರಿಯೆವರೆಗೂ ನಡೆಯುವ ವಿವಿಧ ಸಮಾರಂಭ, ಗುಡಿಗುಂಡಾರಗಳ ಧಾರ್ಮಿಕ

ಕಾರ್ಯಕ್ರಮಗಳಲ್ಲಿ ಸಂಗೀತಕ್ಕೆ ಹಿಂದಿನಿಂದಲೂ ಪ್ರಾಮುಖ್ಯತೆಯಿದೆ. ಈ ಸಂದರ್ಭದಲ್ಲಿ ಶಹನಾಯ್ ಮತ್ತಿತರ ವಾದ್ಯಗಳನ್ನು ನುಡಿಸುವ ಬಾರಿಸುವವರ ಬದುಕು ಅನೇಕ ಕಾರಣಗಳಿಂದ ಅತಂತ್ರವಾಗಿದೆ. ವಿವಿದೆಡೆ ಬೇರೆ ಬೇರೆಯವರು ಈ ವೃತ್ತಿ ಕೈಗೊಂಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಹೂಗಾರ ಸಮಾಜ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಭಜಂತ್ರಿ ಸಮಾಜ ಈ ವೃತ್ತಿ ನಡೆಸಿಕೊಂಡು ಬರುತ್ತಿದೆ ಆ ಸಮಾಜಗಳ ಬದುಕಿನ ನೋಟವಿದು.

ಶಿವಾನಂದ ಎನ್. ಗೊಂಬಿ ಅವರು ಕೊಪ್ಪಳದ ಮೇಳದವರ ಕುರಿತು ಲೇಖನ ಬರೆಯುತ್ತಾರೆ. ಸಂಗೀತ ವಾದ್ಯ ನುಡಿಸಿ ಗಂಡು ಹೆಣ್ಣು ಒಂದಾಗಿಸುವ ಸಮಾರಂಭಕ್ಕೆ ಸಂತಸ ತರುವ ಭಜಂತ್ರಿ ಜನಾಂಗದ ಬದುಕು ಹಸನಾಗಿಲ್ಲ. ಶತಮಾನಗಳ ಇತಿಹಾಸವಿರುವ ಭಜಂತ್ರಿ ಸಮಾಜವನ್ನು ಜೀರಾ, ದೇವಾಂಗರೆಂದೂ ಕರೆಯಲಾಗುತ್ತದೆ. ಆಧುನಿಕತೆಯ ಗಾಳಿ, ಸರಕಾರ ಹಾಗೂ ಜನ ಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಈ ವೃತ್ತಿ ಅವನತಿಯತ್ತ ಸಾಗಿದ್ದು, ಇದನ್ನೇ ನೆಚ್ಚಿಕೊಂಡ ಕುಲಬಾಂಧವರು ತುತ್ತು ಅನ್ನಕ್ಕೂ ಪರದಾಡಬೇಕಾಗಿದೆ.

ಜನಸಂಖ್ಯೆ: ಭಜಂತ್ರಿಯವರು ಜಿಲ್ಲೆಯಲ್ಲಿ ಸುಮಾರು ೧೫ ರಿಂದ ೨೦ ಸಾವಿರಕ್ಕೂ ಅಧಿಕ ಇದ್ದಾರೆ. ಪ್ರತಿಗ್ರಾಮಗಳಲ್ಲೂ ಕನಿಷ್ಠವೆಂದರೂ ೨ ಕುಟುಂಬ ಕಾಣುತ್ತವೆ. ಕೊಪ್ಪಳ ತಾಲೂಕಿನಲ್ಲಿ ಸುಮಾರು ೫ ಸಾವಿರ, ಕುಷ್ಟಗಿ ೫ ಸಾವಿರ, ಗಂಗಾವತಿ ೪ ಸಾವಿರ, ಯಲಬುರ್ಗಾ ೬ ಸಾವಿರ ಜನಸಂಖ್ಯೆಯಿದೆ. ಸಿಂದೋಗಿ, ಲಿಂಗನಬಂಡಿ, ಕುಕನೂರ, ಹಾಲಹಳ್ಳಿ, ಇರಕಲ್ಲಗಡ, ಕಿನ್ನಾಳ, ಡಂಬರಹಳ್ಳಿ, ಹನುಮನಾಳ, ಹನುಮಸಾಗರ, ದೋಟಿಹಾಳ, ಯರೇಹಂಚಿನಾಳು, ಮಂಗಳೂರ, ಕದ್ರಳ್ಳಿ, ಬಳ್ಳೂಟಗಿ, ಗಂಗಾವತಿ, ಕುಷ್ಟಗಿ, ಕಾರಟಗಿ, ಅಗಳಿಕೇರಾ, ಹಿಟ್ನಾಳ, ಕನಕಗಿರಿ, ಸಿದ್ದಾಪುರ, ಸಾಲಹುಣಸಿಮರ ಸೇರಿ ವಿವಿದೆಡೆ ನೆಲೆಸಿದ್ದರೂ ಇಲ್ಲಿಯವರೆಗೆ ಸ್ವಂತ ಸೂರನ್ನೂ ಕಂಡಿಲ್ಲ.

ಕೈಲಾಸ: ಮನುಷ್ಯನ ಹುಟ್ಟಿನಿಂದ ಅಂತ್ಯಕ್ರಿಯೆಯವರೆಗೂ ನಡೆಯುವ ವಿವಿಧ ಸಮಾರಂಭಗಳಲ್ಲಿ, ಗುಡಿಗುಂಡಾರಗಳ ಧಾರ್ಮಿಕ ಕಾರ್ಯಗಳಲ್ಲಿ ಸಂಗೀತ ವಾದ್ಯ ನುಡಿಸುವುದರಲ್ಲಿಯೇ ಕೈಲಾಸ ಕಾಣುವ ಇವರು, ಜೀವನದಲ್ಲಿ ಮಾತ್ರ ಸಂತಸ ಕಾಣಲು ವಿಫಲವಾಗಿದ್ದಾರೆ. ಮುಂಚೆ ಕೇವಲ ಈ ಜನಾಂಗಕ್ಕೆ ಸೀಮಿತವಾಗಿದ್ದ ಈ ವೃತ್ತಿಯನ್ನು ಇದೀಗ ಅನ್ಯರೂ ಆಕ್ರಮಿಸಿದ್ದರಿಂದ ಕೆಲಸವಿಲ್ಲದಾಗಿದೆ. ಮುಂಚೆ ಪ್ರತಿ ಕಾರ್ಯಕ್ರಮಕ್ಕೂ ಇವರನ್ನು ಆಹ್ವಾನಿಸುತ್ತಿದ್ದ ಜನ ಇದೀಗ ಇವರನ್ನು ಕೈ ಬಿಟ್ಟಿದ್ದಾರೆ. ಸಿಡಿ, ಟೈಪ್‌ರೆಕಾರ್ಡ್ ಬಳಸಲು ಆರಂಭಿಸಿದಾಗಿನಿಂದ ಬೇಡಿಕೆ ಕಡಿಮೆಯಾಗಿದೆ. ಕೇವಲ ಮದುವೆಗೆ ಸೀಮಿತವಾಗಿದ್ದಾರೆ. ಹೀಗಾಗಿ ಕುಲವೃತ್ತಿ ಬಿಟ್ಟು ಕೂಲಿ ಕೆಲಸ ವಿವಿಧ ಉದ್ಯೋಗದಲ್ಲಿ ತೊಡಗುತ್ತಿದ್ದಾರೆ. ಮದುವೆಯಿದ್ದಾಗ ೨ ದಿನ ಹಗಲು

ರಾತ್ರಿ ದುಡಿದರೂ ಒಬ್ಬರಿಗೆ ೫೦-೭೫ ರೂ ಮತ್ತು ಉಳಿಯುತ್ತದೆ. ಎಂದು ಶಿವಪ್ಪ ಭಜಂತ್ರಿ ತಿಳಿಸುತ್ತಾರೆ.

ಆರ್ಥಿಕ ಮುಗ್ಗಟ್ಟು : ವಾದ್ಯ ನುಡಿಸುವ ಸಾಮರ್ಥ್ಯ ಕೇವಲ ೪೦ ವರ್ಷದವರೆಗೆ ಹೊಂದಿರುತ್ತಾರೆ. ನಂತರ ವಾದ್ಯ ನುಡಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ವಯಸ್ಸಾದಂತೆ ತೀವ್ರ ತೊಂದರೆ ಅನುಭವಿಸುತ್ತಾರೆ. ಆರ್ಥಿಕ ಮುಗ್ಗಟ್ಟು ಎದುರಾಗುತ್ತದೆ ಎಂದು ಗೋವಿಂದಪ್ಪ ಭಜಂತ್ರಿ ತಿಳಿಸುತ್ತಾರೆ.

ಅಕ್ಷರ ಜ್ಞಾನ: ೧೯೯೧ರ ಗಣತಿಯ ಪ್ರಕಾರ, ೧೩೩೨ ಜನರು ಅಕ್ಷರ ಜ್ಞಾನ ಪಡೆದವರಿದ್ದಾರೆಂಬುದು ಗೊತ್ತಾಗುತ್ತದೆ. ಇದರಲ್ಲಿ ಪದವಿ ಪಾಸಾದವರು ಗಂಗಾವತಿ ತಾಲೂಕಿನಲ್ಲಿ ೮ ಜನರಿದ್ದರೆ, ಯಲಬುರ್ಗಾ, ಕುಷ್ಟಗಿ ೮ ಪದವಿ ಶಿಕ್ಷಣ ಪಡೆದಿದ್ದರೆ ಕೊಪ್ಪಳ ತಾಲೂಕಿನಲ್ಲಿ ಒಬ್ಬರೂ ಸಹ ಪದವಿ ಶಿಕ್ಷಣ ಪಡೆದಿಲ್ಲ. ಇನ್ನು ವೈದ್ಯಕೀಯ, ಇಂಜನೀಯರಿಂಗ್ ಶಿಕ್ಷಣ ಪಡೆದವರು ಒಬ್ಬರೂ ಸಿಗುವುದಿಲ್ಲ. ಇದೀಗ ಈ ಜನಾಂಗದಲ್ಲಿನ ಶಿಕ್ಷಣ ಪ್ರಮಾಣ ಹೆಚ್ಚಾಗಿದೆ ಎಂದು ಸಮಾಜದ ಮುಖಂಡರೊಬ್ಬರು ತಿಳಿಸುತ್ತಾರೆ.

ಸಂಘಟನೆ : ಹಗಲಿರುಳು ದುಡಿಮೆ ಹಾಗೂ ಶೈಕ್ಷಣಿಕವಾಗಿ ಸಾಕಷ್ಟು ಹಿಂದುಳಿದಿರುವ ಈ ಜನಾಂಗದಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತದೆ. ಶ್ರೀ ಶಿವಶರಣ ನೂಲಿ ಚಂದಯ್ಯ ಜಿಲ್ಲಾಭಜಂತ್ರಿ ಸಂಘ ಹೊರತಾಗಿ ಮತ್ಯಾವ ಸಂಘಟನೆಗಳು ಸಮಾಜ ಪರ ಸೃಷ್ಟಿಯಾಗಿಲ್ಲ. ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸರಕಾರಿ ನೌಕರಿ ಮಾಡುವವರು ಕಾಣಸಿಗುತ್ತದೆ ಎಂದು ಸಂಘದ ಮುಖಂಡ ನಾಗಪ್ಪ ಭಜಂತ್ರಿ ತಿಳಿಸುತ್ತಾರೆ.

ಸೌಲಭ್ಯ : ಪರಿಶಿಷ್ಟ ಜಾತಿಗೆ ಸೇರಿರುವ ಇವರು ಆದರಿಂದ ಸಮಾಜಕ್ಕೆ ದೊರೆಯಬಹುದಾದ ಎಲ್ಲ ಸೌಲಭ್ಯಗಳನ್ನು ಪಡೆಯಲು ಹಕ್ಕು ಬಾಧ್ಯಸ್ಥರಾಗಿದ್ದಾರೆ. ಆದರೆ ಶಿಕ್ಷಣ ಹಾಗೂ ಸಂಘಟನೆಯ ಕೊರತೆಯಿಂದ ಸೌಲಭ್ಯಗಳು ದೊರೆತಿಲ್ಲ. ಪ್ರತಿ ವರ್ಷ ಸರ್ಕಾರದಿಂದ ಇವರಿಗೆ ವಾದ್ಯಗಳಾದ ಸನಾದಿ, ಡ್ರಾಪಿಕ್ಸ್, ಸೈಡ್, ಡ್ರಂ, ಡೋಲು, ಕ್ಲ್ಯಾರಿಯೋನೆಟ್‌ಗಳನ್ನು ವಿತರಿಸಬೇಕು. ಆದರೆ ಸರಕಾರ ನಿರ್ಲಕ್ಷ್ಯತೋರಿದೆ. ಕರಡಿ ಸಂಗಣ್ಣ ಶಾಸಕರಿದ್ದಾಗ ಮಾತ್ರ ಸುಮಾರು ೧೨ ಕುಟುಂಬಗಳಿಗೆ ಆಶ್ರಯ ಮನೆಗಳು ದೊರೆತಿವೆಯಷ್ಟೆ ಹೀಗಾಗಿ ಸೌಲಭ್ಯಗಳೆನ್ನುವುದು ಇವರಿಗೆ ಮರೀಚಿಕೆಯಾಗಿವೆ. ತಮ್ಮ ಸಮಸ್ಯೆಗಳ ಬಗ್ಗೆ ಹಲವು ಬಾರಿ ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ತಿಳಿಸಿದರೂ ಸಹ ಅವರಿಂದ ಕೇವಲ ಆಶ್ವಾಸನೆಗಳ ಸುರಿಮಳೆಯೇ ಸುರಿದಿದೆಯೇ ಹೊರತು ಕ್ರಮಗಳಾಗಿಲ್ಲ ಎಂದು ಸಂಘದ ತಾಲೂಕು ಸಂಚಾಲಕ ನಾಗರಾಜ ಭಜಂತ್ರಿ ಆರೋಪಿಸುತ್ತಾರೆ.

ಶಿಕ್ಷಣಕ್ಕೆ ವಿಶೇಷ ಯೋಜನೆ ರೂಪಿಸಲು ಆಗ್ರಹ : ಅತ್ಯಂತ ಹಿಂದುಳಿದಿರುವ ಭಜಂತ್ರಿ ಸಮಾಜದ ಮಕ್ಕಳಿಗೆ ಶಿಕ್ಷಣ ಪೂರೈಸಲು ಅನುಕೂಲವಾಗಿರುವಂತೆ ಸರಕಾರ ವಿಶೇಷ ಯೋಜನೆ

ರೂಪಿಸಿ ಜಾರಿಗೆ ತರಬೇಕು ಎಂದು ಶ್ರೀ ಶಿವಶರಣ ನೂಲಿ ಚಂದಯ್ಯ ಜಿಲ್ಲೆ ಭಜಂತ್ರಿ ಸಂಘದ ಅಧ್ಯಕ್ಷ ಬಸವರಾಜ ಒಳಗಾನೂರ ಆಗ್ರಹಿಸುತ್ತಾರೆ. ಸಮಾಜದ ೪೦ ವರ್ಷಕ್ಕೂ ಮೇಲ್ಪಟ್ಟವರಿಗೆ ವಾದ್ಯ ನುಡಿಸುವುದು ತೊಂದರೆಯಾಗುತ್ತದೆ. ಕಾರಣ ಸಮಾಜದವರಿಗೆ ಪ್ರತಿ ತಿಂಗಳೂ ೧೦೦೦ ಸಹಾಯಧನ ವಿತರಿಸಬೇಕು. ಈ ಬಗ್ಗೆ ಚುನಾಯಿತ ಪ್ರತಿನಿಧಿಗಳಿಗೆ, ಸಚಿವರಿಗೆ, ಅಧಿಕಾರಿಗಳಿಗೆ ಹಲವು ಬಾರಿ ಮನವಿ ಅರ್ಪಿಸಲಾಗಿದೆ. ಅವರಿಂದ ಆಶ್ವಾಸನೆ ಲಭಿಸಿವೆಯೇ ಹೊರತು ಪ್ರಯೋಜನವಾಗಿಲ್ಲ. ತಮ್ಮ ಸಮಾಜದ ಬಗ್ಗೆ ಸರಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸುತ್ತಾರೆ. ಅಂಬೇಡ್ಕರ್, ಆವಾಸ ಯೋಜನೆಯಡಿ ಸಮಾಜ ಬಾಂಧವರಿಗೆ ಮನೆಗಳನ್ನು ನೀಡಬೇಕು ರಾಜಕೀಯ ಪಕ್ಷಗಳಲ್ಲಿ ಜನಾಂಗದವರಿಗೆ ಸರಿಯಾದ ಸ್ಥಾನ ಕಲ್ಪಿಸಬೇಕೆಂದಿದ್ದಾರೆ. (ವಿಜಯ ಕರ್ನಾಟಕ– ೨೪ ಎಪ್ರಿಲ್ ೨೦೦೬)

ಬಾಳಬುತ್ತಿಯಲ್ಲಿ "ಅಮ್ಮ, ನಾನು ಕೊರವಿ–ನಿನಗೆ ಕಣಿ ಹೇಳಲು ಬಂದಿದ್ದೇನೆ. ನಿನ್ನ ದೇಹವನ್ನು ಹೊಕ್ಕಿರುವ ಜಾಡ್ಯವನ್ನು ಹೊಡೆದೋಡಿಸುತ್ತೇನೆ. ಅದಕ್ಕೆ ನೀನು ಬರೀ ಹಸೆ ಹಾಸಿ, ತಾಂಬೂಲವಿರಿಸಿ, ದೀಪ ಹಚ್ಚಿದರೆ ಸಾಲದು–ಸತ್ಯವನ್ನೇ ಹಸೆಯಾಗಿ ಹಾಸು, ಭಕ್ತಿಯನ್ನೇ ತಾಂಬೂಲವಾಗಿರಿಸು, ನಿರ್ಮಲ ಮನಸ್ಸೆಂಬ ದೀಪವನ್ನು ಹಚ್ಚು! ನಾನು ನಿನಗೆ ಓಂಕಾರ ಪ್ರಾಣವನ್ನು ಬೋಧಿಸಿ, ನಿನ್ನ ಮೈಯಲ್ಲಿ ಸೇರಿಕೊಂಡಿರುವ ಆ ದೈವದ ಕಾಟವನ್ನು ನನ್ನ ಜ್ಞಾನವೆಂಬ ಬೆತ್ತದಿಂದ ಹೊಡೆದು ಓಡಿಸುತ್ತೇವೆ. ನೀನು ದೇಹ–ಮನಸು–ಮಾತು ಎಂಬ ಮೂರು ದಾರಿ ಕೊಡುವೆಡೆ ಜಾರಿಬಿದ್ದು, ಧರ್ಮ ಅರ್ಥ– ಕಾಮ–ಮೋಕ್ಷವೆಂಬ ನಾಲ್ಕು ದಿಕ್ಕೂ ತೋಚದೆ ಕಂಗೆಟ್ಟಿದ್ದೀಯ ಮೇಲಾಗಿ ಮಣ್ಣು–ನೀರು–ಬೆಂಕಿ–ಗಾಳಿ–ಬಯಲೆಂಬ ಐದು ಭೂತಗಳೂ ನಿನಗೆ ಕಾಟಕೊಡುತ್ತಿವೆ. ಆದ್ದರಿಂದಲೆ ನಿನಗೆ ನಿನ್ನ ಗಂಡನಾದ ಲಿಂಗನ ಮೇಲೆ ಪ್ರೀತಿ ಆಗುತ್ತಿಲ್ಲ. ಗಂಡನನ್ನು ಕಂಡರೆ ಆಗದಿರುವ ನಿನ್ನ ಈ ಜಾಡ್ಯವನ್ನು ನಾನು ನಿವಾರಿಸುತ್ತೇನೆ ಹೆದರಬೇಡ!

ಕೆಲಸಕ್ಕೆ ಬಾರದ ಹಲವು ಮಾತನಾಡುವುದರಲ್ಲೆ ನಿನ್ನ ಕಾಲವೆಲ್ಲಾ ಕಳೆದು ಹೋಗುತ್ತಿದೆ. ನಿನ್ನ ಆತ್ಮಜ್ಞಾನ ಕ್ರಮಕ್ರಮವಾಗಿ ನಶಿಸಿ ಹೋಗುತ್ತಿದೆ. ಈ ಚಿಕ್ಕ ವಯಸ್ಸಿಗೆ ನೀನು ಕಾಮ ಕ್ರೋಧ ಮುಂತಾದ ವಿಕಾರಗಳಿಗೆ ಒಳಗಾಗಿದ್ದೀಯ ಬಿಡು, ನೀನು ಹೆದರಬೇಡ. ನಾನು ನಿಜ ಎಂಬ ಹಗ್ಗದಿಂದ ನಿನ್ನಿ ಮೈಸೇರಿರುವ ಆ ಅಜ್ಞಾನಭೂತವನ್ನು ಕಟ್ಟಿ ಎಳೆದು ಘಾಸಿಗೊಳಿಸಿ ದೂರಮಾಡು ತ್ತೇನೆ. ಹೆದರಬೇಡ! ನಿನ್ನ ಹೃದಯ ಪದ್ಮದ ಸುತ್ತಲಿರುವ ಎಂಟು ದಳಗಳಲ್ಲಿಯೆ ಸುತ್ತಿ ಸುಳಿದಾಡಿ ಹಸಿವು ಬಾಯರಿಕೆ ಲೋಭ ಮೋಹಾದಿಗಳಲ್ಲಿ ಬಳಲುತ್ತಿರುವ ನಿನ್ನ ಜೀವ ಭ್ರಮರವನ್ನು ಲಿಂಗಧ್ಯಾನವೆಂಬ ನಿಶ್ಚಲ ನಡುನೆಲೆಗೆ ತಂದು ಸಚ್ಚಿದಾನಂದ ಜೇನುಂಬಂತೆ ಮಾಡಬಲ್ಲ ಕೊರವಿ ನಾನು.

ನಿನಗೆ ಹಿಡಿದ ಪಂಚಭೂತಗಳನ್ನು ಬಿಡಿಸಿ–ಆ ಶಿವಯೋಗ ಸುಖ ಏನೆಂಬುದನ್ನು ಬೋಧಿಸುತ್ತೇನೆ ನಂಬು! ಸತ್ಯದ ಹಸೆ ಹಾಸಿ, ಭಕ್ತಿಯ ತಾಂಬೂಲವಿರಿಸಿ ನಿರ್ಮಲ ಮನಸ್ಸೆಂಬ ತೈಲವೆರೆದು ಅಂತರಂಗದಲ್ಲಿ ದೀಪ ಹಚ್ಚು! ಎಂದು ಎಲ್. ಬಸವರಾಜು ಬರೆಯುತ್ತಾರೆ. (ಪ್ರಜಾವಾಣಿ ೮ನೇ ಜೂನ್ ೨೦೦೫) ಹೆಸರೆ ಸೂಚಿಸುವಂತೆ ಬಾಳುಬುತ್ತಿಯಂತೆ ಅದನ್ನು ಉಪಯಕ್ತವಾಗಿ ಬಳಸಿಕೊಳ್ಳಬೇಕು ಇಲ್ಲವಾದರೆ ಬುತ್ತಿಯು ಅಳಸುವುದುಂಟು. ಮನಷ್ಯನ ಮನಸ್ಸು ಕಲುಶಿತಗೊಂಡಾಗ ಅಳಿಸುವುದು ಖಂಡಿತ. ಪ್ರಸ್ತುತ ಸಂದರ್ಭದಲ್ಲಿ ಮನುಷ್ಯನ ದೇಹವು ಜಾಡ್ಯದಂತೆ, ನೆಪಗೆ ಮಾತ್ರ ತಾಂಬೂಲ ಮತ್ತು ದೀಪಗಳು ಹಚ್ಚುವುದಲ್ಲ. ತಮ್ಮ ಅಂತರಂಗವನ್ನು ಶುದ್ಧಿಕರಿಸುವುದು ಸತ್ಯದಿಂದ ನಡೆಯುವಂತೆ ಮಾಡುವುದಲ್ಲ. ಮೂಢನಂಬಿಕೆಯುಳ್ಳ ಜನರಿಗೆ ಮತ್ತು ಅಲೆಮಾರಿಗಳಿಗೆ ಅಂಬೇಡ್ಕರ ಜನರ ಉದ್ಧಾರವಾಗಿ ದುಡಿದರೂ ಅಂತಹ ಮನಸ್ಥಿತಿಗಳು ರಾಜಕಾರಣಿಗಳಲ್ಲಿ ಅಧಿಕಾರಿಗಳಲ್ಲಿ ಇಲ್ಲದಿರುವುದು ನಿರ್ಮಲ ಮನಸ್ಸುಗಳು ಬೇಕು ಎಂಬುದನ್ನು ತಿಳಿಸಕೊಳ್ಳುತ್ತಾರೆ.

ದೇಹ–ಮನಸ್ಸು–ಮಾತು ಎಂಬ ಮಾತುಗಳು ಕೊರಮಜಿಯು ಹಸನಗೊಳಿಸುತ್ತದೆ. ದೇಹ ಮನಸ್ಸು ಮಾತುಗಳನ್ನು ನೇರವಾಗಿ ಅಂದವಾಗಿ ಮಾಡುವಂತಹ ಗುಣವನ್ನು ಮೂಢಿಸುವಳು. ಅದೇ ರೀತಿಯಲ್ಲಿ ಜಾಗತೀಕರಣ ಸಂದರ್ಭದಲ್ಲಿ ವ್ಯಕ್ತಿಗಳು ತಮ್ಮ ಸ್ವತಃ ಬದುಕುನಿಂದ ಬದುಕುತ್ತಿರುದುಂಟು. ಶಿಕ್ಷಣವಂತರಾದವರು ತಮ್ಮ ಸಮುದಾಯಗಳ ಕಾಳಜಿವಹಿಸಿ ದುಡಿಯುವುದು ಅನಿವಾರ್ಯವಾಗುತ್ತಾ ಮನಸ್ಸು ಮಾಡಿ ಮಾತಿನಂತ ನಡೆದುಕೊಂಡಾಗ ಅಭಿವೃದ್ಧಿಯಾಗಲು ಮುಂದೆ ಬರಲು ಸಾಧ್ಯವಾಗುತ್ತದೆ. ಇಲ್ಲವಾದರೂ ತಮ್ಮ ತಮ್ಮದು ಹೊಡಕುಗಳು ಮೂಡುತ್ತಾ ಹೋಗುವುದು ಕಂಡುಬರುತ್ತದೆ.

ಬದುಕು ಪೊರೆದ ಈಚಲು; ಹೊಸ ಗಾಳಿಗೆ ಕಂಗಾಲು: ಮಾರುಕಟ್ಟೆಗೆ ಯಂತ್ರ ತಯಾರಿತ ಉತ್ಪನ್ನಗಳು ಲಗ್ಗೆ ಇಟ್ಟ ಪರಿಣಾಮ ಹೋಬಳಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಬುಟ್ಟಿ, ಪೊರಕೆ ತಯಾರಕರ ಕುಟುಂಬಗಳು ಅತಂತ್ರೆಗೆ ಸಿಲುಕಿವೆ. ಕೊರವ ಸಮುದಾಯಕ್ಕೆ ಸೇರಿದ ಹಲವು ಕುಟುಂಬಗಳು ಬುಟ್ಟಿ, ಕಸುಬಾರಿಕೆ ತಯಾರಿಸುವ ವೃತ್ತಿಯನ್ನು ಕಸುಬಾಗಿ ನೆಚ್ಚಿದು, ಆಧುನಿಕತೆಯ ವೇಗಕ್ಕೆ ಸಿಲುಕಿ ನಲುಗಿದ್ದಾರೆ. ಪುಟ್ಟಿ, ಪೊರಕೆಗಳನ್ನು ತಯಾರಿಸಿದ ಬಳಿಕ ಅವುಗಳನ್ನು ಮಾರುಕಟ್ಟೆ, ಮನೆ–ಮನೆಗೆ ತಲುಪಿಸಿ ಮಾರಾಟ ಮಾಡುವದೇ ಇವರ ಕಾಯಕ. ಪ್ಲ್ಯಾಸ್ಟಿಕ್ ಮುಗಕ್ಕೆ ಆಧುನಿಕ ಜಗತ್ತು ಮಾರು ಹೋಗಿರುವುದರಿಂದ ಮರದ ಬಿದಿರುಗಳಿಂದ ತಯಾರಿಸಿದ ವಸ್ತುಗಳಿಗೆ ಬೆಲೆ ಕಡಿಮೆಯಾಗಿದೆ. ಬ್ರ್ಯಾಂಡ್ ಜಗತ್ತಿನಲ್ಲಿ ಕೈ ಕಸುಬಿನ ವಸ್ತುಗಳು ನೆಲೆ ಕಳೆದುಕೊಳ್ಳುತ್ತಿವೆ.

ಆಂಧ್ರ ಆಸರೆ : ಸಿರಿಗೇರಿಯಲ್ಲಿ ೪೫, ಹಾವಿನಹಾಳ್‌ದಲ್ಲಿ ೧೨, ವೀರಾಪುರದಲ್ಲಿ ೧೫, ಎಂ ಸೂಗೂರಿನಲ್ಲಿ ೨೫, ನಡವಿ ಗ್ರಾಮದಲ್ಲಿ ೧೦ ಕುಟುಂಬ ಸೇರಿ ೫೦೦ ಕುಟುಂಬಗಳು ಈ ವೃತ್ತಿಯಲ್ಲಿದ್ದಾರೆ. ಪುಟ್ಟಿ ಪೊರಕೆ ತಯಾರಿಕೆ ಈಚಲು ಗಿಡದ ಕಡ್ಡಿ ಹಾಗೂ ಗೆರೆ ಬೇಕು. ಕರ್ನಾಟಕದಲ್ಲಿ ಕೆಲವರ್ಷಗಳಿಂದ ಈಚಲು ಮರೆಯಾಗುತ್ತಿದೆ. ಇಂತಹ ಕಡ್ಡಿ, ಗೆರೆಗಳನ್ನು ತರಲು ಬಂಜರು ಮತ್ತು ಒಣಪ್ರದೇಶಕ್ಕೆ ತೆರಳಬೇಕಿದೆ. ಅಲ್ಲದೆ, ಪಕ್ಕದಲ್ಲಿರುವ ಆಂಧ್ರಪ್ರದೇಶ ಕಚ್ಚಾ ಸಾಮಗ್ರಿಯ ತಾಣವಾಗಿದೆ. ೩ ತಿಂಗಳಿಗಿವೆ ಆಂಧ್ರದ ಆದೋನಿ, ಆಲೂರು ಹಾಗೂ ಕರ್ನೂಲ್ ಜಿಲ್ಲೆ ಕೌತಾಳಂ, ಹಾಲರ್ವಿ, ಹಾಲ್ವಿ, ಬಾಪುರ, ರಾವಿಹಾಳ್‌ಗೆ ಇಲ್ಲಿನವರು ತೆರಳುತ್ತಾರೆ.

ಅಲ್ಲೆ ಠಿಕಾಣಿ: ಆಂಧ್ರಪ್ರದೇಶಕ್ಕೆ ತೆರಳಿದ ಕೌಟುಂಬಗಳು ಕೆಲವು ದಿನ ಅಲ್ಲೆ ಉಳಿದುಕೊಳ್ಳಬೇಕಿದೆ. ತಿಂಗಳು ಪರ್ಯಂತ ಒಣಭೂಮಿ, ಬಂಜರು ಪ್ರದೇಶದಲ್ಲಿ ತಿರುಗಿ ಈಚಲು ಮರದ ಕಡ್ಡಿ ಗೆರೆಗಳನ್ನು ಕಡಿದು ಇಲ್ಲಿಗೆ ತರುತ್ತಾರೆ. ಕಚ್ಚಾ ಸಾಮಗ್ರಿಯನ್ನು ತರುವುದಕ್ಕಾಗಿ ೫ ರಿಂದ ೬ ಸಾವಿರ ರೂ ವಯಿಸುತ್ತಾರೆ. ಕುಟುಂಬದ ಇಬ್ಬರು ಸೇರಿ ದಿನಕ್ಕೆ ೫ ಪುಟ್ಟಿ ಎಣೆಯುತ್ತಾರೆ. ಕಸಪೊರಕೆ, ಚಾಪೆ ಹೆಣೆಯುತ್ತಾರೆ. ಪ್ರತಿ ಪುಟ್ಟಿಯನ್ನು ೨೦ ರಿಂದ ೩೫ ರೂಗೆ ಕಸ ಪೊರಕೆಯನ್ನು ೫ ರಿಂದ ೮ ರೂ ನಂತೆ ಮಾರಾಟ ಮಾಡುತ್ತಾರೆ. ಕಡಿಮೆ ದರಕ್ಕೆ ಕೊಟ್ಟರೂ ಮಾರುಕಟ್ಟೆಯಲ್ಲಿ ಇವರ ಸಾಮಗ್ರಿಗಳನ್ನು ಕೊಳ್ಳಲು ಚೌಕಾಸಿ ನಡೆಸುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬದಲಾದರು; ಈಗ ಎಲ್ಲವೂ ಬದಲಾಗಿದೆ. ಕಸಪೊರಕೆ, ಬುಟ್ಟಿ, ಚಾಪೆ ಬದಲಿಗೆ ಪ್ಲಾಸ್ಟಿಕ್‌ಯುಕ್ತ ರೆಡಿಮೇಡ್ ವಸ್ತುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಈ ಮೊದಲು ಕಬ್ಬಿಣದ 'ಗಾಣಗಳಿದ್ದವು. ಬೆಲ್ಲ ಹಾಕಲು ಹಾಗೂ ಇತರ ಕೆಲಸಗಳಿಗೆ ಈಚಲು ಚಾಪೆ ಕೇಳುವವರಿಲ್ಲ. ಪ್ರತಿ ಮನೆಯಲ್ಲಿ ಕೃಷಿ ಚಟುವಟಿಕೆಗಾಗಿ ಈಚಲ ಬಿದಿರಿನ ಪುಟ್ಟಿ ಬಳಸುತ್ತಿದ್ದರು. ಈ ಜಾಗವನ್ನು ಕಬ್ಬಿಣ, ಪ್ಲಾಸ್ಟಿಕ್ ಪುಟ್ಟಿಗಳು ಅತಿಕ್ರಮಿಸಿವೆ. ಬದುಕಿನ ವೃತ್ತಿಯನ್ನಾಗಿ ಪಾಲಿಸಕೊಂಡ ಕಸುಬಿಗೆ ಗಂಡಾಂತರ ಎದುರಾದ ಹಿನ್ನೆಲೆಯಲ್ಲಿ ಕೊರವರ ಸಮುದಾಯದವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವೃತ್ತಿ ಕೌಶಲ, ಸಣ್ಣ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರಕಾರ ಜಾರಿಗೊಳಿಸಿದ ಯೋಜನೆಗಳು ಇವರ ಕೈ ಹಿಡಿಯಬೇಕಿದ್ದು, ಆ ನಿಟ್ಟಿನಲ್ಲಿ ಜನಪ್ರತಿ ನಿಧಿಗಳು, ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎನ್ನುತ್ತಾರೆ. ಹಾವಿನಾಳ ಗಂಗಮ್ಮ ದಂಪತಿಗಳು ಇದ್ದಂತೋರೆಲ್ಲಾ ಅಂಗಡ್ಯಾಗ ಸಿಗೋ ನೈಸ್ ಬಾರ್ಗಿ ತೊಗೊಳ್ತಾರೆ. ಕೂಲಿಮಾಡೋರ್ ಮಾತ್ರ ನಮ್ಮನ್ನು ಕೈಬಿಟ್ಟಿಲ್ಲ. ಕೂ ಹಿಡ್ಕೆ ಬೇರ ಇತ್ತಂದ್ರ ೮ ರೂಪಾಯಿಗಳ ಎರ್ಡು ತಗೊಳ್ಳಾಕ ಹಿಂಜರಿತಾರ (ವಿಜಯ ಕರ್ನಾಟಕ ಮಂಗಳವಾರ ೫ ನವೆಂಬರ್ ೨೦೧೩ ಗಂಗಾವತಿ ಪತ್ರಿಕೆಯಲ್ಲಿ ಪ್ರಕಟ)

ಭಾರತೀಯ ಸಂಸ್ಕೃತಿಯು ಕೃಷಿ ಕೇಂದ್ರಿತವಾಗಿದ್ದು, ಕೃಷಿಗೆ ಅವಲಂಬಿತ ಹಾಗೂ ಅದರ ಪ್ರಕಾರಗಳ ಸುತ್ತಲೂ ರೈತ ತನ್ನ ಬದುಕನ್ನುಕಟ್ಟಿ ಜೀವನವನ್ನು ಹಸನುಮಾಡಿಕೊಳ್ಳುತ್ತಾ, ರೈತನಿಗೆ ಕೊರವರು ತಯಾರಿಸುವ ಪರಿಕಾರಗಳು ಕಸಬಾರಿಕೆ, ಕಣ ಸ್ವಚ್ಛ ಮಾಡಲು, ಪ್ರತಿಯೊಬ್ಬರ ಮನೆಗಳಲ್ಲಿ ಇರುತ್ತಿದ್ದವು. ಬುಟ್ಟಿ ಎಲ್ಲಾ ಪ್ರಕಾರದಲ್ಲಿಯೂ ರೈತನಿಗೆ ಅನುಕೂಲಕರವಾಗಿತ್ತು. ರೈತನಿಗೆ ನೆರವಾಗುತ್ತಾ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುವ ಕಾರ್ಯ ಮಾಡುತ್ತಿದ್ದ. ತನ್ನ ಕಾರ್ಯವನ್ನು ಶುಭ್ರ ಮನಸ್ಸಿನಿಂದ ನಂಬಿಕೆಯಿಂದ ತಯಾರಿಸಿ ಜನರಿಗೆ ನಂಬಿಕಸ್ತನಾಗಿದ್ದ ಎಂದರೆ ತಪ್ಪಾಗಲಾರದು. ಪ್ರತಿಯೊಂದು ಕಾರ್ಯಗಳಿಗೂ ಬುಟ್ಟಿಯು ಮಹತ್ವವಾಗಿ ಬೇಕಾಗಿತ್ತು ಎಂಬುದು ಇಂದಿಗೂ ತಿಳಿದುಬರುತ್ತದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಕಸುಬು ಉಳಿಸಿಕೊಳ್ಳುವುದೇ ಒಂದು ಸಮಸ್ಯೆಯಾಗಿ ಸವಾಲಾಗಿ ಪರಿಣಮಿಸಿದೆ ಎಂದೇ ಹೇಳಬೇಕಾಗುತ್ತದೆ.

ಅರಣ್ಯ ಪ್ರದೇಶದಲ್ಲಿ ದೊರೆಯುವ ಈಚಲುಗಳು ಇಂದು ರಸ್ತೆ ಅಗಲಿ ಕಾರಣದಿಂದ ಗಿಡಮರಗಳು ನಾಶವಾಗುತ್ತಿವೆ. ಗುಡ್ಡ ಬೆಟ್ಟಗಳಲ್ಲಿ ಬೆಂಕಿ ತಗಲಿ ಅಲ್ಲಿ ದೊರೆಯುವ ಈಚಲು ಬೆಳೆಯದಂತೆ ಭೂಮಿ ಕರಕಲು ಆಗಿರುವುದು. ಅರಣ್ಯದ ನಿರ್ಬಂಧಿತ ಪ್ರದೇಶಗಳಲ್ಲಿ ಅಧಿಕಾರಿಗಳದೇ ದರ್ಬಾರು. ಈ ಸಮುದಾಯದವರಿಗೆ ಶಿಕ್ಷಣವಿಲ್ಲದಿರುವುದರಿಂದ ಬೇರೆ ವೃತ್ತಿಗಳು ಬರದೆ ತಮ್ಮ ವೃತ್ತಿಯಲ್ಲಿಯೇ ಮುಂದುವರೆಯಲು ಹರಸಾಹಸ ಪಡುತ್ತಿದ್ದಾರೆ. ಸರ್ಕಾರದ ಕರಕುಶಲ ಕೌಶಲ್ಯಗಳಿಗೆ ಲೋನ್ ನೀಡುತ್ತದೆ ಎಂದು ಬ್ಯಾಂಕ್‌ಗಳಿಗೆ ಹೋಗಿ ಕೇಳಿದಾಗ ಕಸುಬಾರಿಗೆ ಮತ್ತು ಬುಟ್ಟಿ ತಯಾರಿಕೆಗೆ ಲೋನ್ ನೀಡುವುದಿಲ್ಲ. ಏಕೆಂದರೆ ಸಂಘ ಮಾಡಿಕೊಂಡು ಅದರಿಂದ ಲೋನ ಪಡೆಯಿರಿ ರಂದು ಹೇಳುತ್ತಾರೆ. ಈ ಸಮುದಾಯದವರಿಗೆ ಸಂಘವೆಂದರೆ ತಾಮ್ಮ ದುಡಿದ ಹಣವನ್ನು ತೆಗೆದಿಟ್ಟು ಅಗತ್ಯ ಬಿದ್ದಾಗ ಪಡೆಯುವುದಾಗಿದೆ. ಆದರೆ ಅದು ಉಪಯೋಗವಾಗುವುದೆ ಬೇರೆ ಕೆಲಸಕ್ಕೆ ಎಂಬುದು ತಿಳಿದುಬರುತ್ತದೆ. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎನ್ನುವ ಮಾತಿನಂತೆ ಕುಡಿದಕ್ಕೆ ತಿನ್ನುವುದಕ್ಕೆ ಇಡಲಾಗುತ್ತದೆ. ಇವರ ಬದುಕಿನ ಸ್ಥಿತಿಯೇನು?

ರಾಜಕೀಯ ಸಮಸ್ಯೆ

ಜಾಗತೀಕರಣ ದಿನಗಳಲ್ಲಿ ಸಮುದಾಯಗಳು ರಾಜಕೀಯದ ಕಡೆಗೆ ಹೆಚ್ಚಿನ ಗಮನಹರಿಸಿರುದುಂಟು. ರಾಜಕೀಯ ಪಕ್ಷಗಳು ಜಾತಿಗಳ ಆಧಾರವಾಗಿಟ್ಟುಕೊಂಡು ಚುನಾವಣೆಗಳಲ್ಲಿ ಹಸ್ತವಾಗಿ ಬಳಕೆಯಾಗುತ್ತಿವೆ. ಅಧಿಕಾರವಿರುವ ತನಕ ಅವರನ್ನು ಬಳಸಿಕೊಳ್ಳುತ್ತಾರೆ. ರಾಜಕೀಯದಿಂದ ಹೊರ ಬಿದ್ದ ಮೇಲೆ ಅವರ ಸ್ಥಿತಿಗಳು ಹೇಳಲಿಕ್ಕೆ ಆಗುವುದಿಲ್ಲ. ಸೌಲಭ್ಯವನ್ನು ಪಡೆಯುವವರು ಕೆಲವರಾದರೂ ಸಹ ಜನರಿಂದ ನೊಂದನೆಗೆ ಒಳಗಾಗುವವರು ಇವರಾಗಿರುತ್ತಾರೆ. ತಮ್ಮ ರಕ್ಷಣೆಗೋಸ್ಕರ ತಮ್ಮದೇ ಆದ ಕುಲಪಂಚಾಯಿತಿಯನ್ನು ಹೊಂದಿದ್ದಾರೆ. ಇವರನ್ನು ದೈವದವರು ಎಂದು ಕರೆಯಲಾಗುತ್ತದೆ. ಸಮುದಾಯದಲ್ಲಿರುವುದೇ ಶುಭಕಾರ್ಯಕ್ಕಾಗಿ, ದಂಡ

ವಿಧಿಸಲು, ನಿಯಮಗಳನ್ನು ರೂಪಿಸಲು ದೈವದವರು ಬರಬೇಕಾಗುವುದು ಅನಿವಾರ್ಯ, ಇದು ಪ್ರಸ್ತುತ ರಾಜಕೀಯ ವ್ಯವಸ್ಥೆಗೆ ಪ್ರೇರಣೆಯಾಯಿತು. ಸಮುದಾಯದ ಹಿರಿಯರೆಂದು ಕರೆಯುತ್ತಾರೆ. ಆದರೆ ಆಧುನಿಕ ಸಂದರ್ಭದಲ್ಲಿ ರಾಜಕೀಯ ಜೀವನ ಮುಖ್ಯ ಅಂಗವಾಗಿ ರೂಪುಗೊಂಡಿದೆ ಮತ್ತು ಹೆಮ್ಮರವಾಗಿ ಬೆಳೆದು ನಿಂತಿದೆ. ಜಾತಿ ರಾಜಕಾರಣ ಎಂದರೂ ತಪ್ಪೆನಿಲ್ಲ. ಇದರಿಂದಲೇ ಸಮುದಾಯಗಳ ವ್ಯವಹಾರದ ರಾಜಕೀಯ ಅತಿಮಹತ್ವವಾಗಿದೆ ಹಾಗೂ ಸಮಾಜವನ್ನು ಪ್ರಭಾವಿಸುವ ಮುಖ್ಯ ಮೌಲ್ಯವಾಗಿದೆ. ರಾಜಕಾರಣಗಳು ಮತ ಪಡೆಯಲು ಕೆಳಜಾತಿಯ ಜನರನ್ನು ಮನಒಲಿಸಿ ಮತವನ್ನು ಪಡೆಯುವುದುಂಟು. ಜೀವನ ನಿರ್ವಹಣೆಗೆ ಹಣಬೇಕು ಆ ಹಣವನ್ನು ರಾಜಕಾರಣಿಗಳು ಸಮುದಾಯದ ಮುಖ್ಯ ವೃತ್ತಿ ನೀಡಿ ಪ್ರೋತ್ಸಾಹಿಸುವಂತೆ ಪ್ರೇರೇಪಿಸುತ್ತಾನೆ. ಆದರೆ ಮುಖ್ಯ ವ್ಯಕ್ತಿ ಪೂರ್ಣ ಹಣ ಪಡೆದು ಬೇರೆಯವರಿಗೆ ಅಲ್ಪ ಮೊತ್ತ ನೀಡಿ ಮೋಸ ಮಾಡುವುದನ್ನು ಸಹ ನೋಡಬಹುದು. ಸಮುದಾಯದ ಗುಣಾತ್ಮಕತೆಯನ್ನು ಮತ್ತು ಭವಿಷ್ಯವನ್ನು ಅನಾವರಣಗೊಳಿಸುತ್ತದೆ. ಇದರ ದಿಕ್ಕಿನಲ್ಲಿ ಕೇವಲ ಸಾಮಾಜಿಕ, ಆರ್ಥಿಕ, ಜೀವನ ಜೊತೆಗೆ ಅದರ ರಾಜಕೀಯ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಇಭಿಂಟಿಂಟುಛಿ ಆಜಣಜಡಿಟುಟಥಿ ಕಠಟುಣಾಜ ಎಂಬಂತೆ ಆರ್ಥಿಕವಾಗಿ ಬಲಿಷ್ಠವಾದ ವರ್ಗ ರಾಜಕೀಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುತ್ತಾರೆ. ಆದರೆ ಇಂದು ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿ ರಾಜಕೀಯದಲ್ಲಿ ಭಾಗವಹಿಸುವುದು ಅತ್ಯವಶ್ಯಕವಾಗಿದೆ.

ಕೊರವ ಸಮುದಾಯವು ರಾಜಕೀಯದಲ್ಲಿ ಭಾಗವಹಿಸುವಿಕೆ ಕಾಣುತ್ತೇವೆ. ವಾರ್ಡ್ ಮೇಬರ, ಪಟ್ಟಣ ಪಂಚಾಯಿತಿ ಸದಸ್ಯರು ರಾಜಕೀಯ ಪಕ್ಷಗಳ ಹಿಂಬಾಲಕರು, ಬೆಂಬಲಿಕರು ಮೊದಲಾದ ವೃತ್ತಿಯಲ್ಲಿ ಭಾಗವಹಿಸುವುದುಂಟು. ಸಂವಿಧಾನದಲ್ಲಿ ಮೀಸಲಾತಿ ಎಂಬುದು ಹಿಂದುಳಿದ ವರ್ಗದ ಹಕ್ಕು ಆಗಿದೆ. ಕೆಳಸ್ತರದಲ್ಲಿರುವ ಸಮುದಾಯವನ್ನು ಅಭಿವೃದ್ಧಿ ಪಡಿಸಲು ಮೀಸಲಾತಿ ಬೇಕೇಬೇಕು. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಅರಿವು ಸಮುದಾಯದಲ್ಲಿರ ಬೇಕಾಗುತ್ತದೆ. ಮೀಸಲಾತಿಯನ್ನು ಕಲ್ಪನೆ ರಾಜಕೀಯದಲ್ಲಿ ಸ್ಥಾನಮಾನಗಳನ್ನು ದೊರಕಿಸಿಕೊಡ ಲಾಗುತ್ತಿದೆ. ೧೯೯೩ರಲ್ಲಿ ಕರ್ನಾಟಕ ಸರ್ಕಾರ ಪಂಚಾಯತ್‌ರಾಜ್ ವ್ಯವಸ್ಥೆಯಿಂದಾಗಿ ಸಮಾಜದ ಎಲ್ಲ ಸಮುದಾಯಗಳಿಗೂ ಸರ್ಕಾರಿ ಮತ್ತು ರಾಜಕೀಯ ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. ಇದ್ದರಿಂದಾಗಿ ಗ್ರಾಮ ಪಂಚಾಯಿತಿ, ತಾಲೂಕು, ಜಿಲ್ಲಾ, ನಗರ ಪಾಲಿಕೆ ಸದಸ್ಯರು ಕ್ಷೇತ್ರಗಳಲ್ಲಿ ಮೀಸಲಾತಿ ಸೌಲಭ್ಯ ದೊರಕಿವೆ. ಇನ್ನು ರಾಜಕೀಯದಲ್ಲಿ ಮಂಡಿ ಊರಿದ್ದಾರೆ. ಆದರೆ ರಾಜಕೀಯದಲ್ಲಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪಾಲ್ಗೊಳ್ಳುವವರು ಇದ್ದರು. ಜನತೆಯ ಕಾರ್ಯಕ್ಕೆ ಉಪಯುಕ್ತವಾಗಲಾರದ ಕಾರಣ ಇವರಿಗೆ ಸ್ಥಾನವನ್ನು ಕಲ್ಪಿಸಿಕೊಳ್ಳಲು ಆಗುತ್ತಿಲ್ಲ ಆದರೆ ಸ್ವಲ್ಪ ಪ್ರಮಾಣದಲ್ಲಿ ಸದಸ್ಯರನ್ನು ಕಾಣುತ್ತೇವೆ. ಆದರೆ ಮೀಸಲಾತಿ ಪರಿಕಲ್ಪನೆ ತಿಳಿಯಬೇಕಾದರೆ ಶಿಕ್ಷಣ ಪಡೆದಿರಬೇಕು. ಇಲ್ಲವೆ

ಇದರ ಬಗೆಗೆ ಅರಿವಿರಬೇಕು. ಮೀಸಲಾತಿ ಇದ್ದರೂ ಮೀಸಲಾತಿಯಿಂದ ವಂಚಿತರಾಗುವಂತಹ ಸ್ಥಿತಿಯು ಕಂಡುಬರುತ್ತಿದೆ.

ಕೊರವ ಸಮುದಾಯದವರು ಅರೆಅಲೆಮಾರಿಗಳಂತೆ ಜೀವನ ನಡೆಸುತ್ತಿದ್ದವರು. ರಾಜಕೀಯ ರಂಗದಲ್ಲಿ ತುಂಬಾ ಹಿಂದೆ ಬಿದ್ದಿದ್ದಾರೆ. ಅದಕ್ಕೆ ಕಾರಣ ಶಿಕ್ಷಣವಿಲ್ಲದಿರುವುದು ಸಮುದಾಯದ ಒಗ್ಗಟ್ಟಿನ ಕೊರತೆಯು ಎದ್ದು ಕಾಣುತ್ತದೆ. ಇಂದಿಗೂ ಚುನಾವಣೆ ಸಂದರ್ಭದಲ್ಲಿ ಮತಚಲಾವಣೆ ಮಾಡಬೇಕಾದರೆ ಇನ್ನೊಬ್ಬರು ಹೇಳಿದಂತೆ ಕೇಳುವ ಸಂದರ್ಭಗಳು ಅಧಿಕವಾಗಿದೆ. ರಾಜಕೀಯ ಅರಿವು ಕಡಿಮೆಯೇ? ಈ ಹಿನ್ನೆಲೆಯಲ್ಲಿ ಮೀಸಲಾತಿ ನೀಡಿದಾಗ ಅವರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧೆಯಲ್ಲಿ ಇಳಿಯಲು ಆರ್ಥಿಕ ನೆರವು ಅಷ್ಟೆ ಬೇಕಾಗುತ್ತದೆ. ಆದರೂ ಪ್ರಸ್ತುತ ಸಂದರ್ಭದಲ್ಲಿ ಪಂಚಾಯಿತಿ ಚುನಾವಣೆಯಲ್ಲಿ ಸದಸ್ಯರಾಗಿ ಪರಿಶಿಷ್ಟ ಜಾತಿಯ ಭೀಮಣ್ಣ ಕೊರವರು ಕಮಲಾಪುರ ೭ನೇ ವಾರ್ಡಿನ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಮತ್ತು ಜಿಲ್ಲಾ ಸದಸ್ಯರಾಗಿ ಮಹಿಳೆ ಜಯಶೀಲ ಕೊರವರು, ಕೊಪ್ಪಳದ ಕಾಂಗ್ರೇಸ್ ಸರ್ಕಾರದ ಬೆಂಬಲಿಗರಾಗಿ ರಾಮಣ್ಣ ಭಜಂತ್ರಿ ಕಾರ್ಯನಿರ್ವಹಿಸಿದರು. ಬೀದರಿನ ರವಿ ಭಜಂತ್ರಿ ಮರಕಲ್ಲ್‌ನಲ್ಲಿ ಗ್ರಾಮ ಅಧ್ಯಕ್ಷರಾಗಿ ಆಯ್ಕೆಯಾಗಿರುವುದುಂಟು ಕಾರಟಗಿಯಲ್ಲಿ ರಾಧ ಜೊತೆ ಜನ ಮಹಿಳೆಯರು ಗ್ರಾಮದ ಸದಸ್ಯರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಎಂಬುದು ತಿಳಿದುಬರುತ್ತದೆ.

ಆರೋಗ್ಯ ಮತ್ತು ನೈರ್ಮಲ್ಯ

ಕೊರವ ಸಮುದಾಯವು ವಾಸಿಸುವ ಸ್ಥಾನಗಳು ಸಾಮಾನ್ಯವಾಗಿ ಊರಹೊರಗಿನ ಪ್ರದೇಶಗಳು ಸ್ಲಂ ಏರಿಯಾಗಳು, ರೈಲುವೆ ಅಕ್ಕ ಪಕ್ಕಗಳಲ್ಲಿ ವಾಸಿಸುತ್ತಾರೆ. ಕೊಳಚೆ ಪ್ರದೇಶವು ಆಗಿರುವುದುಂಟು. ಇವರು ಮೊದಲಿನಿಂದಲೂ ಅನಿವಾರ್ಯವಾಗಿ ಇಂತಹ ಸ್ಥಳಗಳಲ್ಲಿ ವಾಸಮಾಡಬೇಕಾದ ಪ್ರಸಂಗ ಒದಗಿ ಬಂದಿರುತ್ತದೆ. ಇಂತಹ ಕಡೆಗಳಲ್ಲಿ ವಾಸಿಸುವಾಗ ಅನೇಕ ರೋಗ ರುಜಿನಗಳಿಗೆ ಬಲಿಯಾಗಬೇಕಾಗುತ್ತದೆ. ಜ್ವರ, ಕೆಮ್ಮು, ಮಲೇರಿಯಾ ಆಸ್ತಮಾ, ಸಿಡಬು ಮತ್ತು ದಡಾರ, ಚಿಕನಾಗುನ್ಯ, ಕ್ಯಾನ್ಸರ್ ಇನ್ನೂ ಮುಂತಾದ ರೋಗಕ್ಕೆ ಬಲಿಯಾಗುತ್ತಿರುವುದುಂಟು. ಊರೂರು ಅಲೆಯುವಾಗ ಕೆಸರು, ಕೆಲಸಕ್ಕೆ ಬಾರದ ವಸ್ತುಗಳ ಸಂಗ್ರಹಣೆಯನ್ನು ಸಂಗ್ರಹಿಸುವಾಗ ಬರುವ ರೋಗಗಳು. ಏಕೆಂದರೆ ಸುರಕ್ಷಿತ ಕ್ರಮವಾಗಿ ಯಾವುದೇ ವಸ್ತುಗಳನ್ನು ಬಳಕೆ ಮಾಡು ವುದಿಲ್ಲ. ಹಂದಿ ಸಾಕಾಣಿಕೆಯಲ್ಲಿ ಇವುಗಳಿಗೆ ಮುಸರಿ ಸಂಗ್ರಹಣೆ ಮಾಡಿ ಜೀವಿಸುವವರುಂಟು.

ಆಧುನಿಕ ವೈದ್ಯಕೀಯ ಸೌಲಭ್ಯಗಳಿದ್ದರೂ ಸಹ ಅವರು ತಮ್ಮದೇ ಆದ ವೈದ್ಯ ಪದ್ಧತಿಯನ್ನು ನಂಬಿಕೊಂಡಿರುವವರು ಜ್ವರ ಬಂದರೆ ಚುಟುಕು ಹಾಕುವುದು, ನಿಂಬೆಹಣ್ಣು ನಿವಾಳಿಸುವುದು, ದೈವದ ಕರೆದ್ಯೊಯುವುದು ಇಂತಹ ಹಲವಾರು ಪ್ರಸಂಗಗಳುಂಟು. ರೋಗವನ್ನು ವಾಸಿಮಾಡಲು

ನಾಟಿಔಷಧಿಯನ್ನು ನಂಬುವುದುಂಟು. ಮಕ್ಕಳು ಒಂದೇ ಸಮಾನೇ ಅಳುತ್ತಿದ್ದಾರೆ. ರಟ್ಟೆ ಹಿಡಿದು ನರಗಳನ್ನು ಸವರಿಸುತ್ತಾರೆ. ಈ ಸಂದರ್ಭದಲ್ಲಿ ಯಾರದೋ ಕೆಟ್ಟ ಕಣ್ಣು ತಗಲಿ ದೃಷ್ಟಿಯಾಗಿದೆ ಎಂದು ದೃಷ್ಟಿ ನಿರ್ವಹಣೆಗಾಗಿ ಪೊರಕೆಯ ಕಡ್ಡಿಗಳನ್ನು ಎಡಗೈಲಿ ಹಿಡಿದುಕೊಂಡು ಜೊತೆ ಉಪ್ಪು, ಸಾಸಿವೆ, ಕೂದಲು, ಈಚಲು, ಕಸಬಾರಿಗೆ ಕಡ್ಡಿಗಳನ್ನು ತೆಗೆದುಕೊಂಡು ಮಗುವಿಗೆ ನಿವಾಳಿಸಿದರೆ ದೃಷ್ಟಿ ಹೋಗುತ್ತದೆ. ಹೀಗೆ ಸಂಪ್ರದಾಯದಂತೆ ಬಂದಿರುವ ಕೆಲವೊಂದು ವಿಧಾನಗಳು ತಮ್ಮ ಮನೆಗಳಲ್ಲಿ ಹಾರೈಕೆ ಮಾಡಿಕೊಳ್ಳಲು ಸದಾ ಕೆಲಸ ನಿರ್ವಹಿಸುತ್ತಾರೆ. ಆದರೆ ರಟ್ಟೆಗೆ ಒಂದು ರೂಪಾಯಿ ನಾಣ್ಯ ತೆಗೆದುಕೊಂಡು ಬಿಳಿಬಟ್ಟೆಯಲ್ಲಿ ದೇವರ ಹೆಸರ್ಥೆಳಿ ಕಟ್ಟುತ್ತಾರೆ. ವಾಸಿಯಾದ ಮೇಲೆ ದೇವರ ಹುಂಡಿಗೆ ಹಾಕಲಾಗುತ್ತದೆ. ಹೊಟ್ಟೆ ಉಬ್ಬರವಾದರೆ ಅಜವಾನ ಕಾಳು ಅಗೆದು ಮೂಗು, ಕಿವಿ, ಹೊಟ್ಟಡ, ಬಾಯಿಗಳಿಗೆ (ಪಂಚೇಂದ್ರಿಗಳಿಗೆ) ಊದಿ, ಅಗೆದು ಕಾಳನ್ನು ಹೊಟ್ಟೆಯ ಮೇಲೆ ಇಡಲಾಗುತ್ತದೆ. ಹೊಟ್ಟೆ ಉಬ್ಬರ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇಂದಿಗೂ ಇದೆ.

ಶೈಕ್ಷಣಿಕ ಸಮಸ್ಯೆಗಳು

ಶಿಕ್ಷಣ ಎನ್ನುವುದು ಕತ್ತಲೆಯಿಂದ ಬೆಳಕಿನಡೆಗೆ ಕೊಂಡೊಯ್ಯುವ ಒಂದು ಸಾಧನ ಮತ್ತು ಸಮಾಜದ ಎಲ್ಲಾ ಸಮುದಾಯದ ಜನರಿಗೆ ಸನ್ಮಾರ್ಗ ತೋರುವ ದಾರಿದೀಪವಿದ್ದಂತೆ. ಬದಲಾವಣೆ ಹೊಂದುತ್ತಿರುವ ಸಮಾಜದಲ್ಲಿ ಸಮುದಾಯದ ಜ್ಞಾನವನ್ನು ಅರಿಯಲು ಅಕ್ಷರವು ಅಗತ್ಯ ಸಮಾಜಕ್ಕೆ ತಕ್ಕಂತೆ ಹೊಂದಿಕೊಂಡು ಹೋಗಲು ಸಹಾಯಕಾರಿ, ತಂತ್ರಜ್ಞಾನದ ಯುಗದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣಬೇಕು. ಶಿಕ್ಷಣದಿಂದ ತನ್ನಿಂದ ತಾನೆ ಅಭಿವೃದ್ಧಿಯಾಗಿಸುತ್ತದೆ. ಒಂದು ದೇಶ, ಸಮಾಜ, ಸಮುದಾಯ, ವ್ಯಕ್ತಿಯು ಮುಂದುವರೆಯಬೇಕಾದರೆ ಶಿಕ್ಷಣ ಮುಖ್ಯ ವ್ಯಕ್ತಿಯು ತನ್ನ ಸಮಾಜವನ್ನು ಅಭಿವೃದ್ಧಿ ಪಡಿಸಲು ಶ್ರಮಿಸಬೇಕು. ಅದರಿಂದ ವ್ಯಕ್ತಿ ಬೆಳೆದಂತೆಲ್ಲೂ ದೇಶದ, ಸಮಾಜದ, ಸಮುದಾದಿಂದ ಬೆಳವಣಿಗೆಗೆ ಸಹಾಯ ನೀಡುವುದು ಶಿಕ್ಷಣ.

ಡಾ. ಬಾಬಾಸಾಹೇಬ್ ಅಂಬೇಡ್ಕರ ಹೇಳಿದಂತೆ ಶಿಕ್ಷಣ ಸಂಘಟನೆ ಹೋರಾಟಗಳ ಮೂಲಕ ಸಮುದಾಯದ ಅಭಿವೃದ್ಧಿಯಾಗುತ್ತದೆ. ಎಂದು ಹೇಳಿದರು. ಬಡವರು ಅನಕ್ಷರಸ್ಥರು ಮತ್ತು ಮಹಿಳೆಯರ ಏಳ್ಗೆಗಾಗಿ ಪ್ರಜ್ಞಾವಂತರು ಹಾಗೂ ಜನಪರ ಚಿಂತಕರ ವಿಚಾರಗಳನ್ನು ಆಡಳಿತದಲ್ಲಿರುವವರು ಸಾಮಾಜಿಕ ನ್ಯಾಯಕ್ಕಾಗಿ ಸಕಾರಾತ್ಮಕವಾಗಿ, ಸಂವೇದಾನಾತ್ಮಕವಾಗಿ ಗ್ರಹಿಸಿ ವ್ಯಾಪಾರವಾಗಿ ಬದುಕಿನಲ್ಲಿ ಅಳವಡಿಸುವದು ವರ್ತಮಾನದ ಅಗತ್ಯವಾಗಿದೆ. ಇಂದು ಸಮುದಾಯದಲ್ಲಿ ಹಲವಾರು ಸಂಘಟನೆಗಳು ಹುಟ್ಟಿಕೊಂಡಿವೆ. ಆದರೆ ಈ ಸಂಘಟನೆಗಳು

ಶೋಷಿತರಪರವಾಗಿ ನೊಂದವರ ಪರವಾಗಿ ಸ್ವತಃಹ ಸಮುದಾಯಗಳ ಅಭಿವೃದ್ಧಿಗೆ ಯಾವ ರೀತಿಯಲ್ಲಿ ಸ್ಪಂದಿಸಿ ಕೆಲಸ ಮಾಡುತ್ತವೆ ಎನ್ನುವದು ಆಶ್ವರ್ಯಕರವಾಗಿದೆ. ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳು ಜನಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸುತ್ತವೆ. ಇದರ ಪ್ರಯೋಜನ ಪಡೆದುಕೊಳ್ಳಲು ಎಷ್ಟು ಜನ ಮುಂದಾಗುತ್ತಾರೆ. ಪ್ರಯೋಜನಗಳ ಅರಿವಿಲ್ಲದೆ ಇರುವವರ ಅಭಿವೃದ್ಧಿ ಎಂಬುದು ಎಲ್ಲಿ? ಎಂಬ ಪ್ರಶ್ನೆ ನಮ್ಮ ಮುಂದಿದೆ. ಆದರೆ ಪರಸ್ಪರ ಸಹಕಾರದ ಮೂಲಕ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಯಾವುದೇ ಸಂಘಟನೆಗಳು ಹುಟ್ಟುಹಾಕಬೇಕಾಗಿದೆ. ಇನ್ನು ಕೆಲವು ಹುಟ್ಟಿವೆ ಸಂಸ್ಥೆಗಳು ಸ್ಥಾಪನೆಗೊಂಡರೂ ಸಹ ಹೊಂದಾಣಿಕೆ ನಂಬಿಕೆ ಮತ್ತು ವಿಶ್ವಾಸಗಳ ಮೂಲಕ ನಡೆಯಬೇಕು. ವಿಶ್ವಾಸ, ನಂಬಿಕೆಯು ಇಲ್ಲವಾದರೆ ಹಂತ ಹಂತವಾಗಿ ಸಂಘಸಂಸ್ಥೆಗಳ ಬಿರುಕು ಬಿಡುತ್ತಾ ಹೋಗುತ್ತಿವೆ. ತಮ್ಮ ರಾಜಕೀಯ ಕಾರ್ಯಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

ಕೆಳ ಸಮುದಾಯಗಳ ಅಭಿವೃದ್ಧಿಗಾಗಿ ಎಂದು ಹೇಳಿಕೊಳ್ಳುವ ಸಂಘಟನೆಗಳು ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರವರು ತಿಳಿಸಿರುವ ದಲಿತೋದ್ಧಾರ ಪರಿಕಲ್ಪನೆಯನ್ನು ಗಾಳಿಗೆ ತೂರಿ ದಲಿತ ಮುಖಂಡರು ತಮ್ಮ ಸ್ವಾರ್ಥ ಸಾಧನೆ ಹಾಗೂ ಅಧಿಕಾರದ ಆಸೆಗಾಗಿ ಸಂಘಟನೆ ಗಳನ್ನು ಬಳಸಿಕೊಂಡು ಹೊರನೋಟಕ್ಕೆ ಮಾತ್ರ ಕೆಳವರ್ಗಗಳ ಪರ ಹೋರಾಟ ಮಾಡಲಾಗುತ್ತಿದೆ ಎಂಬ ವಾದಗಳು ಕೇಳಿಬರುತ್ತಿವೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳು ಸಮುದಾಯದ ಬದುಕಿನ ಆಸ್ಮಿತೆಯಾಗಿರಬೇಕೆಂದು ಹೇಳುತ್ತಾರೆ. ಸ್ವತಂತ್ರ ಪಡೆದು ಇಷ್ಟು ವರ್ಷಗಳ ನಂತರವೂ ಈ ಮೀಸಲಾತಿಯ ಉದ್ದೇಶಗಳು ಈಡೇರದಿರುವುದಕ್ಕೆ ಆತ್ಮವಲೋಕನ ಮಾಡಿಕೊಳ್ಳಬೆಕಾಗುತ್ತದೆ. ಇವೆಲ್ಲವನ್ನು ಮಾಡಬೇಕಾದರೆ ಸಮುದಾಯದ ಜನರಲ್ಲಿ ಶಿಕ್ಷಣದ ಮೀಸಲಾತಿಯ ತಿಳುವಳಿಕೆಯು ಇರಬೇಕಾಗುತ್ತದೆ.

ಇಂದಿನ ಮಕ್ಕಳಿಗೆ ನಾಳಿನ ಪ್ರಜ್ಞೆಗಳು ಎಂಬಂತೆ ಸಮುದಾಯ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಮುಂದೆ ಸಮುದಾಯಗಳು ಅಭಿವೃದ್ಧಿಗೆ ಕಾರಣವಾಗುತ್ತದೆ. ಪ್ರತಿಯೊಬ್ಬ ಮಗುವಿನ ಹಕ್ಕು ಹಾಗೂ ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಮಗು ತನ್ನ ನಿರ್ದಿಷ್ಟ ಕೆಲಸ ಕಾರ್ಯಗಳನ್ನು ಸಾಗಿಸಲು ಅವಶ್ಯವಿದ್ದ ವ್ಯವಹಾರಜ್ಞಾನ ಪಡೆಯಲು ಹಾಗೂ ತನ್ನ ಹೊಣೆಯನ್ನು ಯೋಗ್ಯವಾಗಿ ನಿರ್ವಹಿಸಿ ನೆರಹೊರೆಯವರು ಹಾಗೂ ತನ್ಮೂಲಕ ದೇಶದ ಅಭಿವೃದ್ಧಿಗೆ ಪೋಷಕವಾಗುವಂತೆ ಸಹಕಾರ ನೀಡಲು ಸಮರ್ಥರಾಗಬೇಕು. ಈ ದಿಸೆಯಲ್ಲಿ ಬಡವ ಬಲ್ಲಿದರೆನ್ನದೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಸರ್ಕಾರಿ ಶಾಲೆ ಬಹುಪಾಲು ಮಕ್ಕಳು ಕೊಳಚೆ ಪ್ರದೇಶದಿಂದ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಕುಟುಂಬಗಳಿಂದ ಬಂದಂತಹ ಮಕ್ಕಳಾಗಿದ್ದಾರೆ.

ಮಗು ಶಾಲೆಗೆ ಗೈರು ಹಾಜರಾಗುವುದು

ಕಲಿಕೆಯಲ್ಲಿ ನಿರಾಸಕ್ತಿ

ಒತ್ತಕ್ಷರಗಳನ್ನು ಕಲಿಯುವಲ್ಲಿ ನಿರಾಸಕ್ತಿ

ಮಾತೃಭಾಷೆ ಬೇರೆಯಾಗಿರುವುದು.

ಪೋಷಕರು ಆಸಕ್ತಿ ತೋರದಿರುವುದು

ಬಡತನದ ಕಾರಣದಿಂದ ಮಕ್ಕಳನ್ನು ಕೆಲಸಕ್ಕೆ ಕಲಿಸುವುದು ಇಂತಹವನ್ನು ಹೋಗಲಾಡಿಸಲು ಶಿಕ್ಷಣವು ಸಮುದಾಯ ಮಾರ್ಗದರ್ಶಿಯಿದ್ದಂತೆ ಸಮಾಜದಲ್ಲಿ ನಡೆಯುವ ವೃತ್ತಿ, ಪಶುಪಾಲನೆಗಳು ಇರುವವರು ಶಿಕ್ಷಣದ ಜೊತೆಗೆ ವೃತ್ತಿ ಶಿಕ್ಷಣ, ಆರೋಗ್ಯ, ನೈರ್ಮಲ್ಯ ಪ್ರಜ್ಞೆ, ದನಕರುಗಳ, ಆರೋಗ್ಯ ರಕ್ಷಣೆ, ಆಧುನಿಕ ವ್ಯವಸಾಯ ಕುರಿತು, ಗೃಹ ಮತ್ತು ಗುಡಿ ಕೈಗಾರಿಕೆಗಳ ತರಬೇತಿಗಳಿಗೆ ಶಿಕ್ಷಣದ ಅರಿವು ಮೂಡಿಸುವುದು. ಸಮುದಾಯ ಹಂದಿ ಸಾಕಾಣಿಕೆಯಿಂದ ಸರ್ಕಾರದ ಸೌಲಭ್ಯಗಳನ್ನು ಪಡೆಯುವುದು ಶಿಕ್ಷಣದಿಂದ ಎಂಬುದು ತಿಳಿದುಬರುತ್ತದೆ. ಆದರೆ ಜನರಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣವು ತಮ್ಮ ಜೀವನಕ್ಕೆ ಯಾವ ಉಪಯೋಗವಾಗುವುದಿಲ್ಲವೆಂದು ಭಾವಿಸಿರುವುದು. ಶಿಕ್ಷಣವು ಕೇವಲ ಪ್ರಸ್ತಾರದ ಜ್ಞಾನವನ್ನು ಮಾತ್ರ ಒದಗಿಸುತ್ತದೆ. ಆದರೆ ಜನರ ಜೀವನದ ಈ ಸಮಾಜ ಉದ್ದೇಶಗಳಿಗೆ ಸಂಬಂಧವನ್ನು ಕಲ್ಪಿಸುವುದಿಲ್ಲ ಎಂದು ಭಾವಿಸಿರುವುದು. ದುಬಾರಿ ಪ್ರಸ್ತುತ ದಿನಗಳಲ್ಲಿ ಶಿಕ್ಷಣವು ಬಡವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ಶುಲ್ಕ, ದೇಣಿಗೆ, ಪುಸ್ತಕ ಮೊದಲಾವು ಕೊಡುವುದು ಸಾಧ್ಯವಾಗುತ್ತಿಲ್ಲ. ಆದುದರಿಂದ ಅನೇಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಮಕ್ಕಳು ತಮ್ಮ ಕಸುಬು ಮಾಡಿಕೊಳ್ಳಲು ಬಳಸಿಕೊಳ್ಳತ್ತಿದ್ದಾರೆ.

ಪೆರಿಯಾರ ರಾಮಸ್ವಾಮಿ ಅವರು ಎಲ್ಲಿ ಪುರುಷರು ಮತ್ತು ಸ್ತ್ರೀಯರು ಗೌರವದಿಂದ ಜೀವಿಸಲೇಬೇಕು. ಅವರಿಗೆ ಶಾರೀರಿಕ, ಮಾನಸಿಕ ಮತ್ತು ನೈತಿಕವಾಗಿ ಅಭಿವೃದ್ಧಿಯಾಗಲು ಸರಿಸಮನಾದ ಅವಕಾಶಗಳು ಇರಬೇಕು ಇದನ್ನು ಸಾಧಿಸಬೇಕಾದರೆ ಎಲ್ಲಾ ಅನ್ಯಾಯದಿಂದ ಕೂಡಿದ ಭೇದಭಾವನೆಗಳನ್ನು ಕೊನೆಗಾಣಿಸಬೇಕು. ಸಾಮಾಜಿಕ ನ್ಯಾಯ ಮತ್ತು ವೈಚಾರಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಿರಿ ಎಂಬುದಾಗಿದೆ. "ಸಮಾಜದ ಪುನರ್ನಿರ್ಮಾಣವಾಗುವ ತನಕ ಜಾತಿವಾರು ಪ್ರಾತಿನಿಧ್ಯ ಇರಬೇಕೆಂದು ಅದು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಒಂದು ಹೆಜ್ಜೆಯಾಗಿದೆ ಎನ್ನುತ್ತಾರೆ"(ಪು ೩ ಪೆರಿಯಾರ್ ಫಿಲಾಸಫಿ ಸಂ.ಕೆ. ವೀರಮಣಿ ಅನು ಕೆ ಮಾಯಿಗೌಡ ಸ್ವಪ್ನ ಬುಕ್‌ಹೌಸ್, ಬೆಂಗಳೂರು ೨೦೧೪)

ಸಂಪ್ರದಾಯಕ್ಕೆ ಕಟ್ಟು ಬೀಳುವ ಮತ್ತು ಹೊಸ ಚಿಂತನೆಗಳಿಗೆ ತೆರೆದುಕೊಳ್ಳುವ ಸಮಾಜ ಕೊಳೆಯುತ್ತದೆ ಮತ್ತು ಅಂಥ ಸಮುದಾಯಗಳು ದುರ್ಬಲವಾಗಿರುತ್ತದೆ ಎಂಬುದು ಸತ್ಯಸಂಗತಿ.

ಹಿಂದಿನಿಂತಲೂ ಬಂಡವಾಳಶಾಹಿಗಳು ತಮ್ಮ ಲಾಭಕ್ಕಾಗಿ ಮಾಡಿರುವ ಆಂತರಿಕ ವಸಾಹುತು ಶಾಹಿಯೇ ಆಗಿದೆ. ಇಂದಿನ ಪರಿಸ್ಥಿತಿಯು ಬೇರೆಯಾಗಿಲ್ಲ. ನವವಸಾಹತುಶಾಹಿಯೇ ಆಗಿದೆ ಎಂದು ಹೇಳಬೇಕು ಎಂಬುವವರು ಬಂಡವಾಳರಾರೇ ಅಧಿಕ. ಈ ಅಧಿಕಾರದ ನಡುವೆಯೇ ಜನಸಾಮಾನ್ಯರು ಬದುಕಬೇಕಾಗಿದೆ. ಅದರಲ್ಲಿ ಕೊರವ ಸಮುದಾಯವು ಒಂದು. ಕಾಯಕವೇ ಕೈಲಾಸ ಎಂಬ ಬಸವಣ್ಣ ಅವರ ಮಾತಿನಂತೆ ವ್ಯಕ್ತಿ ಕಾರ್ಯದಿಂದ ಮೇಲ್ಬರಲು ಸಾಧ್ಯ. ಹಾಗಾದರೆ ಅವರ ಸ್ವಾಭಿಮಾನದಿಂದ ಬದುಕುವ ಜೀವನವನ್ನು ಸುವ್ಯವಸ್ಥಿತಗೊಳಿಸಿಕೊಳ್ಳಲು ಪ್ರಯತ್ನಿಸಬೇಕಾಗುತ್ತಿದೆ. ಜಾಗತೀಕರಣ ಸಂದರ್ಭದಲ್ಲಿ ತಮ್ಮ ವೃತ್ತಿ ಕಾರ್ಯಕ್ಕೆ ಬೇಕಾದ ವಸ್ತುಗಳು ದೊರೆಯದೇ, ಇಂದಿನ ವೃತ್ತಿಗೆ ಅರ್ಹತೆ ಇಲ್ಲವೆ ಎಂಬ ದ್ವಂದ್ವ ಸ್ಥಿತಿಯಲ್ಲಿ ಇರಬೇಕಾದ ಪರಿಸ್ಥಿತಿ ಇದೆ. ಅದಕ್ಕೆ ಮುಖ್ಯ ಕಾರಣ ಶಿಕ್ಷಣ ಇಲ್ಲದಿರುವುದು. ಶಿಕ್ಷಣ ಹೊಂದಿದರೂ ಆರ್ಥಿಕತೆಯ ಬಲವಿಲ್ಲದಿರುವುದು, ಸಮಾಜದಲ್ಲಿ ಅವನಿಗೆ ಅಸ್ತಿತ್ವದ ನೆಲೆಯಲ್ಲಿರುವುದು ಕಂಡುಬರುತ್ತದೆ.

ಬಹುಕಾಲದಿಂದ ಬುಟ್ಟಿ ಹೆಣೆಯುವುದು, ಕಸಬಾರಿಗೆ ಕಟ್ಟುವುದು ಕೂಲಿ ಕೆಲಸ ಮಾಡುವುದು, ಹಣ್ಣು ವ್ಯಾಪಾರ, ಬಿಜಿನೆಸ್, ಸಣ್ಣಪುಟ್ಟ ವ್ಯಾಪಾರಗಳು, ಬ್ಯಾಂಡ್ ಬಾರಿಸುವುದು, ಸರ್ಕಾರಿ, ಖಾಸಗಿ ಶಾಲೆಯಲ್ಲಿರುವ ಶಿಕ್ಷಕರು ಇರುವುದು ಕಂಡುಬರುತ್ತದೆ. ಎಲ್ಲಾ ಕೆಲಸಗಳಲ್ಲಿಯೂ ಕಾರ್ಯನಿರ್ವಹಿಸುವರೇ ಆಗಿರುತ್ತಾರೆ(೨೦೧೧ರ ಜನಗಣತಿ ಪ್ರಕಾರ ಸಾವಿರ ಪುರುಷರಿಗೆ ೯೪೦ ಜನ ಮಹಿಳೆಯರು ಕಾಣುತ್ತಾರೆ). ಅನೇಕ ಕಾನೂನುಗಳು ಬಂದು ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ನಿಷೇಧಿಸಿದೆ. ಆದರೆ ಸಮುದಾಯಗಳಿಗೆ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಜೊತೆಗೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡಿದ್ದಾರೆ. ಆಹಾರ, ವಸತಿ, ಆರೋಗ್ಯ ಮೊದಲಾದ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ ಕೊರವ ಸಮುದಾಯಗಳಿಗೆ ಇದರ ತಿಳುವಳಿಕೆ ಮೂಡಿಸುವ ಅಗತ್ಯವಿದೆ. ತಿಳುವಳಿಕೆ ಇದ್ದರೂ ಅದನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು. ಯಾವ ಯೋಜನೆಗಳ ಬಗೆಗೆ ಮಾಹಿತಿ ಇಲ್ಲದಿರುವುದು ವಿಪರ್ಯಾಸ.

ಸಮುದಾಯವನ್ನು ಅಜ್ಞಾನದಿಂದ ಜ್ಞಾನ, ಜ್ಞಾನದಿಂದ ಬುದ್ಧಿವಂತಿಕೆ, ಬುದ್ಧಿವಂತಿಕೆಯಿಂದ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆಯ ಶಿಕ್ಷಣದ ಮೂಲಕ ಆಗುತ್ತಿದೆಯೆಂದು ಹಲವಾರು ಕಾರ್ಯಕ್ರಮಗಳಲ್ಲಿ ತಿಳುವಳಿಕೆ ಹೇಳಲಾಗುತ್ತಿದೆ. ಮನುಷ್ಯನ ವ್ಯಕ್ತಿತ್ವವನ್ನು ಸಾಮರ್ಥ್ಯಗಳ ಬೆಳವಣಿಗೆಗೆ ಮತ್ತು ಸಮುದಾಯದ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಶಿಕ್ಷಣವು ಸಹಕಾರಿಯಾಗುತ್ತದೆ. ಇದು ಮನುಷ್ಯನ ನಿರಂತರವಾದ ಸೃಜನಾತ್ಮಕ ಬೆಳವಣಿಗೆಯ ಪ್ರಕ್ರಿಯೆಯಾಗಿದೆ. ಪ್ರಸ್ತುತ ದಿನಗಳು ಸಾಮಾಜಿಕ, ರಾಜಕೀಯ, ಅಭಿವೃದ್ಧಿಯನ್ನು ತಿಳಿದುಕೊಳ್ಳಲು ಶಿಕ್ಷಣ ಅನುಕೂಲ

ಮತ್ತು ಅವಶ್ಯಕತೆಯಾಗಿದೆ. ಶಿಕ್ಷಣ ಪಡೆಯುವುದು ಪ್ರತಿಯೊಬ್ಬ ಮನುಷ್ಯನ ಮೂಲಭೂತ ಅವಶ್ಯಕತೆಯಾಗಿದೆ. ಎಲ್ಲ ವರ್ಗಗಳಿಗೂ ಶಿಕ್ಷಣಬೇಕು. ಹೆಣ್ಣು ಗಂಡೂ ಮಕ್ಕಳಿಗೂ ಶಿಕ್ಷಣವು ಅನಿವಾರ್ಯವಾಗಿದೆ. ಆದರೆ ಕೊರವ ಸಮುದಾಯದಲ್ಲಿ ಶಿಕ್ಷಣದಿಂದ ಹಿಂದೆ ಇರುವುದು ಕಾಣುತ್ತೇವೆ. ಭಾರತದ ಸಂವಿಧಾನವು ರಚನೆಯಾಗಿ ಶಿಕ್ಷಣಕ್ಕೆ ಪ್ರಮುಖ ದಾರಿಮಾಡಿದವರು ಬಿ.ಆರ್.ಅಂಬೇಡ್ಕರ್. ಹತ್ತು ವರ್ಷಗಳೊಳಗಾಗಿ ಎಲ್ಲಿ ಮಕ್ಕಳಿಗೆ ಅವರು ೬-೧೪ ವರ್ಷ ಮುಗಿಯುವರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಎಲ್ಲಿ ಪ್ರಯತ್ನ ಸರ್ಕಾರ ಮಾಡಬೇಕೆಂದು ತಿಳಿಸಿದೆ. ೨೦೦೯ರಲ್ಲಿ ಶಿಕ್ಷಣದ ಹಕ್ಕು ಕಾಯಿದೆಯನ್ನು ಜಾರಿಗೆ ತರಲಾಗಿದೆ. ಈ ಮಾಹಿತಿಯು ಶಿಕ್ಷಣ ಪಡೆದವರಿಗೆ ಮಾತ್ರ ತಿಳಿಯುತ್ತದೆ.

ಶಿಕ್ಷಣ ಎಂಬುದು ಒಬ್ಬ ವ್ಯಕ್ತಿಯ ಮತ್ತು ಸಮುದಾಯದ ಅಭಿವೃದ್ಧಿಯ ಸಂಕೇತ ಎಂದು ಹೇಳಬೇಕು. ಪ್ರಪಂಚದ ವಿದ್ಯಮಾನಗಳನ್ನು ಅರಿತುಕೊಳ್ಳಲು ಶಿಕ್ಷಣದ ಅತ್ಯಗತ್ಯವಾಗಿದೆ. ತಮ್ಮ ಕಸುಬುಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದರಿಂದ ಶಿಕ್ಷಣವನ್ನು ಪಡೆದುಕೊಳ್ಳಲು ಆಗುತ್ತಿಲ್ಲ. ತಮ್ಮ ಮಕ್ಕಳನ್ನು ಆಧುನಿಕತೆಗೆ ಮುಖಮಾಡಿ ಸ್ಪರ್ಧಿಸುವಂತೆ ಮಾಡಲು ಅಡ್ಡಿಯಾಗುತ್ತಿದೆ. ಆದರೆ ಇಂದಿಗೂ ಶಿಕ್ಷಣವನ್ನು ೦-೧೪ ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದರೂ ಮನೆಯ ಪರಿಸರದಿಂದಾಗಿ ಕೆಲವು ಮಕ್ಕಳು ದುಡಿಮೆಗಾಗಿ ಶಾಲೆಗಳನ್ನು ಬಿಡುವ ಸಂದರ್ಭಗಳು ಉಂಟಾಗುತ್ತಿವೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಸರ್ಕಾರವು ಉಚಿತ ಪುಸ್ತಕ, ಬಟ್ಟೆ, ಅನ್ನಭಾಗ್ಯ, ಹಾಲು, ಮೊಟ್ಟೆ ಎಲ್ಲವನ್ನು ನೀಡುತ್ತಿದ್ದರೂ ಸಮುದಾಯದ ಗಮನ ಹರಿಯುತ್ತಿಲ್ಲ ಎಂದೇ ಹೇಳಬೇಕಾಗುತ್ತದೆ. ಸರ್ಕಾರವು ಉಚಿತವಾಗಿ ಸೌಲಭ್ಯಗಳನ್ನು ನೀಡಿದರೂ ಸಹ ಹೈದರಾಬಾದ್ ಕರ್ನಾಟಕದ ಕೊರವರ ಶೈಕ್ಷಣಿಕ ಮಟ್ಟ ತಲುಪಿಲ್ಲ. ಸೌಲಭ್ಯಗಳು ಪಡೆಯುವಲ್ಲಿ ವಿಫಲವಾಗುತ್ತಿದೆ. ಶಿಕ್ಷಣ ಪಡೆಯುವುದರಿಂದ ಮೀಸಲಾತಿ ಮತ್ತು ಆರ್ಥಿಕವಾಗಿ ಸಬಲನಾಗಲು ಅನುಕೂಲವಾಗುತ್ತದೆ. ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವೆನೆಂದರೆ ಆರ್ಥಿಕ ಸಮಸ್ಯೆ, ಶಿಕ್ಷಣ ಪಡೆಯುವಲ್ಲಿ ಮಾರ್ಗದರ್ಶನದ ಕೊರತೆ ತಮ್ಮ ಭಾಷೆ ಮಾತಾನಾಡುತ್ತಿರುವುದರಿಂದ ಕನ್ನಡ ಸ್ಪಷ್ಟವಾಗಿ ಬಾರದೆ ಇರಬಹುದು, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆದುಕೊಳ್ಳುವಿಕೆಯ ಅರಿವು ಇಲ್ಲದಿರುವುದು, ಕಚೇರಿಗಳಿಗೆ ಪದೇ ಪದೇ ಅಲೆಯುವಿಕೆ ಇನ್ನು ಮೊದಲಾದವು ಕಾರಣವಾಗುತ್ತಿದೆ.

ನ್ಯಾಯ ಪದ್ಧತಿ

"ಬುಡಕಟ್ಟುಗಳಲ್ಲಿ ಜಾತಿ ಪಂಚಾಯಿತಿಗಳು ಕಾರಣವಾಗಿತ್ತು. ಜಾತಿ ನಿಯಮಗಳನ್ನು ಮೀರಿದವರನ್ನು ಪಂಚಾಯಿತ ಕಟ್ಟೆ ಮತ್ತು ಚಾವಡಿಯಲ್ಲಿ ಆಯಾ ಬುಡಕಟ್ಟು ಸಮುದಾಯದ ಎಲ್ಲಾ ಮುಖ್ಯಸ್ಥರು ಸೇರಿ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಅಪರಾಧಿಗಳೆಂದು ತೀರ್ಮಾನಿಸಿ

ಜಾತಿಯಿಂದ ಹೊರಗೆ ಹಾಕುತ್ತಿದ್ದರು. ಈ ರೀತಿ ಜಾತಿ ಸಮೂಹಗಳ ಆಶ್ರಯವನ್ನು ಕಳೆದುಕೊಂಡ ಕುಟುಂಬಗಳು ಬಲಹೀನವಾಗಿ ಅಲೆಮಾರಿ ಅಪರಾಧಿ ಬುಡಕಟ್ಟುಗಳಾಗಿ ಹುಟ್ಟಿಕೊಂಡವು. ಈ ಅಪರಾಧಿ ಬುಡಕಟ್ಟುಗಳು ಎಚ್ಚರದಿಂದ ಇರಲು ಹಾಗೂ ಇವುಗಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಬ್ರಿಟೀಷ ಸರ್ಕಾರ ಇಂತಹ ಗುಂಪುಗಳನ್ನು ಪತ್ತೆ ಹಚ್ಚಿ ಅಧಿನಿಯಮಗಳನ್ನು ರಚಿಸಿತು. ಅವು ಅಪರಾಧಿ ಬುಡಕಟ್ಟು ನಿಯಮ ಅಧಿನಿಯಮ ೧೮೭೧, ಅಪರಾಧಿ ಬುಡಕಟ್ಟು (ತಿದ್ದುಪಡಿ) ಅಧಿನಿಯಮ ೧೮೯೭. ಅಪರಾಧಿ ಬುಡಕಟ್ಟು ಅಧಿನಿಯಮ ೧೯೧೧, ಅಪರಾಧಿ ಬುಡಕಟ್ಟು ಅಧಿನಿಯಮ ೧೯೨೪, ಅಪರಾಧಿ ಬುಡಕಟ್ಟು (ತಿದ್ದುಪಡಿ) ಅಧಿನಿಯಮ ೧೯೪೭ ಈ ಅಧಿನಿಯಮಗಳಲ್ಲಿ ಬೇಡ ಬಿಲ್, ಪಾರ್ಧಿ, ತಡ್ವಿ, ಇರುಳ, ಕುರುಬ, ಯನಾದಿ, ಗೊಂಡ ಇತ್ಯಾದಿ ಬುಡಕಟ್ಟು ಅಲ್ಲಲ್ಲಿ ಸೇರಿಕೊಂಡಿದೆ." (ಬುಡಕಟ್ಟು ಕುಲಕಸುಬು, ಪಿ.೩೨ ಕೆ.ಎಂ. ಮೇತ್ರಿ ೨೦೦೨) ಅಪರಾಧಿ ಬುಡಕಟ್ಟು ಪಟ್ಟಿಯಲ್ಲಿ ಕೊರವ ಸಮುದಾಯವು ಸೇರಿದ್ದು, ಅಪರಾಧಿ ಬುಡಕಟ್ಟುಗಳು ಪಟ್ಟಿಯಲ್ಲಿ ಸೇರಿದ್ದು ಬೇರೆ ವಿಷಯವೇ. ಆದರೆ ಅವರಲ್ಲಿರುವ ನ್ಯಾಯಗಳು ಆಧುನಿಕ ನ್ಯಾಯ ವ್ಯವಸ್ಥೆಗೆ ಮುಖಾಮುಖಿಯಾಗುತ್ತಿವೆ. ಇವು ಅಭಿವೃದ್ಧಿಗೆ ಕಾರಣವಾಗಿರಬಹುದು ತಮ್ಮ ಸಂಪ್ರದಾಯಿಕ ನ್ಯಾಯ ವ್ಯವಸ್ಥೆಯನ್ನು ನಂಬಿ ಬದುಕುತ್ತಿದ್ದರೆ. ಕೊರವ ಸಮುದಾಯದಲ್ಲಿಯು ನ್ಯಾಯ ವ್ಯವಸ್ಥೆಯನ್ನು ಜಾಗತೀಕರಣದಲ್ಲಿಯೂ ಕಂಡುಬರುತ್ತದೆ. ಸಣ್ಣಪುಟ್ಟ ಅಪರಾಧಗಳಿಗೆ ಸಮುದಾಯದ ವ್ಯಕ್ತಿಗೆ ಶಿಕ್ಷೆ ವಿಧಿಸುವುದುಂಟು ಉದಾಹರಣೆ ತಪ್ಪು ಮಾಡಿದಾಗ, ವಿವಾಹ ಮುರಿದಾಗ, ಮಾತಿಗೆ ತಪ್ಪಿದಾಗ, ಮೋಸ ಮಾಡಿದರೆ ಸಮುದಾಯದ ದೇವಾಲಯದಲ್ಲಿ ದೈವದವರ ಸಮ್ಮುಖದಲ್ಲಿ ನ್ಯಾಯವನ್ನು ತೀರ್ಮಾನಿಸಲಾಗುವುದುಂಟು. ಇಂದಿನ ನ್ಯಾಯಪದ್ಧತಿಗೂ ಒಳಪಡಿಸಿರುವುದುಂಟು. ದೊಡ್ಡ ತಪ್ಪುಗಳನ್ನು ಮಾಡಿದಾಗ ಅನಿವಾರ್ಯವಾಗಿ ಕೋರ್ಟ್, ಕಚೇರಿ, ಅತ್ತಬೇಕಾಗತ್ತದೆ. ಉದಾಹರಣೆ: ಅಣ್ಣ ತಮ್ಮಂದಿರ ಆಸ್ತಿ ವಿಷಯದಲ್ಲಿ, ಕಳ್ಳತನ ಮಾಡಿದಲ್ಲಿ, ಪ್ರೇಮ ವಿವಾಹದ ಸಂದರ್ಭದಲ್ಲಿ ಇನ್ನು ಮುಂತಾದ ವಿಷಯಕ್ಕೆ ನ್ಯಾಯಾಲಯಕ್ಕೆ ಹೋಗುವುದುಂಟು.

ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ನ್ಯಾಯ ಪಂಚಾಯಿತಿ ವ್ಯವಸ್ಥೆಯು ಕೊರವ ಸಮುದಾಯದಲ್ಲಿ ಅತ್ಯಂತ ಮಹತ್ವದ ಅಂಶವಾಗಿತ್ತು. ಬುಡಕಟ್ಟು ಪ್ರತಿಯೊಂದು ಸಮುದಾಯದಲ್ಲಿನ ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ನ್ಯಾಯ ಪದ್ಧತಿಯನ್ನು ನಡೆಸುತ್ತಿದ್ದರು. ಇಂದು ಪೊಲೀಸ್ ಠಾಣೆ ಮತ್ತು ಕೋರ್ಟ್‌ಗಳು ಇದ್ದಂತೆ ಎಂದೇ ಹೇಳ ಬೇಕಾಗುತ್ತದೆ. ಶಾಂತ ವಾತಾವರಣವನ್ನು ಮುಂದುವರೆಸಿಕೊಂಡು ಹೋಗಲು ತಮ್ಮದೇ ಆದ ಪ್ರತ್ಯೇಕ ನ್ಯಾಯ ಪಂಚಾಯಿತಿಗಳ ವ್ಯವಸ್ಥೆ ಇದೆ. ಅದು ಜಾತಿ ಪಂಚಾಯಿತಿ ಎನ್ನುತ್ತಾರೆ. ಕೊರವ ಸಮುದಾಯದಲ್ಲಿ ದೈವದವರು ಎಂದು ಕರೆಯುತ್ತಾರೆ. ಜಾತಿ ಪಂಚಾಯಿತಿಯಲ್ಲಿ

ಸದಸ್ಯರನ್ನು ಹಿರಿಯರು, ಯಾಜಮಾನರು ಇರುವುದುಂಟು. ಮದುವೆಯ ಕಾರ್ಯದಲ್ಲಿ ತಪ್ಪು ಮಾಡಿದಾಗ ಸಮುದಾಯದ ದೈವದವರು(ಸಮುದಾಯದ ವ್ಯಕ್ತಿಗಳೆ ಆಗಿರುತ್ತಾರೆ) ಸಮಯೋಜನೆ ಮಾಡಿ ಒಂದು ನಿರ್ಣಯವನ್ನು ಕೈಗೆತ್ತಿಕೊಂಡು ಸಮುದಾಯದ ಐಕ್ಯತೆಯನ್ನು ಮತ್ತು ಸಮಾಜದಲ್ಲಿ ಒಳ್ಳೆಯರಾಗಿ ಬದುಕುವಂತೆ ಹೇಳಲಾಗುತ್ತದೆ.

ಈ ನ್ಯಾಯ ಪದ್ಧತಿಯಲ್ಲಿ ನ್ಯಾಯ ನಿರ್ಣಯ ಮಾಡುವವರಿಗೆ ೧೦-೧೫ ವರ್ಷಗಳ ಹಿಂದೆ ಸಾರಾಯಿ ಕುಡಿಸುವ ಪದ್ಧತಿಯಾಗಿದೆ. ಜಾತಿಯ ನಿಯಮಗಳನ್ನು ಕಟ್ಟುಕಟ್ಟಳೆಗಳನ್ನು ಉಲ್ಲಂಘನೆ ಮಾಡಿದರೆ ಅಂಥವರನ್ನು ಜಾತಿಯಿಂದ ಬಹಿಷ್ಕರಿಸುತ್ತಾರೆ. ಪುಸ್ತುತ ಸಂದರ್ಭದಲ್ಲಿಯೂ ಪ್ರೇಮ ವಿವಾಹವಾದಾಗ ಜಾತಿಯಿಂದ ಬಹಿಷ್ಕರಿಸುತ್ತಾರೆ. ದಂಡವನ್ನು ದೈವದವರಿಗೆ ನೀಡಬೇಕಾಗುವುದು. ಇದು ಪ್ರತಿಯೊಂದು ಬುಡಕಟ್ಟು ಸಮುದಾಯಗಳಲ್ಲಿಯೂ ನಡೆದುಕೊಂಡು ಬಂದಿರುವ ಪದ್ಧತಿ. ನ್ಯಾಯ ನಿರ್ಣಯ ಮಾಡುವ ಜಾಗವನ್ನು ಬುಡಕಟ್ಟುಗಳು ಚಾವಡಿ ಎನ್ನುತ್ತಾರೆ. ಆದರೆ ಕೊರವ ಸಮುದಾಯದಲ್ಲಿ ಟೀ ಅಂಗಡಿಗಳು, ದೇವಾಲಯಗಳಲ್ಲಿ ನ್ಯಾಯ ನಿರ್ಣಯ ಮಾಡಲಾಗುತ್ತಿತ್ತು. ಇಂದು ಸಮುದಾಯದ ದೇವಾಲಯದಲ್ಲಿ ಇಲ್ಲವೆ ಪೊಲೀಸ್ ಠಾಣೆಯಲ್ಲಿ ಮತ್ತು ಕೋರ್ಟ್‌ಗಳಲ್ಲಿ ನ್ಯಾಯನಿರ್ಣಯವನ್ನು ಕೈಗೊಳ್ಳಲಾಗಿದೆ. ಹಿಂದೆ ಕೋರ್ಟ್ ಕಚೇರಿ ಹೋಗುತ್ತಿರಲಿಲ್ಲ. ಇಂದು ಬದಲಾವಣೆಯಾಗಿದೆ.

ಕುಲಂ, ಕುಲಸಭೆ ಮತ್ತು ಕುಲಪಂಚಾಯಿತಿ ಎಂದು ಕರೆಯುತ್ತಾರೆ. ಇದು ಕೊರವ ಕುಲದವರ ನ್ಯಾಯ ನಿರ್ಣಯ ಮಾಡುವ ಜಾಗ, ಇಲ್ಲಿಯ ಪೇರು ಮನುಷ್ಯನ ಅಥವಾ ಹಿರಿಯರು ಮುಖ್ಯಸ್ಥನಾಗಿರುತ್ತಾನೆ. ಎರಡು ಪಕ್ಷದ ವತಿಯಿಂದ ವಾದಗಾರರು ಇರುತ್ತಾರೆ. ನ್ಯಾಯ ನಿರ್ಣಯದ ಸಂದರ್ಭದಲ್ಲಿ ಇವೆಲ್ಲ ತಲೆಪಟ್ಟಿ ಹಾಕಿ ಕಂಡ ಹೆಂಡವನ್ನು ತರಿಸುತ್ತಾರೆ. ನ್ಯಾಯ ನಿರ್ಣಯದ ನಂತರ ತಪ್ಪಿತಸ್ಥನಿಂದ ಇದನ್ನು ಭರಿಸುತ್ತಾರೆ. ಅಪರಾಧಿಗಳು ಈ ಸಭೆಗೆ ಹಾಜರಾಗದಿದ್ದರೆ ಅಂತಹವರಿಗೆ ತಮ್ಮ ಕುಲದಿಂದ ಹೊರಗಿಡುತ್ತಾರೆ. ತಪ್ಪಿಗಾಗಿ ದಂಡವನ್ನು ಕೊಟ್ಟು ಮತ್ತೆ ಕುಲದಲ್ಲಿ ಕೂಡುವರು. ಇಂದಿನ ದಿನಗಳಲ್ಲಿ ಅಂದರೆ ಮದುವೆ ನಿಶ್ಚಯವಾಗಿ ಮದುವೆಯಾಗದೆ ಬೇರೆಯವರನ್ನು ಮದುವೆಯಾದರೆ ಅಂಥವರಿಗೆ ೨೫ ಸಾವಿರ ರೂಪಾಯಿಗಳನ್ನು ದೈವದವರಿಗೆ ಕೊಡಬೇಕಾಗುತ್ತದೆ. ಇನ್ನೊಂದು ಗಂಡು ಹೆಣ್ಣು ಓಡಿ ಹೋಗಿ ದೇವಾಲಯದಲ್ಲಿ ಮದುವೆ ಮಾಡಿಕೊಂಡರೆ ಅಂಥವರನ್ನು ಕುಲಪಂಚಾಯಿತಿಯಲ್ಲಿ ಇಬ್ಬರು ಮನೆಯವರ ಸಮ್ಮುಖದಲ್ಲಿ ತೀರ್ಮಾನ ತೆಗೆದುಕೊಂಡು ನಾಲಿಗೆಗೆ ಬಾರಿಹಾಕಿ ಕುಲದಲ್ಲಿ ಸೇರಿಸುವುದು ಇಲ್ಲವೆ ಪ್ರೇಮವಿವಾಹ ವಾದವರನ್ನು ಕೆಲವು ವರ್ಷಗಳ ನಂತರ ದಂಡವನ್ನು ಹಾಕಿ ಕುಲದಲ್ಲಿ ಸೇರಿಸುವ ಕಾರ್ಯವು ನಡೆಯುತ್ತದೆ.

ಹಿಂದೆ ಯಾವುದೇ ನ್ಯಾಯವಿದ್ದರೂ ತಮ್ಮಲ್ಲಿಯೇ ಬಗೆಹರಿಯಬೇಕೆಂದು ಹಿರಿಯರು ಹೇಳುತ್ತಾರೆ. ತಮ್ಮ ಸಮುದಾಯಕ್ಕೆ ಗೌರವದ ಪ್ರಶ್ನೆ ಎಂದು ಅಭಿಪ್ರಾಯ. ಅದು ಕೋರ್ಟ್ ಕಚೇರಿಯ ಕಟ್ಟೆಯವರೆಗೆ ಹೋಗಬಾರದೆನ್ನುತ್ತಾ ಇಂದಿಗೂ ಎಷ್ಟೆ ಬಂದಿವು ಹೊಂದಾಣಿಕೆ ಮಾಡಿಕೊಂಡು ಒಳಜಗಳವಾಡುತ್ತಲೇ ಬದುಕುತ್ತಿರುವ ಪ್ರಸಂಗಗಳುಂಟು. ಉದಾಹರಣೆಗೆ ಜಂಬಣ್ಣ ಅಮರಚಿಂತ ಅವರು ಕುರುಮಯ್ಯ ಮತ್ತು ಅಂಕುಶದೊಡ್ಡಿ ಎಂಬ ಕಾದಂಬರಿಯಲ್ಲಿ ನ್ಯಾಯ ಪಂಚಾಯಿತಿಯ ಬಗೆಗೆ ತಿಳಿಸುತ್ತಾರೆ.

"ನ್ಯಾಯ ಇಲ್ಲಿಗೆ ಮುಗಿಯಿತೆಂದು ಹೇಳಲು ಕಡ್ಡಿ ಮುರಿಯುವುದು, ಗಿಡ ಬೊಡ್ಡೆಯ ಚಕಳಿ ಹಾರಿಸುವುದು, ಚಿಲುಮೆಗಳನ್ನು ಬದಲಿಸುವುದು ಮುಂತಾದ ರೀತಿಗಳನ್ನು ಅನುಸರಿಸುತ್ತಾರೆ. ತಪ್ಪಿತಸ್ಥನಿಗೆ ನ್ಯಾಯ ನಿರ್ಣಯವಾಗುವವರೆಗಿನ ಖರ್ಚನ್ನೆಲ್ಲ ಕೊಡಲು ಹೇಳುತ್ತಾರೆ. ಎಂತಹ ಕ್ರೂರ ಅಪರಾಧವೆಸಗಿದ್ದರೂ ಇವರಲ್ಲಿ ಮರಣದಂಡನೆ ವಿಧಿಸುವುದಿಲ್ಲ(ಪಿ ೨೦೭ ಅರ್ಜುನ ಗೊಳಸಂಗಿ) ಇದನ್ನು ಗಮನಿಸಿದಾಗ ಆಧುನಿಕತೆಯಲ್ಲಿ ನ್ಯಾಯಾಲಯದ ಮೊರೆ ಹೋಗುವುದುಂಟು. ನ್ಯಾಯಾಧೀಶರು ನ್ಯಾಯ ನಿರ್ಣಯ ಮಾಡಿದ ಮೇಲೆ ಪಿನ್ನಿನ ತುದಿಯನ್ನು ಮುರಿಯುವುದುಂಟು ನ್ಯಾಯದ ವಕೀಲರಿಗೆ ಯಾರು ಕೇಸ್ ಹಾಕಿರುತ್ತಾರೋ ಅವರೇ ಹಣವನ್ನು ಖರ್ಚುಮಾಡ ಬೇಕಾಗುತ್ತದೆ. ಎಂತಹ ಅಪರಾಧಿಗಳನ್ನು ವೆಸಗಿದವರಿಗೆ ಶಿಕ್ಷೆ ವಿಧಿಸದೆಯೇ ಸಣ್ಣಪುಟ್ಟು ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವುದನ್ನು ಮಾಧ್ಯಮಗಳಲ್ಲಿ ಕಾಣುತ್ತಿದ್ದೇವೆ.

ಕಾನೂನು ವ್ಯವಸ್ಥೆ

ಬಾಲ್ಯವಿವಾಹ ನಿಷೇಧ ಕಾಯಿದೆ ೨೦೦೬ ನಂ ೬ ಆಫ್ ೨೦೦೭ (೧೦ ಜನವರಿ ೨೦೦೭). ಬಾಲ್ಯವಿವಾಹಗಳ ಆಚರಣೆಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಮತ್ತು ಪ್ರಕರಣಗಳಿಗೆ ನಿಷೇಧವನ್ನು ಒದಗಿಸಲು ಕಾಯಿದೆ. ಭಾರತ ಗಣರಾಜ್ಯದ ೫೭ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ರಚಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರವನ್ನು ಮತ್ತು ಪಾಂಡಿಚರಿಗೆ ಅನ್ವಯಿಸುವುದಿಲ್ಲ. ಇಡೀ ಭಾರತಕ್ಕೆ ಈ ಕಾಯಿದೆಯು ಅನ್ವಯಿಸುತ್ತದೆ ಮತ್ತು ಇದು ಭಾರತ ದೇಶದಲ್ಲಿರುವ ಮತ್ತು ಹೊರಗಿರುವ ಎಲ್ಲ ನಾಗರಿಕರಿಗೂ ಅನ್ವಯಿಸುತ್ತದೆ. ಕೇಂದ್ರ ಸರ್ಕಾರವು ಅಧಿಕೃತ ರಾಜಪತ್ರದಲ್ಲಿ ಘೋಷಿಸಿ ರಚಿಸಲಾಗಿದೆ.

ಮಗು ಎಂದರೆ ಇಪ್ಪತ್ತೊಂದು ವರ್ಷದೊಳಗಿನ ಯಾವುದೇ ಗಂಡು ಮತ್ತು ಹದಿನೆಂಟು ವರ್ಷದೊಳಗಿನ ಯಾವುದೇ ಹೆಣ್ಣು ಆಗಿರಬಹುದು. ಬಾಲ್ಯವಿವಾಹವೆಂದರೆ ಮದುವೆಯ ಒಡಂಬಡಿಕೆಗೆ ಒಳಗಾಗುವ ಯಾವುದೇ ಒಬ್ಬ ವ್ಯಕ್ತಿ ಮಗುವಾಗಿರುವುದು. ಬಾಲವಿವಾಹಕ್ಕೆ

ಸಂಬಂಧಿಸಿದಂತೆ 'ಒಡಂಬಡಿಯಾಗುವ ವ್ಯಕ್ತಿಗಳು ಎಂದರೆ ಮದುವೆಯಾಗುವ ಆಚರಣೆಯ ಸಂಭವ ಇರುವ ಯಾರಾದೂ ಒಬ್ಬ ವ್ಯಕ್ತಿ.

ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ಸೆಕ್ಷನ್ ೧೬ರ ಉಪಸೆಕ್ಷನ್ (೧)ರಡಿಯಲ್ಲಿ ನೇಮಕಗೊಂಡ ಬಾಲ್ಯವಿವಾಹ ನಿಷೇಧ ಅಧಿಕಾರಿಗಳನ್ನು ಒಳಗೊಂಡಿರುತ್ತದೆ. ತಕರಾರು, ಮನವಿಯನ್ನು ಸಲ್ಲಿಸುವ ಸಮಯದಲ್ಲಿ ದೂರುದಾರರು ಅಪ್ರಾಪ್ತರಾಗಿದ್ದಲ್ಲಿ, ಅವನ ಅವಳ ಪೋಷಕರ ಮತ್ತು ಹತ್ತಿರದ ಸ್ನೇಹಿತರ ಮೂಲಕ ಬಾಲ್ಯವಿವಾಹ ನಿಷೇಧ ಅಧಿಕಾರಿಯ ಜೊತೆಗೆ ಮನವಿಯನ್ನು ಸಲ್ಲಿಸಬಹುದು.

ಯಾರಾದರೂ ಬಾಲ್ಯವಿವಾಹವನ್ನು ನೆರವೇರಿಸಿದ್ದು ನಿರ್ದೇಶಿಸಿದ್ದು ಮತ್ತು ನೆರವು ನೀಡಿದ್ದೆ ಅದರಲ್ಲಿ ಅವರು ಅದು ಬಾಲ್ಯವಿವಾಹ ಅಲ್ಲವೆಂದು ನಿರೂಪಿಸಲು ಸಾಕಷ್ಟು ಪುರಾವೆ ಗಳನ್ನು ಒದಗಿಸದಿದ್ದಲ್ಲಿ ಅವರಿಗೆ ಎರಡು ವರ್ಷದವರೆಗೆ ವಿಸ್ತಾರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಎ ವಿಧಿಸಬಹುದು.

ಯಾರಾದರೂ ಹದಿನೆಂಟು ವರ್ಷ ಮೇಲ್ಪಟ್ಟು ಪುರುಷರು ಬಾಲ್ಯವಿವಾಹವಾಗಿದ್ದರೆ ಅವರಿಗೆ ಎರಡು ವರ್ಷದವರೆಗೆ ವಿಸ್ತಾರಿಸಬಹುದಾದ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷದವರೆಗೆ ದಂಡ ಮತ್ತು ಎರಡನ್ನು ವಿಧಿಸಬಹುದು.

ಈ ಕಾಯಿದೆಯನ್ನು ಒಳಗೊಂಡಿರುವ ನಿಷೇಧಗಳಿಗೆ ವಿರುದ್ಧವಾಗಿ ಏನಾದರೂ ಜರುಗಿ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಂದ ಅಥವಾ ಯಾವುದಾದರೂ ದೂರಿನ ಮೂಲಕ ಮಾಹಿತಿ ದೊರಕಿದಾಗ ಮತ್ತು ಯಾವುದಾದರೂ ವ್ಯಕ್ತಿ ಮೂಲಕ ತಿಳಿದಾಗ ಮೊದಲ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟರು ಮತ್ತು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರಿಗೆ ಈ ಕಾಯಿದೆಯ ವಿರುದ್ಧವಾಗಿ ಬಾಲ್ಯವಿವಾಹಕ್ಕೆ ವ್ಯವಸ್ಥೆಯಾಗುತ್ತಿದೆ. ಇನ್ನೇನು ಅಂತಹ ಮದುವೆಯಾಗುತ್ತಿದೆ ಎಂಬುದು ಮನವರಿಕೆಯಾದರೆ ಅಂತಹ ಮ್ಯಾಜಿಸ್ಟ್ರೇಟರು ಆ ಬಾಲ್ಯವಿವಾಹವನ್ನು ನಿಲ್ಲಿಸಲು ವ್ಯಕ್ತಿಗಳಿಗೆ ಮತ್ತು ಸಂಘಟಕರಿಗೆ ಸಂಘಟನೆಗೆ ತಡೆಯಾಜ್ಞೆಯನ್ನು ನೀಡಬೇಕು.

೧೯೨೯ರ ಬಾಲ್ಯವಿವಾಹ ನಿಯಂತ್ರಣ ಕಾಯ್ದೆಯನ್ನು ಈ ರೀತಿಯ ತೆರವನ್ನು ಹೊರತುಪಡಿಸಿ ಈ ಕಾಯ್ದೆಯ ಆರಂಭದ ಸಮಯದಲ್ಲಿ ಮೇಲೆ ತೆರವುಗೊಳಿಸಿದ ಈ ಕಾಯ್ದೆಯಡಿ ಬಾಕಿ ಇರುವ ಮತ್ತು ನಡೆಯುತ್ತಿರುವ ವಿಚಾರಣೆಗಳನ್ನು ಈ ಕಾಯ್ದೆಯು ಜಾರಿ ಯಾಗಿಲ್ಲ ಎಂದು ತಿಳಿದುಕೊಂಡು ತೆರವುಗೊಳಿಸಿದ ಕಾಯ್ದೆಯ ಅನುಸಾರ ಪ್ರಕರಣಗಳನ್ನು ಮುಂದುವರೆಸುವುದು ಮತ್ತು ತೀರ್ಪು ನೀಡುವುದು(ಮಾಹಿತಿ ಕರ್ನಾಟಕ ರಾಜ್ಯಪತ್ರ ಅಧಿಕೃತವಾಗಿ ಪ್ರಕಟಿಸಲಾದುದು ವಿಶೇಷ ರಾಜ್ಯ ಪತ್ರಿಕೆಯಲ್ಲಿ ಭಾರತದ ರಾಜಪತ್ರ The Gazette of India (DL-(N) 04/0007/2006-08).

ವಸತಿ ವ್ಯವಸ್ಥೆ

ಮಾನವನ ಉಗಮದ ಕಾಲದಿಂದಲೇ ಆತನು ತನ್ನ ರಕ್ಷಣೆಗಾಗಿಯೇ ವಸತಿಯನ್ನು ತನ್ನ ಮನಸ್ಸಿಗೆ ಬಂದಂತೆ ಕಟ್ಟಿಕೊಳ್ಳಲು ಅಭ್ಯಾಸ ಮಾಡಿಕೊಂಡಿದ್ದಾರೆ. ಅಲೆಮಾರಿಯಾಗಿದ್ದ ಮಾನವ ಕಾಡಿನಲ್ಲಿಯೇ ಕಲ್ಲು ಬಂಡೆಗಳಲ್ಲಿಯೇ ತನ್ನ ವಸತಿಯನ್ನು ಗುಹೆಗಳಲ್ಲಿ ವಾಸಮಾಡ ತೊಡಗಿದ್ದ. ಪ್ರಕೃತಿಯ ವಿಕೋಪಗಳಿಂದ ರಕ್ಷಿಸಿಕೊಳ್ಳಲು ಸಹಜವಾಗಿಯೇ ಆಧಾರ ಎಲ್ಲಿರುತ್ತದೆಯೋ ಅಲ್ಲಿ ವಾಸ ಮಾಡತೊಡಗಿದ್ದನು. ಅದಕ್ಕೆ ನಿರ್ದಶನ ಎಂಬಂತೆ ವಿಜಯನಗರದ ಸುತ್ತಮುತ್ತಲಿನ ಗುಡ್ಡಗಳಲ್ಲಿಯೇ ಆದಿಮಾನವ ವಾಸಿಸುವ ನೆಲೆಗಳು ದೊರೆಯುತ್ತವೆ. ಗುಹೆಗಳಲ್ಲಿ ಮೂಲ ವಾಸವಾಗಿದ್ದ ಕಾಲಕಳೆದಂತೆಲ್ಲಾ ತನ್ನ ಆಹಾರ ಇತ್ಯಾದಿಗಳ ಸವಲತ್ತುಗಳಿಗಾಗಿ ಪ್ರದೇಶದಿಂದ ಪ್ರದೇಶಕ್ಕೆ ಅಲೆದಾಡ ಬೇಕಾದಾಗ ಸಂದರ್ಭದಲ್ಲಿ ಪ್ರಕೃತಿ ನಿರ್ಮಿತವಾದ ಗುಹೆಗಳನ್ನು ಹುಡುಕುವುದು ಕಷ್ಟವಾಗುತ್ತಿತ್ತು. ಆ ಕಾರಣಕ್ಕಾಗಿ ಅನಿವಾರ್ಯವಾಗಿ ತಾನೇ ದೇಹ ಕ್ರಮದಿಂದ ಮತ್ತು ಬುದ್ಧಿಬಲವನ್ನು ಉಪಯೋಗಿಸಿ ತನ್ನ ಸಂರಕ್ಷಣೆಯನ್ನು ಮಾಡಿಕೊಳ್ಳುತ್ತಿದ್ದರು. ಅನಿವಾರ್ಯವು ಮತ್ತು ಅಗತ್ಯವು ಆಗಿತ್ತು.

ಹಿಂದಿನಿಂದಲೂ ಇಂದಿನವರೆಗೂ ಪ್ರಭಾವ ಆಗುವವರೆಗೂ ಪ್ರಕೃತಿಯಲ್ಲಿ ದೊರೆಯುವ ಮರಗಿಡಗಳ ಟೊಂಗೆಗಳನ್ನು ಮತ್ತು ಎಲೆ ಪ್ರಕೃತಿಯಲ್ಲಿ ದೊರೆಯುವ ಮರಗಿಡಗಳ ಟೊಂಕೆಗಳನ್ನು ಮತ್ತು ಎಲೆಗಳನ್ನು, ಹುಲ್ಲುಗಳನ್ನು ಉಪಯೋಗಿಸಿಕೊಂಡು ತನ್ನ ಜೋಪಡಿಗಳನ್ನು ಆತ ನಿರ್ಮಿಸಿಕೊಳ್ಳುತ್ತಿದ್ದನು. ಆದರೆ ಆಧುನಿಕತೆಯ ಪ್ರಭಾವ ಬೀಳುತ್ತಾ ತನ್ನ ಮೆದುಳಿಗೆ ಕೆಲಸ ಕೊಡುತ್ತಾ ಬುದ್ಧಿಶಕ್ತಿ, ಕಲಾಪ್ರಜ್ಞೆ ಬೆಳೆದಂತೆಲ್ಲ ವಸತಿಗಳ ಆಕಾರ, ವಿಸ್ತಾರ, ಉದ್ದೇಶಗಳು ಬದಲಾಗುತ್ತಾ ಬಂದವು.

ಮೊಟ್ಟಮೊದಲು ವಾಸಿಸಲು ಔಪಚಾರಿಕ ಪ್ರಜ್ಞೆಯಿಂದಲೇ ಮನುಷ್ಯ ಇಂಥ ವಸತಿಗಳನ್ನು ನಿರ್ಮಾಣ ಮಾಡತೊಡಗಿದ್ದ. ಕಲ್ಲುಬಂಡೆಗಳ ಮಧ್ಯೆ ನಿರ್ಮಿಸಿದ್ದರು. ಇಂದಿಗೂ ಹಂಪಿಯ ಸುತ್ತಮುತ್ತಲಿನ ಗುಡ್ಡಗಳ, ಕಲ್ಲುಗಳ ಪಕ್ಕದಲ್ಲಿ ವಸತಿ ನಿರ್ಮಾಣವಾಗಿದೆ. ಮುದ್ದಗಲ್ಲು, ಮಸ್ಕಿ, ಹಂಪಿಯ ಸುತ್ತಮುತ್ತ, ಹುಲ್ಲಿನ ಮತ್ತು ಕಲ್ಲಿನ ಪಕ್ಕದಲ್ಲಿ ವಾಸವಾಗುವುದುಂಟು. ೩೦ ವರ್ಷಗಳಿಂದ ಗುಡಿಸಲುಗಳು ಹೆಚ್ಚಾಗಿ ಇದ್ದವು. ಇದು ಕಲ್ಲಿನ ಮನೆಗಳು ಕಂಡುಬರುತ್ತಿವೆ. ಇನ್ನು ಕೆಲವೆಡೆ ಟೆಂಟ್‌ಗಳು ಇರುವುದುಂಟು. ಕೈಗಾರಿಕರಣದ ನಂತರ ಗ್ರಾಮ ಸಮಾಜ ಬದಲಾವಣೆಯ ಗಾಳಿಗೆ ಸಿಕ್ಕಿ ಹಾಗೂ ಹೊಸ ಉತ್ಪಾದನಾ ಸಾಮಗ್ರಿಗಳನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯನ್ನು ಪಡೆಯಲಾಗದೆ ತೊಳಲಾಡುತ್ತಿದ್ದಾರೆ. ಕೈಗಾರಿಕರಣದ ಸವಾಲುಗಳನ್ನು ಪ್ರತಿಕ್ರಿಯಿಸಲಾರದ ಸ್ಥಿತಿಯಲ್ಲಿ ಉಳಿದುಕೊಂಡಿದೆ. ಕಲ್ಲಿನ ಗಣಿಯ ಬಂಡೆಗಳಿಂದ ಜೇವರ್ಗಿ ಸುತ್ತಮುತ್ತ ಮನೆಗಳನ್ನು ನಿರ್ಮಿಸಿಕೊಂಡಿರುವುದು ಇಂದಿಗೂ ಕಂಡುಬರುತ್ತದೆ. ಇನ್ನೊಂದು

ಕೈಗಾರೀಕರಣ ಮತ್ತು ಜಾಗತೀಕರಣದ ಪರಿಣಾಮದಿಂದ ಗ್ರಾಮ ಸಮಾಜದಿಂದ ನಗರ ಪ್ರದೇಶಗಳಿಗೆ ವಲಸೆ ಹೋದ ಜನರಿಗೆ ಆಧುನಿಕತೆ ಸವಲತ್ತುಗಳು ದೊರಕಿದವೇ ನಿಜ ಆದರೆ ತಮ್ಮ ಜೀವನದ ಸಂಕೀರ್ಣತೆ ಗ್ರಾಮೀಣ ನೆಲೆಯಿಂದ ಬಂದ ಸರಳ ಜೀವಿಗಳ ಜೀವನ ಸ್ಥಾನ ಪಡೆದಿವೆ. ಹುಟ್ಟಿನಿಂದ ಕಡೆಯಿಂದ ಹೊರಬಂದ ಸಮುದಾಯದ ಜನರು ಸಾಮಾನ್ಯ ವರ್ಗದಂತೆ ಕೂಲಿ ಕೆಲಸ ಮಾಡಿಕೊಂಡು ನಗರ ಸಮಾಜದೆದುರು ಪ್ರತಿಭಟಿಸುವ ಶಕ್ತಿಯಿಂದ ಕಳುವಳ ಕೊಳ್ಳಗಾಗಿ ದುರ್ಬಲ ಆಗುತ್ತಿದ್ದಾರೆ.

ಒಂದು ಊರಿನಿಂದ ಇನ್ನೊಂದು ಊರಿಗೆ ಉಪಜೀವನಕ್ಕಾಗಿ ಹೋದ ಜನರು ಅಲ್ಲಿಯ ಜೀವನಶೈಲಿಗೆ ಆಕರ್ಷಿತರಾಗುವವರು ಕೆಲವರು, ಇನ್ನು ಕೆಲವರು ತತ್ತರಿಸಿ, ಕೆಳವರ್ಗದವರಾಗಿ ಅತ್ಯಂತ ಕಡುಬಡವರಾದುದರಿಂದ ಬಾಡಿಗೆ ಮನೆ ಹಿಡಿಯುವ ಶಕ್ತಿಯಿಲ್ಲದೆ ಹಣಕಾಸಿನ ತೊಂದರೆಯಿಂದ ಪಟ್ಟಣಗಳ ಹೊರವಲಯದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಅನಿವಾರ್ಯತೆ ಎದುರಾಗುತ್ತದೆ. ಆದರೂ ಆರ್ಥಿಕ ಸ್ಥಿತಿವಂತರಾದರೂ ನಗರ ಜೀವನವು ಕ್ಲಿಷ್ಟಕರವಾಗಿರುತ್ತದೆ. ಇಂತಹ ಹಲವಾರು ಸಮಸ್ಯೆಗಳು ಎದುರಿಸಬೇಕಾಗುತ್ತದೆ ಅದಕ್ಕೆ ಕಾರಣ ಆರ್ಥಿಕ ಬಲವಿಲ್ಲದಿರುವುದು, ಶಿಕ್ಷಣದ ಕೊರತೆ ಎದ್ದು ಕಾಣುತ್ತದೆ. ತಮ್ಮ ಕಸುಬನ್ನೆ ನಂಬಿಕೊಂಡು ಬದುಕುತ್ತಿರುವವರಿಗೆ ಮಾರುಕಟ್ಟೆ ಇಲ್ಲದೆ ಊರೂರು ಅಲೆದು ಮಾರಾಟ ಮಾಡಿ ಬಂದ ಹಣದಲ್ಲಿ ತಮ್ಮ ಜೀವನ ನಡೆಸುವ ಮನೆಯ ಜವಾಬ್ದಾರಿಯನ್ನು ನಿಭಾಯಿಸಿಕೊಳ್ಳಬೇಕಾಗುತ್ತದೆ. ಮನೆ, ನೀರು, ಬೆಳಕು ಇಲ್ಲದ ವಾತಾವರಣದಲ್ಲಿ ವಾಸಿಸಬೇಕಾಗುತ್ತದೆ. ಸ್ಲಂ ಕೇರಿಗಳು ಈ ರೀತಿಯಲ್ಲಿ ಹುಟ್ಟಿಕೊಳ್ಳಲು ಇದು ಬಂದು ಕಾರಣವಾಗಬಹುದು.

ಪ್ರಕೃತಿ ಆರಾಧಕರಾದ ಸಮುದಾಯವು ಗುಂಪು ಗುಂಪಾಗಿ ಮನೆ ಕಟ್ಟಿಕೊಳ್ಳುವ ಕೊರವರು ಕೇರಿ ಓಣಿಗಳನ್ನು ಇಂದು ಕಾಣುತ್ತೇವೆ. ಆದರೆ ಒಳಗೆ ಹೋದಂತೆಲ್ಲ ಕೊರವರ ಬದುಕಿನ ಧಾರುಣತೆ ಅರಿವಿಗೆ ಬರುತ್ತದೆ. ಊರಿನ ತುದಿಯಲ್ಲಿ ಕೊರಚೆ ಸ್ಥಳದಲ್ಲಿ ಇವರು ಮನೆಕಟ್ಟಿಕೊಳ್ಳುವ ಸಮುದಾಯವು ಈ ಸಂಪ್ರದಾಯಿಕ ಸ್ಥಿತಿಯಿಂದ ಹೊರಬರುತ್ತಿದೆ. ಹಿಂದೆಲ್ಲ ಮನೆಗೆ ಮನೆ ಮುಖಿಕೊಟ್ಟು ಅಥವಾ ಒಂದನ್ನು ಹಿಂಬಾಲಿಸಿದಂತೆ ಕಾಣುವ ಮನೆಗಳನ್ನು ನೋಡಬಹುದಾಗಿತ್ತು. ಈವತ್ತಿನ ಪರಿಸ್ಥಿತಿಯಲ್ಲಿ ಮನೆಗಳು ಕಲ್ಪನೆಯನ್ನು ಮೀರಿ ಮನೆಗಳನ್ನು ಕೆಲವರು ಕಟ್ಟಿಕೊಳ್ಳುವುದುಂಟು ಅವರ ಕುಟುಂಬ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮನೆಗಳ ನಿರ್ಮಿಸಿಕೊಳ್ಳುತ್ತಿದ್ದಾರೆ. ಕೆಲವರು ಸರ್ಕಾರ ನೀಡುವ ಬ್ಯಾಂಕ್ ಸಾಲದಿಂದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಕೆಲವರು ಮಾತ್ರ ಎನ್ನಬೇಕು.

ಹುಲ್ಲುಗಳು, ಗುಡಿಸಲು, ತಟ್ಟಿಗಳನ್ನು ಕಟ್ಟಿ ಅದನ್ನೇ ಗೋಡೆಗಳಂತೆ ಬಳಸಿದ ಮನೆಗಳು ಇದೆ. ಮಣ್ಣಿನ ಮತ್ತು ಹಂಚಿನ ಮನೆಗಳು, ತಗಡಿನ ಮನೆಗಳು ಇವೆ. ಬಹುತೇಕ ಮನೆಗಳು

ಇಟ್ಟಿಗೆ, ಕಲ್ಲು, ಕಡಪ ಕಲ್ಲು, ಬಿಳಿ ಕಡಪಕಲ್ಲು ಯಾದಗಿರಿ ಜೇವರ್ಗಿಗಳಲ್ಲಿ ಕಂಡುಬರುತ್ತವೆ. ಗ್ರಾಮದ ಮನೆಗಳು ಮರಗಳ ಕಟ್ಟೆಗಳಿಂದ ಕೆಲವು ಮನೆಗಳು ಶಿಥಿಲ ವ್ಯವಸ್ಥೆಯಲ್ಲಿರುವಲ್ಲಿಯೇ ವಾಸಿಸುತ್ತಿರುವುದು ಔರಾದ ನೌಬಾದ್‌ನಲ್ಲಿ ಕಂಡುಬರುತ್ತದೆ.

ಮನೆಯ ಮುಂಭಾಗಕ್ಕೆ ಗೋಡೆಗೆ ತಾಗಿಕೊಂಡು ಎತ್ತರವಾದ ೩/೪ ಅಗಲವಾದ ೧೫/೧೨ ಉದ್ದವಾದ ಕಟ್ಟೆ ಇರುತ್ತದೆ. ಈ ಕಟ್ಟೆಯ ಮಧ್ಯಭಾಗದಲ್ಲಿ ಮೆಟ್ಟಿಲು ಇರುತ್ತದೆ. ಈ ತಟ್ಟೆಯನ್ನು ದಿನದ ಹಗಲೆಲ್ಲ ವಿಶ್ರಾಮಿಸಿಕೊಳ್ಳಲು ಉಪಯೋಗಿಸುತ್ತಾರೆ. ಮನೆಯ ಒಳಗೆ ಮೂರು ಭಾಗಗಳನ್ನು ಮಾಡಬಹುದು ಅಡಿಗೆಯ ಮನೆ, ಮಲಗಿಕೊಳ್ಳುವ ಕೋಣೆ, ಸಂಗ್ರಹಣ ಕೋಣೆ ಎಂದು ವಿಭಾಗಿಸಬಹುದು. ಬಹುತೇಕ ಮನೆಗಳು ಎರಡು ಮೂರು ಕೋಣೆಗಳನ್ನು ಹೊಂದಿರುತ್ತವೆ. ಕೆಲವರು ಬಿದ್ದಗೋಡೆಯಲ್ಲಿಯೇ ಜೀವನ ನಿರ್ವಹಿಸುತ್ತಿರುವುದುಂಟು. ಒಳಗೆ ಅಡುಗೆ ಕೋಣೆ ಮತ್ತು ಹೆರಿಗೆ ತೊಟ್ಟಿಲು ತೂಗುವ ಕೋಣೆ ಎಲ್ಲವೂ ಒಳಭಾಗದಲ್ಲಿಯೇ ಇರುತ್ತದೆ. ಮನೆಗಳಿಗೆ ಒಂದು ಕಿಟಕಿ ಮತ್ತು ಎರಡು ಕಿಟಕಿಗಳನ್ನು ನೋಡಬಹುದಾದರೂ ನಾನು ನೋಡಿದ ಕೆಲವು ಮನೆಗಳಿಗೆ ಕಿಟಕಿಯೇ ಇರಲಿಲ್ಲ.

ಮನೆ ಚಿಕ್ಕದಿರುವುದರಿಂದ ಹಿಂಬಾಗಿಲಿನ ಅವಶ್ಯಕತೆ ಬಹುತೇಕ ಮನೆಗಳಿಗೆ ಇಲ್ಲ. ಕೊರವ ಸಮುದಾಯದ ಅನನ್ಯತೆಯ ಸಂಕೇತವಾದ ಮನೆಗಳು ಈಗ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಅದಕ್ಕೆ ಬದಲಾಗಿ ಸರ್ಕಾರಿ ವಿನ್ಯಾಸಿತ ಮನೆಗಳು ಈಗ ಕೊರವರ ಮನೆಗಳಾಗಿವೆ. ಮಳೆಗಾಲಕ್ಕೆ ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಾಕೃತಿಕ ವಿನ್ಯಾಸಿತ ಮನೆಗಳ ಬದಲಾಗಿವೆ. ಕೊರವರು ಬದುಕಲು ಒಳಿತಲ್ಲವಾದರೂ ಅನಿವಾರ್ಯವಾಗಿ ಅವರು ಅದರಲ್ಲಿಯೇ ವಾಸಿಸುತ್ತಿದ್ದಾರೆ ಮತ್ತು ವಾಸಿಸಬೇಕಾಗಿದೆ. ಇನ್ನು ಬಹುತೇಕ ಮನೆಗಳು ಆರ್ಥಿಕ ಅಭಿವೃದ್ಧಿಯೂ ಒಂದು ಸಮುದಾಯದ ಪರಿಸ್ಥಿತಿಗಳನ್ನು ಸುಧಾರಿಸಬಹುದು ಎನ್ನುವುದಕ್ಕೆ ಬಳ್ಳಾರಿ ಜಿಲ್ಲೆಯನ್ನು ಉದಾರಿಸ ಬಹುದು. ಸಮುದಾಯದ ಜನರು ಎಲ್ಲಿ ಹೇಗೆ ವಾಸಿಸುತ್ತಿದ್ದಾರೆ ಎಂಬುದು ಮುಖ್ಯವಾಗಿದೆ. ಹಿಂದುಳಿದ ಪ್ರದೇಶದಲ್ಲಿ ಇನ್ನು ಹಿಂದುಳಿದ ಜನ ಸಮುದಾಯಗಳಲ್ಲಿ ಕೊರವರು ಒತ್ತೊತ್ತಾಗಿ ಕಟ್ಟಿಕೊಂಡು ಮನೆಗಳು, ಮೂಲಭೂತ ಸೌಲಭ್ಯವಿಲ್ಲದ ಊರುಗಳು, ಬಸ್ಸಿನ ಯಾವ ಸಂಪರ್ಕ ಇಲ್ಲದಂತ ದಾರಿಗಳು ಹೀಗೆ ಹಲವಾರು ಅವ್ಯವಸ್ಥೆಯ ಬೀಡಾಗಿದೆ. ಎಷ್ಟೋ ಊರುಗಳಲ್ಲಿ ಅವರು ಬದುಕುತ್ತಿರುವ ಜಾಗ ಅವರ ಹೆಸರಿಗಿಲ್ಲದ ಅಸಹಾಯಕತೆ ಅವರನ್ನು ಕಾಡುತ್ತಿದೆ. ಸರ್ಕಾರ ಅವರನ್ನು ಅಲ್ಲಿಂದ ಮೊದಲು ಸ್ಥಳಾಂತರಿಸಿ ಒಂದು ವಿಶಾಲವಾದ ಜಾಗದಲ್ಲಿ ಅವರ ಸಮುದಾಯದ ವೃತ್ತಿಗೆ ಸಂಬಂಧಿಸಿದಂತೆ ಮನೆಗಳ ನಿರ್ಮಾಣ ಮಾಡಿದರೆ ಅವರ ಅನುಕೂಲವಾದ ವಾತಾವರಣವನ್ನು ಕಲ್ಪಿಸಿ ಅವರ ಜೀವನ ಸುಧಾರಿಸುವ ದಾರಿಯಾಗುತ್ತದೆ.

ಆಯಾ ಸಮುದಾಯಗಳಿಗೆ ಯೋಗ್ಯವಾದ, ವ್ಯವಸ್ಥಿತ ಬಡಾವಣೆಗಳನ್ನು ನಿರ್ಮಾಣ ಮಾಡಿ ರಸ್ತೆ, ಕುಡಿಯುವ ನೀರು, ಕರೆಂಟ್ ಮತ್ತಿತರ ಮೂಲಭೂತ ಸೌಕರ್ಯಗಳನ್ನು ನೀಡಿದರೆ ನಾಗರೀಕ ಜಗತ್ತಿನಲ್ಲಿ ಬಾಳುತ್ತಿದ್ದೇವೆ ಎಂಬುದು ತಿಳಿಯುತ್ತದೆ.

ಇನ್ನಿತರ ಸಮಸ್ಯೆಗಳು

ಸರ್ಕಾರದ ಅಲಕ್ಷತೆಗೆ ತುತ್ತಾಗಿ ಇವರು ಡಾ. ಬಿ.ಆರ್. ಅಂಬೇಡ್ಕರ್ ಯೋಜನೆಗಳು, ಜನತಾ ಆಶ್ರಯ ಮನೆಗಳು ಇನ್ನು ಮುಂತಾದ ಯೋಜನೆಗಳಿಂದ ವಂಚಿತರಾಗಿದ್ದಾರೆ. ಸರ್ಕಾರದಿಂದ ದೊರಕುತ್ತಿರುವ ನೆಲವು ಅತ್ಯಲ್ಪ. ಇದರ ಅರಿವು ಇಲ್ಲದ ಕಾರಣ ಪಡೆಯುವಲ್ಲಿ ವಿಫಲತೆ ಅನುಭವಿಸುತ್ತಿವೆ. ಸರ್ಕಾರ ಪ್ರತಿಯೊಬ್ಬ ನಾಗರಿಕನೂ ಉಚಿತ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆರೋಗ್ಯ ಸಂಬಂಧಿಸಿದಂತೆ ಕುಷ್ಟರೋಗ ನಿರ್ಮೂಲನೆಗೆ, ಹೊಸ ಪ್ರಸೂತಿ ಕೇಂದ್ರ, ಸರ್ಕಾರಿ ಆಸ್ಪತ್ರೆಗಳು, ಆರೋಗ್ಯದ ಸುಧಾರಣೆಗೆ ಸರ್ಕಾರ ಸೌಲಭ್ಯ ನೀಡಿದರೂ ಸಹ ತಮ್ಮ ಸಂಪ್ರದಾಯಿಕ ಪದ್ಧತಿಗಳನ್ನು ಅಳವಡಿಸಿಕೊಂಡು ಹೋಗುತ್ತಿರುವುದುಂಟು. ಹೀಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಅವರನ್ನು ಪ್ರೋತ್ಸಾಹಿಸುತ್ತಿದೆ. ಸರ್ಕಾರದ ಈ ಸೌಲಭ್ಯಗಳನ್ನು ಈ ಸಮುದಾಯದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆ ಮೂಡಿಸಿದ್ದರೂ ಹಲವಾರು ವೈದ್ಯಕೀಯ ಸೌಲಭ್ಯ ನೀಡಿದ್ದರೂ ಸಂಪೂರ್ಣ ಉಪಯೋಗ ಪಡೆಯುವಲ್ಲಿ ಈ ಸಮುದಾಯ ವಿಫಲವಾಗುತ್ತದೆ.

ಕೂದಲು ಹಿಂಜುವ ಮತ್ತು ಸಂಗ್ರಹಿಸುವ ಸಂದರ್ಭದಲ್ಲಿ ಕೈಗಳಿಗೆ ಯಾವುದೇ ಸುರಕ್ಷ ಕವಚ ಧರಿಸಿರುವುದಿಲ್ಲ. ಗುಜ್ಜರಿ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಕೊಳಚೆ ಪ್ರದೇಶ ಎಂದೂ ಸಂಗ್ರಹಿಸಲಾಗುತ್ತದೆ. ಕಾಲುಗಳಿಗೆ ಚಪ್ಪಲಿ ಇಲ್ಲದೆ ಓಡಾಡುತ್ತಿರುತ್ತಾರೆ. ಹೊಟ್ಟೆಗೆ ಆಧಾರವಾಗುವ ದುಡಿಮೆಯಿಂದ ಸ್ವಚ್ಛತೆ ಎಂಬ ಕಲ್ಪನೆ ಅವರಲ್ಲಿ ಕಡಿಮೆ ವಿದ್ಯಾವಂತರು ತಿಳುವಳಿಕೆಯುಳ್ಳವರು ಸ್ವಚ್ಛತೆಯ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಮೂರು ನಾಲ್ಕು ದಿನಕ್ಕೆ ಮಾತ್ರ ಸ್ನಾನ ಮಾಡುವವರ ಸಂಖ್ಯೆ ಹೆಚ್ಚು. ನೀರಿನ ಅಭಾವದಿಂದಲೂ ಆಗಿರಬಹುದು. ವಿಫಲಕ್ಕೆ ಕಾರಣಗಳೆಂದರೆ

* ಅನಕ್ಷರತೆ
* ನಾಟಿ ವೈದ್ಯಪದ್ಧತಿಯಲ್ಲಿ ಅತಿಯಾದ ನಂಬಿಕೆ
* ಆರೋಗ್ಯ ಇಲಾಖೆಗಳು ಬಹುದೂರವಿರುವುದು
* ಆರೋಗ್ಯ ಇಲಾಖೆಗೆ ಹೋದಾಗ ಅಲ್ಲಿನ ಸೌಲಭ್ಯಗಳು ಇಲ್ಲದಿರುವುದು.
* ಮೂಢನಂಬಿಕೆಯ ಮೇಲಿರುವ ನಂಬಿಕೆ.

ಕಾಮಾಲೆ ಕಾಯಿಲೆ ಬಂದಾಗ ಮೊದಲು ಕರೆದುಕೊಂಡು ಹೋಗುವುದೇ ನಾಟಿವೈದ್ಯರಲ್ಲಿಗೆ ಸರ್ಕಾರ ನೀಡುವ ಚುಚ್ಚುಮದ್ದುಗಳ ಯಾವಾಗ ಸಿಗುತ್ತವೆ. ಎಂಬುದು ಜನಸಾಮಾನ್ಯರಿಗೆ ತಿಳಿಯಲು ಅವಕಾಶವಾಗದಿರುವುದು. ಖಾಸಗಿ ಅಸ್ಪತ್ರೆಗಳಲ್ಲಿ ಈ ಕಾಯಿಲೆಗೆ ಔಷಧಿ ದೊರಕಿದರೂ ಹಣಕೊಟ್ಟು ಔಷಧಿ ಪಡೆಯುವ ಸ್ಥಿತಿ ಇಲ್ಲದಿರುವುದು. ಗಿಡಕಟ್ಟಿದ ಮೇಲೆಯೇ ಮಗುವಿನ ಮತ್ತು ವ್ಯಕ್ತಿ ಕಾಮಾಲೆ ಕಾಯಿಲೆ ವಾಸಿಯಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ ಮಗು ಜನ್ಮ ಪಡೆದ ಮೇಲೆ ಮಗುವಿಗೆ ಕೆಲವು ಕಡೆಗಳಲ್ಲಿ ಬಿಸಿ ಮಾಡಲಾಗುತ್ತದೆ. (ಚುಟಕಿ) ಮಗು ಎಚ್ಚರಿಸಲು ಮುಂದೆ ಯಾವುದೇ ಕಾಯಿಲೆ ತಗಲದಿರಲು ಚುಟುಕಿಯಾಗಲಾಗುತ್ತದೆ.

ಆದಕಾರಣವೇ ಇತರೆ ವೃತ್ತಿಗಳನ್ನು ಅವಲಂಬಿಸಬೇಕಾಗಿರುವ ಅನಿವಾರ್ಯತೆ ಬಂದಿದೆ. ಹಣ್ಣು ವ್ಯಾಪಾರ, ಪಾತ್ರೆ ವ್ಯಾಪಾರ, ಊರೂರು ಸುತ್ತಿ, ವ್ಯಾಪಾರ ಮಾಡಿಕೊಂಡು ಬರುವವರಿಗೆ ಕಾರಣವಾಗಿರುತ್ತದೆ. ಅವರು ಇರುವ ಊರಿನಿಂದ ೮೦ಕಿ.ಮೀ ದೂರದವರೆಗೆ ವ್ಯಪಾರಕ್ಕೆ ಹೋಗಬೇಕಾಗುತ್ತದೆ. ಬಾವಿಯೊಳಗಿನ ಕಪ್ಪೆಯಂತೆ ತಮ್ಮ ಕಸುಬು ಮತ್ತು ತಮ್ಮ ಜೀವನವೆ ಮುಖ್ಯವಾಗಿರುತ್ತದೆ. ಜಾಗತೀಕರಣದ ಪ್ರಪಂಚದ ಜ್ಞಾನದ ಅಗತ್ಯತೆಯೂ ಅನಿವಾರ್ಯವಾಗು ತ್ತಿರುವುದಿಲ್ಲ ಮುಂದೆ ಜಾಗತೀಕರಣಕ್ಕೆ ಹೊಂದಿಕೊಂಡು ಹೋಗುವ ಅನಿವಾರ್ಯತೆಯು ಆಗುವುದುಂಟು.

ಹೈದ್ರಾಬಾದ್ ಕನಾಟಕ ಭಾಗಕ್ಕೆ ಕೊಟ್ಟು ೭೫೩ ಕೋಟಿ, ಖರ್ಚಾಗಿದ್ದು ಬರೀ ೧೧ ಕೋಟಿ ಎಂಬ ವಾದಿರಾಜ ವ್ಯಾಸಮುದ್ರ ಅವರು ಬರೆದಿರುವ ಲೇಖನವು "ಅಭಿವೃದ್ಧಿ ಕಾಮಗಾರಿಗಳಿಗಾಗಿ ಕೋಟಿ-ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದೇವೆ. ಹೈದ್ರಾಬಾದ್ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಭಾಗ್ಯದ ಬಾಗಿಲು ತೆರೆಯಲಿದೆ ಎಂದು ಸರ್ಕಾರಗಳು ಹೇಳಿಕೆ ನೀಡುತ್ತವೆ. ಆದರೆ ವಾಸ್ತವ ಪರಿಸ್ಥಿತಿಯೇ ಬೇರೆ. ಅನುಷ್ಠಾನಾಧಿಕಾರಿಗಳ ನಿರ್ಲಕ್ಷ್ಯದಿಂದ ಬಿಡುಗಡೆಯಾದ ಹಣ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲೇ ಕೊಳೆಯುತ್ತಿವೆ. ೨೦೧೪-೧೫ನೇ ಸಾಲಿನಲ್ಲಿ ೬೦೦ ಕೋಟಿ ರೂ ಅನುದಾನ ಕಾದಿರಿಸಲಾಗಿತ್ತು. ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆದಾಗ ಸಚಿವರ ಖಮರುಲ್ ಇಸ್ಲಾಂ ಅವರ ಒತ್ತಾಯದ ಮೇರೆಗೆ ಇನ್ನೂ ೪೦೦ ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ನೀಡುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದರು. ಒಟ್ಟು ಒಂದು ಸಾವಿರ ಕೋಟಿ ರೂ ಎಂದು ನಿಗದಿಪಡಿಸಲಾಯಿತು.

ಈ ಹಣದಲ್ಲಿ ಮೊದಲ ಹಂತವಾಗಿ ೩೦೦ ಕೋಟಿ ರೂ. ಸರ್ಕಾರ ಮಂಡಳಿಗೆ ಬಿಡುಗಡೆ ಮಾಡಿದೆ. ಮಂಡಳಿ ಅನುಷ್ಠಾನ ಇಲಾಖೆಗಳಿಗೆ ೧೯೩.೯೦ಕೋಟಿ ರೂ. ನೀಡಿದೆ. ಇಷ್ಟು ಹಣದಲ್ಲಿ ಖರ್ಚಾಗಿರುವುದು ಕೇವಲ ಹನ್ನೊಂದು ಕೋಟಿ ರೂ.ಮಾತ್ರ. ಇದರಲ್ಲಿ

ಎರಡು ಕೋಟಿ ರೂಪಾಯಿ ಆಡಳಿತ ವೆಚ್ಚವಾಗಿದ್ದರೆ, ಇನ್ನುಳಿದ ಒಂಬತ್ತು ಕೋಟಿ ರೂಪಾಯಿ ಮ್ಯಾಕ್ರೋಸ್ಕೀಮ್‌ಗಾಗಿ ತೆಗೆದಿರಿಸಲಾಗಿದೆ. ಯೋಜನೆ ಹಂತ ಹಂತವಾಗಿ ನಡೆಯಬೇಕಿದ್ದು, ಆರ್ಥಿಕ ವರ್ಷ ಮುಗಿಯುತ್ತಾ ಬಂದರೂ ಈವರೆಗೆ ನಯಾಪೈಸೆ ಕಾಮಗಾರಿ ನಡೆದಿಲ್ಲ. ಏಪ್ರಿಲ್‌ನಿಂದ ಹೊಸ ಬಜೆಟ್ ಅನ್ವಯವಾಗಲಿದೆ.

೨೦೧೩-೧೪ನೇ ಸಾಲಿನಲ್ಲಿ ಮಂಡಳಿಗೆ ಬಜೆಟ್‌ನಲ್ಲಿ ೧೫೩.೫೦ ಕೋಟಿ ರೂಪಾಯಿ ಕಾದಿರಿಸಲಾಗಿತ್ತು. ಅದರಲ್ಲಿ ಬಿಡುಗಡೆಯಾಗಿದ್ದು, ೩೦ ಕೋಟಿ ರೂ. ಮಂಡಳಿಯಿಂದ ಅನುಷ್ಠಾನ ಇಲಾಖೆ ಕಾಮಗಾರಿಗಳಿಗೆ ಬಿಡುಗಡೆಯಾಗಿದ್ದು ೭೪ ಕೋಟಿ ರೂ. ವಿಚಿತ್ರವೆಂದರೆ ಇದರಲ್ಲಿ ಬೀದರ ಜಿಲ್ಲೆ ಮಾತ್ರ ೫೩ ಲಕ್ಷ ರೂ. ವೆಚ್ಚ ಮಾಡಲಾಗಿದೆ. ಉಳಿದ ಜಿಲ್ಲೆಗಳಿಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ. ಮಂಡಳಿ ಕೊಡುವ ಅನುದಾನದಲ್ಲಿ ಶೇ.೭೦ರಷ್ಟು ಮೂಲಸೌಕರ್ಯಕ್ಕೆ ಹಾಗೂ ಶೇ.೩೦ರಷ್ಟುಅನ್ನು ವಿವಿಧ ಕಟ್ಟಡ(ಸಾಂಸ್ಥಿಕ) ನಿರ್ಮಾಣಕ್ಕೆ ಬಳಸಬೇಕು. ಪ್ರತಿವರ್ಷ ಬರುವ ಪೂರ್ಣ ಅನುದಾನವನ್ನು ಸಮರ್ಪಕವಾಗಿ ಖರ್ಚು ಮಾಡಿ ಪ್ರಗತಿ ಸಾಧಿಸಬೇಕು. ಆದರೆ ಅಧಿಕಾರಿಗಳು ಮಾತ್ರ ಈ ನಿಟ್ಟಿನಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ. ಖರ್ಚಾಗದಿರುವುದಕ್ಕೆ ಕಾರಣವನ್ನು ಹೇಳುತ್ತಿಲ್ಲ.

ಈ ಭಾಗದ ಅಭಿವೃದ್ಧಿ ಹಾಗೂ ಜನರ ಹಿತದಿಂದ ಮಂಡಳಿ ಅಧ್ಯಕ್ಷರು ಗಮನಹರಿಸಿ ಕ್ರಮಕೈಗೊಳ್ಳಬೇಕಿದೆ. ಇಲ್ಲದಿದ್ದರೆ ಮಂಡಳಿ ನಾಮಕಾವಸ್ತೆ ಎನಿಸಿಕೊಂಡರೂ ಅಚ್ಚರಿಪಡಬೇಕಿಲ್ಲ. ಅನುದಾನ ಬಳಕೆ ಮಾಡದ ಹೈದ್ರಾಬಾದ್ ಕರ್ನಾಟಕದ ಪ್ರದೇಶಾಭಿವೃದ್ಧಿ ಮಂಡಳಿ ಅನುಷ್ಠಾನಾಧಿಕಾರಿಗಳ ನಿರ್ಲಕ್ಷ್ಯ, ಅಭಿವೃದ್ಧಿ ಕುಂಠಿತ. ಇದನ್ನು ಗಮನಿಸಿದಾಗ ಅಭಿವೃದ್ಧಿ ಜನತೆಯದಲ್ಲ, ವ್ಯಕ್ತಿಯ ಅಭಿವೃದ್ಧಿ ಮಾತ್ರವೆನಿಸುತ್ತದೆ. ಆದರೆ ಸಮುದಾಯಗಳ ಗತಿಯೇನು? ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಪ್ರಾದೇಶಿಕ ಮಂಡಳಿಯಿಂದ ಬಹುತೇಕ ನಿಯಂತ್ರಣ ಹೊಂದಿರುವ ಸಲಹಾ ಸಮಿತಿ ಸಭೆ ಒಮ್ಮೆಯೂ ನಡೆದಿಲ್ಲ. ಈ ಸಲಹಾ ಸಮಿತಿಯಲ್ಲಿಯ ಪ್ರಮುಖ ನಿರ್ಣಯಗಳು ಆಗಬೇಕು. ಸಭೆಯಲ್ಲಿ ನಡೆದಿಲ್ಲವೆಂದು ಮೇಲೆ ನಿರ್ಣಯಗಳನ್ನು ಸ್ವೀಕರಿಸುವುದು ಹೇಗೆಂಬ ಪ್ರಶ್ನೆ ಇದೆ.

ಕಲಬುರಗಿ ಶಾಸಕರು ಹೇಳುವಂತೆ ಮಂಡಳಿಗೆ ಹಣವೇನೂ ಬರುತ್ತಿದೆ. ಆದರೆ ಅದು ಖರ್ಚಾಗುತ್ತಿಲ್ಲ. ಅನುಷ್ಠಾನಾಧಿಕಾರಿಗಳ ಮೇಲೆ ಸರ್ಕಾರದ ಹಿಡಿತವಿಲ್ಲ ಎಂದೆನಿಸುತ್ತದೆ. ಈಗಲೂ ಕಾಲ ಮಿಂಚಿಲ್ಲ. ಕೂಡಲೇ ಪ್ರಾದೇಶಿಕ ಮಂಡಳಿ ಅಧ್ಯಕ್ಷರು ಅನುಷ್ಠಾನಾಧಿಕಾರಿಗಳನ್ನು ಚುರುಕುಗೊಳಿಸಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಿ, ಅಲ್ಲದೇ ಸಲಹಾ ಸಮಿತಿ ಸಭೆ ಕಾಲಕಾಲಕ್ಕೆ ಕರೆದು ಸಲಹೆ ಪಡೆದುಕೊಳ್ಳಲಿ ಎಂದು ಅಭಿಪ್ರಾಯಪಟ್ಟಿದ್ದಾರೆ(ವಿಜಯನವಾಣಿ, ಸಮಸ್ತ ಕರ್ನಾಟಕ, ೫ ಮಾರ್ಚ್ ೨೦೧೫, ಪು.೭).

ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚ ಮಾಡಿದ ವಿವರ

ಕ್ರಸಂ.	ಜಿಲ್ಲೆ	ಬಿಡುಗಡೆಯಾದ ಅನುದಾನ ಲಕ್ಷ ರೂ.ಗಳಲ್ಲಿ		ವೆಚ್ಚ	
		೨೦೧೩-೧೪	೨೦೧೪-೧೫	೨೦೧೩-೨೦೧೪	೨೦೧೪-೧೫
೧	ಕಲಬುರಗಿ	೮೫೦.೦೦	೭೮೦೦.೦೦	–	–
೨	ಯಾದಗಿರಿ	೩೫೦.೦೦	೩೧೨೫.೦೦	–	–
೩	ರಾಯಚೂರು	೫೦೦.೦೦	೪೪೫೦.೦೦	–	–
೪.	ಕೊಪ್ಪಳ	೩೫೦.೦೦	೨೭೫೦.೦೦	–	–
೫.	ಬಳ್ಳಾರಿ	೩೫೦.೦೦	೮೨೫.೦೦	–	–
೬	ಬೀದರ್	೪೦೦.೦೦	೧೫೪೦.೦೦	೫೩.೦೦	–
೭	ಆಡಳಿತ ವೆಚ್ಚ	–	–	–	೨೦೦.೦೬
೮.	ಮ್ಯಾಕ್ರೋ ಅಭಿವೃದ್ಧಿ	–	–	–	೯೦೦.೦೩
	ಒಟ್ಟು	೨೮೦೦.೦೦	೧೯[illegible]೦.೦೦	೫೩.೦೦	೧೧೦೦.೦೯

ಈ ವಿಷಯಗಳು ಶಿಕ್ಷಣ ಪಡೆಯದ ಸಮುದಾಯಕ್ಕೆ ಹೇಗೆ ತಿಳಿಯಬೇಕು ಹೇಳಿ ಎಂಬುದು ಆಶ್ಚರ್ಯ.

ಪ್ರಸನ್ನ ಅವರ ಸಂಭಾಷಣೆ

ಕೈ ಉತ್ಪನ್ನಗಳ ಪರವಾದ ಚಳವಳಿ ಪ್ರಸನ್ನ ಈ ಲೇಖನವು ಪ್ರಜಾವಾಣಿ ಪತ್ರಿಕೆಯಲ್ಲಿ ಕೈ ಉತ್ಪನ್ನಗಳ ಪರವಾದ ಚಳವಳಿ ಏಕೆ ಬೇಕು? ಈ ಚಳವಳಿಯು ಪಾಪದ ಹೊರೆಯನ್ನು ವ್ಯವಸ್ಥೆಯ ಮೇಲೆ ಹೊರಿಸುತ್ತದೆಯೇ ಹೊರತು ವ್ಯಕ್ತಿಗಳ ಮೇಲೆ ಹೊರಿಸುವುದಿಲ್ಲ ಎಂದು ಸಂಭಾಷಣೆಯ ಪ್ರಸನ್ನ ಅವರು ಲೇಖನ ಬರೆಯುತ್ತಾರೆ.

ಕಳೆದ ಕೆಲವು ತಿಂಗಳುಗಳಿಗಿಂತ ಕೈ ಉತ್ಪನ್ನಗಳ ಪರವಾದ ಚಳುವಳಿಯೊಂದು ನಡೆದಿದೆ. ಚಳುವಳಿಯ ಕೇಂದ್ರವು ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಪರಿಣಾಮವು ದೇಶದಾದ್ಯಂತ ವ್ಯಾಪಿಸತೊಡಗಿದೆ. ಗ್ರಾಮಸೇವಾ ಸಂಘ ಎಂಬ ಹೊಸದೊಂದು ಸಂಸ್ಥೆ ಈ ಚಳವಳಿಯನ್ನು ಮುನ್ನಡೆಸಿಕೊಂಡು ಬರುತ್ತಿದೆ. ಕೈ ಉತ್ಪನ್ನಗಳೆಂದರೆ, ಒಟ್ಟು ಉತ್ಪಾದನಾ ಪ್ರಕ್ರಿಯೆಯ ಮೂರನೆಯ ಒಂದು ಭಾಗಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸ್ವಯಂಚಾಲಿತ ಯಂತ್ರಗಳ ಬಳಕೆ ಮಾಡಿಕೊಂಡು

ಮಿಕ್ಕಂತೆ ಮಾನವಶ್ರಮ, ಮಾನವ ಕೌಶಲ್ಯ ಹಾಗೂ ಸರಳ ಉಪಕರಣಗಳನ್ನು ಬಳಸಿಕೊಂಡು ತಯಾರಿಸಿದ ಉತ್ಪನ್ನಗಳು ಎಂದರ್ಥ. ಕೈ ಉತ್ಪನ್ನಗಳು ಮೂಲತಃ ಬಡವರ ಉತ್ಪನ್ನಗಳಾಗಿವೆ. ಅದರಲ್ಲೂ ಗ್ರಾಮೀಣ ಬಡವರ ಉತ್ಪನ್ನಗಳಾಗಿವೆ.

ಕೈ ಉತ್ಪನ್ನಗಳ ಕ್ಷೇತ್ರ ತುಂಬ ವಿಶಾಲವಾದದ್ದು ಹಾಗೂ ಪಾರಂಪರಿಕವಾದದ್ದು ಹಾಗೂ ದೈವಿಕವಾದದ್ದು. ಉದಾಹರಣೆಗೆ, ಪಾರಂಪರಿಕ ಕೃಷಿ ಪದ್ಧತಿಯಿಂದ ತಯಾರಾದ ಎಲ್ಲ ಉತ್ಪನ್ನಗಳು ಗುಡ್ಡಗಾಡು, ಜನರು ಸಂಗ್ರಹಿಸಿ ತರುವ ಕಾಡಿನ ಉತ್ಪನ್ನಗಳು, ಕೈಮಗ್ಗ ಉತ್ಪನ್ನಗಳು, ಕರಕುಶಲ ವಸ್ತುಗಳು, ಪಾರಂಪರಿಕ ಮೀನುಗಾರಿಕೆಯ ಉತ್ಪನ್ನಗಳು, ಕುರುಬರು–ಕಾಡುಗೊಲ್ಲರು ಇತ್ಯಾದಿ ಪಶುಪಾಲಕ ಸಮುದಾಯಗಳ ಉತ್ಪನ್ನಗಳು.... ಇತ್ಯಾದಿ ಎಲ್ಲವೂ ಕೈ ಉತ್ಪನ್ನಗಳೇ ಸರಿ. ಮಾತ್ರವಲ್ಲ, ಕೃಷಿ ಕಾರ್ಮಿಕರೂ ಸೇರಿದಂತೆ ಎಲ್ಲ ರೀತಿಯ ಸೇವಕರೂ ಕೈ ಉತ್ಪಾದಕರೆ ಸರಿ. ಆದರೆ, ತನ್ನೆಲ್ಲ ವೈಶಾಲ್ಯ, ತನ್ನೆಲ್ಲ ಪರಂಪರೆ ಹಾಗೂ ತನ್ನೆಲ್ಲ ದೈವಿಕತೆಗಳ ನಂತರವೂ ಕೈ ಉತ್ಪಾದನೆ ತೀವ್ರತರ ಅಸಡ್ಡೆಗೆ ಗುರಿಯಾಗಿದೆ.

ಜಗತ್ತಿನ ಒಟ್ಟು ಉತ್ಪಾದನೆಯಲ್ಲಿ ಪ್ರತಿಶತ ಅರವತ್ತರಿಂದ ಎಪ್ಪತ್ತು ಈಗಲೂ ಕೈ ಉತ್ಪಾದನೆಯೇ ಆಗಿದೆ. ಹಾಗೆಂದು ಇತ್ತೀಚೆಗೆ ಬಿಡುಗಡೆಯಾದ ವಿಶ್ವಬ್ಯಾಂಕಿನ ವರದಿ ಹೇಳಿದೆ. ಇದೊಂದು ಅದ್ಭುತ ಸಂಗತಿಯೇ ಸರಿ. ಯಂತ್ರನಾಗರಿಕತೆ ಇಷ್ಟೆಲ್ಲ ಅವರಿಸಿಕೊಂಡಿರುವಾಗಲೂ, ಅಂಗಡಿಗಳ ಗಾಜಿನ ಕಪಾಟಿನ ತುಂಬ ಯಂತ್ರ ಉತ್ಪನ್ನಗಳೇ ತುಂಬಿಕೊಂಡಿರುವಾಗಲೂ ಕೈ ಉತ್ಪಾದಕ ಕ್ಷೇತ್ರವೇ ಮಹತ್ತರವಾದದ್ದು ಎಂದು ಈ ಅಂಕಿ ಅಂಶ ಸಾರಿ ಹೇಳುತ್ತಿದೆ. ದುರಂತವೆಂದರೆ ನಾವು ಹಾಗೆ ಭಾವಿಸಿದಂತಿಲ್ಲ. ಕೈ ಉತ್ಪಾದನೆ ಮುಳುಗಲಿರುವ ಸೂರ್ಯ ಎಂದೇ ನಾವು ತಿಳಿದಿದ್ದೇನೆ. ಮಾತ್ರದಲ್ಲ 'ಬೇಗೆ ಮುಳುಗಿ ಹೋಗಬಾರದೆ ಈ ಖೋಡಿ' ಎಂಬ ಅಸಹನೆಯಿಂದ ಈ ಕ್ಷೇತ್ರವನ್ನು ಕಾಣುತ್ತಿದ್ದೇವೆ. ಯಂತ್ರಕ್ಷಮತೆಯ ಬಗೆಗಿನ ನಮ್ಮ ನಂಬಿಕೆ ಅಷ್ಟೊಂದು ದಟ್ಟವಾಗಿದೆ. ಇದು ದುರಂತವೇ ಸರಿ. ಏಕೆಂದರೆ ಯಂತ್ರವು ಮಾನವ ಸಭ್ಯತೆಯನ್ನು ಇಡಿಯಾಗಿ ಕಬಳಿಸಿ ಕೊಲ್ಲಲಿದೆ.

ಸೀಮಿತ ಮೌಲ್ಯಮಾಪನೆಯ ದುರಂತವಿದು. ಹಣ ಮಾತ್ರವೇ ಮೌಲ್ಯ ಎಂದು ತಿಳಿಯುವ ವ್ಯವಸ್ಥೆ ನಮ್ಮದು. ಈ ವ್ಯವಸ್ಥೆಯು ಯಂತ್ರ ಉತ್ಪನ್ನಗಳಿಗೆ ಅತಿಯಾದ ಬೆಲೆಯನ್ನು ಕೈ ಉತ್ಪನ್ನಗಳಿಗೆ ಅತಿ ಕಡಿಮೆ ಬೆಲೆಯನ್ನು ನಿಗದಿಪಡಿಸಿದೆ. ಹಾಗಾಗಿ ಎಪ್ಪತ್ತು ಪ್ರತಿಶತ ಉತ್ಪಾದಕತೆಯು ನಗಣ್ಯವಾಗಿ ಕೇವಲ ಮೂವತ್ತು ಪ್ರತಿಶತ ಉತ್ಪಾದಕತೆ ಅತಿಗಣ್ಯವಾಗಿ ಕಾಣತೊಡಗಿದೆ.

ಮೋಜಿನ ವಸ್ತುಗಳು ಮೇಲೆದ್ದು ಬಂದಿದೆ. ಅಗತ್ಯ ವಸ್ತುಗಳು ಬೆಲೆ ಕಳೆದುಕೊಂಡಿವೆ. ಉದಾಹರಣೆಗೆ, ವರ್ಷವಿಡೂ ದುಡಿದು, ಹಲವು ಕ್ವಿಂಟಾಲ್ ರಾಗಿ ಬೆಳೆದು ಮಾರಿದರೂ

ಒಂದು ಮೊಬೈಲು ಫೋನ್ ಕೊಳ್ಳಲಾಗದ ಪರಿಸ್ಥಿತಿ ಇಂದಿನದು. ಮೊಬೈಲುಗಳ ಉತ್ಪಾದಕನು ಕೋಟ್ಯಾಧಿಪತಿಯೂ ರಾಗಿ ಬೆಳೆಯುವ ರೈತನು ದರಿದ್ರನೂ ಆಗಿರುವಂತೆ ಮಾಡಿರುವ ಪರಿಸ್ಥಿತಿ. ಸುಮಾರು ಎರಡುನೂರು ವರ್ಷಗಳ ಹಿಂದೆ ಈ ಪ್ರಕ್ರಿಯೆ ಆರಂಭವಾಯಿತು. ಕೈ ಉತ್ಪನ್ನಗಳನ್ನು ಹಿಂದಕ್ಕೊತ್ತಿ ಯಂತ್ರ ಉತ್ಪನ್ನಗಳು ಮುಂದೆ ಬಂದವೂ. ಯಂತ್ರಗಳು ಉತ್ಪಾದಕತೆಯನ್ನು ಹೆಚ್ಚಿಸಿದವು, ಅಸಹಜ ರೀತಿಯಿಂದ ಹೆಚ್ಚಿಸಿದವು. ಅಗಾಧ ಪ್ರಮಾಣದ ಶ್ರೀಮಂತಿಕೆಯನ್ನು ಸೃಷ್ಟಿಸಿದವು. ವಿಶ್ವ ಮಾರುಕಟ್ಟೆಯನ್ನು ಸ್ಥಾಪಿಸಿದವು. ಮಾರುಕಟ್ಟೆಗೆ ಮರುಳಾದ ಮನುಷ್ಯರು ನಾವು, ಸಭ್ಯತೆಯ ಮಿಕ್ಕೆಲ್ಲ ಆಯಾಮಗಳನ್ನು ಹಿಂದಿಕ್ಕಿ ಸಂಪತ್ತಿನ ಹಿಂದೆ ಓಡಿದೆವು. ತನ್ನ ಪ್ರಖ್ಯಾತ ಸಿನಿಮಾ 'ಗೋಲ್ಡ್‌ರಷ್'ನಲ್ಲಿ ಚಾರ್ಲಿಚಾಪ್ಲಿನ್ ಈ ಬಗ್ಗೆ ತುಂಬ ಮಾರ್ಮಿಕ ಚಿತ್ರಣ ನೀಡಿದ್ದಾನೆ. ಬಂಗಾರದ ಮೋಹಕ್ಕೆ ಬಿದ್ದ ಮನುಕುಲವು ಮಾನವತೆ ಮರೆತು, ಹೇಗೆ ಹುಚ್ಚೆದ್ದು ಕುಣಿಯಿತು ಎಂದು ಅಲ್ಲಿ ಚಿತ್ರಿಸಿದ್ದಾನೆ.

ಸಂಪತ್ತಿನ ಮೋಹಕ್ಕೇನೋ ಬಿದ್ದೆವು. ಆದರೆ ನಮ್ಮೊಳಗಿರುವ ಜೀವಮಾತ್ರ ಯಂತ್ರ ಮೋಹಕ್ಕೆ ಬೀಳದೆ ಉಳಿಯಿತು. ಸಹಜತೆಯತ್ತ ತುಡಿಯುತ್ತಲೇ ಉಳಿಯಿತು ಅದು. ಹೀಗಾಗಿ ಯಂತ್ರ ಸಂಪತ್ತು ಹಾಗೂ ಸಹಜತೆಗಳ ನಡುವಿನ ಹಗ್ಗ ಜಗ್ಗಾಟದಲ್ಲಿ ಸಿಲುಕಿ ನಾವು ಜರ್ಜರಿತರಾದೆವು. ಪಾಪಪ್ರಜ್ಞೆ ಕಾಡತೊಡಗಿತು. ಪಾಪಪ್ರಜ್ಞೆಯಿಂದಾಗಿ ಕೈ ಉತ್ಪಾದಕ ಬಡವರನ್ನು ನಾವು ಅನುಕಂಪದಿಂದ ಕಾಣತೊಡಗಿದೆವು. ಅವರಿಗೆ ಅಷ್ಟಿಷ್ಟು ಸಹಾಯ ಮಾಡತೊಡಗಿದೆವು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದೆವು.

ಬಡವರ ವೋಟುಗಳು ತಮಗೆ ಅಗತ್ಯ ಎಂಬ ಕಾರಣವೂ ಇದ್ದಿತು. ಸರ್ಕಾರಗಳು ಕೈ ಉತ್ಪಾದಕರಿಗೆ ಹಲವು ರೀತಿಯ ಸಹಾಯಧನವನ್ನು ನೀಡುತ್ತಿವೆ. ಸಾಲ ನೀಡುತ್ತಿವೆ. ತೀರಿಸಲಾಗದ ಸಾಲವನ್ನು ಕಾಲಕಾಲಕ್ಕೆ ಮನ್ನಾ ಮಾಡುತ್ತಿವೆ. ಸರ್ಕಾರಗಳು ಅನೇಕ ವಸ್ತು ಹಾಗೂ ಸೇವೆಗಳನ್ನು ಉಚಿತವಾಗಿ ಹಂಚುತ್ತಿವೆ. ಒಟ್ಟಾರೆಯಾಗಿ ತಿಳಿದೂ ತಿಳಿದೂ ತಪ್ಪು ಮಾಡುತ್ತಾ, ಮಾಡಿದ ತಪ್ಪಿಗಾಗಿ ಪ್ರಾಯಶ್ಚಿತವನ್ನು ಪಡುತ್ತಾ ಬದುಕಿದ್ದೇವೆ ಯಂತ್ರನಾಗರಿಕರು ನಾವು. ಇಂದಿನ ವ್ಯವಸ್ಥೆ ಸೃಜನಶೀಲವಾಗಿ ಉಳಿದೇ ಇಲ್ಲ, ಹೇಗೆ ಉಳಿದೀತು ಹೇಳಿ? ಸಮಾಜದ ಎಪ್ಪತ್ತು ಪ್ರತಿಶತ ಜನರು ಭಿಕ್ಷುಕ ಮನೋವೃತ್ತಿಗೆ ಪಕ್ಕಾಗಿರುವಾಗ ಮಿಕ್ಕ ಮೂವತ್ತು ಪ್ರತಿಶತ ಜನರು ಸುಲಭ ಬದುಕಿನ ಕಾಯಿಲೆಗೆ ಪಕ್ಕಾಗಿರುವಾಗ ಸೃಜನಶೀಲತೆ ಉಳಿದೀತಾದರೂ ಹೇಗೆ? ಸೃಜನಶೀಲತೆ ಎಂದರೆ ಅದೇನು ಐಷಾರಾಮಿ ಹೋಟೆಲ್ಲೇ ಅಥವಾ ಫ್ಯಾಷನ್ನೇ ಅಥವಾ ಮನರಂಜನಾ ಕಾರ್ಯಕ್ರಮ ಮಾತ್ರವೇ? ಅಲ್ಲ ತಾನೇ!

ಸ್ವಯಂಚಾಲಿತ ಯಂತ್ರಗಳು ಬೃಹತ್ ಪ್ರಮಾಣದ ಸಂಪತ್ತನ್ನೇನೋ ಗುಡ್ಡೆ ಹಾಕಿದವು. ಆದರೆ ಸಂಪತ್ತು ಬೆರಳೆಣಿಕೆಯ ಜನರಲ್ಲಿ ಉಳಿಯಿತು. ಶ್ರಮಜೀವಿಗಳು, ಸುಲಭಜೀವಿಗಳು

ಇಬ್ಬರೂ ಯಂತ್ರವ್ಯವಸ್ಥೆಯ ಗುಲಾಮರಾದರು. ಯಾವುದನ್ನು ನಾವು ಪಾಳೆಯಗಾರಿ ವ್ಯವಸ್ಥೆಯ ಅಭ್ಯಾಸಗಳು ಎಂದು ತಿಳಿದಿದ್ದೇವೋ ಅದು ನೂರಾರು ಪಟ್ಟು ಅಭಾಸಕಾರಿಯಾಗಿ ಇಂದಿನ ವ್ಯವಸ್ಥೆಯೊಳಗೆ ಕಾಣಿಸತೊಡಗಿದೆ.

ಕೆಡುಕು ಬಾಗಿಲಿಗೆ ಬಂದಿದೆ. ಬಾಗಿಲು ಬಡಿಯತೊಡಗಿದೆ. ಹಾಗಾಗಿ ಕೊಂಚ ತಡವಾಗಿಯಾದರೂ ಸರಿ, ಕೈ ಉತ್ಪಾದನಾ ವ್ಯವಸ್ಥೆ ಮತ್ತೆ ನೆನಪಿಗೆ ಬರತೊಡಗಿದೆ. ಹೆಚ್ಚು ಆರೋಗ್ಯಕರವೂ ಹೆಚ್ಚು ಸುಸ್ಥಿರವೂ ಆದ ಪರ್ಯಾಯ ವ್ಯವಸ್ಥೆಯಾಗಿ ಅದು ನೆನಪಿಗೆ ಬರತೊಡಗಿದೆ. ಖ್ಯಾತ ಕೈಮಗ್ಗ ಕಾರ್ಯಕರ್ತೆ ಉಜ್ರಮ್ಮ ಹೇಳುವಂತೆ, ಹೊಸದೊಂದು ಕೈಗಾರಿಕಾ ಕ್ರಾಂತಿಯ ಹೊಸ್ತಿಲಿನಲ್ಲಿ ನಿಂತಿದ್ದೇವೆ ನಾವು. ಅದುವೆ ಕೈ ಉತ್ಪನ್ನಗಳ ಕ್ರಾಂತಿ.

ಕೈ ಉತ್ಪನ್ನಗಳ ಪರವಾದ ಚಳುವಳಿಗೆ ಹಲವು ವಿಶೇಷತೆಗಳಿವೆ. ಅದು ಕೇವಲ ಬಡವರನ್ನೇ ಅಲ್ಲದೆ ಸಮಾಜದ ಎಲ್ಲ ವರ್ಗಗಳ ಜನರನ್ನು ಸೃಜನಶೀಲರನ್ನಾಗಿಸಬಲ್ಲುದಾಗಿದೆ. ಈವರೆಗೆ ಸರ್ಕಾರಿ ಕಚೇರಿಗಳ ಮುಂದೆ ಭಿಕ್ಷೆ ಬೇಡುತ್ತಾ ಎಡತಾಕುತ್ತಿದ್ದ ಕೈ ಉತ್ಪಾದಕರು ಇನ್ನು ಮುಂದೆ ಸಿದ್ಧರು, ಭೈರಾಗಿಗಳು, ಅವಧೂರಂತೆ ಕಂಗೊಳಿಸಲಿದ್ದಾರೆ. ಕೈ ಉತ್ಪನ್ನಗಳ ಚಳುವಳಿಯು ಸಂತ ಪರಂಪರೆಯ ಮುಂದುವರೆದ ರೂಪವೇ ಆಗಿದೆ. ಅನುಮಾನಗಳೇ ಬೇಡ. ಇಪ್ಪತ್ತೊಂದನೆಯ ಶತಮಾನದಲ್ಲಿ ದೇವರು ಒಂದೊಮ್ಮೆ ಅವತರಿಸಬಲ್ಲನಾದರೆ, ಅದು ಕೈ ಉತ್ಪಾದನ ರೂಪದಲ್ಲಿ ಮಾತ್ರ.

ಮಂಟೇಸ್ವಾಮಿಗಳು ಹದಿನೈದನೆಯ ಶತಮಾನದಲ್ಲಿ ಕಲ್ಯಾಣದ ಬಾಗಿಲಿನಲ್ಲಿ ಕಾಣಿಸಿಕೊಂಡದ್ದು ಹೀಗೆಯೇ ತಾನೆ? ಕೀವು ಸುರಿಸುತ್ತಾ, ಕುಡುಕನಾಗಿ, ದರಿದ್ರನ ರೂಪದಲ್ಲಿಯಏ ತಾನೇ ಆ ಸಂತ ಕಾಣಿಸಿಕೊಂಡದ್ದು? ಕೀವು ಸುರಿಸುತ್ತಿರುವ ಹಾಗೂ ಕುಡುಕನಾಗಿರುವ ಇಂದಿನ ದರಿದ್ರನು ಕೈ ಉತ್ಪನ್ನಗಳ ಚಳವಳಿಯಿಂದಾಗಿ ದೈವಾಂಶ ಸಂಭೂತನಾಗಲಿದ್ದಾನೆ. ದೇವರ ದರುಶನದ ಲಾಭ ಒದಗಿಸಲಿದ್ದಾನೆ. ಕೈ ಉತ್ಪಾದಕರ ಚಳುವಳಿಯು ಈ ಅರ್ಥದಲ್ಲಿ, ಲೌಕಿಕದ ಚಳವಳಿಯೂ ಹೌದು. ಅಲೌಕಿಕದ ಚಳುವಳಿಯು ಹೌದು. ಚಳವಳಿ ಸಾಗಿ ಬಂದಿರುವ ದಾರಿ ಗುಮನಾರ್ಹವಗಿದದ್ದು. ೨೦೧೪ರಲ್ಲಿ ಇದು ಕೈ ಮಗ್ಗ ನೇಕಾರರ ಸತ್ಯಾಗ್ರಹವಾಗಿ ಮೊದಲು ಮೂಡಿಬಂದಿತು. ೨೦೧೫ರಲ್ಲಿ ಬದನವಾಳಿನಲ್ಲಿ ಸುಸ್ಥಿರ ಬದುಕಿನ ಸತ್ಯಾಗ್ರಹವಾಗಿ ಹೊಸ ರೂಪುಪಡೆಯಿತು. ೨೦೧೭ರ ಜೂನ್ ತಿಂಗಳಿನಲ್ಲಿ, ಭಾರತ ಸರ್ಕಾರವು ಜಿ.ಎಸ್.ಟಿ. ಎಂಬ ಹೊಸದೊಂದು ಮಾರಾಟ ತೆರಿಗೆಯನ್ನು ಜಾರಿಗೆ ತಂದಾಗ, ಕರ ನಿರಾಕರಣೆ ಸತ್ಯಾಗ್ರಹವಾಗಿ ಮೂಡಿಬಂದಿತು. ಈಗ ಕೈ ಉತ್ಪಾದಕರ ಸಮಗ್ರ ಚಳವಳಿಯಾಗಿ ಇದು ರೂಪು ಪಡೆದಿದೆ.

ಎಲ್ಲ ಚಳವಳಿಗಳ ಅಂತರಂಗದಲ್ಲಿ ಒಂದು ಗಟ್ಟಿ ತಾತ್ವಿಕತೆ ಹುದುಗಿರುತ್ತದೆ. ಅದುವೆ ಚಳುವಳಿಯ ಜೀವಾಳವಾಗಿರುತ್ತದೆ, ದೈವವಾಗಿರುತ್ತದೆ. ಕೈ ಉತ್ಪನ್ನಗಳ ಚಳವಳಿಯನ್ನು ಗಾಂಧಿವಾದಿ

ಚಳವಳಿ ಎಂದು ಕೂಡ ಕರೆಯುವ ರೂಢಿಯಿದೆ. ಕೈ ಉತ್ಪಾದನಾ ವ್ಯವಸ್ಥೆ ಹಾಗೂ ಯಂತ್ರ ಉತ್ಪಾದನಾ ವ್ಯವಸ್ಥೆಗಳ ನಡುವಿನ ತೀವ್ರತರನಾದ ಅಸಮಾನತೆಯ ಫಲಾಶ್ರುತಿ ಯಂತ್ರನಾಗರಿಕತೆ ಎಂದು ಈ ಚಳವಳಿ ಪರಿಭಾವಿಸುತ್ತದೆ.

ಕೈ ಉತ್ಪನ್ನಗಳ ಚಳವಳಿಗೂ ಇತರೆ ಚಳವಳಿಗೂ ಒಂದು ವ್ಯತ್ಯಾಸವಿದೆ. ಪ್ರಮುಖ ವ್ಯತ್ಯಾಸವಿದು. ಸಂಘರ್ಷವನ್ನು ಹಿರಿದಾಗಿಸುವ ಚಳುವಳಿಯಲ್ಲ ಸಂಘರ್ಷವನ್ನು ನಿವಾರಿಸುವ ಚಳವಳಿ ಇದು. ಪಾಪದ ಹೊರೆಯನ್ನು ಇದು ವ್ಯವಸ್ಥೆಯ ಮೇಲೆ ಹೊರಿಸುತ್ತದೆಯೇ ಹೊರತು ವ್ಯಕ್ತಿಗಳ ಮೇಲೆ ಹೊರಿಸುವುದಿಲ್ಲ. ಯಂತ್ರ ಉತ್ಪಾದನೆಯನ್ನು ಬಲವಂತವಾಗಿ ಛಿದ್ರಗೊಳಿಸಲು ಬಯಸುವುದಿಲ್ಲ ಈ ಚಳವಳಿ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಂತ ಬದುಕಿನಲ್ಲಿ ಕೈ ಉತ್ಪನ್ನಗಳನ್ನು ಅಳವಡಿಸಿಕೊಳ್ಳುವಂತೆ, ಸ್ವಂತ ಕೈ ಉತ್ಪಾದಕನಾಗುವಂತೆ ಇದು ಪ್ರಚೋದನೆ ನೀಡುತ್ತದೆ. ಅರ್ಥಾತ್ ಒಳಿತಿನ ಪ್ರಚೋದನೆ ನೀಡುತ್ತದೆ. ಸರಳ ಬದುಕಿಗೆ, ಒತ್ತಡವಿಲ್ಲದ ಬದುಕಿಗೆ, ಹಂಚಿಕೊಂಡು ಬಾಳುವ ಬದುಕಿಗೆ ವ್ಯಕ್ತಿ ಬದಲಾಗುವಂತೆ ಪ್ರೇರೇಪಿಸುವ ಚಳವಳಿ ಇದಾಗಿದೆ.

ಈ ರೀತಿಯ ಸಂಘರ್ಷರಹಿತ ಚಳವಳಿಯ ರೂಪುರೇಷೆಯನ್ನು ಮೊದಲು ಸಿದ್ಧಪಡಿಸಿದವರು ಗಾಂಧೀಜಿ. ಸತ್ಯ ಹಾಗೂ ಅಹಿಂಸೆ ತನ್ನೆರಡು ಧ್ಯೇಯಗಳು ಎಂದು ಅವರು ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಘೋಷಿಸಿದ್ದರು. ಕೈ ಉತ್ಪಾದನೆ ಸತ್ಯವಾದರೆ ಅದನ್ನು ತಲುಪುವ ಹಾದಿ ಅಹಿಂಸಾತ್ಮಕವಾಗಿರಬೇಕೆ ಎಂದು ಅವರು ಸೂಚಿಸಿದ್ದರು. ವಿರುದ್ಧ ದಿಕ್ಕಿನ ಸಾಮಾಜಿಕ ಸೆಳೆತವನ್ನು ಚಳವಳಿ ಮಾನ್ಯ ಮಾಡುತ್ತದೆ. ಅಥಾತ್ ಬಡವರು ತಮ್ಮ ಜೀವನ ಶೈಲಿಯನ್ನು ಕಟ್ಟಿಕೊಳ್ಳಬೇಕು, ಶ್ರೀಮಂತರು(ಐಷಾರಾಮಿಯನ್ನು) ಕಳಚಿಕೊಳ್ಳಬೇಕು ಎಂದು ಚಳುವಳಿಯು ಪ್ರತಿಪಾದಿಸುತ್ತದೆ. ಎಲ್ಲವೂ ಹೌದು. ಆದರೆ ಆದರ್ಶ ನಿಜವಾಗಬೇಕೆಂದರೆ ಕೈ ಉತ್ಪನ್ನಗಳಿಗೆ ಬೆಲೆ ಬರಬೇಕು.

ಬೆಲೆಗೆ ಹಲವು ಅರ್ಥಗಳಿವೆ. ಸೀಮಿತ ದೃಷ್ಟಿಯಿಂದ ನೋಡಿದಾಗ, ಕೈ ಉತ್ಪಾದನೆಗೆ ಉತ್ತಮ ದರವಾಗಿಯೂ ದೂರದೃಷ್ಟಿಯಿಂದ ನೋಡಿದಾಗ ಕೈ ಉತ್ಪಾದನೆಗೆ ಸಾಮಾಜಿಕ ಗೌರವವಾಗಿಯೂ ಅದು ಗೋಚರಿಸುತ್ತದೆ. ಎರಡೂ ರೀತಿಯ ಬೆಲೆಗಳೂ ಕೈ ಉತ್ಪನ್ನಗಳಿಗೆ ಇಲ್ಲದೆ ಹೋದರೆ ಸಮಾಜ ಉದ್ಧಾರವಾಗುವುದು ಕನಸಿನ ಮಾತೇ ಸರಿ. ಕೈ ಉತ್ಪನ್ನಗಳ ಚಳುವಳಿಯೆಂದರೆ ಇದೆಲ್ಲ ಆಗಿದೆ.

ಉಪಸಂಹಾರ

ಉಪಸಂಹಾರ

ಕರ್ನಾಟಕ ರಾಜ್ಯದಲ್ಲಿ ಅಲೆಮಾರಿ ಜೀವನವನ್ನು ನಡೆಸುತ್ತಿರುವ ಹಲವಾರು ಸಮುದಾಯದಲ್ಲಿ ಅಲ್ಪಸ್ವಲ್ಪ ನೆಲೆನಿಂತು ತಮ್ಮ ಬದುಕಿಗಾಗಿ ಅಲೆಮಾರಿ ಜೀವನ ನಡಸುತ್ತಿರುವ ಕೊರವ ಸಮುದಾಯವು ಒಂದು. ಎಲ್ಲ ಸಮುದಾಯಗಳಲ್ಲಿಯೂ ಅವರದೇಯಾದ ಇತಿಹಾಸ ಇರುವಂತೆ ಈ ಸಮುದಾಯದಲ್ಲಿಯೂ ಐತಿಹಾಸಿಕ, ಪೌರಾಣಿಕ ಹಿನ್ನೆಲೆಯ ಐತಿಹ್ಯಗಳಿವೆ. ಈ ಸಮುದಾಯದಲ್ಲಿ ಅನೇಕ ಉಪಜಾತಿಗಳಿವೆ. ಕೊರವರನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಕೊರವ, ಕೊರಮ, ಕೊರಮಶೆಟ್ಟಿ, ಕೊರಚ, ಕುಂಚಿಕೊರವ, ಕೊರವನ, ಭಜಂತ್ರಿ, ಕೈಕಾಡಿ, ಯರಕುಲ, ಕುಳುವರ ಎಂಬ ಪರ್ಯಾಯ ಹೆಸರುಗಳಿಂದ ಗುರುತಿಸಿಕೊಂಡಿರುವುದುಂಟು. ಇವರು ಮೂಲತಹಃ ದ್ರಾವಿಡ ಜನಾಂಗದವರಾಗಿ, ಬುಡಕಟ್ಟು ಸಂಸ್ಕೃತಿಯುಳ್ಳವರಾಗಿ ತಮಿಳುನಾಡಿನಿಂದ ವಲಸೆ ಬಂದು ರಾಜ್ಯದ ಹಲವೆಡೆ ನೆಲಸಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ವಿವಿಧ ವೃತ್ತಿಗಳನ್ನು ಕೈಗೊಂಡು ಉಪಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯವು ಮೌಖಿಕವಾದ ಪರಂಪರೆಯುಳ್ಳ ಮತ್ತು ಪ್ರಸ್ತುತದಲ್ಲಿ ಹಲವಾರು ಅಂಶಗಳು ದಾಖಲೆಗಲು ಹೊರಬರುತ್ತಿರುವುದುಂಟು.

ಕೊರವ ಸಮುದಾಯವು ತಮ್ಮ ಸಂಸ್ಕೃತಿಯುಳ್ಳ ಜನರ ಮನೆಗಳಲ್ಲಿ ಹಾಗೂ ಬಂಧುಗಳಲ್ಲಿ ಕುಳುವ ಭಾಷೆಯನ್ನು ಮಾತನಾಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದ ಬಹುಭಾಗದಲ್ಲಿಯು ಕುಳುವ ಭಾಷೆಯು ಜೀವಂತವಾಗಿದೆ. ಈ ಭಾಷೆಯು ಸಮುದಾಯದ ವ್ಯವಹಾರಿಕ ಭಾಷೆಯಾಗಿ ಬಳಸಲಾಗುತ್ತದೆ. ಈ ಭಾಷೆಯಲ್ಲಿ ಕನ್ನಡ, ತೆಲುಗು, ತಮಿಳು, ಭಾಷೆಗಳಿದ್ದು, ಸಂಪರ್ಕ ಭಾಷೆಯಾಗಿ ಆಯಾ ಪ್ರದೇಶಗಳ ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ, ತೆಲುಗು, ತಮಿಳು, ಮರಾಠಿ, ಉರ್ದುಗಳನ್ನು ಮಾತನಾಡುವವರು. ಕುಳುವ ಭಾಷೆಗೆ ಲಿಪಿ ಇಲ್ಲ, ಅದನ್ನು ಸಂಶೋಧಿಸುವ ಅಗತ್ಯವು ಇದೆ. ಕುಳುವ ಭಾಷೆಯು ಸಮುದಾಯದೊಳಗಡೆ ಬದುಕುವವರ ಮಧ್ಯದಲ್ಲಿಯೆ ಹೆಚ್ಚು ಕಂಡುಬರುತ್ತದೆ. ವಿದ್ಯಾವಂತರಾಗಿ ಸಮುದಾಯದಿಂದ ದೂರವಿರುವವರಲ್ಲಿ ಭಾಷೆಯ ಬಳಕೆ ಕಡಿಮೆ ಎನ್ನಬಹುದು. ಬಹುತೇಕ ಜನರು ಬೇರೆಯವರು ಮಾತನಾಡಿದನ್ನು ಕಷ್ಟಪಟ್ಟು ತಿಳಿದುಕೊಳ್ಳುತ್ತಾರೆ. ಇತ್ತೀಚಿನ ತಮ್ಮ ಸಮುದಾಯದ ಬಗೆಗೆ ಹೆಚ್ಚು ಮನ ಒಲಿಯುತ್ತಿದ್ದು

ಭಾಷೆಯನ್ನು ಕಲಿಯಲು ಮುಂದಾಗುತ್ತಿದ್ದಾರೆ. ರಾಜಾಶ್ರಯದಲ್ಲಿ ಗುಪ್ತಭಾಷೆಯಾಗಿ ಬಳಕೆಯಾಗುತ್ತಿತ್ತು ಎಂಬುದು ತಿಳಿದು ಬರುತ್ತದೆ.

ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕ ಉದ್ದಗಲಕ್ಕೂ ಈ ಸಮುದಾಯವುವಿದ್ದರು ಆದರೆ ಕೊರವ ಸಮುದಾಯದ ಅಧ್ಯಯನವನ್ನು ಹೈದಾರಬಾದ್ ಕರ್ನಾಟಕದ ಭಾಗಕ್ಕೆ ವಿಸ್ತಾರಿಸಿಕೊಂಡಿದೆ. ಸಾಮಾಜಿಕ ಜೀವನ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಅಧ್ಯಯನಕ್ಕೆ ೫ ಜಿಲ್ಲೆಗಳನ್ನು ಆಯ್ಕೆಗೊಳ್ಳಲಾಗಿದೆ. ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ವಾಸಿರುವ ಕೊರವ ಸಮುದಾಯದ ಗ್ರಾಮಗಳು ಕುಟುಂಬಗಳ ಅಂಕಿ ಅಂಶಗಳನ್ನು ಕಲೆ ಹಾಕಲಾಗುವುದು ಈ ಸಮುದಾಯದ ಶೈಕ್ಷಣಿಕ, ರಾಜಕೀಯ, ಯಾಂತ್ರೀಕರಣದ ಪ್ರಭಾವವನ್ನು ಸೈದ್ಯಾಂತಿಕವಾಗಿ ಪರಿಶೀಲಿಸುವ ಉದ್ದೇಶವನ್ನು, ಸಾಮಾಜಿಕ ಚರಿತ್ರೆಯನ್ನು ಈ ಸಮುದಾಯ ರೂಪುಗೊಂಡ ಬಗೆಯನ್ನು ಗತತಾರ್ಕಿಕ ವಿಧಾನದ ಮೂಲಕ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತದೆ. ವಸಾಹತುಶಾಹಿ ರಾಜಕಾರಣ ಮತ್ತು ಸಮಾಜವನ್ನು ರೂಪಿಸಿದೆ. ಶ್ರೇಣಿಕರಣದ ರಾಜಕೀಯ, ಆರ್ಥಿಕ ಚಲನೆಗಳನ್ನು ವಿವರಿಸಿಕೊಳ್ಳಲಾಗುವುದು. ಮನುಷ್ಯನ ಆರ್ಥಿಕತೆ ಎಂಬುದು ಪ್ರಾಚೀನಕಾಲದಿಂದಲೇ ಆರಂಭ ವಾಗಿದೆ ಎಂದೇ ಹೇಳಬೇಕು. ಹೊಟ್ಟೆಪಾಡಿಗಾಗಿ ಅಲೆಮಾರಿತನವನ್ನು ಅವಲಂಭಿಸಬೇಕಾಯಿತು. ಗುಂಪು ಜಗಳಗಳು ಬಲುಮಟ್ಟಿಗೆ ಮಾನವ ಆರ್ಥಿಕ ಉಪ ಜೀವನವನ್ನು ನಡೆಸಲು ಮಾನವ ಸಂಪಾದನೆ ಮಾಡಬೇಕಾಯಿತು. ಆ ಕ್ರಿಯೆಯನ್ನೆ ದುಡಿಮೆ ಮತ್ತು ಕಾಯಕ ಎನ್ನಲಾಗುತ್ತದೆ. ಬೇಟೆ, ಮೀನುಗಾರಿಕೆ, ಬುಟ್ಟಿಹೆಣೆಯುವುದು ಚರ್ಮದಿಂದ ಮೈ ಮುಚ್ಚಿಕೊಳ್ಳುವ ಬಟ್ಟೆಯ ತಯಾರಿ ಹೇಗೆ ಮಾನವ ಬೇಸಾಯ ಆರಂಭಿಸುವ ಮೊದಲು ನಡೆದುತ್ತಿದ್ದ ಪ್ರಮುಖ ಉದ್ಯೋಗಗಳು ಕೃಷಿ ಜೀವನದ ಆರಂಭವಾದ ಮೇಲೆಯೇ ಈ ಕೆಲಸಗಳು ನಿಲ್ಲಲಿಲ್ಲ ಜೀವನಾವಶ್ಯಕವಾಗಿ ಮುಂದುವರಿಯುವುದು ಇಂದಿಗೂ ನಡೆಯುತ್ತಿವೆ. ಸಣ್ಣ ಸಣ್ಣ ಕುಟುಂಬಗಳು ತಮ್ಮ ತಮ್ಮ ಬದುಕಿನ ಅವಶ್ಯಕತೆಗೆ ಬೇಕಾಗುವುದನ್ನು ಪೂರೈಸಿಕೊಳ್ಳುತ್ತಿದ್ದಾರೆ. ಮುಂದೆ ವ್ಯವಸಾಯ ಪದ್ಧತಿ ಜೀವನದಲ್ಲಿ ಮಹತ್ವದ ಪರಿವರ್ತನೆಯನ್ನು ತಂದಿತು. ಜನರು ಆಹಾರ ಹುಡುಕಿಕೊಂಡು ಅಲೆದಾಡುವುದು ಕಡಿಮೆಯಾಯಿತು. ಆಹಾರದ ಉತ್ಪಾದನೆ ನಿಸರ್ಗವನ್ನು ಮಾತ್ರ ನಂಬದೆ ಪರಿಶ್ರಮದ ಮೂಲಕ ಸಾಧಿಸುವುದು ಕಂಡುಬರುತ್ತದೆ. ಇದಕ್ಕಾಗಿ ಸಾಕುಪ್ರಾಣಿಗಳ ನೆರವನ್ನು ಪಡೆದು ತೊಡಗಿದರು. ಮನುಷ್ಯ ಬೆಳವಣಿಗೆಯಾಗುತ್ತಾ ಹಾಳಾದ ಬಳಕೆಯನ್ನು ಬಾರದ ದಿನಗಳಲ್ಲಿ ತನ್ನ ಸಂಪಾದನೆಯನ್ನು ಕೂಡಿಡುವ ಪ್ರಕೃತಿ ಇರಲಿಲ್ಲ. ದವಸಧಾನ್ಯಗಳನ್ನು ಬಹುಕಾಲ ಕೂಡಿರುವ ಹಾಗೂ ಇಲ್ಲಿ ಅವರಲ್ಲಿ ಏಕಾತಾಭಾವನೆಯು ಸಮವಾಗಿತ್ತು, ಬೇಧಭಾವಗಳಿರಲಿಲ್ಲ, ಒಬ್ಬ ದುಡಿಯುವುದು ಇನ್ನೊಬ್ಬ ಕುಳಿತು ತಿನ್ನುವ ಪ್ರವೃತ್ತಿಯು ಅಂದಿನ ಸಮಾಜದಲ್ಲಿ ತಿಳಿದಿರಲಿಲ್ಲ. ಗುಂಪುವಾಸ, ಗುಂಪುದುಡಿತ ಅವರ ಬದುಕಿನಲ್ಲಿ ಹಾಸುಹೊಕ್ಕಾಯಿತು.

ಗುಲಾಮಗಿರಿ ಅವರಿಗೆ ಅಪರಿಚಿತವಾಗಿತ್ತು. ಸಮುದಾಯದಲ್ಲಿ ಸಾಮಾಜಿಕ ವ್ಯವಸ್ಥೆ ಬೆಳೆದಂತೆ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಕೆಲಸಗಳನ್ನು ಹಂಚಿಕೊಳ್ಳುವುದು ಉತ್ಪಾದನೆಗಳನ್ನು ವಿನಿಮಯ ಮಾಡಿಕೊಳ್ಳುವುದು ೫೦-೬೦ ವರ್ಷಗಳ ಹಿಂದೆ ಕಂಡುಬರುತ್ತಿತ್ತು. ಇಂದು ಸಹ ಕೆಲಕುಟುಂಬಗಳಲ್ಲಿ ಕಂಡುಬರುವುದುಂಟು. ಪ್ರಾಚೀನ ಕಾಲದಿಂದಲೂ ಶ್ರಮ ವಿಭಜನೆಯು ಗಂಡು-ಹೆಣ್ಣೆಂಬ ಲಿಂಗಾಧಾರಿತವಾಗಿತ್ತು. ಸ್ತ್ರೀಯರು ದೈಹಿಕವಾಗಿ ದುರ್ಬಲರೆಂದು ತಿಳಿಸಲಾಗಿತ್ತು. ಹೀಗಾಗಿ ಗಂಡಸರು ಮಾಡುವ ಕೆಲಸ ಹೆಂಗಸರು ಮಾಡುವ ಕೆಲಸ ಎಂಬುವ ಭಾವನೆ ಬೆಳೆಯಿತು. ಮಕ್ಕಳ ಲಾಲನೆ ಪಾಲನೆ, ಅಡುಗೆ ಕೆಲಸ ಮಹಿಳೆಯರಿಗೆ ಸೀಮಿತವಾಗಿತ್ತು. ಕೆಲವೊಮ್ಮೆ ಗೆಡ್ಡೆ ಗೆಣಸು ಕೀಳುವುದಕ್ಕೆ ಅಡವಿಗೆ ಮಹಿಳೆಯರು ಹೋಗುತ್ತಿದ್ದದ್ದು ಇತ್ತು. ಕೃಷಿಯಲ್ಲಿ ಗಂಡಸರಿಗೆ ನೆರವಾಗುವುದುಂಟು ಬುಟ್ಟಿ ಹೆಣೆಯುವುದು, ಈಚಲು ಗರಿಗಳನ್ನು ತರಲು ಕಾಡಿಗೆ ಹೋಗುವುದು, ಸಣ್ಣ ಸಣ್ಣ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಮಹಿಳೆಯರು ನಾಗರಿಕತೆಯ ಬೆಳೆದಂತೆಲ್ಲಾ ಸಂಪತ್ತಿನ ಕಲ್ಪನೆಯು ಮಾರ್ಪಾಡಾಯಿತು ಆಹಾರ ಸಂಗ್ರಹಣೆ ಕಾಲಾವಧಿಯಲ್ಲಿ ಭೂಮಿಯ ಒಡೆತನದ ಕಲ್ಪನೆಯೇ ಇರಲಿಲ್ಲ. ಅಲ್ಲಿ ತಮಗೆ ಹೊರೆಯುವ ಸೌಲಭ್ಯದ ಕೊರತೆಯಾಗದಂತೆ ಅದನ್ನು ಇನ್ನೊಂದೆಡೆ ವಲಸೆ ಹೋಗುತ್ತಿದ್ದರು. ಹಾಗೆ ನೆಲೆಸಿದ ನೆಲವೇ ಅವರ ಸಂಪತ್ತಾಗುತ್ತಿತ್ತು.

ಕೊರವರು ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ರೂಢಿ ನಂಬಿಕೆಗಳನ್ನು ತಲತಲಾಂತರದಿಂದ ಉಳಿಸಿ ಬೆಳೆಸಿಕೊಂಡು ಬರುವುದರ ಜೊತೆಗೆ ತಮ್ಮ ಸಮುದಾಯದ ಮೂಲಪುರುಷರ ಹುಡುಕಾಟದಲ್ಲಿ ಮುಂದುವರೆಯುತ್ತಿದೆ. ಅದರಲ್ಲಿ ೧೨ನೇ ಶತಮಾನದ ನುಲಿಯಚಂದಯ್ಯ, ಕಾಮಕಣ್ಣಿ ಕಾಮಮ್ಮ, ಏಕಲವ್ಯ ಈ ಸಮುದಾಯ ಸಾಂಸ್ಕೃತಿಕ ವೀರರು ಎಂಬುದನ್ನು ಹುಡುಕಲಾಗಿದೆ. ಇನ್ನೂ ಐತಿಹಾಸಿಕ ಮಾಹಿತಿಗಳನ್ನು ಸಂಶೋಧನೆಗೆ ಒಳಪಡಿಸುವ ಅಗತ್ಯವು ಇದೆ. ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕೌಟುಂಬಿಕ, ಶೈಕ್ಷಣಿಕ, ರಾಜಕೀಯ ಹಿನ್ನೆಲೆಗಳನ್ನು ಗಮನಿಸಲಾಗಿದೆ. ಇವರ ಕುಲಪಂಚಾಯಿತಿ ಕಾರ್ಯಗಳನ್ನು ಇಂದಿಗೂ ನೋಡುತ್ತೇವೆ. ಆಯಾ ಪ್ರದೇಶಕ್ಕೆ ಅನುಗುಣವಾಗಿ ವಿವಿಧ ಹೆಸರುಗಳಿರುವುದರಿಂದ ಕಸುಬು, ವ್ಯವಹಾರ, ವಸತಿ, ಸಂಸ್ಕಾರಗಳನ್ನು ತಿಳಿಸಲಾಗಿದೆ. ಈ ಸಮುದಾಯವು ಹಿಂದಿನಿಂದಲೂ ತಿರುಪತಿಯ ವೆಂಕಟೇಶ್ವರನನ್ನು ಮನೆದೇವರೆಂದು ಪೂಜಿಸುತ್ತಾರೆ.

ಕೊರವರಲ್ಲಿ ಪ್ರಮುಖವಾಗಿ ನಾಲ್ಕು ಗೋತ್ರಗಳು ಕಂಡುಬರುತ್ತಿವೆ. ಸತ್ಪಾಡಿ, ಕಾವಾಡಿ, ಮೈನಾಪಾಡಿ, ಮೇಂಡ್ರಗುತ್ತಿ ಎಂದೂ ಹೆಚ್ಚು ಸತ್ಪಾಡಿ, ಕಾವಾಡಿ ಗೋತ್ರಗಳು ಕಂಡುಬರುತ್ತವೆ. ಸ್ವಜಾತಿ ಗೋತ್ರಗಳಲ್ಲಿ ಮದುವೆ ನಡೆಯುವುದಿಲ್ಲ. ಇವರು ಹೆಚ್ಚಾಗಿ ಕೋರ್ಟು ಕಛೇರಿ ಹತ್ತುವುದಿಲ್ಲ. ಸಣ್ಣಪುಟ್ಟ ಸಮಸ್ಯೆಗಳಿದ್ದರೆ ಈಗಲೂ ದೈವದವರ ಕುಲದ ಪಂಚಾಯಿತಿ ಮೂಲಕ ಬಗೆಹರಿಸಿಕೊಳ್ಳುವರು. ಕುಲದ ಪಂಚಾಯಿತಿಯನ್ನು ದೈವದವರು ಎಂದು ಕರೆಯುತ್ತಾರೆ. ಇವರಿಗೆ

ಸಮುದಾಯದಲ್ಲಿ ವಿಶೇಷವಾದ ಗೌರವ ಸ್ಥಾನಮಾನವಿದೆ. ಈ ಸಮುದಾಯದಲ್ಲಿ ಅಪಾರವಾಗಿ ಅಡಗಿರುವ ಕಾವ್ಯ, ಕಲೆ, ಸಾಹಿತ್ಯಗಳನ್ನು ಗುರುತಿಸಲಾಗಿದೆ. ಇದರಿಂದಾಗಿ ಸಮುದಾಯದ ಅನನ್ಯತೆಯನ್ನು ಗುರುತಿಸಲು ಸಾಧ್ಯವಾಗುತ್ತಿದೆ. ಅಲೆಮಾರಿ ಜೀವನಕ್ಕೆ ಹೋಗಲು ಸರ್ಕಾರದ ನಿಯಮಗಳು ಅವರನ್ನು ನೆಲೆನಿಲ್ಲುವಂತೆ ಮಾಡಿವೆ. ಆದರೂ ಸಹ ಬದುಕಿಗಾಗಿ ಹೊಟ್ಟೆಪಾಡಿಗಾಗಿ ಅರೆಅಲೆಮಾರಿಗಳ ತರಹ ಬದುಕನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಕೊರವರ ಸಾಮಾಜಿಕ ಮತ್ತು ಕೌಟುಂಬಿಕ ಸ್ಥಿತಿಗತಿಯು ಸುಧಾರಿಸಬೇಕಾಗಿದೆ. ಇವರಲ್ಲಿ ಅವಿಭಕ್ತ ಕುಟುಂಬವಿರುವುದರಿಂದ ಒಂದೆಸೂರಿನಡಿ ಗಂಡ-ಹೆಂಡತಿ ಮಕ್ಕಳು ಅವರನ್ನು ಆಶ್ರಯಿಸಿದವೆಲ್ಲರೂ ಒಟ್ಟಾಗಿ ಕೂಡಿಬಾಳುವರು. ಹಲವಾರು ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೂ ಕುಟುಂಬದ ಸ್ಥಿತಿ ಸುಧಾರಿಸುವಲ್ಲಿ ವಿಫಲವಾಗಿದೆ. ಕೆಲವರು ಮುಂಜಾನೆಯಿಂದ ಸಂಜೆಯವರೆಗೆ ದುಡಿಯುವರು. ಕೈ ತುಂಬಾ ಹಣಸಂಪಾದಿಸುವರು. ಹಣವನ್ನು ನೇರವಾಗಿ ಮನೆಗೆ ತೆಗೆದುಕೊಂಡು ಹೊಗದೇ ಬೇರೆ ಅನ್ಯಕಾರ್ಯಗಳಿಗೆ ಹೂಡುತ್ತಾರೆ. ಬಹುತೇಕ ಹಳ್ಳಿಗಳಲ್ಲಿರುವ ಇವರು ಈಗಲೂ ಗುಡಿಸಲು ಮತ್ತು ಅವ್ಯವಸ್ಥಿತವಾದ ವಸತಿಗಳಲ್ಲಿ ವಾಸಿಸುವುದುಂಟು. ಹೆಂಗಸರು ಗಂಡಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದುಡಿಯುವ ಶ್ರಮ ಜೀವಿಗಳಾಗಿದ್ದರೂ ಸಾಕ್ಷರತೆ ಪ್ರಮಾಣ ಬೆರಳೆಣಿಕೆಯಲ್ಲಿದೆ. ಬಹುತೇಕ ಕುಟುಂಬದ ಸದಸ್ಯರೆಲ್ಲ ಯಜಮಾನನ ಅಧೀನದಲ್ಲಿ ಜೀವಿಸುತ್ತಾರೆ. ಬಹುತೇಕ ಮಕ್ಕಳು ತಮ್ಮ ಕಸುಬಿನ ಜೊತೆಗೆ ಬಾಲಕಾರ್ಮಿಕರಾಗಿ ಚಿಂದಿ ಆಯ್ದುಕೊಳ್ಳುವ ಕಾರ್ಯದಲ್ಲಿ, ಹಂದಿ ಸಾಕಾಣಿಕೆಗೆ ಬೇಕಾದ ಆಹಾರ ಸಂಗ್ರಹಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ.

ಹಳ್ಳಿಗಳಿಂದ ರಾಜ್ಯದವರೆಗೆ ಹಲವಾರು ಸಂಘಸಂಸ್ಥೆಗಳು ಹುಟ್ಟಿಕೊಂಡಿವೆ. ಈ ಸಂಘಗಳಿಂದ ಕೌಟುಂಬಿಕ ಸುಧಾರಣೆಯಾಗಬೇಕಾಗಿದೆ. ಅಲ್ಲದೆ ಸಾಮಾಜಿಕ ಮತ್ತು ಕೌಟುಂಬಿಕ ಸುಧಾರಣೆಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಾಗಿದೆ. ಪೋಷಕರು ಮನೆಯ ಸದಸ್ಯರಿಗೆ ಪೌಷ್ಟಿಕವಾದ ಆಹಾರವನ್ನು ನೀಡಲಾಗದೇ ಇರುವುದರಿಂದ ಬಹುತೇಕ ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇನ್ನು ಪೋಷಕರು ಹೆಚ್ಚು ಕಾಳಜಿ ವಹಿಸದಿರುವುದರಿಂದ ಮನೆಬಿಟ್ಟು ನಗರದ ಕಡೆ ವಲಸೆ ಹೋಗುತ್ತಿದ್ದಾರೆ. ಮುಂಜಾನೆಯಿಂದ ಸಂಜೆಯವರೆಗೆ ಎಲ್ಲಿ ತಿರುಗಿದರೂ ಈ ಮಕ್ಕಳನ್ನು ಕೇಳುವವರಿಲ್ಲ. ಈ ಕುರಿತು ಕಾಳಜಿವಹಿಸಬೇಕಾಗಿದೆ. ಮಕ್ಕಳ ಆರೋಗ್ಯ ಮತ್ತು ವಿಶೇಷವಾದ ಕಾಳಜಿಯು ಪೋಷಣೆಯಲ್ಲಿ ಬರಬೇಕಾಗಿದೆ.

ಕೊರವ ಸಮುದಾಯವು ಸಹ ಮೂಲತಃವಾಗಿ ಬೆಟ್ಟಗುಡ್ಡ, ಕಾಡುಮೇಡು, ಅರಣ್ಯ-ಕಣಿವೆ, ಕಂದರಗಳಲ್ಲಿ ಜೀವನ ಸಾಗಿಸುಂತವರಾಗಿದ್ದಾರೆ. ಇಂತಹ ಸಮುದಾಯಗಳಲ್ಲಿ ಆದಿವಾಸಿಗಳು, ಅಲೆಮಾರಿಗಳು ಅಥವಾ ಅರೆಅಲೆಮಾರಿಗಳೆಂದು ಕರೆಯಲಾಗುತ್ತದೆ. ಜಗತ್ತಿನ ಎಲ್ಲಾ ಪ್ರದೇಶಗಳಿಂದ

ಇಂತಹ ಅನೇಕ ಅಲೆಮಾರಿಗಳು ತಮ್ಮ ವಲಸೆ ಜೀವನವನ್ನು ಸಾಗಿಸುತ್ತಿರುವರು. ಇತ್ತೀಚಿಗೆ ಆಧುನಿಕತೆಯ ಗಾಳಿಯಿಂದ ಸಿಲುಕಿದ ಈ ಸಮುದಾಯವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಮನೆ–ಮಠ, ಊರು–ಕೇರಿ, ಹಟ್ಟಿ–ಗ್ರಾಮ, ಪಟ್ಟಣ–ನಗರ ಜೀವನವನ್ನು ನಡೆಸುತ್ತಿದ್ದಾರೆ. ಇದರಿಂದಾಗಿ ತಮ್ಮ ಮೂಲ ಹಟ್ಟಿಗಳನ್ನು ಕೆಲವರು ಮಾತ್ರ ಬಿಟ್ಟು ದುಡಿಮೆಗಾಗಿ ನಗರಗಳತ್ತ ವಲಸೆ ಬರುತ್ತಿರುವುದುಂಟು. ತಮ್ಮ ಸಂಸ್ಕೃತಿಯನ್ನು ತಿರಸ್ಕರಿಸದೆ ಆಧುನಿಕತೆಗೆ ಹೊಂದಿಕೊಳ್ಳಲು ಆಗದೆ ನುಂಗಲಾರದ ತುತ್ತಾಗಿದೆ.

ಇಂದು ಅಸ್ಪೃಶ್ಯತೆ ಕಾನೂನು ಬಾಹಿರವಾದರೂ ಮೇಲ್ವರ್ಗದವರು ಕೊರವರನ್ನು ಕೆಲವೆಡೆ ಈಗಲೂ ಹೀನಾಯವಾಗಿಯೇ ಪರಿಗಣಿಸುವುದಿದೆ. ಕೊರವರು, ಕೊರಚರು, ಭಜಂತ್ರಿ, ಕೊರಮ ಈ ಮುಂತಾದ ಜಾತಿಯವರನ್ನು ಸಮಾನರೆಂದು ಪರಿಗಣಿಸುತ್ತಾರೆ. ಆದರೆ ಉಪಜಾತಿಗಳಲ್ಲಿಯೇ ಪರಸ್ಪರರಲ್ಲಿ ತಾವೇ ಮೇಲೆಂಬ ಭಾವನೆಯಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಧಾನ ಸಮುದಾಯಗಳು ತನ್ನ ಸಹವರ್ತಿ ಸಮುದಾಯಗಳನ್ನು ಮೇಲುಕೀಳು ವಿಭಾಗಿಸುತ್ತಾ, ಅಸಮಾನತೆಗಳನ್ನು ಪೋಷಣೆ ಮಾಡುತ್ತಲೆ ಇರುತ್ತವೆ. ಪರಸ್ಪರ ಕಲೆತು ಸಹಬಾಳ್ವೆ ರೂಪಿಸಿಕೊಳ್ಳಬಹುದಾದ ಸಮುದಾಯಗಳು ಮೇಲು ಕೀಳುಗಳನ್ನು ಆಚರಿಸುತ್ತಾ ಒಡೆದ ಮನೆಯಂತಾಗುತ್ತಿವೆ. ಜಾತೀಯ ಕೀಳಿರಿಮೆಯಿಂದ ತಮ್ಮ ಜಾತಿಯನ್ನೆ ಹೇಳಿಕೊಳ್ಳಲು ಮುಂದೆ ಬರುತ್ತಿಲ್ಲ. ಅಂತವರು ಸಮುದಾಯದ ಅಭಿವೃದ್ಧಿಗಾಗಿ ಮುಂದೆ ಬಂದು ಸಮುದಾಯದ ಅಭಿವೃದ್ಧಿಗೆ ಕಾರಣವಾಗಬೇಕು. ಪ್ರಸ್ತುತ ದಿನಗಳಲ್ಲಿ ಸಮುದಾಯದ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು, ಸಭೆಗಳನ್ನು ಮಾಡುತ್ತ ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗುತ್ತಿದ್ದಾರೆ. ಕೆಲವೊಂದು ಕಡೆ ಈ ಸಮುದಾಯವನ್ನು ಕೀಳಿರಿಮೆಯಿಂದ ನೋಡಿದರೂ ಅದನ್ನು ವಿರೋಧಿಸುವ ಅಥವಾ ಅಭಿವ್ಯಕ್ತಿಯ ಮನೋಭಾವನೆಯು ಕೆಲವರಲ್ಲಿ ಮೂಡಿಬರುತ್ತಿದೆ.

ಶಕ್ತಿ ದೇವತೆಗಳ ಆರಾಧನೆಯೆ ಮುಖ್ಯವಾಗಿ ಕಂಡುಬರುತ್ತದೆ. ಕೊರವ ಸಮುದಾಯವು ಪ್ರಕೃತಿ ಆರಾಧಕರು. ನಿಸರ್ಗದ ಹಲವಾರು ದೇವಾನುದೇವತೆಗಳನ್ನು ಕಾಡು–ಬೆಟ್ಟ, ಗಿರಿ, ಶಿಖರಗಳನ್ನು ಕಂಡವರು. ನಾಡಿನಲ್ಲಿಯೇ ಬಂದು ನೆಲೆಯೂರಿದ್ದರಿಂದ ತಮಗೆ ಅನುಕೂಲವಾದ ಯಾತ್ರ ಸ್ಥಳ ಕ್ಷೇತ್ರಗಳಿಗೆ ಪೂಜಾ ವಿಧಾನವನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಇವರ ಪ್ರಾದೇಶಿಕವಾದ ಭಿನ್ನತೆಯಿಂದ ದೈವಗಳನ್ನು ಆಚರಿಸುತ್ತಾರೆ. ಮನೆದೇವರು, ಗ್ರಾಮದೇವರು, ಕುಲದೇವರು, ಆಚರಣೆಗಳು ವಿಭಿನ್ನವಾಗಿ ನಡೆಯುತ್ತಾರೆ. ವಾರ್ಷಿಕ ಆಚರಣೆಗಳಲ್ಲಿ ಯುಗಾದಿ, ಆಷಾಢ ಮಾಸದಲ್ಲಿಯೇ ತಮ್ಮ ಬದುಕಿನ ವಿಶ್ರಾಂತಿಯ ದಿನ ಅವರು ಕುಲದೇವತೆಯ ಆರಾಧನೆ ಮಾಡಲಾಗುತ್ತದೆ.

ಈ ಸಮುದಾಯದವರು ಶಕ್ತಿ ಆರಾಧಕರು. ವಿವಿಧ ದೇವರು ದೇವತಾರಾಧನೆಯನ್ನು ಮಾಡುತ್ತಾರೆ. ಪ್ರಾಣಿಬಲಿ ಸಂಪ್ರದಾಯವು ಸರ್ವೆಸಾಮಾನ್ಯ ಸಂಗತಿಯಾಗಿದೆ. ಧಾರ್ಮಿಕ

ಆಚರಣೆಗಳು ವೈವಿಧ್ಯಮಯವಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಇವರಲ್ಲಿ ಧಾರ್ಮಿಕ ಗುರುವೆಂದು ನುಲಿಯಚಂದಯ್ಯ ಅವರನ್ನು ಗುರುತಿಸಿಕೊಂಡು ಸಮುದಾಯದ ಅನನ್ಯತೆಗೆ ಕಾರಣವಾಗುತ್ತಿದೆ. ಧಾರ್ಮಿಕ ಐಕ್ಯತೆ ಮತ್ತು ಸ್ವಾತಂತ್ರ್ಯಕ್ಕಾಗಿ ದೈವಾರಾಧನೆಗಾಗಿ ಕೆಲವರು ವೀರಶೈವ ಸಿದ್ಧಾಂತವನ್ನು ನಂಬಿಕೊಂಡು ಸಸ್ಯಹಾರಿಗಳಾಗಿದ್ದಾರೆ. ಕೆಲವರು ನೂಲಿಯಚೆಂದಯ್ಯನನ್ನು ಆರಾಧಿಸುತ್ತಾರೆ. ಬೀದರ್ ಜಿಲ್ಲೆಯಲ್ಲಿ ಕೈಕಾಡಿ ಮಹಾರಾಜನ ಆರಾಧನೆ ನಡೆಯುತ್ತದೆ. ಇದೆಲ್ಲವನ್ನು ಗುರುತಿಸಿದ ಆಸ್ತಿಕರು ಕೊರವರಲ್ಲಿಯ ಒಬ್ಬ ವ್ಯಕ್ತಿಯನ್ನು ಧರ್ಮಾಧಿಕಾರಿಯನ್ನಾಗಿ ದೀಕ್ಷೆಕೊಡಿಸಿದ್ದಾರೆ. ಅವರು ವೀರಶೈವರು. ಆದರೆ ಸಮುದಾಯದ ಬೆಳವಣಿಗೆಗೆ ಶ್ರಮವಹಿಸುತ್ತಿದ್ದಾರೆ. ಗುರುಗಳ ಸಹಲೆ ಮೇರೆಗೆ ಸಮುದಾಯದ ಒಬ್ಬ ವ್ಯಕ್ತಿಯನ್ನು ಸನ್ಯಾಸಿಯಾಗಿಸಲು ಪ್ರಯತ್ನಿಸುತ್ತಿದ್ದಾರೆ. ಮಾನವಸಂಪನ್ಮೂಲದ ಕೊರತೆ ಕಂಡುಬರುತ್ತದೆ ಎಂಬ ಅಭಿಪ್ರಾಯವನ್ನು ಸ್ವಾಮಿಜಿ ಹೇಳುತ್ತಿದ್ದಾರೆ.

ಬಹುಪಾಲು ಗ್ರಾಮದೇವತೆಗಳೆ ಆರಾಧನೆಯನ್ನು ಮಾಡಲಾಗುತ್ತದೆ. ಹಳ್ಳಿ ಹಳ್ಳಿಗಳಲ್ಲಿ ಒಂದೊಂದು ಹೆಸರುಗಳಿಂದ ಕರೆಯುವುದುಂಟು. ಗ್ರಾಮ ದೇವತೆಗಳೆಲ್ಲ ಹೆಚ್ಚು ಪ್ರಚಲಿತವಾದದ್ದು ಮಾರೆಮ್ಮ ಅಥವಾ ಮರಿಯಮ್ಮ ಇವುಗಳನ್ನು ಸಪ್ತ ಕನ್ನಿಕೆಯಲ್ಲಿ ಹಿರಿಯಳೆಂದು ಕೆಲವೆಡೆ ಅವರಿಗಿಂತ ಹಿರಿಯಳೆಂದು ಪರಿಗಣಿಸುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಗಂಗಮ್ಮ, ತಾಯಮ್ಮ, ಹುಲಿಗೆಮ್ಮ, ಸುಗ್ಗಮ್ಮ, ಕೊರಮ್ಮ, ಎಲ್ಲಮ್ಮ, ಕರಿಯಮ್ಮ ಇನ್ನು ಮುಂತಾದ ಮಾರಿ ಎಂದು ಪೂಜಿಸಲಾಗುತ್ತದೆ. ರೇಣುಕ ಎಲ್ಲಮ್ಮ ತನ್ನ ಆತ್ಮಬಲದಿಂದಲೆ ತನ್ನ ಕಾರ್ಯವನ್ನು ಯಶಸ್ವಿಗೊಳಿಸಿದಳು ಎಂಬುದನ್ನು ತೋರಿಸಿಕೊಟ್ಟಳು. ಇಂತಹ ದೇವತೆಗಳ ನಡುವೆ ಅವರಲ್ಲಿ ಕೊರವಂಜಿ ವೇಷ ಧರಿಸಿದ ಮಾಹಿತಿಯು ಹುಲಿಗೆಮ್ಮ ಯಲ್ಲಮ್ಮರಲ್ಲಿ ಕಂಡುಬರುತ್ತದೆ. ಇವುಗಳ ಬಗೆಗೆ ಜನರಿಗೆ ತಿಳುವಳಿಕೆ ಇಲ್ಲ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿಬರುತ್ತದೆ.

ಕೊರವ ಸಮುದಾಯವು ಮೈಸೂರು ಪ್ರಾಂತ್ಯದ ಮೈಸೂರು ಮತ್ತು ಬೆಂಗಳೂರು, ತುಮಕೂರು ಭಾಗದಲ್ಲಿ ಹೆಚ್ಚು ಕಂಡುಬರುತ್ತಾರೆ. ಮೈಸೂರು ಸಂಸ್ಥಾನದ ಸಂದರ್ಭದಲ್ಲಿ ವಿದೇಶಿಯರು ಹೆಚ್ಚು ಅಧ್ಯಯನ ಕೇಂದ್ರವಾಗಿದ್ದರಿಂದ ಹೆಚ್ಚಿನ ಅಧ್ಯಯನಗಳು ಮೈಸೂರು ಭಾಗದಲ್ಲಿ ನಡೆದಿವೆ. ಆದರೆ ಹಿಂದುಳಿದ ಪ್ರದೇಶದಲ್ಲಿ ಹೆಚ್ಚು ಅಧ್ಯಯನ ನಡೆದಿಲ್ಲ ಎಂದೇ ಹೇಳಬೇಕಾಗುತ್ತದೆ. ಹಿಂದುಳಿದ ಪ್ರದೇಶವಾದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಅಲೆಮಾರಿಗಳಾದ ಕೊರವರು ಹೈದ್ರಾಬಾದ್ ಸಂಸ್ಥಾನವನ್ನು ೧೭೨೪-೧೯೪೮ರ ವರೆಗೆ ಏಳು ನಿಜಾಮನ ಸಂತತಿಗಳು ಆಳ್ವಿಕೆಯನ್ನು ನಡೆಸಿದರು. ಈ ಹೊತ್ತಿಗೆ ನಿಜಾಮನ ಆಶ್ರಯದಲ್ಲಿ ಇದ್ದ ಈ ಸಮುದಾಯ ಕರ್ನಾಟಕದ ಕಡೆಗೆ ಹರಡಿದರು ಎಂದು ಹೇಳಬಹುದು. ಈ ಸಮುದಾಯ ಈಚಲು, ಬಿದಿರುಗಳಿಂದ ರೈತಾಪಿ ಜನರಿಗೆ ಮತ್ತು ಜನಸಾಮಾನ್ಯರಿಗೆ ಬೇಕಾಗುವ ವಸ್ತುಗಳನ್ನು ತಯಾರಿಸುತ್ತಿದ್ದಾರೆ.

ತಮ್ಮ ಹೊಟ್ಟೆಪಾಡಿಗಾಗಿ ದುಡಿಯುವ ದೈನಂದಿನ ಕೆಲಸಕಾರ್ಯಗಳಿಗಾಗಿ ಹತ್ತಾರು ಕಡೆ ಲಸೆಗಾಗಿ ಹೋಗಿದ್ದಾರೆ. ಸಮುದಾಯದಿಂದ ಸಮುದಾಯಗಳು ಬೇರ್ಪಟ್ಟು ವಿವಿಧ ಸ್ಥಳಗಳಲ್ಲಿ ವಾಸವಾಗಿದ್ದಾರೆ. ಎಲ್ಲೆ ಹೋದರೂ ಕುಲಸಂಬಂಧಗಳನ್ನು ಮರೆತಿಲ್ಲ. ಕೃಷಿಯಲ್ಲಿಯೂ ತೊಡಗಿಕೊಂಡಿದ್ದಾರೆ. ಈ ಸಮುದಾಯ ಮತ್ತು ನಾಗರಿಕ ಜಗತ್ತಿನೊಂದಿಗೆ ನೇರಸಂಪರ್ಕ ಹೊಂದುತ್ತಾ ಬದುಕಿನ ಶೈಲಿಯಲ್ಲಿ ಬದಲಾವಣೆಯಾಗುತ್ತಿದ್ದಾರೆ. ಅವರ ರೀತಿ-ನೀತಿ ನಿಯಮಗಳೆಲ್ಲಾ ಈ ಜನರ ಸಾಮಾಜಿಕ ಜೀವನದಲ್ಲಿ ಹೊಂದಿಕೊಂಡು ಬರುತ್ತಿರುವುದು ಕೊರವ ಎಂಬ ಹೆಸರಿನಿಂದ ನಿಂದನೆಗೆ ಒಳಗಾಗುತ್ತಿದ್ದ ಸಮುದಾಯ ಜಾತಿ ನಿಂದನೆಯಿಂದ ದೂರವಾಗುತ್ತಿದೆ. ಆದರೂ ಕೆಲವು ಕಡೆ ಅಪರಾಧಿಗಳು ಎಂಬ ಭಾವನೆಗಳು ಮೂಡಿಬರುತ್ತಿದೆ. ಇಂದಿನ ವರ್ತಮಾನದ ಸಂದರ್ಭದಲ್ಲಿ ಹಿಂದಿನ ನಿಯಮಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಅವರ ನ್ಯಾಯ ಪದ್ಧತಿ(ದೈವದವರು) ಪಂಚಾಯ್ತಿ ವ್ಯವಸ್ಥೆಯೂ ಸಣ್ಣಪುಟ್ಟ ಅಪರಾಧಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತಿದೆ. ಹಿರಿಯರನ್ನು ಅಥವಾ ವಯೋವೃದ್ಧರಾದ ಸಮುದಾಯದ ಮುಖಂಡರನ್ನು ದೈವದವರೆಂದು ಕರೆಯುತ್ತಾರೆ. ಈ ಸಮುದಾಯದಲ್ಲಿಯೂ ಪುರುಷ ಪ್ರಧಾನವಾದ ಸಂಸ್ಕೃತಿಯೇ ಎದ್ದು ಕಾಣುತ್ತದೆ.

ಇಂದಿನ ಚಂದ್ರಲೋಕ, ಮಂಗಳ ಲೋಕಗಳಿಗೆ ಹೋಗುವ ಕಾಲದಲ್ಲಿಯೂ ಈ ಸಮುದಾಯವೂ ತಮ್ಮ ಜೀವನವೇ ಒಂದು ಹೋರಾಟದ ರೀತಿಯಲ್ಲಿ ಸಾಗುತ್ತಿದೆ. ವೈಜ್ಞಾನಿಕ ವಿಷಯಗಳನ್ನು ತಿಳಿಯುವುದು ತುಂಬಾ ಕಷ್ಟ ಎಂದೇ ಹೇಳಬೇಕು. ಸಮುದಾಯದ ಅಧ್ಯಯನದಿಂದ ಮನುಷ್ಯನಲ್ಲಿರುವ ವಿವಿಧ ನಡವಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇತಿಹಾಸದ ಮೂಲಕ ಸಂಸ್ಕೃತಿಯ ಚಿಂತನೆಗೆ ಸಮುದಾಯದ ಅಧ್ಯಯನವು ಅನುಕೂಲಕರ. ಸಮಾಜದ ರಚನೆ ಕ್ರಿಯೆಗಳನ್ನು ಕುರಿತು ಹುಡುಕುವುದು ಹೊಸಬರಿಗೆ ಬರುವ ಸಂಶೋಧನೆಗೆ ಹೆಚ್ಚು ಗಮನವನ್ನು ವರ್ತಮಾನದ ಸಮಾಜ ಕೆಲಸ ನಿರ್ವಹಿಸುತ್ತದೆ. ತಮ್ಮ ಸಂಸ್ಕೃತಿಯ ಜೀವನವನ್ನು ಹಾಗೇ ಉಳಿಸಿಕೊಂಡು, ಬೆಳೆಸಿಕೊಂಡು ಬರಲು ಪ್ರಯತ್ನಿಸುತ್ತಿದ್ದಾರೆ ಎಂಬುದು ತಿಳಿದುಕೊಳ್ಳಲು ಸಾಧ್ಯ.

ಶ್ರಾವಣ ಮಾಸದಲ್ಲಿ ಕೃಷಿಗೆ ಸಂಬಂಧಿಸಿದಂತೆ ಭೂಪೂಜೆ, ಭೂರಕ್ಷಣೆ ಮಾಡುವ ನಾಗಾರಾಧನೆ ಮಾಡಲಾಗುತ್ತದೆ. ಮಣ್ಣಿನಿಂದ ಹುಟ್ಟಿದ ಗಣೇಶನ ಆರಾಧನೆ ಮಾಡಲಾಗುತ್ತದೆ. ದೇವರು ದೇವತೆಗಳಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದಾರೆ. ಸಂಪ್ರದಾಯಿಕ ಆಚರಣೆಗಳು ನೆರವೇರಿಸುತ್ತಾರೆ.

ಭಾರತ ದೇಶದಲ್ಲಿ ಕೊರವರು ತಮಿಳುನಾಡಿನಿಂದ ವಲಸೆ ಬಂದವರು ಎಂದು ಹೇಳಲಾಗುತ್ತದೆ. ಆದ್ದರಿಂದ ದಕ್ಷಿಣಭಾರತದ ಬಹುಕಡೆ ವಾಸಿಸಲಾಗಿರುವುದುಂಟು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ದೆಹಲಿ, ಕಲ್ಕತ್ತಾ ಮೊದಲಾದ ಕಡೆ

ವಾಸವಾಗಿದ್ದಾರೆ. ತೀರ ಪ್ರದೇಶಗಳಲ್ಲಿ ಕೆಲಸ ನಿರ್ವಹಣೆಗಾಗಿ ವಲಸೆ ಹೋಗಿದ್ದಾರೆ. ಕರ್ನಾಟಕದಲ್ಲಿ ನೆಲೆನಿಂತ ಕೊರವರು ಗುಲಬರ್ಗಾ, ಬೀದರ್, ರಾಯಚೂರು, ಯಾದಗಿರಿ, ಲಿಂಗಸೂರು, ಸಿಂಧನೂರು, ಗದಗ, ಕೊಪ್ಪಳ, ಹುಬ್ಬಳ್ಳಿ, ಯಲಬುರ್ಗಾ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು, ಬೆಳಗಾಂ, ಬಿಜಾಪುರ ಮುಖ್ಯವಾಗಿ ಕಂಡುಬರುತ್ತದೆ. ನನ್ನ ಅಧ್ಯಯನ ಕ್ಷೇತ್ರವಾದ ಹೈದರಾಬಾದ್ ಕರ್ನಾಟಕದ ಪ್ರದೇಶದವಾದ ಬಳ್ಳಾರಿ, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳಲ್ಲಿ ಅಧಿಕ ಜನಸಂಖ್ಯೆ ಇರುವುದುಂಟು. ಕಸಬಾರಿಕೆ, ಬುಟ್ಟಿ ವ್ಯಾಪಾರ, ಹಣ್ಣಿನ ವ್ಯಾಪಾರ, ಪಾತ್ರೆ ವ್ಯಾಪಾರವನ್ನು ಮಾಡಲಾಗುತ್ತದೆ. ಪ್ರಾದೇಶಿಕವಾಗಿ ವಿವಿಧ ಭಿನ್ನವಾದ ಕಸುಬುಗಳನ್ನು ನಿರ್ವಹಿಸುತ್ತಾರೆ. ಕುಲಗೋತ್ರಗಳು, ಬೆಡಗುಗಳಿಂದ ಸಮುದಾಯವನ್ನು ಗುರುತಿಸಬಹುದು. ಮದುವೆ ಸಂದರ್ಭದಲ್ಲಿ ಕುಲಗೋತ್ರ, ಬೆಡಗುಗಲಿಂದ ಹೆಣ್ಣುಗಂಡನ್ನು ಗುರುತಿಸಲು ಸಹಾಯಕಾರಿಯಾಗುತ್ತವೆ. ಇಂದು ಮದುವೆ ಎಂಬುದನ್ನು ಕೆಲವರು ಅಂತರ್‌ಜಾಲದಲ್ಲಿ ಹುಡುಕಾಟ ಮತ್ತು ಮಧ್ಯವರ್ತಿಗಳಿಂದ ವಧುವರರ ಅನ್ವೇಷಣೆಗಳು ನಡೆಯುತ್ತಿದೆ. ಇದಕ್ಕೆ ಕಾರಣ ಸಮುದಾಯದ ವ್ಯಕ್ತಿಗಳ ಜೊತೆ ಸಂಬಂಧಗಳನ್ನು ಕಡೆದುಕೊಂಡು ವ್ಯಕ್ತಿಗಳು ಅಂತರ್‌ಜಾಲದ ಹುಡುಕಾಟದಿಂದ ಸಂಬಂಧಿಕರಾಗುತ್ತಿದ್ದಾರೆ ಎಂಬುದು ವಿಪರ್ಯಾಸವಾಗಿದೆ.

ಕರ್ನಾಟಕದಲ್ಲಿ ಗಡಿಪ್ರದೇಶದಲ್ಲಿರುವಂತೆ ಕೊರವ ಸಮುದಾಯ ಬೇರೆ ರಾಜ್ಯದ ಕೊರವ ಸಮುದಾಯದ ಜೊತೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಂಡಿದ್ದಾರೆ. ಆಂಧ್ರಪ್ರದೇಶದ ಯರಕುಲ ಸಮುದಾಯದ ಸಂಬಂಧಗಳು, ಮಹಾರಾಷ್ಟ್ರದ ಕೈಕಾಡಿ ಸಮುದಾಯದಗಳ ಸಂಬಂಧಗಳನ್ನು, ತಮಿಳುನಾಡಿನ ಕುರುವನ್ ಸಮುದಾಯಗಳ ಜೊತೆ ವಿವಾಹ ಸಂಬಂಧಗಳು ಏರ್ಪಟ್ಟಿವೆ. ತಮ್ಮ ಸುತ್ತಮುತ್ತಲಿನಲ್ಲಿಯ ವೈವಾಹಿಕ ಸಂದರ್ಭವನ್ನು ಏರ್ಪಡಿಸಿಕೊಳ್ಳುತ್ತಾರೆ. ಗಡಿ ಪ್ರದೇಶ ಜನರಲ್ಲಿ ಮಾತ್ರ ಬೇರೆ ಬೇರೆ ರಾಜ್ಯಗಳ ಸಂಬಂಧ ಏರ್ಪಾಟಿದೆ. ಆದರೆ ಜಿಲ್ಲೆಯಿಂದ ಜಿಲ್ಲೆಗೆ ಸಂಬಂಧಗಳು ಏರ್ಪಟ್ಟರೂ, ಕಡಿಮೆ ಎಂದೇ ಹೇಳಬೇಕು. ದೂರಪ್ರದೇಶದ ಸಂಬಂಧಗಳು ಕಡಿಮೆ ಎಂದು ಹೇಳಬೇಕು.

ಕುಲಕಸುಬುಗಳು

ಮಾನವನ ಬುದ್ಧಿಶಕ್ತಿ ವಿವಿಧ ಹಂತಗಳಲ್ಲಿ ವಿಕಾಸವನ್ನು ಹೊಂದಿ ತನ್ನ ಕುಶಲತೆಯನ್ನು ಹೊರಹಾಕಲಾಗುತ್ತದೆ. ಅಲೆಮಾರಿತನದ ಮೂಲಕ ತನ್ನ ವಿಧಿ ವಿಧಾನಗಳು ಬದಲಾಗುತ್ತಾ ಹೋದವು. ಹೊಟ್ಟೆ ಹಸಿವಿಗಾಗಿ ಬೇಟೆಯಾಡುವುದು, ಕೆಲವರು ಬೇಟೆ ಆಡಲು ಕಲ್ಲುಗಳನ್ನು ಬಳಸಿದ ಹಸಿ ಮಾಂಸವನ್ನು ತಿನ್ನುತ್ತಾರೆ. ವಲಸೆಗೊಂಡ ಸಮುದಾಯಗಳು ಕಾಲಕಾಲಕ್ಕೆ ತಕ್ಕಂತೆ ಬದಲಾವಣೆಗೊಂಡವು. ವಲಸೆ ಪ್ರಕ್ರಿಯೆಯಿಂದ ಅವರ ವೃತ್ತಿಯ ಕಾರಣ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಮೌಖಿಕ ಪರಂಪರೆ ಹಾಗೂ ಕುಲಕಸುಬುಗಳು ಇಂದಿನ ಪೀಳಿಗೆಯಲ್ಲಿ

ಬದಲಾವಣೆಗೆ ಒಳಗಾಗುತ್ತದೆ. ಬೇಟೆ ಆಹಾರ ಸಂಸ್ಕರಣೆ, ಪಶುಪಾಲನೆ/ಪಶು ಸಾಗಾಣಿಕೆ, ಉಪಕರಣ ತಯಾರಿಕೆ, ಕೃಷಿಗೆ ಸಂಬಂಧಿಸಿದ ವಸ್ತುಗಳ ತಯಾರಿಕೆ, ವಿನ್ಯಾಸ, ಪಾತ್ರೆ ಪಗಡೆಗಳ ಬಗ್ಗೆ ಬೇಕಾಗುವ ಹತ್ತು ಹಲವು ಅಂಶಗಳನ್ನು ನೋಡಬಹುದು. ಇವುಗಳಲ್ಲಿ ಕೆಲವು ಕಾಣೆಯಾದರೆ ಇನ್ನೂ ಕೆಲವು ಇಂದಿಗೂ ರೂಢಿಯಲ್ಲಿದೆ. ಜಾಗತೀಕರಣಕ್ಕೆ ಒಗ್ಗಿಕೊಳ್ಳಲು ಇನ್ನೂ ಕಾಲ ಬೇಕಾಗಿದೆ. ವಸ್ತು ಸಂಸ್ಕೃತಿಯು ಗ್ರಾಮೀಣ ವೃತ್ತಿಗಳ ಅಧ್ಯಯನ ಮಾಡಲು ಅನುಕೂಲವಾಗಿದೆ. ಆದರೆ ಇಂದಿನ ವಸ್ತು ಸಂಸ್ಕೃತಿಯ ಹಲವಾರು ರೀತಿಯಲ್ಲಿ ಅಥವಾ ನಗರದ ಪ್ರದೇಶದ ಜನರ ಬಳಕೆಯ ವಸ್ತುಸಂಸ್ಕೃತಿಗೆ ಒಳಗಾಗುತ್ತಾ ಜೀವನ ನಡೆಸಲು ಹರಸಾಹಸ ಮಾಡಲಾಗುತ್ತಿದೆ. ಗ್ರಾಮೀಣ ಕುಲಕಸುಬುಗಳು ವೃತ್ತಿಗಳೇ ಮನುಷ್ಯನ ಶ್ರಮ ಜೀವನವನ್ನು ನಿರೂಪಿಸುತ್ತದೆ.

ಸಮಾಜದಲ್ಲಿ ಅನೇಕ ಮಾನವೀಯ ಸಂಬಂಧಗಳನ್ನು ಹೊಂದಿರುವುದರಿಂದ ಜೀವನದ ಹಲವಾರು ಮುಖ್ಯ ಅಂಶಗಳು ಕಂಡುಬರುತ್ತದೆ. ವ್ಯಕ್ತಿ–ವ್ಯಕ್ತಿಗಳ ನಡುವೆ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಪರಸ್ಪರ ಸಂಬಂಧಗಳನ್ನು ಹೊಂದಿರುವುದು ಸ್ವಾಭಾವಿಕ. ಅವುಗಳು ಒಂದಕ್ಕೊಂದು ಭಿನ್ನವಾಗಿ ಕಾರಣೆ ಸಾಮ್ಯತೆಗಳ ಹಲವು ವಿಚಾರಧಾರೆಗಳು ನಮ್ಮಲ್ಲಿ ಕಾಣಸಿಗುತ್ತಿದೆ. ಇಂತಹ ಸಾಮಾಜಿಕ ಪರಸ್ಪರ ಸಾಮ್ಯತೆಗಳನ್ನು ಹೋಲುವ ಅನೇಕ ಸಾಮಾಜಿಕ ವ್ಯವಸ್ಥೆಯಲ್ಲೇ ಕೊರವ ಸಮುದಾಯದ ಜೀವನ ವ್ಯವಸ್ಥೆಯನ್ನು ಕಾಣುತ್ತೇವೆ. ಅಂದು ಗ್ರಾಮೀಣ ಪ್ರದೇಶಕ್ಕೆ ಅನುಕೂಲವಿರುವ ವಸ್ತುಗಳನ್ನು ಒದಗಿಸುತ್ತಿದ್ದರು ಆದರೂ ಕಾಲಕ್ಕನುಗುಣವಾಗಿ ಜಾಗತೀಕರಣ ಹೊತ್ತಿನಲ್ಲಿ ಸಹಜವಾಗಿ ತನ್ನ ಕಸುಬನ್ನೇ ಬದಲಾಯಿಸಿಕೊಳ್ಳಲಾಗುತ್ತಿದೆ.

ಇಂದಿನ ವೈಜ್ಞಾನಿಕ ಮತ್ತು ಜಾಗತೀಕರಣದ ಆರ್ಭಟದ ನಡುವೆ ಜಾನಪದದತ್ತ ಕಣ್ಣಾಡಿಸಿದಾಗೆ ಸಮುದಾಯದ ಸಾಹಿತ್ಯದ ವಿಚಾರಧಾರೆಗಳು ಕಾಣುತ್ತೇವೆ. ಅನಕ್ಷರಸ್ಥರಾದ ಸಮುದಾಯ ತಮ್ಮ ಜೀವನದ ಹೋರಾಟದಲ್ಲಿ ಕಾಲಕಳೆಯಬೇಕಾದ ಪರಿಸ್ಥಿತಿ ಒದಗಿದೆ. ಕೊರವ ಸಮುದಾಯದ ಕೊರವಂಜಿ ಪಾತ್ರವು ಕೇವಲ ನಾಟಕವಾಗಿರದೆ ಅವರ ಜ್ಞಾನಪರಂಪರೆಯನ್ನು ಸಂಶೋಧಿಸುವ ಅಗತ್ಯವು ಇದ್ದಿದೆ. ಇದರ ಬಗೆಗೆ ಕಾಳಜಿವಿಲ್ಲದ ಅನಕ್ಷರಸ್ಥರಾಗಿ ಉಳಿದಿರುವ ಈ ಸಮುದಾಯದ ಬಗೆಗೆ ತಿಳುವಳಿಕೆ ನೀಡಬೇಕಾಗಿದೆ. ಕೆಲವರು ತಮ್ಮ ಸಮುದಾಯದ ಸಾಹಿತ್ಯದ ಕಡೆ ಗಮನ ಹರಿಸಲು ದಾಪುಗಾಲು ಆಗುತ್ತಿದ್ದಾರೆ.

ಈ ಸಮುದಾಯದ ಲಿಪಿರಹಿತ ಭಾಷೆ, ಕುಳುವ ಭಾಷೆಯನ್ನಾಡುವ ಸಮುದಾಯದ ಭಾಷೆ ಅಧ್ಯಯನ ಪ್ರಮುಖವಾಗುತ್ತದೆ. ಶಿಕ್ಷಣದ ಕಡೆ ಗಮನ ಹರಿಸಬೇಕಾಗಿದೆ. ಆದರೆ ಒಂದು ದಶಕಗಳ ಹಿಂದಿನಿಂದಲೂ ಶಿಕ್ಷಣದಲ್ಲಿ ಕಾಲಕ್ರಮೇಣ ಬದಲಾವಣೆಯಾಗುತ್ತಿರುವುದುಂಟು. ಶಿಕ್ಷಣದಲ್ಲಿ ಬದಲಾವಣೆಯಾದರೆ ಅಭಿವೃದ್ಧಿ ಎಂಬುದು ಸಮುದಾಯದಲ್ಲಿರುವ ವಿಚಾರಧಾರೆಗಳಲ್ಲಿ ಬದಲಾವಣೆಯಾಗಬೇಕಾಗುತ್ತದೆ. ಈ ಸಮುದಾಯದ ಜನಜೀವನದ ಸಂಸ್ಕೃತಿಗಳು ಇಂದು

ಕಣ್ಮರೆಯಾಗುತ್ತಲಿದ್ದು, ತಲೆತಲೆಮಾರಿನಿಂದ ತಲೆಮಾರಿಗೆ ಸಾಗಬೇಕಾದ/ಅನನ್ಯವಾದ ಅಂಶಗಳು ಅವಸಾನದ ಅಂಚಿನಲ್ಲಿ ಉಳಿದಿವೆ. ಆಧುನಿಕತೆಯಲ್ಲಿ ವಿಚಾರಗಳು ಬೇರೆಯಾದನ್ನೇ ಬಯಸುವುದುಂಟು. ತಂತ್ರಗಾರಿಕೆಯಿಂದ ಬದಲಾಗುವ ಅವಶ್ಯಕತೆಯು ಒದಗುತ್ತಿದೆ. ಜನಜೀವನಕ್ಕೆ ಬೇಕಾಗುವ ಹಾಗೆಯೇ ಜೀವನ ನಡೆಸುವುದು ಅನಿವಾರ್ಯ. ಆದ ಆಧುನಿಕ ವಸ್ತುಗಳಿಂದ ಆಗುವ ಅಪಾಯವೇನು ಎಂಬುದನ್ನು ಅರಿಯುವ ಜ್ಞಾನವು ಸಮಾಜದಲ್ಲಿ ಇಲ್ಲವಾಗಿದೆ ಎಂದೇ ಹೇಳಬೇಕು. ಪರಿಸರ ಹಾನಿಯಾಗದಂತಹ ವಸ್ತುಗಳನ್ನು ಬಳಸಿದರೆ ಸಮುದಾಯದ ಕುಲಕಸುಬಿಗೂ ಯಾವುದೇ ಅಪಾಯವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.

ಕೊರವ ಸಮುದಾಯವು ತಾನು ವಾಸಿಸುವ ಸುತ್ತಮುತ್ತಲಿನ ಪರಿಸರಕ್ಕೆ ಅನುಗುಣವಾಗಿ ಒಂದು ಮುಖ್ಯ ಕಸುಬನ್ನು ಮತ್ತು ಅನೇಕ ಉಪಕಸುಬುಗಳನ್ನು ಕೈಗೊಳ್ಳುವರು. ಆಯಾ ಪ್ರದೇಶದಲ್ಲಿ ಸಿಗುವ ಕಚ್ಚಾವಸ್ತುವಿನಿಂದ ತಮ್ಮ ಕುಲಕಸುಬುಗಳನ್ನು ಮಾಡುತ್ತ ಜೀವನ ಸಾಗಿಸುತ್ತಿರುತ್ತಾರೆ. ಇವರಲ್ಲಿ ಪ್ರತಿಯೊಂದು ಉಪ ಜಾತಿಯವರು ಒಂದೊಂದು ಉದ್ಯೋಗವನ್ನು ಮಾಡುವರು. ವೃತ್ತಿಯನ್ನು ತರಬೇತಿಗಾಗಿ ಪ್ರತ್ಯೇಕವಾಗಿ ಹೋಗುವುದಿಲ್ಲ. ಅದು ತಲಾತಲಾಂತರದಿಂದ ಸಾಗಿಸಿಕೊಂಡು ಬರುತ್ತಿದ್ದಾರೆ. ಜಾತಿ ಸೂಚಕ ವೃತ್ತಿಗಳನ್ನು ಕೆಲವರು ವೃತ್ತಿ ಸೂಚಕ ಕಾರ್ಯಗಳನ್ನು ಕೈಗೊಳ್ಳುವರು ಇದ್ದಾರೆ. ಹೀಗಾಗಿ ಜಾತಿ ಸೂಚಕ ವೃತ್ತಿ ಸೂಚಕ ಉಪಜಾತಿಗಳು ಹುಟ್ಟಿಕೊಂಡಿದೆ. ಕೊರವರ ಆರ್ಥಿಕ ಚಟುವಟಿಕೆಗಳು ವೈವಿಧ್ಯಮಯವಾಗಿವೆ. ಆದರೆ ಪ್ರಸ್ತುತ ಸಂದರ್ಭಗಳಿಗೆ ಅನುಗುಣವಾಗಿ ನಡೆದುಕೊಂಡು ಹೋಗಲು ಮಾರುಕಟ್ಟೆಯ ಪರಿಚಯವಾಗಬೇಕಾಗಿದೆ.

ಈ ಸಮುದಾಯದಲ್ಲಿ ಕೆಲವು ಕಡೆ ಕೂದಲನ್ನು ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಆದರೆ ಇವರ ಪಾಲಿಗೆ ಕೇಶವು ಬಂಗಾರವಾಗಿಲ್ಲ. ಕೇಶರಾಶಿಯಿಂದ ಕೋಟಿಕೋಟಿ ಹಣ ಸಂಪಾದನೆ ಮಾಡುತ್ತಿರುವ ಉದ್ದಿಮೆಗಳು ಮತ್ತು ಬಂಡವಾಳದಾರರು ಮಾತ್ರ ಸಂಪಾದಿಸುತ್ತಿದ್ದಾರೆ. ಈ ಸಮುದಾಯಕ್ಕೆ ಅತ್ಯಲ್ಪ ಪ್ರಮಾಣದಲ್ಲಿ ಹಣಸಿಗುತ್ತಿದೆ. ಇದಕ್ಕೆ ಮುಖ್ಯವಾಗಿ ಕಾರಣವು ಕೇಶೋದ್ಯಮವಾಗಿ ಗುರುತಿಸಿದ ಸಮುದಾಯವಾದ ಹಿರಿಯರು ತಿಳಿಸುವ ಕಾರ್ಯ ಮಾಡಬೇಕು. ಅವರಿಗೆ ಮಾರ್ಗದರ್ಶನವನ್ನು ಮಾಡುವುದು ಅನಿವಾರ್ಯ. ಕೆಲವರು ಹಂದಿ ಸಾಕಾಣಿಕೆ ಮಾಡುವವರಿದ್ದಾರೆ. ಈ ಹಂದಿ ಸಾಕಾಣಿಕೆಯ ಬಗೆಗೆ ಸರ್ಕಾರದಿಂದ ಬರುವ ಸೌಲಭ್ಯಗಳ ಬಗೆಗೆ ತಿಳಿದುಕೊಂಡು ಇನ್ನು ಅನುಕೂಲವಾಗುವಂತೆ ಮಾಡಬೇಕು.

ವೇಷ-ಭೂಷಣಗಳು

ಕೊರವ ಸಮುದಾಯವು ಸಾಂಪ್ರದಾಯಿಕ ಉಡುಗೆ-ತೊಡುಗೆಯಲ್ಲಿಯೇ ಕಂಡುಬರುತ್ತದೆ. ಏಕೆಂದರೆ ಹೈದರಾಬಾದ್ ಕರ್ನಾಟಕದ ಭಾಗವು ಅತ್ಯಂತ ಹಿಂದುಳಿದಿದ್ದು ಕೊರವ ಸಮುದಾಯವು

ದುಡಿದು ತಿನ್ನುವ ಸಮುದಾಯವಾಗಿದ್ದು, ತಮ್ಮ ಶ್ರಮಕ್ಕೆ ತಕ್ಕಂತೆ ಬದುಕುತ್ತಿದ್ದಾರೆ. ಮುಂಜಾನೆಯಿಂದ ರಾತ್ರಿಯವರೆಗೂ ತಮ್ಮ ದುಡಿಮೆಯಲ್ಲಿಯೇ ಮಗ್ನರಾಗುತ್ತಾರೆ. ಆದ್ದರಿಂದ ಸಾಮಾನ್ಯವಾದ ಉಡುಗೆಯನ್ನು ಕಾಣುತ್ತೇವೆ. ಇಂದಿನ ಪೀಳಿಗೆಯವರು ಜಾಗತೀಕರಣದ ಪ್ರಭಾವದಿಂದಾಗಿ ಅಥವಾ ಶೈಕ್ಷಣಿಕ ಪ್ರಭಾವದಿಂದ ವೇಷಭೂಷಣದಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಾಣಬಹುದಾಗಿದೆ. ನೌಕರಿಯಲ್ಲಿದ್ದವರು, ವಿದ್ಯಾಭ್ಯಾಸದಲ್ಲಿ ಮುಂದುವರೆದವರು ಆಧುನಿಕತೆಗೆ ಒಳಗಾದವರೂ ಮನೋಭಾವನೆಯಲ್ಲಿ ಮಾತ್ರ ಬದಲಾವಣೆಯಾಗಿಲ್ಲ ಎಂದೇ ಹೇಳಬೇಕಾಗುತ್ತದೆ.

ಪೈಜಾವಲ್, ಜುಬಾ, ಲುಂಗಿ, ಕಚ್ಚೆ, ಪ್ಯಾಂಟು, ಶರ್ಟ್ ಮಹಿಳೆಯರು ಸೀರೆ, ಲಂಗಜಾಕೇಟ್, ಚೂಡಿದಾರ್‌ಗಳನ್ನು ಧರಿಸುತ್ತಾರೆ. ಅವರು ಕೆಲಸಕಾರ್ಯವನ್ನು ಮಾಡುವಾಗ ಬನಿಯನ್ ಮೇಲೆ ಕುಳಿತುಕೊಂಡು ಕೆಲಸ ನಿರ್ವಹಿಸುತ್ತಾರೆ. ತಾವು ದುಡಿದು ತಂದ ಹಣದಿಂದ ಮನೆಯ ಸಂಸಾರ ತೂಗಬೇಕಾಗುತ್ತದೆ. ತಮ್ಮ ಕಸುಬಿಗಾಗಿ ಬೇರೆ ಊರಿಗೆ ಹೋದಾಗ ಅಲ್ಲೆ ನೆಲೆನಿಂತು ಜೀವನ ಸಾಗಿಸುತ್ತಾರೆ. ಜೀವನ ನಿರ್ವಹಣೆಗಾಗಿ ಅಲೆಯುವ ಅಗತ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವೇಷಭೂಷಣದಲ್ಲಿ ಬದಲಾವಣೆಯಾಗುವುದು ಹೇಗೆ ಹೇಳಬೇಕಾಗುತ್ತದೆ.

ಆಚಾರ-ವಿಚಾರ, ನ್ಯಾಯ, ನೀತಿ, ಧಾರ್ಮಿಕ ಹಬ್ಬ ಆಚರಣೆಗಳು, ಆರ್ಥಿಕ ಸ್ಥಿತಿಗತಿ, ಜೀವನ ವಿಧಾನ, ಸಾಮಾಜಿಕ, ಸಾಂಸ್ಕೃತಿಕ ಮಹತ್ವ ಪ್ರಾದೇಶಿಕ ಭಿನ್ನತೆ, ವೈವಾಹಿಕ ಸಂಬಂಧಗಳಲ್ಲಿ ಭಿನ್ನತೆ ಕಾಣಿಸುತ್ತದೆ. ಇಂತಹ ಭಿನ್ನತೆಗಳನ್ನು ನಾವು ಕೊರವ ಸಮುದಾಯದಲ್ಲಿ ಕಾಣಬಹುದಾಗಿದೆ. ಹಳೆಯ ಸಂಪ್ರದಾಯ ಕಂದಾಚಾರ ಮೂಢನಂಬಿಕೆಗಳನ್ನು ಹೊಂದಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಆಧುನಿಕತೆಯ ಪ್ರಭಾವದಿಂದ ಕೆಲವು ಬುಡಕಟ್ಟು ಸಮುದಾಯವನ್ನು ಗುರುತಿಸಬಹುದು. ಕಣಿ ಹೇಳುವ, ಹಚ್ಚೆ ಹಾಕುವ ಮಹಿಳೆಯರನ್ನು ಗುರುತಿಸಬಹುದು. ಜಾಗತೀಕರಣದ ಪ್ರಭಾವದಲ್ಲಿ ಕಣಿ ಹೇಳುವವರು ಹುಣ್ಣಿಮೆ ಮತ್ತು ಅಮವಾಸ್ಯೆಯ ಸಂದರ್ಭದಲ್ಲಿ ದೇವಾಲಯದಲ್ಲಿ ಕಾಣಬಹುದು. ಕೆಲ ಸಮುದಾಯದಲ್ಲಿ ಕಣಿ ಹೇಳುವ ಮಹಿಳೆಯರು ಊರೂರು ಅಲೆಯುತ್ತಾ ಬದುಕು ಸಾಗಿಸುವುದನ್ನು ಕಾಣಬಹುದು. ಕಣಿ ಹೇಳುವವರ ಬಗೆಗೆ ನಂಬಿಕೆ ಜನರಲ್ಲಿಲ್ಲ. ಸಮೂಹ ಮಾಧ್ಯಮದಲ್ಲಿ ಪ್ರಸಾರವಾಗುವ ಭವಿಷ್ಯದ ಕಡೆ/ಜ್ಯೋತಿಷ್ಯ ವಾಣಿಗಳ ಕಡೆ ಜನರ ಮನಸೋಲುವುದು ಹೆಚ್ಚು ಕಂಡುಬರುತ್ತಿದೆ. ಒಂದು ಸಂದರ್ಭದಲ್ಲಿ ಗೌರವದಿಂದ ಕಾಣಲಾಗುತ್ತಿದ್ದ ಕಣಿ ಭವಿಷ್ಯವು ಹೈದರಾಬಾದ್-ಕರ್ನಾಟಕದಲ್ಲಿ ಕಾಣುವುದು ಅತಿವಿರಳವಾಗಿದೆ. ಅದೇ ರೀತಿಯಲ್ಲಿ ಹಚ್ಚೆಯು ಇಂದಿನ ಸಂದರ್ಭದಲ್ಲಿ ಟ್ಯಾಟು ರೂಪದಲ್ಲಿ ರೂಪಾಂತರವಾಗಿದೆ ಎಂದು ಹೇಳಬೇಕಾಗಿದೆ. ಹಚ್ಚೆ ಎಂಬುದು ಸೌಭಾಗ್ಯದ ಪ್ರತೀಕವಾಗಿದ್ದು, ಸೌಂದರ್ಯ ಪ್ರತೀಕವಾಗಿದೆ. ಚಿಕ್ಕಮಕ್ಕಳಿಂದ ಹಿಡಿದು ವಯಸ್ಸಿನವರೆಗೂ ಟ್ಯಾಟುವಿನ ಪ್ರಭಾವ ಬೀರಿದೆ.

ಸಾಂಪ್ರದಾಯಿಕವಾದ ಜನರೆಲ್ಲರಲ್ಲಿಯೂ ಹಚ್ಚೆಯನ್ನು ಇಂದಿಗೂ ಕಾಣುತ್ತೇವೆ. ಹಬ್ಬ, ಜಾತ್ರೆ, ಉತ್ಸವ ಸಂದರ್ಭದಲ್ಲಿ ಮಾತ್ರ ಕಂಡುಬರುತ್ತದೆ. ಟ್ಯಾಟೂವು ಪ್ರಪಂಚದ ಎಲ್ಲ ಜನವರ್ಗದವರಿಗೂ ಪ್ರಸಿದ್ಧವಾಗಿ ವ್ಯಾಪಾರವಾಗಿ ಮಾರ್ಪಾಟಿದೆ ಎಂದು ಹೇಳಬೇಕು.

ಭಾರತ ದೇಶದಲ್ಲಿ ವೃತ್ತಿ ಮತ್ತು ಪರಂಪರೆಗೆ ತನ್ನದೆ ಆದ ಇತಿಹಾಸವಿದೆ. ಮಾನವನು ಪ್ರಾಚೀನ ಕಾಲದಿಂದಲೂ ಜೀವನ ನಿರ್ವಹಣೆಗಾಗಿ ಅನೇಕ ವೃತ್ತಿಗಳನ್ನು ಮಾಡುತ್ತಾ ಬಂದಿದ್ದಾನೆ. ಈ ಸಮುದಾಯದವರು ತಮ್ಮದೇ ಆದ ವೃತ್ತಿ ಪರಂಪರೆಯನ್ನು ಬೆಳೆಸಿಕೊಂಡು ಬಂದವರಾಗಿದ್ದಾರೆ. ತಮ್ಮ ವೃತ್ತಿ ಪರಂಪರೆಯ ಪ್ರದರ್ಶನ ನೀಡಿ ಜನರನ್ನು ರಂಜಿಸುವ ಕಾರ್ಯದಲ್ಲಿ ಪ್ರಾಚೀಕಾಲದಿಂದಲೂ ಕಂಡುಬರುವ ವಿಶೇಷವಾದ ಛಾಪನ್ನು (ಅಚ್ಚು,ಮುದ್ರೆ,) ಮೂಡಿಸಿದ್ದಾರೆ. ಪ್ರಾಚೀನತೆಯಿಂದ ಕಂಡು ಬರುವ ವೃತ್ತಿ ಕುಶಲರಾದ ಇವರು ವಿವಿಧ ಗುಂಪುಗಳಾಗಿ ಪ್ರತಿ ಹಳ್ಳಿಗೆ ಒಂದಾದ ನಂತರ ಒಂದರಂತೆ ಭೇಟಿ ಮಾಡುತ್ತಿದ್ದರು. ಅಲ್ಲಿ ತಮ್ಮ ವೃತ್ತಿಯ ಕಲಾ ಪ್ರದರ್ಶನ ನೀಡುತ್ತಿದ್ದರು. ಈ ಎಲ್ಲಾ ಗುಂಪುಗಳು ಒಂದು ರೀತಿಯ ತೃಪ್ತಿಕರ ಬದುಕನ್ನು ಸಾಗಿಸುತ್ತಾ ಬಂದವರು.

ಮೂಢನಂಬಿಕೆಗಳು ತಂದೆ ತಾಯಿಗಳಲ್ಲಿ ಶಿಕ್ಷಣ ವ್ಯವಸ್ಥೆಯ ಕುರಿತು ತಿಳುವಳಿಕೆ ಇಲ್ಲದಿರುವುದು, ಶಿಕ್ಷಣಧ ಮಹತ್ವ ತಿಳಿಯದೆ ಇರುವುದು, ಆರ್ಥಿಕ ಅಡಚಣೆಗಳು ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಪಾತ್ರವನ್ನು ಗುರುತಿಸಿಕೊಳ್ಳಲು ಸಾಧ್ಯವಾಗದೆ ಇರುವುದು, ಕಲಿಕೆ ಹಾಕಬೇಕಾದ ಶ್ರಮದ ಕಲ್ಪನೆ ಕೆಲಸಗಳಲ್ಲಿಯೇ ನಿರಂತರಾಗಿರುವುದು, ಮನೆಯಲ್ಲಿ ಶಿಕ್ಷಣಕ್ಕೆ ಬೇಕಾದ ಬೆಂಬಲ, ಪ್ರೋತ್ಸಾಹ ಇಲ್ಲಿದಿರುವ ಕಾರಣದಿಂದ ಉಳಿದಿವೆ.

ಸಾಮಾಜಿಕ ಚಟುವಟಿಕೆ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಹಾಗೂ ನೀತಿ ನಿರ್ಧಾರದಂತಹ ಕ್ಷೇತ್ರಗಳಲ್ಲಿ ಮಹಿಳೆಯ ಸ್ಥಾನ ಎರಡನೆಯದಾಗಿದೆ. ನಗರ ಪ್ರದೇಶದ ಮಹಿಳೆಯರಿಗಿಂತ ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ತಾತ್ವಿಕವಾಗಿ ಮಹಿಳಾ ಪುರುಷ ಸಮಾನತೆ ಇರುವುದಾದರೂ ನೀತಿ ನಿರ್ಧಾರಗಳ ಸಂದರ್ಭ ಬಂದಾಗ ಪುರುಷರು ಮಾತ್ರ ನಿರ್ಧಾರ ಕೈಗೊಳ್ಳುತ್ತಾರೆ. ಇದಕ್ಕೆಲ್ಲಾ ಮೂಲಕಾರಣ ಮಹಿಳೆಯರಲ್ಲಿ ಹೆಚ್ಚಿನವರಿಗೆ ಅಕ್ಷರ ಜ್ಞಾನ ಇಲ್ಲದಿರುವುದು, ತಾಯಿಯಾಗಿ, ಪತ್ನಿಯಾಗಿ, ಕುಟುಂಬದ ರಕ್ಷಣೆಯಾಗಿ ಮಹಿಳೆ ನಿರ್ವಹಿಸುವ ಪಾತ್ರ ಅದ್ವಿತೀಯ.

ಶಿಕ್ಷಣದಿಂದ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿ ತನ್ನ ಕಾರ್ಯರಂಗವನ್ನು ವಿಶಾಲ ಮಾಡಿಕೊಳ್ಳಲು ಮಹಿಳೆಗೆ ಹೆಚ್ಚಿನ ಅವಕಾಶವಿದೆ. ಉದಾಹರಣೆಗೆ ಉನ್ನತ ವಿದ್ಯಾಭ್ಯಾಸ ಮಾಡಿದ ಹುಡುಗಿಯು ತಮ್ಮ ಸಮುದಾಯದ ಬಗ್ಗೆ ತಿಳಿದುಕೊಳ್ಳಲು ಸಭೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾಳೆ. ವಿದ್ಯಾವಂತರು ತಮ್ಮ ಮಕ್ಕಳನ್ನು ಮುಂದೆ ಓದಿಸಬೇಕು ಎಂಬ ಹಂಬಲ ಅವರಿಗೆ ಬರುವುದು ಸಹಜ. ಬದಲಾವಣೆ ಧೋರಣೆಯಿಂದ ಮಹಿಳೆಯರು ಸಂಘ ಸಂಸ್ಥೆಗಳನ್ನು

ನಿರ್ಮಿಸಿಕೊಳ್ಳಲು ಅವಕಾಶ ಸಿಕ್ಕಿದಂತಾಗುತ್ತದೆ. ಆದ್ದರಿಂದ ಹೆಣ್ಣು ಆರ್ಥಿಕ, ಸಾಮಾಜಿಕ ಜೀವನದಲ್ಲಿ ಭಾಗವಹಿಸಿದರೆ ದೇಶದ ಪ್ರಗತಿಯನು ಸಮುದಾಯದ ಪ್ರಗತಿಯನ್ನು ಸಾಧಿಸಲು ಸಹಾಯಕವಾಗುತ್ತದೆ. ವಿದ್ಯಾವಂತರು ತಮ್ಮ ಸೌಲಭ್ಯಗಳನ್ನು ಇನ್ನೊಬ್ಬ ಮಹಿಳೆಯರಿಗೆ ತಿಳಿಹೇಳುವುದರಿಂದ ಅವರ ಮನದಲ್ಲಿ 'ನಮಗೂ ಓದು ಬೇಕು ನಾವು ಸಮುದಾಯದಲ್ಲಿ ಮಹತ್ವವನ್ನು ಪಡೆದುಕೊಳ್ಳಬೇಕು' ಎಂಬ ಮನೋಭಾವನೆಯು ಅವರಲ್ಲಿ ಹುಟ್ಟುವುದು.

ನಾಗರಿಕತೆಯು ಬೆಳೆದಂತೆಲ್ಲ ಅನೇಕ ಸಂಬಂಧಗಳು ಹೆಣೆದುಕೊಳ್ಳುತ್ತವೆ. ಬರುಬರುತ್ತಾ ಇಡೀ ಪ್ರಪಂಚದ ಆಗುಹೋಗುಗಳನ್ನು ನಮಗೆ ಸಂಬಂದವಿಲ್ಲದಂತೆ ಎಂಬ ಪಕ್ಕಕ್ಕಿಡಲಾರದೆ ಸ್ಥಿತಿಯಲ್ಲಿ ನಾವೀಗ ಇದ್ದೇವೆ. ಈಗ ಜಾಗತೀಕರಣದಿಂದಾಗಿ ಮಹಿಳೆಯರ ಸ್ಥಿತಿಯು ಭಯಾನಕವಾಗುತ್ತಿರುವಂತಿದೆ. ಆಧುನಿಕತೆಯೊಂದಿಗೆ ಬೆಸೆದುಕೊಂಡು ಬಂದ ಕೈಗಾರೀಕರಣ ಶಿಕ್ಷಣ ಉದ್ಯೋಗಗಳ ಹೊರ ಅವಕಾಶಗಳು ಒಟ್ಟು ಕುಟುಂಬಗಳನ್ನು ಒಡೆಯುವ ಮುಖ್ಯ ಸಾಧನಗಳಾದವು ಎಂದು ಹೇಳಬಹುದು. ಒಬ್ಬೊಬ್ಬರೇ ಹಳ್ಳಿಗಳನ್ನು ಬಿಟ್ಟು ನಗರಗಳನ್ನು ಸೇರುತ್ತಾ ಹೋದ ಪುರುಷರು ತಮ್ಮದೇ ಆದ ಪ್ರತ್ಯೇಕ ಆರ್ಥಿಕ ಮೂಲಗಳನ್ನು ಕಂಡುಕೊಳ್ಳುತ್ತಾ ಹೋದಂತೆ ಹೊಸ ಪರಿಸ್ಥಿತಿಗೆ ಅನುಗುಣವಾಗಿ ತಾನು ತನ್ನ ಹೆಂಡತಿ ಮಕ್ಕಳು ಮಾತ್ರವೇ ಇರುವ ಬಿಡಿ ಕುಟುಂಬಗಳನ್ನು ಕಟ್ಟಿಕೊಳ್ಳುತ್ತಾರೆ.

ಕುಟುಂಬದ ಆರ್ಥಿಕ ಸ್ಥಿತಿಗತಿಗೆ ಮತ್ತು ಸರ್ವತೋಮುಖ ಅಭಿವೃದ್ದಿಗೆ ಮಹಿಳೆಯ ಕೊಡುವೆ ಅಪಾರವಾದುದು. ಆದರೆ ದುಡಿಮೆಗೆ, ಕೌಶಲ್ಯಕ್ಕೆ ಸಾಕಷ್ಟು ಮನ್ನಣೆ ಇಲ್ಲದಿರುವುದು ದುರದೃಷ್ಟಕರ ಸಂಗತಿ. ಮನೆಗೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಕಲೆ ಮಹಿಳೆಯರಿಗಿದೆ. ಈ ಕೌಶಲ್ಯಕ್ಕೆ ಮಾನ್ಯತೆ ಇಲ್ಲದಿರುವುದು ಒಂದು ದೊಡ್ಡ ದುರಂತ. ಆದರೆ ಈ ಕೌಶಲ್ಯಗಳ ಮೌಲ್ಯ ನಿರ್ಧಾರಿತವಾಗಿಲ್ಲ. ಆದಕ್ಕೆ ವಾಣಿಜ್ಯ ಬೆಲೆ ಸಹ ಬಂದಿಲ್ಲ. ಮಹಿಳೆಯರಿಗೆ ಹೆಚ್ಚು ವಿದ್ಯಾಭ್ಯಾಸದ ಸೌಕರ್ಯಗಳಿಲ್ಲದಿರುವುದೇ ಕೌಶಲ್ಯಕ್ಕೆ ಮಾನ್ಯತೆ ಸಿಗದಿರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂದು ಹೇಳಬಹುದು.

ವಚನ ಚಳುವಳಿಯು ಕಾಲಕಾಲಕ್ಕೆ ಸಮುದಾಯಗಳು ಧಾರ್ಮಿಕ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದು ಹಾಕಿ ಸಮಾಜದಲ್ಲಿ ಪರಿವರ್ತನೆಯನ್ನು ತರಲು ಪ್ರಯತ್ನ ಮಾಡಿದೆ. ಬಹುಪಾಲು ವರ್ತನೆಗಳ ಮಿತಿಯಲ್ಲಿ ತಮ್ಮ ಸುತ್ತ-ಮುತ್ತಲಿನವರ ಸಮಸ್ಯೆಗಳಿಗೆ ಸ್ಪಂದಿಸಿದರು. ಜನಸಮೂಹದ ಕ್ಷೇಮವನ್ನು ಬಯಸಿದರು. ಇದು ವಚನ ಚಳುವಳಿಯ ಕಾಲದ ಸಾಮಾಜಿಕ ಪ್ರತಿಭಟನೆ. ತಮ್ಮ ಸಾಹಿತ್ಯದ ಮೂಲಕ ಪ್ರತಿಭಟನಾ ಸಾಹಿತ್ಯ ಕೂಡ ಆಗಿದೆ. ಜೀವನವೆಲ್ಲವೂ ನಿತ್ಯ ಕಾಯಕದ ಮೂಲಕ ತಮ್ಮ ಬದುಕನ್ನು ಸಂಪಾದಿಸಿಕೊಳ್ಳಬೇಕೆಂಬುದು

ನಿಸರ್ಗನಿಯಮ. ಆದಿಕಾಲದಿಂದಲೂ ಮನುಷ್ಯ ತನ್ನ ಶ್ರಮದಿಂದಲೇ ಸಾಮಾಜಿಕ ಸಾಮರಸ್ಯವನ್ನು ಬೆಳೆಸಿಕೊಂಡು ಬಂದಿರುವುದು ಇತಿಹಾಸದಿಂದ ತಿಳಿದುಬರುತ್ತದೆ.

ಸಮಾಜವು ಆರೋಗ್ಯಯುತ್ತವಾಗಬೇಕಾದರೆ ಕಾಯಕವು ಒಂದು ಮಂತ್ರ. ಕಾಯಕವಿಲ್ಲದ ಬದುಕು ಕೊಳೆತು ನಾರುತ್ತದೆ. ಹಲವಾರು ರೋಗರುಜಿನೆಗಳ ತಿಪ್ಪೆಯಾಗುತ್ತದೆ. ಲಿಂಗ, ಪ್ರಸಾದ ಪ್ರಜ್ಞೆಯೇ ಕಾಯಕದ ಆತ್ಮ. ಅದಿಲ್ಲದಾಗ ಬದುಕು ಉಸಿರು ಕಟ್ಟಿ ಸಾಯುತ್ತದೆ. ಒಂದು ಕೆಲಸವಾಗಲಿ, ಉದ್ಯೋಗವಾಗಲಿ ಕಾಯಕವೆನಿಸಿಕೊಳ್ಳಬೇಕೆಂದರೆ ಶ್ರಮವಹಿಸಿ ಮಾಡಬೇಕಾಗುತ್ತದೆ. ಶ್ರಮ ವಹಿಸಿ ಮಾಡದೇ ಹೋದರೆ ಶ್ರಮ ವ್ಯರ್ಥವಾಗುತ್ತದೆ. ಆ ಕಾಯಕ ಮಾಡುತ್ತಾ ಹೋದಂತೆ ಜ್ಞಾನ ವೃದ್ಧಿಯಾಗುತ್ತದೆ. ಜ್ಞಾನ ವೃದ್ಧಿಯಿಂದ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಪ್ರಯೋಗ ಪೂರಕವಾಗಿಯೇ ಕಾಯಕ ಮಾಡಲಾಗುತ್ತದೆ. ಮಾನವ ಜೀವನದ ಪೂರ್ಣವಿಕಾಸ ಕಾಯಕದಿಂದಲೇ ಸಾಧ್ಯವಾದುದ್ದರಿಂದ ಜೀವನದ ಮೌಲ್ಯಗಳು ತಿಳಿದುಕೊಳ್ಳಬಹುದು. ಇನ್ನೊಬ್ಬರ ನೋವುಗೂ ಸ್ಪಂದಿಸಲು ಸಾಧ್ಯವಾಗುತ್ತದೆ. ಸ್ವಾರ್ಥ ಮನೋಭಾವನೆ ಬಿಟ್ಟು, ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಅಷ್ಟೇ ಅಗತ್ಯ.

ಭಾರತೀಯ ಸಂಸ್ಕೃತಿಗೆ ಒಂದು ಕೊಡುಗೆಯನ್ನು ನೀಡಿರುವ ಕೊರವಂಜಿ ಅಲೆಮಾರಿ ಸಮುದಾಯ ನೆಲೆನಿಂತು ತಮ್ಮ ಬದುಕಿನ ಸ್ಥಿರತೆಯನ್ನು ಕಾಯ್ದುಗೊಳ್ಳಲು ಶ್ರಮಿಸುತ್ತಿದ್ದರೆ. ಈ ನೆಲದ ಭಾವನಾತ್ಮಕ ಸಂಬಂಧಗಳ ನಡುವೆ ವರ್ಣನಾತ್ಮಕ ಬದುಕಿನ ಜೀವನವು ಕಾಣಬಹುದು. ಕೊರವಂಜಿಯನ್ನು ಶಿಷ್ಟ ಸಾಹಿತ್ಯದಲ್ಲಿ ಹಾಗೂ ಜನಪದ ಸಾಹಿತ್ಯದಲ್ಲೂ ವಿಶೇಷವಾಗಿ ಕಾಣಲಾಗುತ್ತಾದೆ. ಕೊರವಂಜಿಯ ಜಾಣ್ಮೆ, ತಂತ್ರಗಾರಿಕೆ, ಮಾತಿನ ಲಹರಿ, ಆಕರ್ಷಿಸುವ ಪರಿಯನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಪ್ರತಿಯೊಂದು ತಳಸಮುದಾಯದ ಒಂದಲ್ಲವೊಂದು ವಿಶೇಷ ವೃತ್ತಿಯನ್ನು ಅನುಸರಿಸಿ ಪ್ರತ್ಯೇಕವಾದ ಸಮುದಾಯಗಳಾಗಿ ಬೆಳೆದು ನಿಂತಿದೆ. ಪ್ರತಿಯೊಂದು ಸಮುದಾಯದ ಬದುಕು ಮತ್ತು ಸಂಸ್ಕೃತಿಯ ಹಿರಿಮೆಯನ್ನು ಮೆರೆಯುತ್ತಿದೆ. ನಂಬಿಕೆ ರೂಢಿ ಆಚರಣೆಗಳು ಸಂಪ್ರದಾಯಗಳನ್ನು ಚಾಚು ತಪ್ಪದೇ ಅನುಸರಿಸುತ್ತ ತಮ್ಮತನವನ್ನು ಬಿಟ್ಟುಕೊಡದೇ ಸಮುದಾಯದ ಪುರಾತನ ವೃತ್ತಿಗಳನ್ನು ಉಳಿಸಿಕೊಂಡು ಬಂದಿದೆ.

ಸಲಹೆಗಳು

ಕೊರವ ಸಮುದಾಯಕ್ಕೆ ತನ್ನ ಜೀವನ ನಿರ್ವಹಣೆಯನ್ನು ಉತ್ತಮ ಪಡಿಸಿಕೊಳ್ಳಲು ಮೂಲಭೂತ ಸೌಕರ್ಯ ಒದಗಿಸಲೂ ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಶಕ್ತಿಮೀರಿ ಪ್ರಯತ್ನಿಸಬೇಕು. ಆ ಮೂಲಕ ಅವರಲ್ಲಿ ಬದುಕಿನಲ್ಲಿ ಭರವಸೆ ಮೂಡಿಸಬೇಕಾಗಿದೆ.

ಸಮುದಾಯಕ್ಕೆ ಅಕ್ಷರ ಜ್ಞಾನದ ಕೊರತೆ ಇದೆ. ಸರ್ಕಾರ ಏನೇ ಸೌಲಭ್ಯಗಳು ಕಲ್ಪಿಸಿದ್ದರೂ ಅವು ಅವರನ್ನು ತಲುಪುತ್ತಿಲ್ಲ. ಸಮುದಾಯಕ್ಕೆ ಜಾಗೃತಿ ಶಿಬಿರಗಳು ಹಾಗೂ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಮತ್ತು ಅನಿವಾರ್ಯತೆಯ ಕುರಿತು ಎಚ್ಚರ ಮೂಡಿಸುವಂತಾಗಬೇಕು.

ಪ್ರಸ್ತುತ ದಿನಮಾನಗಳಿಗೆ ಒಗ್ಗಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂಬುದು ಜೀವನ ಶೈಲಿಯಿಂದ ಕಂಡುಬರುತ್ತದೆ. ಹೈದರಾಬಾದ ಕರ್ನಾಟಕದಲ್ಲಿ ದ್ವಂದ್ವ ಪರಿಸ್ಥಿತಿಯಲ್ಲಿ ಕಂಡುಬರುತ್ತಿದೆ. ಅವರಿಗೆ ಅರಿವಿನ ತಿಳುವಳಿಕೆಯು ಅನಿವಾರ್ಯವಾಗಿ ತಿಳಿಹೇಳಬೇಕಾಗಿದೆ.

ಜೀವನ ನಿರ್ವಹಣೆಗಾಗಿ ಹೊರರಾಜ್ಯಗಳಿಗೆ ವಲಸೆ ಹೋಗುವ ಪ್ರವೃತ್ತಿ ಕಂಡುಬರುತ್ತಿದೆ. ಅವರಿಗೆ ಅವರ ವಾಸಿಸುವ ಪ್ರದೇಶದಲ್ಲಿ ಕೂಲಿ ಹೊರತು ಜೀವನ ಸುಧಾರಿಸಲು ಕ್ರಮವಹಿಸಬೇಕು. ಸಹಬಾಳ್ವೆಯೊಂದಿಗೆ ಜೀವನ ಸಾಗಿಸುತ್ತಿದೆ.

ಇತ್ತೀಚಿನ ದಿನಮಾನಗಳಲ್ಲಿ ಬದುಕನ್ನು ಅರಿಸಿಹೊರ ರಾಜ್ಯಗಳಿಗೆ ಹೋಗುವಾಗ ಕುಟುಂಬದ ಹಿರಿಯರು ಪೋಡಿನಲ್ಲಿಯೇ ಇದ್ದು, ಉಳಿದವರು ಅತಿ ದೂರದ ಪ್ರದೇಶಗಳನ್ನು ವಾಸಿಸುವುದರಿಂದ ಸಹಬಾಳ್ವೆಯ ಜೀವನಕ್ಕೆ ಪೆಟ್ಟು ಬಿದ್ದಿದೆ.

ಸಮುದಾಯದ ಅಭಿವೃದ್ಧಿಯ ಹೆಸರಿನಲ್ಲಿ ಸಿದ್ಧಗೊಳ್ಳುತ್ತಿರುವ ಯೋಜನೆಗಳನ್ನು ಯಾವ ವರ್ಗದ ಜನರು ರೂಪಿಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಸಮುದಾಯದ ನಾಯಕರು ಅಥವಾ ಹಿರಿಯರ ಸಲಹೆ ಮೇರೆಗೆ ಹಾಗೂ ಸಮುದಾಯದ ಅಧ್ಯಯನ ನಡಸುತ್ತಿದ್ದವರ ಸಲಹೆ–ಸೂಚನೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು.

ಸಮುದಾಯದ ಅಭಿವೃದ್ಧಿಗಾಗಿ ಒಗ್ಗಟ್ಟಿನಿಂದ/ಸಂಘಟನೆಯಾಗಿ ಕಾರ್ಯ ಮಾಡಬೇಕು. ಇತರ ಸಮುದಾಯಕ್ಕೂ ಮಾದರಿಯಾಗಿ ಬದುಕಬೇಕಾಗಿದೆ.

ಸರ್ಕಾರವು ಜಾರಿಗೆ ತಂದಿರುವ ೦–೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ಉಚಿತವಾಗಿ ನೀಡುವುದು. ಸಂವಿಧಾನ ಬದ್ಧ ಹಕ್ಕು. ಈ ಸಮುದಾಯ ಮಕ್ಕಳು ಶಾಲೆಯಿಂದ ಹೊರಗಡೆ ಇರುವವರೇ ಹೆಚ್ಚು. ಆದ್ದರಿಂದ ಎಲ್ಲಾ ಮಕ್ಕಳಿಗೂ ಕಡ್ಡಾಯ ಮತ್ತು ಉಚಿತ ಶಿಕ್ಷಣ ಬಗೆಗೆ ಅರಿವು ಮೂಡಿಸಿ, ಶಾಲೆಗೆ ಬರುವಂತೆ ಮಾಡುವುದು.

ಕೊರವರ ಸಮುದಾಯದಲ್ಲಿ ಅನೇಕ ಪ್ರಕಾರದ ಜನಪದ ಕಲೆಗಳು, ಕಲಾವಿದರಿದ್ದಾರೆ. ಇದನ್ನು ಕುರಿತು ಸಂಶೋಧನೆಗಳು ನಡೆಯಬೇಕಾಗಿದೆ. ಸರ್ಕಾರದಿಂದ ವಿವಿಧ ಸೌಲಭ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ಪಡೆದುಕೊಂಡಿಲ್ಲ. ಹಲವಾರು ಸವಲತ್ತುಗಳಿಂದ ವಂಚಿತರಾಗಿದ್ದಾರೆ.

ಈ ಸಮುದಾಯದಲ್ಲಿ ಶ್ರೀಮಂತವಾದ ಹಾಗೂ ವೈವಿಧ್ಯಮಯವಾದ ಜನಪದ ಸಾಹಿತ್ಯವಿದ್ದು ಅದರ ಕುರಿತು ಅಧ್ಯಯನ ಮಾಡಬಹುದಾಗಿದೆ.

ಕೊರವ ಸಮುದಾಯದ ಕುಳುವ ಭಾಷೆಯ ಸಂಬಂಧಿಸಿದ ಸಂಶೋಧನೆಗೆ ಅಪಾರ ಅವಕಾಶಗಳಿವೆ ಮತ್ತು ತೌಲನಿಕ ಅಧ್ಯಯನಕ್ಕೆ ವಿಫುಲವಾದ ಅವಕಾಶಗಳಿವೆ.

ಸುಧಾರಣೆಗೊಳಗಾಗುವ ಮನೋಭಾವ, ಎಲ್ಲರೊಳಗೊಂದಾಗುವ ಬಯಕೆಯ ಮೂಲಕ ಸಮಾಜಕ್ಕೆ ತನ್ನಿಂದಾಗುವ ಸೇವೆ ಮಾಡುತ್ತ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಸಮುದಾಯದ ಜನ ನಿರ್ವಹಣೆ/ಅವರ ಮಹಾದಾಸೆಯನ್ನು ಅರಿತು ಸಮಾನತೆ, ಸಮಾನ ಅವಕಾಶ ದೊರಕಿಸುವಲ್ಲಿ ಮಾತ್ರ ವಿಫಲವಾಯಿತು ಎಂದೇ ಹೇಳಬಹುದು. ತಮ್ಮ ಸೌಲಭ್ಯಗಳು, ಹಕ್ಕುಗಳನ್ನು ಪಡೆಯಲು ಹೋರಾಟಗಳನ್ನು ಪ್ರತಿಭಟನೆಗಳನ್ನು ಮಾಡುತ್ತಿರುವುದುಂಟು. ಇನ್ನು ಸರ್ಕಾರಕ್ಕೆ ಪ್ರಭಾವ ಬೀರುವಂತೆ ಕಾರ್ಯವಾಗಬೇಕಾಗಿದೆ.

ಸಮುದಾಯಗಳ ಅಭಿವೃದ್ಧಿ ಹೆಸರಿನಲ್ಲಿ ಸಿದ್ಧಗೊಳ್ಳುತ್ತಿರುವ ಯೋಜನೆಗಳನ್ನು ಯಾವ ವರ್ಗದ ಜನರು ರೂಪಿಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಈ ಕುರಿತು ಸಮುದಾಯಗಳ ಹಿರಿಯರು, ವಿದ್ವಾಂಸರು ಸಂಘಟನೆಯ ಅಧ್ಯಕ್ಷರು, ತಿಳುವಳಿಕೆಯುಳ್ಳವರು ಸಲಹೆ ಸೂಚನೆಗಳು ನೀಡುವುದು, ಸರ್ಕಾರ ಗಮನಕ್ಕೆ ತರಬೇಕಾಗುತ್ತದೆ. ಕೊರವ ಸಮುದಾಯದ ಕಸುಬುಗಳು ಇತರ ಜನರ ಬದುಕಿಗೆ ಎಷ್ಟು ಮಾದರಿಯಾಗಿದೆ ಎಂಬುದು ತಿಳಿದುಕೊಳ್ಳುವುದು ಅಗತ್ಯ.

ಈ ಸಮುದಾಯಕ್ಕೆ ಸರ್ಕಾರ ಯೋಜನೆಗಳು ಯಾವುವು? ಯಾವ ಸೌಲಭ್ಯಗಳನ್ನು ಪಡೆಯಬೇಕು? ವಿದ್ಯಾಭ್ಯಾಸದಲ್ಲಿ ಸಿಗುವ ಸೌಲಭ್ಯಗಳ ಕುರಿತು ಮಾಹಿತಿಯ ಕೊರತೆ ಇದೆ. ಅವುಗಳ ಕುರಿತು ತಿಳುವಳಿಕೆ ಮೂಡಿಸುವ ಕಾರ್ಯ ನಡೆಯಬೇಕು. ಇಂದಿನ Facebook, Whatsappಗಳಲ್ಲಿ ಹೆಚ್ಚು ರಾಜಕೀಯ ವಿಷಯಗಳೆ ಚರ್ಚಿಸಲಾಗುತ್ತಿದೆ. ಉದ್ಯೋಗದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಆದರೆ ಅದಕ್ಕೆ ಪೂರಕವಾಗುವ ತಿಳುವಳಿಕೆಯ ಕೊರತೆ ಎದ್ದು ಕಾಣುತ್ತಿದೆ.

ಹೈದರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನೆಲೆಸಿರುವ ಕೊರವ ಸಮುದಾಯವು ಸಂಘಟನೆಯಲ್ಲಿ ಮುಂದುವರೆಯುತ್ತಿದ್ದು, ಸಂಘಟನೆಯಿಂದ ಶಿಕ್ಷಣ, ಉದ್ಯೋಗ, ಆರ್ಥಿಕಾಭಿವೃದ್ಧಿ, ರಾಜಕೀಯ, ಕಲೆ ಬಗೆಗೆ ತಿಳಿಸುವ ಮೂಲಕ ಜನರಿಗೆ ತಿಳುವಳಿಕೆ ಮೂಡುತ್ತದೆ. ಬಲವರ್ಧನೆಯನ್ನು ಸಂಘಟನೆಯಿಂದ ಪಡೆಯುಲು ಸಾಧ್ಯವಾಗಬಲ್ಲದು. ಸಮುದಾಯದೇ ಆದ ಪ್ರತ್ಯೇಕ ನಿಗಮವನ್ನು ರಚನೆ ಮಾಡಬೇಕು.

ಅನುಬಂಧಗಳು

* ಹಾಡುಗಳು
* ಎರಕುಲ ಅನುವಾದ ಕೃತಿ ಸಾರಂಶ
* ಕೊರವಂಜಿ ಸಾಹಿತ್ಯ
* ವಕ್ತೃ ವಿವರ
* ಪರಾಮರ್ಶನ ಗ್ರಂಥಗಳು
* ಛಾಯಾಚಿತ್ರಗಳು

ಹುಲಿಗೆಮ್ಮ ದೇವಿ ಹಾಡು

ಬಾಳಿನ ದಿಂಡಿಗೆ
ಬಾಳೆದಿಂಡಿಗೆ ಬಿಸಿಲೇರಿ
ಬಾಲಯೋಗಿಯರು ಹಸುದಾರ।
ಬಾಲೆ ಹೋಗಿಯರು ಹಸುದಾರ
ಏಳೇಳು ಹುಲಿಗೆಮ್ಮ

ಯಾಳ್ಯಾವು ಆದಾವು
ನಿಂಬೆ ದಿಂಡಿಗೆ ಬಿಸಿಲೇರಿ
ನಿಂತು ಜೋಗಿಯರು ಹಸುದಾರ
ಹಾಡು ಬಾಳೆದಾಲೆ ಎತ್ತೆರಡು ನೂಲೆಳೆ
ಜೋಡಿ ಎರಡು ಬಾಕು ಬಲಗೈಲಿ
ಜೋಡೆರಡು ಬಾಕು ಬಲಗೇಲಿ ಇಡುಕೊಂಡು
ತಾಯಿಪವಾಡ ಗೆಲಿತಾಳ
ಆಕಾಯಿ ಈಕಾಯಿ ನಾಕು ತೆಂಗಿನಕಾಯಿ
ಬಡವರಾರ ತಂದ ಎಳಗಾಯಿ। ಪೂಜಾರಿ
ಬಾಗೀಲೆ ಮೇಲೆಡಿ ಒಡಕೊಂಡ ನಾಕು ತೆಂಗಿನಕಾಯಿ
ಬಡವಾರ ತಂದ ಎಳಗಾಯಿ ಪೂಜಾರಿ
ಒಡೆಯು ಮೇಲೆಡಿ ಒಡಕೊಂಡು
ಆರು ಮಣದ ಅಕ್ಕಿ ಓರಿ ಮೇಲೆ ಏರಿಕೊಂಡು
ಇಪ್ಪಳ್ಳದ ಓದು ಇಡುಕೊಡು
ಒಪ್ಪಿಸಿ ಂದೇವು ಮನದರಿಕೆ

ಹತ್ತು ಮಣದ ಅಕ್ಕಿ ಎತ್ತಿನ ಮೇಲೆ ಏರಿಕೊಂಡು
ಮಾವುಳ್ಳದ ಓದು ಇಡುಕೊಂಡು
ಮಾವುಳ್ಳದ ಓದು ಇಡುಕೊಂಡು
ಹುಲಿಗೆಮ್ಮ ಮಾಡಿ ಬಂದೆವು ಮನದರಿಕೆ.

ಹನುಮಂತರಾಯ

ಹನುಮಂತ ರಾಯಾಗ ಯಾವಲ್ಲಿ ಜಳಕ
ಕ್ಷೇಕ್ಷಾವಲಿಗೆ ಯಾವಲಿ ಜಳಕ
ತಾಯಿ ಊರಮ್ಮಗೆ ಯಾವಲ ಜಳಕ
ಹನುಂತರಾಯಾಗ ಕಾಲುವೆ ಜಳಕ
ಕ್ಷೇಕ್ಷಾವಲಿಗೆ ಬಾವಿಯಲ್ಲಿ ಜಳಕ
ತಾಯಿ ಊರಮ್ಮಗೆ ಹೊಳೆಯಲ್ಲಿ ಜಳಕ

ಹನುಂತ ರಾಯಾಗ ಯಾವಾದ ಹೂವಾ
ಕ್ಷೇಕ್ಷಾವಲಿಗೆ ಯಾವಾದ ಹೂವಾ
ತಾಯಿ ಊರಮ್ಮಗಾ ಯಾವಾದ ಹೂವಾ
ಹನುಂತ ರಾಯಾಗ ಕಣಗಿನ ಹೂವಾ
ಕ್ಷೇಕ್ಷಾವಲಿಗೆ ಮಲ್ಲಿಗೆ ಹೂವಾ
ತಾಯಿ ಊರಮ್ಮಗೆ ಸಾವಂತಿಗೆ ಹೂವಾ
ಹನುಮಂತರಾಯಾಗ ಯಾವುದು ಎಡೆ
ಕ್ಷೇಕ್ಷಾವಲಿಗೆ ಯಾವಾದು ಎಡಿ
ತಾಯಿ ಊರಮ್ಮಗೆ ಯಾವಾದು ಎಡಿ
ಹನುಮಂತರಾಯಾಗ ಉಗ್ಗಿ ಎಡಿ
ಕ್ಷೇಕ್ಷಾವಲಿಗೆ ಬೇಟೆ ಎಡಿ
ತಾಯಿ ಊರಮ್ಮಗೆ ಹೋಳಿಗೆ ಎಡೆ
ಹನುಮಂತ ರಾಯಾಗ ಯಾವ ಗಮನ

ಕ್ಷೇಕ್ಷಾವಲಿಗೆ ಯಾವ ಗಮನ
ತಾಯಿ ಊರಮ್ಮಗಾ ಯಾವ ಗಮನ
ಹನುಮಂತ ರಾಯನಿಗೆ ಊರಿನ ಗಡಿಗ ಮನ
ಕ್ಷೇಕ್ಸ್‌ವಲಿಗೆ, ಲೋಬಾನ ಗಮನ
ತಾಯಿ ಊರಮ್ಮನಿಗೆ ಕರ್ಪೂರ ಗಮನ

ಗಂಗೆ–ಗೌರಿಯ ಜಗಳ

ನನಕೂಟೆ ಸರಿಯೇನೆ ಬೆಸ್ತರ ಮಗಳೆ?
ಬೆಸ್ತರ ಮಗಳಾದ್ರೆ ಕುಂದೇನು ತೋರೆ?
ಓಡಿ ಒಂದ್ಯಲ್ಲೆ ನನ ಸವತಿ ಗಂಗೆ।
ಓಡಿ ನಾ ಬರಲಿಲ್ಲ ಶಿವನಾಗೇ ತಂದ
ಮೆಚ್ಚಿ ಒಂದ್ಯಲ್ಲೆ ಕುಲಗೆಟ್ಟ ಗಂಗೆ।
ಮೆಚ್ಚಿ ಬಂದಾರೆ ಕುಲವೆಲ್ಲೀತೇನೆ?
ಸರಿ ಸರಿ ನಿಂತು ಮಾತಾಡುತೀಯ?
ನ್ಯಾಯದ ಮಾತಿಗೆ ಹೆದರಿಕೆಯೇನು?
....
ಕೈಕೈಹಿಡಿಕೊಂಡು ಕೆಡವಾದಿದಾರು.......।
ಜಡೆ ಜಡೆ ನೆಳದಾಡಿ ಜಗಳವಾಡಿದರು

ಕೊರವಂಜಿ

ಬೀದಿ ಬೀದಿಯ ಮೇಲೆ ಹೊರಾಟಾಳು ಕೊರವಂಜಿ
ಕೇರಿ ಕೇರಿಯ ಮೇಲೆ ಹೊರಟಾಳೊ
ಕಣಿಯೇ ಕಣಿಯೇ ಎಂದು ಸಾರ್‍ಯಾಳು
ಬಾರಮ್ಮ ಕೊರವಂಜಿ ಬಾರೆ ನಮ್ಮನೆಗೆ

ಕಾಸುಕೊಟ್ಟೇವು ನಾವು ಕಣಿ ಹೇಳೆ ಕೊರವಿ
ಕಾಸು ನಮ್ಮನೆಯ ಮುತ್ತಿನ ರಾಣಿ। ಕಾಣು
ಒಂಟೆ ಕೊಟ್ಟೆವು ನಾವು ಕಣಿ ಹೇಳಿ ಕೊರವಿ

ಒಂಟೆ ನಮ್ಮನೆಯ ಕುಂಟೆಮ್ಮೆ ಹಿಂಡು। ಕಾಣು
ಆನೆ ಕೊಟ್ಟೇವು ನಾವು ಕಣಿ ಹೇಳೆ ಕೊರವಿ
ಆನೆ ನಮ್ಮನೆಯ ಆಡಿನ ಹಿಂದು। ಕಾಣು
ಮತ್ತೇನು ಬೇಕಮ್ಮ ಬಿನ್ನಣಿ ಕೊರವಿ

ತೆಂಗಿನ ದೇಶಕ್ಕೆ ಹೋಗಿದ್ದ ಮಗಳೆ
ತೆಂಗಿನ ಮರದಡಿ ಮಲಗಿದ್ದೆ ಮಗಳೆ
ಆ ತೆಂಕಣ ಗಾಳಿಯು ಬೀಸ್ಯಾವೆ ಮಗಳೆ
ತರತರದ ಕಣಿಯನ್ನು ಪೇಳುವೆನು

ಬಡಗಾರ ಸೀಮೆಗೆ ಹೋಗಿದ್ದೆ ಮಗಳೆ
ಬಾಳೇಯ ಮರದಡಿ ಮಲಗಿದ್ದೆ ಮಗಳೆ
ಆ ಬ್ಯಾಡರ ಗಾಳಿಯು ಬೀಸ್ಯಾದೆ ಮಗಳೆ
ತರತರದ ಕಣಿಯ ಪೇಳವೆನು।

ಮಲ್ಲಿಗೆ ದಂಡೆ ಸುಪ್ರಸಿದ್ಧ ಜಾನಪದ ಗೀತಸಂಗ್ರಹದಲ್ಲಿ ಪ್ರಣಯಾಂತರ ಭಾಗದಲ್ಲಿ ಕೊರವಂಜಿ ಹಾಡು ಸಂಗ್ರಹಿಸಲಾಗಿದೆ.

ಬಾಳಿಯ ಬನದಾಗ ಬಾಲ ಚೆಂಡಾಡ್ಯಾನ
ಬಾ ನನ್ನ ಮಗನ ಅಬರಂಗ ಧೊರಿಯ
ಬಾಳಿಕಿತಾ ಛೆಲಿವ್ಯೋ। ನನ ಸೊಸೆ।
ಬಂದೊಮ್ಮೆ ಮಕದೋರೆ॥೧॥

ಬಾಳಿಕಿಂತ ಛೆಲವ್ಯಾದ್ರ ಭಾಂಯಾಗ ನುಗಸವ್ವಾ
ಉಟ್ಟೇದ ಹಟ್ಟೀ ಕಳಕೋರ್ಥಡದವ್ವಾ
ಬಿಟ್ಟಚ್ಚ ತವರ್ಮಿನಿಗೇ।ನಾ ನನ್ನ।
ಬಲ್ಲಂತ ಸುಳಿಗಾರನ॥೨॥

ನಿಂಬೀಯ ಬನದಾಗ ಕಂದ ಚೆಂಡಾಡ್ಯಾನ
ಬಾ ನನ್ನ ಮಗನ ಅಬರಂಗ ಧೋರಿಯ

ನಿಂಬಿಕಿಂತಾ ಛೆಲವ್ಯೋ ।ನನ ಸೊಸೆ।
ಬಂದೊಮ್ಮೆ ಮಕದೋರೊ॥೩॥

ನಿಂಬಿಕಿಂತ ಛೆಲಿವ್ಯಾದ್ರ ಭಾಯಾಂಗ ನುಗಸವ್ವಾ
ಕಟ್ಟೀದ ಕರಿಮಣಿ ಹರಕೋರ್ಥಡದವ್ವಾ
ಬಿಟ್ಟಚ್ಚ ತವರ್ಮನೀಗೆ ।ನಾ ನನ್ನ।
ಬಲ್ಲಿಂತ ಸುಳಿಗಾರನ ॥೪॥

ಅಣ್ಣಾನ ಮಗಳಂತ ಹಮ್ಮೀಲಿ ಕರತಂದ
ನನ ಮಗ ಮಾತಾ ಕೇಳೌಲ್ಲ ।ಸೊಸಿ ಮುದ್ದ।
ಹೋಗವ್ವಾ ತವರ್ಮನಿಗೆ ।ಸೊಸೆ ಮುದ್ದ।
ಹೋಗವ್ವಾ ತವರ್ಮನಿಗೆ॥೫॥

ಅಣ್ಣ್ಯಾರ ತಮ್ಮ್ಯಾರ ತಾಯ್ಯಾರ ತಂದ್ಯಾರ
ಅಣ್ಣಾನ್ಹೆಂಡಾರೊಂದವರ್ಯಾ ರತ್ತೆವ್ವಾ
ಹೋಗ್ಲಾರೆ ತವರ್ಮನೀಗೆ ।ಅತ್ತೆವ್ವ
ಹೋಗ್ಲಾರೆ ತವರ್ಮನೀಗ॥೬॥

ಒಂದ ಹೊನ್ನ ಕೊಟಿಟ್ಟು ಮದಿವ್ಯಾರೆ ಮಾಡಿದಿ
ಎರಡ್ಡೆನ್ನ ಕೊಟ್ಟು(ಕೊರವಂಜಿ) ಬುಟ್ಟಿಕೊಂಡು ಕುಡತ್ತಿ
ಗಂಡನ ನೋಡಿ ಬರುವೆ ।ಗಂಡನ।
ರಂಡೀಯ ನೋಡಿ ಬರುವೆ॥೭॥

ಒಂದ ಮೈ ಮುತ್ತ ಹಜ್ಜಿ ಬಂದ ಮೈ ಮಾಣಿಕ ಹಜ್ಜಿ
ಕೆತ್ತ ಮಾಣಿಕ ಬುಟ್ಟಿ ತಂದಿಟ್ಟಾಳತ್ತೆವ್ವ
ಆ ಕ್ಷಣಕ ತಂದಿಟ್ಟಾಳತ್ತೆವ್ವಾ॥೮॥

ಚಪ್ಪೂಲಿ ಮೆಟ್ಟಿದಾಳ ಎನ್ನಮ್ಮ।
ಚಪ್ಪೂಲಿ ಮೆಟ್ಟಿದಾಳ ಎನ್ನಮ್ಮ। ಚೆಪ್ಪೂಲಿ ಮೆಟ್ಟಿದಾಳ।
ರಾಮರ ಇರುವುದು ರಾಜ ಪಟ್ಟಣದ್ದಾದಿ ದಾವದೊಂದ್ಹೇಳಿ ಕೊಡಿರಿ॥೯॥

ದನಕಾಯೋ ಅಣ್ಣಗಳಿರ್‍ಯಾ ಎನ್ನಮ್ಮ।
ದನಕಾಯೋ ತಮ್ಮಗಳಿರ್‍ಯಾ ಎನ್ನಮ್ಮ ।ದನಕಾಯೋ ಅಣ್ಣಗಳಿರ್‍ಯಾ।
ರಾಯರ ಇರುವುದು ರಾಜ ಪಟ್ಟಣದ್ದಾದಿ ದಾವದೊಂದ್ದೇಳಿ ಕೊಡಿರಿ॥೧೦॥

ಬಾಳಿಯ ಬಲಕ್ಹಾಯ ಎನ್ನಮ್ಮ
ನಿಂಬಿಯ ಎಡಕ್ಹಾಯ ಎನ್ನಮ್ಮ ।ನಿಂಬಿಯ ಎಡಕ್ಹಾಯ।
ನಾಗಸಂಪಿಗೆ ನಡುಕ್ಹಾಯ ಕೋಲು ಕೋಲಣ್ಣಕೋಲ॥೧೧॥

ಹಸರೊಂದು ಉಟ್ಟಿದಾಳ ಎನ್ನಮ್ಮ।
ಹಸರೊಂದು ತೊಟ್ಟಿದಾಳ ಎನ್ನಮ್ಮ ।ಹಸರೊಂದು ತೊಟ್ಟಿದಾಳ।
ಹಸರೊಂದು ಸೆರಗಾ, ಮರಿಮಾಡಿ ತನ್ನಂಥಾ ಹರದ್ಯಾರನ
ಬಲಗೊಂಡಾಳ॥೧೨॥

ಕೆಂಪೊಂದು ಉಟ್ಟಿದಾಳ ಎನ್ನಮ್ಮ।
ಕೆಂಪೊಂದು ತೊಟ್ಟಿದಾಳ ಎನ್ನಮ್ಮ ।ಕೆಂಪೊಂದು ತೊಟ್ಟಿದಾಳ।
ಕೆಂಪೊಂದು ಸೆರಗಾ ಮರಿಮಾಡಿ ತನ್ನಂಥಾ ಬಾಲ್ಯಾರನ
ಬಲಗೊಂಡಾಳ॥೧೩॥

ಅನಿ ಅನಿಯ ಮುಂದ ಎನ್ನಮ್ಮ ।ಅನಿಯ ಮರಿಮುಂಡ
ಅನಿಯ ಏರುವ ಚೆದರ ಮನ್ನೆರ ಮಗಳು ಹೊರಟಾಳ
ರಾಜಬೀದಿಗೆ॥೧೪॥

ಒಂಟಿ ಒಂಟಿಯ ಮುಂದ ಎನ್ನಮ್ಮ
ಒಂಟಿಯ ಮರಿ ಮುಂದ ಎನ್ನಮ್ಮ ।ಒಂಟಿಯ ಮರಿಮುಂದ।
ಒಂಟಿಯ ಏರುವ ಭಂಟ ಮನ್ನೆರ ಮಗಳು ಹೊಂಟಾಳ
ರಾಜಬೀದಿಗೆ॥೧೫॥

ಕಾಲ ಕಂಚಿನ ಪಿಲ್ಲೆ ಕಿಂವಿಯಾಗ್ಲತ್ತಾಳಿ ವಾಲಿ।
ಸರಪಳಿ ಘಂಟಿ ಸರದ್ಹಾಳೆವ್ವನಿಗೆ

ಯಾ ನಾಡದ ಕೊರಿವೆ ।ಜಾಣೆನೀ।
ಯಾ ನಾಡದ ಕೊರಿವೆ॥೧೬॥

ಆ ನಾಡದ ಕೊರಿವ್ಯಲ್ಲ್ಯ ಈ ನಾಡದ ಕೊರಿವ್ಯಲ್ಲ।
ದೇವಲೋಕಾದ ಕೊರಿವಿದ್ದೂ ಜಾಣ ನಾ।
ದ್ಯಾವೆರ್ಧೇಳತೇನೇ ।ಕೈತಾ।
ಕೈತಾ ಕೈತಾರೋ॥೧೭॥

ಆ ನಾದ ಕೊರಿವ್ಯಲ್ಲ ಈ ನಾಡದ ಕೊರಿವ್ಯಲ್ಲ।
ದೇವಲೋಕದ ಕೊರಿವಿದ್ದೊ ಜಾಣನಾ।
ದ್ಯಾವಾರ್ಧೇಳತೇನೋ ।ಸುಳ್ಯಾರು।
ಮಾರೇರೆ ಹೊಡಿತಾರೊ॥೧೮॥

ನನ್ನ ಮಡದೀನ ಬಿಟ್ಟು ಹನ್ನೆರಡು ವರುಷಾಯ್ತು।
ಮಡದೀಗ ನನಗ ಕೂಡಿಸ ಕೊರವಂಜಿ।
ಕೈ ಯಾರೆ ಜೋಡಸ್ತೇನ ।ನಾ ನಿನ್ನ।
ಕಾಲಾರೆ ಬೀಳ್ತೇನ॥೧೯॥

ನನ್ನ ಮಡದೀನ ಬಿಟ್ಟು ಹನ್ನೆರಡು ವರುಷಾಯುತ್ತಾ
ಮಡದೀಗ ನನಗ ಕೂಡಿಸ ಕೊರವಂಜಿ
ಕರಕೊಂಡ ಬರತೀನ ।ನಾ ನಿನಗ।
ಸಿರಿ ಕುಬಸ ಮಾಡ್ತಾನ॥೨೦॥

ನನ ಕಾಲ ಬೀಳಲಕ ನನ್ನ ಕೈ ಜೋಡಿಸಲಕ।
ಯಾರೀಗಿ ಯೇನ ಮಾಡೀದಿ ಮಾರಾಯ।
ಹೋಗೂನು ನಡೀರಿ। ಮಾರಾಯ।
ಹೋಗನೂ ನಡೀರಿ॥೨೧॥

ಗಂಡ ಹೆಂಡರವರು ಗರದೀಲಿ ಬರುವಾಗ
ಕತ್ತೆಂತ ರಂಡೀ ಬೆನ್ಹತ್ತಿ ಬರುತ್ತಾಳ।

ಹೊಡೆದ್ದಾಕ್ಹಿಂದರ್ ।ಅಕಿ ತನ್ನ।
ಹೊಡಮಳಿ ಹೊಳ್ಳಿದಂತ॥೨೨॥

ಆರು ವರುಷ ತಿರುಗಿ ಅರಸ ತಂದೀದ
ಅತ್ತಿ ಬಾ ಹೊರಿಯಾಕ ।ನಿನ ಮಗನ।
ಕರಕೋರೊಳಿಯ್ಯಾಕ॥೨೩॥

ಪ್ರಾರ್ಥನಾ ಹಾಡು

ಎದ್ದುಸಿದ ಸಿದ ಏಳುತಲಿ ಸಿವಸಿದ
ನಿದ್ದು ರುಗಣಲ್ಲಿ ಸಿವಸಿವ ನೆನದಾರ
ನಾ ಮಾಡೀದ ಪಾಪ ಲಿಯಾರ।
ಸಂಸೋತೆನ್ನೋಳು ಜಗಮೂರು ಕಣ್ಣಿನೋಳು

ಕರಕಂಠದರಸ್ತಿ ಗಿರಿಜಮ್ಮ
ಕರಕಂಠದರಸ್ತಿ ಗಿರಿಜಮ್ಮ ಪಾರ್ವತಿ ದೇವಿ
ಬಾ ನನ್ನ ತಾಯಿ ಪಾದಗಳ್ಗ।
ಆರೆಲೆ ಮಾವಿನ ತಾಳೆನಲ್ಲಿರೋಳೆ
ತಾಳಿಸದ್ದೀಗ ಒಲಿಯೋಳೆ ಸರ ಸೋತಿ
ನನ್ನನಾಲೀಗ ತೊಡರನ್ನಾ ಬಿಡಿಸಮ್ಮ॥

ಸಿವಸಿವ ಅನ್ನೋರ ಸಿರಿಯಲ್ಲಿ ಇರಿಸಯ್ಯ
ಸಿವನ ಕೆಂಜಡುಗ ಮರುಗಾವ ಎತ್ತೋರ
ಸಿರಿಯೊಳಗೆ ನಮ್ಮ ಇರಿಸಯ್ಯ॥

ಹರಹರ ಅನ್ನೋರ ಹರದಲ್ಲಿ ಇರಿಸಯ್ಯ
ಹರನ ಕೆಂಜುಡಗ ಬಿಸಿಲೆಂದು ಬೇಡೋರ
ಹರದಲ್ಲಿ ನಮ್ಮ ಇರಿಸಯ್ಯ॥

ಕಾಡುದೇವರೇ ನೋಡಿದ್ರಿಯ ನನ್‌ಕಷ್ಟವ
ಬಾಲಲಿ ನಿಂದು ಕೈಮುಗಿದು ಬಾಲೀಗ

ಬಂದು ನನ್ನ ಕಷ್ಟ ಕಳೆಯಯ್ಯ

ಹಿಂದು ದೇವರೇ ಕಂಡರಿಯ ನನ್ನ ಕಷ್ಟಾವ
ಕಿಂಡೀಲಿ ನಿಂದು ಕೈ ಮುಗಿದು ಬಾಲೀಗ
ಕಂಡು ನನ್ನ ಕಷ್ಟಾ ಕಳಯಯ್ಯ॥

ಹರಿಯಂತ ಹತ್ತೀವಿ ಗಿರಿಯಂತ ಸೇರೀವಿ
ಕಮರಿಯನ್ನಾದ ಅರಿಯಾದೆ ಸಿರಿಹರಿಯೆ
ಸೇರಿದೆ ಸಿವನ ನೆರಳಲ್ಲಿ॥

ಅರಳೊಂದು ಮರಳೊಂದು ನೆರಳೀಗ ನಾನೇರಿ
ಕರಿಯಕಲ್ಲಂದು ಏರಗೀವಿ। ಸಿರಿಹರಿಯೇ
ನಾ ಸೇರಿದಿ ಸಿವನ ನೆರಳಲ್ಲಿ॥

ಬೀಗರ ಹಾಡು

ಬ್ಯಾಳ್ದ ಅರಬೀಗ ಬೆಳ್ಳಾಕಿ ನೋಡೀಲೋ
ಬ್ಯಾಳ ತೀರ್ತಂತ ಅಳ್ತಾಳೋ ಬೀಗಾತಿ
ನಾವಾರ್ ಜನ ಬಿಂದೀವಿ ಅಳಬ್ಯಾಡ॥

ಅಕ್ಕಿ ಗಡಗೀಗ ಅಂಗೈಯಾಕಿ ನೋಡೀಕೊ
ಅಕ್ಕಿ ತೀರ್ತಂತ ಅತ್ತಾಳೋ ನಮ್ ಬೀಗಾತಿ
ನಾವ್ ಹತ್‌ಜನ ಬಂದೀವಿ ಅಳಬ್ಯಾಡ॥

ಆಲದ ಹಣ್ಣಂಗೆ ಆರ್‌ಜನ ಬಂದವರ
ನಮ್ಮಾದಿ ಕಲ್ಲ ತುಳಿಲಾರು ಬೀಗರು
ಅವರಾರೂ ಜನರು ಮುದುಕರು।

ಪಟ್ಟಿ ಬೀಗಾರಿ ಯಾವಾ ನಾವ್ ಕಾಣೊ
ಗಟ್ಟಿ ತುಪ್ಪದಲ್ಲಿ ವರ ಮಣ್ಣು ಸುಣ್ಣದ ತೀಲಿ
ಗ್ವಾಡ ತಳತಳನ ಒಲದಾವೊ॥

ರಾಯಾಗೋಳ್ ಬೀಗಾರ್ ಯಾವಾಗ ನಾವ್ ಕಾಣೊ
ಜೇನು ತುಪ್ಪದಲ್ಲಿ ವರಮಣ್ಣು ಕೆಮ್ಮಣ್ ತಿಳಿ
ಅವರಗಾರ ತಳತಳ ಒಳದಾವೊ॥

ರಾಮ್ಗಳ್‌ಗವತಾರ ರಾಮ್ಗಲ್ ಬೇವತಾರ
ರಾಯ್ಗಳ್ ಚಿನ್ನದ ಉಡುದಾರ ನವಲ್ ಬೀಗರ್ನ
ರಾಯ್ಗಳ್ ವಿಳ್ಯಾಕ ಬರ್ತಾರೋ॥

ಸಾಮರಸ್ಯವಿಲ್ಲದ ಪತಿಯನ್ನು ಕೈಹಿಡಿದ ಹೆಣ್ಣಿನ ಅಳಲು

ಹಂತವಿಲ್ಲದ ಬಾವಿ ಜಂತವಿಲ್ಲದ ಸೀರ
ಸಂತೋಷಿಲ್ಲಾದ ಪತಿಯೋರು ಇದ್ದಾರ
ಸುಚೇಲಿ ಕಣ್ಣೀರು ಹರಿದಾವ॥

ಅಕ್ಷಾಯ ಮರ ಹಾಸೀ ಬೆಳೆದರೇನು
ಅಸಿಲ್ಲದೋರು ಕೈಹಿಡಿದು ಶಿವಗುರುವೆ
ಹಾಸಿಗೇಲಿ ಕಣ್ಣೀರು ಹರಿದಾವೋ॥

ನುಗ್ಗಾಯ ಮರ ಬಗ್ಗಿ ಬೆಳೆದಾರೇನು
ಬುದ್ದಿಲ್ಲದವರ ಕೈಹಿಡಿದು ಶಿವಗುರುವೆ
ಮಗ್ಗಲಲಿ ಕಣ್ಣೀರು ಹರಿದಾವೋ॥

ಓಲೆ ಒಳ್ಳೆಯ ಓಲೊಳಗ ಚಿನ್ನಾವಿಲ್ಲ
ಸೀರ ಒಳ್ಳೆದು ಸೆರಗಿಲ್ಲ ಶಿವಗುರುವೆ
ರಾರೊಳ್ಳೇರು ಗುಣವಿಲ್ಲ॥

ಗಂಡನಲ್ಲಿ ಗುಣವಿಲ್ಲ ಕೆಂಡದಲ್ಲಿ ತನುವಿಲ್ಲ
ಕೊಂಡ ಮಜ್ಜಿಗೆ ರುಚಿಯಿಲ್ಲ ಶಿವಗುರುವೆ
ಗಂಡಾನ ಬೋಗ ತರಲಿಲ್ಲ॥

ಈರುಳ್ಳಿ ಖಾರ ಹ್ಯಾಗ ತಿಂದರು ಖಾರ
ನನ್ನ ಪತಿಯೋರಿಗೋಪಕಾರ ಮಾಡಿದರ

ಅವರ ಮುರ್ಖಾದ ಬುದ್ಧಿ ಬಿಡರಲ್ಲೊ॥

ಹಲಸೀನ ಕಾಯಾಗಿ ಹಾಕಿದ್ದಿ ಹೆಣಗಂಟ
ಅಸಮಾನಕಾರ ಪತಿಯೋರು ಒತ್ತಾರಂತ
ಹಡಿದ ಹೆಣಗಂಟ ವದ್ದರೇನು॥

ಅತ್ತಿಗೆ ನಾದಿನಿಯವರ ಜರಿಯುವಿಕೆ

ಎಲ್ಲೊಟ್ಟೊಂದ್ ಜಾವನ್ದುಂಗ್ಯ ಎಲೆಗಿಲೆ ಬೇಕೇನೆ
ಅಂತ ಪಿಂತ ಮಾಡ್ಸಿಕೋ
ಇಂತ ಪಿಂತ ಮಾಡ್ಸಿಕೋ
ಪಂತಿ ಮೇಲ್ ಬರಜನ
ನಿನ್ನನೋಡಿ ನಗ್ತರ
ಸೈ ಸಬಾಸ್ ಗಿರತ್ತಿಗ
ಸೋಬಾನ್ ಬೇಕೇನೆ॥

ಅತ್ತಿಗೊಳ್ಳೇಳಂತ ಇತ್ತಾಲ ಮನೆಕೊಟ್ಟ
ಅತ್ತಿಗ ಮಾಡೀದ ಇಪರೀತ ಗಿಪರೀತ
ಕತ್ತೆ ಕಾಯೋನ ಕರ್ಕೊಂಡ್ಲು॥

ನಾದಿನೋಳ್ಳೇಳಂತ ಬೀದೀಯ ಮನೆಕೊಟ್ಟೆ
ನಾದೀನಿ ಮಾಡಿದ ಇಪರೀತ ಗಿಪರೀತ
ನಾಯೆ ಕಾಯೋನ ಕರ್ಕೊಂಡ್ಲು॥

ಕ್ವಾಣೇಲ ಕೂತಕೊಂಡು ತಾನೇನ ಮಾಡ್ಸಾಳು
ಮೂಗಾಳ ಬೂದಿವಲ ಮುಂಡ ಮಾಡಿಕೊಂಡು
ಕೊತ್ತೀಯ ಕರಕೊಂಡು ಮಲಗವಳೆತ್ತೀಗ
ಉಚ್ಚ ಊದಾಳೋ ಬಲ ಮುಂದೆ
ಅವಳ ಕೊಚ್ಚಲ ಮೀನಂತ ಎಳತನ್ನಿ॥

ಇದ್ದೋಳ್ ನೋಡಮ್ಮ ಇಜ್ಜಾಲ ಮಸಿಯಾಗಿ
ತಿದ್ದಿದ ಬೈರುವ ತಿಕದಾಗಿ ಅತ್ತಿಗೆ
ಅವಳೋದಲ್ ನೋಡಮ್ಮ ದರಬೇಸಿ॥

ಹೋದೋಳ್ ನೋಡಮ್ಮ ವಾಗಾಲ ಮಸಿಯಾಗಿ
ವಾಜರ ಮನಿಯ ತಿದಿಯಾಗಿ ಅತ್ತಿಗ
ಅವಳೆದ್ದೋಳ್ ನೋಡಮ್ಮ ಬಿಕನಾಸಿ॥

ಕುಕ್ಕ ತಕ್ಕಂಡು ಕೊಕ್ಕೊರಿಗೋದಾಳು
ಕೊಕ್ಕೊರು ನಾಯಿ ತಗಲೀವೊ ಅತ್ತಿಗ
ನೀ ಕುಕ್ಕೆಯ ಮಡಗಿ ಶರಣೆನ್ನು॥

ಮೊರ ತಕ್ಕೊಂಡು ಪಕ್ಕದೂರಿಗೋದಾಳು
ಪಕ್ಕದೂರು ನಾಯಿ ತಗಲೀವೋ ನಾದೀನಿ
ಮೊರಾಯ ಮಡಿಗಿ ಶರಣೆನ್ನು॥

ಕೋಳಿ ಮುರ್ಕಂಡು ಮುಳಾಯ ಕವರೋಳೆ
ಕೋಳಿಯವರು ಬಂದು ಲಗಲೆದ್ದು ಕುಣಿವಾಗ
ಕೇಳೆ ಅತ್ತೀಗ ಕಿವಿಕೊಟ್ಟು

ಅಟ್ಟಿದ ಬಾಡಾ ಅಗಲಲ್ಲಿ ಸುಟ್ಟಿದ ಬಾಡ್ ಸೂರಲ್ಲಿ
ರಕ್ತಾದ ತೊಳ್ಳ ಬದಿಯಲ್ಲಿ ಅತ್ತಿಗ
ನಿನ್ನ ತಲವುದ್ರೊ ಒಲಿಯ ಬಿಡಲಿಲ್ಲೊ॥

ಕಣ್ಣಿನ ಜೀಬ್ರೆ ಕಳ್ಳೆಕಾಯ್ನ ಗಾತ್ರ
ಮೂಗಿನ ಗೊಣ್ಣ ಮೊಳವುದ್ದ ನಾದಾನಿ
ನಿಮ್ಮಣ್ಣನ್ಗ ಮುತ್ತು ಕೊಡು ಹೋಗು॥

ನಮ್ಮಣ್ಣ ಬಂದ ನನಗ ಬಣ್ಣ ತಂದ
ನಿಮ್ಮಣ್ಣ ಬಂದ ನಿನಗೇನೇ ಅತ್ತಿಗ
ಕೆಮ್ಮಣ್ಣ ತಂದ ಎಡರಲ್ಲಿ

ಕರಮೀನ ಕಡಿಗೀಕ್ಕಿ ಸೀಗಡಿ ದಂಡಕಟ್ಟಿ
ಅರ್ದ ಕೂಪಾಲ ತಲಗಿಕ್ಕಿ ನಾದಾನಿ
ರಾಜ ನೋಡಂತ ಕಳಗಿವ್ನಿ

ಕಾಸಿನ ತಲೆಯೊಳೆ ಸೀಸದ ಬಂದಿಯೋಳೆ
ದ್ವಾಸ ಕಲ್ಲಿನ ಮೊಕದೋಳೆ ಅತ್ತಿಗ
ನಿನ್ನ ಸಾಸಾದ ಮಾತ್ಯಾಕೆ ಸಭೆಯಲ್ಲಿ॥

ಮದುಮಗನಿಗೆ ನೀರು ಹಾಕುವಾಗ

ಸರಸೋತಿ ಮುತ್ತೀನ ಸ್ವರವಾಗಿ ಬಾರಮ್ಮ
ದೊರೆಯ ಪಾಲಿಕರ ಮಗನೀಗ ಮದುವೀಗ
ಸ್ವರವಾಗಿ ಬಾರೋ ಸರಸೋತಿ॥

ಅಂದದಿಂದ ಒಳಹಾಕಿ ಚಂದದಿಂದೊಲಿಕೊರೆದು
ಗಂಧಾದ ಸೌದ ತಳಗೊಡ್ಡಿ ಕಾದನೀರು,
ರಂಬಾಯ ಮಗನೀಗ ಎಂದಾರೋ॥

ಆಯದಿಂದ ಒಲೆವೂಡಿ ದಯದಿಂದಲೊಲೆ ಕೊರೆದು
ಮಾವಿನ ಸೌದ ತಳಗೊಡ್ಡಿ ಕಾದನೀರು
ಗುಂಪನ್ನಳೋರ ಮಗ ಮೀದ

ಎಣ್ಣೆ ಸೀಗೆ ಕಾಯಿ ನನ್ನ ಮಡಿತು ಬಂದೊ
ಇನ್ನೂ ಮಲಗವ್ನ ಮದುವಯ್ಯ ಎದೆಮ್ಯಾಗ
ಸನ್ನಿ ಮಾಡೀವೋ ಉಗುರೆಣ್ಣ॥

ಅರಿಸಿನ ಸೀಗೆಕಾಯಿ ಸರಸನ್ನಾಡಿತು ಬಂದೊ
ಮರೆತು ಮಲಗವ್ನ ಮದುವಯ್ಯ ಪಕ್ಕದಲ್ಲಿ
ಸರಸ ವಾಡೀವೋ ನವಿಲಿಂಡು॥

ಆಲದ ಮಣಕ್ ಹೇಳಿ ಆರೇಳು ದಿನವಾದೋ
ಆಲದ ಮಣ ಬರಬೇಕು
ಆಲದ ಮಣ ಬಂದೇ ಹವಳದ ಚವರಿಗ ಬಂದೊ
ಅವರ ತಾಯಮ್ಮ ನೀರ ಬೆರಸೀಳೊ
ಅವಳ ತಾಯಮ್ಮ ನರ ಬೆರಸಿ ಮತ್ತೆ ನೆಂದಾಳೊ
ಹವಳದ ಬಚ್ಚಲಿಗ ನಡಿಯಂದ
ಹವಳದ ಬಚ್ಚಲಿಗ ಯಾರ‍್ಯಾರು ಬರಬೇಕು
ಅವರ ಮಾವನ ಮಗಳು ಬರಬೇಕು ಅವರಕಯ್ಯ
ಹವಳದುಂಗುರದ ಗೆಲ ಬೇಕು॥

ಹತ್ತಿಮಣ ಕೇಳಿ ಹತ್ತೇಳು ದಿನವಾದೋ
ಹತ್ತೀಯ ಮಣ ಬರಬೇಕು
ಹತ್ತಿಮಣ ಬಂದು ಮುತ್ತೀನ ಬೌರಿಂಗ ಬಂದೊ
ಅವರೆತಮ್ಮಮ್ಮ ನೀರ ಬೆರಸಿ ಮತ್ತೇನಂದ
ಮುತ್ತಿನ ಬಚ್ಚಲಿಗ ನಡಿಯಂದ
ಮುತ್ತಿನ ಬಚ್ಚಲಿಗ ಮತ್ತಾರು ಬರಬೇಕು
ಅವರತ್ತಾಯ ಮಗಳು ಬರಬೇಕವನ ಕೈಯ
ಮುತ್ತಿನುಲಗುರವ ಗೆಲಬೇಕು
ಅಕ್ಕಿ ಇಕ್ಕಾಗಿ ಬನ್ನಿ ಚಿಕ್ಕ ಮುತ್ತೈದೊರೆ
ಲಕ್ಷ್ಮೀಂತ ಪಡೆದ ಮಗನೀಗ ಮದುವಯ್ಯ
ಅಕ್ಕಿ ಅಕ್ಷತೆಯ ಇಡಬನ್ನಿ॥

ಹೆಣ್ಣು ಕರೆದುಕೊಂಡು ಹೋಗುವಾಗ

ತಲೆಯ ಬಾಚ್ಚಾಗ ತಾಯಮ್ಮಗ ನಗುಬಂತು
ತಲೆಯ ಬಾಚೆಣ್ಣ ಕರಕೊಂಡು ಹೋಗ್ವಾಗ
ತಾಯಮ್ಮಗ ದುಃಖ ಎರಗೀತು॥
ಕಪ್ಪು ಇಕ್ವಾಗ ಅವರಪ್ಪಾಜಿಗ ನಗುಬಂತು

ಕಪ್ಪಕ್ಕಿ ಹೆಣ್ಣು ಕರಕೊಂಡು ಹೋಗ್ವಾಗ
ಅವರಪ್ಪಾಜಿಗ ದುಃಖ ಎರಗೀತು॥

ಬಣ್ಣ ಉಡುವಾಗ ಅವರಣ್ಣ ಮಗ ನಗು ಬಂತು
ಬಣ್ಣ ಉಡ್ಸಿ ಹೆಣ್ಣು ಕರಕೊಂಡು ಹೋಗ್ವಾಗ
ಅವಣ್ಣಯ್ಯಗೆ ದುಃಖ ಎರಗೀತು॥

ಮುತ್ತೀನ ಮಣಿಯ ಎತ್ತಿ ಬೀದಿಗ ಬಂದೊ
ಮುತ್ತಿನ ಮಣಿಯೇ ಅಳಬೇಡ ನಿನ್ನ ಒಡೆಯೋ
ನಿಸ್ತ್ರದೈವಾರು ಕಳಿಸೀವೊ॥

ಧಾರೆ–ಪದಗಳು

ಧಾರೆ ಹೊತ್ತೀಗ ಯಾರ‍್ಯಾರು ಬರಬೇಕು
ಧಾರಾದ ಕೊರಳ ಹಿರಿಯಣ್ಣ ಸೋದರಮಾವ
ಧಾರಿಯ ಹೊತ್ತಿಗೆ ನೀಬೇಕು

ಹಾಲಿನ ಗಿಂಡಿ ತಾಯಮ್ಮ ಹಿಡಕಂಡು
ಹಾಲ ಎರದಾಳು ಕೈತುಂಬ ಅವರ ತಾಯಮ್ಮ
ಇಂದು ಕಂದಮ್ಮ ರುಣ ಮೂಲ

ತುಪ್ಪಾದ ಗಿಂಡಿ ಅವರಪ್ಪಾಜಿ ಹಿಡಕಂಡು
ತುಪ್ಪಾ ಎರದಾರೋ ಕೈತುಂಬ ಅವರಪ್ಪಾಜಿ
ಇಂದು ಕಂದಮ ರುಣಮೂಲ

ಎಣ್ಣಾಯ ಗಿಂಡೀಯ ಅವರಣ್ಣಾಯ ಹಿಡಿಕೊಂಡು
ಎಣ್ಣೆ ಎರೆದಾರೋ ಕೈತುಂಬ ಅವರಣ್ಣಯ್ಯ
ಇಂದು ತಂಗ ಮಗ ರುಣ ಮೂಲ

ಒಂದು ತಿಂಗಳಗಳ ಮಗು ಎತ್ತು ಮುದ್ದಾಡಿ ಸಾಕಿ
ಗಂಧ ಕರಂಗಡಿಯ ಎಣಬಜ ಎದೆಹಾಲು
ಇಂದು ಕಂದಮಗ ರುಣ ಮೂಲ

ಚಪ್ಪರದ ಹಟ್ಟೀಗ ಹೋಗಿ ಬೀಸೋಗಾಳಿ
ಮತ್ತೊಂದು ಘಳಿಗ ತಡಮಾಡು ಅವರ ತಾಯಮ್ಮ
ತಾಯಿಯ ಬಳಗ ಶತಕೋಟಿ॥

ಆನೆಯ ಮೇಲೆ ಭಾರೀ ಜಂಗಮ ಬಂದ
ಇಂದ್ರನ ನಾಡಿಂದ ಶಿವ ಬಂದು ಏನೆಂದ
ಸಣ್ಣೆಣ್ಣಿಗ ಧಾರೆ ಎರಿರೆಯಂತ॥

ಹೆಣ್ಣಿಗೆ ಸಂಬಂಧಪಟ್ಟ ಕಷ್ಟದ ಪದ

ಹೆಣ್ಣಾಗುಟ್ಟೋದಕ್ಕೆ ಮಣ್ಣಾಗುಟ್ಟೋದು ಲೇಸು
ಮಣ್ಣಿನ ಮೇಲೆ ಮರಹುಟ್ಟಿ ಬೆಳೆದಾರ
ಹೋಗಿ ಬರೋ ಜಂಗಮರ ನೆರಳಾದೋ॥

ಪಾಪಿಯಾದ ಮೇಲೆ ಕ್ವಪ್ಯಾಕೋ ಜನಮಾಕ
ನಾಕು ಜನ ಕುಂತಾಗ ನಗುವ್ಯಾಕೋ ಜನುಮಾಕ
ಈ ಪಾಪೆಣ್ಣ ಯಾಕೋ ಧರೆಯಲ್ಲಿ॥

ಅಲ್ಲಿ ತರಲಿಲ್ಲ ಇಲ್ಲಿ ಬೇಡಿದರಿಲ್ಲಿ
ನಾ ಎಲ್ಲಾರ ಸಮಕ ಇರಲಿಲ್ಲ ಶಿವಗುರವೆ
ಈ ಪಾಪೆಣ್ಣು ಯಾಕೋ ಧರೆಯಲ್ಲಿ॥

ಬಿದಿರುನ ಹಾಡು

ನಾನ್ಯಾರಿಗಲ್ಲಾದಳು ನಾನ್ಯಾರಿಗಲ್ಲಾದವಳು
ನಾನ್ಯಾರಿಗಲ್ಲಾದವಳು। ಬಿದಿರೂ
ನಾನ್ಯಾರಿಗಲ್ಲದವಳು?

ಹುಟ್ಟೂತ ಹುಲ್ಲಾದೆ ಬೆಳೆಯುತ್ತ ಬಿದುರಾದೆ
ಚಿಕ್ಕನು ಜಂಗಮ್ಮಯ್ಯಗೆ। ಬಿದಿರೂ
ಭಿಕ್ಷಾಕೆ ಬೆತ್ತವಾದೆ।

ಅಪ್ಪಾಗಿ ಬುಟ್ಟಿಯಾದೆ ಅಮ್ಮಾಗೆ ಪೆಡ್ಲಿಗಾದೆ
ಚೆಂದುಳ್ಳ ನಾರಿಯರಿಗೆ। ಬಿದಿರೂ
ಕೋರುವ ಮೊರನಾದೆ

ಹೆಣ್ಣೀಗೆ ಬುಟ್ಟಿಯಾದೆ ಎಣ್ಣೀಗ ಲಳಿಗಾದೆ
ಕಣ್ಣು ಮೂರುಳ್ಳ ಶಿವಗೆ। ಬಿದಿರೂ
ಪಾಲಿಕೆ ಕೊಂಬಾದೆ

ಗುಡ್ಡದಲ್ಲಿ ಹುಟ್ಟೂತಿನಿ ಗುಡ್ಡಾದಲ್ಲಿ ಬೆಳೆಯಾತಿನಿ
ಗಡ್ಡಾ ಬಂದ ಮುದುಕಾರಿಗೆ। ಬಿದಿರೂ
ಊರುವ ಕೋಲಾದೆ

ಹಚ್ಚೆಯ ಪದಗಳು: ಒಂದು

ಅತ್ತೆ ಬೈದರೆ ಒಪ್ಪು
ಮಾವ ಬೈದರೆ ಒಪ್ಪು
ಹಚ್ಚೀಯ ಬೋಟು ಹಣೆಗೊಪ್ಪು
ಹಚ್ಚೀಯ ಬೋಟು ಹಣೆಗೊಪ್ಪು ತಂಗ್ಸವ್ವ
ಚೊಚ್ಚಲು ಬಸಿರು ನಿನಗೊಪ್ಪಿ॥ ಎಂದು ಸೋದರ ಅಕ್ಕ ತಂಗಿಗೆ ತಿಳಿ ಹೇಳುವುದು

ಬಾ ನನ್ನ ನಾದುನೆ, ಹಾಲ ಮ್ಯಾಲಿನ ಕೆನೆಯೇ
ಯಾಲಕ್ಕಿ ಗೊನೆಯೆ, ಸಂಪಿಗೆ ತೆನೆಯೆ॥
ಹಚ್ಚೆ ಬೊಟ್ಟಿನ ಕೈಯಿ ಒತ್ತಿ
ಹಿಡಿಯಲ ಬ್ಯಾಡ

ನೆತ್ತರ ಇಳಿದಾವುಕಿರಿಬಳ್ಳು
ಸತ್ತರೆ ನಮಕೋಟೆ ಮತ್ತೆಯ ಬರಬಹುದು
ಹಚ್ಚೆಯ ಬೊಟ್ಟು ಸುಲಿಹಲ್ಲು
ಕಟ್ಟಿರೋ ತುರುಬು॥

ಅಕ್ಕ ಹೋಗೋನು ಬಾರೆ ಇಕ್ಕೆರಿ ಸಂತೀಗೆ
ಕೊಳ್ಳಾನು ಬಾರೆ ಚವುಲೀಯ
ಕೊಳ್ಳನು ಬಾರೆ ಚಿನ್ನಾದ ಬೊಟ್ಟು
ಒಪ್ಪಾವ್ರ ನನ್ನ ತುರುಬೀಗೆ
ಹಾವುರಾಣಿ ಕಂಡಿತಲ್ಲೆ ಹರಬಿದ್ದೆ
ಬೇಲ್ಯಾಗೆ

ನೀಏನು ದೊಡ್ಡ ಎದಿಗಾರ
ಕರ್‍ರಾನ ಹೆಣ್ಣಿಗೆ ತರಕಾರಿ
ಮಾಡಬ್ಯಾಡ

ಹರಕೋಳ ನಿನ್ನ ಗುಳದಾಳಿ
ಹರುಕೋಳು ನಿನ್ನ ಗುಳದಾಳಿ ಎಲೆರಾಮ, ಸರಕಾರದ ಮಗಳಾಗಿ ಇರುತ್ತೀನಿ।

೨

ಹಚ್ಚೆ ಉಯ್ದೆನು ಬಾರೆ ನಿನ
ಬಿತ್ತರಿ ತೋಳಿನ ಮೇಲೆ
ಹಚ್ಚೆಯ ಮೇಲೆ ಗಿಣಿರಾಮ ಸುವ್ವಯ್ಯ
ಹಚ್ಚೆಯ ಮೇಲೆ ಗಿಣಿರಾಮ ಬರೆದೇನು
ಚುಚ್ಚಿಸಿ ಕೊಂಬೋದೆ ನಿನ ಭಾರ ಸುವ್ವಯ್ಯ
ಚುಚ್ಚಿಸಿ ಕೊಂಬೋದೆ ನಿನ ಭಾರ ತಾಯವ್ವ
ಕೂಲಿ ಕೊಡುವಾಗ ನಿ ಕದನ ಸುವ್ಯಯ್ಯ
ಹಚ್ಚೇನ ಕೆಟ್ಯಾರೆ ಒದ್ಕೆರಡ ಉಮ್ತಿನಿ
ಕೊಯ್ ಅಂದ್ರೂ ಕೂಲಿ ಬಿಡೋದಿಲ್ಲ
ಸುವ್ವಯ್ಯ।

೩

ಅಮ್ಮೀ ನಿನಗಂಡ ಎಂತೋನೋ ದಮ್ಮಯ್ಯ
ವತ್ಕಾರ ಕಾಣೇವಲ ಮುರುವ ಸುವ್ಯಯ್ಯ

ವಂತ್ಕಾರ ಕಾಣೆವಲಿ ಮುರುವಮ್ಮಿಗಂಡ
ಸಂತೇಲಿ ಕದ್ದ ಕರಿಮೀನ ಸುವ್ವಯ್ಯ
ಸಂತೇಲಿ ಕದ್ದ ಕರಿಮೀನ ಮ್ಮಿಗಂಡ
ಸಂದೀಲಿ ತಿಂದಿ ಮೂರುಗುಡ್ಡ ಸುವ್ವಯ್ಯ

೪

ಹಚ್ಚೆ ಉಯ್ಯದಮನ ಎಲ್ಲಮ್ಮ ನೆನೆಯೋದು
ಕಲಬಾವಿತಾವ ಕಯ ತೊಳೆದು ಸುವ್ವಯ್ಯ
ಕಲಬಾವಿ ತಾವ ಕೈಯ ತೊಳೆದು ಬರುವಾಗ
ಹಚ್ಚೆ ಉಯಸ್ನಮಗೆ ಸುಖ ಬಾಳಿಸುವ್ವಯ್ಯ
ಹಚ್ಚೆ ಉಯಿಸ್ವಮ್ಮ ಹಾಡು ಕಲಸೀದಮ್ಮ
ಸುವ್ವಯ್ಯ

ಹಸು ಮಕ್ಕಾಳಿಗಾಲ ನೆರೆದಮ್ಮ
ಕುಸುವ ಸತ್ತರಿಗೆ ನೆರಳಾಗೆ ಸುವ್ವಯ್ಯ
ಹಚ್ಚೆ ಉಯಿಸ್ದಮಗೆ ಎಲ್ಲ ಭಾಗ್ಯವುಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ ಸುವ್ವಯ್ಯ
ಪಲ್ಲಕ್ಕಿ ಮೇಲೆ ಮಗ ಬರಲಿ ಅವ್ವಯ್ಯ
ಮಲ್ಲಿಗೆ ಮುಡಿಯೋ, ಸೊಸೆ ಬರಲಿ ಸುವ್ವಯ್ಯ

೫

ಯಾರು ಉಯ್ಸಿದಾರಮಗ್ಯಾ ದೇವಲೋಕಾರ ಹಚ್ಚೆ
ಹಡೆದವ್ವ ಬಂದು ಕೈಯ ನೋಡಿ ಸುವ್ವಯ್ಯ
ಹಡೇದವ್ವ ಬಂದು ಕೈಯ ನೋಡೇನಂದಾಳೆ
ಮುತ್ತೈದೆ ತನಕ ಇವ ಮೇಲು ಸುವ್ವಯ್ಯ।

ಏ ಸಂಪನ್ನ ಸಿರುಗರತಿ ಬಳ್ಳೆ ನಾಕೂ ಮುದ್ದೆಯ ನುಂಡು
ಗಂಡನ ಹಂತಿಲ್ಲಸಮ ಮುದ್ದೆ ಬಾ ನನ್ನ ನಾದೂನಿಯೇ

ಗಂಡನ ಹಂತಿಲ್ಲಸಮ ಮುದ್ದೆನಿಕ್ಕೊಂಡು
ಯಾಕಲ ಶಿವನೆ ಈ ಒಲದು...ಬಾ ನನ್ನ ನಾದುನಿಯೇ

ಹಣಚಿ ಬಟ್ಟಿನ ಮ್ಯಾಲ ಹಚ್ಚಾಳ ಕುಂಕುಮ
ಮೆಚ್ಚ್ಯಾಳ ಬಾಳ ಚೆಲುವನ। ನೋಡಯ್ಯ
ಮಚ್ಚೀಯ ಕಾಲ ಹಿಡಿದಾಳ
ಹಂಚಿ ಬಟ್ಟಿನ ಮ್ಯಾಲ ಹರಿದಾಡು ಕುಂಕುಮ
ಇಚ್ಚುಳ್ಳರಾಯ ಇದರೀಗೆ। ಬಂದರ
ಹೆಚ್ಚುಳ್ಳ ತವರ ಮರತಾಳ

ಹಣಚಿ ಬಟ್ಟಿನ ಗೆಳತಿ ಬಾ ನನ್ನ ಓಣಿಗೆ
ನನಕಿಂತ ಚೆಲುವಿ ನನ ಮಗಳ। ಕೈಮ್ಯಾಲ
ಚೆಂದಾಗಿ ಬರಿಯೆ ಚಂದ್ರಾಮ

ಹಲ್ಲಿಗಿ ಹಲ್ಲಿಟ್ಟು ಗಲ್ಲಕ್ಕ ಹಂಚಿ ಬಟ್ಟ
ಗೊಲ್ಲರ ಓಣ್ಯಾಗ ಬರತಾಳ। ನನ ಹುಡುಗಿ
ನಿಲ್ಲಂತ ಸೆರಗ ಹಿಡದೇನ
ಹಚ್ಚಿನ ಹಚ್ಚಿಬಟ್ಟು ಉದ್ದನ ಮಲಕಟ್ಟು
ಸಿಗದಂತ ಸಣ್ಣ ನಡುವಿನ। ಎಲೆಬಾಲಿ
ಮುರಕ ಮಾಡಬ್ಯಾಡ ಮುರದೀತು.

ಹಂಚಿ ಬಟ್ಟಿನ ಕೈಯ ಒತ್ತೊತ್ತಿ ಹಿಡಿಬ್ಯಾಡೊ
ನೆತ್ತರಿಳಿದಾವು ಬೆರಳೀಗಿ। ನನರಾಯ
ಅತ್ತಿ ಬೈದಾಳು ಕೈಬಿಡೊ

ಹಚ್ಚೆಯ ಪದಗಳು

ಬಾ ನನ್ನ ನಾದುನಿಯೇ॥ಪಲ್ಲವಿ॥
ಹಚ್ಚೆ ಹೋದೇನು ಬಾರೆ ಬಿತ್ತರಿ ತೋಳಿನ ಮ್ಯಾಲೆ

ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ ಬಾ ನನ್ನ ನಾದುನಿಯೇ
ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ –ಬರದೇನು
ಚುಚ್ಚುಸಿಕೊಂಡು ನಿಮ ಭಾರ ಬಾ –ನನ್ನ ನಾದುನಿಯೇ

ಹಚ್ಚೆ ಹುಯ್ಸೀದಮ್ಮ ಹಾಡು ಕಲಿಸೀದಮ್ಮ
ಹಸು ಮಕ್ಕಳಿಗ್ಹಾಲು ಎಂದಮ್ಮ ಬರುತಾಳೆ
ಕುಸಲಾದ ಸತ್ತಿಗೆಯ ನೆರಳಾಗೆ
ಹಚ್ಚೆ ಹೊಯ್ಸೀದಮ್ಮ ಎಲ್ಲೆಲ್ಲಿ ನೆನೆವೋದು
ಕಲ್ಲು ಬಾವಿತಾವ ಕೈಯ ತೊಳದು
ಕಲ್ಲು ಬಾವಿತಾವ ಕೈಕಾಲು ಮಕವೇ ತೊಳಿದು
ಹಚ್ಚೆ ಹುಯ್ಸೀದಮ್ಮ ಸುಖಿಬಾಳು

ಸಣ್ಣ ಸೀರೆಯ ಉಟ್ಟು
ಜಂಬೂರಿಗೆ ತಾಯ ಕಳವಿದೊ...
ಬಾ ನನ್ನ ನಾದುನಿಯೇ
ಬೆಂದು ಬೆಟ್ಟದ ಕೆಳಗೆ ಒಳ್ಳೆಬೇವಿನ ಚಿಗುರುಂಟೆ
ಕೆಂಡವರೆ ಉಂಟೆ ಕಾರವಲ್ಲಿ ಬಾ ನನ್ನ ನಾದುನಿಯೇ
ಕೆಂದಗುದುರೆಯ ಜಾಣ ಒಳ್ಳೆ ಚಂದದ ಕಡುವಾಣ
ಎಂದೀಗೆ ಬರುತ್ತೀಯೊ ಹಿರಿಯಣ್ಣ
ಬಾ ನನ್ನ ನಾದೂನಿಯೇ

ಎಂದಿಗೆ ಬರುತೀಯೇ ಹಿರಿಯಣ್ಣ ಕೈಯೊಳಗಲ
ನಿನ್ನ ಉಂಗುರ ಬರಲೊ ಬೆರಳೀಗೆ ಬಾ ನನ್ನ ನಾದುನಿಯೇ

ಸೊಳೆ ಅನಿಗ್ಹೋಗೋರಿಗೆ ಒಳ್ಳೆ ಸುಡುಗಾಡ ಬಡಿಯಾಲಿ
ಮನೆಯ ಹೆಂಡರಿಗೆ ಮಾರಮಾಚಿ ಬಾ ನನ್ನ ನಾದುನಿಯೇ
ಮನೆ ಮನೇ ಹೆಂಡತಿಗೆ ಮಾರ ಮಾಚಿ ಹೋಗೋನ
ಅಯ್ಯೋ ಮಂಡಲದಾವೆ ಕರಿಯಾಲಿ –ಬಾ ನನ್ನ ನಾದುನಿಯೋ

ಸೊಳೆ ನಿನ ಸುಪ್ಪಳಿ ಒಳ್ಳೆ ದೇವರಿಗೆ ಒಲ್ಡಾಡಿ

ದ್ಯಾವಕ್ಕನ ಗಂಡ ನೀರಾವಾಣಿ - ಬಾ ನನ್ನ ನಾದುನಿಯೇ

ಬಳ್ಳಾರಿ ಸಂತಿಂದ ಒಳ್ಳೆ ಬಳಿಯ ಪಟ್ಟಣದಿಂದ

ಐಭೋಗದಿಂದ ಐದಾ ಮಂದಿ -ಬಾ ನನ್ನ ನಾದುನಿಯೇ

ವಸಂತಮಾಲಾ ಜವಳಿ ಅವರು ಹಚ್ಚೆಯ ಹಾಡುಗಳನ್ನು ಕೊಟ್ಟಿದ್ದಾರೆ

ಒಕ್ಕಳಕ್ಕೆ ಹಾಕಿ ಒಂದು ಬದನೆಕಾಯಿ

ಲಕ್ಷದ ಮ್ಯಾಲೆ ತೊಂಬತ್ತಾರು ಸಾವಿರ ಒನಕೆ

ನಿತ್ಯ ಭೋಜನ ಮಾಡಿಸಿ ಕಲ್ಯಾಣ ಮಂಟಪಕ್ಕೆ ದಿನ ಮಧ್ಯಾಹ್ನಹೂಡಿ

ನೀಲಮ್ಮನ ಪದಕ್ಕೆ ಉಘೇ ಅನ್ನ ಹೆಸರು ಹಾಕುವೆ ಹೆಸರು ಹಾಕುವೆ

ಹೇಸುರಮ್ಮ ತಾಯಿ ನಿನ್ನ ಹೆಸರ್ಥೇಳಿ ಜನಗಳಿಗೆ ಹೆಸರು ಹಾಕುವೆ

ಬೇಗನೆ ನಿನ್ನುತ್ತಿ ಕೈಯಲ್ಲಿ ಶೋಭಿಸು ದೇವರ ಹೆಸರಲ್ಲಿ ರಾರಾಜಿಸು

ಗಂಗವ್ವ ಚುಚ್ಚಿಸಿಕೊಂಡ ಹಣಬೆ ಬೊಟ್ಟು

ಗರತಿತಾನ ತಂತ ಕುಂಕುಮ ತಂತ

ಯಾರು ಹುಯ್ದಾರಯ್ಯ ಈ ಮುತ್ತಿನ ಮಣಿಯಂತಾ ಹೆಜ್ಜೆ

ಹೆತ್ತಮ ಬಂದು ಕೈ ನೋಡಿ ಏನೆಂದಾಳೋ

ಮುತ್ತೈದಿ ತನಕ ಇವು ಮೇಲು

ಗರತಿಯರಿಗೆ ಹಚ್ಚೆ ಹಾಕುವಾಗ ಅವರಿಗೆ ಸೌಭಾಗ್ಯದ ಬಗ್ಗೆ ತಿಳಿ ಹೇಳುವುದು

ಕಡ್ಲೆ ತಿಂದ ಕುರುಕುರು

ಹೂಸು ಬಿಟ್ಟ ಪುರುಪುರ

ಗಂಡ ಬರ್ತಾನೆ ಸುಮ್ಮನಿರು

ಉಳ್ಳಾಗಡ್ಡಿ ತಿನ್ನಬ್ಯಾಡ

ಗಂಡ ಬರ್ತಾನೆ ಅಳಬೇಡ

ಕುಂಡಿ ಮ್ಯಾಲ ಹೊಡಿತಾನ

ಕುಣಿಬ್ಯಾಡ ಕುಣಿಬ್ಯಾಡ

ಮುತ್ತೈದೆ ತನಕ ಇವು ಮೇಲು

ಸತ್ತಾರೆ ಸಂಗಾತಿ ಇದ್ದರೆ ಗೆಣಕಾತಿ

ಸತ್ತಾರೆ ನಗುಂಟ ಬರೋದಲ್ಲೆ

ಕೈ ಮೊಗಳಹಚ್ಚೆ...।

ಶ್ರೀ ಎಚ್.ಎಲ್.ನಾಗೇಗೌಡ ಅವರು ನಾಗಮಂಗಲದಲ್ಲಿ ನಡೆದ ಜಾನಪದ ಸಮ್ಮೇಳನದಲ್ಲಿ ಹಚ್ಚೆಹಾಡುಗಳನ್ನು ಸಂಗ್ರಹಿಸಿದ್ದಾರೆ. ಪದವೇ ನಮ್ಮ ಎದೆಯಲ್ಲಿ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ದಕ್ಷಿಣ ಕರ್ನಾಟಕದ ಇಂಥ ಹಾಡುಗಳನ್ನು ಒಂದು ಕಡೆ ಕಲೆ ಹಾಕಿರುವುದು ಒಂದು ವಿಶೇಷವೆಂದು ತಿಳಿಸುತ್ತಾರೆ. ದಿವಾನ್ ಬಹದ್ದೂರ ಅನಂತಕೃಷ್ಣ ಪಿಯ್ಯರ ಅವರು ಹಚ್ಚೆಯ ಹಾಡೊಂದನ್ನು ಕೊಟ್ಟಿದ್ದಾರೆ.

Stay Darling stay this only for on hour
and you will be the Fariest of the fair
your lotus eyes can soothe the savage beast
your lips are like the newly blossomed rose
your teeth they shine like pearls; but where are they
before the beauties of my hand work

Stay darling stay tis only for an hour
and ypou will be the farirest of the fair
i, left my home all day long i toil,
so to adorm the maidan of the land
That erring hus bands may retarn to the on,
Such are the beauties of my hand work

Stay darling stay tis only for an hour
and you wiull be the fariest of the world
In the days of the old, fair sita laid her head
upon the lap of one of our caln,
when which her lord she wanderd in the wold,
and life emeral shone her beautious arms.

Stay darling stay tis only for an hour
and you will be the fairest of the fair
and ofter itn the wilds, so is said
she also of the wilds, so it is said
she also of the pan dus want in auest
of one of us; but found not even one
and sighed, she was not her sister's blest.

Stay darling stay tis only for an hour
and you will be the fairest of the fair,
my work is done, rejoice for you will be
The fairest of the sisteru in the land
Rejoice for ever more, among them you
will shaine as both moon among the staru.

ಎರಕುಲ

ಎರುಕುಲರನ್ನು ಕುರಿತು ಇ.ಥರ್ಸ್‌ಟನ್‌ರವರು "They are known as Korava from the extreme south to the north of the North Aracot District, where they are called Korach or Koracha and in the Ceded district they become Yerukala or Yarakala" ಎಂದು ಹೇಳಿದ್ದಾರೆ. ತಮಿಳಿನಾಡಿನ ಆರ್ಕಾಟ್ ಜಿಲ್ಲೆಯಲ್ಲಿ ಈ ಜಾತಿಯವರಿಗೆ ಕೊರಚ, ಕೊರ್ಚ ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲಿ ಯರುಕುಲ ಅಥವಾ ಯರಕಲ ಎಂಬ ಹೆಸರಿನಿಂದ ಗುರುತಿಸುತ್ತಾರೆ ಎಂದು ಅಭಿಪ್ರಾಯಿಸುತ್ತಾರೆ. ಇ.ಥರ್ಸ್‌ಟನ್‌ರವರು ಮುಂದುವರಿದು ಹೇಳುವುದೇನೆಂದರೆ "Cognate with the Kepmaries is a class of Korava Pujaris(as they call themselves in their own village), who emanating from the small hamlet in the Tanjore District, are spread more or less all over Indian" ಈ ಮಾತಿನ ಅರ್ಥವೇನೆಂದರೆ ಎರುಕುಲರು ಮತ್ತು ಕೆಪ್ಪಮಾರಿಗಳು ಒಂದೇ ಮೂಲದವರೆನ್ನುವುದು. ಫ್ರಾನ್ಸಿಸ್‌ರವರು "The Koravas are a Gypsy-tribe found all over the Tamil Country, but chiefly in Kurnool, Salem, Coimbatore and South Arcot" ಎಂದು ಎರುಕುಲ ನೆಲೆಗಳನ್ನು ಹೇಳಿದ್ದಾರೆ. ದೇಶದ ತುಂಬ ಚದುರಿ ಹೋಗಿರುವ ಎರುಕುಲರು ಅನಾದಿ ಕಾಲದಿಂದಲೂ ತಮಿಳಿಗೆ ಸಮೀಪವಾದ ಭಾಷೆಯನ್ನು ಉಳಿಸಿಕೊಂಡು ಬಂದಿದ್ದಾರೆ. ದ್ರಾವಿಡ ಮೂಲದ ತಮಿಳು ನೆಲೆ ತಮಿಳುಣಾಡಾದ್ದರಿಂದ ಎರುಕುಲ ಬುಡಕಟ್ಟಿನ ಮೂಲ ತಮಿಳುನಾಡು ಎಂಬುವುದು ಪ್ರಬಲವಾಗಿ ಉಳಿಯುವ ವಾಸ್ತವವಾಗಿದೆ.

ಸಮಾಜಶಾಸ್ತ್ರಜ್ಞರ ಪ್ರಕಾರ ಇವರು ಬಹುಮಟ್ಟಿಗೆ ಪಶ್ಚಿಮ ಭಾಗದಲ್ಲಿಯೇ ವಿಶೇಷವಾಗಿ ವ್ಯಾಪಿಸಿರುವಂತೆ ಕಂಡುಬಂದಿದೆ. ಉಪಲಬ್ಧವಿರುವ ಸಾಮಗ್ರಿಗಳನ್ನು ಪರಿಶೀಲಿಸಿದರೆ ಈ ಜಾತಿ ಸೂಚಕ ಮೂಲರೂಪ ತಮಿಳಿನಲ್ಲಿ ಬಳಕೆಯಿರುವ ಕೆಲವು ಪದಗಳನ್ನು ಅಡಗಿರುವಂತೆ ತೋರುತ್ತದೆ. ಇವರು ತೆಲುಗು ಪ್ರಾಂತ್ಯದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರೂ ಸಹ ತಮ್ಮ ಜಾತಿ ಸೂಚಕವಾದ ತಮಿಳಿನ ಮೂಲ ರೂಪವನ್ನು ಬಿಟ್ಟುಕೊಟ್ಟಿಲ್ಲ. ದೇಶದ ಇತರೆ ಭಾಗಗಲಲ್ಲಿ ವಾಸಿಸುತ್ತಿರುವ ಎರುಕುಲರು ಇಂದಿಗೂ ಈ ಅಂಶವನ್ನು ಉಳಿಸಿಕೊಂಡಿದ್ದಾರೆ. ಎಂ.ಕೆನಡಿಯವರ

ಪ್ರಕಾರ "Speak rude Marathi or Kanarese, some times both. In the Deccan and among themselves they speak corrupt Arvi in the Karnataic, corrupt arvi each with certain peculiarities impossible to describe" ಎಂದು ಬಾಂಬೆ ಪ್ರಾಂತ್ಯದಲ್ಲಿರುವ ಈ ಜನ ಮರಾಠಿಯನ್ನು, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಯಲ್ಲಿರುವ ಜನ ಮರಾಠಿ ಅಥವಾ ಕನ್ನಡ ಇವೇ ಎರಡನ್ನೂ ಮಾತನಾಡುವುದು ಸಹಜ. ಆದರೆ ಕಚ್ಚಾ ತೆಲುಗು ಮಾತನಾಡುವವರ ಬಗ್ಗೆ ಹೇಳುವುದನ್ನು ನೋಡಿದರೆ ಅವರು ಆಂಧ್ರದಿಂದ ಮಹಾರಾಷ್ಟ್ರಕ್ಕೆ ವಲಸೆ ಬಂದಿರುವವರು ಎನ್ನುವುದು ಖಾತ್ರಿಯಾಗುತ್ತದೆ. E.Thurston "In communication among themselves, the Koravas and the Yerukulas speak a corrupt ployglot, in which the words derived from several languages beer little resembalance to the original. Their words appear to be taken chiefly from Tamil, Telugu and Canarise" ಎಂಬ ಅಭಿಪ್ರಾಯವನ್ನು ನೀಡುತ್ತಾರೆ. ತಮಿಳು, ತೆಲುಗು, ಕನ್ನಡ ಭಾಷೆಗಳು ಒಂದೇ ಮೂಲವಾದ್ದರಿಂದ ತಮಿಳು ಮೂಲದ ಎರುಕುಲರ ಭಾಷೆಯಲ್ಲಿಯೂ ಈ ಭಾಷೆಗಳ ಶಬ್ದಗಳು ಕಾಣುವುದು ಸಹಜ. ಆ ಎಲ್ಲಾ ಭಾಷಾ ಜನಾಂಗಗಳೊಡನೆ ನಿಕಟ ಸಂಪರ್ಕ ಹೊಂದಿದ್ದರಿಂದ ಇತರೆ ಭಾಷೆಗಳ ಶಬ್ದಗಳು ಎರುಕುಲ ಭಾಷೆಯಲ್ಲಿ ಕಂಡುಬರುತ್ತದೆ. ಆದರೆ ಮೂಲ ಸ್ವರೂಪವನ್ನು ಪರಿಶೀಲಿಸಿದರೆ ಮಾತ್ರ ಇದೊಂದು ತಮಿಳಿನ ಉಪಭಾಷೆಯಂತೆ ತೋರುತ್ತದೆ. Rev.J.Cain "The Yerukalas call the, language oodra which seems to stand for agibberish or thieves slang or as they explain, something very hard to understand Oriya or oodra id the District of Gangam and Orissa. The word Oriya means north and the fact that the Yarukalas call their language oodra would seem to confirm their belief that they are a northern Tribe" ಎನ್ನುತ್ತಾರೆ. ಆದರೆ ಕರ್ನಾಟಕದ ಎರುಕುಲ ಜಾತಿಯಲ್ಲಿ ಈ ಮೇಲಿನ ಅಂಶಗಳು ಕಂಡಬರುವುದಿಲ್ಲ.

Faweett ಅವರು ಎರುಕುಲ ಭಾಷೆಯ ಕೆಲವು ಶಬ್ದಗಳನ್ನು ಉದಾಹರಿಸುತ್ತ ಹೇಳುವುದೇನೆಂದರೆ Constable-Erhtakayadu-red headed man. Head Constable-Kederarilu. The man who rides on an ass. Taking bride-Kali thidrathu-eating Ragi food. Toddy-Ugga perumalu ollathani-white water. Fouls-Rendukal Naidu-The Naidu of two legs. Mussalmans-Arupottavango-Those who have cut(Circumside). ಈ ಶಬ್ದ ರೂಪಗಳಲ್ಲಿ ಕೆಲವು ಅರ್ಥ ಕಳೆದುಕೊಳ್ಳದೇ ಮಾರ್ಪಾಟಾಗಿರುವುದು ಕಂಡುಬರುತ್ತದೆ. ಎರ್ರ ತಲಕಾಯುಡು–ಎರ್ರ ತಲಕಾಯುಡು, ಕಳಿತಿನ್ರುತು–ಕಳಿತಿನ್ನು ಆರ್ ತೋಟವೆಂಗೊ–ಆರ್ ತೋಟವು ಎಂದಾದರೆ ಕೆಡರಾರಿಲು–ಉಗ್ಗಪೆರಮಾರಲಿ, ವೊಲಯ್ ತನ್ನಿ ಮುಂತಾದ ಶಬ್ದಗಳು

ಅಷ್ಟಾಗಿ ಬಳಕೆಯಲಿಲ್ಲ. ಇವರು ಹೊಲೆಯನನ್ನು ಪರ್ಯದು, ಮಾದಿಗನನ್ನು ಪರ್ ಶಣದು, ವಳ್ಳಾಗ್ರನ್ನುತ್ತಾರೆ. ಸಾಮಾಜಿಕ ಒತ್ತಡದಿಂದ ಪ್ರಾದೇಶಿಕ ಭಾಷೆಗೆ ಹೊಂದಿಕೊಳ್ಳುತ್ತಿರುವ ಎರುಕುಲರಲ್ಲಿ ಮಾತೃಭಾಷೆ ನಿಧಾನವಾಗಿ ಕಣ್ಮರೆಯಾಗುತ್ತಿದೆ. ಈ ಜಾತಿಯ ಜನ ಗುಂಪು ಗುಂಪಾಗಿರುವ ಕಡೆ ಮಾತ್ರ ತಮ್ಮ ಭಾಷೆಯನ್ನು ಮಾತನಾಡುತ್ತಿರುವುದು ಕಂಡುಬರುತ್ತದೆ.

ಎರುಕುಲ ಮದುವೆ ಸಂಪ್ರದಾಯವನ್ನು ವಿವರಿಸುವಾಗ ಥರ್‌ಸ್ಟನ್ ಅವರು ಬೇರು ಮನುಸನ್ ಕುರಿತು ಹೇಳಿದ್ದಾರೆ. ಎರುಕುಲದಲ್ಲಿ ಇಂದಿಗೂ ಈ ಶಬ್ದ ಹಿರಿಯ ಮನುಷ್ಯ ಅಥವಾ ಮುಖಂಡ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಅಂದರೆ ಆಂಧ್ರದ ಯರುಕುಲರಲ್ಲಿ ಮತ್ತು ಕರ್ನಾಟಕದ ಎರುಕುಲರಲ್ಲಿ ಎಂದೇ ಅರ್ಥ ಈ ಶಬ್ದಕ್ಕಿದೆ. ಎಂತೋವನ್ ಅವರು ಸಹ ಎರುಕುಲರ ಭಾಷೆಯ ಬಗೆಗೆ Their home tongue mixture of Telugu, Tamil and Kanarese, indicating the country of their origin" "Koravas besides sepeaking Telugu, Tamil and Kanarese are said also to have a Gipsy Language of theirown" ಎಂದು ಹೇಳುತ್ತಾರೆ. ಇಲ್ಲಿಯೂ ಎರುಕಲರು ಸಂಚಾರಿಗಳಾದ್ದ ರಿಂದ ಮತ್ತು ಆಯಾ ಪ್ರದೇಶದ ಜನರ ಜೊತೆ ವ್ಯವಹರಿಸಲು ಆಯಾ ಭಾಷೆಗಳನ್ನು ಅರಿಯುವುದು ಅಗತ್ಯವೇ ಆಗಿದೆ. ಆದರೆ ಇವರು ಎರುಕುಲರ ಭಾಷೆಯ ಮೂಲದ ಬಗೆಗೆ ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ. ಆದರೆ ಅಬೇ ಡುಬೋಯಿಸ್ ಎರುಕುಲರು ಕಣಿ ಹೇಳುವುದನ್ನು ಮತ್ತು ಹಚ್ಚೆ ಹಾಕುವುದರಲ್ಲಿ ಅವರಿಗಿರುವ ನೈಪುಣ್ಯತೆಯನ್ನು ಗುರುತಿಸಿದ್ದಾರೆ. ಯಾವುದೇ ಪ್ರಾಂತ್ಯದಲ್ಲಾದರೂ ಸರಿ ಎರುಕುಲರು ಮಾಡುವ ವೃತ್ತಿಯಾದ ಕಣಿ ಹೇಳುವುದು, ಹಚ್ಚೆ ಹಾಕುವುದು, ಬುಟ್ಟಿ ಮಾಡುವುದು ಮುಂತಾದ ಉಪವೃತ್ತಿಗಳನ್ನು ಸೂಚಿಸುವ ಪದಗಳು ಎರುಕುಲರ ಭಾಷೆಯ ಮೂಲ ಪದದ ವಿಕೃತ ರೂಪಗಳಾದಂತೆ ಕಂಡುಬರುತ್ತವೆ. ಉದಾಹರಣೆಗೆ ಪಚ್ಚೆ ಕತ್ತುಕ ಎನ್ನುವ ಪದ ಕರ್ನಾಟಕದ ಜನ ಪಚ್ಚಕುತ್ರದು ಎಂದು ಹೇಳುತ್ತಾರೆ. ಕಳಿತಿಂಡ್ರು–ಕಳಿತಿನ್ನು ಎಂದಾಗುತ್ತದೆ. ಹೆಚ್.ವಿ.ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು "The Koravas are a Koramas speak Tamil, Telugu or Kanarese, according to the localities in which they live. But in communication among themselves the Kiravas and Yerukulas speak a corrupt poluglot, in which the words derived from different languages bear little resumblence. The words appears to belong to the three lanuuages above mountained" ಎನ್ನುತ್ತಾರೆ. ಇವರು ಗುರುತಿಸುರುವ ಹಾಗೆ ಎರುಕುಲರು ತಮಿಳು, ತೆಲುಗು ಮತ್ತು ಕನ್ನಡವನ್ನು ಅವರು ವಾಸಿಸುವ ಪ್ರದೇಶಕ್ಕನುಗುಣವಾಗಿ ಮಾತನಾಡುವುದು ಸಹಜವಾದರು ತಮ್ಮ ತಮ್ಮಲ್ಲಿ ಅಶುದ್ಧ ಭಾಷೆಯೊಂದನ್ನಾಡುತ್ತಾರೆ ಮತ್ತು ಆ ಭಾಷೆ ಮೇಲೆ ಹೇಳಿದ ಶಬ್ದಗಳನ್ನೊಳಗೊಂಡಿದೆ ಎಂದು ಹೇಳುವಲ್ಲಿ ಮಾತ್ರ ಆ ಭಾಷೆಯ ಮೂಲವನ್ನು ಸರಿಯಾಗಿ ಆಲೋಚಿಸಿದಂತಿಲ್ಲ.

ಜನಸಂಖ್ಯೆ: ಆಂಧ್ರಪ್ರದೇಶದಲ್ಲಿ ೧೯೦೧ರಲ್ಲಿ ಇವರ ಒಟ್ಟು ಜನಸಂಖ್ಯೆ ೧೯೧೧, ೧೯೨೧ರಲ್ಲಿ ೫೪೪೨, ೧೯೩೧ರಿಂದ ೧೯೫೧ರವರೆಗೆ ಯಾವುದೇ ಮಾಹಿತಿಯಿಲ್ಲ. ೧೯೬೧ರಲ್ಲಿ ೫೧೧೧, ೧೯೭೧ರಲ್ಲಿ ೧೧೯೧೦, ೧೯೮೧ರಲ್ಲಿ ೧೩೫೪೮, ೧೯೯೧ರಲ್ಲಿ ೧೪೬೨೬ ಮತ್ತು ೨೦೦೧ರಲ್ಲಿ ೧೩೦೨೪ ಇರುವುದಾಗಿ ದಾಖಲಾಗಿದೆ. ಕರ್ನಾಟಕದಲ್ಲಿ ಇವರ ಜನಸಂಖ್ಯೆ ೧೯೦೧ರಲ್ಲಿ ೧೭೬, ೧೯೨೧ರಲ್ಲಿ ೨೫, ೧೯೬೧ರಲ್ಲಿ ೧೫, ೧೯೮೧ರಲ್ಲಿ ೧೯೪, ೧೯೯೧ರಲ್ಲಿ ೬೯೪ ಮತ್ತು ೨೦೦೧ರಲ್ಲಿ ೧೦ ಎಂದು ನಮೂದಾಗಿದೆ.

ಜನಸಂಖ್ಯೆ ಹಂಚಿಕೆ: ಎರುಕುಲ ಜಾತಿಯನ್ನು ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕವಾಗಿ ಪರಿಶಿಷ್ಟ ಜಾತಿಯೆಂದು ಅಧಿಸೂಚಿಸಲಾಗಿರುವುದರಿಂದ, ಈ ಜಾತಿಯ ಜನಗಣತಿಯನ್ನು ಪ್ರತ್ಯೇಕವಾಗಿ ನಡೆಸಿರುವುದಾಗಿ ಕಂಡುಬಂದಿದೆ. ಆಂಧ್ರಪ್ರದೇಶದ ಆದಿಲಾಬಾದ, ಹೈದರಾಬಾದ್, ಕರೀಂನಗರ್, ಕಮ್ಮಾಂ, ಮಹಬೂಬ್ ನಗರ್, ಮೇಡಕ್, ನಲ್ಗೊಂಡ, ನಿಜಾಮಾಬಾದ್ ಮತ್ತು ವಾರಂಗಲ್ ಜಿಲ್ಲೆಗಳಲ್ಲಿ ಈ ಜಾತಿಯ ಜನ ವಾಸಿಸುತ್ತಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ಆಂಧ್ರಪ್ರದೇಶದಲ್ಲಿ ೬೫೦೩ ಪುರುಷರು ಮತ್ತು ೬೫೨೧ ಮಹಿಳೆಯರಿದ್ದಾರೆಂಬ ವಿಷಯ ತಿಳಿದುಬರುತ್ತದೆ.

ಕುಟುಂಬ ಮತ್ತು ವಂಶ: ಪಿತ್ರಾರ್ಜಿತ ಆಸ್ತಿಯನ್ನು ಎಲ್ಲ ಮಕ್ಕಳಿಗೆ ಸಮನಾಗಿ ಹಂಚಲಾಗುತ್ತದೆ. ಚಿನ್ನದ ಆಭರಣಗಳೇನಾದರು ಇದ್ದಲ್ಲಿ ಅವುಗಳನ್ನು ಹೆಣ್ಣುಮಕ್ಕಳಿಗೆ ಕೊಡಲಾಗುತ್ತದೆ. ವಿಧವೆಯಾಗಿರುವ ತಾಯಿ ತನ್ನ ಯಾವುದಾದರೂ ಮಕ್ಕಳ ಮನೆಯಲ್ಲಿ ವಾಸವಿರುಬಹುದು. ಸತ್ತ ವ್ಯಕ್ತಿಗೆ ಗಂಡು ಸಂತಾನವಿರದಿದ್ದರೆ, ಅಣ್ಣ ತಮ್ಮಂದಿರ ನಡುವೆ ಹಂಚಲಾಗುತ್ತದೆ.

ಜೀವನಾವರ್ತ ಆಚರಣೆಗಳು: ಈ ಜಾತಿಯ ಹೆಣ್ಣು ಗರ್ಭವತಿಯಾದರೆ, ಹೆರಿಗೆಯಾಗುವ ತನಕ ಯಾವ ಶಾಸ್ತ್ರವೂ ನೆರವೇರುವುದಿಲ್ಲ. ಆದರೆ ಆಕೆಗೆ ಇಷ್ಟವಾದ ತಿನಿಸು ಕೊಡಲಾಗುತ್ತದೆ. ಗರ್ಭಾವಸ್ಥೆಯಲ್ಲಿ ಆಕೆಗೆ ವಿಶೇಷವಾದ ಪುಲಗಂ ಬೇಳೆ, ಹರಿಶಿನ ಪುಡಿ ಮತ್ತು ಹೆಸರುಕಾಳನ್ನು ಬೇಯಿಸಿ ಮಾಡಿದ ಅನ್ನ ಮಾಡಲಾಗುತ್ತದೆ. ಹೆರಿಗೆ ಸಂದರ್ಭದಲ್ಲಿ ತೀವ್ರ ನೋವು ಅಥವಾ ಇನ್ನಾನಾದರು ತೊಂದರೆಗಳಿರುವುದು ಕಂಡುಬಂದರೆ, ಆ ಕುಟುಂಬದ ಯಾವುದಾದರೂ ಒಬ್ಬ ವ್ಯಕ್ತಿ ಗಾಳಿಯಲ್ಲಿ ಗುಂಡು ಹಾರಿಸುತ್ತಾನೆ. ಗುಂಡಿನ ಶಬ್ದದಿಂದ ಬೇಗ ಹೆರಿಗೆಯಾಗಲಿ ಎನ್ನುವುದು ಇದರ ಉದ್ದೇಶ. ಹಾಗೆಯೇ, ಹೆರಿಗೆಯಾಗುವಾಗ ಗರ್ಭವತಿ ಅತೀವ ನೋವಿನಿಂದ ನರಳುವಂತಾದರೆ, ನೆರೆಯ ಹೆಣ್ಣುಮಕ್ಕಳೆಲ್ಲ ರಾಮ, ರಾಮ, ನಾರಾಯಣ, ನಾರಾಯಣ ಎಂದು ಹೇಳುತ್ತ ತಾಮ್ರದ ಪಾತ್ರೆಗಳಿಗೆ ಸೌಟಿನಿಂದ ಬಡಿಯುತ್ತಾರೆ. ಹೀಗೆ ದೇವರ ಹೆಸರನ್ನು ಹೇಳುವುದರಿಂದ ಹೆರಿಗೆ ಅನಾಯಾಸವಾಗಿರುತ್ತದೆಯೆಂಬುದು ಅವರ ನಂಬಿಕೆ. ಮೊದಲ ಹೆರಿಗೆ ಹೆಣ್ಣಿನ ತವರುಮನೆಯಲ್ಲಿ ನಡೆದರೆ, ಉಳಿದ ಹೆರಿಗೆಗಳು ಗಂಡನ ಮನೆಯಲ್ಲೇ ನಡೆಯುತ್ತವೆ. ಈ ಜಾತಿಯ ಜನ ಹೆರಿಗೆಗೆಂದು ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಮನೆಯಲ್ಲಿಯೇ

ತಟ್ಟಿ ಕಟ್ಟಿ, ಮಗು ಮತ್ತು ತಾಯಿಯನ್ನು ಆರೈಕೆ ಮಾಡುತ್ತಾರೆ. ಹಜಾಮ ಜಾತಿಯವರಾದ ಮಂತ್ರಸಾನಿಯೆಂಬ ದಾದಿ ಹೆರಿಗೆಯನ್ನು ನೋಡಿಕೊಳ್ಳುತ್ತಾಳೆ. ಹೊಕ್ಕಳುಬಳ್ಳಿಯನ್ನು ಕತ್ರಿಸಿ, ತಾಯಿಯು ಮಲಗುವ ಚಾಪೆಯ ಕೆಳಗೆ ಹೂಳುತ್ತಾರೆ. ಮಗು ಹುಟ್ಟಿ ೨೦ ದಿನಗಳ ತನಕ ಸೂಕವಿರುತ್ತದೆ ಮತ್ತು ೨೧ನೇ ದಿನಕ್ಕೆ ಮಗುವಿಗೆ ಸ್ನಾನ ಮಾಡಿಸುತ್ತಾರೆ. ಪ್ರತಿದಿನ ಮಗುವಿನ ಸ್ನಾನ ಮತ್ತು ತಾಯಿಗೆ ದಿನ ಬಿಟ್ಟು ದಿನ ಸ್ನಾನ ಮಾಡಿಸುವ ಪದ್ಧತಿಯಿದೆ. ಹೆರಿಗೆಯಿಂದ ಎರಡು ತಿಂಗಳ ತನಕ ಗರ್ಭಿಣಿ ಮಾಂಸಾಹಾರ ಸೇವಿಸುವಂತಿಲ್ಲ. ಆಕೆಗೆ ಶುಂಠಿಯಿಂದ ಮಾಡಿದ ಸುತಿಕಾಯ ಮಾತ್ರಾಲು ಎಂಬ ಔಷಧಿ ಕೊಡುತ್ತಾರೆ. ಹೆರಿಗೆಯಾದ ೧ನೇ ದಿನದಂದು ಗರ್ಭಿಣಿಗೆ ಕೇವಲ ಅನ್ನ ಮತ್ತು ಶುಂಠಿ ನೀಡುತ್ತಾರೆ. ಮಗುವಿನ ನಾಮಕರಣ ೨೧ನೇ ದಿನದಲ್ಲಿ ನೆರವೇರುತ್ತದೆ. ಅಂದಿನ ದಿನ ಮೇನಮಾಮ ಅಂದರೆ ತಾಯಿಯ ಅಣ್ಣ ಅಥವಾ ತಮ್ಮ ಮಗುವಿಗೆ ಹೆಸರನ್ನಿಡುತ್ತಾರೆ. ಸಾಮಾನ್ಯವಾಗಿ ಮಗುವಿಗೆ ದೇವರ ಹೆಸರು ಮಾತ್ರ ಇಡಲಾಗುತ್ತದೆ. ಈ ಶಾಸ್ತ್ರಕ್ಕೆ ಯಾವುದೇ ಪೂಜಾರಿಯನ್ನು ಕರೆಯುವುದಿಲ್ಲ.

ಋತುಮತಿ: ಋತುಮತಿಯನ್ನು ಮನೆಯ ಹೊರಗೆ ಕಟ್ಟಿರುವ ಚಪ್ಪರದಲ್ಲಿ ೯ ದಿನಗಳವರೆಗೆ ಇಡಲಾಗುತ್ತದೆ. ಎಲ್ಲಾ ಒಂಬತ್ತು ದಿನಗಳಂದು ವಿಶೇಷವಾದ ಅಡಿಗೆ ಮಾಡಿಕೊಡಲಾಗುತ್ತದೆ. ಹೆಣ್ಣು ಮಕ್ಕಳು ಮೈನೆರೆಯುವುದಕ್ಕೂ ಮುನ್ನವೇ ಮದುವೆ ಮಾಡಿಕೊಡುವುದಿಂದ ಇವರು ಗಂಡನ ಮನೆಯಲ್ಲಿಯೇ ಋತುಮತಿಯಾಗುತ್ತಾರೆ. ಹೆಣ್ಣಿನ ತಂದೆ ತಾಯಿ ೯ನೇ ದಿನದಲ್ಲಿ ಮಗಳು ಮತ್ತು ಅಳಿಯನಿಗೆ ಹೊಸ ಬಟ್ಟೆ ತೊಡಿಸುವ ವಾಡಿಕೆಯಿದೆ. ಸೂಕತವಾದ ಮೂರು ದಿನಗಳ ನಂತರ ಪ್ರಸ್ತದ ಸಿದ್ಧತೆ ನಡೆಸಿದರೂ ಸಹ ಹೆಣ್ಣಿನ ಅನುಮತಿಯಿಲ್ಲದಿದ್ದರೆ ಆಕೆಗೆ ಅನ್ನಿಚ್ಛೆಯಂತೆ ಗಂಡನೊಂದಿಗೆ ಕೂಡವ ಅವಕಾಶವಿದೆ. ಮುಟ್ಟಿನ ಸಮಯದಲ್ಲಿ ಆಕೆ ಯಾವುದೇ ಪಾತ್ರೆ, ಅಡುಗೆ ಸಾಮಾನು ಮುಟ್ಟುವಂತಿಲ್ಲ.

ಮದುವೆ: ಹೆಣ್ಣು ಮೈನರೆಯುವ ಮುನ್ನವೇ ಮದುವೆಯಾಗುವಂತೆ ಎಲ್ಲಾ ಸಿದ್ದತೆಗಲನ್ನು ಮಾಡಿಕೊಲ್ಲುತ್ತಾರೆ. ಒಮ್ಮೊಮ್ಮೆ ಋತುಮತಿಯಾದ ಹೆಣ್ಣುಮಕ್ಕಳಿಗೆ ಮದುವೆ ಮಾಡಿಸುವುದು ಇವರಿಗೆ ಒದಗುವ ದೊಡ್ಡ ಕಷ್ಟ. ೯ ಮತ್ತು ೧೨ ವರ್ಷದ ಒಳಗಿರುವ ಹೆಣ್ಣುಮಕ್ಕಳಿಗೆ ಮದುವೆ ಮಾಡುವ ಸಂಪ್ರದಾಯವಿದೆ. ಹಾಗೆಯೇ ಗಂಡು ಮಕ್ಕಳು ೧೬ರಿಂದ ೨೦ ವರ್ಷದ ವರಿದ್ದಾಗಲೇ ಅವರಿಗೆ ಮದುವೆ ಸಂಬಂಧ ನೋಡಲಾಗುತ್ತದೆ. ಅತ್ತೆ ಅಥವಾ ಮಾವನ ಮಗಳು ಅಥವಾ ಮನಿಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಇವರು ಇತ್ತೀಚೆಗೆ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದಾರೆ. ಈ ಹಿಂದೆ ವಧುದಕ್ಷಿಣೆಯೂ ಇರಲಿಲ್ಲ. ವಧುವಿನ ಮನೆಯಲ್ಲಿ ನಡೆಯುವ ಮದುವೆಯನ್ನು ಜಾತಿಯ ಮುಖಂಡ ನೆರವೇರಿಸುತ್ತಾನೆ. ಮದುವೆ ಸಂಬಂಧಗಳು ಪರಸ್ಪರ ಮಾತುಕತೆಯ ಮೂಲಕ ನಿಶ್ಚಯಿಸಲ್ಪಡುತ್ತವೆ. ಮದುವೆಗೆ ಒಪ್ಪಿಗೆ ಸಿಕ್ಕ ದಿನ, ವರನ ತಂದೆ

ವಧುವಿನ ಬಂಧು ಬಳಗದವರಿಗೆ ಹೆಂಡ ಕುಡಿಸುವುದು ವಾಡಿಕೆ. ಇವರಲ್ಲಿ ಅಂತರ್ಜಾತಿಯ ವಿವಾಹಗಳು ನಡೆಯುವುದಿಲ್ಲ. ಬಹುಪತ್ನಿತ್ವಕ್ಕೆ ಅವಕಾಶವಿಲ್ಲದಿದ್ದರೂ, ಪತ್ನಿಗೆ ಮಕ್ಕಳಾಗದಿದ್ದರೆ, ಗಂಡ ಎರಡರಿಂದ ಮೂರು ಮದುವೆಯಾಗಬಹುದು ಮತ್ತು ತನ್ನ ಎಲ್ಲ ಹೆಂಡಿಯರನ್ನು ಒಂದೇ ಮನೆಯಲ್ಲಿಟ್ಟು ಸಾಕಬಹುದು. ವಿಧವೆಯರಿಗೆ ಮತ್ತೊಮ್ಮೆ ಮದುವೆಯಾಗುವ ಅನುಮತಿ ಇದೆ. ವಿಧವೆಯ ತಂದೆ–ತಾಯಿ ಮತ್ತು ಹುಡುಗನ ತಂದೆ–ತಾಯಿಗೆ ಒಪ್ಪಿಗೆಯಿದ್ದರೆ, ಪಂಚಾಯ್ತಿಯ ಸಮ್ಮುಖದಲ್ಲಿ ಮದುವೆ ಮಾಡಿಸಲಾಗುತ್ತದೆ. ಪತಿಯು ಸಾವನ್ನಪ್ಪಿದರೆ, ಆತನ ಮಕ್ಕಳನ್ನು ಅವನ ಸಂಬಂಧಿಕರು ನೋಡಿಕೊಳ್ಳುತ್ತಾರೆ. ಮದುವೆಯಂತೆ, ವಿಚ್ಛೇದನೆಯೂ ಸಹ ಸ್ಥಾಪಿತ ಸಂಸ್ಥೆಯಂತೆ ಕರ್ತವ್ಯ ನಿರ್ವಹಿಸುತ್ತದೆ. ವ್ಯಭಿಚಾರ ಮತ್ತು ಗಂಡನಿಗೆ ಹೆಂಡಿಯನ್ನು ಸಾಕಲು ಸಾಧ್ಯವಾಗದಿದ್ದರೆ ಮಾತ್ರ ವಿಚ್ಛೇದನಿಗೆ ಅನುಮತಿ ನೀಡುತ್ತಾರೆ. ವಿಚ್ಛೇದನ ನೀಡುವಾಗ ಪಂಚಾಯ್ತಿಯು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ.

ಸಾವು: ವಯಸ್ಕರು ಸತ್ತರೆ ಅವರನ್ನು ಸುಡುವ ಮತ್ತು ಮಕ್ಕಳು ಸತ್ತರೆ ಅವರನ್ನು ಹೂಳುವ ಪದ್ಧತಿಯಿಂದ ಸತ್ತ ಮೂರನೇ ದಿವಸಕ್ಕೆ ಚಿನ್ನದಿವಸಂ ಎಂಬ ಶಾಸ್ತ್ರ ಮಾಡುವ ಇವರು, ಅಂದಿನ ದಿನ ಸಿಹಿ ತಿಂಡಿ ಮತ್ತು ವಿಶೇಷವಾದ ಅಡುಗೆ ಮಾಡಿ ಸತ್ತವರ ಸಮಾಧಿಯ ಮೇಲಿಟ್ಟು ಪೂಜಿಸುತ್ತಾರೆ. ಬಾಗುಕೋಳಿಯನ್ನು ಬಲಿ ಕೊಡಲಾಗುತ್ತದೆ. ಸತ್ತ ವ್ಯಕ್ತಿಯ ಮಗ ಈ ಎಲ್ಲಾ ತಿಂಡಿ ತಿನಿಸುಗಳನ್ನು ಸಮಾಧಿಯ ತನಕ ತನ್ನ ತಲೆಯ ಮೇಲಿಟ್ಟುಕೊಂಡು ಹೋಗುತ್ತಾನೆ. ಶವವನ್ನು ಸುಟ್ಟ ಬೂದಿಯನ್ನು ಒಂದು ಮರದ ಕೆಳಗೆ ಹಾಕಿ ರಾಶಿ ಮಾಡಲಾಗುತ್ತದೆ. ಹಾಗೆಯೇ ಮೂಳೆಗಳನ್ನು ಸಹ ಒಂದೊಂದಾಗಿ ಸಂಗ್ರಹಿಸಿ ಅವುಗಳನ್ನು ಒಂದು ಚಿಕ್ಕ ಗುಣಿಯಲ್ಲಿ ಹಾಕಲಾಗುತ್ತದೆ. ಮೃತ ವ್ಯಕ್ತಿಯು ಕೊನೆಯುಸಿರೆಳೆದ ಸ್ಥಳವನ್ನು ಪ್ರತಿ ದಿನ ಸ್ವಚ್ಛಗೊಳಿಸಿ ಅಲ್ಲಿ ಮುಗ್ಗಲು(ಮೊಗ್ಗು)ಗಳನ್ನು ಇಡಲಾಗುತ್ತದೆ. ಹೀಗೆ ಈ ಶಾಸ್ತ್ರ ೧೧ದಿನಗಳ ತನಕ ನಡೆಯುತ್ತದೆ. ಸತ್ತ ವ್ಯಕ್ತಿಯ ಹಿರಿಯ ಮಗನಿಗೆ ಸಾವು ಸಂಭವಿಸಿದರೆ, ಅವನ ಹೆಂಡತಿ ಈ ಶಾಸ್ತ್ರ ನೆರವೇರಿಸುತ್ತಾಳೆ. ೧೧ನೇ ದಿವಸದಂದು ಕುರಿಯನ್ನು ಬಲಿ ಕೊಡಲಾಗುತ್ತದೆ. ಅಂದಿನ ದಿನ ಅಡುಗೆ ತಯಾರಾದ ತಕ್ಷಣ, ಮೃತನ ಮಗ ಎಂಜಲು ಎಲೆಗಳ ಮೇಲೆ ಊಟ ಮಾಡಿ, ನಂತರ ಎಲ್ಲಾ ಊಟದ ಎಲೆಗಳನ್ನು ಸುಟ್ಟು ಹಾಕುತ್ತಾನೆ. ಇದಾದ ನಂತರ ಮೂಳೆಗಳನ್ನು ಮುಚ್ಚಿದ ಚಿಕ್ಕ ಗುಣಿಯ ಸುತ್ತ ಕಲ್ಲುಗಳನ್ನು ನೆಟ್ಟು ಮನೆಗೆ ವಾಪಸ್ಸಾಗಿ ಮಾಂಸಾಹಾರ ಮತ್ತು ಸಾರಾಯಿ ಕುಡಿಯುತ್ತಾರೆ. ೧೧ನೇ ದಿವಸದಂದು ಬೆಳಿಗ್ಗೆ ಸತ್ತ ವ್ಯಕ್ತಿ ವಿಧವೆ ಹೆಂಡತಿಯನ್ನು ಹೊಳೆಗೆ ಕರೆದುಕೊಂಡು ಹೋಗಿ ಅಲ್ಲಿ ಆಕೆಯ ಬಳೆ ಒಡೆದು, ಕುಂಕುಮವನ್ನು ಅಳಿಸುತ್ತಾರೆ. ಇವರಲ್ಲಿ ಯಾರೇ ಸಾಯಲಿ, ಯಾವ ವಯಸ್ಸಿನಲ್ಲಿಯೇ ಸಾಯಲಿ ಅವರನ್ನು ಮಲಗಿಸುತ್ತಾರೆ ಮತ್ತು ಶವಸಂಸ್ಕಾರಕ್ಕೂ ಹಾಗೇ ಒಯ್ಯುವರು. ಬಿಸಿನೀರಿ

ನಿಂದ ಶವಕ್ಕೆ ಸ್ನಾನ ಮಾಡಿಸಿ ಗಂಡಸಾದರೆ ಹಣೆಗೆ ನಾಮ, ಹೆಂಗಸಾದರೆ ಕುಂಕುಮ ಇಡುತ್ತಾರೆ. ಗಂಡ ಸತ್ತಾಗ ಆತನ ಹೆಂಡಿತಿಯನ್ನು ಶವದ ಪಕ್ಕದಲ್ಲಿ ಕೂರಿಸಿ ಮಡಿಲಕ್ಕಿ ಹಾಕುತ್ತಾರೆ. ತವರಿನವರು ಹೊಸ ಬಟ್ಟೆಗಳನ್ನು ಕೊಡುತ್ತಾರೆ. ಹೆಂಡತಿ ಸತ್ತಾಗ ಆಕೆಯ ಗಂಡ ಶವದ ಪಕ್ಕದಲ್ಲಿರುತ್ತಾನೆ. ಆ ಸಮಯದಲ್ಲಿ ಶವಕ್ಕೆ ಪೂಜೆಯನ್ನು ಮಾಡುತ್ತಾರೆ. ಅದಕ್ಕೆ ಹೊಸ ಬಟ್ಟೆ ತೊಡಿಸುತ್ತಾರೆ. ಅನಂತರ ಶವದ ಜವಾಬ್ದಾರಿಯನ್ನು ಸತ್ತವನ ತಾಯಿಯ ತಮ್ಮ ಅಥವಾ ಸತ್ತವನ ಹೆಂಡತಿಯ ಅಣ್ಣ ತಮ್ಮಂದಿರು ಹೊರುತ್ತಾರೆ. ಇವರಿಗೆ ಹೊರೆ ಹೊರುವವರು ಎಂದು ಕರೆಯುತ್ತಾರೆ. ಈತ ಶವ ಮುಟ್ಟಿದ ನಂತರವೇ ಉಳಿದವರು ಶವ ಮುಟ್ಟುತ್ತಾರೆ. ಹೆಣವನ್ನು ಚಟ್ಟದ ಮೇಲಿಟ್ಟು ಸ್ಮಶಾನದ ಕಡೆ ಹೊತ್ತು ನಡೆಯುತ್ತಾರೆ.

ಹೆಣವನ್ನು ಸ್ಮಾಶಾನಕ್ಕೆ ಸಾಗಿಸುವಷ್ಟರಲ್ಲಿ ಮೊದಲೇ ನಾಲ್ಕು ಜನ ಹೋಗಿ ಗುಂಡಿ ತೆಗೆದಿರುತ್ತಾರೆ. ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ಮೊದಲೇ ಮನೆಯ ಮುಂದೆ ಹಾಕಿದ ಬೆಂಕಿಯ ಪಕ್ಕದಲ್ಲಿ ಒಲೆ ಹಾಕಿ ಹೊಸ ಮಡಕೆಯಲ್ಲಿ ಅನ್ನ ಮಾಡುತ್ತಾರೆ. ಇದನ್ನು ಕೂಳು ಎನ್ನುತ್ತಾರೆ. ಈ ಕೂಳಿನ ಮಡಕೆಯನ್ನು ತಂದೆ ಸತ್ತಾಗ ಹಿರಿಯ ಮಗನೂ, ತಾಯಿ ಸತ್ತಾಗ ಕಿರಿಯ ಮಗನೂ ಹಿಡಿದು ಹೆಣದ ಮುಂದೆ ನಡೆಯುತ್ತಾರೆ. ಉಳಿದವರು ಹೆಣವನ್ನು ಮುಟ್ಟುವುದಿಲ್ಲ. ಹೆಣವನ್ನು ಹೊತ್ತು ಬಂದವರು ಗುಂಡಿ ಸ್ವಲ್ಪ ದೂರ ಇರುವಾಗಲೇ ಹೆಣದ ಚಟ್ಟವನ್ನು ನೆಲಕ್ಕೆ ಇಳಿಸುತ್ತಾರೆ. ಈ ಚಟ್ಟ ಬಿದಿರಿನಿಂದ ಮಾಡಿದ್ದು, ಏಣಿಯಾಕಾರದಲ್ಲಿರುತ್ತದೆ. ಹೆಣದ ತಲೆಯ ಭಾಗದಲ್ಲಿ ಮೂರು ಕಲ್ಲುಗಳನ್ನಿಟ್ಟು ಅದರ ಮೇಲೆ ಕೂಳಿನ ಮಡಕೆಯನ್ನಿಟ್ಟು, ಕೂಳಿನ ಮಡಕೆ ಹಿಡಿದು ಬಂದವನು ತನ್ನ ಕೈಯಲ್ಲಿರುವ ಕೊಳ್ಳಿಯಿಂದ ಒಡೆಯುತ್ತಾನೆ. ನಂತರ ಕೂಳನ್ನು ನಾಲ್ಕು ದಿಕ್ಕಿಗೂ ಚೆಲ್ಲುತ್ತಾನೆ. ಆ ಮಡಕೆ ಒಡೆಯುವ ಕೊಳ್ಳಿಯನ್ನು ಆತ ಕೂಳು ಬೇಯಿಸಿದ ಒಲೆಯಿಂದಲೆ ತಂದಿರುತ್ತಾನೆ. ಅನಂತರ ಮೊದಲು ಹೆಣವನ್ನು ಹೊತ್ತವರೆ ಗುಂಡಿಯ ಹತ್ತಿರ ಹೊತ್ತು ತರುತ್ತಾರೆ.

ಸತ್ತವನ ಹಿರಿಯ ಮಗನು ಒಂದು ಗಡಿಗೆಯ ತುಂಬ ನೀರು ತರುತ್ತಾನೆ. ಅದನ್ನು ಹೆಗಲ ಮೇಲೆ ಹೊತ್ತು ಶವದ ತಲೆಯ ಕಡೆಗೆ ನಿಲ್ಲುತ್ತಾನೆ. ಆಗ ಹೊರೆಹೊತ್ತ ಸೋದರಮಾವ ಕುಡುಗೋಲಿನಿಂದ ಗಡಿಗೆಗೆ ತೂತು ಕಟೆಯುತ್ತಾನೆ. ನಂತರ ಗಡಿಗೆ ಹೊತ್ತವನು ಶವಕ್ಕೆ ಮೂರು ಸುತ್ತು ಹಾಕಬೇಕು. ಸೋದರ ಮಾವನಾದವನು ಪ್ರತಿ ಸುತ್ತಿಗೂ ತೂತು ಕಟೆಯಬೇಕು. ಕೊನೆಯ ಸುತ್ತಿಗೆ ಶವದ ಕಾಲ ಹತ್ತಿರ ಬಂದು ಪೂರ್ತಿಯಾಗಿ ಗಡಿಗೆ ಒಡೆಯಬೇಕು. ಈಗ ಗಡಿಗೆ ಹೊತ್ತವನು ಹಿಂದೆ ನೋಡದೆ ಮನೆಗೆ ಹೋಗಬೇಕು.

ಹೊರಿಹೊತ್ತವನು ಮತ್ತು ಗಡಿಗೆ ಹೊತ್ತವನು ಶವ ಸಂಸ್ಕಾರವಾದ ಮೂರು ದಿನಗಳವರೆಗೆ ಕೆಲವು ಕಟ್ಟಳೆಗಳನ್ನು ಪಾಲಿಸಬೇಕು. ಇವರಿಬ್ಬರು ಮನೆಯ ಒಳಗೆ ಹೋಗಬಾರದು ಮತ್ತು

ಇವರನನು ಯಾರೂ ಮುಟ್ಟಬಾರದು. ಒಂದು ವೇಳೆ ಮುಟ್ಟಿದರೆ ಅವರೂ ಸ್ನಾನ ಮಾಡಿಯೇ ಮನೆಯ ಒಳಗೆ ಪ್ರವೇಶಿಸಬೇಕು. ಇವರ ಊಟದ ಸಾಮಗ್ರಿ ಮತ್ತು ಹಾಸಿಗೆ ಹೊದಿಕೆಗಳೂ ಸಹ ಮನೆಯ ಹೊರಗಡೆಯೇ ಇರಬೇಕು. ಶವಸಂಸ್ಕಾರ ಮುಗಿದ ಮೂರು ದಿನದ ನಂತರ ಅವರನ್ನು ಒಳಗೆ ಕರೆದುಕೊಳ್ಳುವರು.

ಶವಸಂಸ್ಕಾರ ಮುಗಿಸಿ ಮರಳಿ ಮನೆಗೆ ಬಂದ ನಂತರದಲ್ಲಿ ಬೀಗರಾಗುವವರು ಸತ್ತವನ ಮಕ್ಕಳನ್ನು ಕರೆದು ಅವನ ಇಸಬಾಯಿ ತೊಳೆಸುತ್ತಾರೆ. ಇದನ್ನು ಪ್ರತಿಯೊಬ್ಬ ಬೀಗನು ಮಾಡಲೇಬೇಕು. ಸ್ವಲ್ಪ ಬೆಲ್ಲ ಅಥವಾ ಚಾ ಬಾಯಲ್ಲಿ ಹಾಕಿಕೊಂಡು ಉಗುಳಬೇಕು. ನಂತರ ನೀರು ಮುಕ್ಕಳಿಸಬೇಕು. ಈ ರೀತಿ ಎರಡು ಸಲ ಮಾಡಬೇಕು ಅಂದಾಗ ಬಾಯಿ ತೊಳೆದಂತೆ. ದೂರದ ಊರಿನವರು ಇದ್ದರೆ ಅವರೂ ಸಹ ಶವಸಂಸ್ಕಾರ ಮುಗಿದ ಮೇಲೆ ಎಷ್ಟೇ ದಿನಬಿಟ್ಟು ಬಂದರೂ ಬಾಯಿ ತೊಳೆಯಲೇಬೇಕು. ಈ ಬಾಯಿ ತೊಳೆಯದೆ ಇದ್ದರೆ ಅವರು ವಿಷದ ಕೂಳನ್ನೇ ತಿನ್ನುತ್ತಿರುತ್ತಾರೆ ಎಂಬ ನಂಬಿಕೆ ಅವರಲ್ಲಿ ಇರುತ್ತದೆ.

ಎರಡನೇ ದಿನದ ಕಾರ್ಯ: ಎರುಕುಲ ಜಾತಿಯಲ್ಲಿ ಶವಸಂಸ್ಕಾರದ ನಂತರವೇ ಹಲವಾರು ಪದ್ಧತಿ ಅನುಸರಿಸುವುದನ್ನು ಕಾಣುತ್ತೇವೆ. ಅವುಗಳಲ್ಲಿ ಕೂಳು ಹಾಕುವ ಕಾರ್ಯ ಅತಿ ಮುಖ್ಯವಾಗಿರುತ್ತದೆ. ಶವಸಂಸ್ಕಾರದ ಮರುದಿನ ಮುಂಜಾನೆ ಏಳು ಗಂಟೆಯ ಸುಮಾರಿಗೆ ಹತ್ತು ಚಪಾತಿ ಅನ್ನ, ಹುರಿದ ತತ್ತಿ, ಒಂದು ತಂಬಿಕೆ ನೀರು ಮತ್ತು ಕುಳ್ಳಿನ ಬೆಂಕಿ ಇವುಗಳ ಸಮೇತ ರುದ್ರಭೂಮಿಗೆ ಹೊರಡುತ್ತಾರೆ. ಮೊದಲು ಶವ ಇಳಿಸಿದ ಸ್ಥಳದಲ್ಲಿ ಸ್ವಲ್ಪ ನೀರು ಸಿಂಪಡಿಸಿ ಒಂದು ಔಡಲ ಎಲೆ ಇಡುತ್ತಾರೆ. ಅದರಲ್ಲಿ ಎರಡು ಚಪಾತಿ, ಸ್ವಲ್ಪ ಅನ್ನ ತತ್ತಿ ಇಡುತ್ತಾರೆ. ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿ ಎಲ್ಲರೂ ಲೋಬಾನವನ್ನು ಹಾಕುತ್ತಾರೆ. ಇಲ್ಲಿಂದ ರುದ್ರಭೂಮಿಗೆ ಹೋಗಿ ಅಲ್ಲಿಯೂ ಸಹ ನಾಲ್ಕು ದಿಕ್ಕಿಗೆ ನಾಲ್ಕು ಎಡೆ ಇಡುತ್ತಾರೆ. ಲೋಬಾನ ಹಾಕಿದ ನಂತರ ಎಲ್ಲರೂ ರುದ್ರಭೂಮಿಗೆ ಸ್ವಲ್ಪ ದೂರದಲ್ಲಿ ಹೋಗಿ ಕುಳಿದುಕೊಳ್ಳುವರು. ಆಗ ಅಲ್ಲಿ ಇಟ್ಟಂಥ ಅನ್ನವನ್ನು ಕಾಗೆ ಬಂದು ತಿಂದು ಹೋಗಬೇಕು. ಅಂದರೆ ಮಾತ್ರ ಸತ್ತವನು ಯಾವುದೇ ಆಸೆಗಳನ್ನು ಇಟ್ಟುಕೊಳ್ಳದೆ ಬಳಗಕ್ಕೆ ಕೂಡಿದನು ಎಂದು ನಂಬುತ್ತಾರೆ. ಕಾಗೆ ಮುಟ್ಟುವುದು ಸ್ವಲ್ಪ ತಡವಾದರೆ ಇದ್ದವರು ತಮಗೆ ತಿಳಿಸಿದಂತೆ ಬೇಡಿಕೊಂಡು ಮತ್ತೆ ಊದು ಹಾಕುವರು. ಇಷ್ಟಾದರೂ ಕಾಗೆ ಮುಟ್ಟದೆ ಇದ್ದರೆ ಏನೋ ಆಸೆ ಇಟ್ಟುಕೊಂಡಿದ್ದಾನೆಂದು ತಿಳಿಯಲಾಗುತ್ತದೆ ಹಾಗೂ ಹರಿಯುವ ನೀರಿನಲ್ಲಿ ಎಡೆಯನ್ನು ಬಿಡುವರು. ನೀರಿನಲ್ಲಿ ಮೀನಿನ ಮುಖಾಂತರವಾದರೂ ಬಳಗದಲ್ಲಿ ಕೂಡಿಕೊಳ್ಳಬೇಕೆಂಬುದು ಅವರ ನಂಬಿಕೆ. ನಂತರ ಎಲ್ಲರೂ ಮನೆಗೆ ಹಿಂತಿರುಗುತ್ತಾರೆ. ಮನೆಗೆ ಬಂದ ನಂತರ ಎಣ್ಣೆ ಮುಟ್ಟುವ ಪದ್ಧತಿ ಮಾಡುವರು. ಸ್ವಲ್ಪ ಸಗಣಿ ತೆಗೆದುಕೊಂಡು ಬಟ್ಟಲ ಆಕಾರ ಮಾಡುವರು. ಅದರಲ್ಲಿ ಗಾಣದ ಎಣ್ಣೆ ಹಾಕಿ ಮನೆಯ

ಹೊರಗಡೆ ಇಡುತ್ತಾರೆ. ಆಗ ರುದ್ರಭೂಮಿಗೆ ಹೋಗಿ ಬಂದವರು ಒಬ್ಬೊಬ್ಬರಾಗಿ ತಮ್ಮ ಬಲಗೈ ಕಿರುಬೆರಳನ್ನು ಆ ಎಣ್ಣೆಯಲ್ಲಿ ಅದ್ದಿ ಹೊರಗೆ ಸಿಂಪಡಿಸಬೇಕು. ಈ ರೀತಿ ಮೂರು ಸಲ ಮಾಡಬೇಕು. ಈ ರೀತಿಯಾಗಿ ಎಲ್ಲರೂ ಮಾಡಿದ ನಂತರ ಕೊನೆಯಲ್ಲಿ ಸೋದರಮಾವನು ಮೊದಲು ತರುವಾಯ ಸತ್ತವನ ಹಿರಿಮಗನು ಮಾಡಿ ಅದನ್ನು ಎತ್ತಿಕೊಂಡು ಹಿಂದಕ್ಕೆ ಸರಿಯುತ್ತ, ಹಿಂದಕ್ಕೆ ಎಸೆಯಬೇಕು. ಇಲ್ಲಿಗೆ ಕೂಳು ಹಾಕುವ ಪದ್ಧತಿ ಮುಗಿಯುತ್ತದೆ.

ಮೂರುದಿನ ಕಾರ್ಯ: ಮೂರನೇ ದಿನದ ಕಾರ್ಯ, ಎರಡನೇ ದಿನದ ಪದ್ಧತಿಗಿಂತ ಸ್ವಲ್ಪ ಭಿನ್ನವಾಗಿದೆ. ಸತ್ತವನು ತನ್ನ ಜೀವನದಲ್ಲಿ ಉಪಯೋಗಿಸುತ್ತಿದ್ದ ಹಣ್ಣುಹಂಪಲು, ತಿಂಡಿತಿನಿಸುಗಳು, ಬೀಡಿ, ಸಿಗರೇಟು, ಸಾರಾಯಿ, ಮಾಂಸ, ಎಲೆ ಅಡಿಕೆ, ತಂಬಾಕು, ಅನ್ನ, ಚಪಾತಿ ಮುಂತಾದ ವಸ್ತುಗಳನ್ನು ತೆಗೆದುಕೊಂಡು ಸ್ಮಶಾನಕ್ಕೆ ಹೋಗುತ್ತಾರೆ. ಈ ಕಾರ್ಯವನ್ನು ಮಾಡದಿದ್ದರೆ ಸತ್ತವನ ಆತ್ಮ ಹಠ ಹಿಡಿಯುತ್ತಿದೆ ಎಂಬುದು ಅವರ ನಂಬಿಕೆ.

ಎರಡನೆಯ ದಿನದಂತೆ ಅಂದು ಸಹ ಎಡೆಗಳನ್ನು ಹಾಕಿ ತೆಗೆದುಕೊಂಡು ಹೋದ ಪದಾರ್ಥಗಳನ್ನು ಹಂಚಬೇಕು. ನಂತರ ಬೆಂಕಿ ಮಾಡಿ ಲೋಬಾನ ಹಾಕಿ ಕಾಗೆ ಬಂದು ಮುಟ್ಟುವವರೆಗೂ ಕಾಯುತ್ತಾರೆ. ಒಂದು ವೇಳೆ ಕಾಗೆ ಬಾರದೆ ಇದ್ದರೆ ಮತ್ತೊಮ್ಮೆ ಎಲ್ಲರೂ ಲೋಬಾನ ಹಾಕಿ ತರುವಾಯ ಎರಡನೆ ದಿನದಂತೆ ಎಡೆಗಳನ್ನು ಒಯ್ದು ನೀರಿನಲ್ಲಿ ಬಿಡುತ್ತಾರೆ.

ಹೊರಿಹೊತ್ತು ಸೋದರಮಾವನನ್ನು ಮತ್ತು ಹಿರಿಯ ಮಗನನ್ನು ಕರೆದುಕೊಂಡು ಹೊಳೆಗೆ ಹೋಗಿ ಅಲ್ಲಿಗೆ ಬಂದಿರುವ ಕ್ಷೌರಿಕನಿಂದ ಹೊರೆಹೊತ್ತವನು ದಾಡಿ ಮಾತ್ರ ಮಾಡಿಸಿಕೊಳ್ಳುವನು. ಸತ್ತವನ ಹಿರಿಯ ಮಗನು ಮೀಸೆ ದಾಡಿ, ತಲೆ ಎಲ್ಲವನ್ನು ಬೋಳಿಸಬೇಕು. ತರುವಾಯ ಕ್ಷೌರಿಕನಿಗೆ ದಕ್ಷಿಣೆಯ ರೂಪದಲ್ಲಿ ಹಣ ನೀಡುವರು. ನಂತರ ಎಲ್ಲರೂ ಅಲ್ಲಿಯೇ ಸ್ನಾನ ಮಾಡಿ ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಂಡು ಬರುವರು.

ಇವರು ಬರುವವರೆಗೆ ರೂದ್ರಭೂಮಿಗೆ ಹೋದವರೆಲ್ಲರೂ ಮನೆಯ ಹೊರಗಡೆ ಕುಳಿತಿರುತ್ತಾರೆ. ಎರಡನೆಯ ದಿನ ಎಣ್ಣೆ ಮುಟ್ಟಿದ್ದರೆ ಇವತ್ತು ಹಿಟ್ಟಿನ ನೀರು ಮುಟ್ಟಬೇಕು. ಗೋಧಿ ಹಿಟ್ಟನ್ನು ಕಲಸಿ ಅದರ ಕಣಕದಿಂದ ಬಟ್ಟಲ ಆಕಾರ ಮಾಡಿ ಅದರಲ್ಲಿ ಹಿಟ್ಟಿನ ನೀರು ಹಾಕಿ ಹುಲ್ಲಿನಿಂದ ತಯಾರಿಸಿದ ಸಣ್ಣ ಕುಂಚವನ್ನು ಹಿಟ್ಟಿನ ನೀರಿನಲ್ಲಿ ಅದ್ದಿ ಹೊರಗೆ ಸಿಂಪಡಿಸಬೇಕು. ಈ ರೀತಿ ಮೂರು ಸಲ ಮಾಡಿ ನಂತರ ಸೋದರಮಾವ ಮತ್ತು ಸತ್ತವನ ಹಿರಿಮಗನು ಮುಟ್ಟಬೇಕು. ತರುವಾಯ ಅದನ್ನು ಎತ್ತಿಕೊಂಡು ಹಿಂದಕ್ಕೆ ಸರಿಯುತ್ತ ಹಿಂದೆ ನೋಡದೆ ಬೆನ್ನ ಹಿಂದಕ್ಕೆ ಎಸೆಯಬೇಕು.

ಇದಾದ ಮೇಲೆ ಸೋದರ ಮಾವನ ಮೇಲೆ ಹೊರಿಸಿದ ಹೊರಿ ಇಳಿಸಿಕೊಳ್ಳುವನು. ಅಂದರೆ ಸೋದರಮಾವನು ಮುಂದೆ ನಿಂತು ಅವನ ಹಿಂದೆ ಸತ್ತಾತನ ಮಗ ಕುಡುಗೋಲು

ಹಿಡಿದು ತಲೆಯಿಂದ ನೆಲಕ್ಕೆ ಮೂರು ಸಲ ಮುಟ್ಟಿಸಬೇಕು. ಹೀಗೆ ಮೂರು ಸಲ ಮಾಡಿದ ನಂತರ ಕೊನೆಯ ಸಾರಿ ಹೊರೆ ಇಳಿಸಿಕೊಂಡಿದ್ದೇನೆ ಎಂದು ಹೇಳಬೇಕು. ಅಂದು ಮಾಂಸ ಮತ್ತು ಜೋಳದ ನುಚ್ಚಿನ ಅಡುಗೆಯನ್ನು ಬಿಟ್ಟು ಬೇರೆ ಅಡುಗೆ ಮಾಡುವಂತಿಲ್ಲ. ಅಂದು ಮಾಡಿದ ಅಡುಗೆ ಕಡಿಮೆ ಆಗಬೇಕೆ ವಿನಾ ಉಳಿಯಬಾರದೆಂಬ ನಂಬಿಕೆ ಇವರಲ್ಲಿದ್ದು ಸೋದರ ಮಾವ ಮತ್ತು ಸತ್ತವನ ಹಿರಿಯ ಮಗ ಇಬ್ಬರೂ ಸೇರಿ ಒಂದೇ ತಟ್ಟೆಯಲ್ಲಿ ಊಟ ಮಾಡಬೇಕು. ಇದು ಆತ್ಮೀಯತೆಯ ಸಂಕೇತವೂ ಹೌದು.

ದಿನಕರ್ಮ ಪದ್ಧತಿ: ಎರುಕುಲ ಜಾತಿಯಲ್ಲಿ ಶವಸಂಸ್ಕಾರದ ನಂತರ ಆಚರಿಸುವ ದಿನಕರ್ಮ ಎಂಬ ಮತ್ತೊಂದು ಪದ್ಧತಿಯನ್ನು ಕಾಣಬಹುದು. ಅಂದರೆ ಕರ್ಮ ಕಳೆದು ಸತ್ತವನನ್ನು ಹಿರಿಯರಲ್ಲಿ ಕೂಡಿಸಿಕೊಳ್ಳುವುದು ಎಂದರ್ಥ. ಈ ಕಾರ್ಯವನ್ನು ವ್ಯಕ್ತಿ ಸತ್ತ ೫, ೮ ಅಥವಾ ೧೧ ದಿನಗಳಲ್ಲಿ ಹೀಗೆ ಅವರವರ ಅನುಕೂಲಕ್ಕೆ ತಕ್ಕಂತೆ ದಿನ ನಿರ್ಧರಿಸಿ ದಿನಕಾರ್ಯ ಮಾಡುತ್ತಾರೆ. ಆ ದಿನಕ್ಕೆ ಮನೆಯನ್ನು ಸ್ವಚ್ಛಗೊಳಿಸಲಾಗುತ್ತದೆ. ಹಾಸಿಗೆ ಬಟ್ಟೆಗಳನ್ನು ಶುಭ್ರಗೊಳಿಸಲಾಗುತ್ತದೆ. ಅಂದು ಮಧ್ಯಾಹ್ನವೇ ದಿನಕರ್ಮದ ಕಾರ್ಯ ಆರಂಭಿಸುತ್ತಾರೆ. ಪೂರ್ವಾಭಿಮುಖವಾಗಿ ಕುಂಭ ತಯಾರಿ ಮಾಡುವರು. ಮೊದಲು ಆ ಸ್ಥಳವನ್ನು ಮಡಿ ಮಾಡಿ ಸತ್ತವನ ಬಟ್ಟೆ ಹಾಸಿಗೆ ಹೊದಿಕೆಗಳನ್ನು ಅಂದವಾಗಿ ಮಡಚಿ ಇಡುವರು. ಸತ್ತವರು ಸ್ತ್ರೀ ಇದ್ದರೆ ಸೀರೆಯನ್ನು, ಪುರಷನಿದ್ದರೆ ಒಂದು ಮೀಟರ್ ಬಿಳಿ ಬಟ್ಟೆಯನ್ನು ತಂದು ಅದರ ಮೇಲೆ ಇಟ್ಟು ಅಡಿಕೆ ಬೆಟ್ಟದಿಂದ ಮನುಷ್ಯನ ಆಕೃತಿ ಮಾಡುತ್ತಾರೆ. ಇದರ ಮುಂಭಾಗದಲ್ಲಿ ಔಡಲ ಎಲೆ ಹಾಕಿ ಕುಂಭ ಮಾಡುತ್ತಾರೆ. ಹೋಳಿಗೆಗಳನ್ನು ಈ ಕುಂಭದ ಸುತ್ತಲೂ ಇಡುವರು. ನಂತರ ಸತ್ತ ವ್ಯಕ್ತಿ ಉಪಯೋಗಿಸುತ್ತಿದ್ದ ಎಲ್ಲ ಪದಾರ್ಥಗಳನ್ನು ಅಂದರೆ ತಿಂಡಿ ತಿನಿಸುಗಳು, ಎಲೆ ಅಡಿಕೆ, ಹಣ್ಣುಹಂಪಲು, ಬೀಡಿ, ಸಿಗರೇಟು, ಸಾರಾಯಿ ಮುಂತಾದವನ್ನು ಹಾಗೂ ಸಂಬಂಧಿಕರು ತಂದಂಥ ಹಣ್ಣುಗಳನ್ನು ಇಡುತ್ತಾರೆ. ಕುಂಭದ ಎಡಬಲ ಬದಿಗೆ ಗೋಧಿ ಕಣಕದಿಂದ ತಯಾರಿಸಿ ಎಣ್ಣೆಯಲ್ಲಿ ಕರಿದ ಪಣತಿಗಳನ್ನು ಇಟ್ಟು ದೀಪ ಹಚ್ಚುವರು. ತಳದಲ್ಲಿ ಸ್ವಲ್ಪ ಅಕ್ಕಿ ಹಾಕಿ ಮೆಲೆ ನೀರು ತುಂಬಿದ ತಂಬಿಗೆ ಇಡುವರು. ಇನ್ನೂ ಸ್ವಲ್ಪ ದೂರದಲ್ಲಿ ಬೆಂಕಿ ಹಾಕಿ ಎಲ್ಲರೂ ಲೋಬಾನ ಹಾಕುವರು.

ನಂತರ ಮಾಂಸದ ಅಡುಗೆಯನ್ನು ಮಾಡುತ್ತಾರೆ. ಈ ಪ್ರಾಣಿಯ ಹೊಟ್ಟೆಯೊಳಗಿನ ಕೆಲವು ಭಾಗಗಳನ್ನು ತೆಗೆದುಕೊಂಡು ಸುಡುತ್ತಾರೆ. ಆ ಸುಟ್ಟ ಮಾಂಸವನ್ನು ಕುಂಭಕ್ಕೆ ಹಾಕುವರು. ಮಾಂಸದ ಸಾರು ಮಾಡುತ್ತಾರೆ. ವಿನಾ ಈ ಸಾರಿನಲ್ಲಿ ಇದ್ದ ಮಾಂಸವನ್ನು ಮಾತ್ರ ಪೂಜೆಗೆ ಇಡುವುದಿಲ್ಲ. ಅದು ಎಂಜಲಾಗಿರುತ್ತದೆ ಂಬ ನಂಬಿಕೆಯಿದೆ. ಮಾಂಸವನ್ನು ಕುಂಭಕ್ಕೆ ಹಾಕಿ ಮತ್ತೆ ಎಲ್ಲರೂ ಲೋಬಾನ ಹಾಕಿದ ನಂತರ ಎಲ್ಲರೂ ಬೇರೆ ಎಡೆ ಮಡಿಕೊಂಡು ಒಂದು

ತಂಬಿಗೆ ನೀರು, ಗಂಗಾಳ(ಕಂಚಿನ ದೊಡ್ಡ ತಟ್ಟೆ) ತೆಗೆದುಕೊಂಡು ಮನೆಯ ಹಿಂಬದಿಗೆ ಬರುತ್ತಾರೆ. ಈ ಕುಂಭದ ಹತ್ತಿರ ಒಬ್ಬನನ್ನು ಮಾತ್ರ ಕುಳ್ಳಿರಿಸಿರುತ್ತಾರೆ. ಉಳಿದವರು ಒಂದು ಮಗುವನ್ನೂ ಸಹ ಬಿಡದಂತೆ ಎಲ್ಲರೂ ಒಟ್ಟುಗೂಡಿ ಮನೆ ಹಿಂದೆ ಹೋಗುವರು. ಆಗ ತಂಬಿಗೆಯಲ್ಲಿಯ ನೀರನ್ನು ಸಿಂಪಡಿಸಿ ತಾವು ತಂದ ಎಡೆಯನ್ನು ಇಡುವರು. ಇದಾದ ಮೇಲೆ ಒಬ್ಬನು ಹಿಂದಿನಿಂದ ಬಳಗದಲ್ಲಿ ಕೂಡಿಕೊಂಡು ಏನಪ್ಪ ಎಂದು ಕೇಳುವನು. ಒಳಗಿನವನು ಕೂಡಿಕೊಂಡಿದ್ದೇನೆ ಎಂದು ಉತ್ತರಿಸಿ ಗಂಗಾಳ ಬಾರಿಸುವನು. ಉಳಿದವರು ಚಪ್ಪಾಳೆ ತಟ್ಟುವರು. ನಂತರ ಆ ದಿನ ಮಾಡಿದ ಮಾಂಸದೂಟವನ್ನು ಉಣ್ಣುತ್ತಾರೆ.

ವಸತಿ: ಈ ಜಾತಿಯ ಜನ ಒಂದು ಹಳ್ಳಿ ಮೂಲೆಯಲ್ಲಿ ಮಾತ್ರ ವಾಸವಿರುತ್ತಾರೆ. ಇವರ ಮನೆಯನ್ನು ಪುರುಗುಡಿಸ ಎಂದು ಕರೆಯಲಾಗುತ್ತದೆ. ಮನೆ ಕಟ್ಟಲು ಖಾಲಿ ನಿವೇಶನ ಗುರುತು ಮಾಡಿ, ಆ ಖಾಲಿ ನಿವೇಶನದ ಮಧ್ಯ ಭಾಗವನ್ನು ಸಗಣಿ ನೀರಿನಿಂದ ಗುಡಿಸಲಾಗುತ್ತದೆ. ಮನೆ ಕಟ್ಟಲು ನಿಗದಿಗೊಳಿಸಲಾಗುವ ಜಾಗವನ್ನು ಗುರುತಿಸುವುದು ತುಂಬ ವಿಶೇಷವಾಗಿದೆ. ಒಂಬತ್ತು ಕವಡೆಗಳನ್ನು ಒಂಬತ್ತು ಸಾರಿ ನೆಲದ ಮೇಲೆ ಹಾಕುತ್ತಾರೆ. ಪ್ರತಿ ಸಾರಿ ಕವಡೆಗಳನ್ನು ಹಾಕಿದಾಗ ಎಷ್ಟು ಕವಡೆಗಳು ಚಪ್ಪಟೆಯಾಗಿ ಬಿದ್ದಿವೆ ಎಂದು ಎಣಿಸುತ್ತಾರೆ. ಹೀಗೆ ಒಂಬತ್ತು ಸಾರಿ ಕವಡೆ ಎಸೆದಾಗ ಎಷ್ಟು ಕವಡೆಗಳು ಚಪ್ಪಟೆಯಾಗಿ ಬೀಳುತ್ತವೆಯೊ ಅಷ್ಟು ಕವಡೆಗಳನ್ನು ಒಂಬತ್ತರಿಂದ ಭಾಗಾಕಾರ ಮಾಡುತ್ತಾರೆ. ಭಾಗಾಕಾರವಾದ ಸಂಖ್ಯೆ ೯ ಇದ್ದರೆ, ನವಗ್ರಹ ಚಿಂತಾಮಣಿ ಎಂಬ ಪುಸ್ತಕವನ್ನು ನೋಡುತ್ತಾರೆ. ಸಾಮಾನ್ಯವಾಗಿ ೪, ೫ ಮತ್ತು ೬ ಸಂಖ್ಯೆಗಳನ್ನು ಅದೃಷ್ಟ ಸಂಖ್ಯೆಗಳೆಂದು ನಂಬಿದ್ದಾರೆ. ಇದೆಲ್ಲ ನಡೆದ ನಂತರ, ಒಂದು ಶುಭ ದಿನ ಆಯ್ಕೆ ಮಾಡಿ ಮನೆ ಕೆಲಸ ಪ್ರಾರಂಭ ಮಾಡುತ್ತಾರೆ. ಕೆಲಸ ಪ್ರಾರಂಭ ಮಾಡುವುದಕ್ಕೂ ಮೊದಲು, ನೆಲದಲ್ಲಿ ಮೊಗುರಾಳು ಎಂದು ಕರೆಯಲಾಗುವ ಕಟ್ಟಿಗೆಯ ಪೋಲನ್ನು ನೆಡಲಾಗಿ, ಅದಕ್ಕೆ ಹರಿಶಿನ ಮತ್ತು ಕುಂಕುಮ ಹಚ್ಚುತ್ತಾರೆ. ನೆರೆದ ಜನರಿಗೆ ತೆಂಗಿನ ಕಾಯಿ ಕೊಬ್ಬರಿ ನೀಡುತ್ತಾರೆ. ಸಂಜೆ ಕುರಿ ಕಡಿದು ಜಾತಿಯ ಎಲ್ಲರಿಗೂ ಮಾಂಸಾಹಾರ ತಿನಿಸಲಾಗುತ್ತದೆ. ಮನೆಗಳನ್ನು ಚೌಕಾಕಾರದಲ್ಲಿ ಕಟ್ಟುತ್ತಾರೆ ಮತ್ತು ಸಾಮಾನ್ಯವಾಗಿ ಮನೆಗೆ ಕೇವಲ ಒಂದು ಕೋಣೆ ಮಾತ್ರ ಇರುತ್ತದೆ. ಇವರು ಕಟ್ಟು ಮನೆಗಳಿಗೆ ಗೋಡೆಗಳಿರುವುದಿಲ್ಲ ಮತ್ತು ಚಾವಣಿಗೆ ಹುಲ್ಲು ಹೊದಿಸುತ್ತಾರೆ. ಮನೆ ಬಾಗಿಲು ಪೂರ್ವಕ್ಕಿರುವಂತೆ ಕಟ್ಟಲಾಗುತ್ತದೆ ಮತ್ತು ಸೂರ್ಯನ ಬೆಳಕು ಮನೆಯಲ್ಲಿ ಬಿದ್ದರೆ ಅದು ಅದೃಷ್ಟದ ಸಂಕೇತವೆಂದು ನಂಬಿದ್ದಾರೆ. ಬಿದಿರಿನ ಕೋಲುಗಳಿಗೆ ಎಲೆಗಳನ್ನು ಕಟ್ಟಿ ಅದನ್ನೆ ಮನೆಯ ಬಾಗಿಲಿನಂತೆ ಉಪಯೋಗಿಸುತ್ತಾರೆ. ಇವರ ಮನೆಗಳಿಗೆ ಕಿಟಕಿ ಮತ್ತು ಬಾಗಿಲುಗಳು ಇರುವುದಿಲ್ಲ. ಜನವರಿ ಅಥವಾ ಫೆಬ್ರವರಿ ತಿಂಗಳಿನ ಯಾವುದಾದರೂ ಒಂದು ದಿನ ಗೃಹಪ್ರವೇಶ ಮಾಡುತ್ತಾರೆ. ಪಂಚಮಿ, ಏಕಾದಶಿ ಅಥವಾ ದಶಮಿ ಇವರಿಗೆ ಅತ್ಯಂತ ಶುಭದಿನಗಳಾಗಿವೆ.

ಉಡುಪು: ಗಂಡಸರು ನಾಲ್ಕು ಮೀಟರ್ ಉದ್ದದ ಪಂಚೆ ಮತ್ತು ಮೂರು ಮೀಟರ್ ಉದ್ದ ಅಂಗಿ ತೊಡುತ್ತಾರೆ. ೪೦ ವರ್ಷ ದಾಟಿರುವ ಪುರುಷರು ತಲೆಗೆ ಪೇಟ ಕಟ್ಟುತ್ತಾರೆ. ಯುವಕರು ಮಾತ್ರ ಬನಿಯನ್ ತೊಡುತ್ತಾರೆ. ಹೆಣ್ಣುಮಕ್ಕಳು ೫ ಮೀಟರ್ ಉದ್ದದ ಸೀರೆ ತೊಡುತ್ತಾರೆ. ಯುವತಿಯರನ್ನು ಹೊರತುಪಡಿಸಿ ಉಳಿದೆಲ್ಲ ಮಹಿಳೆಯರು ಕುಪ್ಪಸ ತೊಡುವುದಿಲ್ಲ. ಆದರೆ ಇತ್ತೀಚೆಗಷ್ಟೆ ಈ ಜಾತಿಯ ಮಹಿಳೆಯರು ಕುಪ್ಪಸ ತೊಡುತ್ತಿದ್ದಾರೆ.

ಆಭರಣಗಳು: ೪೦ ದಾಟಿದ ಪುರುಷರು ಕಮ್ಮಲು ಎಂಬ ಕಿವಿಯೋಲೆ ಮತ್ತು ಹೆಂಗಸರು ಕಮ್ಮಲು ಮತ್ತು ಕಲವರ್ಲು ಎಂಬ ಕಿವಿಯೋಲೆಗಳನ್ನು ಧರಿಸುತ್ತಾರೆ. ಬಂಗಾರದಲ್ಲಿ ಮಾಡಿದ ಒಂಟಮುತ್ಯಂ, ತಿಗಾಳ್ಳು ಮತ್ತು ಬೆಸಾರಿ ಎಂಬ ಆಭರಣಗಳನ್ನೂ ತೊಡುತ್ತಾರೆ. ಹೆಂಗಸರು ತಮ್ಮ ಕೊರಳಿನ ಸುತ್ತ ನಾನುಪಟ್ಟೆ(ಮೂಗುತಿ)ಎಂಬ ಆಭರಣಗಳನ್ನು ಹಾಕಿಕೊಳ್ಳುತ್ತಾರೆ. ಕೆನ್ನೆಗೆ ಅಚ್ಚೆ ಹಾಕಿಸಿಕೊಳ್ಳುವ ಹೆಂಗಸರೂ ಇದ್ದಾರೆ.

ಆಹಾರ: ರಾಗಿ, ಸಾಮೆ, ಸಜ್ಜೆ, ಗೋಧಿ ಮತ್ತು ಭತ್ತ ಇವರ ಪ್ರಧಾನ ಆಹಾರ. ಇವರು ಯಾವುದೇ ಗೆಡ್ಡೆ ಗೆಣಸು ತಿನ್ನುವುದಿಲ್ಲ. ದಿನಕ್ಕೆ ಮೂರು ಹೊತ್ತು ಅಡುಗೆ ಮಾಡುವ ಇವರು ಮಧ್ಯಾಹ್ನ ರಾಗಿ ಅಥವಾ ಜೋಳದ ಅಂಬಲಿ ತಿನ್ನುತ್ತಾರೆ. ರಾತ್ರಿ ಹೊತ್ತು ಕೇವಲ ಅನ್ನ ಮಾತ್ರ ಸೇವಿಸುತ್ತಾರೆ. ಅಂಬಾ ಭವಾನಿಯನ್ನು ಪೂಜಿಸುವುದರಿಂದ ಪಡುವಲ ಕಾಯಿ ಮತ್ತು ಕುಂಬಳಕಾಯಿಯನ್ನು ಈ ಜಾತಿಯವರು ನಿಷೇಧಿಸಿದ್ದಾರೆ. ಬಾತುಕೋಳಿ, ನವಿಲು, ಕೌಜುಗದ ಪಕ್ಷಿ, ಹಂದಿ, ಕುರಿ ಮತ್ತು ಆಮೆಯನ್ನು ಸಹ ತಿನ್ನುತ್ತಾರೆ. ತಾವು ಸಾಕುರುವ ಸಾಕುಪ್ರಾಣಿಗಳು ಸತ್ತಾಗ ಮಾತ್ರ ಅವುಗಳನ್ನು ತಿನ್ನುತ್ತಾರೆ. ಇದನ್ನು ಬಿಟ್ಟು ಬೇರೆ ಸತ್ತ ಪ್ರಾಣಿಗಳನ್ನು ತಿನ್ನುವುದಿಲ್ಲ.

ಸಾಂಪ್ರದಾಯಿಕ ವೃತ್ತಿ: ಎರುಕುಲ ಜಾತಿಯವರು ಸಾಂಪ್ರದಾಯಿಕವಾಗಿ ಮಾಡುತ್ತಿರುವ ವೃತ್ತಿಯೆಂದರೆ ಭವಿಷ್ಯ ಹೇಳುವುದು. ಆದರೆ ಇತ್ತೀಚೆಗೆ ಈ ವೃತ್ತಿಯನ್ನು ಹೆಚ್ಚಾಗಿ ಮಾಡುತ್ತಿರುವುದು ಕಂಡುಬರುತ್ತಿಲ್ಲ. ಕೃಷಿ ಇವರ ಪ್ರಧಾನ ಕೆಲಸವಾಗಿದೆ. ಈ ಜಾತಿಯ ಪ್ರತಿ ಕುಟುಂಬಕ್ಕೆ ಕೃಷಿ ಭೂಮಿಯಿದೆ ಮತ್ತು ಎಲ್ಲರೂ ಕೃಷಿ ಮಾಡುತ್ತ ತಮ್ಮ ಸ್ವತಂತ್ರ ಜೀವನ ನಡೆಸುತ್ತಿದ್ದಾರೆ. ಈ ಜಾತಿಯ ಹೆಂಗಸರೂ ಸಹ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ತಮಗೆ ಸ್ವಂತ ಭೂಮಿಯಿದ್ದರು ಸಹ ಬೇರೆಯವರ ಹೊಲಗಳಲ್ಲಿ ಕಾರ್ಮಿಕರಾಗಿ ದುಡಿಯುವ ಉದ್ದೇಶ ಆದಾಯ ಸರಿ ಹೊಂದಿಸುವುದೇ ಆಗಿದೆ. ಇವರು ನಗರಗಳಿಗೆ ವಲಸೆ ಹೋಗುವುದು ಕಂಡುಬಂದಿಲ್ಲ.

ಧಾರ್ಮಿಕ ಆಚರಣೆಗಳು: ಎರಕುಲ ಜಾತಿಯ ಜನ ಹಿಂದೂಧರ್ಮವನ್ನು ಪಾಲಿಸುವವರಾಗಿದ್ದಾರೆ. ಶ್ರೀರಾಮ, ಶಿವ, ವೆಂಕಟೇಶ್ವರ, ಶ್ರೀ ಕೃಷ್ಣ, ಎಲ್ಲಮ್ಮ, ಮಹಿಶಮ್ಮ, ಮುತ್ಯಾಲಮ್ಮ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಅಂಬಾ ಮತ್ತು ಆದಿ ಶಕ್ತಿ ಇವರ ಮನೆದೇವರುಗಳಾಗಿವೆ.

ಅಂಬಾ ದೇವತೆಯನ್ನು ಮುತ್ಯಾಲಮ್ಮ, ಮಹಿಶಮ್ಮ ಮತ್ತು ಎಲ್ಲಮ್ಮ ಎಂಬ ಹೆಸರುಗಳಿಂದ ಕರೆಯುತ್ತಾರೆ. ಇವರ ಪ್ರತಿ ಮನೆಯಲ್ಲಿ ಈಶಾನ್ಯ ದಿಕ್ಕಿನಲ್ಲಿ ರಾಮ, ಕೃಷ್ಣ ವೆಂಕಟೇಶ್ವರನ ಚಿತ್ರಗಳನ್ನು ತೂಗುಹಾಕುತ್ತಾರೆ. ಮಹಿಶಮ್ಮ ಜಾತ್ರೆಯ ದಿನ ಚಿಕ್ಕ ಗುಡಿಯನ್ನು ಕಟ್ಟಿ ಅದರಲ್ಲಿ ಮಣ್ಣಿನ ಕೊಡವನ್ನಿಟ್ಟು ಪೂಜಿಸುತ್ತಾರೆ. ಅಂಬಾ ದೇವತೆಗೆ ಬಾತುಕೋಳೀಯನ್ನು ಬಲಿ ನೀಡಲಾಗುತ್ತದೆ. ಇತರೆ ಮನೆದೇವರುಗಳಿಗೆ ಎಮ್ಮೆ, ಕುರಿ, ಮೇಕೆಗಳನ್ನು ಬಲಿಕೊಡುತ್ತಾರೆ. ಎರುಕುಲರು ಮೊದಲಿನಿಂದಲೂ ತಾವು ಆಚರಿಸುವ ವಾರ್ಷಿಕ ಆಚರಣೆಗಳು, ಹಬ್ಬ ಹರಿದಿನಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಧಾರ್ಮಿಕ ಆಚರಣೆಗಳ ಬಗ್ಗೆ ಪೂಜೆ, ಬಲಿ, ನಂಬಿಕೆ ಮುಂತಾದವುಗಳನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತಾರೆ. ತಮ್ಮ ಮೂಲ ಸಂಪ್ರದಾಯವನ್ನು ತಪ್ಪದೆ ಆಚರಿಸುತ್ತಾರೆ. ಇವರಲ್ಲಿ ಮುಂಬೈ ಪ್ರಾಂತ್ಯದ ಕೊಲ್ಲಾಪುರದ ದೇವತೆಯೇ ಕೊಲ್ಹಾಪುರಿಯಮ್ಮ ಆಗಿದ್ದಾಳೆ. ಹಾಗೆಯೇ ತಿರುಪತಿಯ ವೆಂಕಟೇಶ್ವರಸ್ವಾಮಿಯೇ ಪೇರುಮಾಳಸ್ವಾಮಿಯಾಗಿದ್ದಾರೆ. ಕೆಲವು ಸಮಯ ಹೂವಿನಿಂದ ಅಲಂಕೃತವಾದ ವೈಷ್ಣವ ನಾಮವಿರುವ ಹಿತ್ತಾಳೆ ಕಳಸದ ರೂಪದಲ್ಲಿ ವೆಂಕಟೇಶ್ವರನನ್ನು ಪೂಜಿಸುತ್ತಾರೆ. ಮಾತೃ ದೇವತಾರಾಧನೆಯು ಇವರಲ್ಲಿದೆ. ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ, ದುರುಗಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ.

ಹಬ್ಬ: ಎರುಕುಲ ಜಾತಿಯ ಜನ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿ, ರಾಮನವಮಿ, ಗಣೇಶ, ದಸರ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಎಲ್ಲಾ ಹಬ್ಬಗಳಂದು ಎಣ್ಣೆ ಸ್ನಾನ ಮಾಡುವುದು ಕಡ್ಡಾಯ. ದೇವರಿಗೆ ಪೂಜೆ ಮಾಡಿದ ನಂತರ ಹಣೆಯ ಮೇಲೆ ಉದ್ದನೆಯ ನಾಮ ಹಾಕುವುದು ಇವರ ಸಂಪ್ರದಾಯ. ಪ್ರತಿ ಹಬ್ಬದಂದು ಮನೆಯಲ್ಲಿ ತೆಂಗಿನಕಾಯಿ ಒಡೆದು ಪೂಜೆ ಮಾಡಿ ಸಿಹಿ ತಿಂಡಿಗಳನ್ನು ಮಾಡುತ್ತಾರೆ.

ಶ್ರೇಣೀಕೃತ ಜಾತಿವ್ಯವಸ್ಥೆ: ಈ ಜಾತಿಯವರ ಮನೆಗಳಿಗೆ ಬ್ರಾಹ್ಮಣ, ಅಗಸ ಮತ್ತು ಹಜಾಮರು ಬರುವುದಿಲ್ಲ. ಮೇಲ್ಜಾತಿಯವರು ಎರುಕುಲ ಜಾತಿಯವರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಮತ್ತು ಇವರನ್ನು ತುಚ್ಛ ಜಾತಿಯವರೆಂದು ಕರೆಯುತ್ತಾರೆ. ಈ ಜಾತಿಯವರು ದಲಿತ ಜಾತಿಗಳಿಂದ ಅನ್ನ ನೀರು ಕುಡಿಯುವುದಿಲ್ಲ. ಇವರು ತಮ್ಮದೇ ಸ್ವಂತ ಬಾವಿಗಳಿಂದ ನೀರು ಸೇದುತ್ತಾರೆ ಮತ್ತು ಅದನ್ನೇ ತಮ್ಮ ದಿನನಿತ್ಯದ ಕೆಲಸಗಳಿಗೆ ಬಳಸುತ್ತಾರೆ. ಬೇರೆ ಜಾತಿಯವರು ಕಟ್ಟಿಸಿದ ಬಾವಿಗಳಿಂದ ನೀರು ಕುಡಿಯುವುದಿಲ್ಲ. ಬ್ರಾಹ್ಮಣ ದೇವಾಲಯಗಳಲ್ಲಿ ಇವರನನು ಬಿಟ್ಟುಕೊಳ್ಳುವುದಿಲ್ಲ. ಆದರೆ ಬೇರೆ ಜಾತಿಯವರು ಇವರಿಗೆ ಇಂತಹ ನಿಷೇಧ ಹೇರಿಲ್ಲ.

ನ್ಯಾಯ ಪದ್ಧತಿ: ಸಮುದಾಯದ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಲು ತಮ್ಮದೇ ಆದ ಪ್ರತ್ಯೇಕ ನ್ಯಾಯ ಪಂಚಾಯತಿಗಳ ವ್ಯವಸ್ಥೆಯನ್ನು ಎರುಕುಲ ಜಾತಿಯವರು ಮಾಡಿಕೊಂಡಿರುತ್ತಾರೆ. ಸಮುದಾಯದ ಮುಖಂಡನೇ ನ್ಯಾಯ ಪಂಚಾಯತಿಗೂ ಮುಖ್ಯಸ್ಥರನಾಗಿರುತ್ತಾನೆ. ಕುಲಂ ಅಥವಾ ಕುಲಸಭೆ ಪದ್ಧತಿಯು ಸಮುದಾಯದಲ್ಲಿ ಸಂಭವಿಸುವ ಯಾವುದೇ ಜಗಳ, ಹಿಂಸೆ, ಅತ್ಯಾಚಾರ, ಅಂತರ್‌ಜಾತೀಯ ವಿವಾಹ, ಅನೈತಿಕ ಸಂಬಂಧಗಳು, ಕಳ್ಳತನ, ಸಣ್ಣಪುಟ್ಟ ವ್ಯಾಜ್ಯಗಳು ಹಾಗೂ ಒಳಜಗಳ ಇಲ್ಲವೇ ಜಟಿಲ ಸಮಸ್ಯೆ, ಜಾತಿ ಬಹಿಷ್ಕಾರ ಮೊದಲಾದವುಗಳನ್ನು ಬಗೆಹರಿಸುವ ಕಾರ್ಯ ಮಾಡುತ್ತದೆ. ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸುವ ಮತ್ತು ನಿರಪರಾಧಿಗಳಿಗೆ ನ್ಯಾಯ ಒದಗಿಸಿ ಸಮುದಾಯದ ಹಿತದೃಷ್ಟಿಯನ್ನು ಕಾಯ್ದುಕೊಳ್ಳುವುದೇ ನ್ಯಾಯ ಪಂಚಾಯಿತಿಯ ಉದ್ದೇಶವಾಗಿರುತ್ತದೆ. ಎಂಥ ಪ್ರಸಂಗ ಬಂದರೂ ಅನ್ಯ ಸಮುದಾಯಗಳಿಗೆ ತಮ್ಮ ಸಮುದಾಯದಲ್ಲಿ ನಡೆಯುವ ಕುಲಪಂಚಾಯಿತಿಯಲ್ಲಿ ನಡೆಯುವ ವಿಷಯಗಳನ್ನು ಬಹಿರಂಗಪಡಿಸದೇ ಗೌಪ್ಯತೆಯನ್ನು ಕಾಪಾಡಿಕೊಂಡು ಬರುತ್ತಾರೆ. ಯಾವುದೇ ಕಾರಣಕ್ಕೂ ತಪ್ಪಿತಸ್ಥನು ಕುಲಸಭೆಯನ್ನು ತಿರಸ್ಕರಿಸುವಂತಿಲ್ಲ. ಒಂದು ವೇಳೆ ತಿರಸ್ಕರಿಸಿದರೆ ಜಾತಿಯಿಂದ ಹೊರ ಹಾಕಲಾಗುತ್ತದೆ. ದಂಡದ ರೂಪದಲ್ಲಿ ಹಣವನ್ನು ಅಪರಾಧಿಯಿಂದ ಪಡೆಯಲಾಗುತ್ತದೆ ಹಾಗೂ ಶಿಕ್ಷೆ ನೀಡಲಾಗುತ್ತದೆ. ದಂಡದ ರೂಪದಲ್ಲಿ ಬಂದ ಹಣವನ್ನು ನಿರಪರಾಧಿಗೆ ನೀಡಲಾಗುತ್ತದೆ ಅಥವಾ ಸಭೆಯು ಹೆಂಡ, ಸಾರಾಯಿ ಕುಡಿಯುವ ಮೂಲಕ ಆ ಹಣವನ್ನು ಖರ್ಚು ಮಾಡುತ್ತದೆ.

ಎರಕುಲರು ಎಂದು ಬುಡಕಟ್ಟಿಗೆ ಸೇರಿದ ಜನ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈವರೆಗೆ ಬುಡಕಟ್ಟನ್ನು ಕುರಿತು ಹೇಳಿರುವ ವಿದ್ವಾಂಸರ ದಾಖಲೆಗಳು ಮತ್ತು ಎರುಕುಲರಲ್ಲಿ ಉಳಿದುಕೊಂಡಿರುವ ಬುಡಕಟ್ಟಿನ ಲಕ್ಷಣಗಳು ಈ ಜನಾಂಗದ ಅಧ್ಯಯನಕ್ಕೆ ಅನುಕೂಲವಾಗಿದೆ. ಅಲೆಮಾರಿಗಳಾಗಿ, ಕಾಡು ಮೇಡುಗಳಲ್ಲಿ ವಾಸಿಸುತ್ತ, ಪಶುಸಂಗೋಪನೆ, ಬೆತ್ತ ಮತ್ತು ಬಿದಿರಿನ ಕೆಲಸ ಮಾಡುತ್ತ, ಭವಿಷ್ಯ ಹೇಳುತ್ತ ಜೀವನ ನಿರ್ವಹಣೆ ಮಾಡುತ್ತ ತಮ್ಮ ಸಮಾಜದ ಜೊತೆ ಸಾಗುತ್ತ ಬಂದಿದ್ದಾರೆ. ಈ ಬುಡಕಟ್ಟು ಇಂದು ನಾಗರಿಕತೆಯ ಪ್ರಭಾವದಿಂದ ಆಧುನಿಕತೆಯ ಕಡೆ ಮುಖ ಮಾಡುತ್ತಿದೆ.

ಸಾಮಾಜಿಕ ಬದಲಾವಣೆ ಮತ್ತು ಚಲನಶೀಲತೆ: ಇವರ ಸಾಂಪ್ರದಾಯಿಕ ವೃತ್ತಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಇವರು ತಾವು ಸಾಂಪ್ರದಾಯಿಕವಾಗಿ ಮಾಡುತ್ತಿದ್ದ ಭವಿಷ್ಯ ಹೇಳುವ ಕೆಲಸದಲ್ಲಿ ಯಾವುದೇ ಲಾಭವಿಲ್ಲದಂತಾಗಿರುವುದರಿಂದ, ಈ ಜಾತಿಯ ಅನೇಕರು ಬೇರೆ ಕೆಲಸಗಳನ್ನು ಮಾಡುತ್ತಿರುವುದು ಕಂಡುಬಂದಿದೆ.

ಕೊರವಂಜಿ ಸಾಹಿತ್ಯ

ಶ್ರೀಕೃಷ್ಣಾವತಾರದಲ್ಲಿ ಕೊರವಿಯ ಪ್ರಸ್ತಾಪ ಕಂಡುಬರುತ್ತದೆ. ಚೌಕ–೭

ನುಡಿ॥ ದಿನಕ ಒಂದ ತರ ಆಗತಾಗತ ಗರ್ಭದಲ್ಲಿ ಬೆಳದಾ॥
ನವಮಾಸ ಎಂಬುದು ತುಂಬುತ ಬಂತು ಕಠಿಣ ಹೊತ್ತಗಳ ದಾ ॥೧॥

ಕಪಟದಿಂದ ಕೊರವ್ಯಾದ ಕೃಷ್ಣ ತಾ ಬಂದಿ ಮನಿಗೆ ಹೋದಾ
ತೆಲಿ ಕಟ್ಟಿ ಅಡ್ಡ ಸೆರಗ ಬುಟ್ಟಿ ಕಯ್ಯಾಗ ಬಾರಿಗಿ ಹಿಡದಾ ॥೨॥
ವಾಸುದೇವ ಕೇಳಾತನ ಕೊರವಿ ನೀ ಬಂದದಿ ಎಲ್ಲಿಂದಾ।
ಹೇಳತಾಳ ಅವರಿಗೆ ಬಂದಿದೀನ ನಾ ಸತ್ಯ ಲೋಕದಿಂದಾ ॥೩॥
ನೋಟ ಹೇಳತಾನ ಕೃಷ್ಣತಾಯಿ ನಡುವಿನ ಬೆರಳ ಹಿಡದಾ।
ಕೇಳತಾಳ ದೇವಕಿ ದುಃಖ ಕಣ್ಣಿಗೆ ನೀರ ತಂದಾ ॥೪॥

ಕೊರವಂಜಿ

ಪಲ್ಲವಿ॥ ಮಾರನಾಟಕೆ ತಾನು ಬಾರದೆ ನಿಂತಾನು ಸತ್ಯಭಾಮಾ ಮಾಡೊಳು ಮಾ ಶೋಕವು।
ಎಂದಮ್ಮಾ ಬಂದಾನು ವಾಸುದೇವ ಕಂದನು ಚಂದಮ್ಮ ತೊರದು ನರಲೋಕವು।
ಇಡಲಾರೆ ಅಳಂಕಾರ ನೋಡಲಾರೆ ಶೃಂಗಾರ ಬಿಡಲಾರೆ ಕಾಣದೆ ಸ್ವಾಮಿ ಮುಖವು।
ಮನಸಿಗೆ ನಿದ್ರಿಲ್ಲ ನೆನಸು ಸಮಯದೊಳು ಕನಸಿನ ಪರಿಯಂತೆ ಈ ದುಃಖವು।
ಸ್ತ್ರೀಯರ ಜಲ್ಮಕ ಇಲ್ಲ ಸುಖವು॥

ಚೌಕ–೧

ನುಡಿ ಅಷ್ಟ ಐಶ್ವರ್ಯ ಇಷ್ಟಿದ್ದ ಏನ್ ಫಲಾ ಕಷ್ಟದ ಪಡಬೇಕ ಎಷ್ಟಮ್ಮಾ।
ಗೊಲ್ಲರ ಹುಡುಗಿಂವ ಅಲ್ಲದ ಮಾಡಾಂವ ಹಾಲುಮಸರ ಕಂಡದಂವ ನಷ್ಟಾಮ್ಮಾ।
ಮ್ಯಾಲ ತುಡಗರ ಒಳಗ ಕೋಲಾಟ ಆಡಾಂವ ಅಲಲ ಬಿಡಾಂವಲ್ಲಿ ಸ್ಪಷ್ಟಮ್ಮಾ।
ಈತನ ಕುಲಯಿಲ್ಲ ಭಷ್ಟಮ್ಮ ॥೧॥

ಪಾಂಡವರನ್ನ ಕಡಿಹುಟ್ಟ ದೊಡ್ಡವರನ್ನ ಮಾಡಿಟ್ಟ ಕಾಡಿದ ವರ್ನ ಕಾಯಲಿಲ್ಲ ಕ್ಯಾಟ್ಟಮ್ಮಾ

ಶ್ರೀಪಾಲ ವಕ್ಕರದಂತೆ ಅನ್ಯಾಯ ಮಾಡದಂತೆ ಆಶೀರ್ವಾದ ದೈತ್ಯದ ಕೊಟ್ಟಮ್ಮಾ।

ಮೈಸಾಬ ಇದ್ದಲ್ಲಿ ಶಿಶುಪಾಲ ಬಂದಲ್ಲಿ ಸುಂದರ್ಶನ ಅವನ ಮ್ಯಾಲ ಬಿಟ್ಟಮ್ಮಾ।

ಕಲ್ಲ ಮನಸಿನಾಂವ ನಿಲ್ಲಲಾರದೆ ಒಲ್ಲೆಂದು ಹೋಗದೆ ಸುಟ್ಟಮ್ಮಾ।

ಬರವಲ್ಲ ಇಂವ ಬಲ ವಟ್ಟಮ್ಮಾ ॥೨॥

ಹಿಂಡ ಗೋಪ್ಯಾರ ಒಳಗ ಪುಂಡ ಅದಾನ ಇವನ ಕಂಡ್ರ ಬರತತಿ ಸಿಟ್ಟಮ್ಮಾ।

ಆದಿ ಅನಾದಿ ಬಾಡ್ಡಿ ಬುನಾದಿ ದೇವರಿಗೆಲ್ಲ ಇವ ದಿಟ್ಟಮ್ಮಾ।

ಮಾನ ಅಪಮಾನ ಆತಗ ಸವನಾ ಅಭಿಮಾನ ಅವತಾರ ತೊಟ್ಟಮ್ಮಿ।

ವರಗುರು ಲಾಖಲೆ ಮರುಗುತ ಕೂತಿದ್ದ ಭೃಗುಮುನಿ ಲಾತ್ತಿ ಪೆಟ್ಟಮ್ಮಾ।

ಇಷ್ಟೆಲ್ಲಾ ತಾಳಿಕೊಂಡ ಬಂಟಮ್ಮಾ ॥೩॥

ಬಾಲ: ಕೆಟ್ಟ ಸಂವತಿಮನಿ ಸಿಟ್ಟೇಲಿ ಸೇರಿದ ಬಿಟ್ಟಕೊಟ್ಟ ಬೆರಗಾಗಿ ಹೋದಮ್ಮ

ಕಪಟ ನಾಟಕನ ಆಟವ ತಿಲಿಯದು ಲಂಪಟ ಅವಳಿಗೆ ಆದಮ್ಮ।

ಸಾರಸದಿಂದಲೇ ಕಮಲ ನೇತ್ರಾಗೆ ಪತ್ರವ ಬರಿಬೇಕ ವೇಳೆ ಚಂದಮ್ಮಾ।

ಕೂ.ಪಾ॥ ಅರಗಿಳಿ ಕೈಯಲ್ಲಿ ಪತ್ರವ ಕಳವೂರು ಉತ್ಸವ ತಿಳಿವೂನು ಮಾಟಕವೂ ಎಂದಮಾ॥

ಚೌಕ–೨ ನುಡಿ

ಶ್ರೀಲೋಕದಲ್ಲಿ ನಾಥ ಇರುವಂಥ ಪಾರಿಜಾತ ವರಪುತ್ರ ಆತಿಗ ಮುಟ್ಟಿಸಿದನೆ।

ನಾಕಲೋಕದ ಪುಷ್ಪ ನಾರದಮುನಿ ತಂದು ವಾಸುದೇವ ಕಂದಗ ಮುಟ್ಟಿಸಿದನೆ॥

ನರಹರಿ ಪ್ರೇಮದಿ ನಾಥ ರುಕ್ಮಿಣಿಯ ತುರುಬಿನಲಿ ಪುಷ್ಪ ಇಡಸಿದನೆ।

ಅರಮನಿಯೊಳು ಬಂದು ವರಮುನಿ ಹೋಳಿ ಹೋದ ವರ್ಮಕ ಧರ್ಮದ ಮಾಡ್ಸಿದನೆ।

ಅಂದಿಗಿ ಎನ್ನ ಮನ ಒಜಡಸಿದನೆ॥೧॥

ಹತ್ತ ಅವತಾರ ತಗೊಂಡ ಸರ್ವೆಲ್ಲಾ ಸಾಲ ದೈತ್ಯರನ ಓಡಸಿದನೆ।

ಮಚ್ಛಕೂರ್ಮ ವರಾಹನರಸಿಂಹ ಅವತಾರ ವಾಮನ ಬಳಿಗಿ ಮಣ್ಣು ಕುಡಿಸಿದನೆ।

ಸ್ವಸ್ತಿಗಿ ಪರಶುರಾಮ ನಿಷ್ಕಪಟ ರಘುರಾಮ ಎಂಟನೆಯವ ಗೋಪಾಲ ಗೋಕುಲ ಕೆಡಸಿದನೆ।

ಬೌದ್ಧ ಕಲಂಕಿ ತಿಳಿವಲ್ದೇನಂತಿ ಕಲಿಯೊಳು ರಣಭೇರಿ ಹೊಡಸಿದನೆ।

ಸಾಧೂರ ಬರದವ ನಡಸಿದನೆ॥೨॥

ಕಂಸರಾಜ ಬಲವಂತ ಸತ್ತಹೋದ ಸಾಕ್ಷಂತ ಜರಾಸಂಧ ರಾಜಾ ಭಂಡನೆದನೆ।

ಕೆಟ್ಟಕಾಲಕ ಅವಂಗ ಕಪಟದಿಂದ ಹತ್ತರೊಳಗೆ ಮುಕ್ಕಾಂದ ಕೋಪಿಲಿ ಸುಡಸಿದನೆ

ಬಾಣಾಸುರನ ಸಾವಿನ ಭುಜಗಳ ಕಡಸಿದ ರಾಜೇಶ ಹುಲಿಗಾಳಿ ಹಿಡಸಿದನೆ ಕಾನನ ವನದೊಳು ನಡೆಸಿದನೆ॥೨॥

ಬಾಲ ॥ ಆತಂದ ಪ್ರಬಲ ಬಲ್ಲವನೆ ಬಲ್ಲ ಬರತಾನೇನ ನೋಡಬೇಕಾ।

ಪುರುಷ ಇಲ್ಲಿಲ್ಲದ ಒಂದು ವರುಷದ ಆದೀತ ಅರಸತಿ ತಗೊಂಡೇನ ಸುಡಬೇಕ।

ಸುವಾಸ ಸುಪಿಗಿ ಪುಷ್ಪದ ಹಾಸಿಗಿ ಅರಸ ಇಲ್ಲದೆ ಏನ ಮಾಡಬೇಕು।

ಕೂಪ॥ ಬದ್ಧ ಧರಣಿಗೆ ಸಾಯುತೀನ ಸೊರಗಿ ಯಾರಿಗೆ ಬೇಕ ಈ ನರಕವು ಎಂದಮ್ಮಾ॥

ಚೌಕ–೩ ನುಡಿ

ಸತ್ರಾಜಿತನ ಪುತ್ರಿ ಮಿತ್ರಂದು ಗುಣ ನೆನಸಿ ಅಂತ್ರಕೂನ ಜಾಣೋಸಿ ಅಳುತ್ತಿದ್ದಳು।

ಹಿರಿಭಾವ ಐರಾವಣ ತನ್ನ ದೊರಿ ಯ್ಯೆರಾವಣ ಪರಿಪರಿಯಿಂದ ಹೇಳಿ ಬಳಲಿದಳು।

ಕಪಟ ಹೇಳಿ ಕೊಂದಾಂಗ ಕೆಟ್ಟಬಾಸಿ ಎನಗ ಮುಟ್ಟಿಲಿಲ್ಲ ವಚನಕ್ಕೆ ಹೇಳಿದಳು।

ಹಿಂದಿನ ಮಾತ ಇವ ಇಂದಾಡಿ ಫಲವೇನ ಮಂದ್ಯಾಗ ಹೇಳಿವಳ್ಳಿ ಮಲಗಿದಳು।

ಪಂಚಾರತಿ ಮನದೊಳು ಬೆಳಗಿದಳು ॥೧॥

ಹಿಂದಿನ ಕಥಸುಡ ಮುಂದ ಆಡೂದಬ್ಯಾಡ ಮಂದಗಮನಿ ಬಾಳ ಸೊರಗಿದಳು।

ಸತ್ಯಭಾಮೆ ಮಾಡು ದುಃಖ ಶೇಷಾಗ ಆ ಲೆಕ್ಕ ಸಂಖೆಯಾಗದಷ್ಟು ಬಳಲಿದಳು।

ಜಲ ಇಲ್ಲ ಜಲಚರ ವನ ಇಲ್ಲ ವನಚರ ತಳಮಳಸಿದಾಗ ನಾರಿ ಕರಗಿದಳು।

ಅನ್ನ ಇಲ್ದ ನಿರಾಧಾರ ನೀರ ಇಲ್ದ ಮರ ಮರ ನಿದ್ರಿ ಇಲ್ದ ಕಣ್ಣಿಗಿ ಹೊರಳಿದಳು॥

ಬಂದಲ್ಲ ಧರಣಿಗೆ ಎರಗಿದಳು ॥೨॥

ಕೃಷ್ಣ ಆದ ಕೊರವಂಜಿ ಉತ್ಕೃಷ್ಟ ಭಾ ತೇಜಿ ದೃಷ್ಟಿ ಶೋಕಮಾರಿ ತೋರಿದಳು।

ನಾಲ್ಕಮಾರಿ ಬ್ರಹ್ಮನ ಬಾಲಕನ ಮಾಡಿ ಬಗಲಾಗ ಲೋಕದಲ್ಲಿ ಡಂಗೂರ ಸಾರಿದಳು।

ಜಡಿಕೂಸ ಎತ್ತಿಕೊಂಡ ನಡುವಿನ ಮ್ಯಾಲ ನಿಲ್ಲಿಸಿಕೊಂಡ ನಾಡನಾಡ ಶೋಕ ಮಾಡಿದಳು।

ಮೇಲಾದ ಕೊರವಂಜಿ ಕೋಲನಾಡುವ ಸಹಜ ಸತ್ಯಭಾಮಿ ಮಾಲದೊಳು ಸೇರಿದಳು।

ಮೇಲುಪ್ಪರಗಿ ಮಾಲದೊಳು ಏರಿದಳು ॥೩॥

ಚಾಲ॥ ಭಾರಕ್ಕಿ ಎದ್ದಾಳ ಧಾವಿಸಿ ಬಂದಾಳ ಶಕುನದ ನಿನಗೊಂದ ಹೇಳತೀನ॥

ಕನಸೀನ ಮಾತಬಲ್ಲೆ ಮನಸೀನ ಮಾತಬಲ್ಲೆ ಧ್ಯಾನಸ್ತನಾಗಿ ನ್ಯಾಳ್ಳಿತೀನ॥

ಕೊರವಂಜಿ ನಾನೆ ಸತ್ಯಭಾವಿ ನೀನೆ ಅಂತರಸಾಕ್ಷಿ ಮಾತೊಂದ ಹೇಳತೀನ॥

ಕೊ.ಷ॥ ಪುರುಷರನ ಒಲಿಸುವ ಬಲ್ಲೆ ಸ್ತ್ರೀಯರನ ಒಲಿಸುವ ಬಲ್ಲೆ ಆಗಸುದ ಬಲೆ ಆದಿ ಮುಖವು॥ಎಂದಮ್ಮಾ॥

ಚೌಕ–ಳ

ನುಡಿ ಸ್ಯಾರಿ ಮುಕ್ಕ ಕಾಳದಕ್ಕಿ ಮರತುಂಬ ಜೋಳದಕ್ಕಿ ಹಂತವಳಲ್ಲ ನಾ ಸುಳ್ಳುಬುರಕಿ।

ಮಂತ್ರವ ನಾ ಬಲ್ಲೆ ಯಂತ್ರವ ನಾ ಬಲ್ಲೆ ತಂತ್ರವ ನಾ ಬಲ್ಲೆ ಗಿಡಮಾಲಕಿ।

ಹುಚ್ಚ ಮದ್ದ ನಾ ಬಲ್ಲೆ ಮೆಚ್ಚ ಮದ್ದ ನಾ ಬಲ್ಲೆ ನೀಚ ವಿಚಾರ ನಾ ಬಲ್ಲೆ ಬ್ಯಾಸರಕಿ॥

ಹತ್ತು ಅವತಾರ ಬಲ್ಲೆ ಸಪ್ತಸಾಗರ ಬಲ್ಲೆ ನಕ್ಷತ್ರಬಲ್ಲೆ ನಾ ಕಡಮುರಿಕಿ।

ದುಷ್ಟರನ ಕಟ್ಟ ಸಾಕ್ಕಿ ಹೆಡಮುರಕಿ॥೧॥

ಶ್ರೀಲೋಕ ನಾಬಲ್ಲೆ ನರಲೋಕ ನಾ ಬಲ್ಲೆ ವರಲೋಕ ತಾಪಲೋಕ ಬಲ್ಲಾಕಿ।

ಮೂಲೋಕ ನಾಬಲ್ಲೆ ಯಮಲೋಕ ನಾಬಲ್ಲೆ, ವೈಕುಂಠ ಕೇಳನಾ ನಿಲ್ಲುವಾಕಿ।

ಸತ್ಯಲೋಕ ನಾಬಲ್ಲೆ ಶಿವಲೋಕ ನಾ ಬಲ್ಲೆ ಸಪ್ತಲೋಕ ಭೂಮಿ ಸಲವಕ್ಕಿ।

ಆತಳ ವಿತಳ ಸುತಳ ರಸಾತಳಿ ತಾಳಕಳಿ ಮಹಾತಳ ಸುತ್ತಕ್ಕಿ॥

ಏಳು ಪಾತಾಳಿ ಸಲಹು ವಂಧಾ ॥೨॥

ಅಂಡಾಂಡ ನಾ ಬಲ್ಲೆ ಪಿಂಡಾಂಡ ನಾ ಬಲ್ಲೆ ಬ್ರಹ್ಮಾಂಡ ನಾ ಬಲ್ಲೆ ಹೆಚ್ಚಿನಾಕಿ।

ಕೃತ ತ್ರೈತಾಯುಗ ದ್ವಾಪಾರ ಕಲಿಯುಗ ನಾಲ್ಕುಯುಗ ದಾಟಿ ಮುಂಚಿನಾಕಿ।

ಮುಚ್ಚಿದ ಮಾತುಗಳ ಬಿಚ್ಚಿ ಆಡಕ್ಯಾಲ್ಲ ಹಚ್ಚಾರೆ ಸಾರಸಾಕಿ ಮೋಜಿನಾಕಿ।

ನಿಂದೇನಾಡು ಮಂದಿಗೆ ಎಂದಿಗಿ ಬಿಡವಳಲ್ಲ ಗುದ್ದ್ಯಾಡು ಮಂದಿಗಿ ಬಸಸಕ್ಕಿ ಬಂದಿಕಾನೆಯೊಳಗ ಸಿಗಸಕ್ಕಿ॥೩॥

ಚಾಲ॥ ಏಳಮ್ಮ ಕೊರವಂಜಿ ಬಾಳಾತ ನನ್ನ ಮರಜಿ ಉಣ್ಣಾಕ ಬಾ ಅಂತ ಕರಿತೀನು।

ಎರಡೂ ಕರವ ಜೋಡಿಸಿ ಉಪಚಾರ ಮಾಡಿಸಿ ಸಮಾಚಾರ ಹೇಳಿ ಬಾಯ ತೋರಿಸಿಯಾ।

ಕೊರವಂಜಿ ಉಂಡಾಳ ಬಾಳನ್ನಾ ತಗೊಂಡಾಳ ಬಿಸಿನೀರ ಕೂಸಿಗಿ ಎರಿತೀನು।

ಕೂಪ॥ ಕೂಸಿನ ಎರೆದಾಳ ದೃಷ್ಟಿಯ ಮುರಿದಾಳ ಸಂತೋಷ ಕೊರವಂಜಿ ನಗಿ ಮುಖವು ॥ಎಂದಮ್ಮಾ॥

ಚೌಕ-೫

ನುಡಿ॥ ಸತ್ಯಭಾಮಿ ಕೇಳಮ್ಮ ನಿನ್ನ ಪುರುಷ ಮೇಘಶ್ಯಾಮದೇವ ಕೊರವಂಜಿ ನಾ ಸುಳ್ಳಲ್ಲಾ॥

ಕೃಷ್ಣಂದ ಉತ್ಪತ್ತಿ ವಂಶಾವಳಿ ಕಥೆ ತಿಳಿಸುವೆ ಬೇಚಾಳೀಸ ಬೆಡಗೆಲ್ಲಾ।

ಹೇಳತೀನ ಸಾಧಾರಣ ಆದಿಯಲ್ಲಿ ನಾರಾಯಣ ಅವನ ಪುತ್ರ ಬ್ರಹ್ಮ ಹೌದಲ್ಲಾ।

ಬ್ರಹ್ಮನಸುತ ಸೋಮವಂಶಗಾತ್ರ ನಾಲ್ಕನೆಯ ಬ್ರಹ್ಮನಾದ ಸಣ್ಣಬಾಲಾ।

ಬ್ಯಾರೆ ಬ್ಯಾರೆ ಹೇಳತೀನ ತಪಶೀಲಾ॥೧॥

ಸುಗಂಧ ಪ್ರೇಮನು ಸುವೈಚರಿತ್ರನು ಮತ್ತೊಬ್ಬ ಏಳನೆಯವ ದೈತ್ಯಪಾಲಾ।

ಸುಂದರ ಕಾಯನು ಮೂಲಚಂದರಾಯನು ಹತ್ತನೆಯವ ಭೃಗು ಜಗಪಾಲಾ।

ಪಾತಕಂದ ಬೆಡಗ ಹನ್ನೊಂದನೆಯ ಯುಗ ಭಾವಾರ್ಥ ನೀನು ತಿಳಿಯೋಲಾ।

ಹನ್ನೆರಡನೆ ದವಗ ಸಿತಾಳ ಬಂಧುಗ ಮೃದು ಭಾಗ ಪುತ್ರ ಆದಮ್ಯಾಲಾ।

ಹದಿಮೂರ ಬೆಡಗಾದುವ ಒಂದ ಪಾಲಾ॥೨॥

ಕಾನು ಸೂಚಕ ಮಗ ಅವನಿಂಗ ಸುವೇಗ ಸಂದರ್ಶನ ಮೂಮ್ಮಗ ಭೂಪಾಲಾ।

ಬಳಿರಾಮ ಮರಿಮಗ ವಾಸುದೇವ ಜಿರಿಮಗ ಕಡಿಯದಲ್ಲಿ ಹುಟ್ಟಿದ ಗೋಪಾಲ।

ಯಾದವರ ಗೋತ್ರ ಬೇಚಾಲೀಸ ಪುತ್ರ ಪವಿತ್ರ ಮಾಡಾಂವ ಜಗಪಾಲಾ।

ಸತ್ಯಭಾಂವಿ ತಿಳಿದಾಳ ತನ್ಮಯ ಆದಾಳ ಕೊರವಂಜಿ ರೂಪಬಿಟ್ಟ ಯದುಕುಲಾ।

ಇಬ್ಬರದು ಆದೀತು ಅನುಕೂಲಾ॥೩॥

ಚಾಲ॥ ಸ್ವರ್ಗದಿಂದ ಕೃಷ್ಣನಾಥ ಕಿತ್ತುದ ಪಾರಿಜಾತ ಸತ್ಯಭಾಂವಿ ಬಾಗಿಲದೊಳಗ ನಿಲಿಸಿದನೆ।

ಸತ್ಯಭಾಂವಿ ರುಕ್ಮಿಣಿ ಇಬ್ಬರದ ಚಕ್ರಪಾಣಿ ಮನಕ ಮನ ಕೂಡಿಸಿ ಒಲಿಸಿದನೆ

ಕೊರವಂಜಿ ವಿಸ್ತಾರ ಹೇಳುದಕ ಮುಕ್ತಾನ ಅಪರಾಳ ತಮ್ಮಣ್ಣ ಬಲ್ಲಿದನೆ॥

ಕೂಸ॥ ಕಲ್ಲ ಅಂಕಲಿಗೆಯವರು ತುಸುತುಸು ಬಲ್ಲವರು ಮಾಲಿಂಗ ಇಮಾಮಭಾಯಿ ಕವತೂಕವು॥ಎಂದಮ್ಮ॥

(ಆಧಾರ: ಕನ್ನಡ ಪೌರಾಣಿಕ ಲಾವಣಿಗಳು, ಚಾಪ ಹಾಕತೀವ ಡಪ್ಪಿನ ಮ್ಯಾಲ ಡಾ.ಸಂಗಮೇಶ ಬಿರಾದಾರ, ೧೯೮೧)

ಶಿವ ಕೊರವಂಜಿ

ಕಿವಿಗೇಕ ಕರಣ ಕೈಯಾಗ ಬೆಳ್ಳಿಬೆತ್ತ
ಓನಾಮ ಶಿವಾಯ ಕೊರವ್ಯಾಗಿ ॥ಕೊ॥ ॥೧॥

ಆರು ವರುಣ ಸೀರಿ ವಾರ್ಯಾಣದಲಿಟಗೊಂಡು
ಹಾರೂರಗೇರಿ ಒಳಗೆಲ್ಲ ।ಕೋ। ಗನ್ನವ್ವ
ಬಾಲರತಕ್ಕ ಹೊಸ ಗಿಲಗಂಜಿ ।ಕೊ। ಅವ್ವ ನಿಮ್ಮ
ಹಾಲಿನ ತಕ್ಕ ಹೊಸ ನೆಲುವ ।ಕೊ। ॥೨॥

ಹತ್ತು ವರುಣ ಸೀರಿ ಒಪ್ಪದಲಿ ಇಟಗೊಂಡು
ಒಕ್ಕಲಗೇರಿ ಒಳಗೆಲ್ಲಿ ।ಕೊ। ಗನ್ನವ್ವ
ಪುತ್ತೇರ ತಕ್ಕ ಗುಳಪುಟ್ಟಿ ।ಕೊ। ಅವ್ವ ನಿಮ್ಮ
ತುಪ್ಪದ ತಕ್ಕ ಹೊಸ ನೆಲುವ ।ಕೊ। ॥೩॥

ಕೊರವಿ ಬಂದಾಳಂತ ಸಿರಿಗೌರಿ ಕೇಳ್ಯಾಳ
ಆಡು ಮಕ್ಕಲಿನ ಕಳುವ್ಯಾಳ ।ಕೊ। ॥೪॥

ಏನವ್ವ ಕೊರವಂಜಿ ನೀನೇನ ಮಾಡಿತಿದೆ
ಮಾನಿಯಾಗ ನಮ್ಮವ್ವ ಕರಿತಾಳ ॥ಕೊ॥ ॥೫॥

ಕೊರವಿ ಬಂದಾಳೆಂದು ಸಿರಿಗೌರಿ ಕೇಳ್ಯಾಳ
ಗಿಂಡೀಲಿ ನೀರ ಕೊಡತಾಳ ।ಕೊ। ॥೬॥

ಭೂತ ಬಿಡಸಲು ಬಲ್ಲೆ ವೇತಾಳ ನಾ ಬಲ್ಲೆ
ನಾಥರಿಗೆ ಮೋಡಿ ಇಡಬಲ್ಲೆ ॥ಕೊ॥೭॥

ಅಂಗೈಯ ಗೆರಿ ನೋಡಿ ಮುಂಗೈಯ ಸುಳಿ ನೋಡಿ
ಗಂಗವನೆಂಬು ಸವತಿಯ।ಕೊ। ಸಿರಿಗೌರಿ
ಗಣಪತಿಯೆಂಬು ಗಣಮಗನ।ಕೊ॥ ॥೮॥

ಇಂಥ ಹೋಗು ಕೊರವಿ ನಾಳಿಗ್ಹೋಗುವಿಯಂತ
ಇಂದರ ನಮ್ಮ ಪುರದಲ್ಲಿ ।ಕೋ॥ ನಾನಿವಗ
ಬಿಂದಿಗಿ ಹೊನ್ನ ಕೊಡತೇನ ।ಕೋ। ॥೯॥

ಇಂದು ಹೋಗುವ ಕೊರವಿ ನಾಳೆ ನಾ ಹೋದರ
ನಾಡಿಗೆ ಹೀನ ನಮ ಕೊರವ।ಕೊ॥ ಕೇಳಿದರ
ಹರಿವ ಹಾವ ಕೈಲೆ ಹಿಡಿಸ್ಯಾನ ।ಕೊ॥ ॥೧೦॥

ನಾಳಿಗ್ಹೋಗು ಕೊರವಿ ನಾಡದಾದರ್ಹೋಗವ್ವ
ನಾಳಿನ ನಮ್ಮ ಪುರದಲ್ಲಿ ।ಕೋ॥ ಕೊರವಂಜಿ
ಜಾಳಿಗೆ ಹೊನ್ನ ಕೊಡುಲೇನ ॥ಕೋ॥ ॥೧೧॥

ನಾಳಿಗ್ಹೋಗು ಕೊರವಿ ನಾಡದು ನಾ ಹೋದಾರ
ದಿಕ್ಕಿಗೆ ನಮ ಕೊರವ।ಕೊ॥ ಕೇಳಿದರ
ಕೆಂಡದ ಕೈಯ ಹಿಡಿಸ್ಯಾನ ।ಕೋ॥ ॥೧೨॥

ಕೊರವ ಕೊರವಂತ ಕೊರವಿ ಬಾಳ್ಹೇಳತಿ
ಯಾರಂಗ ತೋರ ಅವನಿರುವ ॥ಕೊ॥ ॥೧೩॥

ಗ್ವಾಡೀಯ ನೆಳ್ಳೀಲಿ ದಾಗಡಿ ಬಳ್ಳಿ ಹೆಣೆಯಾನ
ನಾಡ ಧೂಳವನ ಮಾರಿಮ್ಯಾಲೆ।ಕೊ॥ ಬಿದ್ದರ
ಸೆರಗಿಲಿ ಒರಸಿ ಇರುವೆನ।ಕೊ॥ ॥೧೪॥

ಕಟ್ಟಿಯ ನೆಳ್ಳಿಲಿ ಬುಟ್ಟಿಯ ಹೆಣೆಯೂನ
ದಿಕ್ಕಿನ ಧೂಳ ಎದಿಮ್ಯಾಗ ।ಕೋ। ಬಿದ್ದಾರ
ನಿರಗಿಲ ಒರಸಿ ಇರುವೇನ॥ಕೋ॥

(ಲೋಕ ಗೀತೆಗಳು ಡಾ.ಬಿ.ಎಸ್.ಗದ್ದಿಗಿಮಠ, ೧೯೬೦, ಪ್ರಕಾಶಕರು ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ಪುಟ.೧೫೫).

ಕೊರವಂಜಿ

ಕೋಲು ಕೋಲಿನ ಕೋಲ। ಕೋಲು ಕೋಲಿನ ಕೋಲ
ಕೋಲ ನಾಡುವ ಬಂದ। ಕೋಲು ಗೋಪಿಯ ಕಂದ ॥ಪ॥

ಗಿರಿಯಿಂದ ನಾರಾಯಣನ ಪುರಕ ಬಂದಾಳ ನಾರಿ
ಪುರದ ಬಾಗಿಲ ಕಿಲ್ಲೆ ಶರಧಿ ದಾಟದಳು ।ಕೊ॥ ೧

ತಿರುವಿದ ಸೆರಗನ್ನು ತಿರುತಿರುವಿ ತಾಹೊರುತ
ತಿರುಗಾಡುತ ಬಂದಳು ತಿರಕೊಂಬುವ ಕೊರವಿ ॥ಕೋ॥ ೨

ಮನಿ ಮನಿಯ ಬಾಗಿಲವ ಕೊರವಿ ಮೆಟ್ಟು ತಲಿಹಳು
ಮನ ಮನಕ ಬಲ್ಲಾಂಗ ದನಿಯ ಮಾಡು ತಲಿಹಳು ॥ಕೋ। ೩
ಹಸನಾಗಿ ಕೇಳಿಸುವ ಕುಶಲ ವಾಣಿಯ ನಾರಿ
ಹುಸಿಯಲ್ಲಿ ಇದು ನಮ್ಮ ಹಸಗೂಸಿ ನಾಣಿ ॥ಕೋ। ೪

ಕೆಟ್ಟ ಸವತಿಯ ಬಾಯಿ ಕಟ್ಟಲು ನಾ ಬಲ್ಲೆ
ಬಿಟ್ಟಂತ ಗಂಡನ್ನ ಒಲಿಸಲು ನಾ ಬಲ್ಲೆ ॥ಕೊ॥ ೫

ಭೂತ ಬಿಡಿಸಲು ಬಲ್ಲೆ ಬೇತಾಳ ನಾಬಲ್ಲೆ
ಮಾತಾಡದ ಮೂಕರನ ಮಾತಾಡಿಸಬಲ್ಲೆ ॥ಕೋ॥ ೬

ಸಾಮವೇದವ ಬಲ್ಲೆ ಸಾಮುದ್ರಿಕೆಯ ಬಲ್ಲಿ
ಹೇಮಾದ್ರಿ ಜರಕಂಸ ಬಾನ ಬಸಿಯಲು ಬಲ್ಲೆ ॥ಕೊ॥ ೭

(ಶ್ರೀ ಕೃಷ್ಣ ಪಾರಿಜಾತ, ಸಂ.ಡಾ.ಕೃಷ್ಣಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪ್ರಸ್ತಾವನೆ ಇಪ್ಪತ್ತು, ಪು.೯೧ ರಿಂದ ೧೪೨, ಕೊರವಂಜಿ ಮಾಹಿತಿ ಇದೆ).

ಕೊರವಂಜಿ ಲಾವಣಿ ಪದ್ಯ

ಸಣ್ಮೇಲಿಂದ ಸೂಳಿ ಹೂ ಮುಡಿದಿದ್ದೆ
ಮುಂದಾದ ಅಂಗಡೀಲಿ ಉಳಿದಿದ್ದೆ
ನಿಂಬಿಹಣ್ಣಿನಂತ ತುಂಬಿ ಬಂದವೆ ಜವನ

ನಿತ್ತು ನಿಂದಜರಸಿ ತೆಗಿನಾರೆ
ಮಾವಯ್ಯ ಮಾವಯ್ಯ ಕೇಳಿ
ಮಾವಯ್ಯ ನೀವೆ ಕೇಳಿ

ಸೂಳಿಗೆ ಹೋದವನ ಕರತನ್ನಿ
ಅತ್ತಾನೆ ತಿರುಗಾನೆ ಇತ್ತಾನೆ ತಿರುಗಾನೆ
ದೇಶ ಸಂಚಾರ ಹೊರಟಾನೆ

ಸೂಳೆ ಇದ್ದರ ಮನೆಗೆ ನಡುದಾನೆ
ಸೂಳೆಯ ಮನೆಯಲ್ಲಿ ಗಜ ಚೆಂಡು ಆಡಾನೆ
ಬಾ ಕಂದ ಮುದ್ದು ಮನಿಗೆ ಹೋಪ

ಸೂಳೆಗಿಂತಲೂ ಮಡದಿ ಕಡು ಚೆಲುವೆ
ಬಾ ಕಂದ ಮುದ್ದು ಮನಿಗೆ ಹೋಪ
ಹೊಳೆಗಾರು ಕೆರೆಗಾರು ದೂಕು

ನಿನ್ನ ಮನೆಗೆ ನೀ ಹೋಗು ನಾ ಬರಲಾರೆ
ಸಣ್ಣೇಲಿಂದ ಸೂಳಿ ಹೂ ಮುಡಿದಿದ್ದೆ
ಮುಂದಾದ ಅಂಗಡೀಲಿ ಉಳಿದಿದ್ದೆ

ನಿಂಬಿ ಹಣ್ಣಿನಂತ ತುಂಬಿ ಬಂದೆ ಜವನ
ನಿತ್ತು ನಿಂದರಸಿ ತೆಗಿನಾರೆ

ಅತ್ತಮ್ಮ ಅತ್ತಮ್ಮ ಕೇಳಿ
ಅತ್ತಮ್ಮ ನೀವೇ ಕೇಳಿ
ಸೂಳಿಗೆ ಹೋದವನ ಕರತನ್ನಿ
ಕರಿಯಾದ ತೆಗಿದಾಳೆ ಬಿಳಿಯಾದ ತೊಟ್ಟಾಳೆ

ಕೊರಬಾರ ವ್ಯಾಸ ತೊಟ್ಟಾಳೆ
ಅತ್ತಾನೆ ತಿರುಗಾಳೆ ಇತ್ತಾನೆ
ದೇಶ ಸಂಚಾರ ಹೊರಟಾಳೆ

ಸೂಳಿ ಇದ್ದರ ಮನೆಗೆ ನಡುದಾಳೆ
ಸೂಳಿಗಿಂತಲು. ಮಡದಿ ಕಡು ಚೆಲುವೆ
ಬಾ ಕಂದ ಮುದ್ದು ಮನಿಗೆ ಹೋಪ

ಅಷ್ಟೊಂದು ಮಾತ ಎಷ್ಟೊಂದು ಹೇಳಿದರು
ನೀ ಹೋಗಮ್ಮ ನಿನ ಮನೆಗೆ
ಮಾವಯ್ಯ ಮಾವಯ್ಯ ಕೇಳಿ
ಮಾಯ್ಯ ನೀವೆ ಕೇಳಿ

ಮೂರು ಕೊರವಾರ ಬುಟ್ಟಿಯಾದರು ನೆಯ್ಯಿಕೊಡಿ
ಕರಿಯಾದ ತೆಗೆದಾಳೆ ಬಿಳಿಯಾದ ತೊಟ್ಟಾಳೆ
ಮೂರು ಕೊರವಾರ ಬುಟ್ಟಿ ಹಿಡಿದು ದೇಶ ಸಂಚಾರ ಹೊರಟಾಳೆ

ಸೂಳಿ ಇದ್ದರ ಮನೆಗೆ ನಡುದಾಳೆ
ಅಕ್ಕಿಯಾದರೆ ಮೂರು ಕೊಳಗ
ಭತ್ತವಾದರೆ ಆರು ಕೊಳಗ
ಬೇಕಾದ್ರೆ ಒಂದು ಬುಟ್ಟಿ ತಗಬೋದು
ಅಕ್ಕಿಯಾದರೆ ಮೂರು ಕೊಳಗ ಕೊಡುವೆ
ಭತ್ತವಾದರೆ ಆರು ಕೊಳಗ ಕೊಡುವೆ
ಇವತ್ತೊಂದು ರಾತ್ರಿ ಉಳುದೋಗು

ಗಂಡುವೇಲಿ ಬೈತಾರೆ ನನ ಕೊರಬೋರು
ನಾ ಹೋಗ್ತೀನಿ ನನ ಮನಿಗೀಗ
ಅಷ್ಟೊಂದು ಮಾತ ಹೇಳಾಳೆ ಕೊರವಂಜಿ
ಮೆಟ್ಟಿಲ ತಗ್ಗಿ ಇಳಿದಾಳೆ
ಮೆಟ್ಟಿಲ ತಗ್ಗಿ ಇಳಿದು ಬರುವಾಗ
ಬೆನ್ನ ಹಿಂದೆ ಬಂದಾನೆ ಕೊರವಂಜಿ

ಸಿಪ್ಪೆಯ ಸುಣ್ಣಾಕು ಪಂಚಳ್ಳಿ ಎಲೆಗು
ಏನೆ ಕೊರವಂಜಿ ಪರಬೇದ
ಇಲ್ಲೊಂದಿಳ್ಳೆಯ ಮೆಲುವೋನ
ಆಚೆ ಅಸುವಂತ ಕಟ್ಟೆ
ಈಚೆಗೆ ಮಾವಿನ ಕಟ್ಟೆ
ಮತ್ತೆ ಏಳೆಜ್ಜೆ ನಡೆಯೋಣ

ಸಿಪ್ಪೆಯ ಸುಣ್ಣಾಕು ಪಂಚಳ್ಳಿ ಎಲೆಗ
ಏನೆ ಕೊರವಂಜಿ ಪರವೇದ
ಇಲ್ಲೊಂದಿಳ್ಳೆಯ ಮೆಲುವೋನ
ಆಚೆಗೆ ಹೊನ್ನೆ ಮರ
ಈಚೆಗೆ ಪೊನ್ನೆ ಮರ
ಮತ್ತೆ ಏಳೆಜ್ಜೆ ನಡೆಯೋಣ

ಅಷ್ಟೊಂದು ಮಾತ ಹೇಳಾಳೆ ಕೊರವಂಜಿ
ಮೆಟ್ಟಿಲ ತಗ್ಗಿ ಇಳಿದಾಳೆ
ಸೂಳೆಗೆ ಹೋದ ನಾಯಿ ಹಿಂದುಗುಟ್ಯಾ ಬರುತದೆ
ಕಂಡೊಂದು ಹಿಡಿಕುಂಟೆ ತಗೊಳ್ಳಿ ಅತ್ತಮ್ಮ

(ಕಾಡು ಮಲ್ಲಿಗೆ, ಸಂ.ಎಂ.ಬಿ.ನಳಿನಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೨, ಪುಟ.೪೩–೪೫)

ಗ್ರಾಮೀಣ ಜನತೆಯ ಸರಳ ಜೀವನ, ಅವರ ನಲಿವು ನೋವುಗಳು ಅವರು ಎದುರಿಸಬೇಕಾಗಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು, ದೇವರಲ್ಲಿ ನಂಬಿಕೆ, ಅವರ ಸಂತೃಪ್ತಿ ಮನೋಭಾವ, ಅವರ ವಿಚಾರಧಾರೆ ಮತ್ತು ವರ್ತನೆ ಈ ಎಲ್ಲ ಗ್ರಾಮೀಣ ಜೀವನದ ಇನ್ನೂ ಹಲವಾರು ಮುಖಗಳನ್ನು ಜನಪದ ಸಾಹಿತ್ಯದಲ್ಲಿ ದೊರೆಯುತ್ತದೆ. ಕಾವ್ಯಪ್ರಿಯರು, ಕಲಾತ್ಮಕವಾದ ಹಾಡಿ ತೃಪ್ತಿಪಡುತ್ತಾರೆ. ಶತಮಾನಗಳಿಂದಲೂ ನಮ್ಮ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಜನಪದ ಹಾಡುಗಾರರ ಸುಖದುಃಖಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಭಾರತವು ವಿಶ್ವದಲ್ಲಿಯೇ ಜಾನಪದ ಶ್ರೀಮಂತಿಕೆ ಹೊಂದಿದ್ದು ಅದನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಜನಪದವನ್ನು ಹೆಚ್ಚಾಗಿ ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಪರಿರಕ್ಷಿಸುವ ಅಗತ್ಯವನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಆಧುನಿಕತೆಯ, ಜಾಗತೀಕರಣದ ಸಂದರ್ಭದಲ್ಲಿ ಒತ್ತಡಕ್ಕೆ ಸಿಲುಗಿರುವ ಜನತೆಗೆ ಜನಪದ ಹಾಡುಗಳು ಮನೋವೈದ್ಯವಾಗಿಯೂ ಕೆಲಸ ಮಾಡುತ್ತವೆ.

ಪಾರಿಜಾತ ಮುಡಿಸಿದ

ಯದುಕುಲೇಶನೆ ಸ್ವಾಮಿ ಪದುಮನಾಭನೆ
ಮುದದಿ ನೆನೆದೆನು ಶ್ರೀಕೃಷ್ಣನ ಪದವ ಪೇಳ್ವೆನು।

ದ್ವಾರವತಿಯಲಿ ಹದಿನಾರು ಸಾವಿರಾ
ನೂರೆಂಟನೆ ಶ್ರೀಹರಿ ಆಳುತಿರ್ಪನು
ಸುಜನರೆಲ್ಲರು ಶ್ರೀಕೃಷ್ಣನ ಅಜನಪಿತನೆಂದು
ಭಜನೆ ಮಾಡಲು ಅಷ್ಟ ಜನವೆ ಬಂದರು
ಬಂದ ವಿಪ್ರಗೆ ತಂದು ಆಸನ ಹಾಕಿರಿ
ವಂದನೆ ಮಾಡ್ವರೆ ಸುಖವೆಂದು ಕೇಳ್ವರೆ

ಅಷ್ಠಲೇಖವು ಸಂತೃಪ್ತಿಲಿವುದು
ಶ್ರೀಕೃಷ್ಣರಾಯಗೆ ಹೂವ ಕೊಟ್ಟ ನಾರದ
ಪಾರಿಜಾತದ ಹೂವು ಯಾರಿಗೆ ಸಲ್ವದು
ನಾರೀ ರುಕ್ಮಿಣಿ ಹೀಗೆ ಬಾರೆ ಏನು ತಲಿ
ವಾರೆ ದುರುಬೀಗೆ ಪಾರಿಜಾತ ಮುಡಿಸಿದ।
ಇಲ್ಲಾದ ಸುದ್ದಿಯ ಸತ್ಯಭಾಮೆಗೆ ಹೇಳಿದ ನಾರದ

ಹೇಳಿದಾಕ್ಷಣ ತಾಳಿ ಕೋಪವ
ಮುದ್ದು ಮಂಚವ ತಟ್ಟನೆ ಎದ್ದು ಕುಳಿತಳು।

ಬಿದ್ದು ಬೆವೆತಾಳು ಆಕೆ ಪದ್ಮಮುಖಿಯೊಳು
ಗಿಡವನಾಗಲೆ ದೊಡ್ಡ ಮಡುವನಾರಲೆ
ಯಾರಿಗೇಳಲೆ ದೊಡ್ಡ ಸುಖವೆಂದು ಕಾಣಲೆ
ನಲ್ಲೆ ಶ್ರೀಕೃಷ್ಣನು ರುಕ್ಮಿಣಿಗಲ್ಲೆ ಒಲಿದನು
ಯಾರಿಗೇಳಲೆ ಮನದ ಘೋರ ತಪವ
ಮುದ್ದು ಶ್ರೀಕೃಷ್ಣನು ರುಕ್ಮಿಣಿಗೆತ್ತ ಒಲಿದನು।

ಎತ್ತ ಹೋಗಲೆ ಸುಖವೆಂದು ಕಾಣಲೆ
ಮೇಘ ಪರ್ವತ ಹತ್ತಿ ಹಾರಿ ಬೀಳಲೆ
ಯಾರಿಗೇಳಲೆ ಮನದ ಘೋರ ತಾಪನ।
ಕಾಲಿಂಧ್ಧಿಗೆ ವಂಕಿ ತೋಳ ಬಾಪುರಿ
ಗುಜ್ಜಾರಿ ಮಿಂಟಿಗೆ ಹೆಜ್ಜೆಜೆ ಗ್ಹೊಗೆದಾಳು।

ನೀಲದುಂಗುರ ಮೇಲೆ ಸರಗಳು
ತಾಳಲಾರದೆ ಸತ್ಯಭಾಮೆ ಭೂಮಿಗ್ಹೊಗೆದಾಳು।

ಹಾರೆ ಪದಕವು ಮುತ್ತಿನ ಹರಡಿದ್ವಾರವು
ಭಾರಿ ಭಾರಿಗೆ ತೆಗೆದು ದೂರ ಹೊಗೆದಳು
ಹಿಡಿದು ಕಾಳೆಯ ಒಡೆಯ ತಮಟೆ ಬೇರಿಯ
ಒಡೆಯ ಶ್ರೀಕೃಷ್ಣನು ತಾನಲ್ಲೆ ನಡೆದನು।

ಹೊರಗಿನಿಂದಲೆ ಆಕೆ ಸುಳಿವು ಕಾಣದು
ಒಳಗೆ ಹೋದನೆ ಆಕೆ ಬಳಿಗೆ ನಿಂದನೆ
ಮಚ್ಚೆಗಂಗಳೆ ಮಲಗ್ಹಿದ್ದ ತಾವಿಗೆ
ಎಚ್ಚರಿಸಿದ ಸಾಕ್ಷಾತ್ ಶ್ರೀಕೃಷ್ಣನು
ಸೆರಗು ಹಿಡಿದರೆ ಆಕೆ ಮನಸು ಕರಗದು

ತಿರುಗಿ ನೋಡಳೆ ಹರಿಧ್ಯಾನ ಮಾಡ್ಯಾಳೆ
ಸತ್ಯಭಾಮೆಯ ಮತ್ತೇನ ಜನರ್ಥೇನಂದರು।

ಯಾರ್ಥೆನಂದರು ಆಕೆ ಮುಖವ ಬಾಡಿಗೆ
ಸರಿಯ ಸವತಿನೆ ಈ ಪರಿಯ ಮಾಡಿರಿ
ಹರಿಯೆ ಎನುತಲಿ ಕಪಟ ಮರೆಯ ಮಾಡಿರಿ
ಒಂದು ಹೂವಿಗೆ ಭಾಮೆ ಇಂದು ಮುನಿದರೆ
ತಂದು ಮುಡಿಸುವೆ ಇಂದ್ರನಪುರದ ಪುಷ್ಪವ
ಸತ್ಯಭಾಮೆಯ ವಸ್ತ್ರದೊಳ್ಗಿ ಕುಳ್ಳಿರಿಸಿ

ಪುಷ್ಪದಾಸ್ಗೆಯ ಮಾಡಿ ಲೆಗ್ಗೆಯನಾಡ್ಯಾನೆ
ಸತ್ಯಭಾಮೆಯು ಸ್ವಾಮಿ ಹತ್ತಿ ಗರುಡನ
ಸ್ವರ್ಗದ ಪುಷ್ಪ ತಂದು ಕೊಡುವೆಯಾ
ಪಾರಿಜಾತದ ಪದವ ಹೇಳಿದವರಿಗೆ
ಪದವ ಕೇಳಿದವರಿಗೆ। ಪಾರದಯ್ಯನ ಮುದ್ದು ಬಾಲ ಒಲಿವನು।

(ಹಾಡು ಚೆಲ್ಯಾವೆ ನಾಡಿಗೆ(ಜನಪದ ಕಲಾ ಸಂಪುಟ) ಸಂ.ಕೆ.ಆರ್.ಕೃಷ್ಣಸ್ವಾಮಿ, ೧೯೯೫, ಜನಪದ ಆಕಾಡೆಮಿ, ಬೆಂಗಳೂರು, ಪುಟ.೧೮೯).

ಕೃಷ್ಣ–ಕೊರವಂಜಿ

ಆಗ ತನ್ನದೊಂದು ಅವತಾರ ತಾಮಾವಂ ಮಾಡಿ।
ಹೆಣ್ಣು ಒಂದವತಾರ ನೋಡಬೇಕೆಂದು।
ಬಾಸಿಯ ಬಗುತಾಲೆ ತೆಗೆದಾನು ದೇವ।
ಪಂಜರದ ವಾಲೆರಡು ಕಿವಿತುಂಬ ತೊಟ್ಟು
ತಾನು ಸೀರೆಯ ಉಟ್ಟಾನು ದೇವ।

ವಾಲೆ ಚಿಂತಾಕೆಂಬ ಒಡವೆಯ ಧರಿಸಿ।
ಅಪರಂಜಿ ಬಳೆಗಳ ಕೈತುಂಬ ಧರಿಸಿ।
ಒಳ್ಳೆ ಬೆತ್ತದ ಕೋಲು ಬಲಗೈಲಿ ಹಿಡಿದು।

ಮಾಯವ ಮಗುವನ್ನು ಬೆನ್ನಿಗೆ ಬಿಗಿದು।
ಚಿನ್ನದ ಗಿಲಿಕೇಯ ಕೈಯಲ್ಲಿ ಹಿಡಿಕೊಂಡು।
ಚಿನ್ನದ ಸಿಂಬಿಯ ತಲೆಮೇಲೆ ಮಡಗಿ।
ಚಿನ್ನದ ಸಿಂಬಿಯ ಮೇಲೆ ಗೂಡೇನು ಇರಿಸಿ।
ತಾನು ಬೀದಿ ಬೀದಿಯೊಳಗೆ ಸಾರುತ ಬಂದ।

ಅಪರೂಪ ಕೊರವಂಜಿ ಆದಾನುದೇವ।
ಬೀದಿ ಬೀದಿಯ ಮೇಲೆ ಸಾರುತ ಬಂದು।
ಕಣಿಯ ಕೇಳುವವರಿಗೆ ಕಣಿಯ ಹೇಳುವೆನು।
ಗುರುತು ಕೇಳವವರಿಗೆ ಗುರುತು ಹೇಳುವೆನು।

ಕಣಿ ಎಂಬೊ ಆ ಮಾತ ರುಕ್ಮಿಣಿ ಕೇಳಿ।
ಕರೆದಾರೆ ಕೊರವಂಜಿಯ ಅರಮನೆ ದಾದೀರೆ।
ಓಡೋಡಿ ಓಡೋಡಿ ಬಂದು ಕೊರವಂಜಿ।
ಅಮ್ಮಯ್ಯ ನೀ ಬಾರೇ ಅಕ್ಕ ನೀ ಬಾರೇ।
ನಮ್ಮ ರಾಣಿ ಕರೆದಾಳು ಬಾರೆಲಾ ಕೊರವಂಜಿ।
ನಿಮ್ಮ ರಾಣಿಯ ಹೆಸರೇನು ನಿನ್ನ ಊರೇನು।
ನಮ್ಮ ರಾಣಿಯ ಹೆಸರಮ್ಮ ರುಕ್ಮಿಣಿದೇವಿ।

ನಾವು ಈ ಅರಮನೆ ದಾದೀರು ಕಣೆ।
ದಾದೀರಲ್ಲದೆ ಮನೆ ಸೇರುವಳಲ್ಲಾ।
ಪುರುಷರಿಲ್ಲದ ಮನೆ ಸೇರುವಳಲ್ಲಾ।
ಮಕ್ಕಳಿಲ್ಲದ ಮನೆ ಹೊಕ್ಕವಳಲ್ಲಾ।
ನಾನೆಲ್ಲಾ ಇರುವಾಗ ನೀನಗೇನು ಭಯವು।
ನಮ್ಮ ರುಕ್ಮಿಣಿ ಇರುವಾಗ ನಿನಗೇನು ಚಿಂತೆ।
ಅಂಜಿಕೊ ಬೇಡನೆ ಅಕ್ಕಯ್ಯ ನಾರಿ।

ಅಂಜುತ ಆಳೊಂದೆಜ್ಜೆ ಅಂಜಿದೊಂದೆಜ್ಜೆ
ಹದಿನಾರು ಬಾಗಿಲ ದಾಟಿ ಬಂದಾಳು।

ವಜ್ರದ ಬಾಗಿಲ ಹೊರಗೆ ನಿಂತಾಳು।
ಕಡೆಯ ಬಾಗಿಲ ತಾವ ಬಂದು ನಿಂತಾಳು।
ಕೊರವಂಜಿ ಬರೋದಾರಿ ರುಕ್ಮಿಣಿ ನೋಡಿ।
ಮುತ್ತಿನ ಗದ್ದುಗೆ ಇಳಿದು ಬಂದಾಳು।
ರತ್ನಗಂಬಳಿ ತಂದು ನೆಲಕೆ ಹಾಸಿದಳು।

ಚಿನ್ನದ ಚಾಪೆ ತನ್ಹಾಸಿಕೊಂಡು
ಕೂತು ಕೊ ಎಲೆ ನಾರೀ ಎಂದಾಳೆ ರುಕ್ಮಿಣಿ।
ಕೂತು ಕೊಂಡಮ್ಯಾಲೆ ಕೇಳ್ಯಾಳೆ ನಿಮ್ಮದಾವೂರೆಂದು।
ಯಾವೂರು ಯಾವ ಸೀಮೆ, ಕೇಳಿಯಾ ನೀನು
ಅಕಟೆಂಕಿಣಿ ನಮಗೆ ಗೌರಮ್ಮಳಿಮಾಳು
ಆಡಿಗಣೇಶ್ವರನ ಮಗಳಲ್ಲವೇನೆ?

ಸಿದ್ಧಲಿಂಗೇಶ್ವರನು ಚಿಕ್ಕಪ್ಪ ನನಗೆ।
ವಯ್ಯಾರಿ ಪುರಾದಿಂದ ನಾ ಒಬ್ಬಾಳೆ ಬಂದೆ।
ಹೊಟ್ಟೆಗೆ ಒಟ್ಟಿಗೆ ಬಂದ ಹೆಣ್ಣು ನಾನಲ್ಲಾ।
ತೊಟ್ಟು ಗೂಡೆಯ ತಂದು ನಾ ಮಾರೋಳಲ್ಲಾ।
ಹೊಟ್ಟೆಗೆ ಹಿಟ್ಟಿಗೆ ಬಂದ ಹೆಣ್ಣ ನಾನಲ್ಲಾ।
ಸುಳ್ಳಿಲ್ಲ ಕಣಮ್ಮ ಮಗು ಮೇಲೊಂದಾಣೆ।

ಮಾಯದ ಮಗುವಿನ ಹಣೆಯ ಮುಟ್ಟಿದನು।
ಹಣೆಯ ಮುಟ್ಟಿದ ನಾರಿ ಭಾಷೆ ಮಾಡಿದನು।
ಕಣಿಯ ಹೇಳೋದಕ್ಕೆ ಏನು ಕೊಡಬೇಕು।
ಮುತ್ತು ನಾ ಕೊಡಿಸೇನು ಕಣಿ ಹೇಳೆ ನಾರಿ
ಮುತ್ತು ನನ್ನಾರಮಾನೆ ಮಿಕ್ಕೆ ಜೋಳಮ್ಮ।

ಹವಳಾದ ನಾ ಕೊಡಿಸೇನು ನೀ ಕಣಿ ಹೇಳೆ ಕೊರಮಿ।
ಮಾಣಿಕ್ಯ ನಾ ಕೊಡಿಸೇನು ನೀ ಕಣಿ ಹೇಳೆ ನಾರಿ।

ಮಾಣಿಕ್ಯ ನನ್ನಾರಮಾನೆ ಮಲ್ಲಿಗೆ ಹೂವು।
ನಾನು ನವರತ್ನ ಕೊಡಿಸೇನು ನೀ ಕಣಿ ಹೇಳೆ ನಾರಿ।
ನವರತ್ನ ನನ್ನಾರಮಾನೆ ರಾಗಿಯ ಕಾಳು।

ಕುದುರೆಯ ನಾ ಕೊಡಿಸೇನು ನೀ ಕಣಿ ಹೇಳೆ ಕೊರಮಿ।
ಕುದುರೆಯು ನನ್ನಾರಮನೆ ಕುರಿ ಹಿಂಡು ಕಣೆ।
ಒಂಟೆಯ ನಾ ಕೊಡಿಸೇನು ನೀ ಕಣಿ ಹೇಳೆ ನಾರಿ।
ಒಂಟೆಯ ನನ್ನಾರಮಾನೆ ಬಂಟಾರು ಕಣೆ।
ಏನು ಕೊಟ್ಟೆನೆಂದಾರು ಒಲ್ಲೆನೆಂದೀಯ।
ಮತ್ತೇನು ಕೊಡಬೇಕೆ ಮಾಯದ ನಾರೀ।

ನೀ ಕೊಡೊ ಆಭರಣ ನನಗೇನು ಬೇಕು।
ನಿನ್ ಮನಸಿನಲ್ಲಿರುವಂಥ ಮಾತು ಹೇಳಿದ್ರೆ
ನಿನ್ ಕನಸಿನಲ್ಲಿ ಕಂಡಂಥ ಕಾರ್ಯವೇಳಿದರೆ।
ನಿನ್ ನೆಪ್ಪುನಿನ ಗುರುತು ನಿನಗೆ ಹೇಳಿದರೆ।
ಕೃಷ್ಣ ಬರೋ ದಾರಿ ತಿಳಿದು ಹೇಳಿದರೆ।
ಮತ್ತೇನು ಕೊಡಿಸ್ತೀಯಾ ರುಕ್ಮಿಣಿ ನನಗೆ।

ಮಗುವಿಗೊಂದು ಒಡವೆಯ ಮಾಡೀಸಿ ಕೊಡುವೆ।
ಬೆಳ್ಳಿ ಬೆತ್ತದ ಕೊಲುಹೆಣಿಸಿ ನಾ ಕೊಡುವೆ।
ಅಪರಂಜಿ ಬಳೆಗಳ ಕೈತುಂಬ ನಾ ಕೊಡುವೆ।
ಪಟ್ಟೆ ಸೀರೆಯ ನಾ ನೇಯಿಸಿ ಕೊಡುವೆ।
ಈ ಮಾತಿಗೆ ಕೊರಮಿ ಒಪ್ಪಿಕೊಂಡಾಳು।

ಒಪ್ಪಿಕೊಂಡ ನಾರಿ ಏನಂತಾಳೀಗ।
ಮಟ್ಟ ಮಂಗಳವಾರ ಮನೆ ಸಾರಿಸು ಹೆಣ್ಣೆ।
ಗಂಟು ಮೂಟೆಗಳನೆಲ್ಲಾ ಹೊರಗೆ ತಂದಿರಿಸು।
ಎಂಟು ಗಾಡಿಯ ನೀರಿನಲಿ ನೀ ತಾನವ ಮಾಡು
ಎಂಟು ತರಹದ ಕಾಸು ನೀ ತಂದು ಮಡಗು।

ಗೊನೆಯ ಬಾಳೆಯ ಹಣ್ಣು ನೀ ತಂದಿರಿಸು।
ಗೊನೆಯ ತೆಂಗಿನಕಾಯಿ ನೀ ತಂದಿರಿಸು।
ನಾಕು ಮೂಲೆಗೆ ನಾಕು ಹಣ ಒಂದೇ ಇರಿಸು।
ನೆನೆ ಅಕ್ಕಿ ನೆನೆಗಡಲೆ ತಂದು ನೀನ್ ಮಡಗು।

ಆಭರಣ ಒಡವೆನೆಲ್ಲಾ ನೀನು ತಂದು ಸಿಂಗರಿಸು
ನಿಮ್ಮ ದೇವರು ನೀನ್ ನನಕೊಳ್ಳೆದೇವಿ।
ನಮ್ಮ ದೇವರು ನಮ್ಮ ಭಾಗದಲ್ಲವನೆ।

ಮೂಡಲು ತಿಮ್ಮರಾಯ ಮತ್ತೊತ್ತರಾಯ।
ಆರಣೆ ಜ್ಞಾನೇಶ್ವರ ಹನುಮಂತರಾಯ।
ಹಲ್ಲೂರಿ ಪಲ್ಲೂರಿ ಹನುಮಂತರಾಯ।
ಕೈತಾರೆ ರುಕ್ಮಿಣಿ ಕೈನೋಡಿ ನಿನಗೊಂದು।
ನಾ ಕಣಿಯ ಹೇಳುವೆನು।

ಅಂಟಾದೆ ಮುಂಟಾದೆ ಕಣಿ ಹೇಳು ನನಗೆ।
ಅಂಟಾದೆ ಮುಂಟಾದೆ ಕಣಿ ಹೇಳೊಂದಿಲ್ಲಾ।
ಅಂಜಿಕೊಂಡು ಅಂಚಿಕೊಂಡು ಕೈಕೊಟ್ಟ್ಯಾಳಾಗ।

ಕೈ ನೋಡಿ ಕೃಷ್ಣ ಏನನ್ನು ತಾನೆ।
ಎಂಟು ಮಂದಿಯು ನಿನ್ನ ನೆಂಟರು ಕಣೆ।
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ
ಸುಂಟರ ಗಾಳೀಲಿ ತಿರುಗುತೀಯಲ್ಲೆ।

ಉಂಟವೊ ಇಲ್ಲವೇನೆ ಅನುಮಾನ ಬೇಡ।
ಮೂಡಲು ಸೀಮೆಗೆ ಹೋಗ್ಯವನೆ ಸ್ವಾಮಿ।
ಮುತ್ತು ನವರತ್ನ ನಿನಗೆ ತರುತಾನೆ।
ವಜ್ರ ವೈಢೂರ್ಯ ನಿನಗೆ ತರುತಾನೆ।

ಇವತ್ತೆ ಬರುವೋನೆ ನಾಳೆ ಬರುವೋನೆ?
ಬರುವೋದು ತಡವಾಗಿ ಮದ್ದೆಯಮ್ಮ ನಿನದು।
ಈ ಮನೆ ಮುಂದುಗಡೆ ಚಪ್ಪರ ಹಾಕುವರು।
ಈ ಮನೆ ಮುಂದುಗಡೆ ಹಾಕಿ ಎರೆದರೆ।
ಈ ಮನೆ ಮುಂದುಗಡೆ ತಾಲಿ ಕಟ್ಟುವರು।

ಇಷ್ಟೊಂದೆಲ್ಲಿ ಹೇಳಿ ತಾ ನಿಜರೂಪ ತೋರಿ।
ಇದು ಎಲ್ಲ ಹೆಣ್ಣು ಮಾಯವೆಂದು ತಿಳಿದ ರುಕ್ಮಿಣಿ।
ನಾಚಿಕೆ ಪಟ್ಟಾಳು ಕೋಣೆ ಸೇರ್ರ್ಯಾಳು।
ಹೆಂಗಸರ ನಾಚಿಕೆ ಕೆಡಸಬಾರದೆಂದೂ
ಇದ್ದೋನು ಇದ್ದಂಗೆ ಮಾಯವಾದನು ಸ್ವಾಮಿ।
ದ್ವಾರಕಪುರ ಪಟ್ಟಣ ಸೇರಿದಾನು ಸ್ವಾಮಿ

ಕೊರಮರ ಗೂಡೆಯ ಕೊರಮರಿಗೆ ಕೊಟ್ಟು।
ಆಭರಣ ಒಡವೆನೆಲ್ಲಾ ಪೆಟ್ಟಿಗೆ ಮಡಗಿದಾನು।
ಮಾಯದ ಮಗುವನು ಮಾಯ ಮಾಡಿದಾನು।

ಕಾವೇರಿ ನದಿಯಲ್ಲಿ ತಾನ ಮಾಡುತಾನೆ।
ಪಟಪಟ್ಟೆ ನಾಮಗಳ ಧರಿಸೀದ ಸ್ವಾಮಿ।
ಹವಳದ ಕಿರೀಟ ಧರಿಸಿದ ಸ್ವಾಮಿ
ಅಲ್ಲಿಂದ ತಾಳಮೇಳದಿಂದ ಬರುತಾನೆ ಸ್ವಾಮಿ।

ಕೃಷ್ಣ ಬರುವೋದೆ ತಡವಾಗಿ ಪಾದ ಹಿಡಿದಾಳು।
ಪನ್ನೀರು ತಂದೀಗ ಪಾದವ-ತೊಳೆದಾಳು
ಪಾದ ತೊಳೆದ ನೀರ ಪಾವನವ ಮಾಡಿದಾಳು।

ಆಕಾಶ ಏಣೆಯಷ್ಟು ಚಪ್ಪರ ಹಾಕಿದರು।
ದೊಡ್ಡೆ ದೊಡ್ಡ ಮುತ್ತುಗಾರ ಸಾಸುವೆ ಇಕ್ಕಿದರು।
ಚಿಕ್ಕ ಚಿಕ್ಕ ಮುತ್ತುಗಳು ಸಾಸುವೆ ಇಕ್ಕಿದರು।

ಆನೆ ಮುತ್ತು ತಂದು ಧಾರೆ ಎರೆದಾರು।
ಕೃಷ್ಣನ ತಾಯಿ ತಂದೆ ಧಾರೆ ಎರೆದಾರು।
ರುಕ್ಮಿಣಿ ತಾಯಿ ತಂದೆ ಧಾರೆ ಎರೆದಾರು।
ಗೊಲ್ಲ ಸ್ತ್ರೀಯರ ಕರೆದು ಸೋಬಾನದ ಹಾಡು ಹಾಡಿಸಿದರು।
ರಂಬೆ ಊರ್ವಸಿ ಕರೆಸಿ ನಾಟ್ಯ ಮಾಡ್ಯಾರು

ಹನ್ನೆರಡು ದಿವಸಕ್ಕೆ ಲಗ್ನ ತೀರಸ್ಯಾರು।
ಕಲ್ಯಾಣವಾಗಿತು ಕೃಷ್ಣ ನಿನಗೆ
ಮದುವೆ ಆಗಿತು ರುಕ್ಮಿಣಿ ನಿನದು।
ಕೃಷ್ಣನ ಕತೆಯನು ಕೇಳಿದವರಿಗೆ
ಮಾಡಿದ ಪಾಪ ಪರಿಹಾರವೆಂದು
ರುಕ್ಮಿಣಿ ಕತೆಯನು ಕೇಳಿದವರಿಗೆ
ಮಾಡಿದ ಪಾಪ ಪರಿಹಾರವೆಂದು
ಹೇಳ್ವಾರು ಜನರು ಧರಣಿಯಲೆಲ್ಲಾ
(ಅದೇ ಪುಟ.೨೨೫).

ಶ್ರೀಕೃಷ್ಣ–ಪಾರಿಜಾತ

ಯದು ಕುಲೇಶನೆ ಸ್ವಾಮಿ ಪದುಮನಾಭನೆ
ಮೊದಲು ನೆನೆದೇನು ಕೃಷ್ಣನ ಪದವ ಹೇಳುವೇನು।

ದ್ವಾರವತಿಯಲ್ಲಿ ಹದಿನಾರು ಸಾವಿರ
ಗೋಪಿ ಸ್ತ್ರೀಯರು ಹದಿನಾರು ಸಾವಿರ
ನೂರೆಂಟನೆ ಸ್ತ್ರೀಯರ ಆಳುತಿರ್ಪನು
ನೂರು ಹೆಂಡಿರ ಸ್ತ್ರೀಯರಾಳುತಿರ್ಪನು।

ಸುಜನರೆಲ್ಲರು ಕೃಷ್ಣಗೆ ಅಜನು ಪಿತನೆಂದು।
ಭಜನೆ ಮಾಡಲೂ ಅಲ್ಲಿಗೆ ದ್ವಿಜನು ಬಂದನು।
ಬಂದ ದ್ವಿಜನಿಗೆ ಆಜನೆ ತಂದು ಹಾಕಿದ
ವಂದನೆ ಮಾಡಿದ ಸುಖನೆ ಎಂದು ಹೇಳಿದ

ದೇವಲೋಕದ ಪಾರಿಜಾತ ಪುಷ್ಪವು।
ನಾರೀ ರುಕ್ಮಿಣಿಗಲ್ಲದೆ ಬೇರೆ ಸಲ್ಲದು।
ನಾರೀ ರುಕ್ಮಿಣೀ ಹೀಗೆ ಬಾರೆ ಎನ್ನುತಲೇ
ಅವಳ ವಾರೆ ತುರುಬಿಗೆ ಪಾರಿಜಾತ ಮುಡಿಸಿದ।

ಶ್ರೀಕೃಷ್ಣ ಪಾರಿಜಾತ ಮುಡಿಸಿದ
ಪಾರಿಜಾತದ ಪರಮಾಳೂರು ತುಂಬಿತು
ಮೂರು ಲೋಕಕೆ ಹರುಷಮೀರಿ ಹೋಯಿತು।

ಯೋಗಿ ನಾರದ ಸಾಗಿ ಸತ್ಯಭಾಮೆಗೆ
ಇಲ್ಲದ ಸುದ್ದೀಯ ಹೋಗಿ ಬೇಗ ಹೇಳಿದ।
ಕೇಳಿದಾಕ್ಷಣ ಭಾಮೆ ಬಹಳ ಕೋಪದಿ।
ತಾಳಲಾರದೆ ಮನವ ಹಾಳು ಕೊಂಡಳು।

ವಾಲೆ ಸರಗಿಯೂ ವಂಕಿ ತೋಳ ಬಾಪುರೀ।
ಕೀಲು ಕಂಕಣ ಭೂಮಿ ಮೇಲೆ ಒಗೆದಳೋ।
ಸರಿಯ ಸವತಿಯ ಈಕೆ ಮೆರೆವ ಭಾಗ್ಯವೊ।

ಗಿಡವ ಆಯಲೋ ದೊಡ್ಡ ಮಾಡುವ ದುಮುಕಲೋ
ಏಳು ಪರ್ವತ ಹತ್ತಿ ಹಾರಿ ಬೀಳಲೋ।
ಯಾರಿಗೇಳಲೇ ಮನದ ಘೋರ ತಾಪವ।

ಒಂದು ಹೂವಿಗೆ ಭಾಮೆ ಇಂದು ಮುನಿದರೆ।
ಇಂದ್ರಲೋಕದ ಮರವ ತಂದು ಇಳುಹುದೆ।
ಹರಿಯ ಹಾರವ ತೆಗೆದು ಅತ್ತ ಒಗೆದಳು।
ಸತ್ಯಭಾಮೆ ತೆಗೆದು ಇತ್ತ ಒಗೆದಳು।

ಹರಿವ–ಹಾರವ ಕೃಷ್ಣ ಕೊರಳಿಗೆ ಹಾಕಿದ
ಒಂದೇ ಹೂವಿಗೆ ನೀನು ಹಿಂಗೆ ಮುನಿದರೆ।

ತಂದು ನಿಲಿಸುವ ಪಾರಿಜಾತವನವನು।
ಒಂದೆ ಹೂವನು ನಾನು ಹೆಂಗೆಸಲುವೆನು।
ತಂದು ಕೊಡುವೆನು ಪಾರಿಜಾತ ಮರವನು।
ಯಾಕೆ ಕೃಷ್ಣನೆ ನಿನಗೆ ಕಾಕ ಬುದ್ಧಿಯು?
ಯಾರೇನೆಂದರೆ ನಿನ್ನ ಮೋರೆ ಬಾಡಿದೆ।
ತಾಳಲಾರೇನು ಮನದೆ ಘೋರ ತಾಪವ।

ನಾ ಒಂದೇ ಹೂವನು ನಾ ಹಿಂದೆ ಸಾಕೀದೋ।
ಯಾಕೆ ಸತ್ಯಭಾಮೆ ನಿನ್ನ ಮುಖವೆ ಬಾಡಿದೆ।
ತಡೆಯಲಾರೆನು ಮನದ ಘೋರ ತಾಪವ
ಸಾಕು ನಡಿ ನಡಿ ಸರಿಯ ಸವತಿಯ ಮನೆಗೆ

ಕೈಲಾಸದಿಂದಲಿ ನಾರದ ಮುನಿವರ।
ಒಂದೇ ಹೂವನು ತಂದನಾಗಲೆ।
ತಂದನಾಗಲೆ ನಾದದ ಮುನಿವರ।

ಹರಿಯ ಕಂಡನು–ಅವನಲ್ಲೇ ಮುನಿದನು।
ಏನೋ ನಾರದ ನೀನಿಲ್ಲಿ ಬಂದೆಯೇ।
ಏನು ಚಾಡಿಯ ನೀನು ಹೇಳಲು ಬಂದೆಯೇ।

ಇಂದ್ರಲೋಕ ದಿ ಸ್ವಾಮಿ ತಂದೆ ಹೂವನು।
ಒಳ್ಳೆ ಪಾರಿಜಾತವ ಸ್ವಾಮಿ ಇಲ್ಲಿ ತಂದೆನು।
ನಾನು ಸ್ವಾಮಿ ತಂದೆ ಹೂವನು।

ಏನೋ ನಾರದ ಹೂವೂ ಯಾರಿಗೆ ಕೊಡುವೆ?
ನೀನು ಹೂವು ಯಾರಿಗೆ ಕೊಡುವೆ?
ಏನು ಮಾಯವೋ ಏನಿದೆ ವಿಚಿತ್ರವೋ।

(ಅದೇ ಪುಟ.೧೩೩–೧೩೬)

ಕೊರವಂಜಿ ಕಟ್ಟಣೆಯೆಂಬ ತಿರುಕವೇಷದ
ಎರಕವ ತೊಟ್ಟೆವೆ ನಾವು?
ಹೊರಗಣ್ಣೊಳು ಎಮ್ಮ ನೃತ್ಯವನು ನೀ ನೋಳ್ವಾಗ
ಹೊರಿಸು ಒಂದು ಕೊರತೆಯ ನಮಗೆ?

ಬೆಳ್ಳಕ್ಕಿಗೆ–ಊರುಲೊಡ್ಡಿ ತನ್ನ ಕೈಯಿಂದ ತನ್ನ
ಅಳ್ಳೆಯ ಬಾಮ ಹೊಯ್ಕೊಂಡು
ಘೊಳ್ಳನೆ ಎಲ್ಲಿರ ನಗಿಸುವ ಕೊರಮರ ವೇಷ
ದಲ್ಲಿ ನರ್ತಿಸಿದೆವು ನಾವು?

ನೀನು ಈವುದೇನು? ನಾವು ಈಸಿಕೊಂಬುದು ಅದೇನು?
ಚೀನಿ ವಸ್ತ್ರಾಭರಣಗಳ।
ಏನು ದೊಡ್ಡಿತು ಕಲ್ಲು ಲೋಹ ವಂಚಟಿಯ ಅಭಿ
ಮಾನ ತಪ್ಪಿದ ಮೇಲೆ ನಮಗೆ?

ಹೀಗೆ ಮುನಿದ ತರುಣಿಯರನ್ನು ಭರತೇಶ ಉಪಾಯವಾಗಿ ಒಲಿಸಿಕೊಂಡು ಉಡುಗೊರೆ ಕೊಟ್ಟು ಮನ್ನಿಸಿದ ಸಂಗತಿ ಹಲವು ಪದ್ಯಗಳಲ್ಲಿ ವಿವರವಾಗಿ ಬಂದಿದೆ. ನರ್ತಿಸಿದ ಹದಿನಾರು ಮಂದಿ ನರ್ತಕಿಯರ ಪೈಕಿ ರೂಪಾಣಿ ಮತ್ತು ಪದ್ಮಿನಿ ಎಂಬ ಇಬ್ಬರು, ನಾಟ್ಯರ ನಂತರ ರಾಜನಿಂದ ಬಹುಮಾನ ಪಡೆಯಲು ಒಲ್ಲದೆ ಮುನಿಸಿಕೊಂಡು ಹಿಂದೆ ನಿಂತರು. ಅದನ್ನರಿತ ರಾಜ ಅವರನ್ನು ಕರೆಸಿ, ಅವರ ಬೇಸರಕ್ಕೆ ಕಾರಣ ತಿಳಿಯಬಯಸಿದನು. ಆ ನರ್ತಕಿಯರು ತಮ್ಮದು ಅಮೋಘ ನೃತ್ಯವೆಂದೂ ಅದನ್ನು ಸರಿಯಾಗಿ ಗಮನಿಸದೆ ರಾಜ ಉದಾಸೀನ ಮಾಡಿದ್ದರಿಂದ ತಮಗೆ ದುಃಖವಾಗಿದೆ ಎಂದು ಬಗೆ ಬಗೆಯಾಗಿ ಆಕ್ಷೇಪಿಸಿದರು(ಭರತೇಶ ವೈಭವ, ರತ್ನಾಕರ ವರ್ಣಿ, ಪುಟ....).

ಕೊರವಂಜಿಯರು ಮುಗ್ಧಜನರು, ಶಾಸ್ತ್ರದ ನೆಪದಲ್ಲಿ ತಮಗೆ ತೋಚಿದ್ದನ್ನು ಹೇಳುವ ಪಟ್ಟಣದ ಮೋಸಗಾರರಿಗಿಂತ, ಹೊಟ್ಟೆಪಾಡಿಗಾಗಿ ಕಣಿ ಹೇಳುತ್ತಾ, ಹಚ್ಚೆ ಹುಯ್ಯುವ ಕಲೆಯನ್ನು ಕರಗತ ಮಾಡಿಕೊಂಡು ಜನಪದರನ್ನು ರಂಜಿಸುವ ಕೊರವಂಜಿಯರು ಅನುಕಂಪ ತೋರಿಸಬೇಕಾದ ಬಡಜನರೆಂದು ಹೇಳಬಹುದು(ಪುಟ.೨೧೧), ಕನ್ನಡ ವಿಷಯ ವಿಶ್ವಕೋಶ).

ರಾಮಾಯಣ ಸಂದರ್ಭದಲ್ಲಿ ಆಂಜನೇಯ ಕೊರವಂಜಿ ವೇಷಧರಿಸಿ ರಾವಣನ ಪಟ್ಟಣದ ಅಶೋಕವನದಲ್ಲಿ ಸೀತೆಯನ್ನು ಕಂಡು ರಾಮ ಬಂದು ಲಂಕೆಯನ್ನು ಜಯಸಿ, ವಿಭಿಷಣನಿಗೆ ಪಟ್ಟ ಕಟ್ಟಿ ನಿನ್ನನ್ನು ಕರೆದುಕೊಂಡು ಹೋಗುವುದು ಖಂಡಿತ ಎಂದು ಭವಿಷ್ಯ ನುಡಿಯುವ ಪ್ರಸಂಗ ಜನಪದ ರಾಮಾಯಣಗಳಲ್ಲಿ ಬರುತ್ತದೆ. ಹನುಮಂತ ತನ್ನ ತಲೆಗೂದಲನ್ನು ಎತ್ತಿ ಕಟ್ಟಿ ಸಿಂಗರಿಸಿಕೊಳ್ಳುವ ಬಗೆಯನ್ನು ಜನಪದ ಕವಿಗಳು ಚಿತ್ರಿಸಿರುವುದು ಸೊಗಸಾಗಿದೆ"(ಪುಟ.೩೮೧).

ಕೋಲಾಟದಲ್ಲಿ ಕೊರವಂಜಿ ಕೋಲಾಟ ಒಂದು ಬಗೆ, ಹತ್ತು ಹನ್ನೆರಡು ಮಂದಿ ಕೂಡಿ ಕೋಲು ಹುಯ್ಯುವ ಸಂದರ್ಭದಲ್ಲಿ ಅವರ ಮಧ್ಯೆ ಬಾಗುತ್ತ ಬಳಕುತ್ತ ಬಂದು ಎಡದ ಕಂಕುಳದಲ್ಲಿ ಪುಟ್ಟಿ, ಒಂದು ಕೈಯಲ್ಲಿ ಕೊರವಂಜಿ ಕೋಲು ಹಿಡಿದು ಬೆನ್ನಟ್ಟಿದ ಗಂಟಿನ ಕೈಗೆ ಸಿಗದಂತೆ ನುಸುನುಸುಳಿಕೊಂಡು ಆಡುವ ಆಟ ನೋಡಲು ಬಲು ಚೆನ್ನ. ಸಮಗ್ರ ರಾತ್ರಿ ಹೀಗೆ ನಡೆಯುತ್ತಿರುತ್ತದೆ. ಇವರ ಆಟ, ಇಂಥ ಪ್ರಸಂಗಗಳಲ್ಲಿ ಕೊರವಂಜಿ ಪಾತ್ರ ಸೃಷ್ಟಿಸಿ ತಮ್ಮ ಮನಃಕ್ಲೇಶವನ್ನು ಕಲೆದುಕೊಳ್ಳುವುದುಂಟು, ಸುಖಾಂತ್ಯಗೊಳಿಸಿಕೊಳ್ಳುವುದುಂಟು(ಪುಟ.೩೮೨, ಕನ್ನಡ ವಿಷಯ ವಿಶ್ವಕೋಶ).

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೧.	ರಾಮಣ್ಣ ಭಜಂತ್ರಿ	೫೬	ನಿವೃತ್ತಿ ವಕೀಲ	ಎಲ್.ಎಲ್.ಬಿ.	ಕುಕನೂರು	ಕೊಪ್ಪಳ	ಕೊಪ್ಪಳ
೨.	ಮಹೇಶ ಒಳಗನೂರು	೫೦	ಸಮಾಜಸೇವೆ	ಪಿಯುಸಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೩.	ಕರಿಯಪ್ಪ	೪೫	ಬುಟ್ಟಿ ವ್ಯಾಪಾರ	೧೦ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೪.	ಸರೋಜಾ	೩೭	ಬುಟ್ಟಿ ವ್ಯಾಪಾರ	೮ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೫.	ಜ್ಯೋತಿ	೨೬	ಬುಟ್ಟಿ ವ್ಯಾಪಾರ	೧೦ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೬.	ಆನಂದ	೨೩	ಬುಟ್ಟಿ ವ್ಯಾಪಾರ	೧೦ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೭.	ಗಣೇಶ	೨೪	ಬುಟ್ಟಿ ವ್ಯಾಪಾರ	ಪಿ.ಯು.ಸಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೮.	ವಿಜಯಲಕ್ಷ್ಮಿ	೨೦	ಬುಟ್ಟಿ ವ್ಯಾಪಾರ	೧೦ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ
೯.	ಸಚಿನ್	೧೮	ಬುಟ್ಟಿ ವ್ಯಾಪಾರ	೧೦ನೇ ತರಗತಿ	ಕೊಪ್ಪಳ	ಕೊಪ್ಪಳ	ಕೊಪ್ಪಳ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
ಕುಷ್ಟಗಿ							
೧.	ಜಗದೀಶ	೩೯	ಶಿಕ್ಷಕ	ಬಿ.ಎ.ಬಿ.ಎಡ್.	ಕಾರಟಗಿ	ಕುಷ್ಟಗಿ	ಕೊಪ್ಪಳ
೨.	ವೆಂಕಟೇಶ	೩೫	ಎಸ್.ಬಿ.ಐ.	ಎಂ.ಎಸ್.ಡಬ್ಲ್ಯು	ಕಾರಟಗಿ	ಕುಷ್ಟಗಿ	ಕೊಪ್ಪಳ
೩.	ಲಕ್ಷ್ಮಣ	೨೮	ರಾಜಕೀಯ	ಪಿ.ಯು.ಸಿ.	ಹಾಲಹಳ್ಳಿ	ಕುಷ್ಟಗಿ	ಕೊಪ್ಪಳ
೪.	ರಾಘವೇಂದ್ರ	೩೬	ಹಣ್ಣು ವ್ಯಾಪಾರ	ಎಸ್.ಎಸ್.ಎಲ್.ಸಿ.	ಕುಷ್ಟಗಿ	ಕುಷ್ಟಗಿ	ಕೊಪ್ಪಳ
೫.	ರಾಧಭಜಂತ್ರಿ	೩೨	ಪುರಸಭೆ ಸದಸ್ಯರು	ಎಲ್.ಎಲ್.ಬಿ.	ಕಾರಟಗಿ	ಗಂಗಾವತಿ	ಕೊಪ್ಪಳ
೬.	ಲಕ್ಷ್ಮಣ	೩೭	ಪುರಸಭೆ ಸದಸ್ಯರು	--	ಕಾರಟಗಿ	ಗಂಗಾವತಿ	ಕೊಪ್ಪಳ
೭.	ಮಹಾದೇವಿ ಭಜಂತ್ರಿ	೩೫	ಪುರಸಭೆ ಅಧ್ಯಕ್ಷರು	೭ನೇ ತರಗತಿ	ಕಾರಟಗಿ	ಗಂಗಾವತಿ	ಕೊಪ್ಪಳ
೮.	ಅಂಬಣ್ಣ ಭಜಂತ್ರಿ	೪೦	ಪುರಸಭೆ ಸದಸ್ಯರು	ಪಿ.ಯು.ಸಿ	ಕುಷ್ಟಗಿ	ಕುಷ್ಟಗಿ	ಕೊಪ್ಪಳ
ಗಂಗಾವತಿ							
೧.	ರವಿಭಜಂತ್ರಿ	೩೬	ಪ.ಪಂ.ಅಧ್ಯಕ್ಷರು	ಬಿ.ಎ.	ಕನಕಗಿರಿ	ಗಂಗಾವತಿ	ಕೊಪ್ಪಳ
೨.	ಚಿದನಂದಪ್ಪ	೪೨	ಅಂಗಡಿ	ಬಿ.ಎ.	ಹಸ್ತಿಮನಿ	ಗಂಗಾವತಿ	ಕೊಪ್ಪಳ
೩.	ಮರಿಸ್ವಾಮಿ	೪೨	ವ್ಯಾಪಾರ	ಪಿ.ಯು.ಸಿ	ಲಕ್ತರ ಕನಕಗಿರಿ	ಗಂಗಾವತಿ	ಕೊಪ್ಪಳ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೪.	ಯಮನಪ್ಪಮೆಣದಲ್	೬೪	ಬ್ಯಾಂಡ್	೩ನೇ	ಕನಕಗಿರಿ	ಗಂಗಾವತಿ	ಕೊಪ್ಪಳ
೫.	ದೇವಮ್ಮ	೩೮	ವ್ಯಾಪಾರ	--	ಕನಕಗಿರಿ	ಗಂಗಾವತಿ	ಕೊಪ್ಪಳ
೬.	ಹುಲಿಗೆಮ್ಮ ಮಾಳಗಿ	೪೮	ತರಕಾರಿ ವ್ಯಾಪಾರ	--	ಕನಕಗಿರಿ	ಗಂಗಾವತಿ	ಕೊಪ್ಪಳ
೭.	ಮರಿರಾಜ ಭಜಂತ್ರಿ	೩೪	ರಾಜಕೀಯ	ಪಿ.ಯು.ಸಿ	ನವಲಿ	ಗಂಗಾವತಿ	ಕೊಪ್ಪಳ
೮.	ಮುತ್ತಣ್ಣ ಭಯಂತ್ರಿ	೩೦	ಸಮಾಜಸೇವೆ	ಎಂ.ಎ.	ನವಲಿ	ಗಂಗಾವತಿ	ಕೊಪ್ಪಳ
೯.	ದುರುಗಪ್ಪ ನವಿಲಿ	೪೩	ವ್ಯಾಪಾರ		ನವಲಿ	ಗಂಗಾವತಿ	ಕೊಪ್ಪಳ
೧೦.	ಲಕ್ಷ್ಮಣ	೬೮	ವ್ಯಾಪಾರ	ಎಸ್.ಎಸ್.ಎಲ್.ಸಿ.	ಗೌರಿಪುರ	ಕೊಪ್ಪಳ	ಕೊಪ್ಪಳ
೧೧.	ಹುಲುಗಪ್ಪಹುಲುಸನಟ್ಟಿ	೩೮	ಬ್ಯಾಂಡ್	೭ನೇ	ಹುಲಸನಹಣ್ಣಿ	ಗಂಗಾವತಿ	ಕೊಪ್ಪಳ
೧೨.	ರಾಘವೇಂದ್ರ ಮಾರುತಿಭಜಂತ್ರಿ	೧೯	ಕ್ರೀಡಾಪಟು	ಪಿ.ಯು.ಸಿ	ಹೇರೂರು	ಗಂಗಾವತಿ	ಕೊಪ್ಪಳ
ಯಲಬುರ್ಗ							
೧.	ಶೇಖರ ಭಜಂತ್ರಿ	೪೨	ಆರ್.ಎಂ.ಪಿ.	ಡಾಕ್ಟರ್	ಬೇವೂರು	ಯಲಬುರ್ಗಿ	ಕೊಪ್ಪಳ
೨.	ಹನುಮಂತಪ್ಪ ಭಜಂತ್ರಿ	೩೩	ಪ.ಪಂ.ಸದಸ್ಯರು	ಎಂ.ಎ.(ಇತಿಹಾಸ)	ಯಲಬುರ್ಗ	ಯಲಬುರ್ಗ	ಕೊಪ್ಪಳ
೩.	ಶರಣಪ್ಪ ಭಜಂತ್ರಿ	೩೩	ಕಂಟ್ರಾಕ್ಟರ್	ಸಿವಿಲ್ ಬಿ.ಇ.	ಗೆದಗೇರಿ	ಯಲಬುರ್ಗ	ಕೊಪ್ಪಳ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೪.	ತೀರ್ಥಪ್ಪ ಭಜಂತ್ರಿ	೪೦	ರೈತರು	--	ಹಿರೇಅರಳಿಹಳ್ಳಿ	ಯಲಬುರ್ಗ	ಕೊಪ್ಪಳ
೫.	ರಾಘವೇಂದ್ರ ಭಜಂತ್ರಿ	೩೫	ವ್ಯಾಪಾರ	ಪಿ.ಯು.ಸಿ.	ಹಿರೇಅರಳಿಹಳ್ಳಿ	ಯಲಬುರ್ಗ	ಕೊಪ್ಪಳ
೬.	ಲಕ್ಷ್ಮಣ ಭಜಂತ್ರಿ	೩೮	ವ್ಯಾಪಾರ	೭ನೇ ತರಗತಿ	ವಜ್ರಬಂಡಿ	ಯಲಬುರ್ಗ	ಕೊಪ್ಪಳ
೭.	ಹನುಮಂತಪ್ಪ ಭಜಂತ್ರಿ	೪೪	ವ್ಯಾಪಾರ	--	ಕೋಳಿಹಳ್ಳಿ	ಯಲಬುರ್ಗ	ಕೊಪ್ಪಳ
೮.	ಲೋಕೇಶ ಭಜಂತ್ರಿ	೪೨	ವ್ಯಾಪಾರ	ಪಿ.ಯು.ಸಿ.	ಬೆಣಗಲ್	ಯಲಬುರ್ಗ	ಕೊಪ್ಪಳ
ಯಾದಗಿರಿ ಜಿಲ್ಲೆ							
೧.	ತಿಪ್ಪಮ್ಮ	೭೧	ಬುಟ್ಟಿ ವ್ಯಾಪಾರ	ಇಲ್ಲ	ಬೇವಿನಹಳ್ಳಿ	ಶಹಪುರ	ಯಾದಗಿರಿ
೨.	ದೇವಕಮ್ಮ	೫೬	ಬುಟ್ಟಿ ವ್ಯಾಪಾರ	ಇಲ್ಲ	ಬೇವಿನಹಳ್ಳಿ	ಶಹಪುರ	ಯಾದಗಿರಿ
೩.	ರುಕ್ಮಮ್ಮ	೪೨	ಪರಕೆ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೪.	ಭಾಗಮ್ಮ	೩೭	ಪರಕೆ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೫.	ಸಾಬಮ್ಮ	೪೨	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೬.	ಮಲ್ಲಮ್ಮ	೪೫	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೭.	ಹುಲಿಗಮ್ಮ	೪೦	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೮.	ಅಯ್ಯಮ್ಮ	೩೫	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೯.	ಲಕ್ಷ್ಮೀ	೨೬	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೦.	ಯಲ್ಲಮ್ಮ	೪೯	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೧.	ರೇಣುಕಮ್ಮ	೩೨	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೨.	ದೇವಕಮ್ಮ	೪೫	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೩.	ಸೊಪಮ್ಮ	೪೩	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೪.	ಯಲ್ಲಮ್ಮ	೪೮	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೫.	ಶಾಂತಮ್ಮ	೭೧	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
೧೬.	ಅಯ್ಯಮ್ಮ	೪೫	ಬುಟ್ಟಿ	--	ಬೇವಿನಹಳ್ಳಿ	ಶಹಪುರ	ಯಾದಗಿರಿ
ಸಿಂಧನೂರು							
೧.	ಕೆ.ಎಸ್.ಮರಿಯಪ್ಪ	೭೦	ಕೊರವಸಂಘ ಅಧ್ಯಕ್ಷರು	೫ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೨.	ಬಾಲಪ್ಪ ಎಂ.	೬೦	ವ್ಯಾಪಾರ	೫ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೩.	ಮರಿಯಪ್ಪ ಟಿ.	೬೨	ವ್ಯಾಪಾರ	೪ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೪.	ಹನುಮಂತ ಕೆ.	೪೨	ವ್ಯಾಪಾರ	ಎಸ್.ಎಸ್.ಎಲ್.ಸಿ.	ಸಿಂಧನೂರು	ಸಿಂಧನೂರು	ರಾಯಚೂರು
೫.	ಹುಲುಗಪ್ಪ ಟಿ.	೩೮	ವ್ಯಾಪಾರ	೧೮ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೬.	ರಾಮಕೃಷ್ಣ ಭಜಂತ್ರಿ	೨೮	ವ್ಯಾಪಾರ	೧೦ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೭.	ಹನುಮಂತ ಜಾಧವ	೩೦	ಬ್ಯಾಂಡ	೧೦ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೮.	ರಾಮು ಕೂಡ್ಲಿಗಿ	೩೨	ಬ್ಯಾಂಡ್	--	ಸಿಂಧನೂರು	ಸಿಂಧನೂರು	ರಾಯಚೂರು
೯.	ಸುರೇಶ ಜಾಧವ	೩೮	ರಾಜಕೀಯ	೧೦ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
೧೦.	ಬಂಡಪ್ಪ ಸಿ.	೩೫	ವ್ಯಾಪಾರ	೩ನೇ ತರಗತಿ	ಸಿಂಧನೂರು	ಸಿಂಧನೂರು	ರಾಯಚೂರು
ಲಿಂಗಸೂರು							
೧.	ರುದ್ರೇಶ	೩೭	ಉಪನ್ಯಾಸಕರು	ಎಂ.ಎ.ಎ.ಎಡ್	ಕರಡುಕಲ್ಸ್	ಲಿಂಗಸೂರು	ರಾಯಚೂರು
೨.	ದುರುಗಮ್ಮ	೬೮	ಹಣ್ಣು ವ್ಯಾಪಾರ	ಎಂ.ಎ.ಎ.ಎಡ್	ಕರಡುಕಲ್ಸ್	ಲಿಂಗಸೂರು	ರಾಯಚೂರು
ಗುಲ್ಬರ್ಗ							
೧.	ಗಿರೀಶ್ ಭಜಂತ್ರಿ	೪೨	ಕೊರವಸಂಘ ಅಧ್ಯಕ್ಷರು	ಪದವಿ	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
೨.	ಸುನೀಲ್ ಮಾನ್ಯಡೆ	೪೦	ಸಮಾಜಸೇವೆ	ಎಂ.ಎ	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
೩.	ರಾಜಕುಮಾರ ಭಜಂತ್ರಿ	೩೨	ವ್ಯಾಪಾರ	ಪಿ.ಯು.ಸಿ.	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
೪.	ಶಾಂತಪ್ಪ ಜಾಧವ ಭಜಂತ್ರಿ	೪೮	ಅಸಿಸ್ಟೆಂಟ್ ಇಂಜಿನಿಯರ್	ಬಿ.ಟೆಕ್	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೫.	ಜಟ್ರಪ್ಪ ಭಜಂತ್ರಿ	೬೨	ನಿವೃತ್ತಿ ಪ್ರಬಂಧಕರು	ಎಂ.ಕಾಂ	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
೬.	ಯಲ್ಲಮ್ಮ	೩೮	ಬುಟ್ಟಿ	--	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ
ಚಿತ್ತಪುರ							
೧.	ಮಲ್ಲಿಕಾರ್ಜುನ	೪೨	ಸಂಗೀತ	ಪಿ.ಯುಸಿ	ಚಿತ್ತಾಪುರ	ಚಿತ್ತಾಪುರ	ಗುಲ್ಬರ್ಗಾ
೨.	ಶಿವ ಭಜಂತ್ರಿ	೪೦	ವ್ಯಾಪಾರ	ಎಸ್.ಎಸ್.ಎಲ್.ಸಿ	ಚಿತ್ತಾಪುರ	ಚಿತ್ತಾಪುರ	ಗುಲ್ಬರ್ಗಾ
ಜೇವರ್ಗಿ							
೧.	ಯಮನಪ್ಪ ಭಜಂತ್ರಿ	೩೯	ರಾಜಕೀಯ	ಎಂ.ಎ.	ಹಂಚಿನಾಳ	ಜೇವರ್ಗಿ	ಕಲುಬುರ್ಗಿ
೨.	ಲಕ್ಷ್ಮಣ	೫೩	ನೀರು ಸರಬರಾಜು	ಎಸ್.ಎಸ್.ಎಲ್.ಸಿ	ಯಡ್ರಾಮಹಳ್ಳಿ	ಜೇವರ್ಗಿ	ಕಲಬುರ್ಗಿ
ಕಲುಬುರ್ಗಿ ಜಿಲ್ಲೆ							
೧.	ಪಂಚಪ್ಪ ಮಾನೆ	೬೦	ಬ್ಯಾಂಡ್	–	ಹಿರೊಳಿ	ಆಳಂದ	ಕಲಬುರ್ಗಿ
೨.	ಚಂದಣ್ಣ/ಸಿದ್ದಪ್ಪ	೭೦	ಬ್ಯಾಂಡ್	–	ಹಿರೊಳಿ	ಆಳಂದ	ಕಲಬುರ್ಗಿ
೩.	ತುಕರಾಮ ಸಿ. ಮಾನೆ	೬೮	ಬ್ಯಾಂಡ್	--	ಹಿರೊಳಿ	ಆಳಂದ	ಕಲಬುರ್ಗಿ
೪.	ಶರಣಪ್ಪ/ಬಾಬುಮಾನೆ	೬೫	ಬ್ಯಾಂಡ್	--	ಹಿರೊಳಿ	ಆಳಂದ	ಕಲಬುರ್ಗಿ

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೫.	ಹಣಮಂತ ಮಾನೆ	೫೫	ಬ್ಯಾಂಡ್	--	ಹಿರೊಳಿ	ಆಳಂದ	ಕಲಬುರ್ಗಿ
೬.	ಸುಂದರಾಬಾಯಿ/ಸಾಮನಿಂಗ	೫೦	ಬುಟ್ಟಿ ನೆಯ್ಗೆ	--	ಹಿರೊಳಿ	ಆಳಂದ	ಕಲಬುರ್ಗಿ
೭.	ಯಲ್ಲಮ್ಮ/ಮಲ್ಲಿನಾಥ	೪೦	ಬುಟ್ಟಿ ನೆಯ್ಗೆ	--	ಹಿರೊಳಿ	ಆಳಂದ	ಕಲಬುರ್ಗಿ
೮.	ಮಹಾದೇವಿ/ಸುಭಾಷ	೩೫	ಬುಟ್ಟಿ ನೆಯ್ಗೆ	--	ಹಿರೊಳಿ	ಆಳಂದ	ಕಲಬುರ್ಗಿ
೯.	ಕಲ್ಯಾಣಿ/ಶಂಕರ	೫೦	ಬುಟ್ಟಿ ನೆಯ್ಗೆ	--	ಹಿರೊಳಿ	ಆಳಂದ	ಕಲಬುರ್ಗಿ
೧೦.	ಲಕ್ಷ್ಮೀಬಾಯಿ/ಬಸಣ್ಣ	೪೫	ಬುಟ್ಟಿ ನೆಯ್ಗೆ	--	ಹಿರೊಳಿ	ಆಳಂದ	ಕಲಬುರ್ಗಿ
ಆಳಂದ	ತಾಲೂಕು						
೧.	ಅಂಬವ್ವ/ಈರಣ್ಣ	೬೫	ಮನೆಗೆಲಸ	--	ಆಳಂದ	ಆಳಂದ	ಕಲಬುರಗಿ
೨.	ಕಲ್ಯಾಣಿ/ಭೀಮಾಶಂಕರ	೪೦	ಬ್ಯಾಂಡ್	ಎಸ್.ಎಸ್.ಎಲ್.ಸಿ.	ಆಳಂದ	ಆಳಂದ	ಕಲಬುರಗಿ
೩.	ಪರಮೇಶ/ಸಿದ್ದಪ್ಪ	೪೮	ಬ್ಯಾಂಡ್	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೪.	ಗುರುನಾಥ ಮಾನೆ	೫೫	ಬುಟ್ಟಿನೆಯ್ಗೆ	--	ಆಳಂದ	ಆಳಂದ	ಕಲಬುರಗಿ
೫.	ಶ್ರೀದೇವಿ/ಅಣ್ಣಪ್ಪ	೩೫	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೬.	ನೀಲಮ್ಮ/ಪ್ರಭುಲಿಂಗ	೩೫	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೭.	ಅಶೋಕ ಮಾನೆ	೩೫	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೮.	ಸೂರ್ಯಕಂಡ ಜಾಧವ	೬೦	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೯.	ಹಣಮಂತ ಮಾನೆ	೬೫	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೧೦.	ಸುರೇಶ ಜಾಧವ	೩೫	ಬುಟ್ಟಿನೆಯ್ಗೆ	ಎಸ್.ಎಸ್.ಎಲ್.ಸಿ	ಆಳಂದ	ಆಳಂದ	ಕಲಬುರಗಿ
೧.	ಸಾವಿತ್ರಿ/ರಾಮಚಂದ್ರ	೩೧	ಬುಟ್ಟಿನೆಯ್ಗೆ	ಎಂ.ಎ. ಬಿ.ಎಡ್.	ಪಡಸಾವಳಿ	ಆಳಂದ	ಕಲಬುರಗಿ
೨.	ರೇಖಾ/ಮಾದಣ್ಣ	೨೮	ಬುಟ್ಟಿನೆಯ್ಗೆ	೭ನೇ ತರಗತಿ	ಪಡಸಾವಳಿ	ಆಳಂದ	ಕಲಬುರಗಿ
೩.	ತಿಪ್ಪವ್ವ/ಹಣಮಂತ	೩೫	ಬುಟ್ಟಿನೆಯ್ಗೆ	೭ನೇ ತರಗತಿ	ಪಡಸಾವಳಿ	ಆಳಂದ	ಕಲಬುರಗಿ
೪.	ಉಷಾಬಾಯಿ/ಕಮಲಾಕರ	೪೫	ಬುಟ್ಟಿನೆಯ್ಗೆ	--	ಪಡಸಾವಳಿ	ಆಳಂದ	ಕಲಬುರಗಿ
೫.	ಈರಪ್ಪ/ರಾಮಚಂದ್ರ	೬೦	ಬ್ಯಾಂಡ್	--	ಪಡಸಾವಳಿ	ಆಳಂದ	ಕಲಬುರಗಿ
೬.	ಅಂಬಾಜಿ/ಹಣಮಂತ	೬೫	೭ನೇ ತರಗತಿ	--	ಪಡಸಾವಳಿ	ಆಳಂದ	ಕಲಬುರಗಿ
೭.	ಮಾದಣ್ಣ/ಈರಣ್ಣ	೩೫	ಬ್ಯಾಂಡ್	ಎಸ್.ಎಸ್.ಎಲ್.ಸಿ.	ಪಡಸಾವಳಿ	ಆಳಂದ	ಕಲಬುರಗಿ
೮.	ಹೇಮಲತಾ/ಪ್ರಭುಲಿಂಗ	೩೫	ಬುಟ್ಟಿ ನೆಯ್ಗೆ	ಎಸ್.ಎಸ್.ಎಲ್.ಸಿ.	ಪಡಸಾವಳಿ	ಆಳಂದ	ಕಲಬುರಗಿ
೯.	ಯಲ್ಲಪ್ಪಮಾನೆ	೫೫	ಬ್ಯಾಂಡ್	ಎಸ್.ಎಸ್.ಎಲ್.ಸಿ.	ಪಡಸಾವಳಿ	ಆಳಂದ	ಕಲಬುರಗಿ
೧೦.	ಶಿವಮ್ಮ/ಅಂಬಾಜಿ	೫೫	ಬುಟ್ಟಿ ನೆಯ್ಗೆ	ಎಸ್.ಎಸ್.ಎಲ್.ಸಿ.	ಪಡಸಾವಳಿ	ಆಳಂದ	ಕಲಬುರಗಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
ಬೀದರ್	ಜಿಲ್ಲೆ						
೧.	ತುಕರಾಮ	೩೮	ಕೂಲಿ	–	ಅಲಿಯಂಬರ	ಬೀದರ್	ಬೀದರ್
೨.	ನರಸಪ್ಪ	೩೩	ಕೂಲಿ	ಪಿಯುಸಿ	ಕಂಗಟ್ಟಿ	ಬೀದರ್	ಬೀದರ್
೩.	ಬಾಬು	೫೨	ಕೂಲಿ	–	ಕಂಗಟ್ಟಿ	ಬೀದರ್	ಬೀದರ್
೪.	ಬಾಳಮ್ಮ	೫೨	ಕೂಲಿ	–	ಮನ್ನೇಲಿ	ಬೀದರ್	ಬೀದರ್
೫.	ತುಕರಾಮ	೪೮	ಕೂಲಿ	–	ಮರಕಲ್	ಬೀದರ್	ಬೀದರ್
೬.	ರಾಘುನಾಥ ದಶರಥ ಜಾಧವ	೪೦	ಎಲ್.ಐ.ಸಿ.	ಪಿಯುಸಿ	ಮರಕಲ್	ಬೀದರ್	ಬೀದರ್
೭.	ಶಿವಕುಮಾರ ತುಕರಾಮ ಮಾನೆ	೩೫	ಜಿ.ಪಿ.ಮೆಂಬರ್	ಪಿಯುಸಿ	ಮರಕಲ್	ಬೀದರ್	ಬೀದರ್
೮.	ಜಗನಾಥ್ ಮಾಣಿಕ್ಕ ಜಾಧವ	೩೦	ಜಿ.ಪಿ.ಮೆಂಬರ್	೧೦ನೇ ತರಗತಿ	ಕಂಗ್ಗಟ್ಟಿ	ಬೀದರ್	ಬೀದರ್
೯.	ಶಂಕರ ಜಾಧವ	೩೫	ಕುರಿ ಸಾಗಾಣಿಕೆ	೧೦ನೇ ತರಗತಿ	ಮರಕಲ್	ಬೀದರ್	ಬೀದರ್
೧೦.	ಸಂತೋಷ ಜಾಧವ	೨೨	ಕುರಿಸಾಕಾಣಿಕೆ	--	ಮರಕಲ್	ಬೀದರ್	ಬೀದರ್
೧೧.	ರವಿ ಲಕ್ಷ್ಮಣ ಮಾನೆ	೨೨	ಟಿಪಿಎಸ್ ಮೆಂಬರ್	ಪದವಿ	ಜನವಾಡ	ಬೀದರ್	ಬೀದರ್
೧೨.	ಸಂತೋಷ ದಶರಥಿಮಾನ	೩೦	ರೈತ	--	ಅಲಿಮಂಬರ್	ಬೀದರ್	ಬೀದರ್

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೧೩.	ಸಂತೋಷ ಮಲ್ಲಪ್ಪ ಮಾನೆ	೨೮	ಕುರಿಸಾಗಾಣಿಕೆ	--	ಜನವಾಡ	ಬೀದರ್	ಬೀದರ್
೧೪.	ರವಿ ಮಾಣಿಕ ಮಾನೆ	೩೦	ಕುರಿಸಾಕಾಣಿಕೆ	ಪದವಿ	ಜನವಾಡ	ಬೀದರ್	ಬೀದರ್
೧೫.	ಮಾನಸಿಕ ನರಸಪ್ಪ	೩೫	ಬುಟ್ಟಿ ನೆಯ್ಗೆ	--	ಖಾನಪೂರ	ಬೀದರ್	ಬೀದರ್
೧೬.	ಸಂತೋಷ ಕುಮಾನ ಜಾಧವ	೩೨	ಆಟೋ	--	ಮರಕಲ್	ಬೀದರ್	ಬೀದರ್
೧೭.	ಅಶೋಧ ಜಾಧವ	೩೫	ಆಟೋ	೪ನೇ	ಮರಕಲ್	ಬೀದರ್	ಬೀದರ್
೧೮.	ರೇಖಾ	೨೨	ಪೋಲೀಸ್	ಪದವಿ	ಮರಕಲ್	ಬೀದರ್	ಬೀದರ್
ಬಸವಕಲ್ಯಾಣ							
೧.	ಫರ್ಲಾದ	೩೮	ಬಿಸಿನೆಸ್	೧೦ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೨.	ವಸಂತ	೪೦	ಬ್ಯಾಂಡ್	--	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೩.	ರಾಮ	೩೨	ಬ್ಯಾಂಡ್	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೪.	ಮಲ್ಲಪ್ಪ	೫೨	ಕೂಲಿ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೫.	ಬಾಬು	೩೨	ಕೂಲಿ	೭ನೇ ತರಗತಿ	ಹುಲ್ಯಾಸ	ಬಸವಕಲ್ಯಾಣ	ಬೀದರ್
೬.	ಚಂದ್ರಕಾಂತ ಜಾಧವ	೫೦	ಹೋಲಿಗೆ ಕೆಲಸ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೭.	ಸುಭಾಷ ಚಂದ್ರಪ್ಪ ಜಾಧವ	೪೦	ಎಲ್.ಐ.ಸಿ.	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೮.	ಬಸಪ್ಪ ಜಾಧವ	೫೦	ಬ್ಯಾಂಡ್ ಕಂಪನಿ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೯.	ಬಸಪ್ಪ ಬಾಬುರಾವ್ ಜಾಧವ್	೬೦	ಹಣ್ಣು ವ್ಯಾಪಾರ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೦.	ಲಕ್ಷ್ಮಣ ಆಶಾಪ್ಪ ಜಾಧವ	೫೦	ರೈತ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೧.	ಮಂದಿರ ಹನುಮಂತ ಮಾನೆ	೫೫	ರೈತ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೨.	ಜಗನಾಥ ಅಂದಪ್ಪ ಮಾನೆ	೫೦	ಬ್ಯಾಂಡ್	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೩.	ಗುಂಡಪ್ಪ ಭೀಮಣ್ಣ ಜಾಧವ	೪೦	ರೈತ	೭ನೇ ತರಗತಿ	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೪.	ಕಾಶಿನಾಥ ಮಾರುತಿ ಜಾಧವ	೩೫	ರೈತ	–	ಕೊಹಿನೂರ	ಬಸವಕಲ್ಯಾಣ	ಬೀದರ್
೧೫.	ಮಾಣಿಕ ಬಂಡಪ್ಪ ಜಾಧವ	೬೦	ಬುಟ್ಟಿ	–	ಬಸವಕಲ್ಯಾಣ	ಬಸವಕಲ್ಯಾಣ	ಬೀದರ್
೧೬.	ಸಂಜುಕುಮಾರ ಸಾಬಣ್ಣ ಮಾನೆ	೪೦	ಗ್ರಾ.ಪಂ.ಸದಸ್ಯರು	ಎಸ್.ಎಸ್.ಎಲ್.ಸಿ.	ಯರಂಡಿ	ಬಸವಕಲ್ಯಾಣ	ಬೀದರ್
೧೭.	ಸುಭಾಷ ಮಾನೆ	೫೫	ರೈತ	–	ಯರಂಡಿ	ಬಸವಕಲ್ಯಾಣ	ಬೀದರ್
೧೮.	ಪ್ರಭು ವಿಶ್ವನಾಥಿ ಮಾನೆ	೩೮	ರೈತ	–	ಯರಂಡಿ	ಬಸವಕಲ್ಯಾಣ	ಬೀದರ್
೧೯.	ಬಸವರಾಜ ವಿಶ್ವನಾಥ ಜಾಧವ	೩೦	ರೈತ	–	ರಾಜಶೋರ	ಬಸವಕಲ್ಯಾಣ	ಬೀದರ್

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
ಹುಮನಾಬಾದ್							
೧.	ಈರಣ್ಣ	೩೫	ರೈತ	೭ನೇ ತರಗತಿ	ಕಂಕಟ್ಟಿ	ಹುಮನಾಬಾದ್	ಬೀದರ್
೨.	ಮಾದೇಶ	೩೮	ಕೂಲಿ	ಇಲ್ಲ	ಕಂಕಟ್ಟಿ	ಹುಮನಾಬಾದ್	ಬೀದರ್
೩.	ಗುಂಡಪ್ಪ	೫೫	ಕೂಲಿ	ಇಲ್ಲ	ಕಂಕಟ್ಟಿ	ಹುಮನಾಬಾದ್	ಬೀದರ್
೪.	ರಾಮ	೪೮	ಕೂಲಿ	ಇಲ್ಲ	ಚಂದಕಪುರ	ಹುಮನಾಬಾದ್	ಬೀದರ್
೫.	ಸಂತೋಷ	೩೫	ರೈತ	೧೦ನೇ ತರಗತಿ	ಹಲಿಕೇಲ್	ಹುಮನಾಬಾದ್	ಬೀದರ್
೬.	ಸುಭಾಷ ಶಿವಪ್ಪಮಾನೆ	೪೦	ಬ್ಯಾಂಡ್ ಕಂಪನಿ	–	ಕಂಕಟ್ಟಿ	ಹುಮನಾಬಾದ್	ಬೀದರ್
೭.	ಸಂಜು ಕಾಶಿನಾಥ ಮಾನೆ	೪೨	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೮.	ವಿಲಾಸ ವಿಶ್ವನಾಥಮಾನೆ	೩೮	ಹಂದಿ ಸಾಕಾಣಿಕೆ	–	ಕಂಕಟ್ಟಿ	ಹುಮನಾಬಾದ್	ಬೀದರ್
೯.	ವೈಜಿನಾಥ ಶಂಕರಮಾನ	೫೦	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೦.	ದಿಗಂ ಬಾಬುಮಾನೆ	೪೦	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೧.	ಪ್ರಕಾಶ ಬಾಬುಮಾನೆ	೪೫	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೨.	ರಾಮಣ್ಣ ಲಕ್ಷ್ಮಣಮಾನೆ	೬೦	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೧೩.	ವೆಂಕಟೇಶ ಶಂಕರಮಾನೆ	೪೪	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೪.	ರತನ ನಾಗಪ್ಪಮಾನೆ	೫೫	ಹಂದಿ ಸಾಕಾಣಿಕೆ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೫.	ಬಸಪ್ಪ ನಾಗಪ್ಪಮಾನೆ	೫೦	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೬.	ರವಿ ಬಂದಪ್ಪಮಾನೆ	೪೦	ಬ್ಯಾಂಡ್	–	ಕಂಕಟ್ಟಿ	ಹುಮನಾಬಾದ್	ಬೀದರ್
೧೭.	ಸಾಯಬಣ್ಣ ಮಾನೆ	೫೦	ಬ್ಯಾಂಡ್	–	ಕಂಕಟ್ಟಿ	ಹುಮನಾಬಾದ್	ಬೀದರ್
೧೮.	ಮಹದೇವ ವಿಠ್ಠಲ ಮಾನೆ	೪೪	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
೧೯.	ಈರಪ್ಪ ರಾಮಣ್ಣ ಮಾನೆ	೪೨	ರೈತ	–	ಕಂಕಟ್ಟಿ	ಹುಮನಾಬಾದ್	ಬೀದರ್
ಬಾಲ್ಕಿ							
೧.	ದತ್ತ	೧೦	ಕೂಲಿ	–	ಭಾತಂಬ್ರಾ	ಬಾಲ್ಕಿ	ಬೀದರ್
೨.	ವಿಶ್ವನಾಥ	೩೮	ಕೂಲಿ	–	ಕನ್‌ಮೆಲ್ಕಂಡ	ಬಾಲ್ಕಿ	ಬೀದರ್
೩.	ಧನಜಿ	೩೫	ಟೀ ಅಂಗಡಿ	ಡಿಪ್ಲೊಮಾ ಮೆಕಲ್	ಕನ್‌ಮೆಲ್ಕಂಡ	ಬಾಲ್ಕಿ	ಬೀದರ್
೪.	ಚಂದ್ರಕಾಂತ	೩೮	ಆಟೋ	ಪಿಯುಸಿ	ಬಾಲ್ಕಿ	ಬಾಲ್ಕಿ	ಬೀದರ್
೫.	ಕಲಾಬಾಯಿ	೪೦	ಕೂಲಿ	–	ಬಾಲ್ಕಿ	ಬಾಲ್ಕಿ	ಬೀದರ್

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೬.	ದಿಲೀಪ್ ಜೈವಂತಜಾಧವ	೪೫	ಸಮಾಜಸೇವೆ	–	ಬಾಲ್ಕಿ	ಬಾಲ್ಕಿ	ಬೀದರ್
೭.	ಸಂಜು ಜಾಧವ	೩೮	ಸಮಾಜಸೇವೆ	–	ಬಾಲ್ಕಿ	ಬಾಲ್ಕಿ	ಬೀದರ್
೮.	ಸಂತೋಷ ಮಾರುತಿಮಾನೆ	೩೫	ರೈತ	–	ಜಲಹಪ್ಪ	ಬಾಲ್ಕಿ	ಬೀದರ್
೯.	ನೀಲಿಕಾಂತ	೨೮	ಹಂದಿ ಸಾಕಾಣಿಕೆ	–	ಮೆಕಲ್	ಬಾಲ್ಕಿ	ಬೀದರ್
೧೦.	ಶ್ರೀನಾಥ ಮಾನೆ	೫೦	ಹಂದಿ ಸಾಕಾಣಿಕೆ	–	ಮೆಕಲ್	ಬಾಲ್ಕಿ	ಬೀದರ್
೧೧.	ವಾಮನ	೩೮	ರೈತ	–	ಭಾತಂಬ್ರಾ	ಬಾಲ್ಕಿ	ಬೀದರ್
೧೨.	ಸತೀಶ	೩೮	ರೈತ	–	ಭಾತಂಬ್ರಾ	ಬಾಲ್ಕಿ	ಬೀದರ್
೧೩.	ವೆಂಕಟ ಮಾನೆ	೫೫	ರೈತ	–	ಅಲ್ಪಾಯಿ	ಬಾಲ್ಕಿ	ಬೀದರ್
೧೪.	ದೊರದಿಬ್ ಮಾನೆ	೫೦	ರೈತ	–	ಅಲ್ಪಾಯಿ	ಬಾಲ್ಕಿ	ಬೀದರ್
೧೫.	ನರಸಿಂಗ ನಾಗಜಾಧವ್	೬೦	ಬುಟ್ಟಿ		ಮೆಕಲ್	ಬಾಲ್ಕಿ	ಬೀದರ್
೧೬.	ಮಾರುತಿ ತುಳಸಿರಾಮ	೫೦	ಬುಟ್ಟಿ		ಜೋಡಕ್ಕ	ಬಾಲ್ಕಿ	ಬೀದರ್
ಔರಾದ್							
೧.	ಶಿವಾಕಾಂತ್	೪೮	ಬಿಸಿನೆಸ್	ಪದವಿ	ಮಸ್ಕಲ್	ಔರಾದ್	ಬೀದರ್

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೨.	ಶಾಲುಬಾಯಿ	೩೨	ಕೂಲಿ	೧೦ನೇ ತರಗತಿ	ಮಸ್ಕಲ್	ಔರಾದ್	ಬೀದರ್
೩.	ತುಕರಾಮ	೩೫	ಕೂಲಿ	–	ಶಾಂತಪುರ	ಔರಾದ್	ಬೀದರ್
೪.	ಬಾಲಾಜಿ	೪೨	ವ್ಯಾಪಾರ	ಡಿಪ್ಲೋಮಾ	ಶಾಂತಪುರ	ಔರಾದ್	ಬೀದರ್
೫.	ಬಾಳಪ್ಪ	೫೨	ಕೂಲಿ	೭ನೇ	ಕೊರೆಕಲ್	ಔರಾದ್	ಬೀದರ್
೬.	ಜಲಬ ಶ್ರೀಪತಿಮಾನೆ	೨೮	ವ್ಯಾಪಾರ	ಎಂ.ಎ.	ಔರಾದ್	ಔರಾದ್	ಬೀದರ್
೭.	ಬಾಲಾಜಿಪ್ರಕಾಶ ಮಾನೆ	೨೮	–	ಬಿ.ಎ.	ಔರಾದ್	ಔರಾದ್	ಬೀದರ್
೮.	ತುಳಸಿರಾಮ ನಾಗನಾಥಮಾನೆ	೨೭	–	ಎಂ.ಎ.	ಔರಾದ್	ಔರಾದ್	ಬೀದರ್
೯.	ರಾಜಕುಮಾರ ಮನೆ	೩೫	ಶಿಕ್ಷಕ	ಡಿ.ಎಡ್.	ಔರಾದ್	ಔರಾದ್	ಬೀದರ್
೧೦.	ಸಂಜೀವ ಮಾನೆ	೩೦	ಸ್ವ ಉದ್ಯೋಗ	ಬಿ.ಇ. ಮೆಕಾನಿಕಲ್	ಔರಾದ್	ಔರಾದ್	ಬೀದರ್
೧೧.	ಗಂಗಾಧರ ಮಾನೆ	೨೯	–	ಬಿ.ಎಸ್ಸಿ.	ಔರಾದ್	ಔರಾದ್	ಬೀದರ್
೧೨.	ಸಾಯಿ ಮಾನಿ	೨೫	ಕೆ.ಇ.ಬಿ.	ಪಿಯುಸಿ	ಔರಾದ್	ಔರಾದ್	ಬೀದರ್
೧೩.	ಶೇಷರಾವ್ ಮಾನೆ	೨೬	ಸ್ವ ಉದ್ಯೋಗ	೧೦ನೇ ತರಗತಿ	ಔರಾದ್	ಔರಾದ್	ಬೀದರ್
೧೪.	ರವಿಮಾನೆ	೨೬	–	ಪಿಯುಸಿ	ಔರಾದ್	ಔರಾದ್	ಬೀದರ್

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
ಬಳ್ಳಾರಿ	ಜಿಲ್ಲೆ						
೧.	ಗೋವಿಂದಪ್ಪ	೬೫	ವ್ಯಾಪಾರ	ಎಸ್.ಎಸ್.ಎಲ್.ಸಿ.	ಸಿರುಗುಪ್ಪ	ಸಿರುಗುಪ್ಪ	ಬಳ್ಳಾರಿ
೨.	ಕುರುಗೋಡು ಸಂಕಣ್ಣ	೪೮	ಬ್ಯಾಂಡ್	೬ನೇ	ಸಿರುಗುಪ್ಪ	ಸಿರುಗುಪ್ಪ	ಬಳ್ಳಾರಿ
೩.	ಗುರುನಾಥ	೫೦	ಬ್ಯಾಂಡ್	೯ನೇ	ಕುಡುತಿನಿ	ಬಳ್ಳಾರಿ	ಬಳ್ಳಾರಿ
೪.	ಅಂಜಿನಪ್ಪ	೬೩	ಬ್ಯಾಂಡ್	೫ನೇ	ಕುಡುತಿನಿ	ಬಳ್ಳಾರಿ	ಬಳ್ಳಾರಿ
೫.	ಹನುಮಂತಪ್ಪ	೬೫	ಬ್ಯಾಂಡ್	--	ಸಂಡೂರು	ಬಳ್ಳಾರಿ	ಬಳ್ಳಾರಿ
೬.	ರಾಮಕ್ಕ	೫೭	ಕಸಬಾರಿಕೆ	೭ನೇ	ಸಂಡೂರು	ಸಂಡೂರು	ಬಳ್ಳಾರಿ
೭.	ಹುಲುಗಪ್ಪ	೪೮	ಬ್ಯಾಂಡ್	--	ಸಂಡೂರು	ಸಂಡೂರು	ಬಳ್ಳಾರಿ
೮.	ಸರಸ್ವತಿ	೪೭	ಕಸಬಾರಿಕೆ	--	ಸಂಡೂರು	ಸಂಸೂರು	ಬಳ್ಳಾರಿ
೯.	ಪರಶುರಾಮ	೩೮	ಹಣ್ಣು ವ್ಯಾಪಾರಿ	--	ಸಂಡೂರು	ಸಂಡೂರು	ಬಳ್ಳಾರಿ
೧೦.	ದುರಗಪ್ಪ	೪೭	ಬ್ಯಾಂಡ್	೬ನೇ	ಸಂಡೂರು	ಸಂಡೂರು	ಬಳ್ಳಾರಿ
೧೧.	ಮಾರೆಣ್ಣ	೫೭	ಬ್ಯಾಂಡ್	--	ಸಂಡೂರು	ಸಂಡೂರು	ಬಳ್ಳಾರಿ
೧೨.	ದೊಡ್ಡ ರಾಮಣ್ಣ	೫೪	ಬ್ಯಾಂಡ್	--	ಸಂಡೂರು	ಸಂಡೂರು	ಬಳ್ಳಾರಿ
೧೩.	ಪಂಪಾಪತಿ	೩೪	ಬ್ಯಾಂಡ್	೧೦ನೇ	ಸಂಡೂರು	ಸಂಡೂರು	ಬಳ್ಳಾರಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೧೪.	ನಾಗರಾಜ	೩೭	ಕೂಲಿ	೧೦ನೇ	ಸಂಡೂರು	ಸಂಡೂರು	ಬಳ್ಳಾರಿ
೧೫.	ಕೊಟ್ರೇಶ	೫೦	ವ್ಯಾಪಾರ	೭ನೇ	ಸಂಡೂರು	ಸಂಡೂರು	ಬಳ್ಳಾರಿ
೧೬.	ಸಣ್ಣರಾಮಣ್ಣ	೪೭	ಬ್ಯಾಂಡ್	--	ಸಂಡೂರು	ಸಂಡೂರು	ಬಳ್ಳಾರಿ
೧೭.	ಬಸವರಾಜ	೨೮	ವಕೀಲ	ಎಲ್.ಎಲ್.ಬಿ.	ಹಡಗಲಿ	ಹಡಗಲಿ	ಬಳ್ಳಾರಿ
೧೮.	ವಿರೂಪಾಕ್ಷಪ್ಪ	೫೮	ವ್ಯಾಪಾರ	ಪದವಿ	ಹೊಸಪೇಟೆ	ಹೊಸಪೇಟೆ	ಬಳ್ಳಾರಿ
೧೯.	ವಿರುಪಣ್ಣ	೩೯	ಸಮಾಜಸೇವೆ	ಪದವಿ	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೦.	ಉಮೇಶ	೩೮	ಬ್ಯಾಂಡ್	೯ನೇ	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೧.	ರಾಮಪ್ಪ	೬೭	ಬ್ಯಾಂಡ್‌ಮಾಸ್ಟರ್	೫ನೇ	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೨.	ಗಂಗಾಧರ	೫೦	ಬ್ಯಾಂಡ್	೫ನೇ	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೩.	ಹನುಮಕ್ಕ	೪೮	ಎ.ಎಸ್.ಐ.	೫ನೇ	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೪.	ಭೀಮಪ್ಪ	೮೦	ಕೂಲಿ	--	ಕಮಲಾಪುರ	ಹೊಸಪೇಟೆ	ಬಳ್ಳಾರಿ
೨೫.	ಹುಲಿಗೆಮ್ಮ	೬೫	ಕೂಲಿ	--	ಕಮಲಾಪುರ	ಹೊಸಪೇಟೆ	ಬಳ್ಳಾರಿ
೨೬.	ಹುಲುಗಪ್ಪ	೪೫	ಬ್ಯಾಂಡ್	ಡ್ರಾಯಿಂಗ್	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೭.	ಈರಮ್ಮ ಕೆ.	೮೨	ಬ್ಯಾಂಡ್	--	ಕಂಪ್ಲಿ	ಕಂಪ್ಲಿ	ಬಳ್ಳಾರಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಶಿಕ್ಷಣ	ಊರು	ತಾಲ್ಲೂಕು	ಜಿಲ್ಲೆ
೨೮.	ಹನುಮಂತಪ್ಪ	೮೯	ಬ್ಯಾಂಡ್	--	ಕಂಪ್ಲಿ	ಕಂಪ್ಲಿ	ಬಳ್ಳಾರಿ
೨೯.	ಕೃಷ್ಣಪ್ಪ	೬೭	ಬ್ಯಾಂಡ್	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೦.	ಕೊಲ್ಲಮ್ಮ	೫೮	ಗೃಹಿಣಿ	--	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೧.	ಮರಿಸ್ವಾಮಿ	೬೫	ಪೂಜಾರಿ	೪ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೨.	ಪದ್ಮಾವತಿ	೬೦	ಹಣ್ಣುವ್ಯಾಪರ	೪ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೩.	ಸಾವಿತ್ರಿ	೪೮	ಅಂಗಡಿ ವ್ಯಾಪಾರ	೬ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೪.	ಧರ್ಮರಾಯ	೫೦	ಆರ್ಕಿಟೆಕ್ಟ್	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೫.	ರಾಮಾಂಜೇನಿ	೪೫	ಹೂ ವ್ಯಾಪಾರ	ಪಿ.ಯು.ಸಿ.	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೬.	ಗೋವಿಂದಮ್ಮ	೪೧	ಹೊಲಿಗೆ ಕೆಲಸ	೭ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೭.	ರಮಣಪ್ಪ	೪೪	ಸಮಾಜಸೇವೆ	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೮.	ದೊಡ್ಡ ಸಂಜಾತ	೩೬	ಗೃಹಿಣಿ	೯ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೩೯.	ಸುರೇಶ	೪೦	ಆರ್ಕಿಟೆಕ್ಟ್	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೪೦.	ಅನುರಾಧ	೩೮	ಹೊಲಿಗೆ ಕೆಲಸ	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೪೧.	ಆದಿನಾರಾಯಣ	೪೦	ವ್ಯಾಪಾರ	೧೦ನೇ	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ
೪೨.	ಜಯಲಕ್ಷ್ಮಿ	೨೯	ಹೋಲಿಕೆ	ಪಿ.ಯು.ಸಿ.	ಬಂಡಿಮೋಟ್	ಬಳ್ಳಾರಿ	ಬಳ್ಳಾರಿ

ಪರಾಮರ್ಶನ ಗ್ರಂಥಗಳು

೧. ಅರ್ಜುನ ಗೋಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ(ಜಾನಪದೀಯ ಅಧ್ಯಯನ), ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ೨೦೦೦

೨. ಅಶೋಕ ಕುಮಾರ ರಂಜೇರೆ, ವಿವಿಧ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩. ಅಂಗಡಿ ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೮

೪. ಈರಣ್ಣ ಕೋಸಗಿ, ಕೊರವರು, ಕೋಸಗಿ ಪ್ರಕಾಶನ, ರಾಯಚೂರು, ೧೯೯೧

೫. ಕಲಬುರ್ಗಿ ಎಂ.ಎಂ.(ಸಂ), ಕರ್ನಾಟಕ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೬. ಕಿಕ್ಕೇರಿ ನಾರಾಯಣ(ಸಂ), ಬುಡಕಟ್ಟು ಸಂಸ್ಕೃತಿ, ಅರಹು-ಕುರುಹು ಪ್ರಕಾಶನ, ಮೈಸೂರು

೭. ಕೆಂಪೇಗೌಡ ಕೆ., ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು, ೨೦೦೩

೮. ಕೃಷ್ಣಕಟ್ಟಿ, ಶ್ರೀಕೃಷ್ಣ ಪಾರಿಜಾತ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೯. ಕೃಷ್ಣಸ್ವಾಮಿ ಕೆ.ಆರ್., ಹಾಡು ಚೆಲ್ಲಾವೆ ನಾಡಿಗೆ(ಜನಪದ ಕಲಾ ಸಂಪುಟ), ಜಾನಪದ ಅಕಾಡೆಮಿ, ಬೆಂಗಳೂರು, ೧೯೯೫

೧೦. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರು, ಸಂವಹನ ಪ್ರಕಾಶನ, ಮೈಸೂರು, ೨೦೦೬

೧೧. ಖಂಡೋಬಾ ಪಿ.ಕೆ., ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ವಿಷಯ ಕೋಶ(ಜಾನಪದ ಸಂಪುಟ), ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೧

೧೨. ಗದ್ದಗಿಮಠ ಬಿ.ಎಸ್., ಲೋಕಗೀತೆಗಳು, ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೬೦

೧೩. ಗೋಪಾಲ ಬಿ.ಆರ್., ವಿಜಯನಗರ ಶಾಸನಗಳು, ಸಂ.೧, ಕರ್ನಾಟಕ ಸರ್ಕಾರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೧೪. ಚಲುವರಾಜು(ಸಂ), ಬಲಿಚಕ್ರವರ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

೧೫. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೬. ಜಯಶೀಲ(ಸಂ), ಮಹಿಳೆ ಮತ್ತು ಅಭಿವೃದ್ಧಿ, ಕಿಸಾನ್ ಪಬ್ಲಿಕೇಶನ್ಸ್, ಮಂಗಳೂರು, ೨೦೦೭

೧೭. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೬೮

೧೮. ದೇಜಗೌ, ಶ್ರೀಬಸವೇಶ್ವರರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೧೯. ನಳಿನಿ ಎಂ.ಬಿ.(ಸಂ), ಕಾಡು ಮಲ್ಲಿಕಗೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೨೦. ನಾಗೇಗೌಡ ಎಚ್.ಎಲ್.(ಪ್ರ.ಸಂ.), ಕನ್ನಡ ಜಾನಪದ ಕೋಶ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೮

೨೧. ನಾಗೇಗೌಡ ಎಚ್.ಎಲ್.(ಸಂ), ಪ್ರಶಸ್ತಿ ಪಡೆದ ಮಹನೀಯರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೭

೨೨. ನಿಂಗಣ್ಣ ಸಣ್ಣಕ್ಕಿ(ಪ್ರ.ಸಂ), ಕಾಯಕಯೋಗಿ ಸಂಸ್ಕರಣ ಗ್ರಂಥ, ವಿದ್ಯಾನಿಧಿ ಪ್ರಕಾಶನದ ರಜತ್ ಮಹೋತ್ಸವ ಸಮಿತಿ, ಗದಗ, ೨೦೦೨

೨೩. ಪರಮಶಿವಯ್ಯ ಜಿ.ಶಂ., ಕನ್ನಡ ವೃತ್ತಿಗಾಯಕ ಕಾವ್ಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೨೪. ಪರಮಶಿವಯ್ಯ ಜಿ.ಶಂ.(ಸಂ), ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೨೫. ಪರಮಶಿವಯ್ಯ(ಅನು), ಲಕ್ಷ್ಮಣ್ ಚಟ್ಟಿಯರ್ ಎಸ್.ಎಂ.ಆರ್., ತಮಿಳುನಾಡಿನ ಜಾನಪದ, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ, ೧೯೯೪

೨೬. ಪಾಟೀಲ ಎಂ.ಎಂ.(ಸಂ), ಗುಲಬರ್ಗಾ ಜಿಲ್ಲೆ, ಕರ್ನಾಟಕ ರಾಜ್ಯ ಗ್ಯಾಸೇಟಿಯರ್, ಭಾರತ ಸರ್ಕಾರ, ೧೯೯೭

೨೭. ಪ್ರಶಾಂತ್ ಎಚ್.ಡಿ., ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ಪೋತೆ ಎಚ್.ಟಿ., ಹೈದರಾಬಾದ್ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು, ಅಂಬು ಪ್ರಕಾಶನ, ರಾಯಚೂರು, ೨೦೦೦

೨೯. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಜನಪದ ವಾದ್ಯಗಳು, ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೧೯೮೭

೩೦. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೧. ಮತಿಘಟ್ಟ ಕೃಷ್ಣಮೂರ್ತಿ(ಸಂ), ಕನ್ನಡ ಜನಪದ ಸಾಹಿತ್ಯ ಭಂಡಾರ, ಸಂಪುಟ ೧, ಗುರುಮೂರ್ತಿ ಪ್ರಕಾಶನ, ಬೆಂಗಳೂರು, ೧೯೭೫

೩೨. ಮಲ್ಲಿಕಾರ್ಜುನ ಬಿ.ಮಾನ್ವಡೆ, ಕೊರವರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೩೩. ಮಲ್ಲೇಪುರಂ ಜಿ.ವೆಂಕಟೇಶ, ಶಂಬಾ ಕೃತಿ ಸಂಪುಟ ೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೩೪. ಮಹೇಶ್ವರಯ್ಯ ಎಚ್.ಎಂ., ಹಚ್ಚೆ: ಒಂದು ಜಾನಪದ ಕಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩೫. ಮಾನಸ, ಕೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೩೬. ಮಾಯಿಗೌಡ ಕೆ.(ಅನು)., ಪೆರಿಯಾರ್ ಫಿಲಾಸಫಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೧೪

೩೭. ಮೇತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩೮. ರಮೇಶ ಸ.ಚಿ., ಕರ್ನಾಟಕದ ಜನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೩೯. ರಾಜೇಗೌಡ ಎಚ್.ಕೆ., ಜಾನಪದ ಗಂಗೋತ್ರಿ, ಸಂಪುಟ ೧, ಸಂಚಿಕೆ ೪, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೬

೪೦. ರಾಮಚಂದ್ರಗೌಡ ಹಿ.ಚಿ., ಜಾನಪದ ವ್ಯಕ್ತಿ ಮತ್ತು ವಿಚಾರ, ಮಾನವಿ ಪ್ರಕಾಶನ, ಮೈಸೂರು, ೧೯೮೨

೪೧. ರಾಮಕೃಷ್ಣ ಕೆ.ಆರ್.(ಸಂ), ವಿಜಯನಗರ, ಸಂಪುಟ ೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೩

೪೨. ರಾಮಯ್ಯ ಬಿ.ಪಿ., ಕೊರಮರ ಗಾದೆ ಕತೆಗಳು, ಸಿ.ವಿ.ಜಿ.ಪ್ರಕಾಶನ, ಬೆಂಗಳೂರು, ೨೦೦೪

೪೩. ರಾಮಯ್ಯ ಬಿ.ಪಿ., ದಕ್ಷಿಣ ಕರ್ನಾಟಕದ ಕೊರಮರು, ಮಾನಸ ಪ್ರಕಶನ, ಕುಮಟಾ, ೨೦೦೨

೪೪. ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕದ ಬುಡಕಟ್ಟುಗಳು, ಸಂಪುಟ ೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೪೫. ಲಕ್ಕಪ್ಪಗೌಡ ಎಚ್.ಜೆ.(ಪ್ರ.ಸಂ), ಕರ್ನಾಟಕದ ಬುಡಕಟ್ಟುಗಳು ಸಂಪುಟ ೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೪೬. ಲಿಂಗಯ್ಯ ಡಿ., ಕರ್ನಾಟಕದ ಗ್ರಾಮದೇವತೆಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೪

೪೭. ಲೋಕಾಪುರ ಬಾಳಸಾಹೇಬ(ಸಂ), ಶ್ರೀಕೃಷ್ಣ ಪಾರಿಜಾತ, ಶ್ರೀಕೃಷ್ಣ ಪಾರಿಜಾತ ವಿಚಾರ ಸಂಕಿರಣ ಸಮಿತಿ, ಬಾಗಲಕೋಟೆ, ೧೯೯೫

೪೮. ವಿವೇಕ ರೈ ಬಿ.(ಸಂ), ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೯. ವೀರೇಶ ಬಡಿಗೇರ, ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ, ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫೦. ವೆಂಕಟನಾರಯಣಪ್ಪ ಬಿ.(ಪ್ರಸಂ.), ಇಂಗ್ಲಿಷ್–ಕನ್ನಡ ನಿಘಂಟು(ಪರಿಷ್ಕೃತ), ಸಂಪುಟ ೧–೪ ಏಕೀಕೃತ ಸಂಪುಟ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭

೫೧. ವೆಂಕಟರಂಗೋ ಕಟ್ಟಿ, ಗ್ಯಾಜೇಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಏಷಿಯನ್ ಎಜುಕೇಶನ್ ಸರ್ವಿಸ್ಸ್, ಹೊಸ ದೆಹಲಿ, ೧೯೮೪

೫೨. ವೆಂಕಟಸುಬ್ಬಯ್ಯ ಜಿ(ಸಂ), ಕನ್ನಡ–ಕನ್ನಡ ನಿಘಂಟು, ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬

೫೩. ಶರಣಪ್ಪ ಸೈದಾಪೂರ, ಗೃಹ ಮತ್ತು ಸಣ್ಣ ಕೈಗಾರಿಕೆಗಳು, ಪ್ರಸಾರಾಂಗ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ, ೨೦೧೨

೫೪. ಶಿವಶರಣಪ್ಪ ಎಚ್.ದಾಬಾ, ಹೈದ್ರಾಬಾದ್ ಕರ್ನಾಟಕದಲ್ಲಿ ಕೃಷಿ ಕಾರ್ಮಿಕರು, ಪ್ರಸಾರಾಂಗ, ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ, ೨೦೦೧

೫೫. ಶ್ರೀಕಂಠಯ್ಯ ಬಿ.ಎಂ.(ಸಂ), ಕನ್ನಡ ಕೈಪಿಡಿ, ಸಂಪುಟ ೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೯

೫೬. ಶಂಕರ ನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೫೭. ಸುಬ್ಬಣ್ಣ ರೈ ಎ., ದ್ರಾವಿಡ ನಿಘಂಟು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫೮. ಸುಂಕಪುರ ಎಂ.ಎಸ್., ಜನಪದ ಸಾಹಿತ್ಯ ದರ್ಶನ, ಭಾಗ ೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦

೫೯. ಸಂಗಮೇಶ ಬಿರಾದಾರ, ಕನ್ನಡ ಪೌರಾಣಿಕ ಲಾವಣಿಗಳು, ೧೯೮೧

೬೦. ಸುಂದರಂ ಆರ್.ವಿ.(ಅನು), ರಾಮರಾಜು ಬಿ., ಆಂಧ್ರಪ್ರದೇಶದ ಜಾನಪದ

೬೧. ಸೂರ್ಯನಾಥ ಯು.ಕಾಮತ್(ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ೧, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೦

೬೨. ಹಿರೇಮಠ ಎಸ್.ಎಸ್., ಕೊಪ್ಪಳ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೬೩. ಹಂಪ ನಾಗರಾಜಯ್ಯ, ದ್ರಾವಿಡ ಭಾಷಾ ವಿಜ್ಞಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

ಕೈಪಿಡಿಗಳು

೧. ಕರ್ನಾಟಕ ಕೈಪಿಡಿ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೬

೨. ಜಾನಪದ ಕೈಪಿಡಿ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭

ಮಹಾಪ್ರಬಂಧಗಳು

೧. ಅಮರೇಶ ಎನ್., ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಈರಣ್ಣ ನಾರಾಯಣ, ಕರ್ನಾಟಕದ ಕೊರವರು: ಒಂದು ಜಾನಪದೀಯ ಅಧ್ಯಯನ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೨

೩. ಗಿರಿಧರರಾವ್ ಹವಲ್ದಾರ, ಕೊರಚರು: ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೫. ಪ್ರತಾಪ್ ಸಿಂಗ್ ಎಚ್.ಭಾರತಿ, ಹಣಚೆ ಬಟ್ಟು ಕಲೆ(ಲಘು ಸಂಶೋಧನ ಪ್ರಬಂಧ) ಸ್ನಾತಕೋತ್ತರ ಪದವಿಕೇಂದ್ರ, ಗುಲಬರ್ಗಾ, ೧೯೯೪

ಇಂಗ್ಲಿಷ್ ಗ್ರಂಥಗಳು

1. Abbe Duba's, Hindu Manness Customs and car economics, Rupa and Co., New Delhi, 1816, Reprint 2002

2. Ananthkrishna Iyer L.K., The Mysore Tribes and Caste, Vol.5, The Mysore University, Mysore, 1930, Mittal Publications, New Delhi, 1998

3. Channa S.M., Encylopaedia of Indian Tribes and Castes, Vol.12, Cosmo Publications, New Delhi, 2004

ಪತ್ರಿಕೆಗಳು

೧. ಪ್ರಜಾವಾಣಿ ೮ ಜೂನ್ ೨೦೦೫

೨. ವಿಜಯ ಕರ್ನಾಟಕ ೨೪ ಏಪ್ರಿಲ್ ೨೦೦೬

೩. ವಿಜಯ ಕರ್ನಾಟಕ ೫ ನವೆಂಬರ್ ೨೦೧೩

ಛಾಯಾಚಿತ್ರಗಳು



ಕೂದಲು ಹಿಂಜುವ ಮಹಿಳೆ

ಗಿಡದೇವರ ತಯಾರಿ





ಹಣ್ಣುವ್ಯಾಪಾರದಲ್ಲಿ ನಿರತಳಾದ ಮಹಿಳೆ

ಈಚಲುಗರಿ ಹಿಂಜುವ
ಮಹಿಳೆ





ಬುಟ್ಟಿ ನೇಯುವ
ಪುರುಷ

ಕಣಿ ಭವಿಷ್ಯ
ಕೇಳುತ್ತಿರುವ ಪುರುಷ






ಹಣ್ಣು ವ್ಯಾಪಾರದಲ್ಲಿ ನಿರತರಾಗಿರುವ ವೃದ್ಧರು



ಕೊರವಂಜಿಯರು



ಸನಾದಿ ಅಪ್ಪಣ್ಣನವರ ಸಮಾಧಿ



ಬುಡಕಟ್ಟು ಅಧ್ಯಯನ ವಿಭಾಗ